ಜನಪದ ಆಚರಣೆಗಳಲ್ಲಿ ಬಲಿಪದ್ಧತಿ

(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು
ರೇವಣಸಿದ್ದಪ್ಪ ಎ.

ಮಾರ್ಗದರ್ಶಕರು
ಡಾ. ಸ.ಚಿ.ರಮೇಶ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೭

ಜನಪದ ಆಚರಣೆಗಳಲ್ಲಿ ಬಲಿಪದ್ಧತಿ

(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು

ರೇವಣಸಿದ್ದಪ್ಪ ಎ.

ಮಾರ್ಗದರ್ಶಕರು

ಡಾ. ಸ.ಚಿ.ರಮೇಶ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಜನಪದ ಆಚರಣೆಗಳಲ್ಲಿ ಬಲಿಪದ್ಧತಿ(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ರೇವಣಸಿದ್ದಪ್ಪ ಎ.** ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ. ಸ. ಚಿ. ರಮೇಶ)
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: 29.12.17
ಸ್ಥಳ: ವಿದ್ಯಾರಣ್ಯ

ಪ್ರಮಾಣ ಪತ್ರ

ಜನಪದ ಆಚರಣೆಗಳಲ್ಲಿ ಬಲಿಪದ್ಧತಿ(ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಸ.ಚಿ.ರಮೇಶ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ:

ಸ್ಥಳ: ವಿದ್ಯಾರಣ್ಯ

(ರೇವಣಸಿದ್ದಪ್ಪ ಎ.)
ಸಂಶೋಧನ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಪರಿವಿಡಿ

ಅಧ್ಯಾಯ : ಒಂದು / ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

೧.೫. ಅಧ್ಯಯನದ ಸ್ವರೂಪ

೧.೬. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಎರಡು / ೪೧

ಬಲಿಪದ್ಧತಿಯ ಹುಟ್ಟು ಮತ್ತು ಬೆಳವಣಿಗೆ

೨.೧. ಬಲಿಪದ್ಧತಿಯ ಪದನಿಷ್ಪತ್ತಿ ಮತ್ತು ಅರ್ಥ

೨.೨. ಬಲಿಪದ್ಧತಿಯ ಚಾರಿತ್ರಿಕ ಹಿನ್ನೆಲೆ

೨.೩. ಬಲಿಪದ್ಧತಿಯ ಪ್ರಕಾರಗಳು

೨.೪. ಜನಪದ ಮತ್ತು ಶಿಷ್ಟ ಸಾಹಿತ್ಯದಲ್ಲಿ ಬಲಿಪದ್ಧತಿ

ಅಧ್ಯಾಯ : ಮೂರು / ೮೭

ಜನಪದ ಆಚರಣೆಗಳಲ್ಲಿ ಬಲಿಪದ್ಧತಿ

೩.೧. ಬಳ್ಳಾರಿ ಜಿಲ್ಲೆಯ ಭೌಗೋಳಿಕ ಪರಿಚಯ

೩.೨. ಜೀವನಾವರ್ತನ ಆಚರಣೆಗಳಲ್ಲಿ ಬಲಿಪದ್ಧತಿ

೩.೩. ವಾರ್ಷಿಕಾವರ್ತನ ಆಚರಣೆಗಳಲ್ಲಿ ಬಲಿಪದ್ಧತಿ

೩.೪. ಬಲಿಪದ್ಧತಿಯಲ್ಲಿ ನಂಬಿಕೆ ಮತ್ತು ನಿಷೇಧಗಳು

ಅಧ್ಯಾಯ : ನಾಲ್ಕು / ೨೦೨

ತಾತ್ವಿಕ ನೆಲೆಯಲ್ಲಿ ಬಲಿಪದ್ಧತಿ

೪.೧. ಬಲಿಪದ್ಧತಿಯ ಪ್ರೇರಣೆ ಹಾಗೂ ಪ್ರಭಾವ

೪.೨. ಸಾಮಾಜಿಕ ನೆಲೆಯಲ್ಲಿ ಬಲಿಪದ್ಧತಿ
೪.೩. ಧಾರ್ಮಿಕ ನೆಲೆಯಲ್ಲಿ ಬಲಿಪದ್ಧತಿ
೪.೪. ಬಲಿಪದ್ಧತಿಯಲ್ಲಿನ ಸ್ಥಿತ್ಯಂತರಗಳು
ಅಧ್ಯಾಯ : ಐದು / ೨೧೮
ಸಮಾರೋಪ
೫.೧. ಅಧ್ಯಯನದ ಫಲಿತಗಳು
ಅನುಬಂಧಗಳು
ಅ. ಆಕರ ಗ್ರಂಥಗಳು / ೨೩೨
೧. ಇಂಗ್ಲಿಷ್ ಗ್ರಂಥಗಳು /೨೪೧
೨. ನಿಯತಕಾಲಿಕೆಗಳು / ೨೪೩
೩. ದಿನ ಮತ್ತು ವಾರಪತ್ರಿಕೆಗಳು / ೨೪೭
ಆ. ವಕ್ತೃಗಳ ವಿವರ / ೨೪೮
ಇ. ಬಲಿ ಕುರಿತಾದ ಜನಪದ ಹಾಡುಗಳು / ೨೫೫
ಈ. ಸಾಂಸ್ಕೃತಿಕ ಪದಕೋಶ / ೨೬೨
ಉ. ಛಾಯಾಚಿತ್ರಗಳು / ೨೬೪

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

೧.೫. ಅಧ್ಯಯನದ ಸ್ವರೂಪ

೧.೬. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧. ಪ್ರಸ್ತಾವನೆ

ಇಂದು ಜಾನಪದ ಅಧ್ಯಯನಗಳು ಸೂಕ್ಷ್ಮ ಅಧ್ಯಯನಗಳತ್ತ ಸಾಗುತ್ತಿವೆ. ಅಂತೆಯೇ ದುಂಡು ಅಧ್ಯಯನಗಳು ಪ್ರಶ್ನೆಗೆ ಒಳಗಾಗುತ್ತಿವೆ. ಒಂದು ರಾಜ್ಯದ ಸಮಗ್ರ ಜಾನಪದ ಅಧ್ಯಯನ, ಒಂದು ಜಿಲ್ಲೆಯ ಸಮಗ್ರ ಜಾನಪದ ಅಧ್ಯಯನ ಇತ್ಯಾದಿ. ಇಂತಹ ಅಧ್ಯಯನಗಳ ಫಲಿತ ಕೂಡ ದುಂಡು ಹೇಳಿಕೆಯೇ ಆಗಿರುತ್ತದೆ. ಆದರೆ ಈ ಬಗೆಯ ಅಧ್ಯಯನದಿಂದ ಸಂಶೋಧನೆಯ ಸೂಕ್ಷ್ಮತೆ ನಾಶವಾಗುತ್ತದೆ. ಇಂದು ಒಂದು ಜಿಲ್ಲೆಯ ಜಾನಪದದ ಒಂದು ಸಂಗತಿಯನ್ನು ಆಯ್ದುಕೊಂಡು ಅಧ್ಯಯನ ಮಾಡುವ ಅಗತ್ಯವಿದೆ. ಕಾರಣ ಆಯಾ ಸಂಗತಿಯು ಆಯಾ ಜಿಲ್ಲೆಯ ವಾಸ್ತವ ಮುಖವನ್ನು ಶೋಧಿಸಲು ಅನುಕೂಲವಾಗುತ್ತದೆ. ಅಂತೆಯೇ ಇಂತಹ ಸೂಕ್ಷ್ಮ ಅಧ್ಯಯನಗಳು ಜಾನಪದ ಅಧ್ಯಯನವನ್ನು ಇನ್ನಷ್ಟು ಸೂಕ್ಷ್ಮಗೊಳಿಸುವುದೂ ಇದೆ. ಹಾಗಾಗಿ ಇಂದು ಜಿಲ್ಲೆಯೊಂದರ ಅಧ್ಯಯನವನ್ನು ಸಾಂಸ್ಕೃತಿಕವಾಗಿ, ಭಿನ್ನವಾಗಿ ಕಟ್ಟಿಕೊಡುವ ಅಗತ್ಯವಂತೂ ಇದ್ದೇ ಇದೆ.

ಮುಖ್ಯವಾಗಿ ಜಾನಪದದಲ್ಲಿ ಕಾಣುವ ಬಲಿದಾನದ ಕತೆ, ಐತಿಹ್ಯ, ಕಥನಗೀತೆ, ಪುರಾಣಗಳು ಆಯಾ ಭಾಗದ ಸಾಂಸ್ಕೃತಿಕ ಚರಿತ್ರೆಯನ್ನು ಹೇಳುತ್ತವೆ. ಬಲಿದಾನ ಅಂದರೆ ತನ್ನನ್ನು ತಾನೇ ಸ್ವ ಆಹುತಿ ಮಾಡಿಕೊಳ್ಳುವುದು. ಅಂತೆಯೇ ಇತರರನ್ನು ಒತ್ತಾಯದಿಂದ ಬಲಿದಾನಕ್ಕೆ ಅಣಿಗೊಳಿಸುವುದು. ಈ ಎರಡೂ ನೆಲೆಗಳಲ್ಲಿ ಬಲಿದಾನಗಳಿವೆ. ಸಮಾಜದ ಜಾತಿವ್ಯವಸ್ಥೆಯ ಒಳಗಿನ ಶೋಷಕ ನೆಲೆಗಳನ್ನು ಇದು ತೋರಿಸುತ್ತದೆ. ಅಂತೆಯೇ ಮೇಲು ಜಾತಿ ಕಟ್ಟಿದ ಕಲ್ಪಿತ ಕತೆಗಳನ್ನು ಒಡೆದು ಅದರ ನಿಜಸ್ವರೂಪವನ್ನು ತೋರಿಸುವ ಅಗತ್ಯವಿದೆ. ಈ ಮೂಲಕ ಬಲಿದಾನದ ಬಗ್ಗೆ ಜನರಲ್ಲಿರುವ ಜನಾಭಿಪ್ರಾಯವನ್ನು ಬದಲಾಯಿಸುವ ಅಗತ್ಯವಿದೆ. ಈ ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ಪ್ರಾಮುಖ್ಯತೆ ಇದೆ.

ಸಾಂಸ್ಕೃತಿಕವಾಗಿ ಜಾನಪದವನ್ನು ಮಾನವ ಜೀವನದ ಒಂದು ಭಾಗವಾಗಿ ಗಮನಿಸುತ್ತೇವೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಜಾನಪದ ಅಧ್ಯಯನಕ್ಕೆ ವಿಶಿಷ್ಟ ಸ್ಥಾನಮಾನ ಇದೆ. ಪ್ರಧಾನವಾಗಿ ಜಾನಪದ ಮನುಷ್ಯನ ಜೀವನಚರಿತ್ರೆಯನ್ನು ಅಧ್ಯಯನ ಮಾಡುವ ಒಂದು ಶಾಸ್ತ್ರವಾಗಿ ಕಂಡುಬರುತ್ತದೆ. ಮಾನವನ ಬದುಕನ್ನು ಚರ್ಚೆ ಮಾಡಲು ಮತ್ತು ಪರಂಪರಾಗತವಾಗಿ ಬಂದ ಅವನ ಜೀವನದ ಹಾದಿಗಳನ್ನು ತಿಳಿದುಕೊಳ್ಳಲು ಜಾನಪದ ಒಂದು ಪ್ರಮುಖ ಅಂಗವಾಗಿ ಕಂಡುಬರುತ್ತದೆ. ಜಾನಪದಶಾಸ್ತ್ರದಲ್ಲಿ ಮೌಖಿಕ ಸಾಹಿತ್ಯಕ್ಕೆ ಹೆಚ್ಚು ಮಹತ್ವ ಇದೆ. ಸಾಮಾನ್ಯವಾಗಿ ಗ್ರಾಮ, ಹಳ್ಳಿಗಳಲ್ಲಿ ನೆಲೆಸಿರುವ ಆಚಾರ ವಿಚಾರಗಳು, ಸಂಪ್ರದಾಯಗಳು, ಆರಾಧನೆಗಳು, ಕುಣಿತಗಳು, ಹಾಡುಗಳು, ಕಥೆಗಳು, ಐತಿಹ್ಯಗಳು, ಸ್ಥಳಪುರಾಣಗಳು, ನಂಬಿಕೆಗಳು, ನಿಷೇಧಗಳು, ಪುರಾಣಗಳು, ಜಾನಪದ ಕತೆಗಳು, ಗಾದೆಗಳು, ವಿನೋದಗಳು, ಒಗಟುಗಳು ಮುಂತಾದ ಪ್ರಕಾರಗಳನ್ನು ಗಮನಿಸುವಾಗ ಜಾನಪದ ಸಾಹಿತ್ಯ ಬಹಳ ಮುಖ್ಯವೆನಿಸುತ್ತದೆ. ಮೌಖಿಕ ಸಾಹಿತ್ಯ ಆಚರಣಾತ್ಮಕವಾಗಿ ಅಧ್ಯಯನಕ್ಕೆ ಪೂರಕವಾಗುತ್ತದೆ. ಈ ಮೌಖಿಕ ಸಾಹಿತ್ಯ ಪರಂಪರೆಯಲ್ಲಿ ರಚನಾತ್ಮಕವಾಗಿ ಗ್ರಾಮದೈವಗಳ ಆಚರಣಾ ವಿಧಿವಿಧಾನಗಳನ್ನು ಸ್ಪಷ್ಟವಾಗಿ ಗಮನಿಸುತ್ತೇವೆ. ಇಲ್ಲಿ ಪ್ರಧಾನವಾಗಿ ಆರಾಧನೆ ಆಚರಣೆಗಳು ಮನುಷ್ಯನಿಗೆ ಮುಖ್ಯವೆನಿಸುತ್ತವೆ. ಮಾನವನಿಗೆ ದೇವತೆ, ದೇವರು ಎಂದರೆ ಬಹಳ ಭಕ್ತಿ. ಈ ಭಕ್ತಿಯ ಹಿನ್ನೆಲೆಯಲ್ಲಿ ಬದುಕನ್ನು ಸಾಗಿಸುವ ಪರಂಪರೆಯನ್ನು ಅಧ್ಯಯನ ನಡೆಸಬೇಕಾದರೆ ಈ ಜಾನಪದ ಶಾಸ್ತ್ರವು ಅವಶ್ಯಕವಾಗಿರುತ್ತದೆ.

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ನಮ್ಮ ಜನಪದರು ಗ್ರಾಮದೇವತೆಗಳಿಗೆ ಅನೇಕ ವಿಚಾರಗಳಿಗಾಗಿ ಪ್ರಾಣಿ ಬಲಿಗಳನ್ನು ಕೊಡುವ ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಊರನ್ನು ಅಥವಾ ಗ್ರಾಮವನ್ನು ಕಾಯುವ, ರಕ್ಷಿಸುವ, ಸಲುಹುವ ಬಹುತೇಕ ದೇವತೆಗಳನ್ನು ಗ್ರಾಮದೇವತೆಗಳೆಂದು ಕರೆಯುತ್ತಾರೆ. ಉದಾಹರಣೆಗೆ ಮಾರಿ, ಮಸಣಿ, ಕಾಳಿ, ಚಾಮುಂಡಿ, ದುರ್ಗಿ, ಯಲ್ಲವ್ವ ಮುಂತಾದ ದೇವತೆಗಳನ್ನು ಗುರುತಿಸಬಹುದು. ಜನಗೀತೆ, ಗ್ರಾಮಗೀತೆಗಳಲ್ಲಿ ಈ ಗ್ರಾಮದೇವತೆಗಳಾದ ಕರಿಯವ್ವ, ಚೌಡವ್ವ, ಸಿರಿಯವ್ವ, ಯಲ್ಲವ್ವ, ಮಾಯವ್ವ, ಮಾರಕ್ಕ, ದ್ಯಾಮವ್ವ, ದೇವಮ್ಮ, ದೊಡ್ಡಮ್ಮ, ಮುಂತಾದವುಗಳು ಪದ್ಯಗಳಲ್ಲಿ ದೊರೆಯುತ್ತವೆ. ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಈ 'ಪ್ರಾಣಿಬಲಿ'[೧] ಎನ್ನುವ ಶಬ್ದ ಪ್ರಾಣಿಯನ್ನು ತಾನು ನೆಚ್ಚಿಕೊಂಡು, ನಂಬಿಕೊಂಡು ಬಂದ ದೇವಾನುದೇವತೆಗಳಿಗೆ ಅರ್ಪಿಸುವ ಅಥವಾ ಸಮರ್ಪಿಸುವುದು ಎಂದು ತಿಳಿಸುತ್ತದೆ. ಮನುಷ್ಯನ ದೈನಂದಿನ ಬದುಕಿನಲ್ಲಿ ಬಳಸುವ ಯಾವುದೇ ವಸ್ತುವನ್ನು ಇತರರಿಗೆ ಅಥವಾ ತಾನು ಆರಾಧಿಸುವ ದೈವಕ್ಕೆ ಅರ್ಪಿಸುವುದು, ಕೊಡುವುದರಿಂದ ಪ್ರಾಣಿಬಲಿ ಆಗುತ್ತದೆ.[೨]

ಇಲ್ಲಿ ಪರಂಪರಾಗತವಾಗಿ ಬಂದ ದೈವಗಳ ಆರಾಧನಾ ಸಂದರ್ಭಕ್ಕೆ ಪ್ರಾಣಿಬಲಿ ನಡೆಯುವುದು ಇದೆ. ಈ ಪ್ರಾಣಿಬಲಿಗಳಿಗೆ ತನ್ನದೇ ಆದ ಚಾರಿತ್ರಿಕ ಮಹತ್ವವೂ ಇದೆ. ಮನುಷ್ಯನಿಗೆ ಒದಗಿ ಬರುವ ನಾನಾ ರೀತಿಯ ತೊಂದರೆಗಳಿಂದ ತಪ್ಪಿಸಿಕೊಳ್ಳುವ ಪರಿಪಾಟದಿಂದ ಯಾವುದೋ ಒಂದು ಅಗೋಚರ ಶಕ್ತಿಗೆ ಮಾರುಹೋಗಿ ಬಲಿ ಕೊಡುವ ಸಂಪ್ರದಾಯವನ್ನು ರೂಢಿಸಿಕೊಂಡಿರಬೇಕು. ದೇವತೆಗಳ ಆರಾಧನೆಯನ್ನು ಹಳೆಯ ಕಾಲದಿಂದಲೂ ನೋಡಿದರೂ ಬೌದ್ಧ ಮತ್ತು ಜೈನಧರ್ಮಗಳಲ್ಲಿ ಪೂಜಾ ಹಿನ್ನೆಲೆಯಲ್ಲಿ ದೃಢೀಕರಿಸಿಕೊಳ್ಳಬಹುದು. ಬೌದ್ಧ ದೇವತೆ ತಾರಾಭಗವತಿ ಪ್ರಸಿದ್ಧಿಯನ್ನು ಪಡೆದುಕೊಂಡಿದ್ದಾಳೆ. ಕದ್ರಿ, ಸವದತ್ತಿ, ಧರ್ಮಸ್ಥಳ ಮುಂತಾದ ಸ್ಥಳಗಳಲ್ಲಿ ಒಂದು ಕಾಲಕ್ಕೆ ಜೈನ ಮತ್ತು ಬೌದ್ಧಧರ್ಮದ ಕೇಂದ್ರಗಳಿದ್ದವು ಎಂಬ ಮಾಹಿತಿಗಳು ಸಿಗುತ್ತದೆ. ಈ ಹಿನ್ನೆಲೆಯಲ್ಲಿ ಆರಾಧನಾ ಭಾಗವಾಗಿ ಪ್ರಾಣಿಬಲಿಗಳು ನಡೆದುಕೊಂಡು ಬಂದಿರಬೇಕು.

ಮೂಲಮಾನವನು ಮಂದಮತಿಯಾದಾಗ್ಯೂ ಸ್ವಲ್ಪ ಆಲೋಚಿಸುವ ಶಕ್ತಿಯನ್ನು ಪಡೆದುಕೊಂಡಿದ್ದನು. ಅವನ ಮನಸ್ಸಿನ ಮೇಲೆ ಪ್ರಕೃತಿಯ ವೈಚಿತ್ರಗಳು ಗಾಢವಾದ ಪ್ರಭಾವವನ್ನುಂಟುಮಾಡಿರಬೇಕು. ಪ್ರಾಚೀನ ಮನುಷ್ಯನ ಮೇಲೆ ಆ ಪ್ರಭಾವಗಳ ಅವಶೇಷ ಇಂದಿಗೂ ತಕ್ಕಮಟ್ಟಿಗೆ ಪಟ್ಟು ಹಿಡಿದು ನೆಲೆಯಾಗಿರುವುದನ್ನು ಗುರುತಿಸಬಹುದು. ಕಾಡುಜನರಿಗೆ ಮರದ ಕೊಂಬೆಗಳು ಮುರಿಯುವಾಗ ಆಗುವ ಶಬ್ದ ಅದರೊಳಗಿನ ಚೈತನ್ಯ ಅದೃಶ್ಯ ಚೀತ್ಕಾರಗಳನ್ನು ಕಂಡುಕೊಂಡು ಭಯಭೀತನಾಗಿರಬೇಕು. ಅಂತೆಯೇ ಬಿದಿರು ಮೆಳೆಗಳ ತಿಕ್ಕಾಟ ಕಾಡುದೇವತೆಯ ಗೋಳಾಟಗಳು ಕಂಡುಬಂದವು. ಈಗಾಗಿ ಕಾಡುಗಳಲ್ಲಿ ವಾಸ ಮಾಡುವಾಗ ಅವನಿಗೆ ದಿಗ್ಭ್ರಾಂತವಾಗಿರುವುದು ಇದೆ. ಇದ್ದೆ ಮಾಡುವಾಗ ಕನಸಿನಿಂದ ಎದ್ದ ಮಾನವ ಸ್ವಲ್ಪ ಸಮಯದಲ್ಲಿ ಹಿಂದೆ ಯಾವುದೋ ಒಂದು ವಿಭಿನ್ನ ವ್ಯಕ್ತಿತ್ವದ ಅನುಭವವಾಗಿರಬೇಕು. ಅನುಮಾನದಿಂದ ತನ್ನ ಮೇಲ್ಮೈಯ ಲಕ್ಷಣಗಳನ್ನು ತಿಳಿದುಕೊಂಡು ನಾನೇ ನಾನು ಎಂದು ಸ್ಥಿರಪಡಿಸಿಕೊಂಡು ಸಮಾಧಾನವಾದ ಇಂತಹ ಪರಿಸ್ಥಿತಿಯಲ್ಲಿ ಕನಸು ಅನುಭವ ತೀರ ವಿಚಿತ್ರ. ಕನಸು ನನಸಾಗುವುದೆಂಬ ಮುಂದೆ ಆಗುವ ಘಟನೆಗಳ ಪೂರ್ವ ಪ್ರದರ್ಶನವಿರಬಹುದೆಂಬ ನಂಬಿಕೆ ಈಗಲೂ ಇದೆ. ಯಾವುದೋ ಶಕ್ತಿ ತಾನು ಮಲಗಿದ್ದಾಗ ತನ್ನ ದೇಹದಲ್ಲಿ ಹೊಕ್ಕು ಭವಿಷ್ಯ ಹೇಳಿ ಮಾಯವಾಗಿರಬೇಕೆಂಬ ಪ್ರಬಲ ನಂಬಿಕೆ, ಶಂಕೆ, ಕನಸುಗಳೂ ಕೂಡ ಮಾನವನನ್ನು ಕಾಡುತ್ತಿದ್ದವು.

ಗುಡ್ಡಗಾಡು ಪ್ರದೇಶದಲ್ಲಿ ಬದುಕುವ ಹಿನ್ನೆಲೆಯಲ್ಲಿ ಆತನಿಗೆ ನಾನಾ ರೀತಿಯಲ್ಲಿ ತೊಂದರೆಗಳು, ಕಷ್ಟ ಕಾರ್ಪಣ್ಯಗಳು ನಿರ್ಮಾಣವಾಗುತ್ತಿದ್ದವು. ಕಾಡಿನಲ್ಲಿ ವಾಸಿಸುವ ಸಂದರ್ಭದಲ್ಲಿ ಈ ಪ್ರಾಣಿಬಲಿ ಸಾಮಾನ್ಯವಾಗಿ ರೂಪುಗೊಂಡಿರಬೇಕು ಎಂದು ಊಹಿಸಲು

ಒಂದು ಅವಕಾಶ ಇದೆ. ಬೆಂಕಿ, ನೀರು, ಪ್ರಳಯ, ಗುಡುಗು, ಸಿಡಿಲು, ಭೂಕಂಪ, ಮುಂತಾದವುಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ಪ್ರಾಣಿಬಲಿಗಳು ಸೃಷ್ಟಿಯಾಗಿರಬೇಕು. ಪ್ರಕೃತಿಯಲ್ಲಿ ಸೃಷ್ಟಿಯಾಗಿರುವ ಪ್ರಕೃತಿಯ ವೈಪರೀತ್ಯಗಳಿಗೆ ಯಾವುದೋ ಒಂದು ಅಗಮ್ಯ-ಅಗೋಚರ ಶಕ್ತಿಯೇ ಕಾರಣ ಎಂದು ಅರಿತುಕೊಂಡ ಮಾನವ ಆ ಅಗೋಚರ ಶಕ್ತಿಗೆ ಭಯಭೀತನಾಗಿ ಅದಕ್ಕೆ ತನ್ನ ಸುತ್ತಮುತ್ತಲು ಸಿಗುವ ವಸ್ತುಗಳಾದ ಮರದ ದಿಮ್ಮೆ, ಬೇರು, ಮೊನಚಾದ ಕಲ್ಲುಗಳನ್ನು ಅರ್ಪಿಸಿ ಸಂತೃಪ್ತಿಗೊಳಿಸುತ್ತಿದ್ದ.

ಬದುಕನ್ನು ಅರ್ಥ ಮಾಡಿಕೊಂಡ ಮಾನವ ನಾಗರಿಕತೆಗಳ ಪಲ್ಲಟಗಳಿಂದ ತಾನು ತಯಾರಿಸಿದ, ನಿರ್ಮಿಸಿದ ವಸ್ತುಗಳನ್ನು ಅಗೋಚರ ಶಕ್ತಿಗೆ ಪ್ರಾಣಿಬಲಿಯಾಗಿ ಅರ್ಪಿಸಿದ. ಪ್ರಪಂಚದಲ್ಲಿ ವಾಸ ಮಾಡುತ್ತಿರುವ ಬುಡಕಟ್ಟು ಸಮುದಾಯಗಳಲ್ಲಿ ಪ್ರಾಣಿಬಲಿಗಳು ಹೆಚ್ಚು ಬಳಕೆಯಾಗುವುದು ಕಂಡುಬರುತ್ತದೆ. ವಿಶೇಷವಾದ ದಿನದಂದು ಅಥವಾ ವರ್ಷದಲ್ಲಿ ಒಂದು ದಿನ ನಿಗದಿ ಮಾಡಿಕೊಂಡು ತಾವು ಆಚರಿಸುವ ಹಬ್ಬ ಹರಿದಿನಗಳಲ್ಲಿ ಪ್ರಾಣಿಬಲಿಗಳನ್ನು ಕೊಡುವುದು ವಾಡಿಕೆಯಾಗಿರುವುದನ್ನು ಕಾಣಬಹುದು. "ಆರ್ಯರು ಭಾರತಕ್ಕೆ ವಲಸೆ ಬಂದಾಗ ಮೊದಲು ಅವರು ಸಿಂಧೂ ನದಿ ತೀರದಲ್ಲಿದ್ದರು. ಈ ನದಿ ತೀರದಲ್ಲಿದ್ದ ದ್ರಾವಿಡರನ್ನು ದಕ್ಷಿಣಕ್ಕೆ ಪಲಾಯನ ಮಾಡಿಸಿದವರು ಆರ್ಯರು. ಆಗಿನಿಂದಲೇ ಸ್ಥಳೀಯ, ಪರಕೀಯ, ಕರಿಯ-ಬಿಳಿಯ, ಕನಿಷ್ಠ, ಶ್ರೇಷ್ಠರೆಂಬ ಕಾರಣಕ್ಕೆ ಸಂಘರ್ಷ ಹೋರಾಟ ಯುದ್ಧಗಳು ನಡೆದಿವೆ. ಆರ್ಯರು ತಾವೇ ಶ್ರೇಷ್ಠರೆಂದು, ಉಳಿದವರು ಅಲ್ಲವೆಂದು ತಿಳಿಸಿದ್ದು ಇನ್ನೊಂದು ವರ್ಗ, ವರ್ಣಸಂಕರ, ಸಂಕೀರ್ಣ ಜಾತಿಗಳಾಗಲಿಕ್ಕೆ ಆಸ್ಪದ ನೀಡಿದರು" ಎಂದು ಪ್ರಸ್ತಾಪ ಮಾಡುತ್ತಾರೆ.[೩]

ರುವಾಂಡ, ಜಪಾನ್, ಶ್ರೀಲಂಕಾ, ಫ್ರಾನ್ಸ್, ಅಮೆಜಾನ್, ಅಂಡಮಾನ್ ನಿಕೋಬಾರ್, ಗ್ರೀಸ್, ಯುರೋಪ್, ಏಷ್ಯಾ ಖಂಡಗಳಲ್ಲಿ ಪ್ರಸಿದ್ಧವಾದ ಬುಡಕಟ್ಟು ಸಮುದಾಯಗಳು ಜೀವನ ನಡೆಸುತ್ತಿರುವುದನ್ನು ಗುರುತಿಸಬಹುದು. ಈ ಬುಡಕಟ್ಟು ಸಮುದಾಯಗಳ ಆಚಾರ, ವಿಚಾರ, ಸಂಪ್ರದಾಯ, ಸಂಸ್ಕೃತಿ, ಮಾತನಾಡುವ ಭಾಷಾ ವೈಖರಿ, ವಿವಿಧತೆ, ಆರಾಧನಾ ಪದ್ಧತಿಗಳನ್ನು ಗಮನಿಸಬಹುದು. ತಾವು ನಂಬಿಕೊಂಡು ಬಂದ ದೈವಕ್ಕೆ ಪ್ರಾಣಿಬಲಿಗಳು ನಡೆಯುತ್ತಿರುವುದು ಕಾಣಬಹುದು. ಜೆ.ಜೆ. ಪ್ರೇಸರ್ ತಮ್ಮ ಕೃತಿಯಾದ ದಿ ಗೋಲ್ಡನ್ ಬೋ ಎಂಬ ಕೃತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. "ಪ್ರಾಚೀನ ನಾಗರಿಕತೆಗಳಲ್ಲಿನ ಧರ್ಮ, ಮಾಯ, ಮಾಟದ ಬಗ್ಗೆ ತಿಳಿಸಿದ್ದಾರೆ. ಹಾಗೆಯೇ ಡಯಾನಾ ಎಂಬ ದೇವತೆ ಬಗ್ಗೆ ತಿಳಿಸುತ್ತಾ ನೆಮಿಯಲ್ಲಿ ನಡೆಯುತ್ತಿದ್ದ ಡಯಾನಾಳ ಪೂಜೆ ಗುಣ-ವಿಶೇಷಗಳನ್ನು ಈಗಲೂ ಗುರುತಿಸಬಹುದೆಂದು ತಿಳಿಸುತ್ತಾರೆ. ಡಯಾನಾಳನ್ನು ವ್ಯಾಧರ

ದೇವತೆಯನ್ನಾಗಿಯೂ ಸಂತಾನ ಕರುಣಿಸುವ ಗರ್ಭಿಣಿ ಸ್ತ್ರೀಯರಿಗೆ ಸುಖ ಪ್ರಸವವನ್ನು ಕೊಡುವ ದೇವತೆಯಾಗಿ ಪೂಜಿಸುತ್ತಿದ್ದರು. ಡಯಾನಾಗೆ ಸಮವಾದ ಗ್ರೀಕ್ ದೇವತೆ ಆರ್ಟಮಿಸ್. ಈಕೆಯನ್ನು ಗ್ರೀಕರಿಗೆ ಮುನ್ನ, ಏಷ್ಯಾಮೈನರ್ ಕ್ರೇಟ್ ಮುಂತಾದಲ್ಲಿ ಭೂದೇವತೆಯಾಗಿ ಪೂಜಿಸಲಾಗುತ್ತಿತ್ತು. ಅನಂತರದಲ್ಲಿ ಈಕೆ ಪ್ರಮುಖವಾಗಿ ವನದೇವತೆ ಎನಿಸಿಕೊಂಡಳು" ಎಂದು ಪ್ರಸ್ತಾಪಿಸುತ್ತಾರೆ.[೪]

ಚೇತನಾ ಶಕ್ತಿಯಾದ ಅದ್ಭುತ ಶಕ್ತಿಯನ್ನು ದೇವರೆಂದು ನಂಬಿದ ಮಾನವ ಎಚ್. ನರಸಿಂಹಯ್ಯನವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. 'ಸಾವು ಮನುಷ್ಯನ ತೀವ್ರ ಗಮನವನ್ನು ಯಾವಾಗಲೂ ಸೆಳೆದಿದೆ. ಪ್ರಾಣಿಗಳ ಸಾವಿನ ಪರಿಚಯವಿದ್ದರೂ ಮನುಷ್ಯನ ಮೇಲೆ ತನ್ನ ಸಂಬಂಧಿಯ ಸಾವು ಮಹತ್ವದ ಪರಿಣಾಮವನ್ನುಂಟು ಮಾಡಿದೆ. ಕ್ಷಣದ ಹಿಂದೆ ಓಡಾಡುತ್ತಿದ್ದ ವ್ಯಕ್ತಿ ಕ್ಷಣಾರ್ಧದಲ್ಲಿ ಕಟ್ಟಿಗೆಯ ತುಂಡಿನೋಪಾದಿಯಲ್ಲಿ ಆಗುವ ದೃಶ್ಯ ಹೃದಯವಿದ್ರಾವಕ. ಎಲ್ಲಾ ಜನಾಂಗಗಳಲ್ಲಿಯೂ ಸಾಮಾನ್ಯವಾಗಿ ದೇಹಕ್ಕಿಂತ ಮಿಗಿಲಾದ ಒಂದು ಚೇತನವಿದೆ ಎಂಬ ನಂಬಿಕೆ ಇದ್ದೇ ಇದೆ. ಇದಕ್ಕೆ ಮಾನವ ಮಾಡುವ ಅಪರಕರ್ಮಗಳೇ ಸಾಕ್ಷಿ. ಸತ್ತ ದೇಹಕ್ಕೆ ಲೇಪನ ಅದನ್ನು ಹೂಳುವುದು ಹೂಳುವ ವಿಧಾನ, ಗುಂಡಿಯಲ್ಲಿ ದೇಹದ ಜೊತೆ ಇಡುವ ಸಾಮಗ್ರಿಗಳು ಇವುಗಳೆಲ್ಲ ಸಾವೇ ಜೀವನದ ಕೊನೆಯಲ್ಲ ಎಂಬುದನ್ನು ವ್ಯಕ್ತಪಡಿಸುತ್ತದೆ. ಸತ್ತ ದೇಹವನ್ನು ಸುಟ್ಟರೂ ಈ ನಂಬಿಕೆಗಳಲ್ಲಿ ವ್ಯತ್ಯಾಸವಿಲ್ಲ.' ಈಗಲೂ ಮನುಷ್ಯ ಸತ್ತ ಹನ್ನೊಂದು ದಿನಕ್ಕೆ ದಿನದ ಕಾರ್ಯ ಮಾಡುವ ಪ್ರಾಣಿಬಲಿ ಮಾಡಿ ಮಾಂಸದ ಅಡುಗೆ ಮಾಡುವುದು ರೂಢಿಯಲ್ಲಿರುವುದು ಕಂಡುಕೊಳ್ಳಬಹುದು.

ಭಾರತದ ದಕ್ಷಿಣ ಭಾಗದ ಆಂಧ್ರಪ್ರದೇಶ, ತಮಿಳುನಾಡು, ಕೇರಳ ಪ್ರದೇಶಗಳಲ್ಲಿ ಪ್ರಾಣಿಬಲಿಗಳನ್ನು ಹೆಚ್ಚಾಗಿ ಮಾಡುತ್ತಾರೆ. ತಮಿಳುನಾಡು ರಾಜ್ಯ ಊಟಿ ಪ್ರದೇಶದಲ್ಲಿ 'ತೋಡ' ಜನಾಂಗದವರು ತಾವು ನಂಬಿಕೊಂಡು ಬಂದ ದೈವಕ್ಕೆ ಪ್ರಾಣಿಬಲಿಗಳನ್ನು ಕೊಡುವುದನ್ನು ಕಾಣಬಹುದು.[೫] ತಮಿಳುನಾಡಿನಲ್ಲಿ ಮಾರಿಯಮ್ಮನ್ ಹೆಸರಿನಲ್ಲಿ ಪ್ರಖ್ಯಾತಿ ಪಡೆದು ಆಚರಣೆ ಆಗುತ್ತಿರುವ ಗ್ರಾಮದೇವತೆ ಮಾರಿಯಮ್ಮನ ಜಾತ್ರಾ ಸಮಯದಲ್ಲಿ ವಿಶೇಷವಾಗಿ ಪ್ರಾಣಿಬಲಿ ಗಳನ್ನು ಕೊಡುವುದು ನೋಡಬಹುದು.

ತಮಿಳುನಾಡಿನಲ್ಲಿ ಗ್ರಾಮದೇವತೆಯನ್ನು 'ಅಮ್ಮ' ಎಂದು ಸಂಬೋಧಿಸಿ ಆಚರಿಸುತ್ತಾರೆ. ಈ ಭಾಗದ ಪ್ರಮುಖ ಶಕ್ತಿ ಅಮ್ಮ 'ಮಾರಿಯಮ್ಮ'. ಮಾರಿಯಮ್ಮನನ್ನು ಬಹಳ ಭಯಭಕ್ತಿಯಿಂದ ಪೂಜಿಸುವುದು ಈಗಲೂ ಕಾಣಬಹುದು. ವಾರ್ಷಿಕವಾಗಿ ನಡೆಯುವ ಜಾತ್ರಾ ಸಂದರ್ಭಕ್ಕೆ ವಿಶೇಷವಾಗಿ ಪ್ರಾಣಿಬಲಿಗಳನ್ನು ನೀಡುವುದು ಇದೆ. ಈ ದೇವತೆಯನ್ನು ಕಾಳಿಯಮ್ಮನ್, ಅಮ್ಮನ್, ದ್ರೌಪದಿಯಮ್ಮನ್, ಅಂಗಾಲಮ್ಮನ್, ಮುತ್ಯಾಲಮ್ಮನ್, ಮುಂತಾದ ಹೆಸರುಗಳಿಂದ

ಕರೆಯುತ್ತಾರೆ. ಆಂಧ್ರಪ್ರದೇಶದಲ್ಲಿ ಗ್ರಾಮದೈವಗಳಾದ ಪೋಲೆಮ್ಮ, ಬಂಗಾರಮ್ಮ, ಮಾರೆಮ್ಮ, ಅಂಕಮ್ಮ, ಮುತ್ಯಾಲಮ್ಮ, ತೊಲಸಿ, ಪೋಲೇರಮ್ಮ, ರೇಣುಕ, ಮಾತಮ್ಮ, ಗಂಗಮ್ಮ ಮುಂತಾದ ಹೆಸರುಗಳಿಂದ ಆರಾಧಿಸುತ್ತಾರೆ. ಜಮ್ಮು ರಾಜ್ಯದಲ್ಲಿ–ವೈಷ್ಣೋದೇವಿ, ಅಸ್ಸಾಂ ರಾಜ್ಯದಲ್ಲಿ–ಕಾಮಕ್ಯ ದೇವತೆ, ಕಾಶಿಯಲ್ಲಿ ವಿಶಾಲಾಕ್ಷಿ, ಅನ್ನಪೂರ್ಣೇಶ್ವರಿ, ಕೊಲ್ಕತ್ತದಲ್ಲಿ ಕಾಳಿಕಾ ದೇವಿ, ಕಂಚಿಯಲ್ಲಿ ಕಾಮಾಕ್ಷಿ, ತಮಿಳುನಾಡಿನ ಮಧುರೈ ಮೀನಾಕ್ಷಿ ದೇವತೆ, ಕರ್ನಾಟಕದ ಕೊಲ್ಲೂರಲ್ಲಿ ಮೂಕಾಂಬಿಕೆ ದೇವತೆ, ಶೃಂಗೇರಿ ಶಾರಾದಾಂಬೆ, ಮೈಸೂರಿನಲ್ಲಿ ಚಾಮುಂಡಿ, ಕನ್ಯಾಕುಮಾರಿ ಯಲ್ಲಿ ಕುಮಾರಿ ದೇವತೆ ಹಾಗೂ ತಮಿಳುನಾಡಿನ ಮಾರಿಯಮ್ಮನ್ ಎಂದು ಪೂಜೆಗೊಳ್ಳುತ್ತಿವೆ.

ಆಂಧ್ರಪ್ರದೇಶದಲ್ಲಿ ಗಂಗಮ್ಮ, ಪೋಲೇರಮ್ಮ, ಮಾರಮ್ಮ, ಕಾಳಮ್ಮ, ಜಾತ್ರೆಯಲ್ಲಿ ವಿಶೇಷವಾಗಿ ಕೋಣ, ಕುರಿ, ಮೇಕೆಗಳನ್ನು ಬಲಿ ಕೊಡುವುದನ್ನು ಪಾಶ್ಚಾತ್ಯ ವಿದ್ವಾಂಸರು ತಮ್ಮ ಕೃತಿಗಳಲ್ಲಿ ಉಲ್ಲೇಖಿಸುತ್ತಾರೆ. ಆಂಧ್ರಪ್ರದೇಶದಲ್ಲಿ ವಾರ್ಷಿಕವಾಗಿ ನಡೆಯುವ 'ಅಮ್ಮೋರು'[೬] ಜಾತ್ರಾ ಸಮಯಕ್ಕೆ ಕೋಣಗಳನ್ನು ಬಲಿ ಕೊಡುವುದು ಕಾಣಬಹುದು. ಹಾಗೆಯೇ ಕೇರಳ ಪ್ರಾಂತ್ಯವಾದ ಮಲಬಾರ್ ಪ್ರದೇಶದ ಗ್ರಾಮೀಣ ಭಾಗದಲ್ಲಿ ನಿರ್ಮಾಣವಾಗಿರುವ ಗ್ರಾಮದೈವಕ್ಕೆ ಪ್ರಾಣಿಬಲಿಗಳನ್ನು ಅರ್ಪಿಸುವುದು ಕಾಣಬಹುದು. ಮಹಾರಾಷ್ಟ್ರದಲ್ಲಿ ಗ್ರಾಮದೇವತೆಯರನ್ನು ಅಂಬಾಭವಾನಿ, ಶೀತಲದೇವಿ, ಗಾವ್‌ದೇವಿ[೭] ಎಂದು ಕರೆದು ಪೂಜಿಸುವುದು ಇದೆ.

ಪ್ರಕೃತಿಯ ಘಟನೆಗಳು ಮತ್ತು ಪುರಾತನ ಕಾಲದ ಮಾನವನಿಂದ ಸೃಷ್ಟಿಸಲ್ಪಟ್ಟ ಕೆಲವು ನಿಯಮಗಳು ಇಂದಿಗೂ ಜನಪದರು ಆಚರಿಸಿಕೊಂಡು ಬರುತ್ತಿರುವುದು ಇದೆ. ಹಿಂದಿನ ಕಾಲದಲ್ಲಿ ಯಾವ ರೀತಿಯ ಭೀತಿ ನಮ್ಮ ಮೆದುಳನ್ನು ಹೊಕ್ಕಿದಿಯೋ ಅದು ಇಂದಿಗೂ ನಮ್ಮನ್ನು ಬಾಧಿಸುತ್ತಲೇ ಇದೆ ಎಂದು ಜನರು ನಂಬುತ್ತಾರೆ.

ಜನರು ತಮಗೆ ಏನಾದರೂ ಕಷ್ಟಗಳು ಬಂದಾಗ ದೇವತೆಗಳಿಗೆ ಹರಕೆ ಹೊತ್ತುಕೊಳ್ಳುತ್ತಾರೆ. ಕೃಷಿ ಪ್ರಧಾನವಾದ ನಮ್ಮ ಭಾರತ ದೇಶದಲ್ಲಿ ಭೂದೇವಿಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಾರೆ. ವಾರ್ಷಿಕಾವರ್ತನದಲ್ಲಿ, ಜೀವನಾವರ್ತದಲ್ಲಿ ಬರುವ ಕೃಷಿ ಕಾಲಕ್ಕೆ ಭೂಮಿಯನ್ನು ಪೂಜಿಸುವುದು ಕಾಣಬಹುದು. ಭೂಮಿ ಫಲವತ್ತಾದ ಅಕ್ಕಿ, ಗೋಧಿ, ಅರಿಶಿನ, ಕಬ್ಬು, ಮಾವು, ರಾಗಿ ಮುಂತಾದ ಪದಾರ್ಥಗಳನ್ನು ನೀಡುವ ಶಕ್ತಿಯನ್ನು ತನ್ನ ಮಡಿಲಲ್ಲಿ ಇಟ್ಟುಕೊಂಡಿರುವುದರಿಂದ ಭೂದೇವಿಗೆ ಪ್ರಥಮ ಪೂಜೆ ಸಲ್ಲಿಸುವುದಿದೆ. ಭೂಮಿಯ ಫಲವಂತಿಕೆಯ ಶಕ್ತಿಗೂ ಮತ್ತು ಹೆಣ್ಣಿನ ಫಲವಂತಿಕೆಯ ಶಕ್ತಿಗೂ ಒಂದೇ ಶಕ್ತಿ ಇರುವುದು ಎಂದು ಪರಿಗಣಿಸುತ್ತೇವೆ. "ದೈವಗಳಿಗೆ ಎಡೆಯ ನೈವೇದ್ಯ ಬಹಳ ಆಶ್ಚರ್ಯ ಮತ್ತು ವಿಸ್ಮಯ ಅನ್ನಿಸುತ್ತದೆ. ಎಲ್ಲಿ ದೇವರ ಜಾತ್ರೆ ಹಬ್ಬ ನಡೆಯುತ್ತದೆಯೋ ಆಗ ದೂರದಿಂದ ಅಥವಾ ಹತ್ತಿರದಿಂದ ಬಂದ ಭಕ್ತರು ಆ ಪ್ರಾದೇಶಿಕದೊಳಗೆ ಇರುವ ಬಯಲು, ಮರಗಿಡಗಳ

ಹತ್ತಿರ ಅಥವಾ ಗಾಡಿಯಲ್ಲಿ ಹೋದರೆ ಅದರ ಕೆಳಗೆ ಎಲ್ಲಾ ಪ್ಲಾಸ್ಟಿಕ್‌ಡೇರೆ ಹೊಡೆದುಕೊಂಡು ಅಲ್ಲಿಯೇ ಪರಿಶೀಲಿಸಿ ಇರುವರು. ಜಾತ್ರೆ, ಹಬ್ಬ, ತೇರು, ಇದ್ದಂತಹ ಸಂದರ್ಭದಲ್ಲಿ ಆ ಮನೆಯ ಹಿರಿಯ ವ್ಯಕ್ತಿ ಆತ ಗಂಡಸಾಗಲೀ, ಇಲ್ಲಾ ಹೆಂಗಸಾಗಲೀ ಉಪವಾಸದಿಂದ ಇರುವರು. ಕೆಲವು ಸ್ತ್ರೀ ದೈವಗಳಿಗೆ ಸಿಹಿಯಾದ ಪದಾರ್ಥಗಳನ್ನು ಎಡೆಗೆ ಇಡುವರು. ಇನ್ನು ಕೆಲವು ದೈವಗಳು ಮಾಂಸಾಹಾರಿಯಾಗಿರುತ್ತವೆ. ಇಂತಹ ಸಂದರ್ಭದಲ್ಲಿ ಆಯಾ ದೈವಗಳಿಗೆ ಪೂರಕವಾಗಿ ಎಡೆಯನ್ನು ಭಕ್ತರು ಇಟ್ಟು ಪ್ರಾರ್ಥಿಸುವರು. ಏನೆಂದರೆ "ತಾಯಿ ನಿನ್ನ ಹರಕೆಯನ್ನು ಒಪ್ಪಿಸಿದ್ದೇವೆ. ಎಡೆ ಇಟ್ಟಿದೇವಿ, ಸ್ವೀಕರಿಸಿ ತೃಪ್ತಿಹೊಂದು. ನಮ್ಮ ಎಲ್ಲಾ ಕಷ್ಟಗಳನ್ನು ಹೋಗಲಾಡಿಸು. ನಮ್ಮ ಮಕ್ಕಳಿಗಾಗಲೀ, ಹೊಲ, ನೆಲ, ಮನೆ, ಗದ್ದೆ, ತೋಟ, ಹಸು, ಕರು, ಕುರಿ, ಕೋಳಿ, ಮೇಕೆಗಳಾಗಲೀ ಯಾವುದೇ ತೊಂದರೆ ಕೊಡದೆ ಕಾಪಾಡು. ಇನ್ನು ಮುಂದಿನ ಸಲ ಮಳೆ ಬೆಳೆ ಚೆನ್ನಾಗಿ ಬಂದರೆ ಇನ್ನೂ ಹೆಚ್ಚಿನ ಭಕ್ತಿಯಿಂದ ಬಂದು ನಾನು ನಿನಗೆ ಎಡೆ ಇಡುತ್ತೇನೆ" ಎಂದು ಪ್ರಾರ್ಥಿಸುವರು. ದೇವಿಯ ಮುಂದೆ ಅವರು ತಯಾರಿಸಿದ ಭಕ್ಷ್ಯಭೋಜ್ಯಗಳನ್ನು ಸುಮಾರು ಹೊತ್ತು ಇಡುವರು. ಅನಂತರ ಮತ್ತೊಮ್ಮೆ ಬಂದು ಪೂಜೆ ಸಲ್ಲಿಸಿ ಎಡೆಯನ್ನು ಕುಟುಂಬ ಸಮೇತ ಉಪಯೋಗಿಸುವರು"[೮] ಎಂದು ಮಾತನಾಡುತ್ತಾರೆ. ಇಲ್ಲಿ ಪ್ರಧಾನವಾಗಿ ಮಾತೃದೇವತೆ, ಸ್ತ್ರೀದೇವತೆ, ಸ್ತ್ರೀದೈವ ಎಂದು ಕರೆದು ಪೂಜಿಸಿಕೊಳ್ಳುವ ದೇವತೆಯರು ಊರನ್ನು ಮತ್ತು ತಮ್ಮ ಸಮೃದ್ಧಿಯನ್ನು ಕಾಪಾಡುತ್ತವೆ ಎಂದು ನಂಬಿ ಪೂಜಿಸುವುದು ಪ್ರಾದೇಶಿಕವಾಗಿ ಬಳ್ಳಾರಿ ಜಿಲ್ಲೆಯಾದ್ಯಂತ ಕಂಡುಬರುತ್ತವೆ. ಈ ಸ್ತ್ರೀದೈವಗಳಿಗೆ ತನ್ನದೇ ಆದ ನೆಲೆಯಲ್ಲಿ ಎಡೆ ಇಟ್ಟು ಪೂಜಿಸುವುದು ನೋಡಬಹುದು.

ನರಸಿಂಹಯ್ಯನವರ ಮಾತುಗಳು ಈ ರೀತಿಯಾಗಿವೆ. "ಕಾಲಕ್ರಮೇಣ ಮನುಷ್ಯನ ಯೋಚನಾ ಶಕ್ತಿ ಹೆಚ್ಚಿತು. ಘಟನೆಗಳನ್ನು ಮನುಷ್ಯನು ತರ್ಕಬದ್ಧವಾಗಿ ವಿಶ್ಲೇಷಣೆ ಮಾಡಲು ಆಗಲಿಲ್ಲವೋ ಅವು ಪ್ರಕೃತಿಯ ದೈವತ್ವಗಳಾದವು. ಮೇಲೆ ಅಂತಹ ಒಂದೊಂದು ಘಟನೆಯ ಹಿಂದೆ ಒಂದೊಂದು ದೇವತೆಯ ಕೈವಾಡವಿರಬೇಕೆಂದು ನಂಬಿಕೆ ಬಲವಾಯಿತು. ಇಂದ್ರನ ರಥ ಚಲಿಸಿದಾಗ, ಗುಡುಗು, ವೇಗ ಹೆಚ್ಚಿದಾಗ ಗುಡುಗಿನ ಆರ್ಭಟವೂ ಅಧಿಕ. ಕುದುರೆಗಳನ್ನು ಓಡಿಸಲು ಚಾವಟಿಯನ್ನು ಉಪಯೋಗಿಸಿದಾಗ ಮಿಂಚು, ಇಂದ್ರನಿಗೆ ತಡೆಯಲಾರದ ಕೋಪ ಬಂದಾಗ ಎಸೆದ ಅಸ್ತ್ರವೇ ಸಿಡಿಲು. ಪ್ರಪಂಚದ ಎಲ್ಲಾ ಭಾಗದ ಜನರಲ್ಲಿಯೂ ಸ್ವಲ್ಪ ಹೆಚ್ಚು ಕಡಿಮೆ ಇದೇ ವಿಧವಾದ ನಂಬಿಕೆಗಳು ಮೊದಲಾದವು. ನಮ್ಮ ದೇಶದಲ್ಲಿ ಗುಡುಗು, ಮಿಂಚು, ಸಿಡಿಲು, ಇಂದ್ರನ ಕೈವಾಡವಾಗಿದ್ದರೆ ಗ್ರೀಕರಲ್ಲಿ ಜೀವಪಿತೃ ಈ ಲೀಲೆಗಳಿಗೆ ಆದಿದೇವತೆ ಹಗಲು ರಾತ್ರಿಗಳಿಗೆ ಕಾರಣಪುರುಷನಾದ ಮತ್ತು ಜೀವಪೋಷಕನಾದ ಸೂರ್ಯ, ಭಗವಾನ್ ಆದ, ಈಗಲೂ ಸೂರ್ಯ ದೇವತೆಯನ್ನು ಪೂಜಿಸುವ ವಾಡಿಕೆ ಕೆಲವು

ಜನಪದರಲ್ಲಿದೆ." ಈ ರೀತಿಯಲ್ಲಿ ನಂಬಿಕೆಯ ತಿರುಳನ್ನು ಚರ್ಚೆ ಮಾಡುತ್ತಾರೆ. ಮನುಷ್ಯನಿಗೆ ಒದಗಿಬರುವ ಕಷ್ಟಗಳನ್ನು ನಿವಾರಿಸಿಕೊಳ್ಳಲು ಪ್ರಾಣಿಬಲಿಯನ್ನು ಕೊಡುತ್ತಾರೆ.

"ಜನಪದರ ಕಂಠಸ್ಥ ಸಾಹಿತ್ಯವು ಒಗಟು, ಗಾದೆ, ಕಥೆ, ಹಾಡಿನ ರೂಪದಲ್ಲಿ ಹೊರಹೊಮ್ಮಿದೆ. ಜನಪದರ ಜ್ಞಾನಸಾಮಗ್ರಿಯ ಮತ್ತೊಂದು ಮಗ್ಗುಲಾಗಿ ಆಚರಣೆ, ನಂಬಿಕೆ, ಸಂಪ್ರದಾಯ ಬೆಳೆದುಬಂದಿದೆ. ಜನಪದ ಸಾಹಿತ್ಯ ಒಂದು ಭಾಷಿಕ ಸಾಮಗ್ರಿ ಎನಿಸಿದರೆ ಇನ್ನೊಂದು ಆಚರಣಾ ರೂಪದ ಸಾಮಗ್ರಿ ಎನಿಸುತ್ತದೆ. ಪ್ರಸ್ತುತ ಜನಪದ ಆಚರಣೆಗಳು ಕೇವಲ ಸಂಪ್ರದಾಯದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಸ್ಥಿರಸಂಸ್ಕೃತಿಯಲ್ಲ. ಅವು ಸಮಷ್ಟಿ ಪ್ರಜ್ಞೆಯಿಂದ ಕೂಡಿದ್ದು ಸಾರ್ವಕಾಲಿಕವಾದುವು. ತಮ್ಮದೇ ಆದ ತತ್ವ ಸಿದ್ಧಾಂತಗಳ ಮೂಲಕ ಚರ ಸಂಸ್ಕೃತಿಯಾಗಿ ಚಲಾವಣೆಗೆ ಬಂದಿವೆ. ಬದುಕಿನ ಜೊತೆ ಹಿಂದಿನಿಂದ ಬಂದ ಆಚರಣೆಗಳನ್ನು ಅನುಸರಿಸಿ, ಮುಂದುವರಿಸಿಕೊಂಡು ಹೋಗುವುದು ಜನಪದರ ಸಹಜ ಸ್ವಭಾವ. ಹಿರಿಯರ ಪರಂಪರಾಗತ ಅನುಭವದಿಂದ ಒಡಮೂಡಿದ ನಂಬಿಕೆ, ಆಚರಣೆ, ವಿಧಿವಿಧಾನಗಳೆಲ್ಲವೂ ಬದುಕಿನ ಮಾರ್ಗಸೂಚಿಗಳಾಗಿವೆ. ಅವುಗಳನ್ನು ದೇವವಾಣಿಯಂತೆ, ವೇದವಾಕ್ಯದಂತೆ ಪಾಲಿಸಿಕೊಂಡು ಬಂದಿದ್ದಾರೆ"[೯] ಎಂದು ಪ್ರಸ್ತಾಪ ಮಾಡುತ್ತಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕಾದ್ಯಂತ ಕೋಣ ಬಲಿಪದ್ಧತಿ ನಡೆಯುತ್ತಿದ್ದ ಉಲ್ಲೇಖಗಳನ್ನು ಅನೇಕ ಕೃತಿಗಳಲ್ಲಿ ಕಾಣಬಹುದು. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಶಿರಸಿ ಮಾರಿಕಾಂಬಾಗೆ ಕೋಣವನ್ನು ಬಲಿ ಕೊಡುವ ಪರಂಪರೆ ಇತ್ತು.[೧೦] ಈಗಲೂ ಮಾರಿಗುಡಿಯ ಗರ್ಭಗುಡಿ ಎಡಭಾಗಕ್ಕೆ ಕೋಣವನ್ನು ಕಟ್ಟಿರುವುದು ಕಾಣಬಹುದು.

ಕರಾವಳಿ ಭಾಗದ ಕಾರ್ಕಳ ತಾಲೂಕಿನಲ್ಲಿ ಮಾರಿಯಮ್ಮನ ಗುಡಿಯ ಎದುರಲ್ಲಿ ಒಂದು ಭಾವಿ ಇದೆ. ಈ ಬಾವಿ ತುಂಬಾ ಕೋಣಗಳನ್ನು ಕಡಿದ ರಕ್ತ ತುಂಬುತ್ತಿತ್ತಂತೆ. ಆ ರಕ್ತವನ್ನು ಗ್ರಾಮದೇವತೆಗೆ ಅರ್ಪಿಸುತ್ತಿದ್ದರಂತೆ. ಈಗಲೂ ಮಾರಿಯಮ್ಮ ಗುಡಿಯ ಎದುರಲ್ಲಿ ಒಂದು ಬಾವಿ ಇರುವುದು ಕಾಣಬಹುದು.

ಮಂಗಳೂರು ಪ್ರಾಂತ್ಯದಲ್ಲಿ ಉರ್ವ ಮಾರಿಗುಡಿ ಎಂದು ಇದೆ. ಈ ಮಾರಿಗುಡಿಯಲ್ಲಿ ನರಬಲಿ ನಡೆಯುತ್ತಿತ್ತು ಎಂದು ಉಲ್ಲೇಖಗಳು ಸಿಗುತ್ತವೆ. ತದನಂತರದಲ್ಲಿ ಬದಲಾವಣೆಯಾಗಿರುವುದು ಕಾಣಬಹುದು. ಇಂತಹ ಮಾಹಿತಿಗಳನ್ನು ತರ್ಕ ಮಾಡಿದರೆ ಕರ್ನಾಟಕಾದ್ಯಂತ ಪ್ರಾಣಿಬಲಿಗಳು ನಡೆಯುತ್ತಿದ್ದವು ಎಂದು ತಿಳಿದುಕೊಳ್ಳಬಹುದು.

ಕರ್ನಾಟಕದಲ್ಲಿ ಮಲೆಕುಡಿಯ, ಹಕ್ಕಿಪಿಕ್ಕಿ, ಸೋಲಿಗರು, ಕುಡುಬಿ, ಮುಂತಾದ ಬುಡಕಟ್ಟು ಸಮುದಾಯಗಳು ಪ್ರಾಣಿಬಲಿಗಳನ್ನು ಹೆಚ್ಚಾಗಿ ಮಾಡುತ್ತಾರೆ. ಗ್ರಾಮದೇವತೆಗಳಾದ ಕಾಳಿ, ಮಾರಿ, ದುರ್ಗಿ, ಚಾಮುಂಡಿ, ಮಸಣಿ, ಮುಂತಾದ ಹೆಸರುಗಳಿಂದ ಕರೆದು ಪೂಜಿಸುವುದು

ಕಾಣಬಹುದು. ಈ ಎಲ್ಲಾ ದೇವಾನುದೇವತೆಗಳಿಗೆ ಪ್ರಾಣಿಬಲಿಗಳನ್ನು ಕೊಡುವುದು ಪರಂಪರಾಗತವಾಗಿ ರೂಢಿಯಲ್ಲಿರುವುದು ಕಾಣಬಹುದು.

ಕಾಳಿ, ಮಾರಿ, ದುರ್ಗಿ, ಚಾಮುಂಡಿ ಈ ಹೆಸರುಗಳೇ ಹೇಳುತ್ತವೇ ರಕ್ತವನ್ನು ಅಪೇಕ್ಷಿಸುವ ದೇವತೆಗಳೆಂದು ಕಾಳಿ, ಮಾರಿ, ಚಾಮುಂಡಿ, ಸ್ವರೂಪದ ಕೆತ್ತನೆಗಳನ್ನು ಭಾರತಾದ್ಯಂತ ಕಾಣಬಹುದಾದರೂ ಗ್ರಾಮಗಳಿಂದ ಕೂಡಿದ ದೇಶವಾಗಿರುವ ನಮ್ಮ ಭಾರತದಲ್ಲಿ ಗ್ರಾಮಗಳನ್ನು ಆಳುತ್ತಿದ್ದ ದೊರೆಗಳ, ಸಾಮ್ರಾಟರ ಕಾಲದಲ್ಲಿ ಈ ಕೆತ್ತನೆಗಳು ಹೇರಳವಾಗಿರುವುದು ಕಂಡುಬರುತ್ತದೆ. "ಗ್ರಾಮೀಣ ದೇವತೆಗಳನ್ನು ಅಲೆಮಾರಿ ದೇವತೆಗಳೆಂದು ಕರೆದಿರುತ್ತಾರೆ. ಜನರು ಒಂದು ಕಡೆಯಿಂದ ಮತ್ತೊಂದು ಕಡೆ ವಲಸೆ ಹೋಗುವಾಗ ಈ ದೇವತೆಗಳನ್ನು ಪುಟ್ಟಿಗಳಲ್ಲಿ ಹೊತ್ತುಕೊಂಡು ಹೋಗುತ್ತಿದ್ದರು. ಭೂಮಿ ಉಳುವ ಮೊದಲು, ಬೀಜ ಬಿತ್ತುವ ಮೊದಲು, ಮನೆ ಕಟ್ಟುವ ಮೊದಲು ಭೂಮಿ ಪೂಜೆ ಮಾಡುವಂತೆ ಮಾಯಮ್ಮ, ಪೂಜೆಯನ್ನು ಮಾಡಲಾಗುತ್ತದೆ. ಬಹುತೇಕ ನದಿ ಇಕ್ಕೆಲಗಳಲ್ಲಿ ದೇವತೆಯ ಗುಡಿಗಳಿರುತ್ತಿದ್ದವು. ಬೆಟ್ಟ ಗುಡ್ಡ ಅರಣ್ಯದಲ್ಲಿಯೂ ಗುಡಿಗಳಿವೆ. ಲಕ್ಷ್ಮಿ, ಪಾರ್ವತಿ, ಸರಸ್ವತಿಯ ಜೊತೆಗೆ ಚಂಡಿ, ಚಾಮುಂಡಿ, ಕಾಳಿ, ದುರ್ಗೆಯರು ಸೇರಿರುತ್ತಾರೆ"[೧೧] ಜೊತೆಗೆ ಜೇಮ್ ಪ್ರರ್ಸಟ್ ಅವರು ತಮ್ಮ 'ಕಲ್ಟ್ ಆಫ್ ದಿ ಗಾಡೆಸೆಸ್ಸ್' ಕೃತಿಯಲ್ಲಿ 'ಜಗತ್ತಿನ ಚಾಲಕ ಶಕ್ತಿ, ಪ್ರೇರಕಶಕ್ತಿ, ಪಾಲಕಶಕ್ತಿ, ಮಾತೃಶಕ್ತಿ ದೇವತೆಯಲ್ಲಿ ಇದೆ ಎಂದು ಅರಿತು ಮಾತೃಪೂಜೆಗೆ ಅಗ್ರಸ್ಥಾನ ಕೊಟ್ಟಿರುತ್ತಾರೆ' ಎಂದು ವಿವರಿಸುತ್ತಾರೆ.'[೧೨]

ದೊರೆಗಳ, ಸಾಮ್ರಾಟರ ಆಳ್ವಿಕೆಯ ಸಂದರ್ಭದಲ್ಲಿ ಕೋಟೆ ಕೊತ್ತಲುಗಳನ್ನು ನಿರ್ಮಾಣ ಮಾಡುತ್ತಿದ್ದರು. ಇಂತಹ ಆಳ್ವಿಕೆಯ ಸಂದರ್ಭಕ್ಕೆ ಪ್ರಾಣಿಬಲಿಗಳನ್ನು ಅರ್ಪಿಸುತ್ತಿದ್ದರು ಎಂದು ಇತಿಹಾಸದಲ್ಲಿ ಉಲ್ಲೇಖಗಳು ದೊರೆಯುತ್ತವೆ. ದೊಡ್ಡ ದೊಡ್ಡ ಕೆರೆಗಳು, ದೇವಸ್ಥಾನಗಳು, ಭಾವಿಗಳು, ಕೋಟೆಗಳನ್ನು ಕಟ್ಟಬೇಕಾದರೆ ಅವುಗಳಿಗೆ ರಕ್ತತರ್ಪಣವಾಗಲೇಬೇಕೆಂದು ಜನಪದ ಲೋಕೋಕ್ತಿ. ಈ ಹಿನ್ನಲೆಯಲ್ಲಿ ದೊಡ್ಡ ದೊಡ್ಡ ಕೋಟೆಗಳಿಗೆ ಬೃಹತ್ ಗಾತ್ರದ ದೇವಸ್ಥಾನಗಳಿಗೆ, ಕೆರೆಗಳಿಗೆ ಪ್ರಾಣಿಬಲಿಗಳನ್ನು ಮಾಡಿ ಅವುಗಳನ್ನು ನಿರ್ಮಾಣ ಮಾಡುತ್ತಿದ್ದರು. ಉದಾಹರಣೆಗೆ 'ಕೆರೆಗೆ ಹಾರ' ಜನಪದ ಕಥೆಯನ್ನು ಗಮನಿಸಬಹುದು.[೧೩] ಕರ್ನಾಟಕದಲ್ಲಿ ಇರುವ ಪಾಳು ಬಿದ್ದಿರುವ ಕೋಟೆಗಳ, ಪಾಳು ಕೆರೆಗಳ, ಪಾಳುಭಾವಿಗಳ ಪಕ್ಕದಲ್ಲಿ ನೆಟ್ಟಿರುವ ಶಿಲಾಕಂಬಗಳಿಗೆ, ಕಲ್ಲುಬಂಡೆಗಳಿಗೆ ಪ್ರಾಣಿಬಲಿ ಕೊಟ್ಟಿರುವ ಪುರಾವೆಗಳು ಸಿಗುತ್ತವೆ.

ಇಂತಹ ವಿಶೇಷಣಗಳಿಗೆ ಪ್ರಾಣಿಗಳಾದ ಕುರಿ, ಮೇಕೆ, ಹಂದಿ, ಆಡು, ಕೋಣ, ಕೋಳಿ, ಮುಂತಾದವುಗಳನ್ನು ಬಲಿಯಾಗಿ ಅರ್ಪಿಸುವುದು ವಾಡಿಕೆಯಾಗಿವೆ. ಕೆಲವು ಕಡೆಗಳಲ್ಲಿ 'ಪಕ್ಷಿ'ಗಳನ್ನು ಬಲಿದಾನವಾಗಿ ಕೊಟ್ಟಿರುವ ನಿದರ್ಶನಗಳು ಇವೆ. ಪಕ್ಷಿಗಳನ್ನು ಬಲಿಯಾಗಿ

ಮಾಡಬೇಕಾದರೆ ಸ್ಮಶಾನದಲ್ಲಿ ಮಾಡುತ್ತಾರೆ.[೧೪] ಈ ಹಿನ್ನೆಲೆಯಲ್ಲಿ ಪ್ರಾಣಿಬಲಿ ಕೊಡುವುದರಿಂದ ಮನುಷ್ಯನಿಗೆ ನೆಮ್ಮದಿಯನ್ನು ಕರುಣಿಸುತ್ತದೆಂಬ ಭಾವನೆ ಗ್ರಾಮೀಣ ಸಮುದಾಯಗಳಲ್ಲಿ ಕಾಣಬಹುದಾಗಿದೆ. ಪ್ರಸ್ತುತ ಅಧ್ಯಯನ ಪ್ರಾಣಿಬಲಿಯ ಉದ್ದೇಶವನ್ನು ಮನದಲ್ಲಿಟ್ಟುಕೊಂಡು ಮಾಡಲಾಗಿದೆ.

೧.೨. ಅಧ್ಯಯನದ ಉದ್ದೇಶ

ಜಾನಪದ ಆಚರಣಾ ಲೋಕವನ್ನು ಮೂಢನಂಬಿಕೆಯಾಗಿ ಮುಂದುವರಿಸಿಕೊಂಡು ಹೋಗುವ ಒಂದು ಮಾದರಿ ಇದೆ. ಆದರೆ ಇಂದು ಜಾನಪದವನ್ನು ವೈಜ್ಞಾನಿಕವಾಗಿ ಪರೀಕ್ಷೆ ಮಾಡುವ ಅಂತರ್‌ಶಿಸ್ತೀಯ ಅಧ್ಯಯನಗಳು ನಡೆಯುತ್ತಿವೆ. ಮುಖ್ಯವಾಗಿ ಚರಿತ್ರೆಯನ್ನು ಪುನರ್ ವ್ಯಾಖ್ಯಾನಕ್ಕೆ ಒಳಪಡಿಸಲು ಜಾನಪದ ಆಕರವನ್ನು ಇಂದು ಬಳಸಿಕೊಳ್ಳಲಾಗಿದೆ. ಇದು ಜಾನಪದ ಅಧ್ಯಯನದ ವರ್ತಮಾನದ ಕಾಳಜಿಯೂ ಆಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯವನ್ನು ಕೈಗೊಳ್ಳಲಾಗಿದೆ. ಮುಖ್ಯವಾಗಿ ಒಂದು ಜಿಲ್ಲೆಯನ್ನು ಕೇಂದ್ರವನ್ನಾಗಿಸಿ ಕೊಂಡು ಜನಪದ ಬಲಿದಾನದ ಆಚರಣೆಯ ಹಿಂದಿನ ಚಾರಿತ್ರಿಕ ಸತ್ಯಗಳು ಏನು ಎನ್ನುವುದರ ಹುಡುಕಾಟ ಮುಖ್ಯವಾಗಿ ಈ ಸಂಶೋಧನೆಯ ಉದ್ದೇಶವಾಗಿದೆ.

ಬಲಿಯನ್ನು ಹಲವಾರು ಸಂದರ್ಭಗಳಲ್ಲಿ ಕೊಡುತ್ತಾರೆ. ಇದಕ್ಕೆ ಕಾರಣವೇನು? ಹೀಗೆ ಬಲಿ ಕೊಡುವುದರಿಂದ ಜನಪದರ ಮನಸ್ಸಿನ ಮೇಲೆ ಯಾವ ರೀತಿಯಾದ ಪರಿಣಾಮವನ್ನು ಬೀರುತ್ತದೆ? ಬಲಿದಾನಗಳು ಜನಪದರ ಬದುಕಿನಲ್ಲಿ ಹೇಗೆ ಅನ್ವಯಗೊಂಡಿವೆ? ಅವು ಹೇಗೆ ಜನಪದರ ಕೌಟುಂಬಿಕ ಜೀವನದಿಂದ ಮೊದಲುಗೊಂಡು ಸಮುದಾಯ ಜೀವನದವರೆಗೆ ಹರಡಿ ಅವರ ಕ್ರಿಯಾ ನಂಬುಗೆಗಳಲ್ಲಿ ಬೇರು ಬಿಟ್ಟವೆ? ಹೇಗೆ ತಲಾತಲಾಂತರದಿಂದ ಜನಪದರ ಜೀವನವನ್ನು ರೂಪಿಸುವ ಅವರ ಸರ್ವಮುಖ ಕ್ರಿಯೆಗಳನ್ನು ನಿಯಂತ್ರಿಸುವ ಶಕ್ತಿಗಳಾಗಿವೆ? ಇತ್ಯಾದಿ ಸಂಗತಿಗಳ ಆಳವಾದ ಪರಿಶೀಲನೆ ಮಾಡುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

೧. ಪ್ರಾಣಿಗಳನ್ನು ಭಕ್ತಿಯಿಂದ ಬಲಿ ಮಾಡುವುದಿಲ್ಲ. ಅದರ ಹಿಂದೆ ಒಂದು ಭಯಂಕರವಾದ ಭಯವೇ ಜಾಸ್ತಿಯಾಗಿರುವುದನ್ನು ಗುರುತಿಸಬಹುದು. ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಮತ್ತು ತಮ್ಮ ಸಂಪತ್ತನ್ನು ರಕ್ಷಿಸಿಕೊಳ್ಳಲು ಬಲಿ ಕೊಡುವುದು ರೂಢಿಸಿಕೊಂಡರು.

೨. ಮನೆಯಲ್ಲಿ ತಾನು ಸಾಕಿದ ಪಶುಗಳಿಗೆ ರೋಗಗಳು ಬಾರದಿರಲಿ, ಘೋರ ರೋಗಗಳಿಂದ ಸಾಯಬಹುದು ಎಂಬ ಭಯದಿಂದ ಮುತುವರ್ಜಿ ವಹಿಸಿ ಪ್ರಾಣಿಬಲಿಯನ್ನು ಮಾಡುವುದು ಸಾಮಾನ್ಯವಾಗಿದೆ.

೩. ಮಾನವರು ತಮ್ಮ ವೈಯಕ್ತಿಕ ಸೌಭಾಗ್ಯಕ್ಕೆ ಮತ್ತು ರಕ್ಷಣೆಗೆ ಅಥವಾ ಇಡೀ ಗುಂಪಿಗೆ, ಪಂಗಡಕ್ಕೆ ಹಿತರಕ್ಷಣೆಯಾಗಲಿ ಎಂದು ಬಲಿ ಕೊಡುವುದು ಸಾಮಾನ್ಯ. ಸಾಮೂಹಿಕವಾಗಿ ಒಟ್ಟುಗೂಡಿ ತಮ್ಮ ಪಂಗಡದ ಜನರೆಲ್ಲಾ ಕೂಡಿ ಪ್ರಾಣಿ ಬಲಿ ಮಾಡುವುದು ಇದೆ. ಈ ವಿಧಾನದಿಂದ ಪಂಗಡಕ್ಕೆ ಬರಬಹುದಾದ ಎಲ್ಲಾ ಸಂಕಟಗಳೂ ವಿಮೆ ಮಾಡಿಸಿದಂತೆ ಆ ಕಂಟಕಗಳು ಬರಬಹುದು; ಬಾರದೇ ಇರಬಹುದು. ಪ್ರಾಣಿಬಲಿ ಮಾಡುವುದರಿಂದ ಮಾನಸಿಕ ನೆಮ್ಮದಿ ಶಾಂತಿ ಸಿಗುತ್ತದೆಂಬ ಭಾವನೆ ಇದೆ.

೪. ಪ್ರಾಣಿ ಬಲಿ ಸಮಯದಲ್ಲಿ ಹಳ್ಳಿಯ ಸಂರಕ್ಷಣೆಯನ್ನು ದೇವರು ಹೊತ್ತುಕೊಂಡಿರುತ್ತದೆ ಎಂಬ ಪ್ರಬಲವಾದ ನಂಬಿಕೆ ಇದೆ. ಬಲಿಯ ಉತ್ಸವದಲ್ಲಿ ಜಾತ್ರೆಗೆ ಸೇರಿದ ಎಲ್ಲಾ ಸಮುದಾಯಗಳು ಸೇರಬೇಕಾಗುತ್ತದೆ. ತಮ್ಮ ತಮ್ಮ ಮನೆಗಳಲ್ಲಿ ವಿಧವಿಧವಾದ ಭಕ್ಷ್ಯಗಳನ್ನು ತಯಾರಿಸಿಕೊಳ್ಳುತ್ತಾರೆ. ಪ್ರಾಣಿಬಲಿ ತೆಗೆದುಕೊಳ್ಳುವ ದೇವತೆಗೂ ಎಡೆ ಮಾಡುವುದು ಇದೆ. ಮಾಂಸಾಹಾರಿಗಳು ಬಲಿಪಶುವಿನ ಮಾಂಸವನ್ನು ಭಕ್ತಿಯಿಂದ ಸ್ವೀಕರಿಸುತ್ತಾರೆ. ಇಂತಹ ವಿವಿಧ ಭಾವನೆಗಳ ನೋಟಗಳನ್ನು ಕ್ಷೇತ್ರಕಾರ್ಯದ ಮೂಲಕ ನೋಡಬಹುದು.

೫. ಗ್ರಾಮಗಳಲ್ಲಿ ಯಾವುದಾದರೂ ಪ್ಲೇಗು, ಸಿಡುಬು, ಕಾಲರಾ, ಮುಂತಾದ ದೊಡ್ಡರೋಗಗಳು ಸಂಭವಿಸಿದಾಗ ಊರಿಗೇ ಊರೇ ನಾಶವಾಗುತ್ತಿತು. ಅಂತಹ ಸಮಯದಲ್ಲಿ ತಾವು ನಂಬಿಕೊಂಡು ಬಂದ ದೇವಾನುದೇವತೆಗಳಿಗೆ ತಾವು ಸಾಕುವ ಸಲುಹುವ ಪ್ರಾಣಿಗಳನ್ನು ಬಲಿಯಾಗಿ ನೀಡುತ್ತಾರೆ.

೬. ತಮ್ಮ ತಮ್ಮ ಮನೆಗಳಲ್ಲಿ ಯಾರಿಗಾದರೂ ಭಯಂಕರವಾಗಿ ರೋಗ ಬಂದರೇ ಸಾಯುವ ಸ್ಥಿತಿಯಲ್ಲಿರುವಾಗ ತಾವು ನಂಬಿಕೊಂಡು ಬಂದ ಯಾವುದಾದರೂ ದೇವತೆಯ ಹೆಸರಿನಲ್ಲಿ ಮುಡುಪು ಕಟ್ಟುವ ಪದ್ಧತಿ ಇದೆ. ಈ ಮುಡುಪು ಕಟ್ಟುವ ಪದ್ಧತಿಯಿಂದ ಮನೆಯಲ್ಲಿ ಬಂದ ರೋಗ ಉಪಶಮನವಾದರೆ ಆ ದೇವತೆಗೆ ಹರಕೆಯನ್ನು ಹೇಳಿಕೊಳ್ಳುತ್ತಾರೆ. ವಾರ್ಷಿಕವಾಗಿ ನಡೆಯುವ ಜಾತ್ರಾ ಸಂದರ್ಭದಲ್ಲಿ ತಾವು ಹೇಳಿಕೊಂಡ ಹರಕೆಯಾದ ಬಲಿಯನ್ನು ದೇವತೆಯ ಎದುರಲ್ಲಿ ಅರ್ಪಿಸುತ್ತಾರೆ. ಈ ಉದ್ದೇಶದಿಂದಲೇ ಪ್ರಾಣಿಬಲಿಗಳು ನಡೆಯುತ್ತವೆ. ಅಂತಹ ಸಮಯದಲ್ಲಿ ಪ್ರಾಣಾಪಾಯದಿಂದ ಪಾರಾದ ವ್ಯಕ್ತಿ, ವ್ಯಕ್ತಿಯ ಆಪ್ತರು ಸಂತೋಷದಿಂದ ಪ್ರಾಣಿ ಬಲಿಕೊಡುವುದನ್ನು ನೋಡುತ್ತಾರೆ. ಈ ಪ್ರಾಣಿಬಲಿ ಕೊಡುವ ಕ್ರಿಯೆಯಲ್ಲಿ ತಮ್ಮ ಕಾರ್ಯ ಮುಗಿದಿರುತ್ತದೆ ಎಂದು ಭಾವಿಸುತ್ತಾರೆ.

೭. ಸಾಮಾನ್ಯವಾಗಿ ಜನಪದರಿಗೆ ಲೈಂಗಿಕ ರೋಗಗಳು ಬರುವುದು ಸಹಜ. ಸ್ತ್ರೀ ಮತ್ತು ಪುರುಷರು ಲೈಂಗಿಕ ಕ್ರಿಯೆ ಮಾಡುವಾಗ ತಮಗೆ ತಿಳಿಯದೇ ಇರುವ ರೋಗಗಳು ಸೃಷ್ಟಿಯಾಗುತ್ತವೆ. ಸಾಮಾನ್ಯವಾಗಿ ಕೆಲವರು ಹಲವು ಸ್ತ್ರೀಯರ ಹತ್ತಿರ ಲೈಂಗಿಕವಾಗಿ ಪಾಲ್ಗೊಳ್ಳುತ್ತಾರೆ. ಅಂತಹ ಸಂದರ್ಭದಲ್ಲಿ ಬಂದ ರೋಗಗಳಿಗೆ ದೇವರೇ ಕಾರಣ ಎಂದು

ತಿಳಿದು ದೇವರಿಗೆ ಹರಕೆ ಹೇಳಿಕೊಳ್ಳುತ್ತಾರೆ. ಹಲವರ ಜೊತೆಯಲ್ಲಿ ಸಂಭೋಗ ಇಟ್ಟುಕೊಂಡಾಗ ಬಂದ ರೋಗಗಳು ಊರಿಂದ ಊರಿಗೆ ತಿಳಿಯಬಹುದು ಎಂಬ ಭಾವನೆಯಿಂದ ಅಥವಾ ಮಾನ ಮರ್ಯಾದೆ ಹೋಗಬಹುದೆಂಬ ಭಯದಿಂದ ತಮ್ಮ ಗ್ರಾಮದೇವತೆಗೆ ಹರಕೆಯಾಗಿ ಪ್ರಾಣಿಬಲಿಯನ್ನು ಮಾಡುತ್ತಾರೆ. ವಾರ್ಷಿಕವಾಗಿ ನಡೆಯುವ ಗ್ರಾಮದೇವತೆಯ ಜಾತ್ರೆಯಲ್ಲಿ ಪ್ರಾಣಿಬಲಿ ಕೊಟ್ಟು ಅದರಿಂದ ಪ್ರಸಾದ ಸೇವಿಸುತ್ತಾರೆ. ಯಮನೂರಿನಲ್ಲಿ ಯಮನೂರಪ್ಪ ಎಂಬ ದೇವತೆಗೆ ಈ ಹರಕೆಯನ್ನು ಮಾಡುತ್ತಾರೆ. ಲೈಂಗಿಕ ರೋಗಗಳನ್ನು ಪಡೆದ ಹಲವರು ಯಮನೂರಿಗೆ ಬಂದು ಕುರಿಗಳನ್ನು ಬಲಿ ಕೊಟ್ಟು ಪ್ರಸಾದವಾಗಿ ಸ್ವೀಕರಿಸುತ್ತಾರೆ. ಮಾಂಸಾಹಾರವನ್ನು ಮಾಡಿ ತಿನ್ನುವ ಪದ್ಧತಿ ಇದೆ.

೮. ತಮ್ಮ ತ್ಮಮ ಮನೆಯಲ್ಲಿ ಯಾರಾದರೂ ತೀರಿಕೊಂಡರೆ ಮರಣ ಹೊಂದಿದ ವ್ಯಕ್ತಿಗೆ ಶಾಂತಿ ದೊರೆಯಲಿ ಎಂಬ ಭಾವನೆಯಿಂದ ತಿಥಿ ಸಮಯದಲ್ಲಿ ಪ್ರಾಣಿಬಲಿಯನ್ನು ಮಾಡಿ ಅಮ್ಮ, ಅಪ್ಪ, ಅಕ್ಕ, ಅಣ್ಣ, ತಮ್ಮ, ತಂಗಿ, ಸಂಬಂಧಿಕರು, ಎಲ್ಲರೂ ಸೇರಿ ಮಾಂಸದ ಊಟವನ್ನು ಮಾಡುವ ಪರಂಪರೆ ಇದೆ.

೯. ದೊಡ್ಡ ದೊಡ್ಡ ಅರಮನೆಗಳನ್ನು ಕಟ್ಟಬೇಕಾದರೆ ಮುಖ್ಯ ಬಾಗಿಲಿನ ಮಹಾದ್ವಾರಗಳನ್ನು ಕೂಡಿಸಲು ಪ್ರಾಣಿಬಲಿಯನ್ನು ಕೊಡುತ್ತಿದ್ದರು. ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಬೇಕಾದರೂ ಪ್ರಾಣಿಬಲಿ ಕೊಟ್ಟ ಪ್ರಸಂಗಗಳು ಇವೆ. ಕೆರೆಗಳಿಗೆ ಪ್ರಾಣಿಬಲಿ ಕೊಟ್ಟ ನಂತರ ಕೆರೆಯಲ್ಲಿ ನೀರು ಉಕ್ಕಿ ಬಂದಿರುವ ಸಂದರ್ಭಗಳು ಇವೆ. ದೊಡ್ಡ ದೊಡ್ಡ ಕೆರೆಗಳಿಗೆ ಗರ್ಭಿಣಿಯರನ್ನು, ಮುತ್ತೈದೆಯರನ್ನು ಬಲಿ ಕೊಟ್ಟ ಪ್ರಸಂಗಗಳು ಇವೆ.

೧೦. ಬರಗಾಲ ಇದ್ದಾಗ, ಊರ ಹೊರಗೆ ಇರುವ ಪಾಳು ಬಿದ್ದ ದೇವಿ ಗುಡಿಯ ಹತ್ತಿರದದಲ್ಲಿ ಹರಕೆ ಹೊತ್ತು ಊರು ಸಮಸ್ತ ಜನರು ಪ್ರಾಣಿ ಕೊಟ್ಟು ಬಂದಾಗ ಮಳೆ ಬಂದಿರುವ ನಿದರ್ಶನಗಳು ಇವೆ ಎಂದು ಮಾಹಿತಿದಾರರು ತಿಳಿಸಿದ್ದಾರೆ.

ಪ್ರಾಗೈತಿಹಾಸಿಕ ಕಾಲದ ಮೂಲಕ ಗಮನಿಸುವುದಾದರೆ, ಅಡವಿಯಲ್ಲಿ ಅಲೆಮಾರಿ ಜೀವನ ನಡೆಸುತ್ತಿದ್ದ ಮನುಷ್ಯನಿಗೆ ಒಂದೆಡೆ ನೆಲೆಯಾಗಬೇಕೆಂಬ ಆಸೆ ಮೂಡಿ ಅಡವಿಯಲ್ಲಿ ಸಿಗುವ ಕೋಲು, ರೆಂಬೆ, ಮಣ್ಣು, ಕಲ್ಲು, ಮರದ ದಿಮ್ಮೆಗಳು ಮುಂತಾದ ಕಚ್ಚಾ ಸಾಮಗ್ರಿಗಳಿಂದ ವಾಸ ಮಾಡಲು ಮನೆಗಳನ್ನು ನಿರ್ಮಾಣ ಮಾಡಿರಬೇಕು. ಈಗೆ ರಚನೆಯಾದ ಮನೆಗಳಲ್ಲಿ ವಿಶೇಷವಾಗಿ ಬಾಗಿಲು, ಕಿಟಕಿ, ಚಪ್ಪರದಾಕಾರಗಳು ಮಾಡಿದ ರೀತಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡತೊಡಗಿದ. ಮನುಷ್ಯ ಚಿಕ್ಕ ಚಿಕ್ಕ ಗುಂಪುಗಳಾಗಿ, ವಾಸಮಾಡುತ್ತಿದ್ದ ಸಂದರ್ಭದಲ್ಲಿ ಆ ಗುಂಪುಗಳಲ್ಲಿ ಜನಸಂಖ್ಯೆ ಹೆಚ್ಚಾಗತೊಡಗಿದಾಗ ನೂರಾರು ಊರುಗಳಾದವು. ಅಂತಹ ಊರುಗಳು(ಗ್ರಾಮ) ಈಗಲೂ ಅಡವಿಯಲ್ಲಿ ಬುಡಕಟ್ಟು ಸಮುದಾಯಗಳು ವಾಸಿಸುತ್ತಿರುವುದನ್ನು ಕಾಣಬಹುದು. ಹೀಗೆ ಬೆಳೆದ ತಮ್ಮ ಲೌಕಿಕ ಸಂಪತ್ತನ್ನು ರಕ್ಷಣೆ

ಮಾಡುವುದಕ್ಕಾಗಿ, ನೆಲೆನಿಂತ ಊರುಗಳು, ಪ್ರದೇಶಗಳು, ಸಾಕು ಪ್ರಾಣಿಗಳ ರಕ್ಷಣೆಗಾಗಿ ತಡೆಗೋಡೆ ಮೂಲಕ ಬೇಲಿಯಾಕಾರಗಳನ್ನು ನಿರ್ಮಾಣ ಮಾಡತೊಡಗಿದ.

ಈ ಹಿನ್ನೆಲೆಯಲ್ಲಿ ಊರು–ಗ್ರಾಮ–ಪಟ್ಟಣದ ರಕ್ಷಣೆಗಾಗಿ ಕೋಟೆ ಕೊತ್ತಲುಗಳನ್ನು ಕಟ್ಟಿಕೊಳ್ಳುವ ಕಲೆಯನ್ನು ಕಲಿತು ನಂತರ ಕಾಲಕ್ರಮೇಣ ಕೋಟೆಗಳ ನಿರ್ಮಾಣಕ್ಕೆ ಬುನಾದಿಯಾಗಿರಬೇಕು. ಯಾವತ್ತು ಕೋಟೆ ಕೊತ್ತಲುಗಳು ನಿರ್ಮಾಣವಾದವೋ ಆಗ ಪ್ರಕೃತಿಯ ವೈಚಿತ್ರ್ಯಗಳಿಗೆ ಮಾರುಹೋಗಿ ಪ್ರಕೃತಿಯಲ್ಲಿ ನಿರ್ಮಾಣವಾಗುತ್ತಿದ ಪ್ರಳಯದಂತಹ ಭಯಂಕರ ಅಪಾಯಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ಅಗೋಚರ ಶಕ್ತಿಯ ಕಲ್ಪನೆ ಮೂಡಿರಬೇಕು. ಅನಾದಿಕಾಲದಲ್ಲಿ ಗಾಳಿ, ಬೆಂಕಿಗೆ ಹೆದರಿದ ಮನುಷ್ಯ ನಿಗೂಡವಾದ ಶಕ್ತಿ ಇದೆ ಎಂದು ಅರಿತುಕೊಂಡು ಭಯಭ್ರಾಂತನಾಗಿ ಆ ಶಕ್ತಿಗೆ ಪೂಜೆ ಮಾಡಲು ಮುಂದಾದನು. “ಮಾನವ ಪ್ರಕೃತಿಯ ಶಿಶು, ಸುತ್ತಲೂ ಪ್ರಕೃತಿಯ ಮಾನವನ ಜೀವನದಲ್ಲಿ ಮಹತ್ತರವಾದ ಪಾತ್ರವಹಿಸುತ್ತಿರುವುದನ್ನು ತಿಳಿದ ಮೇಲೆ ಅವನಿಗೆ ಅದರ ಬಗ್ಗೆ ಗೌರವ, ಭಯ, ಭಕ್ತಿಗಳು ಮೂಡಿದವು. ಈ ದುಷ್ಪಮಯ ಪ್ರಕೃತಿಯ ಎಲ್ಲಾ ವಸ್ತುಗಳೂ ಅವನಿಗೆ ಪೂಜಾರ್ಹವಾದವು. ಈ ಕಾರಣದಿಂದಲೇ ಪ್ರಕೃತಿಯಲ್ಲಿನ ಗಿಡ, ಮರ, ನದಿ, ನೀರು, ಬೆಂಕಿ, ಮೊದಲಾದವು ಅವನಿಗೆ ಪರಮ ಪೂಜನೀಯವಾದವು ಮತ್ತು ಪೂಜಾಸ್ಥಾನಗಳು ಆದವು. ಇದರ ಆಗುಹೋಗುಗಳಿಗೆ ಕಾರಣವಾಗಿರುವ ಯಾವುದೋ ಒಂದು ಅನಂತ ಚೇತನ ಶಕ್ತಿ ಎಂಬ ಅರಿವು ಉಂಟಾದಾಗ ಆ ಶಕ್ತಿಗೆ ರೂಪ ಕೊಡಲು ತೊಡಗಿದ. ಹೀಗೆ ನೀಡಿದ ಆ ಒಂದು ರೂಪಕ್ಕೆ ಅದರ ರಕ್ಷಣಾಮಯವಾಗಿ, ಪೂಜಾಕಾರ್ಯಕ್ಕಾಗಿ ಒಂದು ಆಲಯವನ್ನು ನಿರ್ಮಿಸಲು ಆರಂಭಿಸಿದ.

ಮೂರ್ತಿಪೂಜೆಯ ಉಗಮವನ್ನು ಸಿಂಧೂ ಸಂಸ್ಕೃತಿಯಿಂದ ತಿಳಿಯಬಹುದು. ಸಿಂಧೂ ನಾಗರೀಕತೆ ಕತೆಗಳು ಸುಮಾರು ೫೦೦೦ ವರ್ಷಗಳ ಹಿಂದೆಯೇ ತಿಳಿದುಬಂದಿದೆ. ಸಿಂಧೂ ಕೊಳದ ಉತ್ಖನದಲ್ಲಿ ಹಲವಾರು ಮುದ್ರೆಗಳು, ಪ್ರತಿಮೆಗಳು ದೊರೆತಿವೆ ಅವುಗಳಲ್ಲಿ ಒಂದು– ಮೂರು ಮುಖಗಳುಳ್ಳ ತಲೆಯ ಮೇಲೆ ಕಿರೀಟವನ್ನು ಧರಿಸಿ ಯೋಗಿಯ ಭಂಗಿಯಲ್ಲಿ ಕಾಲುಗಳನ್ನು ಮಡಿಚಿಕೊಂಡು ಒಂದು ಪೀಠದ ಮೇಲೆ ಕುಳಿತಿರುವ ತ್ರಿಶೂಲವನ್ನು ಇರಿಸಿಕೊಂಡಿರುವ ಮುದ್ರೆಯು ದೊರೆತಿದೆ. ಈ ಪ್ರತಿಮೆಯನ್ನು ಆನೆ, ಹುಲಿ, ಖಡ್ಗ, ಎಮ್ಮೆ, ಕೋಣ, ಮೊದಲಾದ ಪ್ರಾಣಿಗಳು ಸುತ್ತುವರಿದಿರುವುದು, ಅದರ ಕಾಲಿನ ಬುಡದಲ್ಲಿ ಗೂಳಿ, ಜಿಂಕೆ ಚಿತ್ರಗಳಿದ್ದು, ಇದರಲ್ಲಿ ಪಶುಪತಿ ಅಥವಾ ಶಿವನ ಹೋಲಿಕೆಗಳಿರುವುದರಿಂದ ಶಿವ ಎಂದು ಕರೆಯಲಾಯಿತು. ಹೀಗೆ ಶಿವನನ್ನು ಮೂರ್ತಿರೂಪದಲ್ಲಿ ಆರಾಧಿಸುವ ಕ್ರಮ ಪ್ರಚಲಿತವಾಗಿರುವುದು ಎಂಬುದಾಗಿ ತಿಳಿದುಬರುತ್ತದೆ. ಶಿಲೆಯಿಂದ ಮಾಡಿದ ಲಿಂಗಗಳು ದೊರೆತಿರುವುದರಿಂದಲೂ ಲಿಂಗಾಧಾರಣೆ ಅಥವಾ ಲಿಂಗಪೂಜೆಯು ಪ್ರಚಾರವಾಗಿತ್ತು ಎಂದು

ಕಂಡುಬರುತ್ತದೆ. ಅರ್ಧಚಂದ್ರಾಕೃತಿಯ ತಲೆಯಿಂದ ಅಲಂಕೃತವಾಗಿದ್ದು ಆವೆ ಮಣ್ಣಿನ ಸ್ತ್ರೀ ಮೂರ್ತಿಗಳು ಸಿಂಧೂ ನಾಗರಿಕತೆಯ ಪ್ರದೇಶಗಳಲ್ಲಿ ದೊರೆತಿವೆ. ಅವು 'ಮಾತೃ' ಅಥವಾ 'ಶಕ್ತಿ' ದೇವತೆಯನ್ನು ಪ್ರತಿನಿಧಿಸುತ್ತವೆ ಎನ್ನಲಾಗಿದೆ. ಸಿಂಧೂ ಕಣಿವೆಯಲ್ಲಿ ಮಾತೃದೇವತೆಯ ಮೂರ್ತಿಪೂಜೆಯು ಆಚರಣೆಯಲ್ಲಿತ್ತು ಎಂದು ತಿಳಿದುಬರುತ್ತದೆ".[೧೫] ಪ್ರಕೃತಿಯನ್ನು ಪರಮ ಪೂಜನೀಯವಾದ ಮನೋಧರ್ಮದಿಂದ ಭಾವಿಸಿ ಮಾನವ ಅದಕ್ಕೆ ಮಾರುಹೋಗಿ ಪೂಜೆಗಳನ್ನು ಮಾಡತೊಡಗಿದ ಈ ಹಿನ್ನೆಲೆಯಲ್ಲಿ ಪ್ರಕೃತಿ ಆರಾಧನೆ ಪ್ರಾರಂಭವಾಯಿತು.

ಮಾತೃಸ್ವರೂಪದಲ್ಲಿ ಮೂರ್ತಿಗಳು ದೊರೆತ ನಂತರದಲ್ಲಿ ಮೂರ್ತಿಗಳಿಗೆ ಪೂಜಿಸುವ ವಾಡಿಕೆ ಪ್ರಾರಂಭವಾದ ಕಾಲ ಎಂದು ಗುರುತಿಸಬಹುದು. ಮೇಲಿನ ಉಲ್ಲೇಖಗಳಲ್ಲಿ ಮೂರ್ತಿಗಳಲ್ಲಿ ರುವ ಶಿಲ್ಪಗಳಲ್ಲಿ ಮೃಗ, ಎಮ್ಮೆಯ ಕಲ್ಪನೆ ಇರುವುದರಿಂದ ತಾನು ನಂಬಿಕೊಂಡು ಬಂದಿರುವ ದೇವತೆಗೆ ಅವುಗಳನ್ನು ಅರ್ಪಿಸುವ ಪರಂಪರೆ ನಿರ್ಮಾಣವಾಗಿ ರಬೇಕು ಎಂದು ಗುರುತಿಸಲು ಒಂದು ಅವಕಾಶ ಇದೆ. ಈ ಅರ್ಪಿಸುವ ಪರಂಪರೆಯೇ ಪ್ರಾಣಿಬಲಿದಾನವಾಗಿ ಮಾರ್ಪಾಟು ಹೊಂದಿರಬಹುದು.

ಸಂಶೋಧಕರಾದ ಎಂ.ಎಂ.ಕಲಬುರ್ಗಿಯವರು "ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು"(೨೦೧೧) ಎಂಬ ಕೃತಿಯಲ್ಲಿ "ಮಾನವ ಸಂಸ್ಕೃತಿಯ ವಿಕಾಸವನ್ನು ವಿದ್ವಾಂಸರು ಶಿಲಾಯುಗ, ಲೋಹಯುಗ, ಎಂದು ಮುಂತಾಗಿ ಅಭ್ಯಸಿಸಿರುವುದನ್ನು ಗಮನಿಸಿದರೆ ಮನುಷ್ಯನ ಜೀವನದಲ್ಲಿ ಶಿಲೆ ವಹಿಸಿದ್ದ, ವಹಿಸಲ್ಪಟ್ಟಿರುವ ಪಾತ್ರ ಸ್ಪಷ್ಟವಾಗುತ್ತದೆ. ಮೊದಮೊದಲು ಬಿಸಿಲು, ಮಳೆಯ ರಕ್ಷಣೆಗಾಗಿ, ಬರಬರುತ್ತಾ ಬದುಕಿನ ಮೌಲ್ಯ ಪ್ರಸಾರಕ್ಕಾಗಿ ಬಳಕೆಗೊಂಡ ವಸ್ತು ಈ ಶಿಲೆ. ಕೊರೆದ ಕಲೆಯಾಗಿಸಿದ ಬರೆದು ಕೃತಿಯಾಗಿಸಿದ ಈ ಮಾಧ್ಯಮವನ್ನು ಕ್ರಮವಾಗಿ ಶಿಲ್ಪ ಮತ್ತು ಶಾಸನವೆಂದು ವರ್ಗೀಕರಿಸಬಹುದು" ಎಂದು ಪೀಠಿಕೆಯಲ್ಲಿ ವಿಶ್ಲೇಷಿಸಿದ್ದಾರೆ.[೧೬] ಗುಹಾಂತರ ಪ್ರದೇಶದಲ್ಲಿ ವಾಸಮಾಡುವ ಮಾನವನಿಗೆ ಕಲ್ಲು ದೈವತ್ವವಾಗಿ ದ್ದುದನ್ನು ಗುರುತಿಸಬಹುದು.

ಆರಾಧನಾ ಪರಂಪರೆಯು ಹೀಗೆ ಪ್ರಾರಂಭವಾಗಿರಬೇಕು. ಆರಾಧನಾ ಪರಂಪರೆಯು ಗ್ರಾಮದೇವತೆಗಳ ಅಧ್ಯಯನ ಒಂದು ಸಾಂಸ್ಕೃತಿಕ ಕೋಶ ಎಂಬಲ್ಲಿ ವಿವರಿಸುತ್ತಾರೆ. "ಮನುಷ್ಯನಿಗೆ ಸ್ವಲ್ಪ ಬುದ್ಧಿ ಬಂದ ನಂತರ ಬಹುಮುಖ್ಯವಾಗಿ ಜರುಗಿದ ಪ್ರಕೃತಿಯ ಭೀಕರ ದೃಶ್ಯಗಳು ಅಂದರೆ ಇದ್ದಕ್ಕಿದ್ದಂತೆ ಮೋಡ ಮುಸುಕಿ ಮಳೆ ಸುರಿದದ್ದು, ಬಿರುಗಾಳಿ ಹಾಗೂ ಪ್ರವಾಹದ ಆರ್ಭಟ, ಸಿಡಿಲಿನ ಹೊಡೆತದಿಂದ ಸಂಭವಿಸುವ ಸಾವು, ಭೂಕಂಪ, ಅಗ್ನಿಪರ್ವತ ದಿಂದ ಉಗುಳಿದ ಲಾವಾರಸ, ಅದರಿಂದ ಉಂಟಾದ ಹಾನಿ, ಧಗಧಗನೆ ಉರಿಯುತ್ತಾ ಕಾಡನ್ನೇ ಭಸ್ಮಗೊಳಿಸುವ ಕಾಡ್ಗಿಚ್ಚು, ಬಾಯಿ ಬಡಿಸುವಂಥ ರೋಗರುಜಿನಗಳು, ಇವು

ಮನುಷ್ಯನನ್ನು ಭಯಗ್ರಸ್ತನನ್ನಾಗಿ ಮಾಡಿರುವುದು ಸಹಜ ಎಂದೇ ಭಾವಿಸಬೇಕು. ಪ್ರಕೃತಿಯ ಈ ಘೋರ ಪರಿಣಾಮಗಳು ಮುಖಾಮುಖಿಯಾಗಿ ನಿಂತು ಮನುಷ್ಯ ಚಿಂತನ ಸ್ವಾಸ್ಥವನ್ನು ಕೆಣಕಿ ಮಾನಸಿಕವಾಗಿ ತಲ್ಲಣಗೊಳುವಂತೆ ಮಾಡಿವೆ. ಪ್ರಾಣಕ್ಕೆ ಅಪಾಯ ತಂದೊಡ್ಡುವ ಈ ಶಕ್ತಿ ಯಾವುದು ಎಂದು ಚರ್ಚೆ ಮಾಡುತ್ತಾರೆ. ಅಂದರೆ ಪ್ರಾರಂಭದ ಹಂತದಲ್ಲಿ ಮನುಷ್ಯನಿಗೆ ತನ್ನ ಬದುಕಿನ ಜೊತೆಗೆ ಯಾವುದೋ ಒಂದು ಅಗೋಚರ ಕಲ್ಪನೆಯ ಜೊತೆಗೆ ಸೆಣಸಾಡುವುದು ಅನಿವಾರ್ಯವಾಗಿರಬೇಕೆಂದು ಅರಿತುಕೊಂಡ.

ಪರಂಪರಾಗತವಾಗಿ ಬಂದ ಶಕ್ತಿಯ ಕಲ್ಪನೆಗೆ ಮಾರುಹೋದ ಮನುಷ್ಯ ತಿಳುವಳಿಕೆ ಹೆಚ್ಚಾದಂತೆ ಅವನ ಶ್ರದ್ಧಾಭಕ್ತಿಯೂ ಹೆಚ್ಚಾಗಿರುವುದು ಕಂಡುಬರುತ್ತದೆ. "ಪರಂಪರೆಯಿದ ಬಂದ ಧಾರ್ಮಿಕ ಶ್ರದ್ಧೆಯೇ ಹಳ್ಳಿಗರ ಬಾಳಿನ ಆಧಾರ. ಅದೇ ಅವರ ಜೀವನದ ಊರುಗೋಲು. ಜೀವನದಲ್ಲಿ ಬರುವ ಕಷ್ಟ ಕಾರ್ಪಣ್ಯ-ಸುಖ-ದುಃಖಗಳಿಗೂ, ಒಳಿತು-ಕೆಡುಕುಗಳಿಗೂ ಮೂಲಭೂತವಾದ ಕಾರಣಶಕ್ತಿಯೊಂದಿದೆ ಅದರ ಇಚ್ಚೆಯಂತೆ ಇವೆಲ್ಲಾ ನಡೆಯುತ್ತದೆ. ಆ ಶಕ್ತಿಯ ವಿರುದ್ಧ ಹೋಗುವುದು ಸಾಧ್ಯವಿಲ್ಲ ಎಂಬುದು ಹಳ್ಳಿಗರ ಜೀವನದಲ್ಲಿ ರಕ್ತಗತವಾಗಿ ಬಂದಿರುವ ನಂಬಿಕೆ. ದೇವರನ್ನು ಅನೇಕ ರೂಪಗಳಲ್ಲಿ ಕಂಡು ಸತತ ದೇವರುಗಳ ಸಾನಿಧ್ಯವನ್ನು ಕಲ್ಪಿಸಿಕೊಳ್ಳುವ ಶಕ್ತಿ ಹಳ್ಳಿಗರಲ್ಲಿ ಬಹುದೇವತೋಪಾಸನೆ ಮುಖ್ಯವಾಗಿ ಗೋಚರವಾಗುತ್ತದೆ. ಅನೇಕ ವೇಳೆ ಪ್ರಕೃತಿಯ ಒಂದೊಂದು ವಸ್ತುವೂ ಅವರಿಗೆ ದೈವಶಕ್ತಿಯ ಸಂಕೇತ. ನಿತ್ಯಬಳಸುವ ಉದ್ಯೋಗದ ಉಪಕರಣಗಳಲ್ಲಿಯೂ ದೈವತ್ವವನ್ನು ಕಾಣುವ ಭಾವುಕ ಶಕ್ತಿ ಆಗಾಗ ಮನುಷ್ಯನನ್ನು ಪೀಡಿಸುವ, ರೋಗರುಜಿನಾದಿಗಳನ್ನು ದೈವತ್ವವನ್ನು ಆರೋಪಿಸಿ ಅವುಗಳ ಪೂಜೆಯನ್ನು ಕೈಗೊಳ್ಳುವುದನ್ನು ಅದರ ದೈವನಿಷ್ಠೆ ಬೆಳೆದರೆ ಈ ಮನೋಧರ್ಮ ಬರಬರುತ್ತಾ ಒಂದು ದೊಡ್ಡ ದೌರ್ಬಲ್ಯವೂ ಆಗಿ ಪರಿಣಮಿಸಿತು ಎಂದು ಹೇಳಬಹುದು."[೧೭] ಭಯಭೀತನಾಗಿ ಶಕ್ತಿಗೆ ತನ್ನನ್ನೇ ತಾನು ಅರ್ಪಿಸಿಕೊಳ್ಳುವ ಮತ್ತು ಸಮಾಧಾನಪಡಿಸುಕೊಳ್ಳುವ ಪರಂಪರೆಯನ್ನು ಸೃಷ್ಟಿ ಮಾಡಿಕೊಂಡಿರಬೇಕು. ಕಾಡಿನಲ್ಲಿ ದೊರೆತ ಮೊಂಡು ಮೊಂಡಾಗಿರುವ ಮರದ ದಿಮ್ಮಿಗಳನ್ನು, ವಿಶಿಷ್ಟವಾಗಿ ಹೆಣೆದುಕೊಂಡಿರುವ ಬೇರುಗಳನ್ನು, ಗುಂಡು ಗುಂಡಾಕಾರವಾದ ಕಲ್ಲುಗಳನ್ನು, ಚೂಪಾದ ಕಲ್ಲುಗಳನ್ನು ಪೂಜಿಸುವ ವಾಡಿಕೆಯನ್ನು ರೂಢಿಸಿಕೊಂಡಿರಬೇಕು. "ಸಾಮಾಜಿಕ ಸಾಂಸ್ಕೃತಿಕ ಪ್ರಕ್ರಿಯೆಗೆ ಮನುಷ್ಯನ ಬುದ್ಧಿಶಕ್ತಿಯೇ ಮೂಲ, ಪ್ರಕೃತಿಯ ಸೃಷ್ಟಿ ನೈಸರ್ಗಿಕವಾದುದು. ಮನುಷ್ಯ ಸೃಷ್ಟಿಯ ಕೃತಕಗಳೆಲ್ಲವೂ ಸಮಾಜದಲ್ಲಿ ಕಂಡುಬರುವ ಸಾಂಸ್ಕೃತಿಕ ಅಂಗಾಂಗಗಳು. ಪ್ರಪಂಚದ ಜೀವರಾಶಿಗಳೆಲ್ಲವೂ ಮನುಷ್ಯನನ್ನು ಹೊರತುಪಡಿಸಿದರೆ ಯಾವುದೇ ಪ್ರಾಣಿಗೆ ಬುದ್ಧಿ ಮತ್ತು ವಾಕ್‌ಶಕ್ತಿಗಳಿಲ್ಲ. ಮನುಷ್ಯನ ತಿಳುವಳಿಕೆ ಅಗಾಧ ಹಾಗೂ ಆಗಮ್ಯ. ಭೂಮಂಡಲದಿಂದ ಹಿಡಿದು ಅಂತರಿಕ್ಷದವರೆಗೆ ಬೆಳೆದ ಸಮಾಜಕ್ಕೂ

ಅತ್ಯಂತ ಅದ್ಭುತವಾದ ಕೊಡುಗೆಯನ್ನು ನೀಡಿದ್ದಾನೆ" ಎಂದು ಚರ್ಚೆ ಮಾಡುತ್ತಾರೆ.[೧೮] ತಾನು ನಂಬಿಕೊಂಡು ಬಂದ ದೈವಗಳಿಗೆ ಮತ್ತು ಸುತ್ತಮುತ್ತಲಿನ ಪರಿಸರದಲ್ಲಿ ನಡೆಯುವ ಅಗೋಚರವಾದ ಶಕ್ತಿಗೆ ಯಾವುದಾದರೂ ಒಂದು ವಸ್ತುವನ್ನು ಅರ್ಪಿಸುವ ರೀತಿಯನ್ನು ಕಂಡುಕೊಂಡ.

ಆ ಶಕ್ತಿಗೆ ತನಗೆ ದೊರೆತ ವಸ್ತುಗಳನ್ನು ಸಮರ್ಪಿಸಿ, ಶಾಂತಿಪಡಿಸುವುದು ಕೈಗೊಂಡನು. ಈ ಶಾಂತಿ ಮಾಡಲು ಹೊರಟ ಕ್ರಿಯೆಯಲ್ಲಿ ಮೊದಲಿಗೆ ಅಡವಿಯಲ್ಲಿ ದೊರೆತ ಹೂವು, ಹಣ್ಣು, ಕಾಯಿಗಳು, ಎಲೆ ಮುಂತಾದವುಗಳನ್ನು ಸಮರ್ಪಿಸುವ ಪದ್ಧತಿಯನ್ನು ರೂಢಿಸಿಕೊಂಡು ತದನಂತರ ತಾನು ಸಾಕುವ ಪ್ರಾಣಿಗಳಾದ ಕೋಳಿ, ಕುರಿ, ಆಡು, ಮೇಕೆ, ಹಂದಿ, ಕೋಣ ಬಲಿ ಕೊಟ್ಟು ಅರ್ಪಿಸುವ ಪದ್ಧತಿಯನ್ನು ರೂಡಿಗೆ ತಂದಿರಬೇಕು. ಕಾಲಕ್ರಮೇಣ ಈ ಪ್ರಾಣಿಬಲಿಯನ್ನೇ ಮುಂದುವರಿಸಿಕೊಂಡು ಬಂದಿರುವುದು ಕಾಣುತ್ತೇವೆ. ದೈವೀಭಕ್ತನಾಗಿ ಭಯಭಕ್ತಿಯಿಂದ ಪ್ರಾಣಿಬಲಿ ಕೊಡುವ ಆಚರಣಾ ಪರಂಪರೆ ನಿರ್ಮಾಣವಾದ ನಂತರದಲ್ಲಿ ಮಾನವನ ಮಾನಸಿಕ ಪದ್ಧತಿಯೂ ಬದಲಾಯಿತು. ತನಗೆ ಏನಾದರೂ ಘೋರ ಕಾಯಿಲೆ, ಸಂತಾನ ಪ್ರಾಪ್ತಿ ಇಲ್ಲದೇ ಇದ್ದಾಗ ನರಬಲಿಯನ್ನೇ ಕೊಡುತ್ತೇನೆಂದು ಹರಕೆಗಳನ್ನು ಹೊತ್ತುಕೊಳ್ಳುತ್ತಿದ್ದನು.

ಜನ್ನನ ಯಶೋಧರ ಚರಿತೆಯಲ್ಲಿ ಮಹಾ ಮಾರಿಯಮ್ಮನಿಗೆ ಘೋರವಾಗಿ, ಭಯಂಕರವಾಗಿ ಪ್ರಾಣಿಬಲಿಗಳನ್ನು ಮತ್ತು ನರಬಲಿಗಳನ್ನು ಕೊಡುವ ಸನ್ನಿವೇಶಗಳು ಬರುತ್ತವೆ. ಪ್ರಾಣಿಬಲಿಗೂ ಮತ್ತು ಮನುಷ್ಯನಿಗೂ ಇರುವ ನಿಕಟ ಸಂಬಂಧಗಳನ್ನು ಗುರುತಿಸುವ ಮತ್ತು ಗಮನಿಸುವ ಉದ್ದೇಶವನ್ನು ಪ್ರಸ್ತುತ ಸಂಶೋಧನೆ ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

೧.೩. ಅಧ್ಯಯನ ವ್ಯಾಪ್ತಿ

ಪ್ರಸ್ತುತ ಈ ಅಧ್ಯಯನವನ್ನು ಬಳ್ಳಾರಿ ಜಿಲ್ಲೆಗೆ ಸೀಮಿತಗೊಳಿಸಿಕೊಂಡು ನಡೆಸಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿರುವ ಗ್ರಾಮದೇವತೆಗಳ ಆರಾಧನೆಯನ್ನು ಲಕ್ಷಿಸಿಕೊಂಡು ಕ್ಷೇತ್ರಕಾರ್ಯ ಮಾಡುವ ಮೂಲಕ ಮಾಹಿತಿಗಳನ್ನು ದಾಖಲು ಮಾಡಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯಾದ್ಯಂತ ಒಟ್ಟು ೭ ತಾಲೂಕುಗಳಲ್ಲಿ ಪ್ರಾಣಿಬಲಿಗಳು ನಡೆಯುತ್ತಿವೆ. ಇಲ್ಲಿ ಪ್ರಾಣಿಬಲಿಗೇ ಹೆಚ್ಚು ಮಹತ್ವವನ್ನು ನೀಡಿ ಅಧ್ಯಯನ ಮಾಡಲಾಗಿದೆ. ಎಲ್ಲಿ ಪ್ರಾಣಿಬಲಿಗಳು ನಡೆಯುತ್ತವೆಂದು ಪಟ್ಟಿ ಮಾಡಿಕೊಂಡು ಆ ಆಚರಣೆಯಲ್ಲಿ ಪ್ರಾಣಿಬಲಿಗಳನ್ನು ಗುರುತಿಸಿ ಚರ್ಚೆ ಮಾಡಲಾಗಿದೆ. ಅದಕ್ಕೆ ರೂಪ ಕೊಡುವುದು ಬಹುಮುಖ್ಯವಾಗುತ್ತದೆ. ಬಳ್ಳಾರಿ ಜಿಲ್ಲೆಗೆ ತನ್ನದೇ ಅದ ಚರಿತ್ರೆ ಇದೆ. ವಾಣಿಜ್ಯ ನಗರಿಯಾಗುತ್ತಿರುವ ಸಂದರ್ಭದಲ್ಲಿ ಈ ಪ್ರಾದೇಶಿಕ ಗ್ರಾಮದೇವತೆಗಳ ಆಚರಣೆಗಳಲ್ಲಿ ಪ್ರಾಣಿಬಲಿಗಳು ಎಷ್ಟರಮಟ್ಟಿಗೆ ಜನಸಾಮಾನ್ಯರ ಮಚ್ಚುಗೆಯನ್ನು ಪಡೆದುಕೊಳ್ಳುತ್ತವೆಂದು ಈ ಅಧ್ಯಯನದಲ್ಲಿ ಗಮನಿಸಲಾಗಿದೆ.

ಬಳ್ಳಾರಿ ಜಿಲ್ಲೆಯು ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನವನ್ನು ಪಡೆದಿದೆ. ಅಂತೆಯೇ ಜಾನಪದೀಯವಾಗಿಯೂ ಇದರ ಪ್ರಾಮುಖ್ಯತೆ ಹೆಚ್ಚಿದೆ. ೨೦೧೧ರ ಜನಗಣತಿಯ ಪ್ರಕಾರ ಜಿಲ್ಲೆಯ ಜನಸಂಖ್ಯೆ ೨೪೫೨೫೯೫ ರಷ್ಟಿದೆ. ಇದರಲ್ಲಿ ೧೨೩೬೯೫೪ರಷ್ಟು ಪುರುಷರು ಮತ್ತು ೧೨೧೫೬೪೪೧ ರಷ್ಟು ಮಹಿಳೆಯರಿದ್ದಾರೆ. ಈ ಜಿಲ್ಲೆಯಲ್ಲಿ ಹಲವು ಜಾತಿ ಜನಾಂಗಗಳ ಜನರೂ ವಾಸವಾಗಿದ್ದಾರೆ. ಮುಖ್ಯವಾಗಿ ಬಲಿ ಕೊಡುವ ಪದ್ಧತಿಯು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜನಾಂಗಗಳಲ್ಲಿಯೇ ಹೆಚ್ಚಾಗಿ ಕಂಡುಬರುತ್ತದೆ. ಜಿಲ್ಲೆಯಲ್ಲಿನ ಪ್ರತಿ ಗ್ರಾಮಗಳಲ್ಲಿಯೂ ಗ್ರಾಮದೇವತೆಗಳ ಆಚರಣೆ ನಡೆಯುತ್ತಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಏಳು ತಾಲೂಕುಗಳಲ್ಲಿ ಗ್ರಾಮದೇವತೆಗಳ ಆಚರಣೆಯಲ್ಲಿ ನಡೆಯುವಂತಹ ಬಲಿಪದ್ಧತಿಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡು ಸಂಶೋಧನೆ ನಡೆಸಲಾಗಿದೆ.

ವಿಶೇಷವಾಗಿ ಗ್ರಾಮದೇವತೆ ಮಾರಿಯಮ್ಮ ಮೇಲೆ ಅಧ್ಯಯನ ನಡೆಸಿರುವ ಸುಬ್ರಮಣಿ ಜೆ. ಸುಣ್ಣಂಗೂರ್ ಇವರು 'ಪ್ರಾಣಿಬಲಿ' ಬಗ್ಗೆ ಮಾಹಿತಿಗಳನ್ನು ದಾಖಲು ಮಾಡಿ ಉಲ್ಲೇಖಿಸುತ್ತಾರೆ. ಅವರ ಸಂಶೋಧನಾ ಮಹಾಪ್ರಬಂಧದಲ್ಲಿ ಪ್ರಾಣಿಬಲಿಗಾಗಿ ಒಂದು ಅಧ್ಯಾಯವೇ ಮೀಸಲಿರಿಸಿದ್ದಾರೆ. "ಮಂಗಳೂರು ಪ್ರಾಂತ್ಯದ ಉರ್ವ ಮಾರಿಗುಡಿಯಲ್ಲಿ ನರಬಲಿಗಳನ್ನು ನೀಡುತ್ತಿದ್ದರು ಎಂದು ದಾಖಲು ಮಾಡುತ್ತಾರೆ"[೧೯] ಕರಾವಳಿ ಭಾಗದಲ್ಲಿ ನರಬಲಿಗಳು ನಡೆಯುತ್ತಿದ್ದವು ಎಂಬ ಕುರುಹುಗಳು ಸಿಗುತ್ತವೆ. ಹೆಸರಾಂತ ಪಟ್ಟಣವಾದ ಬಸ್ರೂರು ಗ್ರಾಮದಲ್ಲಿ ೬೦ ವರ್ಷಕ್ಕೊಮ್ಮೆ ಮಾರಿಜಾತ್ರೆ ನಡೆಯುತ್ತದೆ. ಇಲ್ಲಿ ಪ್ರಾಣಿಬಲಿಯನ್ನು ಹೆಚ್ಚಾಗಿ ದೇವತೆಗೆ ನೀಡಿ ಶಾಂತಿ ಮಾಡುತ್ತಿದ್ದರು. ಇಲ್ಲಿ ಒಬ್ಬರಿಗೆ ಒಂದೇ ಮಾರಿಜಾತ್ರೆ ಸಿಗುವುದು, ಎರಡನೇ ಮಾರಿಜಾತ್ರೆ ಸಿಗುವುದಿಲ್ಲ ಎಂಬ ಲೋಕೋಕ್ತಿಯಿದೆ.

ಇತಿಹಾಸ ಪ್ರಸಿದ್ಧಿಯನ್ನು ಪಡೆದುಕೊಂಡಿರುವ ಶಿರಸಿ ಮಾರಿಕಾಂಬಾ ದೇವಾಲಯದಲ್ಲಿ ಪ್ರಸ್ತುತ ಕೋಣವನ್ನು ಗುಡಿಯ ಒಳಗೆ ಗರ್ಭಗುಡಿಯ ಎಡಭಾಗದಲ್ಲಿ ಜೀವಂತವಾಗಿ ಕೋಣವನ್ನು ಕಟ್ಟಿರುವುದು ನೋಡಬಹುದು. ಈ ಹಿನ್ನೆಲೆಯಲ್ಲಿ ಪ್ರಾಣಿಬಲಿಗೂ ಮತ್ತು ಆರಾಧನೆಗೂ ನಿಕಟ ಸಂಬಂಧ ಇದೆ ಎಂದು ಖಚಿತಪಡಿಸಬಹುದು. ಹೈದರಾಬಾದ್ ಕರ್ನಾಟಕದ ಮೇಲೆ ವಿಶೇಷವಾಗಿ ಅಧ್ಯಯನ ಮಾಡಿರುವ ಚೆನ್ನಣ್ಣ ವಾಲೀಕಾರ ಅವರು ಕೋಣ ಬಲಿ ಬಗ್ಗೆ ಮಾಹಿತಿಗಳನ್ನು ದಾಖಲಿಸುತ್ತಾರೆ. ಆ ಪ್ರಾಂತ್ಯದಲ್ಲಿ ನಡೆಯುತ್ತಿದ್ದ ಮಾಹಿತಿಗಳನ್ನು ಕ್ರೋಡಿಕರಣ ಮಾಡುವ ಮೂಲಕ ಕೋಣ, ಕುರಿ, ಮೇಕೆ, ಕೋಳಿ ಯಾವ ಸ್ವರೂಪದಲ್ಲಿ ನಡೆಯುತ್ತದೆ ಎಂದು ಬಿಂಬಿಸುತ್ತಾರೆ.

ನಾಗೇಗೌಡ ಅವರ 'ಜಾನಪದ ಜಗತ್ತು' ಕಿರುಹೊತ್ತಿಗೆಯಲ್ಲಿ ಗ್ರಾಮದೇವತೆ ಮಾರಮ್ಮನ ಬಗ್ಗೆ ಮಾಹಿತಿಗಳಿವೆ. ಇದರಲ್ಲಿ ಮಾರಮ್ಮನ ಜನಪದ ಕತೆ ಬರುತ್ತದೆ. ಈ ಕತೆಯಲ್ಲಿ ಮಾರಮ್ಮನ ಗಂಡ ಕೋಣ ಎಂಬುದು ಗುರುತಿಸುತ್ತಾರೆ. ಇದರಿಂದ ಜನಪದ ಕತೆಗಳಲ್ಲಿ ಸ್ಥಳೀಯವಾಗಿ ಬೆಳೆದು ಬಂದಿರುವ ಮಾರಮ್ಮ-ಕೋಣನ ಕತೆ ಜನಪ್ರಿಯತೆಯಲ್ಲಿ ಮಾರಮ್ಮನ ಗಂಡನಾದ ಕೋಣವನ್ನು ಬಲಿಯಾಗಿ ಅರ್ಪಿಸಿ ಮಾರಮ್ಮನನ್ನು ಶಾಂತಿಪಡಿಸುವ ಅಭಿವ್ಯಕ್ತಿ ಮೂಡುತ್ತದೆ.

ಬಳ್ಳಾರಿ ಜಿಲ್ಲೆಯು ಭೌಗೋಳಿಕವಾಗಿ ಏಳು ತಾಲೂಕುಗಳನ್ನು ಹೊಂದಿದೆ. ಈ ಏಳು ತಾಲೂಕುಗಳಲ್ಲಿ ಗ್ರಾಮದೇವತೆ ಮಾಯಮ್ಮ[೨೦], ಮಾರಮ್ಮ[೨೧], ಕಾಳಮ್ಮ[೨೨], ದುರುಗಮ್ಮ[೨೩], ಅಕ್ಕಮ್ಮ[೨೪] ಮುಂತಾದ ಹೆಸರುಗಳಿಂದ ಕರೆದು ಹಬ್ಬ ಆಚರಿಸುತ್ತಾರೆ. ಇಂತಹ ಹಬ್ಬ ಜಾತ್ರೆಗಳಿಗೆ ಹೋಗಿ ಕ್ಷೇತ್ರಕಾರ್ಯ ಮಾಡುವ ಮೂಲಕ ಮಾಹಿತಿಗಳನ್ನು ಕಲೆಹಾಕಲಾಗಿದೆ.

ಬಳ್ಳಾರಿ ಜಿಲ್ಲೆಯಾದ್ಯಂತ ಆಚರಣೆ ನಡೆಯುವ ಗ್ರಾಮದೇವತೆಗಳ ಹಿನ್ನೆಲೆಯಲ್ಲಿ ಪ್ರಾಣಿಬಲಿಗಳು ನಡೆಯುತ್ತವೆ. ಈ ಪ್ರಾಣಿಬಲಿಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಅಧ್ಯಯನ ನಡೆಸಲಾಗುತ್ತದೆ. ತೌಲನಿಕ ಅಧ್ಯಯನಕ್ಕಾಗಿ ಸಂಬಂಧಿಸಿದಂತೆ ಕರ್ನಾಟಕದ ಇತರೆ ಭಾಗಗಳಲ್ಲಿ ನಡೆಯುವ ಪ್ರಾಣಿಬಲಿಗಳನ್ನು ಗಮನಿಸಲಾಗಿದೆ. ನಂಬಿಕೆಯ ಮೂಲಕ ಆಚರಣೆ-ಆರಾಧನೆಗಳು ನಡೆಯುತ್ತವೆಯಾದರೂ ಗ್ರಾಮದೈವಗಳ-ಗ್ರಾಮದೇವತೆಗಳ, ಗ್ರಾಮದೇವರು, ಶಿಷ್ಟದೇವತೆಗಳ (ಪುರುಷ-ಸ್ತ್ರೀ) ಪರಿಕಲ್ಪನೆಯಲ್ಲಿ ಯಾವುದೇ ಒಂದು ಗ್ರಾಮದೈವಕ್ಕೆ ತನ್ನದೇ ಆದ ಯಾವುದಾದರೂ ಒಂದು ವಸ್ತುವನ್ನು ಅಥವಾ ಪ್ರಾಣಿಯನ್ನು ಅರ್ಪಿಸಿ ದೇವರುಗಳನ್ನು ತೃಪ್ತಿಪಡಿಸಿ ಶಾಂತಿಪಡಿಸುವ ಉದಾಹರಣೆಗಳು ದೊರೆಯುತ್ತವೆ.

ಬಳ್ಳಾರಿ ಜಿಲ್ಲೆ ಮುಖ್ಯವಾಗಿ ಅನೇಕ ವ್ಯವಹಾರಗಳನ್ನು ಒಳಗೊಂಡಿದೆ. ಬೃಹತ್‌ಗಾತ್ರದ ಬಂಡೆಗಳಿಂದ ರಚನೆಯಾದ ಬೆಟ್ಟಗಳು, ಹಳ್ಳ, ನದಿ, ತೊರೆಗಳು ಕಾಣಿಸಿಗುತ್ತವೆ. ನೀರಿನ ನೆಲೆಗಳು ಅದಿರಿನ ನಿಕ್ಷೇಪಗಳು, ಭೂಮಿಯ ಫಲವತ್ತಾದ ಭೂಭಾಗಗಳು ಸೇರಿಕೊಂಡು ಸಮೃದ್ಧಿಯನ್ನು ಪಡೆದುಕೊಂಡಿದೆ. ಆದಿ ಶಿಲಾಯುಗದಿಂದ ಮಾನವನ ತಾಣವಾಗಿ ಈ ಜಿಲ್ಲೆಯು ಪ್ರಮುಖ ಸ್ಥಾನವನ್ನು ಪಡೆದುಕೊಳ್ಳುತ್ತದೆ.

ಕ್ಷೇತ್ರಕಾರ್ಯ ಮಾಡುವಾಗ ಗ್ರಾಮ ಗುಡಿಗಳ ರಚನಾವಿನ್ಯಾಸಕ್ಕೂ ಈ ಜಿಲ್ಲೆಯಲ್ಲಿ ಕೋಟೆ ಕೊತ್ತಲುಗಳ ವಿನ್ಯಾಸಕ್ಕೂ ತಳಕುಹಾಕುತ್ತದೆ ಎಂದು ಊಹಿಸಲು ಒಂದು ಅವಕಾಶ ಇದೆ. ಬಳ್ಳಾರಿ ಜಿಲ್ಲೆಯಲ್ಲಿ ಕೋಟೆಕೊತ್ತಲುಗಳ ಬಗ್ಗೆ ಈ ರೀತಿಯಾದ ಮಾಹಿತಿಗಳು ಲಭ್ಯವಾಗುತ್ತವೆ. "ಪ್ರಾಗೈತಿಹಾಸಕಾಲದ ಜನಸಂಸ್ಕೃತಿಯನ್ನು ಗಮನಿಸಿದರೆ ಹಲವು ಪ್ರಭಾವಿ ಅಂಶಗಳು ಕಂಡುಬರುತ್ತವೆ. ಈ ಅವಧಿಯಲ್ಲಿ ಮಾನವನು ಬೇಟೆಯಾಡುತ್ತಾ ಆಹಾರ ಸಂಗ್ರಹಿಸುತ್ತಾ ಜೀವನ ನಡೆಸುತ್ತಿದ್ದನು. ಆತನು ನಿರಂತರವಾಗಿ ಪ್ರಕೃತಿಯೊಡನೆ ಸೆಣಸಬೇಕಾಗಿತ್ತು.

ಮಳೆ, ಗುಡುಗು, ಸಿಡಿಲು ಕಾಳ್ಗಿಚ್ಚು ನಿಸರ್ಗದಲ್ಲಿ ನಡೆಯುವ ಇಂತಹ ಘಟನೆಗಳು ಆತನಲ್ಲಿ ಭಯ ಹುಟ್ಟಿಸಿದವು ಇವುಗಳಿಂದ ರಕ್ಷಣೆ ಪಡೆಯುವ, ರಕ್ಷಣೆ ಪಡೆಯುವುದಕ್ಕಾಗಿ ದೊಡ್ಡ ದೊಡ್ಡ ಬಂಡೆಗಳ ಆಶ್ರಯದಲ್ಲಿ ವಾಸಿಸಿದನು.

ತಾನು ಸುರಕ್ಷಿತವಾಗಿ ಇರಬೇಕೆಂದರೆ ಬೃಹತ್ ಬಂಡೆಗಳ ಸಮೂಹಗಳ ಮಧ್ಯದಲ್ಲಿ ಎಂದು ಅರಿತನು. ಇಂಥ ಬೃಹತ್ ಬಂಡೆಗಳ ಸಮೂಹಗಳು ಗುಡೇಕೋಟೆ, ಜರಿಮಲೆ, ಕುರುಗೋಡು, ಹಂಪಿ ಮುಂತಾದ ಸ್ಥಳಗಳಲ್ಲಿ ಕಾಣಸಿಗುತ್ತವೆ. ಹೀಗೆ ರಕ್ಷಣೆಯ ಕಲ್ಪನೆಯಲ್ಲಿ ನಾವಿಲ್ಲಿ ಕಾಣಬಹುದು"[೨೫] ಎಂದು ತಮ್ಮ ಅಭಿಪ್ರಾಯ ವ್ಯಕ್ತವಾಗತ್ತವೆ. ಬೃಹತ್ ಬಂಡೆಗಳ ಸಂದುಗಳಲ್ಲಿ ಮನುಷ್ಯ ಜೀವನ ಮಾಡುವ ಪರಂಪರೆ ಇರುವಾಗ ತನ್ನ ಸುತ್ತಮುತ್ತಲಿನಲ್ಲಿ ಸಿಗುವ ಗುಂಡು ಗುಂಡಾಗಿರುವ ಕಲ್ಲುಗಳನ್ನು ದೇವರೆಂದು ಭಾವಿಸಿ ಪೂಜಿಸಿರಬೇಕು ಎಂಬುದಕ್ಕೆ ಬಳ್ಳಾರಿ ಜಿಲ್ಲೆ ಒಂದು ಉತ್ತಮ ಉದಾಹರಣೆಯಾಗುತ್ತದೆ.

ಬಳ್ಳಾರಿ ಪ್ರದೇಶದಲ್ಲಿ ಶಾತವಾಹನರು, ಮೌರ್ಯರು, ಬಾದಾಮಿ ಚಾಲುಕ್ಯರು, ಪಲ್ಲವರು ರಾಷ್ಟ್ರಕೂಟರು, ಕಳಚೂರಿಗಳು, ಕಲ್ಯಾಣ ಚಾಲುಕ್ಯರು, ಕದಂಬರು, ನೊಳಂಬ, ಪಾಂಡ್ಯರು, ಸಿಂಧರು, ಹೊಯ್ಸಳರು, ಪಾಳೆಯಗಾರರು, ಸಂಡೂರು ಘೋರ್ಪಡೆಯವರು, ಬಿಜಾಪುರದ ಸುಲ್ತಾನರು, ಹಂಡೆ ಪಾಳೆಯಗಾರರು, ಹೈದರಾಲಿ, ಟಿಪ್ಪು, ಬ್ರಿಟಿಷರು ಮುಂತಾದವರು ತಮ್ಮ ರಾಜ್ಯಭಾರವನ್ನು ಮಾಡಿರುವ ಇತಿಹಾಸದ ಉಲ್ಲೇಖಗಳು ದೊರೆಯುತ್ತವೆ. "ಮೌರ್ಯರ ನಂತರ ಆಡಳಿತಕ್ಕೆ ಬಂದ ಶಾತವಾಹನರು ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶ ಬಹುಭಾಗವನ್ನು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ತಂದುಕೊಂಡರು. ಈ ಅವಧಿಯಲ್ಲಿ ಅವರು ಕರ್ನಾಟಕದ ಸನ್ನತಿ ಮತ್ತು ಬನವಾಸಿಗಳಲ್ಲಿ ಕೋಟೆ ಕಟ್ಟಿಕೊಂಡರು" ಎಂಬ ದಾಖಲೆಗಳಿವೆ.[೨೬] ಯಾವ ಸಂದರ್ಭದಲ್ಲಿ ಕೋಟೆಗಳನ್ನು ಕಟ್ಟಲು ಪ್ರಾರಂಭ ಮಾಡಿದರೋ ಅದೇ ಸಂದರ್ಭಕ್ಕೆ ಅವರು ನಂಬಿಕೊಂಡು ಬಂದ ದೇವರುಗಳಿಗೆ ದೇವಸ್ಥಾನಗಳನ್ನು ನಿರ್ಮಾಣ ಮಾಡಿದರು. ಬಳ್ಳಾರಿಜಿಲ್ಲೆಯಲ್ಲಿ ದೊರೆತ 'ತಾಮ್ರಪಟ ಮತ್ತು ಅಣಜಿ' ಶಾಸನಗಳು ಇದಕ್ಕೆ ಉದಾಹರಣೆಗಳು.

ಬಳ್ಳಾರಿ ಜಿಲ್ಲೆಯಾದ್ಯಂತ ಭಾಷೆ, ಪ್ರಾದೇಶಿಕತೆ, ಸಾಂಸ್ಕೃತಿಕತೆ, ಭೌಗೋಳಿಕತೆ, ಆಚರಣೆಗಳ ಮೂಲಗಳ ಬಗ್ಗೆ ಬೆಳಕು ಚೆಲ್ಲುವ ಕೆಲವು ಗೆಜೆಟಿಯರ್ ಮತ್ತು ವಿದ್ವಾಂಸರು ಬರೆದಿರುವ ಪುಸ್ತಕಗಳು ಇವೆ. ದೇವಸ್ಥಾನಗಳ ನಿರ್ಮಾಣಗಳ ಬಗ್ಗೆ, ವಿಶಿಷ್ಟವಾದ ಕೆತ್ತನೆಗಳ ಬಗ್ಗೆ ಶಾಸನ, ತಾಮ್ರದ ಪಟಗಳಲ್ಲಿ ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲಾಗಿದೆ. ಹೆಚ್ಚು ಹೆಚ್ಚು ಪ್ರಾಣಿಬಲಿಗಳನ್ನು ಕೊಡುವ ಸ್ಥಳಗಳಿಗೆ ಮತ್ತು ಪ್ರದೇಶಗಳಿಗೆ ಮಹತ್ವ ಕೊಡಲಾಗಿದೆ.

ಪ್ರಾದೇಶಿಕ ಹಿನ್ನೆಲೆಯಲ್ಲಿ ಬಳ್ಳಾರಿಯು "ಪ್ರಾಕೃತಿಕ ಸಂಪತ್ತನಲ್ಲಿ ಬೆಟ್ಟಗಳ ಶ್ರೀಮಂತಿಕೆಗೆ ಸಿಂಹಪಾಲು ಸಂದರೆ ಉಳಿದ ಭಾಗ ತುಂಗಭದ್ರಾ ನದಿಗೆ ಸಂಬಂಧಿಸಿದೆ. ಹೊಸಪೇಟೆ, ಸೊಂಡೂರು, ದೇವಗಿರಿ ಪ್ರದೇಶಗಳ ಬೆಟ್ಟಗಳಲ್ಲಿ ಖನಿಜ ನಿಕ್ಷೇಪಗಳಿದ್ದು ಇವು

ಅಂತರರಾಷ್ಟ್ರೀಯ ಮಾನ್ಯತೆಯನ್ನು ಪಡೆದುಕೊಂಡಿರುವುದು ಕಾಣಬಹುದು. ಹಂಪಿ ಸುತ್ತಮುತ್ತಲಿನ ಬೃಹದಾಕಾರವಾದ ಕಲ್ಲುಬಂಡೆಗಳ ಬೆಟ್ಟಗಳು ತುಂಗಭದ್ರಾ ನದಿಯ ಇಕ್ಕಲೆಗಳಲ್ಲಿ ಕಂಗೊಳಿಸುವ ಸಹಜ ಸಂಪತ್ತು, ಬೆಟ್ಟ ಪ್ರದೇಶಗಳ ಗಿರಿಕಂದರಗಳಲ್ಲಿ ವಾಸಿಸುವ ಪ್ರಾಣಿ ಸಂಪತ್ತು, ಸಂರಕ್ಷಿತ ದರೋಜಿ ಕರಡಿ ಧಾಮ, ಇವು ಜೈವಿಕಸಂಪತ್ತಿನ ಭಾಗವಾಗಿದೆ" ಎಂದು ಚರ್ಚೆ ಮಾಡುತ್ತಾರೆ.[೨೭] ಚರಿತ್ರೆಯನ್ನಾಧರಿಸಿ ಹೇಳುವುದಾದರೆ, "ಬಳ್ಳಾರಿ ಜಿಲ್ಲೆಯನ್ನು ವಿಜಯನಗರ ಪೂರ್ವದ ಚರಿತ್ರೆಯಿಂದ ಈ ಪರಂಪರೆಯನ್ನು ಕಲ್ಪಿಸಬೇಕಾಗುತ್ತದೆ. ಕಂಪ್ಲಿಯ ಸಂಸ್ಥಾನದ ಚರಿತ್ರೆಯು ಬಳ್ಳಾರಿಯ ಚಹರೆಯನ್ನು ಪಾಳೇಗಾರಿಕೆಯ ನೆಲೆಯಿಂದ ಆರಂಭಿಸುತ್ತದೆ. ಇದರ ವಿಸ್ತೃತ ಸಾಮ್ರಾಜ್ಯಶಾಹಿ ನೆಲೆ ವಿಜಯನಗರದಿಂದ ಅನಾವರಣಗೊಂಡಿದೆ. ಕಂಪಿಲರಾಯ ಮತ್ತು ಕುಮಾರರಾಮರ ಸಾಂಸ್ಕೃತಿಕ ಭಿತ್ತಿಯು ಚರಿತ್ರೆಯಿಂದಾಚೆ ಐತಿಹ್ಯ, ಪುರಾಣ, ಸಾಹಿತ್ಯ ವಲಯಗಳಿಗೂ ಚಾಚಿಕೊಂಡಿದೆ. ವಿಜಯನಗರದ ಕಥನವು ಚರಿತ್ರೆಯಲ್ಲಿ ಮಾತ್ರವಲ್ಲದೇ ಆಧುನಿಕ ಭಾರತದ ಸ್ವಾತಂತ್ರ್ಯ ಸಂದರ್ಭದ ರಾಷ್ಟ್ರೀಯ ಹೋರಾಟ ಭೂಮಿಕೆಯನ್ನು ಒದಗಿಸಿದೆ. ವಿಜಯನಗರದ ಅರಸರು ಶೈವ ಮತ್ತು ವೈಷ್ಣವ ಮುಂತಾಗಿ ಬಹುಧಾರ್ಮಿಕ ಸಂಸ್ಕೃತಿಯ ಅಭಿವ್ಯಕ್ತಿ ರೂಪಗಳಾಗಿ ದೇವಾಲಯ ವಾಸ್ತುಶಿಲ್ಪವನ್ನು ಬೆಳೆಸಿದರು. ಇಂಥದೇ ಬಹುಸಂಸ್ಕೃತಿಗಳ ಸಾಹಿತ್ಯ ಸೃಷ್ಟಿ, ಧಾರ್ಮಿಕ ಉತ್ಸವ–ತೇರು ಆಚರಣೆಗಳನ್ನು ಅಸ್ತಿತ್ವದಲ್ಲಿ ತಂದದ್ದು ಪ್ರೌಢದೇವರಾಯ. ಪ್ರೌಢದೇವರಾಯ 'ಕುರಾನ್' ಪುಸ್ತಕವನ್ನು ತನ್ನ ಪಕ್ಕದಲ್ಲಿಟ್ಟುಕೊಂಡೇ ರಾಜ್ಯಭಾರ ಮಾಡುತ್ತಿದ್ದ" ಎಂದು ಪ್ರಸ್ತಾಪ ಮಾಡುತ್ತಾರೆ.[೨೮] ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬಳ್ಳಾರಿಯು ವೈಶಿಷ್ಟ್ಯತೆಯಿಂದ ಕೂಡಿದೆ. ಮುಸ್ಲಿಂ ಪಾರುಪತ್ಯ ಕೂಡ ಈ ಪ್ರದೇಶದಲ್ಲಿ ಅಧಿಕವಾಗಿ ಇತ್ತು ಎಂದು ಗುರುತಿಸಬಹುದು.

ಬಳ್ಳಾರಿ ಜಿಲ್ಲೆಯಾದ್ಯಂತ ಬಹುಭಾಷಿಕರು ನೆಲೆಯಾಗಿರುವುದು ಕಾಣಬಹುದು. ತೆಲುಗು, ಕನ್ನಡ ದ್ವಿಭಾಷಾ ಪರಿಸರ ಇಲ್ಲಿನ ಜನ ಸಮುದಾಯಗಳ ಅಭಿವ್ಯಕ್ತಿ. ತುಂಗಭದ್ರಾ ಪ್ರಾಂತ್ಯದಲ್ಲಿ ವಾಸಮಾಡುತ್ತಿದ್ದ ತಮಿಳರು ತಮಿಳು ಭಾಷೆಯನ್ನು ಮಾತನಾಡುತ್ತಾರೆ. ನೀರಾವರಿ ಉತ್ಪನ್ನಗಳ ಜೊತೆಗೆ ವಲಸಿಗರಾಗಿ ಬಂದ ಆಂಧ್ರದ ಭಾಷಿಕರು ತೆಲುಗನ್ನು ಮಾತನಾಡುತ್ತಾರೆ. ಪ್ರವಾಸಿ ತಾಣವಾದ ಹಂಪಿಯಲ್ಲಿ ವಿದೇಶಿಗರು ಬರುವ ಹಿನ್ನೆಲೆಯಲ್ಲಿ ಆಂಗ್ಲಭಾಷೆಯನ್ನು ಮಾತನಾಡುತ್ತಾರೆ. "ಈಗಾಗಿ ಸ್ಟ್ಯಾಂಡರ್ಡ್ ಕನ್ನಡ, ಗ್ರಾಮೀಣ ಪ್ರದೇಶದ ಆಡುನುಡಿ ಕನ್ನಡ, ತೆಲುಗು ಹಾಗು ಇಂಗ್ಲಿಷ್ ಮಿಶ್ರಣ ಕನ್ನಡ ಇಂತಹ ಬಹುಭಾಷಾ ಸ್ವರೂಪ ಬಳ್ಳಾರಿಯ ಪರಂಪರೆಯಾಗಿದೆ" ಎಂದು ಪ್ರಸ್ತಾಪಿಸುತ್ತಾರೆ.[೨೯] ಈ ಹಿನ್ನೆಲೆಯಲ್ಲಿ ಗ್ರಾಮದೇವತೆಗಳ ಆಚರಣಾ ಸ್ವರೂಪದಲ್ಲಿ ಅವರದೇ ಅದರ ಭಾಷಾವೈಖರಿಗಳಿಂದ ಸಂಬೋಧಿಸುವುದನ್ನು ಸಾಂಸ್ಕೃತಿಕವಾಗಿ ಗಮನಿಸುತ್ತೇವೆ.

ಆರಾಧನಾ ಭಾಗವಾಗಿ ಮೌಖಿಕ ಪರಂಪರೆಯೇ ಅತಿ ಹೆಚ್ಚಾಗಿ ಬಳ್ಳಾರಿ ಜಿಲ್ಲೆಯಾದ್ಯಂತ ನಡೆಯುವುದು ಇದೆ. ವಿವಿಧ ರೀತಿಯ ವೈವಿಧ್ಯಮಯವಾದ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಗ್ರಾಮದೈವಗಳಾದ ಸ್ತ್ರೀಶಕ್ತಿ ದೇವತೆಗಳು, ಅಲೆಮಾರಿ ದೈವಗಳು, ಸನಾತನ ಗುಡಿಗಳು, ಶಿಷ್ಟದೈವಗಳು, ಜನಪದ ದೈವಗಳು ಮುಂತಾಗಿ ಅನಾವರಣಗೊಳ್ಳುತ್ತವೆ. ಪುರಾಣ ಕಲ್ಪಿತವಾಗಿ ಸಿಡಿ ಆಚರಣೆಗಳು ನಡೆಯುವುದಿದೆ. ದುರ್ಗಮ್ಮ, ಹುಲಿಗೆಮ್ಮ, ಗಾಳೆಮ್ಮ, ಉಚ್ಚಂಗಿದುರ್ಗಿ, ಅದಿಮರ ಮೈಲಾರ, ಸಂತರ ಗೂಳಿಬಸವೇಶ್ವರ, ಹಂಪೆಯ ವಿರೂಪಾಕ್ಷ ದೇವಸ್ಥಾನಗಳಲ್ಲಿ ವಿವಿಧ ರೀತಿಯ ಆರಾಧನೆಗಳು ವಿಪರೀತವಾಗಿ ಆಚರಣೆಗಳಲ್ಲಿವೆ. ಅದಲ್ಲದೇ ಜಾತ್ರೆ, ಹಬ್ಬ, ಸಂಪ್ರದಾಯ, ಉತ್ಸವಗಳು ಲೌಕಿಕ ಪರಂಪರೆ ಇಂದಿಗೂ ತನ್ನ ಸೊಗಡನ್ನು ಉಳಿಸಿಕೊಂಡಿರುವುದು ಗಮನಿಸಬಹುದು. ಆಚರಣೆಯ ಭಾಗವಾಗಿ ಪ್ರಾಣಿಬಲಿಗಳನ್ನು ನಡೆಸುವ ಪ್ರಕ್ರಿಯೆಯಿಂದ ಇದರಲ್ಲಿ ಮೌಢ್ಯತೆ ಮಹಾವಿಶೇಷಣಗಳ ಸಂದೇಶಗಳು ಸಮಸ್ತ ಜನಪದರಿಗೆ ರವಾನೆಯಾಗುತ್ತಾ ಬೇರೆಬೇರೆ ಆಕಾರಗಳಲ್ಲಿ ಸಮ್ಮಿಳನಗೊಳ್ಳುತ್ತದೆ.

ಬಳ್ಳಾರಿ, ಸಿರುಗುಪ್ಪ, ಸೊಂಡೂರು, ಹೊಸಪೇಟೆ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹೂವಿನ ಹಡಗಲಿ ಈ ಏಳು ತಾಲೂಕುಗಳಲ್ಲಿ ವಿವಿಧ ರೀತಿಯ ಆಚರಣೆಗಳು ರೂಢಿಯಲ್ಲಿದ್ದು ಗ್ರಾಮದೇವತೆಗಳಿಗೆ ತನ್ನದೇ ಆದ ರೀತಿಯಲ್ಲಿ ಆರಾಧನೆಗಳು ನಡೆಯುತ್ತಿವೆ. ಗ್ರಾಮದೇವತೆಗಳು ಬಹು ಮುಖ್ಯವಾಗಿ ಮಾಂಸಾಹಾರಿಗಳು. ಹೆಚ್ಚು ಮಾಂಸವನ್ನು, ರಕ್ತವನ್ನು ಅಪೇಕ್ಷಿಸುತ್ತವೆ ಎಂದು ಜನಪದ ನಂಬಿಕೆಯಾಗಿದೆ. ದೇವರಿಗೆ ಪ್ರಾಣಿಗಳನ್ನು ಬಲಿ ಕೊಟ್ಟು ಅವುಗಳಿಂದ ಮಾಡಿದ ಆಹಾರವನ್ನು ಸೇವಿಸಿರುವುದು ವಾಡಿಕೆಯಾಗಿದೆ. ಇದನ್ನು ಹಬ್ಬದೂಟ, ಬಾಡೂಟ ಎಂತಲೂ ಕರೆಯುತ್ತಾರೆ. ವಿಶೇಷವಾಗಿ ಮಾರಮ್ಮ, ದುರ್ಗಿ, ಹುಲಿಗೆಮ್ಮ, ಮಾಯಮ್ಮ, ಮಾತಂಗಿ, ಉಚ್ಚಂಗಿ, ಸ್ತ್ರೀದೇವತೆಗಳು ಸ್ತ್ರೀನಾಮದೇಯಗಳಿಂದ ಪ್ರಖ್ಯಾತಿಯನ್ನು ಪಡೆದುಕೊಂಡು ಆಚರಣೆ ಆಗುವುದನ್ನು ಗುರುತಿಸಬಹುದು. ಜಿಲ್ಲೆಯಾದ್ಯಂತ ಆಚರಣೆಗೊಳ್ಳುತ್ತಿರುವ ಸ್ತ್ರೀದೈವಗಳು ವಿಶಿಷ್ಟ ಸ್ಥಾನಮಾನವನ್ನು ಪಡೆದುಕೊಂಡಿವೆ. "ದೇವಿ-ಭಕ್ತಿ ಸಂಬಂಧ ಅನ್ಯೋನ್ಯ ತಾಯಿ ಮಕ್ಕಳ ಸಂಬಂಧ ಇದ್ದಂತೆ. ಅವಿವಾಹಿತ ತಾಯಿ ಮತ್ತು ಭಕ್ತವಲಯ ವರ್ತಮಾನ ಭವಿಷತ್‌ಗಳಲ್ಲಿ ಇದ್ದಂತೆ. ಬಂಧು ಬಳಗವನ್ನು ಬಯಸುವುದು ಮಾತೃಮೂಲ ಮನಸ್ಸು. ದಾಯಾದಿತನ, ಪಿತೃ ಪರಂಪರೆ ಈ ದೇವತೆಯ ಪರಧಿಗೆ ಬರುವುದಿಲ್ಲ. ಆಚರಣೆಗಳಲ್ಲಿ ಆಹಾರ ಪದ್ಧತಿ, ಉಡುಗೆ ತೊಡುಗೆ, ವಾದ್ಯ, ಎಲ್ಲವೂ ದೈಹಿಕ ಸುಖ, ಮಾನಸಿಕ ನೆಮ್ಮದಿ, ಸಂತಾನ ಅಭಿವೃದ್ಧಿಯ ಪೂರಕ ಅಂಶಗಳು. ಇಲ್ಲಿ ಮೈಲಿಗೆಯ ಪ್ರಶ್ನೆಯೇ ಇಲ್ಲ. ಈರುಳ್ಳಿ, ಬೆಳ್ಳುಳ್ಳಿ, ಹುಣಿಸೆಯ ಹುಳಿ, ಮಾಂಸಾಹಾರಗಳಿಗೆ ಆದ್ಯತೆ. ಇವು ಹೆಣ್ಣಿನ ಫಲವಂತಿಕೆಗೆ ಸತ್ವ ವೃದ್ಧಿಸುವಂತಹದು" ಎಂದು ಪ್ರಸ್ತಾಪಿಸುತ್ತಾರೆ.[೩೧]

ಯಾವುದೇ ಗ್ರಾಮದೈವಗಳು ಅದರ ದೈಹಿಕ ಆಕಾರಗಳಿಂದ ಅವುಗಳನ್ನು ಪೂಜಿಸುವುದು ವಾಡಿಕೆಯಾದ ನಂತರದಲ್ಲಿ ಅವುಗಳನ್ನು ಶಾಂತಿ ಮಾಡುವುದಕೋಸ್ಕರ ಮಾಂಸವನ್ನು ಮತ್ತು ರಕ್ತವನ್ನು ಅರ್ಪಿಸುವ ಪರಂಪರೆಯ ಪ್ರಗತಿಗೆ ನಾಂದಿಯಾಗಿರುವುದು ಗೋಚರಿಸುತ್ತದೆ. ಸಪ್ತಮಾತೃಕೆಯರಲ್ಲಿ ಕೆಲವು ಮುಖಗಳು ಕಪ್ಪಾಗಿರುವ ಮತ್ತು ಕೆಂಪಾಗಿರುವ ದೇವರುಗಳಿಗೆ ಪ್ರಾಣಿಬಲಿಗಳು ಬೇಕೇ ಬೇಕು ಎಂದು ಪ್ರಾಣಿಬಲಿಗಳನ್ನು ಅರ್ಪಿಸುತ್ತಾರೆ. ದೇವಾನು ದೇವತೆಗಳಿಗಳಿಗೆ ತಳಸಮುದಾಯಗಳು ನಡೆದುಕೊಳ್ಳುವ ರೀತಿ ರಿವಾಜುಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಹಾಗೆಯೇ ಬಲಿಯನ್ನು ಅಪೇಕ್ಷಿಸುವ ರಕ್ತವನ್ನು ಸಮರ್ಪಿಸಿ ಶಾಂತಿ ಮಾಡುವ ದೇವರುಗಳಾದ ದುರ್ಗೆ, ಮಾರಿ, ಮಸಣಿ ಈ ದೇವರುಗಳು ರೋಗಗಳನ್ನು ದುಷ್ಟಶಕ್ತಿಗಳನ್ನು ಸರ್ವನಾಶ ಮಾಡುವ ಶಕ್ತಿ ಪಡೆದುಕೊಂಡಿವೆ ಎಂದು ಅರಿತು ಪ್ರಾಣಿಗಳನ್ನು ಬಲಿ ಕೊಡುವುದು ರೂಢಿಸಿಕೊಂಡಿದ್ದಾರೆ. ಪ್ರಾಣಿಬಲಿ ಮನುಷ್ಯನ ರಕ್ತವನ್ನು ಮತ್ತು ಸ್ತ್ರೀಗೆ ಹೋಲಿಸಿ ಚರ್ಚಿಸುವುದು ಕೂಡ ಇದೆ. ಆರಾಧನಾ ಭಾಗವಾಗಿ ವಾದ್ಯ ನುಡಿಸಲು ವಾದ್ಯವಾದ ಚೌಡಿಕೆ ಬೇಕೇ ಬೇಕು. ಈ ಚೌಡಿಕೆಗೆ ತನ್ನದೇ ಆದ ಮಹತ್ವ ಇದೆ. ಈ ಚೌಡಿಕೆಯ ವಾದ್ಯದ ಬಗ್ಗೆ ಮಂಜುನಾಥ ಬೇವಿನಕಟ್ಟಿಯವರು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸುತ್ತಾರೆ. "ಚೌಡಿಕೆ ವಾದ್ಯ ಸ್ತ್ರೀಯ ಜನನಾಂಗದ ಆಕಾರದಲ್ಲಿದೆ. ಅದನ್ನು ಮಿಡಿಯಿಸಿ ನುಡಿಸಿ ಹಾಡಿ ನಲಿಯುವುದು, ಭಿಕ್ಷೆ ಬೇಡುವುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಆಚರಣೆಗಳಲ್ಲಿ ಬಲಿ ನೀಡಿದ ಪ್ರಾಣಿಯ ಮಾಂಸದಂತಹ ರಕ್ತವನ್ನು ದೇವರಿಗೆ ಅರ್ಪಿಸುವುದು ಮುಖ್ಯವಾಗಿರುತ್ತದೆ. ಏಕೆಂದರೆ ಹೆಣ್ಣು ಮುಟ್ಟಿನ ರೂಪದ ರಕ್ತದ ಸ್ಥಿತಿ–ಗತಿಗಳಿಗೆ ಅನುಗುಣವಾಗಿ ಫಲವಂತಿಕೆಯನ್ನು ಪ್ರತಿನಿಧಿಸುತ್ತಾಳೆ. ಮುಟ್ಟು ಆಗುವುದು–ನಿಲ್ಲುವುದು ಇದ್ಯಾವುದೂ ವೈಯುಕ್ತಿಕ ನೆಲೆಯಲ್ಲಿ ಮೈಲಿಗೆಯಲ್ಲ. ಅದೇ ಪ್ರಧಾನ ಹಾಗೂ ಹೆಣ್ತನದ ಭಾಗ್ಯ. ಈ ಆರಾಧನೆಯೇ ಪ್ರಾಣಿಯ ರಕ್ತವನ್ನು ದೇವತೆಗೆ ಅರ್ಪಿಸುವುದಾಗಿರುತ್ತದೆ" ಎಂದು ಪ್ರಸ್ತಾಪಿಸುತ್ತಾರೆ.[೨೧] ಹೆಣ್ಣಿನ ಮುಟ್ಟಿನ ರಕ್ತಕ್ಕೆ ಹೋಲಿಸಿ ಪ್ರಾಣಿಬಲಿಯನ್ನು ತಳಕು ಹಾಕಲು ಪ್ರಯತ್ನಿಸಿದ್ದಾರೆ. ಇದನ್ನು ಒಪ್ಪಲು ಒಂದು ಅವಕಾಶ ಇದೆ. ಏಕೆಂದರೆ ಪ್ರಜನನ ಶಕ್ತಿಯನ್ನು ಪಡೆದುಕೊಂಡಿರುವ ಹೆಣ್ಣು ಮಾತೃಸ್ವರೂಪಿಣಿಯಾಗಿರುವುದು ಇದೆ. ಇಂತಹ ಅಂಶಗಳೇ ಹೆಚ್ಚು ಮಹಿಳೆಯರಲ್ಲಿ ಪೂಜಾ ಭಾವನೆಯನ್ನು ಹೆಚ್ಚುಮಾಡಿ ಪೂಜೆಗೆ ಅನುವು ಮಾಡಿರಬೇಕು. ಹಾಗೂ ಪ್ರಾಣಿಬಲಿಗೆ ಹೆಚ್ಚು ಹರಕೆಗಳನ್ನು ಹೇಳಿಕೊಳ್ಳುವುದು ಇದೆ.

ಇಲ್ಲಿ ಪ್ರಧಾನವಾಗಿ ಮಾರಿರೋಗಗಳನ್ನು ದೇವತೆಗೆ ಆರೋಪಿಸಿ ಪೂಜಿಸುವುದು ವಾಡಿಕೆಯಾಗಿದೆ. 'ದೇಹಕ್ಕೂ ಮತ್ತು ಕಾಯಿಲೆಗಳಿಗೆ ನಿಕಟ ಸಂಬಂಧವಿದೆ. ಖಾಯಿಲೆಯನ್ನು ಅನುಭವಿಸದ ಪ್ರಾಣಿಯಿಲ್ಲ. ಚಿಕ್ಕಪುಟ್ಟ ಕಾಯಿಲೆಗಳಿಗೆ ಯಾವ ಹೆಚ್ಚಿನ ಅರ್ಥವನ್ನೂ ಕೊಡಲಿಲ್ಲ.

ಕ್ಷಿಪ್ತವಾದ ರೋಗಗಳ ಹಿಂದೆ ಚಿಲ್ಲರೆ ದೇವತೆಗಳ ಕೈಚಳಕವಿದೆ ಎಂಬ ಭಾವನೆ ಇದ್ದಿತ್ತು. ಇಂತಹ ರೋಗಗಳ ಸಂಖ್ಯೆ ಹೆಚ್ಚಾದಷ್ಟೂ ತದನುಗುಣವಾಗಿ ದೇವತೆಗಳ ಸಂಖ್ಯೆಯೂ ಹೆಚ್ಚಿತು. ಕಾಲರಾಗೆ ಒಂದು ದೇವತೆ ಅಥವಾ ಸಿಡುಬಿಗೆ ಇನ್ನೊಂದು ದೇವತೆ ಅಮ್ಮ ಪ್ಲೇಗಮ್ಮ, ಪ್ಲೇಗಿಗೆ ಪಿಳೇಕಮ್ಮ ಇವೆಲ್ಲಾ ನವೀನ ದೇವತೆಗಳ ಪ್ರಸಾದವಾದರೆ ಮನೋರೋಗಗಳು ದೇವತೆಗಳ ಸಾಕ್ಷಾತ್ಕಾರ ಸ್ವರೂಪ ಇಂತಹ ರೋಗಗಳು ತಮ್ಮ ಆವೇಶದಲ್ಲಿ ಮಾಡುವ ಕೆಲವು ಅಸಾಮಾನ್ಯ ಕೆಲಸಗಳು ಈ ನಂಬಿಕೆಗೆ ಮತ್ತಷ್ಟು ಪುಷ್ಟಿಕೊಟ್ಟಿದೆ ಎಂದು ತಿಳಿಸುತ್ತಾರೆ.[೩೨] "ಏಕೆಂದರೆ ಯಾವ ಸಾತ್ವಿಕ ದೈವಗಳಿಗೂ ಬಲಿ ನೀಡಿ ನೈವೇದ್ಯ ಅರ್ಪಿಸುವ ಪದ್ಧತಿ ಇಲ್ಲ. ಆದರೆ ಸ್ತ್ರೀ ದೈವಗಳಿಗೆ ಇದೆ. ಆದುದರಿಂದಲೇ ಇವುಗಳನ್ನು ಶಕ್ತಿ ದೈವ ಅಲ್ಲದೇ ಪುರುಷ ದೈವಗಳಿಗೂ ಕೂಡ ಬಲಿ ನೀಡುವ ಕ್ರಿಯೆ ಇದೆ. ಭಾರತದಂತಹ ಸಮಾಜದಲ್ಲಿ ಬಲಿ ನೀಡಿದರೂ ಅದನ್ನು ಉನ್ನತ ವರ್ಗದವರು ಉಪಯೋಗಿಸದೇ ಅಸ್ಪೃಶ್ಯರಿಗೆ ನೀಡುವರು. ಈ ಚರ್ಚೆಯನ್ನು ಮುಂದೆ ಬೆಳೆಸುತ್ತೇನೆ. ಈ ಪದ್ಧತಿ ಹಿಂದೆ ಜೀವ ಉಳಿಸುವ, ಊರನ್ನು ರಕ್ಷಿಸುವ, ಇಡೀ ಪ್ರಾಣಿಗಳನ್ನು ಅಭಿವೃದ್ಧಿಪಡಿಸುವ ತುಮುಲತೆ ಇದೆ. ಯಾಕೆಂದರೆ ಊರಿನ ಶಾಂತಿ ಹಾಗೂ ಅಲ್ಲಿ ನೆಲೆಸಿದಂತಹ ಜನರಿಗೆ ಯಾವುದೇ ಸಿಡುಬು, ಕಾಲರಾ, ಕಜ್ಜಿ, ಸೀತಾಳೆ, ಕೊಲೆಗಳು ಬರದೆ ಇರಲಿ ಅಂತ ಜೊತೆಗೆ ಅಕ್ಕಪಕ್ಕದವರಿಂದ ಯಾವುದೇ ತೊಂದರೆ ಬಾರದೆ ಇರಲಿ ಅಂತ ಈ ಪ್ರಾಣಿಬಲಿ ಪದ್ಧತಿಯನ್ನು ಆಚರಿಸುತ್ತಾ ಬರಲಾಗಿದೆ. ಇದು ಮೂಲವಾಗಿ ದ್ರಾವಿಡರಿಂದಲೆ ಈ ಕಾನ್ಸೆಪ್ಟ್ ಬಂದಿರುತ್ತದೆ" ಎಂದು ದ್ರಾವಿಡರಿಂದ ಬಂದ ಈ ಪ್ರಾಣಿಬಲಿಯು ಹೆಚ್ಚು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂದು ವಿಸ್ತಾರ ಸ್ವರೂಪವನ್ನು ಪಡೆದುಕೊಂಡಿರುವುದನ್ನು ಚರ್ಚೆ ಮಾಡುತ್ತಾರೆ.[೩೩]

ಈ ಮೂಲಕ ಸಂಶೋಧನೆ ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿರುವ ಆಚರಣೆಗಳನ್ನು ಸ್ಥೂಲವಾಗಿ ಗಮನಿಸಿ ಚರ್ಚೆಗೆ ಒಳಪಡಿಸಲಾಗಿದೆ. ಈ ಜಿಲ್ಲೆಯಾದ್ಯಂತ ನಡೆಯುವ ಆಚರಣೆಗಳಾದ ಬೇವುಡಿಗೆ, ಉರುಳುಸೇವೆ, ಕೂದಲು ತೆಗೆಯುವುದು, ಬೆತ್ತಲೆಸೇವೆ, ಫಲವತ್ತತೆ ಫಲವಾಗಿ ಹರಕೆಗಳನ್ನು ತಾರ್ಕಿಕವಾಗಿ ಅವಲೋಕಿಸುವುದು ಇದೆ. ಮೌಖಿಕವಾಗಿ ದೊರೆತ ಮಾಹಿತಿಗಳನ್ನು ಚರ್ಚೆಮಾಡುವುದು ಇದೆ. ಪ್ರಾಣಿಬಲಿಗೆ ಇರುವ ಮಹತ್ವ ಮುಖ್ಯವಾಗಿರುತ್ತದೆ. ಆಧುನಿಕ ಸಂದರ್ಭದಲ್ಲಿ ನಡೆಯುವ ಪ್ರಾಣಿಬಲಿಗಳ ಅಂಶಗಳು ಮುಂದಿನ ಪೀಳಿಗೆಗೆ ಆಕರ ಸಾಮಗ್ರಿಗಳಾಗುತ್ತವೆಂಬ ಭಾವನೆಯಿಂದ ಬಳ್ಳಾರಿ ಜಿಲ್ಲೆಯಲ್ಲಿ ನಡೆಯುವ ಪ್ರಾಣಿಬಲಿಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ.

೧.೪. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಬೇಕಾದ ಮಾಹಿತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ,

ವರ್ಗೀಕರಿಸಿ ವಿಶ್ಲೇಷಣೆಗೊಳಪಡಿಸಲಾಗಿದೆ(ಪ್ರಶ್ನಾವಳಿ, ಸಂದರ್ಶನ ಮತ್ತು ಅವಲೋಕನ ವಿಧಾನ). ಇನ್ನಿತರ ಮಾಹಿತಿಗಳನ್ನು ವೈಜ್ಞಾನಿಕ ವಿಧಾನಗಳಿಂದ ಸಂಗ್ರಹಿಸಲಾಗಿದೆ. ಅಂದರೆ ಕ್ಷೇತ್ರಕಾರ್ಯದ ಮಾಹಿತಿಯೇ ಪ್ರಾಥಮಿಕ ಆಕರವಾಗಿದ್ದು, ಇನ್ನುಳಿದಂತೆ ಆನುಷಂಗಿಕ ಆಕರಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಅಲ್ಲದೆ ಕರ್ನಾಟಕದ ಗ್ರಂಥಾಲಯಗಳಿಂದ ಪೂರಕವಾದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಈಗಾಗಲೇ ಬಲಿದಾನ ಕುರಿತಂತೆ ಸಂಗ್ರಹಗೊಂಡ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ. ನಂತರ ಬಲಿದಾನ ಕುರಿತಂತೆ ಬಳ್ಳಾರಿ ಜಿಲ್ಲೆಯನ್ನು ಕುರಿತಂತೆ ಇಲ್ಲಿಯವರೆಗೆ ನಡೆದ ಅಧ್ಯಯನಗಳನ್ನು ಅಭ್ಯಸಿಸಿ ಈ ಸಂಶೋಧನ ಪ್ರಬಂಧಕ್ಕೆ ಪೂರಕವಾದ ಒಂದು ಅಧ್ಯಯನ ವಿಧಾನವನ್ನು ರೂಪಿಸಿಕೊಳ್ಳಲಾಗಿದೆ. ಅಂತೆಯೇ ಬಲಿದಾನದ ಬಗ್ಗೆ ಈ ತನಕ ಸಂಗ್ರಹವಾಗದೇ ಇರುವ ಮತ್ತು ಮೌಖಿಕ ಕತೆ, ಗೀತೆಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಕ್ಷೇತ್ರಕಾರ್ಯವನ್ನು ಬಹುಮುಖಿ ದಾಖಲಾತಿಯ ಮೂಲಕ ಅಧ್ಯಯನ ಮಾಡಲಾಗಿದೆ. ಆ ನೆಲೆಯಲ್ಲಿ ಒಂದು ಪಠ್ಯದ ಬಹುಮುಖಿ ನೆಲೆಗಳನ್ನು ಗುರುತಿಸುವ ಬಹುಮುಖಿ ಪಠ್ಯ ಶೋಧದ ಅಧ್ಯಯನ ವಿಧಾನವನ್ನು ಈ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಜನಿಸಿದ ನನಗೆ ಈ ಪ್ರಾಂತ್ಯದ ಪರಿಚಯ ಇದ್ದು, ಪ್ರಾಣಿಬಲಿಗಳು ನನಗೆ ವಿಚಿತ್ರವೆನಿಸಿತು. ಆದುದರಿಂದ ಪ್ರಾಣಿಬಲಿಯ ಬಗ್ಗೆ ಅಧ್ಯಯನ ನಡೆಸಬೇಕಾದ ಅನಿವಾರ್ಯ ಹಾಗೂ ಕುತೂಹಲದ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಸಾಗುತ್ತದೆ.

೧.೫. ಅಧ್ಯಯನದ ಸ್ವರೂಪ

ಆಧುನಿಕ ಸಂದರ್ಭದಲ್ಲಿ ಹೊಸ ಹೊಸ ಸಿದ್ಧಾಂತಗಳು ಜಾನಪದದಲ್ಲಿ ರೂಪುಗೊಳ್ಳುತ್ತಿವೆ. ಜಾನಪದ ವಿದ್ವಾಂಸರ ಸಿದ್ಧಾಂತಗಳ ಮೇಲೆ ಬೆಳಕು ಚೆಲ್ಲುತ್ತಾ ಹೋಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಸೈದ್ಧಾಂತಿಕವಾಗಿ ಹೆಚ್ಚು ಮಹತ್ವವನ್ನು ಕೊಡಲಾಗಿದೆ. ಈ ಹಿನ್ನೆಲೆಯಲ್ಲಿ ಜಾನಪದ ಮೌಖಿಕ ಸಿದ್ಧಾಂತವನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆಚರಣೆಗಳು, ಸಂಪ್ರದಾಯಗಳು, ಆರಾಧನೆಗಳು, ಪೂಜೆ ಪುನಸ್ಕಾರಗಳು ಗಾದೆಗಳು ನಂಬಿಕೆಗಳು ಸಂಬಂಧಿಸಿದಂತೆ ನಿಗದಿಪಡಿಸಿದ ಸಿದ್ಧಾಂತಗಳಿವೆ. ಆದರೆ ದೇವತೆಗಳನ್ನು ಅವಲೋಕಿಸಲು ಸಿದ್ಧಮಾದರಿಗಳಿಲ್ಲ. "ಜಾನಪದ ಜೀವಂತಗೊಳಿಸಲು ಹೊಸ ಹೊಸ ಜೀವನದ ಮೌಲ್ಯಗಳನ್ನು ಜಾನಪದಕ್ಕೆ ಹಾಯಿಸಲು ಹೊಸ ಹೊಸ ಸಮಸ್ಯೆಗಳನ್ನು ಮುಕ್ತ ರೀತಿಯಲ್ಲಿ ಪರಿಚಯಿಸಿ, ಜನರನ್ನು ಜಾಗೃತಗೊಳಿಸಿ ಭಾರತೀಯ ಸಮಾಜ ಜೀವನದ ಬೇರೆ ಬೇರೆ ಮುಖಗಳನ್ನು ಪರಿಚಯಿಸಲು ಜಾನಪದ ಅಧ್ಯಯನ ತೀವ್ರಗೊಳಿಸಬೇಕಿದೆ."[೩೪]

ಪ್ರಸ್ತುತ ಸಂಶೋಧನಾ ಮಹಾಪ್ರಬಂಧವು ಪ್ರಮುಖವಾಗಿ ೫ ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ-ಒಂದು ಪ್ರಾದೇಶಿಕವಾಗಿ ನಿರ್ಮಾಣವಾಗಿರುವ ಜನಪದರ ಮಾನಸಿಕ ತುಮುಲುಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ. ನಾಗರಿಕತೆಯ ಮೂಲಕ ಅನಾಗರಿಕತೆಯನ್ನು ಹೊಡೆದುಹಾಕಲು ಓದು ಬರಹ ತಿಳುವಳಿಕೆಗಳು ಮೂಢನಂಬಿಕೆ, ಮೌಢ್ಯತೆ ಮುಂತಾದ ವಿಚಾರಗಳ ಬಗ್ಗೆ ಚರ್ಚೆಮಾಡಲಾಗಿದೆ. ಧಾರ್ಮಿಕ, ಸಾಂಸ್ಕೃತಿಕ, ಮಾನಸಿಕ ವಿಚಾರಗಳ ವಿಮರ್ಶೆಗಳನ್ನು ಪ್ರಾಣಿಬಲಿಯ ಉದ್ದೇಶ, ವ್ಯಾಪ್ತಿ ಎಂಬ ಹಿನ್ನೆಲೆಯಲ್ಲಿ ಗಮನಿಸುವುದು ಒಂದು ಬಗೆಯಾಗುತ್ತದೆ.

ಅಧ್ಯಾಯ-ಎರಡು ಪ್ರಾಣಿಬಲಿಯ ಹುಟ್ಟು ಮತ್ತು ಬೆಳವಣಿಗೆಗೆ ಪೂರಕವಾಗಿರುವ ಅಂಶಗಳನ್ನು ಚರ್ಚೆ ಮಾಡಲಾಗಿದೆ. ಪ್ರಾಣಿಬಲಿಯ ಚಾರಿತ್ರಿಕ ಹಿನ್ನೆಲೆಗಳ ಬಗ್ಗೆ ಪ್ರಸ್ತುತ ಅಧ್ಯಾಯದಲ್ಲಿ ಒಳಪಡಿಸಲಾಗಿದೆ. ಉಗ್ರದೇವತೆಯರಾದ ಕಾಳಿ, ಮಾರಿ, ಮಸಣಿ, ಚಂಡಿ, ಚಾಮುಂಡಿ, ದುರ್ಗಿ, ಮುಂತಾದ ದೇವತೆಗಳ ಮೇಲೆ ಇಟ್ಟಿರುವ ನಂಬಿಕೆಯ ಅನುಸಾರವಾಗಿ ಪ್ರಾಣಿಬಲಿಗಳು ನಡೆಯುತ್ತವೆ. ಈ ಮುಗ್ಧ ಪ್ರಾಣಿಗಳ ಮೇಲೆ ನಡೆಯುವ ಗದಾಪ್ರಯೋಗವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಜೀವವಧೆ, ನರಬಲಿ, ಪ್ರಾಣಿಬಲಿ ಹಿನ್ನೆಲೆಯಲ್ಲಿ ದೈವವನ್ನು ದಂಡಿಸುವ ಮಾರ್ಗಗಳನ್ನು ಗುರುತಿಸುವ ಪಯತ್ನ ಮಾಡಲಾಗಿದೆ. ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಪ್ರಾದೇಶಿಕವಾಗಿ, ಧಾರ್ಮಿಕವಾಗಿ ಜರಗುವ ಈ ಜಾತ್ರಾ ಮಹೋತ್ಸವದಲ್ಲಿ ಸೇರುವ ಜನಪದರ ಮಾನಸಿಕ ಸ್ಥೈರ್ಯವನ್ನು ಗುರುತಿಸುವುದು ಮಾನಸಿಕ ನೆಮ್ಮದಿಯನ್ನು ಕಂಡುಕೊಳ್ಳುವ ಸಲುವಾಗಿ ಮೂಕಪ್ರಾಣಿಗಳನ್ನು ಉಗ್ರದೇವತೆಗಳಿಗೆ ಅರ್ಪಿಸುವುದನ್ನು ಗಮನಿಸಲಾಗಿದೆ. ಪ್ರಾಣಿಬಲಿಯ ಪ್ರಕಾರಗಳು ಯಾವ ಯಾವ ಹಂತದಲ್ಲಿ ಬೆಳೆದುಕೊಂಡು ಬಂದಿದೆ ಎಂಬುದು ವಿವರಿಸಲಾಗಿದೆ. ಪ್ರಾಣಿಬಲಿಯ ಅರ್ಥ, ಪದನಿಷ್ಪತ್ತಿ, ನಂಬಿಕೆ, ಹರಕೆಗಳು, ಆಚರಣೆಯ ಉದ್ದೇಶಗಳನ್ನು ಗುರುತಿಸಲಾಗಿದೆ. ಆಯಾ ಜನಾಂಗಗಳ ಮನೋಧರ್ಮಗಳ ಅನುಗುಣವಾಗಿ ಮಾಹಿತಿಗಳನ್ನು ಸಂಗ್ರಹಿಸಿ ವಿವೇಚಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದಲ್ಲಿ ಬಳಕೆಯಾಗಿರುವ ಮಾಹಿತಿಗಳನ್ನು ಸಂಗ್ರಹಿಸಿ ವಿವರಿಸಲಾಗಿದೆ.

ಅಧ್ಯಾಯ-ಮೂರು ಜನಪದ ಆಚರಣೆಯಲ್ಲಿ ಪ್ರಾಣಿಬಲಿ ಪದ್ಧತಿ ಕುರಿತು ಮಾಹಿತಿಗಳನ್ನು ಸಂಗ್ರಹಿಸಿದ್ದೇನೆ. ಇಲ್ಲಿ ಪ್ರಧಾನವಾಗಿ ಮಾರಿಯಮ್ಮ, ಕಾಳಮ್ಮ, ಮಾಯಮ್ಮ, ದೊಡಮ್ಮ, ಮುಂತಾದ ದೇವತೆಗಳಿಗೆ ಪ್ರಾಣಿಬಲಿಗಳನ್ನು ನಡೆಯುವ ಸ್ಥಳ, ಗುಡಿ ಗೋಪುರಗಳ ವಿವರಗಳನ್ನು ಕಳೆಹಾಕಲಾಗಿದೆ. ಸಂಸ್ಕೃತಿಯ ಅಂಗವೆಂದು ಭಾವಿಸಿ ಜನಪದರ ಆಚರಣಾತ್ಮಕ ವಿವರಗಳನ್ನು ದಾಖಲು ಮಾಡಿ ವಿಮರ್ಶೆ ಮಾಡಲಾಗಿದೆ. ಬಳ್ಳಾರಿ ಜಿಲ್ಲೆಯ ಮಹತ್ವ.

ಐತಿಹಾಸಿಕತೆ, ಸಾಂಸ್ಕೃತಿಕ ಪ್ರತಿಫಲಗಳ ವಿಲೀನಗಳನ್ನು ಗುರುತಿಸಿ ವ್ಯಾಖ್ಯಾನಿಸಲಾಗಿದೆ. ಬಳ್ಳಾರಿ ಜಿಲ್ಲೆಯಾದ್ಯಂತ ಇರುವ ಏಳು ತಾಲೂಕುಗಳನ್ನು ಗುರುತಿಸಿ, ಪ್ರಧಾನವಾಗಿ ಪ್ರಾಣಿಬಲಿಗಳು ನಡೆಯುವ ದೇವತೆಗಳ ಸಂಪೂರ್ಣ ಮಾಹಿತಿಗಳನ್ನು ಕಲೆ ಹಾಕಲಾಗಿದೆ. ಸಾಂಸ್ಕೃತಿಕವಾಗಿ ಜೀವನಾವರ್ತನ ಕ್ರಮಗಳಾದ ಮೈನೆರೆಯುವುದು, ಮದುವೆ ಸಂಪ್ರದಾಯ, ನಾಮಕರಣ, ಮನೆಹಬ್ಬ, ಊರು ಹಬ್ಬ, ಮುಂತಾದ ಕ್ರಮಗಳಲ್ಲಿ ಪ್ರಾಣಿಬಲಿಗಳನ್ನು ಮಾಡುತ್ತಾರೆ. ಸಮುದಾಯಗಳ ಸೇರುವಿಕೆಯಿಂದ ಉದ್ಭವಿಸುವ ಸಂಸ್ಕೃತಿ ಚಿತ್ರಣವನ್ನು ಗುರುತುಮಾಡಲಾಗಿದೆ. ಅಲೆಮಾರಿ ಜೀವನದಲ್ಲಿರುವ ಅಲೆಮಾರಿಗಳನ್ನು ಮಾತನಾಡಿಸಿ ಅವರಿಂದ ಸಾಧ್ಯವಾದಷ್ಟು ಮಾಹಿತಿಗಳನ್ನು ಸಂಗ್ರಹಿಸಿ ಚರ್ಚೆ ಮಾಡಲಾಗಿದೆ. ಸುಮಾರು ೨೦೦ ಗ್ರಾಮಗಳಲ್ಲಿ ಪ್ರಾಣಿಬಲಿಗಳು ನಡೆಯುತ್ತವೆ. ರಾತ್ರಿ ಸಮಯದಲ್ಲಿ ನಡೆಯುವ ಪ್ರಾಣಿಬಲಿಗಳನ್ನು ದಾಖಲು ಮಾಡುವ ಸಲುವಾಗಿ ಸ್ನೇಹಿತರ ಸಹಾಯವನ್ನು ಪಡೆದುಕೊಳ್ಳಲಾಗಿದೆ. ಧಾರ್ಮಿಕ ವರ್ತನೆಯಲ್ಲಿ ನೆಲೆಯಾಗುವ ಪ್ರಾಣಿಬಲಿಗಳನ್ನು ತನ್ನದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡು ನಂಬಿಕೆಯ ಆವರಣದಲ್ಲಿ ಪೂಜೆ ಪುರಸ್ಕಾರಗಳೂ ನಡೆಯುತ್ತವೆ. ಸಾರ್ವಜನಿಕವಾಗಿ ಪ್ರಾಣಿಬಲಿಗಳು ನಡೆಯುವ ಸ್ಥಳಗಳನ್ನು ಗುರುತಿಸಲಾಗಿದೆ. ಪ್ರಾಣಿಬಲಿ ಮಾಡದಿದ್ದರೆ ದೇವಿ ಮುನಿಸಿಕೊಳ್ಳುತ್ತಾಳೆ. ಸಾರ್ವಜನಿಕವಾಗಿ ರೋಗ ರುಜಿನಗಳನ್ನು ಸೃಷ್ಟಿಸಿ ಮಾನವರನ್ನು ಸಂಹಾರ ಮಾಡುತ್ತಾಳೆಂಬ ಮೌಢ್ಯ ನಂಬಿಕೆಯ ಆಧಾರದಲ್ಲಿ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಬಲಿಪದ್ಧತಿಯಲ್ಲಿರುವ ನಂಬಿಕೆ ಮತ್ತು ನಿಷೇಧಗಳಿಗೆ ಸಂಬಂಧಿಸಿದಂತೆ ಸುಮಾರು ಗ್ರಾಮಗಳಲ್ಲಿ ಹಬ್ಬಕ್ಕೆ ಮುಹೂರ್ತ ಇದೆ ಎಂದರೆ ಗ್ರಾಮಗಳಲ್ಲಿ ಘಾಟು ವಾಸನೆ ಬರಬಾರದೆಂಬ ಕಟ್ಟುನಿಟ್ಟಾದ ನಿಷೇಧಗಳಿರುವುದು ಗುರುತಿಸಬಹುದು. ಸಂಬಂಧಗಳ ಹಿನ್ನೆಲೆಯಲ್ಲಿ ಹಬ್ಬ, ಜಾತ್ರೆಯಲ್ಲಿ ಸೇರಿದ ಸಮಸ್ತ ಜನಸಮೂಹಗಳಲ್ಲಿ ಭಕ್ತಿಭಾವವು ಹೇಗೆ ಮೂಡಿರುತ್ತದೆಂಬ ಭಕ್ತಿಗೂ ದೇವತೆಗಳಿಗೂ ಇರುವ ನಿಕಟ ಸಂಬಂಧವನ್ನು ಗುರುತಿಸುವ ಸಲುವಾಗಿ ಮಾಹಿತಿಗಳನ್ನು ಗುರುತಿಸಿದ್ದೇನೆ.

ಅಧ್ಯಾಯ-ನಾಲ್ಕು: ಸಂಸ್ಕೃತಿ, ನಾಡು, ನುಡಿ, ಆಚರಣೆ, ಆರಾಧನೆ, ಭಾಗವಾಗಿ ಪ್ರಾಣಿಬಲಿಗಳ ಮಹತ್ವವನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಸಾಮಾನ್ಯವಾಗಿ ಪ್ರಾಣಿಬಲಿಗೆ ಯಾವ ಶಕ್ತಿ ಪ್ರೇರಣೆ ಆ ಶಕ್ತಿಗೂ ಆರಾಧನೆಗೂ ಇರುವ ವ್ಯತ್ಯಾಸಗಳೇನು? ಪ್ರಾಣಿಬಲಿ ಮಾಡಲು ಅದರ ಪ್ರಭಾವವೇನು ಮುಂತಾದ ವಿಚಾರಗಳ ಬಗ್ಗೆ ದಾಖಲು ಮಾಡಲು ಪ್ರಯತ್ನಿಸಿದ್ದೇನೆ. ಸಾಮಾಜಿಕ ನೆಲೆಯಲ್ಲಿ ಪ್ರಾಣಿಬಲಿಯು ಎಷ್ಟರಮಟ್ಟಿಗೆ ಮಹತ್ವವನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ಚರ್ಚೆ ಮಾಡಲಾಗಿದೆ. ಸುದೀರ್ಘವಾಗಿ ಮಾರಿಯಮ್ಮ, ಕಾಳವ್ವ, ಮಾಯವ್ವ, ದುರುಗವ್ವ, ಮುಂತಾದ ದೇವತೆಗಳು ಕೆಳಜಾತಿಗೆ ಸೇರಿದವುಗಳಾಗಿವೆ. ಎಂದು ಜಾನಪದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇಲ್ಲಿ ಪ್ರಧಾನವಾಗಿ ಮಾಯವ್ವ, ಮಾರಿಯಮ್ಮ, ಮಾರಮ್ಮ, ದುರ್ಗಮ್ಮ ಮುಂತಾದ ಉಗ್ರದೇವತೆಗಳು ದಲಿತ ಜಾತಿಗೆ ಸಂಬಂಧಿಸಿದ ದೇವತೆಗಳಾಗಿವೆ. ಈ ದೇವತೆಗಳಿಗೆ ಪೂಜಾರಿಗಳು ದಲಿತರಾಗಿರುತ್ತಾರೆ.

ಇಲ್ಲಿ ಪ್ರಧಾನವಾಗಿ ದಲಿತರ ಆಹಾರಸಂಸ್ಕೃತಿಯ ಹಿನ್ನೆಲೆಯಲ್ಲಿ ಪ್ರಾಣಿಬಲಿಗಳನ್ನು ಮಾಡುವುದು ಗುರುತಿಸಬಹುದು. ದಲಿತರು ಪ್ರಾಣಿಗಳನ್ನು ದೇವರಿಗೆ ಅರ್ಪಿಸಿ ತಮ್ಮ ಹರಕೆಗಳನ್ನು ತೀರಿಸಿದ ನಂತರ ಸಾಮೂಹಿಕವಾಗಿ ಬಾಡೂಟವನ್ನು ಮಾಡುವುದರಿಂದ ಸಂಬಂಧಗಳು ಬೆಸೆಯುತ್ತವೆ. ಹೊಸ ಹೊಸ ವಿವಾಹಗಳು ನೆರವೇರಿ ಸುಖ ನೆಮ್ಮದಿ ಕರುಣಿಸುತ್ತದೆಂಬ ಭಾವನೆಯು ಸಮಾಜದಲ್ಲಿ ಮೂಡಿ ಹೊಸ ತಲೆಮಾರಿಗೆ ಒಂದು ನೆಮ್ಮದಿಯ ಸಂಕೇತವಾಗಿ ಭಾಸವಾಗುತ್ತದೆ. ಹಾಗೆಯೇ ಧಾರ್ಮಿಕವಾಗಿ ತಲೆದೋರುವ ಮಹತ್ವಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಸಮಾಜದ ಉನ್ನತೀಕರಣದ ಮೂಲಕ ಪ್ರಾಣಿಬಲಿಗಳು ಭಾರತೀಯ ಪರಂಪರೆಯಲ್ಲಿ ಎಷ್ಟರಮಟ್ಟಿಗೆ ಮಾನ್ಯವಾಗುತ್ತವೆಂದು ಗುರುತಿಸಲು ಪ್ರಯತ್ನಿಸಲಾಗಿದೆ. ಮೂಢ, ಅನಾಗರಿಕತೆಯ ನೆಲೆಯಲ್ಲಿ ನಿರ್ಮಾಣವಾಗಿರುವ ಪ್ರಾಣಿಬಲಿಗಳನ್ನು ತಡೆಗಟ್ಟಲು ಪ್ರಾಣಿದಯಾ ಸಂಘಗಳನ್ನು ಮಾತನಾಡಿಸಿ ಪ್ರಾಣಿಬಲಿಗೆ ಸೀಮಿತವಾಗಿ ಕೆಲವು ನಿದರ್ಶನಗಳನ್ನು ಗುರುತಿಸಲಾಗಿದೆ. ಭೀಕರ ಮಳೆ, ಪ್ರಕೃತಿ ವಿಕೋಪ, ಭೂಮಿಪ್ರಳಯ, ಸಾರ್ವತ್ರಿಕವಾಗಿ ರೋಗಗಳ ಸೃಷ್ಟಿಗೆ ಅನೇಕ ರೀತಿಯ ಕಾರಣಗಳನ್ನು ಕೊಡುಬಹುದಾದರೂ ಪ್ರಾಣಿಬಲಿಗಳನ್ನು ತಡೆಗಟ್ಟಲು ಇರುವ ನಿಯಮಗಳನ್ನು ಗುರುತಿಸಲಾಗಿದೆ. ಪ್ರಾದೇಶಿಕವಾಗಿ ತಲೆಎತ್ತಿರುವ ಪ್ರಾಣಿಬಲಿಗಳಲ್ಲಿ ಬದಲಾವಣೆಗಳಾಗುತ್ತಿರುವ ಸಂದರ್ಭವನ್ನು ಗುರುತಿಸಲಿಕ್ಕೆ ಪ್ರಯತ್ನಿಸಲಾಗಿದೆ. ಪ್ರಾಣಿ ಬದಲಿಗೆ ಬೂದುಕುಂಬಳಕಾಯಿ, ನಿಂಬೆಹಣ್ಣು, ಕೋಳಿಮೊಟ್ಟೆ, ಫಲಪುಷ್ಪಗಳನ್ನು ಸಮರ್ಪಿಸಿ ದೇವತೆಯನ್ನು ಸಂತೃಪ್ತಿಗೊಳಿಸುವುದು ಬಳ್ಳಾರಿ ಜಿಲ್ಲೆಯಾದ್ಯಂತ ಗುರುತಿಸಲಾಗಿದೆ. ಮಧ್ಯಮವರ್ಗದ ಸಮುದಾಯಗಳು ಹಾಗೂ ಕೆಳವರ್ಗದ ಸಮುದಾಯಗಳು ಪ್ರಾಣಿಗಳನ್ನು ಕ್ರಯಕ್ಕೆ ತೆಗೆದುಕೊಂಡು ಅವುಗಳನ್ನು ದೇವತೆಗೆ ಅರ್ಪಿಸುವುದು ಕಷ್ಟ ಕೆಲಸವಾಗಿರುವುದರಿಂದ, ಅವುಗಳ ಬೆಲೆಗಳು ಗಗನಕ್ಕೆ ಏರುತ್ತಿರುವುದರಿಂದ ಅವುಗಳನ್ನು ಕೊಂಡುಕೊಳ್ಳುವುದು ತುಂಬ ಕಷ್ಟದ ಕೆಲಸವಾಗಿದೆ. ಆದುದರಿಂದ ದೇವತೆಗೆ ಪ್ರೀತಿಪಾತ್ರವಾದ ಕೋಣನ ಬದಲಿಗೆ ಬೂದುಕುಂಬಳಕಾಯಿ, ಓಕುಳಿ ನೀರು ಸಮರ್ಪಿಸಿ ದೇವತೆಯ ಜಾತ್ರೆ ಮಾಡುವುದು ನಾಡಿನಾದ್ಯಂತ ಗುರುತುಮಾಡಲಾಗಿದೆ. ಕೋಣನನ್ನು ಕಡಿಯುವುದರಿಂದ ಉಗ್ರದೇವತೆ ತೃಪ್ತಿ ಪಡೆದುಕೊಳ್ಳುತ್ತಾಳೆಂಬ ಭಾವನೆ ಇದ್ದು, ಇದು ಅವೈಜ್ಞಾನಿಕವಾಗಿರುವುದು ಗುರುತಿಸಬಹುದಾಗಿದೆ. ಶಿರಸಿ ಮಾರಿಗುಡಿಯಲ್ಲಿ ಜೀವಂತ ಕೋಣನಿಂದ ಸಿರಂಜಿನ ಮೂಲಕ ರಕ್ತವನ್ನು ಹೊರತೆಗೆದು ಅನ್ನದ ಮುದ್ರೆಗೆ ಸಂಪ್ರೋಕ್ಷಿಸಿ ಚರುವಾಗಿ ತಯಾರು ಮಾಡುವುದನ್ನು ಗಮನಿಸಬಹುದು. ಕೋಣ ಮತ್ತು ಕುರಿಗಳಿಗೆ ತನ್ನದೇ ಆದ ಚರಿತ್ರೆಗಳಿವೆ. ಇವು ಮೂಕ ಪ್ರಾಣಿಗಳಷ್ಟೆ. ಅವುಗಳನ್ನು ಕಡಿಯುವುದು ನಿಲ್ಲಿಸಬೇಕಾಗುತ್ತದೆ. ಇಂತಹ ಮಾಹಿತಿಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ–ಐದು: ಬಲಿ ಆಚರಣೆಗಳು ಪ್ರಸ್ತುತ ಪಲ್ಲಟಗೊಂಡ ವಿಷಯವನ್ನು ಹಾಗೂ ಸ್ಥಿತ್ಯಂತರವನ್ನು ಕುರಿತು ಚರ್ಚಿಸುವ ಕಾರ್ಯ ಮಾಡಲಾಗಿದೆ.

ಅಧ್ಯಾಯ ಆರು: ಸಮಾರೋಪದಲ್ಲಿ ಅನಾದಿಕಾಲದಿಂದ ಬೆಳೆದುಕೊಂಡು ಬಂದ ಪ್ರಾಣಿಬಲಿಗಳು ಎಷ್ಟರಮಟ್ಟಿಗೆ ಮಾನವನ ಮನಸ್ಸಿನ ಮೇಲೆ ಪ್ರಭಾವ ಬೀರಿದೆ ಎಂದು ತಿಳಿದುಕೊಳ್ಳುವ ಸಲುವಾಗಿ ಪ್ರಾದೇಶಿಕವಾಗಿ ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿಕೊಂಡು ಅಧ್ಯಯನ ಮಾಡಲಾಗಿದೆ. ನಂಬಿಕೆ, ಹರಕೆ, ಆರಾಧನೆ, ಆಚರಣೆ, ಸಂಪ್ರದಾಯಗಳು, ಕಟ್ಟುಪಾಡುಗಳು, ಮಾಟ ಮಂತ್ರ, ವಾಮಾಚಾರಗಳು, ಕಂದಾಚಾರಗಳು, ಇವುಗಳಲ್ಲಿ ಪ್ರಾಣಿಗಳಿಗೆ ಹಿಂಸೆ ಮಾಡಿ ಅವುಗಳನ್ನು ಕಡಿಯುವುದು ತೀರಾ ಭಯಂಕರವಾಗಿರುವ ಸನ್ನಿವೇಶವನ್ನು ಗಮನಿಸುತ್ತೇವೆ. ಕೆಲವು ಕಡೆಗಳಲ್ಲಿ ಜಾತ್ರಾ ಮಹೋತ್ಸವಕ್ಕೆ ಪ್ರಾಣಿಗಳಿಂದ ಕಡಿದ ರಕ್ತವು ಹೆಪ್ಪುಗಟ್ಟಿ ನೊಣಗಳು ಮುತ್ತಿಕೊಂಡು ರೋಗರುಜಿನಗಳಿಗೆ ಆಸ್ಪದ ಕೊಟ್ಟಿರುವ ನಿದರ್ಶನಗಳು ಇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಣಿಗಳನ್ನು ದೇವತೆಗೆ ಅರ್ಪಿಸಿದ ನಂತರ ಅವುಗಳನ್ನು ಚಕ್ಕಡಿಯಲ್ಲಿ ಹೊತ್ತುಕೊಂಡು ಹೋಗುವ ಪದ್ಧತಿ, ಅವುಗಳನ್ನು ಛೇದಿಸಿ ಕತ್ತರಿಸುವ ರೀತಿ ತೀರಾ ಭಯಂಕರವಾಗಿರುವುದು ಕಾಣುತ್ತದೆ. ಇಂತಹ ಸನ್ನಿವೇಶಗಳನ್ನು ಕಾಣುವ ಗ್ರಾಮೀಣ ಪ್ರದೇಶದ ಸಣ್ಣ ಸಣ್ಣ ಮಕ್ಕಳ ಮನಸ್ಸಿನಲ್ಲಿ ಗಾಢವಾದ ಪ್ರಭಾವ ಭೀರುತ್ತದೆ. ಮುಂದೆ ಮಕ್ಕಳು ದೊಡ್ಡವರಾದ ನಂತರ ಪ್ರಾಣಿಬಲಿಗಳನ್ನು ದೇವತೆಗೆ ಅರ್ಪಿಸುವ ಪದ್ಧತಿಯನ್ನು ಕಂಡುಕೊಳ್ಳುತ್ತಾರೆ. ಇದು ನಿಲ್ಲಬೇಕು. ಪ್ರಾಣಿಗಳನ್ನು ಪಾಲಿಸುವ, ಪೋಷಿಸುವ, ಅವುಗಳಿಂದ ಹೈನುಗಾರಿಕೆ ಮಾಡುವ ಪದ್ಧತಿಯನ್ನು ನಿರ್ಮಾಣ ಮಾಡಿಕೊಳ್ಳಬೇಕು. ಸರ್ಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕಾಗುತ್ತದೆ. ಉಗ್ರದೇವತೆಯರಾದ ಮಾರಮ್ಮ, ಕಾಳಮ್ಮ, ದುರ್ಗಮ್ಮ, ಮಾಯಮ್ಮ, ದೊಡ್ಡಮ್ಮ, ಮುಂತಾದ ದೇವತೆಗಳು ಸೌಮ್ಯಸ್ವಭಾವದಿಂದ ಅವುಗಳನ್ನು ಅರ್ಪಿಸಿದರೆ ಸಾಕಾಗುತ್ತದೆ. ಪ್ರಪಂಚದಾದ್ಯಂತ ನರಬಲಿಗಳು ನಡೆಯುತ್ತಿತ್ತು ಎಂದು ಅನೇಕ ಸಂಶೋಧನಾ ಬರಹಗಳು, ಸಂಶೋಧನಾ ವಿದ್ವಾಂಸರು ಹೇಳುತ್ತಾರೆ. ಆದರೆ ಈ ಪ್ರಾಣಿಬಲಿಗಳಲ್ಲಿ ಸ್ಥಿತ್ಯಂತರಗಳನ್ನು ಕಾಯ್ದುಕೊಳ್ಳಬೇಕಾಗಿದೆ. ಇಂದು ನಾವು ರಾಕೆಟ್ ಯುಗದಲ್ಲಿ, ಮೊಬೈಲ್ ಯುಗದಲ್ಲಿದ್ದೇವೆ. ಮಾಂಸವನ್ನು ಸ್ವೀಕರಿಸುವ ಸಮುದಾಯಗಳು ಕುರಿ, ಕೋಳಿ, ಮೇಕೆ, ಹಂದಿ ಮುಂತಾದ ಪ್ರಾಣಿಗಳನ್ನು ಸಾಕಿ, ಸಲುಹಿ, ಪೋಷಿಸಿ, ಪಾಲಿಸಿ ಅವುಗಳನ್ನು ಆಹಾರವಾಗಿ ಸ್ವೀಕರಿಸುವ ಮನೋಭಾವವನ್ನು ಪಡೆದುಕೊಳ್ಳಬೇಕಾಗುತ್ತದೆ. ಕೊನೆಯದಾಗಿ ಅನುಬಂಧಗಳನ್ನು ನೀಡಿ ಮಾಹಿತಿದಾರರ ವಿಚಾರಗಳನ್ನು ವಿವರಿಸಲಾಗಿದೆ. ಆಕರಗ್ರಂಥಗಳನ್ನು ಅಕಾರಾದಿಯಾಗಿ ನೀಡಲಾಗಿದೆ. ಮಾಹಿತಿದಾರರ ಸಂಪೂರ್ಣ ವಿವರಗಳನ್ನು ನೀಡಲಾಗಿದೆ. ಪ್ರಾಣಿಬಲಿಗೆ ಸಂಬಂಧಿಸಿದಂತೆ ಹಾಡು, ಪದ್ಯಗಳನ್ನು ಅನುಬಂಧದಲ್ಲಿ ದಾಖಲು ಮಾಡಲಾಗಿದೆ. ಬಳ್ಳಾರಿ ಜಿಲ್ಲೆಗೆ

ಸಂಬಂಧಿಸಿದಂತೆ ನಕ್ಷೆಗಳು, ರೇಖಾಚಿತ್ರಗಳನ್ನು ನೀಡಲಾಗಿದೆ. ಯಾವ ಯಾವ ದೇವಸ್ಥಾನದಲ್ಲಿ, ಯಾವ ಯಾವ ಗುಡಿಗಳಲ್ಲಿ, ಯಾವ ಯಾವ ಸಂದರ್ಭದಲ್ಲಿ ಜಾತ್ರೆ, ಮಹೋತ್ಸವಗಳು, ವಾರ್ಷಿಕಾಚರಣೆಗಳು ನಡೆಯುತ್ತವೆ. ಅವುಗಳನ್ನು ಪಟ್ಟಿ ಮಾಡಿ ಅಲ್ಲಿ ನಡೆಯುವ ಪ್ರಾಣಿಬಲಿಗಳ ಛಾಯಾಚಿತ್ರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಕ್ಷೇತ್ರಕಾರ್ಯ ಮಾಡಿದ ಸ್ಥಳಗಳನ್ನು ಪಟ್ಟಿ ಮಾಡಿ ಅನುಬಂಧದಲ್ಲಿ ನೀಡಲಾಗಿದೆ.

ಜಾನಪದ ಸಿದ್ಧಾಂತಗಳ ಮೌಖಿಕ ಸಿದ್ಧಾಂತ, ಮೌಖಿಕ ಸಾಹಿತ್ಯ ಎಂದು ವಿಂಗಡಿಸಿಕೊಳ್ಳಬೇಕಾಗುತ್ತದೆ. ಮೌಖಿಕ ಸಾಹಿತ್ಯದಲ್ಲಿ, ಭೌತಿಕ ಸಂಸ್ಕೃತಿ, ಆಚರಣೆ, ಸಂಪ್ರದಾಯ ಎಂದಾಗಿ ವಿಂಗಡಿಸಿ ಸಂಶೋಧನೆ ಮಾಡುವುದಿದೆ. ಜನಪದ ಸಾಹಿತ್ಯ ಪರಂಪರೆ ಒಂದು ವಿಶಿಷ್ಟವಾಗಿದ್ದು ಸಾಂಸ್ಕೃತಿಕ ಅನನ್ಯತೆಯನ್ನು ಪಡೆದುಕೊಂಡಿರುವ ಈ ಜಾನಪದ ಸಾಹಿತ್ಯ ವ್ಯಕ್ತಿಗತ ಅಲ್ಲದೇ ಸಮಷ್ಟಿ ನೆಲೆಯನ್ನು ಪಡೆದುಕೊಳ್ಳುತ್ತದೆ.

ಪ್ರಾದೇಶಿಕವಾಗಿ ಆಚರಣೆ, ಹಬ್ಬ ಹರಿದಿನಗಳ ಮೇಲೆ ಅಧ್ಯಯನ ನಡೆಸಬೇಕಾದರೆ ಯಾವುದೇ ಸಿದ್ಧ ಮಾದರಿಗಳಿರುವುದಿಲ್ಲ. ವ್ಯಾಪಕವಾದ ಕ್ಷೇತ್ರಕಾರ್ಯ ಬಹಳ ಮುಖ್ಯವಾಗುತ್ತವೆ. ಇಂತಹ ಮಾದರಿಗಳನ್ನು ಅನುಸರಿಸಿ ಸಂಶೋಧನೆ ನಡೆಸಬೇಕಾಗುತ್ತದೆ. ಒಂದು ಪ್ರದೇಶದ ಆಚರಣೆ, ಸಮೂಹ, ಪರಿಸರದ ಹಿನ್ನೆಲೆ, ಆ ಪ್ರದೇಶದ ಸಂಸ್ಕೃತಿಗೆ ಜೀವನದ ವಿಶಿಷ್ಟತೆಗಳಿರುತ್ತವೆ. ಈ ಹಿನ್ನೆಲೆಯಲ್ಲಿ ಸಮಾಜ ಸ್ವಸ್ಥವಾಗಲು ವಿಭಿನ್ನ ರೀತಿಯ ಆಚರಣೆ–ಆರಾಧನೆಗಳು ರೂಪ ತಾಳಿ ರೂಢಿಗೆ ಬಂದಿರುವುದನ್ನು ಗುರುತಿಸಬಹುದು. ಈ ಮೂಲಕ ಬಳ್ಳಾರಿ ಜಿಲ್ಲೆಯನ್ನು ಕ್ಷೇತ್ರ ವ್ಯಾಪ್ತಿಯನ್ನಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ. "ಜಾನಪದ ಕ್ಷೇತ್ರಕಾರ್ಯ ವ್ಯಾಪ್ತಿ ತುಂಬಾ ವಿಸ್ತಾರವಾದದು. ಅದಕ್ಕೆ ಮೊದಲು ಕೊನೆ ಎಂಬುದಿಲ್ಲ. ಜಾನಪದ ಜನಪದರ ಪರಂಪರಾಗತ ಬದುಕು ಮತ್ತು ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡುತ್ತದೆ. ವಾಸ್ತವವಾಗಿ ಜಾನಪದವಿಲ್ಲದ ಜನಪದ ಗುಂಪುಗಳೇ ಇಲ್ಲ. ಒಂದು ದೇಶದಲ್ಲಿ ಸಾವಿರಾರು ಜನಪದ ಗುಂಪುಗಳಿರುತ್ತವೆ. ಈ ಜನಪದದಷ್ಟು ಜಾನಪದ ಕೂಡ ವಿಭಿನ್ನ ನಾಗರಿಕತೆಯ ಒತ್ತಡದಿಂದಾಗಿ ಆಗುವ ಸಾಮಾಜಿಕ ಪರಿವರ್ತನೆಯು ಜಾನಪದವನ್ನು ಮೂಲೆಗುಂಪಾಗುತ್ತಿರುವುದರಿಂದ ಜಾನಪದ ಕ್ಷೇತ್ರಕಾರ್ಯ ತ್ವರಿತಗತಿಯಾಗಿ ಆಗಬೇಕಾಗಿದೆ."[೩೩]

ಪ್ರಾಣಿಬಲಿಗೆ ಸಂಬಂಧಿಸಿದಂತೆ ಪ್ರಾಣಿ–ಪ್ರಾಣಿಬಲಿಯ ಉದ್ದೇಶ, ಸ್ವರೂಪ ಅದರ ಅವಶ್ಯಕತೆಯ ಬಗ್ಗೆ ಸ್ಥಳೀಯವಾಗಿ ನಿರ್ಮಾಣವಾಗಿರುವ ದಂತಪುರಾಣ, ಸ್ಥಳಪುರಾಣ, ಸ್ಥಳಮಹಾತ್ಮೆ ಮುಂತಾದವುಗಳನ್ನು ಚರ್ಚೆ ಮಾಡಲಾಗಿದೆ. ಪ್ರಾಣಿಬಲಿಯ ಕ್ರಿಯೆಯ ಆಚರಣೆಯಲ್ಲಿ ಪಾಲ್ಗೊಳ್ಳುವ ಸಮುದಾಯಗಳ ಸಂಸ್ಕೃತಿ, ಭಾಷೆ, ಆಚಾರ ವಿಚಾರ, ವೈರುಧ್ಯಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ. ವಿಭಿನ್ನ ಜಾತಿ ಸಮುದಾಯಗಳ ಜನರಿಂದ ಮಾಹಿತಿಗಳನ್ನು ಸಂಗ್ರಹ ಮಾಡಲಾಗಿದೆ. ಈ ಪ್ರಕಾರವಾಗಿ ಸಂಗ್ರಹಿಸಿದ ಮಾಹಿತಿಗಳನ್ನು

ವಿಂಗಡಿಸಿಕೊಂಡು ವಿಮರ್ಶೆ ಮಾಡಲಾಗಿದೆ. ಅಧ್ಯಯನಗಳಿಗೆ ತಕ್ಕ ರೀತಿಯಲ್ಲಿ ವಿಂಗಡಿಸಿಕೊಂಡು ಚರ್ಚೆಮಾಡಲಾಗಿದೆ. ಜನಪದ ಸಾಹಿತ್ಯದಲ್ಲಿ ಪ್ರಾಣಿಬಲಿ ಒಂದು ಕುತೂಹಲವಾದ ಸಂಗತಿ. ಅದಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿರುವ ಏಳು ತಾಲೂಕುಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಆಯ್ಕೆ ಮಾಡಿಕೊಂಡ ಬೇರೆ ಬೇರೆ ಕ್ಷೇತ್ರಗಳ ಯಾವುದೇ ವಿಷಯಗಳು ಹೊರಗುಳಿಯದಂತೆ ಎಚ್ಚರ ವಹಿಸಿದ್ದೇನೆ. ಒಂದು ರೀತಿಯಲ್ಲಿ ಹೊರಗುಳಿದರೆ ಸಂಶೋಧನಾ ಅಧ್ಯಯನ ಸ್ವಲ್ಪ ಮಟ್ಟಿಗೆ ಅಪೂರ್ಣ ವೆನಿಸುತ್ತದೆ ಎಂಬ ಭಾವನೆಯಿಂದ ಒಂದಲ್ಲ, ಎರಡು, ಮೂರು, ನಾಲ್ಕು, ಬಾರಿ ಪ್ರತಿಯೊಂದು ಕ್ಷೇತ್ರಕ್ಕೆ ಭೇಟಿ ನೀಡಿ, ಸಂದರ್ಶಿಸಿ, ಪ್ರತಿ ಜಾತಿ–ವರ್ಗದವರೊಡನೆ ಬೆರೆತು, ಚರ್ಚಿಸಿ, ವಿವಿಧ ನೆಲೆಗಳಿಂದ ಸಮಗ್ರ ವಿಷಯಗಳನ್ನು ಸಂಗ್ರಹಿಸಿದ್ದೇನೆ. ವೈಜ್ಞಾನಿಕ ದೃಷ್ಟಿಕೋನದಿಂದ ಸಂಗ್ರಹಿಸಿದ ವಿಷಯವನ್ನು ಅದರ ಪ್ರಾದೇಶಿಕ ವಿಶಾಲತೆ, ವೈವಿಧ್ಯತೆಯಲ್ಲೂ ಅಧ್ಯಯನಗಳ ಅನುಗುಣವಾಗಿ ಸಂಗ್ರಹಿಸಲಾಗಿದೆ. ಪ್ರಾಮಾಣಿಕವಾಗಿ ಅವುಗಳನ್ನು ವಿಮರ್ಶೆ, ವಿವೇಚನೆ, ಚರ್ಚೆ ಮಾಡಲಾಗಿದೆ. ಕ್ಷೇತ್ರಕಾರ್ಯದಿಂದ ಪ್ರಕಟವಾಗುವ ವಿಷಯಗಳ ಸತ್ಯಾಸತ್ಯತೆಗಳನ್ನು ತಿಳಿದುಕೊಳ್ಳುವ ಸಲುವಾಗಿ ತೌಲನಿಕವಾಗಿ ವಿವರಗಳನ್ನು ಸಂಗ್ರಹಿಸಲಾಗಿದೆ. ತೀರಾ ಅವಶ್ಯವೆನಿಸಿದ ವಿಭಾಗದಲ್ಲಿ ವ್ಯಾಖ್ಯಾನಾತ್ಮಕ ವಿಧಾನವನ್ನು ಅನುಸರಿಸಲಾಗಿದೆ. ಸಂಶೋಧನಾ ಅಧ್ಯಯನದ ಗುಣನಿಷ್ಠತೆ, ರೂಪನಿಷ್ಠತೆಗೆ ಚ್ಯುತಿಯಾಗದಂತೆ ಎಚ್ಚರ ವಹಿಸಲಾಗಿದೆ.

ಜಾನಪದ ಸಾಹಿತ್ಯ ಪರಂಪರೆಯಲ್ಲಿ ಕ್ಷೇತ್ರಕಾರ್ಯಕ್ಕೆ ಹೆಚ್ಚು ಮಹತ್ವ ಇದೆ. ಮಾಹಿತಿದಾರ ಪರಿಚಯ, ಕ್ಷೇತ್ರ ಪರಿಚಯ, ಕ್ಷೇತ್ರದ ಅಭಿವೃದ್ಧಿ, ಕ್ಷೇತ್ರದ ಏಳುಬೀಳುಗಳ ಮಹತ್ವ ಮುಂತಾದವುಗಳನ್ನು ಗಮನಿಸಬಹುದು. ಕ್ಷೇತ್ರಕಾರ್ಯ ಮಾಡುವಾಗ ಅನುಭವಿಸಿದ ಕಷ್ಟ ಕಾರ್ಪಣ್ಯಗಳಿಗೆ ಮನಸ್ಸನ್ನು ಒಗ್ಗಿಸಿಕೊಳ್ಳಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ಸಂಶೋಧನಕಾರ ಕ್ಷೇತ್ರಕ್ಕೆ ಹೋಗುವಾಗ ಪ್ರಾದೇಶಿಕವಾಗಿ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಪ್ರಸ್ತುತ ಸಂಶೋಧನೆಯ ಸಂದರ್ಭದಲ್ಲಿ ಪ್ರಾಣಿಬಲಿಗೆ, ರಕ್ತ ತರ್ಪಣಕ್ಕೆ ಸಂಬಂಧಿಸಿದಂತೆ ಪ್ರಾಣಿಬಲಿಗಳು ನಡೆಯಬಾರದು ಎಂದು ಕಟ್ಟುನಿಟ್ಟಿನ ಕಾನೂನು ಇದೆ. ಇಂತಹ ಪರಿಸ್ಥಿತಿಯಲ್ಲಿ ಗ್ರಾಮದೈವಗಳಿಗೆ ಸಾಕುಪ್ರಾಣಿಗಳನ್ನು ಬಲಿ ಕೊಡುವ ವಿವರಗಳನ್ನು ಸಂಗ್ರಹಿಸುವುದು ತುಂಬಾ ಕಷ್ಟದ ಕೆಲಸ. ಪ್ರಾಣಿಬಲಿಗಳು ರಾತ್ರಿ ಸಮಯದಲ್ಲಿ ನಡೆಯುವುದರಿಂದ ನಿಗೂಢವಾದ ಪ್ರದೇಶಗಳಿಗೆ ತೆರಳಬೇಕಾದ ಅನಿವಾರ್ಯ ಒದಗಿಬಂದಿದೆ.

ಕೆಲವು ಸಮುದಾಯದವರು ಪ್ರಾಣಿಬಲಿಗೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸಲು ಹಿಂದು ಮುಂದು ನೋಡಿದ್ದಾರೆ. ಪ್ರಾಣಿಬಲಿಗೆ ಬಳಸುವ ಖಡ್ಗ ಮುಂತಾದ ಬಲಿಯ ಆಯುಧಗಳ ಛಾಯಾಚಿತ್ರ ತೆಗೆಯಲು ಕೂಡ ಆಸ್ಪದ ಕೊಡಲಿಲ್ಲ. ಕೆಲವು ಮಾಹಿತಿಗಳನ್ನು

ನೀಡಲು ಹಿಂಜರಿದಿದ್ದಾರೆ. ನನ್ನನ್ನು ನೋಡಿ ಟಿ.ವಿ.ರಿಪೋರ್ಟರ್, ಕ್ರೈಂ ಬ್ರಾಂಚ್‌ನವರು, ಸರ್ಕಾರಿ ಪ್ರತಿನಿಧಿಯೆಂದು ಭಾವಿಸಿದ್ದಾರೆ. ಅಂತಹ ಸಂದರ್ಭದಲ್ಲಿ ಅವರಿಗೆ ತಿಳಿಹೇಳಬೇಕಾದ ಪರಿಸ್ಥಿತಿ ಉಂಟಾಗಿದೆ. ಅದರಲ್ಲಿ ನನ್ನ ಪರಿಚಯ ಮಾಡಿಕೊಂಡು ಪ್ರಾಣಿಬಲಿಯ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಹಬ್ಬಗಳಲ್ಲಿ ಸೇರುವ ನೂರರು ಜನಪದರನ್ನು ಸಂದರ್ಶನ ಮಾಡಿ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಜಾತ್ರೆಯ ಸಂದರ್ಭಲ್ಲಿ ಒಂದೇ ತೆರನಾದ ಜನರು ಬರುವುದಿಲ್ಲ. ಬೇರೆ ಬೇರೆ ಊರುಗಳಿಂದ ಬಂದ ಜನರನ್ನು ಮತ್ತು ಸಂಬಂಧಿಕರನ್ನು ಸಂದರ್ಶನ ಮಾಡಲಾಗಿದೆ.

ಆರಾಧನಾ ಸಂದರ್ಭದಲ್ಲಿ ಪಾಲ್ಗೊಂಡ ಸಮುದಾಯದವರ ಆಚರಣಾ ಪದ್ಧತಿ, ಆಹಾರ ಪದ್ಧತಿ, ಭಾಷೆ, ಪ್ರಾಣಿಗಳಿಗೆ ಮಾಡುವ ಅಲಂಕಾರಗಳು, ಬಲಿ ಕೊಡುವ ಸಂದರ್ಭಗಳು, ಬಲಿಗೆ ಸಂಬಂಧಿಸಿದ ಆಯುಧಗಳು, ಬಲಿ ಕೆಲಸದಲ್ಲಿ ಪಾಲ್ಗೊಳ್ಳುವ ಸಮುದಾಯಗಳಿಂದ ಹಲವು ವಿವರಗಳನ್ನು ಪಡೆಯಲಾಗಿದೆ. ಕ್ಷೇತ್ರಕಾರ್ಯ ಮಾಡುವ ಅನುಭವವೇ ವಿಭಿನ್ನ ರೀತಿಯಲ್ಲಿರುತ್ತದೆ. ಅಧ್ಯಯನದಲ್ಲಿ ಎದುರಾದ ತೊಂದರೆಗಳಿಗೆ ಪರಿಹಾರ ಕಂಡುಕೊಳ್ಳಲು ಕ್ಷೇತ್ರಕಾರ್ಯ ಸಹಕಾರಿಯಾಗುತ್ತದೆ ಹಾಗೂ ಮುಂದಿನ ಅಧ್ಯಯನಗಳಿಗೆ ಪೂರಕವಾಗುತ್ತದೆ.

ಆಧುನಿಕ ಸಲಕರಣಗಳಾದ ಕ್ಯಾಮರ, ಟೇಪ್‌ರೆಕಾರ್ಡರ್, ವಿಡಿಯೋ ಚಿತ್ರೀಕರಣಗಳನ್ನು ಬಳಸಿಕೊಂಡು ಮಾಹಿತಿಗಳನ್ನು ಸಂಗ್ರಹ ಮಾಡಲಾಗಿದೆ. 'ಉಸಿರಾಡುವ ಪ್ರಾಣಿಗಳ ದೇಹ ರಚನೆಗೂ ಬಲಿದಾನದ ನಂತರ ಪ್ರಾಣಿಗಳ ದೇಹದ ರಚನೆಗಳ' ಬಗ್ಗೆ ಇರುವ ವ್ಯತ್ಯಾಸಗಳನ್ನು ಗ್ರಹಿಸುವ ಸಲುವಾಗಿ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ದೇವಸ್ಥಾನಗಳ ರಚನೆಗಳು, ಪಾರಂಪರಿಕ ಗುಡಿಗೋಪುರಗಳ ವಿನ್ಯಾಸ, ಪೂಜಾ ಪರಿಕರಗಳು, ಕೃಷಿಸಂಬಂಧಿ ವಸ್ತುಗಳು, ಮನೆಯ ನಿರ್ಮಾಣಕ್ಕೆ ಸಲಕರಣೆಗಳು, ದೇವರುಗಳಿಗೆ ಧರಿಸುವ ಆಭರಣಗಳು, ಬಲಿಯ ಆಯುಧಗಳು ಮುಂತಾದವುಗಳನ್ನು ಸಂಗ್ರಹಿಸಲಾಗಿದೆ. ಸಾಮಾನ್ಯವಾಗಿ ಜೀವನಾವರ್ತ, ವಾರ್ಷಿಕಾವರ್ತನ ಆಚರಣೆಗಳಲ್ಲಿ ನಡೆಯುವ ಪ್ರಾಣಿಬಲಿಗಳನ್ನು ಹೆಚ್ಚಾಗಿ ಗ್ರಹಿಸಲಾಗಿದೆ.

ಗ್ರಾಮದೈವಗಳ ಛಾಯಾಚಿತ್ರಗಳು, ರೇಖಾಚಿತ್ರಗಳನ್ನು ಬಿಡಿಸಲಾಗಿದೆ. ಕೆಲವು ಛಾಯಾಚಿತ್ರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಮಾಹಿತಿದಾರರ ವಿವರಗಳು, ಆರಾಧನೆಗೆ ಆಚರಣೆಗೆ ಸಂಬಂಧಿಸಿದಂತೆ ಕತೆ, ಚುಟುಕಗಳು, ಧ್ವನಿಮುದ್ರಣಗಳು, ಛಾಯಾಚಿತ್ರಗಳನ್ನು ಅಧ್ಯಯನಗಳಲ್ಲಿ ಬಳಸಿಕೊಳ್ಳಲಾಗಿದೆ. ವಾರ್ಷಿಕವಾಗಿ ನಡೆಯುವ ಪ್ರಾಣಿಬಲಿಗಳಲ್ಲಿ ಬೇರೆ ಬೇರೆ ಪ್ರದೇಶಗಳಿಂದ ಬಂದು ನೇರವಾಗಿ ಸೇರುವ ವಕ್ತೃಗಳ ಅನುಭವಗಳನ್ನು ಸಂಗ್ರಹಿಸಲಾಗಿದೆ.

ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ದಿನಪತ್ರಿಕೆಗಳು, ವಾರಪತ್ರಿಕೆಗಳು, ಮಾಸಪತ್ರಿಕೆಗಳು, ಬಿಡಿ ಬಿಡಿ ಲೇಖನಗಳು, ಸಂಶೋಧನಾ ಲೇಖನಗಳು, ವಾರ್ಷಿಕ ಸಂಚಿಕೆಯ ಲೇಖನಗಳು, ಜಾನಪದ ವಿದ್ವಾಂಸರು ಬರೆದಿರುವ ಗ್ರಂಥಗಳು, ಅವರ ವಿಮರ್ಶೆಗಳು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಹೆಚ್ಚು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಜಿಲ್ಲೆಯಾದ್ಯಂತ ಸಾಂಸ್ಕೃತಿಕ ಗ್ರಂಥಗಳನ್ನು, ಐತಿಹಾಸಿಕ ಗ್ರಂಥಗಳನ್ನು, ಗೆಜೆಟಿಯರ್ಸ್, ಸ್ಥಳೀಯ ಕತೆ, ಪುರಾಣ, ಒಗಟು, ಐತಿಹ್ಯ, ಗಾದೆ ಮುಂತಾದವುಗಳನ್ನು ಅಧ್ಯಯನಕ್ಕೆ ಸಂಗ್ರಹಿಸಿ ಬಳಸಿಕೊಳ್ಳಲಾಗಿದೆ. ಪ್ರಾಣಿಬಲಿಗೆ ಸಂಬಂಧಿಸಿದಂತೆ ಸ್ಥಳೀಯವಾಗಿ ಬಳಕೆಯಲ್ಲಿರುವ ಮಾರಮ್ಮ ಪುರಾಣಕತೆಯನ್ನು ಪ್ರಾಣಿಗಳಿಗೆ ಆರೋಪಿಸಿ ಮಾರಮ್ಮ ಗಂಡನಾಗಿ ಕೋಣನ ರೂಪದಲ್ಲಿ ಬಲಿ ತೆಗೆದುಕೊಂಡರೆ, ಮಾರಮ್ಮನ ಸಂತಾನ ಮಕ್ಕಳ ರೂಪದಲ್ಲಿ ಕುರಿ-ಆಡುಗಳನ್ನು ಬಲಿ ತೆಗೆದುಕೊಳ್ಳುತ್ತದೆ ಎಂದು ಜನಪದರು ಭಾವಿಸುತ್ತಾರೆ. ಶಿರಸಿ ಮಾರಿಕಾಂಬಾ ದೇವಸ್ಥಾನದಲ್ಲಿ ಜೀವಂತ ಕೋಣವನ್ನು ಕಟ್ಟಿರುವುದು ಈಗಲೂ ನೋಡಬಹುದು.

ಎಚ್. ನರಸಿಂಹಯ್ಯನವರ ಮಾತುಗಳನ್ನು ಗಮನಿಸಬಹುದು. "ದೇವತೆಗಳಿಗೆ ಕೋಪ ಬಂದಾಗ ಸಮಾಧಾನ ಪಡಿಸಲು ಉಪಯೋಗಿಸುವ ಮಾರ್ಗಗಳನ್ನೇ ಕುಪಿತ ದೇವತೆಗಳನ್ನು ಸಂತುಷ್ಟರನ್ನಾಗಿ ಮಾಡಲು ಉಪಯೋಗಿಸುವುದು ಸಹಜ. ದೇವರು ಅತಿಮಾನುಷ, ಮನುಷ್ಯನಿಗೆ ಯಾವುದು ಪ್ರಿಯವೋ ಅದೇ ದೇವರಿಗೂ ಇಷ್ಟ. ಕೋಳಿಯಾಗಬಹುದು ಅಥವಾ ಕೋಡುಬಳೆಯಾಗ ಬಹುದು. ಇನ್ನೂ ಹಲವು ಪ್ರಾಣಿಗಳು ಪೂಜಾ ಸಾಮಗ್ರಿಗಳೇ ಆಗಿವೆ. ನರಬಲಿ ಅತ್ಯಂತ ಶ್ರೇಷ್ಠ ಮಟ್ಟದ ಕಾಣಿಕೆ. ಈಗಲೂ ನರಬಲಿ ಕೊಡುವುದನ್ನು ಅಲ್ಲಲ್ಲಿ ಆಗಾಗ ನೋಡುತ್ತೇವೆ" ಎಂಬ ಮಾತುಗಳನ್ನು ಗಮನಿಸಿದರೆ ಬಳ್ಳಾರಿ ಜಿಲ್ಲೆಯಾದ್ಯಂತ ನಿಧಿಗಾಗಿ, ಸಣ್ಣ ಸಣ್ಣ ಮಕ್ಕಳನ್ನು ಬಲಿಕೊಟ್ಟ ಪ್ರಸಂಗಗಳು ಇವೆ. ಇಂತಹ ವಿಚಾರಗಳು ಪತ್ರಿಕೆಯಲ್ಲಿ ಬಂದಿವೆ. ಮನುಷ್ಯ ಬೇಗನೇ ದೊಡ್ಡವನಾಗಬೇಕೆಂಬ ಬಯಕೆಯಿಂದ ಕ್ರೂರವಾಗಿ ನಡೆದುಕೊಂಡು ನರಬಲಿಯನ್ನು ಮಾಡುತ್ತಾನೆ. ಇದು ನಿಲ್ಲಬೇಕು.

೧.೬. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ನಮ್ಮ ಕರ್ನಾಟಕದಾದ್ಯಂತ ಹಲವು ರೀತಿಯಲ್ಲಿ ಗ್ರಾಮದೇವತೆಗಳು ಆರಾಧನೆಗೊಳ್ಳುತ್ತಿವೆ. ಶಕ್ತಿಯ ರೂಪದಲ್ಲಿ ಗ್ರಾಮದೇವತೆಯನ್ನು ಪೂಜಿಸುವುದು ಪರಂಪರಾಗತವಾಗಿ ಬಂದಿದೆ. ವಾರ್ಷಿಕವಾಗಿ ನಡೆಯುವ ಗ್ರಾಮದೇವತೆಗಳ ಹಬ್ಬ-ಜಾತ್ರೆಗಳಲ್ಲಿ ಪ್ರಾಣಿಬಲಿಗಳನ್ನು ಕೊಡುವುದು ರೂಢಿಯಾಗಿದೆ. ಮಾನವನಿಗೆ ಯಾವುದೇ ಸಮಸ್ಯೆ ಬರಲೀ ಅದಕ್ಕೆ ಹರಕೆಗಳ ಮೂಲಕ ಪ್ರಾಣಿಬಲಿಗಳನ್ನು ನೀಡುವ ಪದ್ಧತಿಯನ್ನು ರೂಢಿಸಿಕೊಂಡು ಬಂದಿರುವುದು ನೋಡುತ್ತೇವೆ.

"ಬಲಿ ನೀಡುವ ಪದ್ಧತಿ ಕುರಿತು ಪಾಶ್ಚಿಮಾತ್ಯ ವಿದ್ವಾಂಸರಾದ ಅಬ್ದುಲ್ ರಜಾಕ್, ಫಯಾಸ್ ತಮ್ಮ ಕೃತಿಯಲ್ಲಿ ಬರೆದಿರುವರು. ಇನ್ನು ಚರಿತ್ರೆಯ ಪುಟಗಳಲ್ಲಿಯೂ ಕೂಡ ಉಲ್ಲೇಖ ಮಾಡಲಾಗಿದೆ. ಅಂದರೆ ಮನುಷ್ಯನನ್ನೇ ಬಲಿಯಾಗಿ ನೀಡುತ್ತಿದ್ದರು. ಆಧುನಿಕತೆಯಲ್ಲಿಯೂ ಕೂಡ ನಮ್ಮ ಇಷ್ಟಾರ್ಥ ಸಿದ್ಧಿಯಾಗಿ ಅಂದರೆ ಬೇಗನೆ ಶ್ರೀಮಂತರಾಗಲು, ಇಲ್ಲ ನಿಧಿಯನ್ನು ಪಡೆಯಲು, ಅಥವಾ ಮಾಂತ್ರಿಕ ಶಕ್ತಿಯ ವಶೀಕರಣ ಮಾಡಲು ತುಂಬಿದ ಗರ್ಭಿಣಿಯನ್ನು ದೈವಗಳಿಗೆ ಬಲಿ ಕೊಡುವುದನ್ನು ನಾವು ಪತ್ರಿಕೆ ಮತ್ತು ಟಿವಿಗಳಲ್ಲಿ ನೋಡಿದ್ದೇವೆ. ಕೆಲವು ದಶಕಗಳ ಹಿಂದೆ ಜಾತ್ರೆ, ಹಬ್ಬ, ತೇರಿನ ಸಂದರ್ಭಗಳಲ್ಲಿ ರಥದ ಗಾಲಿಗೆ ಚಿಕ್ಕಚಿಕ್ಕ ಮಕ್ಕಳನ್ನು ಬಲಿ ಕೊಟ್ಟು ತಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳುತ್ತಿದ್ದರಂತೆ. ಈ ನರಮಾನವನ ಬಲಿ ಪ್ರಕ್ರಿಯೆಯ ಹಂತಹಂತವಾಗಿ ಗೌಣವಾಗುತ್ತಾ ಬಂದಿದೆ. ಆದರೆ ಈ ನರಬಲಿಯಿಂದ ಬೇಸತ್ತ ಮಾನವ ನರಬಲಿ ನೀಡಿದರೆ ಮಾನವನ ವಂಶ ಅವನತಿ ಹೊಂದುವುದೆಂದು ಭಾವಿಸಿ ಮನುಷ್ಯನ ಬದಲಿಗೆ ಪ್ರಾಣಿಗಳ ಬಲಿಯನ್ನು ರೂಢಿಗೆ ತಂದುಕೊಂಡಿದ್ದಾನೆ. ಈ ಬಲಿಗೆ ಆಹುತಿಯಾಗುವ ಪ್ರಾಣಿಗಳೆಂದರೆ ಕೋಣ, ಕುರಿ, ಕೋಳಿ, ಹಂದಿ ಇನ್ನು ಮುಂತಾದವುಗಳನ್ನು ಬಳಸುವುದು ಇಂದಿಗೂ ಜನರಲ್ಲಿ ರೂಢಿಯಲ್ಲಿದೆ. ಅದರಲ್ಲೂ ದಲಿತ ಸ್ತ್ರೀದೈವಗಳಿಗೆ ಈ ಬಲಿಯನ್ನು ಒಪ್ಪಿಸುವುದನ್ನು ಇಂದಿಗೂ ಕಾಣುತ್ತೇವೆ."[೩೬] ಪ್ರಧಾನವಾಗಿ ದಲಿತ ಸ್ತ್ರೀದೇವತೆಗಳ ಬಗ್ಗೆ ಮಾತನಾಡುವಾಗ ಎಲ್ಲಾ ದೇವತೆಗಳೂ ಪೂರ್ವದಲ್ಲಿ ಬಲಿಯನ್ನು ಅಪೇಕ್ಷಿಸುತ್ತಿದ್ದವು ಎಂದು ಗುರುತಿಸಬಹುದು. ಮೂಲದಲ್ಲಿ ಮನುಷ್ಯ ಅನಾಗರಿಕನಾಗಿದ್ದಾಗ ಹೆಚ್ಚಾಗಿ ಪ್ರಾಣಿಯಾಗಿ ನರಬಲಿಯನ್ನು ಕೊಡುತ್ತಿದ್ದನು. ಭಾರತ ಅಲ್ಲದೇ ಪ್ರಪಂಚದಲ್ಲಿ ಮೂಲೆ ಮೂಲೆಗಳಲ್ಲಿ ಪ್ರಾಣಿಬಲಿಯಾಗಿ ನರಬಲಿಯನ್ನು ಮಾಡುತ್ತಿದ್ದರು ಎಂದು ಮಾನವನ ಇತಿಹಾಸ ಹೇಳುತ್ತದೆ.

ಯಾವುದೇ ಔಷಧಿಗಳು ಇಲ್ಲದೇ ಇರುವ ಸಂದರ್ಭದಲ್ಲಿ ಮನುಷ್ಯನು ತಾನು ನಂಬಿಕೊಂಡು ಬಂದ ಸ್ತ್ರೀದೇವತೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಬಲಿ ನೀಡುತ್ತಿದ್ದ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯೇ ಒಂದು ಅಪರೂಪವಾದ ಆರಾಧನಾ ಪರಂಪರೆಯನ್ನು ಗುರುತಿಸಿಕೊಳ್ಳುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು ಏಳು ತಾಲೂಕುಗಳಲ್ಲಿ ಪ್ರಾಣಿಬಲಿಗಳು ನಡೆಯುತ್ತವೆ. ಐತಿಹಾಸಿಕವಾಗಿ ಪ್ರಾಣಿಬಲಿಗಳು ನಡೆಯುತ್ತಿದ್ದವು ಎಂಬುದಕ್ಕೆ ಅನೇಕ ಕುರುಹುಗಳು ಕೋಟೆ ಕೊತ್ತಲುಗಳಲ್ಲಿ ದೊರೆಯುತ್ತವೆ. ಪುರಾಣಗಳನ್ನು ಅವಲೋಕಿಸಿದಾಗ ಪ್ರಾಣಿಬಲಿಗಳನ್ನು ಅರ್ಪಿಸುವುದಕ್ಕೆ ಮಾನವನ ಆಹಾರ ಸೇವನೆಯ ಒಂದು ವಿಧಾನ ಕೂಡ ಆಗಿತ್ತು ಎಂದು ಊಹಿಸಲು ಒಂದು ಅವಕಾಶವಿದೆ.

ಚಿದಾನಂದಮೂರ್ತಿ ಅವರ 'ಗ್ರಾಮೀಣ'(೧೯೮೮) ಕೃತಿಯಲ್ಲಿ ಶೂಲದ ಹಬ್ಬ ಎಂಬ ಲೇಖನ ಇದೆ. ಮಾರಿಯಮ್ಮನಿಗೆ ಸಂಬಂಧಿಸಿದಂತೆ ಹಬ್ಬದ ವಿವರಗಳು ಇವೆ. ಆಚರಣೆಯಲ್ಲಿ ಪಾಲ್ಗೊಳ್ಳುವ ಜನರ ಆಚಾರ ವಿಚಾರಗಳು, ಹಬ್ಬದ ವಿಧಾನಗಳ ಬಗ್ಗೆ ಮಾಹಿತಿಗಳು ದೊರೆಯುತ್ತವೆ. ಸಿದ್ಧಲಿಂಗಯ್ಯ ಅವರ 'ಗ್ರಾಮದೇವತೆಗಳು'(೧೯೯೨)[೩೨] ಮಾರಮ್ಮನ ಆರಾಧನಾ ವಿಧಾನಗಳ ಬಗ್ಗೆ ಮಾಹಿತಿಗಳಿವೆ. ಕೋಣನ ಬಲಿಗಳ ಬಗ್ಗೆ ಮಾಹಿತಿಗಳು ಲಭ್ಯವಾಗುತ್ತವೆ. ಜೆ. ಶ್ರೀನಿವಾಸ ಅವರ 'ಜಾನಪದ ಜಗತ್ತು'(೧೯೯೧) ಕೃತಿಯಲ್ಲಿ ಶಕ್ತಿದೇವತೆಗಳ ಪರಿಕಲ್ಪನೆಯ ಬಗ್ಗೆ ಮಾಹಿತಿಗಳು ದೊರೆಯುತ್ತವೆ. ಆರಾಧನಾ ಹಿನ್ನೆಲೆಗಳ ಬಗ್ಗೆ ವಿವರಗಳನ್ನು ಕೊಡುವ ಮೂಲಕ ಸಮಾಜದಲ್ಲಿ ನೆಲೆಯಾಗಿರುವ ಗ್ರಾಮದೈವಗಳ ಆಚರಣೆ ಮತ್ತು ಪ್ರಾಣಿಬಲಿಗಳ ಬಗ್ಗೆ ಮಾಹಿತಿಗಳನ್ನು ಗುರುತಿಸುತ್ತಾರೆ. ಎಚ್.ಎಲ್.ನಾಗೇಗೌಡರ 'ಗ್ರಾಮದೇವತೆ ಮಾರಮ್ಮ'(೧೯೯೧) ಕೃತಿಯಲ್ಲಿ ಮಾರಮ್ಮನ ಆರಾಧನಾ ಪದ್ಧತಿಯ ಬಗ್ಗೆ ವಿವರಗಳಿವೆ. ಭಾರತದ ದಕ್ಷಿಣ ಭಾಗದಲ್ಲಿ ಆರಾಧನೆಗೊಳ್ಳುತ್ತಿರುವ ಸ್ತ್ರೀದೇವತೆಗಳ ಆರಾಧನಾ ಸ್ವರೂಪ ಬಗ್ಗೆ ಮಾಹಿತಿ ಚೆಲ್ಲುವ ಕೃತಿಯಾಗಿದೆ. ಚೆನ್ನಣ್ಣ ವಾಲೀಕಾರರ 'ಹೈದ್ರಾಬಾದ್ ಕರ್ನಾಟಕದ ಗ್ರಾಮದೇವತೆಗಳು: ಜಾನಪದೀಯ ಅಧ್ಯಯನ'(೧೯೮೩)[೩೮] ಸಂಶೋಧನಾ ಕೃತಿಯಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ದೇವತೆಗಳನ್ನು ಪೂಜಿಸುವ ವಿಧಿವಿಧಾನಗಳ ಬಗ್ಗೆ ಅಧ್ಯಯನ ಮಾಡುತ್ತಾರೆ. ವಿಶೇಷವಾಗಿ ಪ್ರಾಣಿಬಲಿಯ ಬಗ್ಗೆ ಬರೆದಿದ್ದಾರೆ. ಕೆ.ರವೀಂದ್ರನಾಥ ಅವರ 'ಬಳ್ಳಾರಿ ಜಿಲ್ಲಾ ದರ್ಶನ'(೨೦೦೫)ದಲ್ಲಿ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಮಾಹಿತಿಗಳು ಸಿಗುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ಸಾಂಸ್ಕೃತಿಕ ಸಂಬಂಧಗಳನ್ನು ಗುರುತಿಸಲು ಸಹಕಾರಿಯಾಗುತ್ತದೆ.

ಎ.ಎನ್.ಸಿದ್ಧೇಶ್ವರಿ ಅವರ 'ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು'(೨೦೧೪)[೩೯] ಕೃತಿಯಲ್ಲಿ ಜನಪದ ಆಚರಣೆಗಳಿಗೆ ಸಂಬಂಧಿಸಿದತೆ ಮಾಹಿತಿಗಳೂ ದೊರೆಯುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ಆರಾಧನೆಗೊಳ್ಳುತ್ತಿರುವ ಗ್ರಾಮದೇವಗಳ ಮತ್ತು ಪ್ರಾಣಿಬಲಿಗಳ ಬಗ್ಗೆ ಮಾಹಿತಿಗಳು ದೊರೆಯುತ್ತವೆ. ಎಚ್.ಜೆ.ಲಕ್ಕಪ್ಪಗೌಡರ 'ಮಲ್ಲಿಗೆಯ ಮೊಗ್ಗು ಸುರಿದಾವೆ'(೧೯೯೩) ಪುಸ್ತಕದಲ್ಲಿ ಉತ್ತರ ಕರ್ನಾಟಕದಲ್ಲಿ ಯಾವ ರೀತಿ ಗ್ರಾಮದೇವತೆಗಳ ಪೂಜೆ–ಪುನಸ್ಕಾರಗಳು ನಡೆಯುತ್ತವೆ. ಎಂಬುದರಬಗ್ಗೆ ಮಾಹಿತಿಗಳು ದೊರೆಯುತ್ತವೆ. ರಹಮತ್ ತರೀಕೆರೆ ಅವರ 'ಪ್ರತಿಸಂಸ್ಕೃತಿ' (೧೯೯೩) 'ಗ್ರಾಮದೇವತೆಗಳು: ಫ್ಯೂಡಲ್ ಸಂಸ್ಕೃತಿಯೊಳಗೆ' ಎಂಬ ಲೇಖನದ ಮೂಲಕ ಇಡೀ ಮಾನವ ಸಂಸ್ಕೃತಿ ದೇವತೆಗಳನ್ನು ಪೂಜಿಸುವ ಮೂಲಕ ಅವುಗಳಿಗೆ ಮಾರುಹೋಗುವುದನ್ನು ಗುರುತಿಸುತ್ತಾರೆ. ಕೆ.ತಿಮ್ಮಯ್ಯನವರ 'ಸಿರಾ ತಾಲೂಕಿನ ಗ್ರಾಮದೇವತೆಗಳು'(೨೦೦೩) ಅಪ್ರಕಟಿತ ಸಂಶೋಧನಾ ಪ್ರೌಢಪ್ರಬಂಧದಲ್ಲಿ ಕ್ಷೇತ್ರಕಾರ್ಯ

ಮತ್ತು ಬರವಣಿಗೆಯ ವಿವರಗಳನ್ನು ದಾಖಲು ಮಾಡುತ್ತಾರೆ. ಬಸವರಾಜ ನೆಲ್ಲಿಸರರ 'ಜಾನಪದ ಸಂಕಲನ'(೧೯೭೮) ಕೃತಿಯಲ್ಲಿ 'ಲಕ್ಕವಳ್ಳಿ ಮಾರಮ್ಮ' ಎಂಬ ಲೇಖನದ ಮೂಲಕ ಮಾರಮ್ಮನ ವಿವರಗಳನ್ನು ಚರ್ಚಿಸುತ್ತಾರೆ. ವಿವಿಧ ಹೆಸರುಗಳಿಂದ ಗ್ರಾಮದೇವತೆಗಳನ್ನು ಕರೆದು ಆರಾಧಿಸುವ ಮಾಹಿತಿಗಳನ್ನು ಸಂಗ್ರಹಿಸುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಸಹ ಗ್ರಾಮದೇವತೆಗಳನ್ನು ಕೋಟೆ ದುರ್ಗಮ್ಮ, ಕೋಟೆಮಾರಮ್ಮ, ಗಡಿಮಾರಮ್ಮ, ರಣಮಾರಮ್ಮ ಎಂದು ಕರೆಯುತ್ತಾರೆ.

ಎನ್.ಆರ್. ನಾಯಕರ 'ಶಿರಸಿ ಮಾರಿಕಾಂಬೆ ಮತ್ತು ಜಾತ್ರೆ'(೧೯೯೬)[೪೦] ಕೃತಿಯಲ್ಲಿ ಗ್ರಾಮದೇವತೆ ಆರಾಧನಾ ವಿಧಿ-ವಿಧಾನಗಳ ಬಗ್ಗೆ ಮಾಹಿತಿಗಳು ಸಿಗುತ್ತವೆ. ಎನ್.ಆರ್.ನಾಯಕ ಅವರ 'ಕರ್ನಾಟಕದ ಶಕ್ತಿದೇವತೆಗಳು'(೧೯೮೩) ಕೃತಿಯಲ್ಲಿ ಕರ್ನಾಟಕಾದ್ಯಂತ ಪೂಜೆಗೊಳ್ಳುತ್ತಿರುವ ಗ್ರಾಮದೇವತೆಗಳ ಆರಾಧನಾ ಪರಂಪರೆಯನ್ನು ಗುರುತಿಸಿದ್ದಾರೆ. ಜನರು ತಮ್ಮ ದೇವತೆಗಳಿಗೆ ವಿಶಿಷ್ಟ ರೀತಿಯಲ್ಲಿ ನಡೆದುಕೊಳ್ಳುವ ಬಗ್ಗೆ ಮಾಹಿತಿಗಳನ್ನು ನೀಡುತ್ತಾರೆ. ಅಂಬಳಿಕೆ ಹಿರಿಯಣ್ಣ ಅವರ 'ಕಚ್ಚೆಗೌಳಿಗರು'(೧೯೮೩) ಕೃತಿಯಲ್ಲಿ ಕಚ್ಚೆಗೌಳಿಗರು ಆರಾಧಿಸುವ ದೇವತೆ ಬಗ್ಗೆ ಮಾಹಿತಿಗಳು ಕೊಡುತ್ತಾರೆ. ಖಂಡೋಬಾ-ಬೀರೋಬಾ ಕುಟುಂಬ ದೇವರುಗಳಾದರೂ ಅಡವಿ ದೈವಗಳನ್ನು ಪೂಜಿಸಿ ಪ್ರಾಣಿಬಲಿಗಳನ್ನು ಅರ್ಪಿಸುವ ವಿಧಾನಗಳನ್ನು ತಿಳಿಸುತ್ತಾರೆ. ಹಾಡಿಯ ಮಾರಮ್ಮನನ್ನು ಭಯ ಭಕ್ತಿಯಿಂದ ಪೂಜಿಸುವುದನ್ನು ಗಮನಿಸಬಹುದು. ಜೀರನಹಳ್ಳಿ ಸಿದ್ಧಲಿಂಗಪ್ಪರ 'ಜಾನಪದ ಸಂಯೋಜನೆ'(೧೯೮೨) ಕೃತಿಯಲ್ಲಿ ಶಕ್ತಿದೇವತೆಗಳ ಆಚರಣೆಯ ಬಗ್ಗೆ ವಿಶ್ಲೇಷಣಾತ್ಮಕವಾಗಿ ಚರ್ಚೆ ಮಾಡಿದ್ದಾರೆ. ಮಾರಕರೋಗಗಳನ್ನು ನಿವಾರಣೆ ಮಾಡುವ ಶಕ್ತಿಯನ್ನು ದೇವರುಗಳು ಹೊತ್ತುಕೊಂಡಿವೆ ಎಂದು, ಈ ಆಚರಣೆಗಳನ್ನು ಮಾಡುವ ಪರಿಯನ್ನು ತಿಳಿದುಕೊಳ್ಳಬಹುದು. ಹಬ್ಬ-ಜಾತ್ರೆ, ಉತ್ಸವ, ತೇರುಗಳಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಕಲೆಹಾಕಿದ್ದಾರೆ.

ಪಿ.ರತ್ನ ಅವರ 'ಜಾನಪದ ಸೋಪಾನ'(೧೯೮೭) ಕೃತಿಯು ಗ್ರಾಮದೈವಗಳ ಬಗ್ಗೆ ಮಾಹಿತಿಗಳನ್ನೊದಗಿಸುತ್ತದೆ. ಆರಾಧನಾ ಭಾಗವಾಗಿ ಮಹಿಳೆಯ ಪಾತ್ರಗಳು, ಹರಕೆಗಳು ನಂಬಿಕೆಗಳು, ಹಬ್ಬ ಸ್ಥೂಲ ಮಾಹಿತಿಗಳು ದೊರೆಯುತ್ತವೆ. ಪ್ರಾದೇಶಿಕವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಜಾತ್ರೆಗೆ ಸಂಬಂಧಿಸಿದಂತೆ ವೈಚಾರಿಕ ಸಿದ್ಧಾಂತಗಳ ಮೇಲೆ ಪ್ರಭಾವನ್ನು ಚೆಲ್ಲುವ ರೀತಿಯಲ್ಲಿ ವಿವರಗಳನ್ನು ದಾಖಲು ಮಾಡುತ್ತಾರೆ. ಪ್ರಾದೇಶಿಕ ಅಧ್ಯಯನಗಳು ಬೇರೆ ಬೇರೆ ಪ್ರದೇಶಕ್ಕೂ ಇರುವ ಸಾಮ್ಯತೆಗಳನ್ನು ವಿವರಿಸುತ್ತಾರೆ. ಜಿ.ವಿ.ಡಿ. ಅವರ 'ಜಾನಪದ ಚಿಂತನ'(೧೯೮೪) ಕೃತಿಯು ಬಗ್ಗೆ ಮಾತೃದೇವತೆಯ ಆರಾಧನಾ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಬಿ.ಎಸ್.ನಾಗರತ್ನ ಕುಮಾರಿರವರ 'ಊರಮ್ಮ ಮಾರಮ್ಮ'

(೧೯೭೯) ಪುಸ್ತಕ ಆರಾಧನಾ ಪ್ರಾಮುಖ್ಯತೆಯ ಬಗ್ಗೆ ಮಾಹಿತಿಗಳನ್ನು ದಾಖಲು ಮಾಡಿದ್ದಾರೆ. ಸಿದ್ಧಲಿಂಗಯ್ಯ ಅವರ 'ಕರ್ನಾಟಕದ ಗ್ರಾಮದೇವತೆಗಳು'(೧೯೮೪) ಕೃತಿಯಲ್ಲಿ ಮಾತೃದೇವತೆಗಳ ಆರಾಧನೆ ಆಚರಣೆ ಮೂಲಕ ಹಳ್ಳಿ ಪ್ರದೇಶದಲ್ಲಿ ಸಾಂಸ್ಕೃತಿಕವಾಗಿ ಜನಪದರ ಸಂಸ್ಕೃತಿ ಆಚಾರವಿಚಾರಗಳ ಬಗ್ಗೆ ಮಾಹಿತಿಗಳನ್ನು ದಾಖಲು ಮಾಡುತ್ತಾರೆ. ದೇವಾನುದೇವತೆಗಳ ಆಚರಣೆಯಿಂದ ಜನಪದರ ಮಾನಸಿಕವಾಗಿ ಯಾವ ಪ್ರಭಾವನ್ನು ಪಡೆದುಕೊಳ್ಳುತ್ತದೆಂದು ಪ್ರಯತ್ನಿಸಿದ್ದಾರೆ. 'ಗ್ರಾಮವ್ಯಾಸಂಗ'(೧೯೮೧) ಕೃತಿಯಲ್ಲಿ ಮಾತೃ ದೇವತೆಗೆ ಸಂಬಂಧಿಸಿದ 'ನಮ್ಮ ಗ್ರಾಮದೇವತೆಗಳು' ಎಂಬ ಅಧ್ಯಾಯವಿದೆ. ಆರಾಧನಾ ಸ್ವರೂಪ, ಪ್ರಾಚೀನತೆಯ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಎಂ.ಎಲ್.ನರಸಿಂಹಮೂರ್ತಿ ಅವರ 'ಮಧುಗಿರಿಯ ದಂಡಿನ ಮಾರಮ್ಮ'(೧೯೯೫) ಮಾರಮ್ಮನ ಬಗ್ಗೆ ಕೆಲವು ಮಾಹಿತಿಗಳಿವೆ. ಎಚ್.ಆರ್.ಚೇತನಾ ಅವರ 'ಹೆತ್ತಗೋನಹಳ್ಳಿ ಮಾಯಮ್ಮ'(೧೯೯೫) ಆರಾಧನೆಯ ಸ್ವರೂಪ ಹಬ್ಬದಲ್ಲಿ ಪಾಲ್ಗೊಳ್ಳುವ ಜನರ ವಿವರಗಳನ್ನು ತಿಳಿಸುತ್ತದೆ. ದ್ರಾವಿಡ ದೇವತೆಗಳು ಎಂದು ಕರೆದು ಉಪಾಸನಾ ಸಂಪ್ರದಾಯ ಹೆಚ್ಚಾಗಿ ಪ್ರಚಲಿತದಲ್ಲಿರುವುದು ಗಮನಿಸಬಹುದು.

Henry whitehead ಅವರ 'The village gods of south India'(೧೯೨೧) Hayavadana Rao C ಅವರ 'Mysore gazeteer'(೧೯೩೦), James .J. Prestin ಅವರ 'Cult of the goddess'(198A), John wooddroffe ಅವರ 'Sakti and sakta'(1975), Maria leach(Ed) ಅವರ 'Standarad Dictionary of Folklore Mythology and legend'(1972), Ananthakrishna Iyar ಮತ್ತು Nanjundaiah ಅವರ 'The Mysore Tribes And Castes'(1936), Bhattacharya, N.N. ಅವರ 'Indian Mother Goddess'(1971), Periyar. E.V. Ramasami ಅವರ 'God and Man'(1983), 'Robert Briffault' ಅವರ 'The Mother(volumes-3)'(1927), Swami Harshananda ಅವರ 'All About Hindu Temple'(1981), Victor.W.Turner ಅವರ 'The RituAl process'(1969), Wilber Theodore Elmoreg ಅವರ 'Dr.Avidian Gods in Modern Hinduism' (1925), William C. Rowe ಅವರ 'Religious symbol And god'(1968), Ziegenbalg ಅವರ 'Geneology of South IndiAn Gods'(1869), M.C.P.Shrivatsava ಅವರ 'Mother Goddess in IndiA'(1987), David Kinsly ಅವರ 'Hindu Goddessess'(Vision of the Divine Feminism in the Hindu Religion Tradistion)(1986) ದೇವತಾರಾಧನೆಯ ಬಗ್ಗೆ ತಿಳಿಸಿದ್ದಾರೆ.

ಪ್ರಾಣಿ ಬಲಿಯ ದೇವತೆಗಳು

ಸಾಮಾನ್ಯವಾಗಿ ಗ್ರಾಮದೇವತೆಗಳು ಜನರ ಮೆಚ್ಚುಗೆಯನ್ನು ಪಡೆದುಕೊಂಡಿವೆ. ಕುರಿ, ಕೋಣ, ಕೋಳಿ, ಹಂದಿ, ಮುಂತಾದ ಪ್ರಾಣಿಗಳನ್ನು ಬಲಿ ತೆಗೆದುಕೊಳ್ಳುವ ದೇವತೆಗಳು ಹಲವಾರು ಇವೆ. ಪ್ರತಿಯೊಂದು ಊರಲ್ಲಿ ಊರಿಗೊಂದು ಪ್ರಾಣಿಬಲಿ ಬಯಸುವ ದೇವತೆ ಇರುತ್ತಾಳೆ. ಕೆಲವು ದೇವತೆಗಳು ಪುರಾಣ ಕಲ್ಪಿತದೇವತೆಗಳಾದರೆ ಇನ್ನು ಕೆಲವು ಪುರಾಣ ಕಲ್ಪಿತ ದೇವತೆಗಳಾಗಿವೆ. ಕೆಲವುಗಳಿಗೆ ಶಾಸ್ತ್ರ ಮತ್ತು ಮಂತ್ರ ಬೇಕೇ ಬೇಕು. ಇನ್ನು ಕೆಲವು ದೇವತೆಗಳಿಗೆ ಜನಪದರು ಹಾಡುವ ಹಾಡು, ಪದ್ಯ, ಬೈಗಳು, ಮುಂತಾದವುಗಳು ಸಾಕಾಗುತ್ತವೆ. ಈ ದೇವತೆಗಳನ್ನು ದ್ರಾವಿಡ ಬಾಂಧವ್ಯವನ್ನು ಪಡೆದುಕೊಂಡು ಆರಾಧನೆಗೊಳ್ಳುತ್ತಿರುವುದು ಗುರುತಿಸಬಹುದು. ದ್ರಾವಿಡ ದೇವತೆಗಳಾದ ಕಾಳಮ್ಮ, ದುರುಗಮ್ಮ, ಮಾರಮ್ಮ, ಮಾಯಮ್ಮ, ದುರ್ಗಿ, ಮುಂತಾದವುಗಳು ಪ್ರಾಣಿ ಬಲಿಯನ್ನು ಅಪೇಕ್ಷಿಸುತ್ತವೆ. ಪಂಚಭೂತಗಳ ಲೆಕ್ಕಾಚಾರದಲ್ಲಿ ಈ ದೇವತೆಗಳಿಗೆ ಪ್ರಾಣಿಬಲಿಯನ್ನು ನೀಡುತ್ತಾರೆ. ವರ್ಷಕ್ಕೊಮ್ಮೆ ನಿಗದಿ ಮಾಡಿದ ದಿನದಂದು ವಿಶೇಷ ಪೂಜೆ ಪುರಸ್ಕಾರಗಳು ನಡೆದ ನಂತರದಲ್ಲಿ ಗ್ರಾಮದೈವಕ್ಕೆ ಬಲಿ ಕೊಡುವ ಪದ್ಧತಿ ಇದೆ. ಕೆಲವು ಊರುಗಳಲ್ಲಿ ೨೫ ವರ್ಷಕ್ಕೊಮ್ಮೆ, ೬೦ ವರ್ಷಕ್ಕೊಮ್ಮೆ ಪ್ರಾಣಬಲಿ ಮಾಡುವ ಪದ್ಧತಿ ಇರುವುದು ಗುರುತಿಸಬಹುದು. ಉತ್ತರ ಕರ್ನಾಟಕದ ಪ್ರಾಣಿಬಲಿ ಎಂಬ ಪುಸ್ತಕದಲ್ಲಿ ಈ ಮಾತುಗಳಿವೆ. "ಸಾಮಾನ್ಯವಾಗಿ ಈ ದೇವತೆಗಳನ್ನು ಎರಡು ಗುಂಪುಗಳಲ್ಲಿ ವಿಂಗಡಿಸಬಹುದು. ಒಂದು ಗುಂಪು ಹಿಂದೂಗಳ ದೇವತೆಗಳದ್ದು, ಎರಡನೆಯ ಗುಂಪು ಮಹಮ್ಮದೀಯರ ಪೀರ ಅಂದರೆ ಸನ್ಯಾಸಿಗಳದ್ದು. ಹಿಂದೂ ದೇವತೆಗಳು ಸಾಮಾನ್ಯವಾಗಿ ವಿಧವೆಯರಾಗಿರುತ್ತಾರೆ. ಈ ದೇವತೆಗಳು ಮಾಂಸಾಹಾರಿಗಳು ಅಲ್ಲದೆ ಈ ದೇವತೆಗಳು ಸುರಪಾನಿಗಳು. ದೇವತೆಗಳು ಬಳಸುವ ಭಾಷೆ ಕೀಳುಮಟ್ಟದ್ದು ಬೈಗಳು ಸಾಮಾನ್ಯವಾಗಿ ಬಳಸಲ್ಪಡುತ್ತವೆ. ಒಟ್ಟಿನಲ್ಲಿ ಇದನ್ನೆಲ್ಲ ಅಭ್ಯಸಿಸಿದರೆ ಇಲ್ಲಿ ಭಕ್ತಿಯ ಪಾಲು ಕಡಿಮೆ. ಭಯದ ಪಾಲು ಹೆಚ್ಚು. ಎಲ್ಲರೂ ಈ ದೇವರನ್ನು ಪ್ರಾರ್ಥಿಸುವುದು ಹೆದರಿಕೆಯಿಂದಲೇ ವಿನಃ ಭಕ್ತಿ ಪ್ರೇಮದಿಂದಲ್ಲ. ಆ ದೇವರು ಕಾಡಬಾರದೆಂದೂ ಇದ್ದ ಕಾಟ ದೂರವಾಗಲೆಂದು ಈ ದೇವತೆಗಳಲ್ಲಿ ಎರಡು ಪ್ರಕಾರಗಳು, ಒಂದು ಗುಂಪು ಗ್ರಾಮದೇವತೆಗಳದು. ಇಲ್ಲಿಯ ದೇವತೆಗಳು ವಿವಿಧ ಜಾತಿಗಳ ಆಧಾರ ಪಡೆದಿರುತ್ತವೆ. ಆಯಾ ಜಾತಿಗಳ ಜನ ತಮ್ಮ ತಮ್ಮ ಜಾತಿಯ ದೇವರನ್ನು ಪೂಜಿಸಿಬಹುದು. ಆದರೆ ಗ್ರಾಮದೇವತೆಗಳ ವ್ಯವಸ್ಥೆಯೇ ಬೇರೆ. ಗ್ರಾಮದೇವತೆಗಳಿಗೆ ಜಾತಿಗಳ ನಿರ್ಬಂಧ ವಿಲ್ಲ. ಗ್ರಾಮದೇವತೆಗಳನ್ನು ಎಲ್ಲಾ ಜಾತಿಯವರು ಪೂಜಿಸುತ್ತಾರೆ. ಆದರಿಸುತ್ತಾರೆ. ಆ ದೇವತೆಗೆ ನಡೆದುಕೊಳ್ಳುತ್ತಾರೆ"(ನಾಗಲೋಟಿ ಮಠ, ಪುಟ ೧೬). ಗ್ರಾಮದೇವತೆಗಳ ಆರಾಧನೆ ಇಲ್ಲ ಅಂದರೆ ಪ್ರಾಣಿಬಲಿ ಇರುವುದಿಲ್ಲ

ಎಂದು ಊಹಿಸಬಹುದು. ವ್ಯಾವಹಾರಿಕಾಗಿ ಮಾರುಕಟ್ಟೆಯಲ್ಲಿ ಪ್ರಾಣಿಬಲಿ ಮಾಡಿ ಮಾಂಸವನ್ನು ಖರೀದಿ ಮಾಡಿ ತಿನ್ನುವ ಪದ್ಧತಿ ಹೆಚ್ಚಾಗಬಹುದು.

ಅಡಿ ಟಿಪ್ಪಣಿಗಳು

೧. ನನ್ನ ಪ್ರಬಂಧದಲ್ಲಿ ಪ್ರಧಾನವಾಗಿ ರಕ್ತವನ್ನು ಸ್ವೀಕರಿಸುವ ದೇವತೆಗಳಾದ ಮಾರಿ, ಕಾಳಿ, ದುರ್ಗಿ, ಚಾಮುಂಡಿ ಸ್ತ್ರೀದೇವತೆಗಳಿಗೆ ಸಾಕುಪ್ರಾಣಿಗಳಾದ ಕುರಿ, ಕೋಳಿ, ಹಂದಿ, ಕೋಣ, ಟಗರುಗಳನ್ನು ಕತ್ತರಿಸಿ ಅದರ ರಕ್ತವನ್ನು ಅರ್ಪಿಸುವುದು 'ಪ್ರಾಣಿಬಲಿ' ಎಂಬ ಅರ್ಥದಲ್ಲಿ ಗಮನಿಸಿಕೊಳ್ಳಲಾಗಿದೆ.

೨. ಪ್ರಾಣಿ ಅಂದರೆ ಸಜೀವವಾದ ಉಸಿರಾಡುವ ಜೀವಂತ ಪ್ರಾಣಿ ಆಗಿರುತ್ತವೆ. ಉದಾ: ಕೋಣ, ಹಂದಿ, ಕುರಿ, ಮೇಕೆ, ಕೋಳಿ.

೩. ವಿರೂಪಾಕ್ಷಿ ಪೂಜಾರಳ್ಳಿ, ಗಾಣಗಟ್ಟೆ ಶ್ರೀ ಮಾಯಮ್ಮದೇವಿ ಗ್ರಾಮದೇವತೆಯ ಸಾಂಸ್ಕೃತಿಕ ಚರಿತ್ರೆ, ಪುಟ ೧

೪. ಅದೇ, ಪುಟ ೧-೨

೫. ತಮಿಳು ಭಾಷಾ ಪ್ರಾಂತ್ಯದಲ್ಲಿ ವಾಸ ಮಾಡುತ್ತಿದ್ದರು. ಕನ್ನಡವನ್ನು ಹೆಚ್ಚಾಗಿ ಮಾತನಾಡುತ್ತಾರೆ. ಮನೆದೇವರಿಗೆ ಕೋಣನನ್ನು ಬಲಿಯಾಗಿ ಅರ್ಪಿಸುತ್ತಿದ್ದರು.

೬. ಅಮ್ಮೋರು ಅಂದರೆ ಗಂಗಮ್ಮ. ಇದು ವಿಶಿಷ್ಟ ಆಕಾರದಲ್ಲಿರುತ್ತದೆ. ಕೆಂಪು ಮುಖ, ಬೃಹದಾಕಾರವಾದ ಎದೆ, ಕಣ್ಣುಗಳು, ಹೊರಚಾಂದ ನಾಲಿಗೆ, ಬೇವಿನ ಸೊಪ್ಪುಗಳಿಂದ ಅಲಂಕಾರ ಮಾಡುತ್ತಾರೆ. ಅಗಲವಾದ ತಿಲಕಗಳಿಂದ ಆವೃತ್ತವಾಗಿದೆ.

೭. ಮಹಾರಾಷ್ಟ್ರದಲ್ಲಿ ಗಾಂವ್ ದೇವಿ ರೂಪದಲ್ಲಿ ಗ್ರಾಮದೇವತೆಯನ್ನು ಪೂಜಿಸುತ್ತಾರೆ. ಕೊಲ್ಕತ್ತದಲ್ಲಿ ಕಾಳಿಕಾದೇವಿ, ಬಿಕನೇರ್‌ಗಳಲ್ಲಿ ಅಂಬಾದುರ್ಗಾದೇವಿ, ವಿಶೇಷಗಳಿಂದ ಗುರುತಿಸುತ್ತಾರೆ. ಇಲ್ಲಿ ಗ್ರಾಮದೈವಗಳಿಗೆ ಪ್ರಾಣಿಬಲಿಗಳನ್ನು ಕೊಡುವುದನ್ನು ಗುರುತಿಸಬಹುದು.

೮. ಹೆಬ್ಬಾಲೆ ಕೆ. ನಾಗೇಶ್, ಜಾನಪದ ಕೆಲವು ವಿಚಾರಗಳು, ಪುಟ ೨೯

೯. ಸಿದ್ಧೇಶ್ವರಿ, ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪುಟ ೧೮೦

೧೦. ಸಿರಸಿ ಮಾರಿಗುಡಿಯಲ್ಲಿ ಹೆಚ್ಚಾಗಿ ಕೋಣನ ಬಲಿಗಳು ನಡೆಯುತ್ತಿದ್ದವು. ತದನಂತರದಲ್ಲಿ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಈ ಪ್ರದೇಶದಲ್ಲಿ ಆಸಾದಿಗಳು ಕಡಿದ ಕೋಣನ ತಲೆಯನ್ನು ತಲೆಯ ಮೇಲೆ ಹೊತ್ತುಕೊಂಡು ಕುಣಿಯುವುದು ಇದೆ.

೧೧. ವಿರೂಪಾಕ್ಷಿ ಪೂಜಾರಳ್ಳಿ, ಗಾಣಗಟ್ಟೆ ಶ್ರೀ ಮಾಯಮ್ಮದೇವಿ ಗ್ರಾಮದೇವತೆಯ ಸಾಂಸ್ಕೃತಿಕ ಚರಿತ್ರೆ, ಪುಟ. ೨

೧೨. ಅದೇ, ಪುಟ. ೨

೧೩. ಕಲ್ಲನಗೌಡ ತನ್ನ ಬದುಕಿನ ಏಳಿಗೆಗಾಗಿ ಕಿರಿಯ ಸೊಸೆ ಗೌರಿಯನ್ನು ಕೆರಗೆಹಾರವಾಗಿ ಕೊಡುವುದು ಆ ಮೂಲಕ ತನ್ನ ಸಮೃದ್ಧಿ ಬಯಸುವುದನ್ನು ಗುರುತಿಸಬಹುದು. ಇಲ್ಲಿ ಮುಗ್ಧೆ ಸ್ತ್ರೀ ಪುರುಷ ಹೇಳಿದ ರೀತಿಯಲ್ಲಿ ನಡೆದುಕೊಳ್ಳುವುದು ಎಂದು ಕಟ್ಟುಪಾಡು ಎಂದು ತಿಳಿದಿದ್ದಳು. ಅವಳಿಗೆ ಪ್ರತಿಭಟಿಸುವ ಮನೋಧರ್ಮ ಇರಲಿಲ್ಲ. ಗಂಡ-ಮಾವನ ಬದುಕು ಸುಗಮವಾಗಿರಬೇಕೆಂಬ ಆಶಯದಿಂದ ತನ್ನನ್ನು ತಾನು ಕೆರೆಗೆ ಅರ್ಪಿಸಿಕೊಳ್ಳುವುದು ಕಾಣಬಹುದು. ಇದರಿಂದ ನರಬಲಿಯಾಗುತ್ತಿತ್ತು ಎಂದು ತಿಳಿಯಬಹುದು.

೧೪. ಹಕ್ಕಿ ಪಿಕ್ಕಿ ಜನ ಸಮುದಾಯಗಳು ತಾನು ಬೇಟೆ ಮಾಡಿದ ಹಕ್ಕಿಗಳನ್ನು ನಂಬಿಕೊಂಡು ಬಂದ ಅಡವಿದೇವತೆಗೆ ಬಲಿಯಾಗಿ ಸಮರ್ಪಿಸಿ ದೇವರಿಗೆ ಎಡೆ ಬಡಿಸಿ ನಂತರ ಸಮೂಹಿಕವಾಗಿ ಎಡೆಯನ್ನು ದೇವರ ಪ್ರಸಾದ ಎಂದು ಸ್ವೀಕರಿಸುವುದು ಇದೆ. ಪ್ರಸ್ತುತ ಪಕ್ಷಿಬೇಟೆಯಾಡಬಾರದೆಂಬ ಕಟ್ಟುನಿಟ್ಟಿನ ಅಪ್ಪಣೆ ಇರುವುದರಿಂದ ಬೇಟೆಯಾಡುವುದನ್ನು ನಿಲ್ಲಿಸಲಾಗಿದೆ.

೧೫. ವೈ. ಹನುಮಂತರೆಡ್ಡಿ, ಬಳ್ಳಾರಿ ಶ್ರೀ ಕನಕದುರ್ಗಮ್ಮ, ಪುಟ ೧೨

೧೬. ಎಂ.ಎಂ. ಕಲಬುರ್ಗಿ, ೨೦೧೧ ಪುಟ ೭

೧೭. ವೈ. ಹನುಮಂತರೆಡ್ಡಿ, ಬಳ್ಳಾರಿ ಶ್ರೀ ಕನಕದುರ್ಗಮ್ಮ, ಪುಟ ೮

೧೮. ಬಸವರಾಜ ತೋಟದಳ್ಳಿ, ಗ್ರಾಮದೇವತೆಗಳ ಅಧ್ಯಯನ, ಪುಟ ೨೬

೧೯. ಸುಬ್ರಮಣಿ ಜೆ. ಸುಣ್ಣಂಗೂರು, ತುಳುನಾಡಿನ ಮಾರಿಯಮ್ಮ, ಪುಟ ೩೮

೨೦. ಮಾಯಮ್ಮ ಹೆಸರಿನಲ್ಲಿ ಬಳ್ಳಾರಿ ತಾಲೂಕಿನಲ್ಲಿ ಪೂಜೆ ಮಾಡುತ್ತಾರೆ.

೨೧. ಮಾರಮ್ಮ ಹೆಸರಿನಲ್ಲಿ ಪೂಜಿಸಿ ಕೋಣವನ್ನು, ಕುರಿಯನ್ನು ಬಲಿ ಕೊಡುವುದು ಇದೆ. ಮಾರಮ್ಮನ ಹೆಸರಿನಲ್ಲಿ ಭಯಂಕರವಾದ ಭಯಭಕ್ತಿ ಇರುವುದನ್ನು ಗುರುತಿಸುತ್ತಾರೆ. ಮಾರಮ್ಮನ ಒಬ್ಬ ಬ್ರಾಹ್ಮಣ ಸ್ತ್ರೀ ಅವಳನ್ನು ಮದುವೆ ಮಾಡಿಕೊಳ್ಳುವುದು ಮಾದಿಗ ಸಮುದಾಯದವನು ಅದಕ್ಕೆ ಕೋಣನ ರೂಪದಲ್ಲಿ ಬಲಿ ತೆಗೆದುಕೊಳ್ಳುವುದು ಇದೆ.

೨೨.ಗ್ರಾಮದೇವತೆಗಳ ಅತಿ ಭಯಂಕರವಾದ ಸ್ವರೂಪವನ್ನು ಪಡೆದುಕೊಂಡಿರುವ ದೇವತೆಯೆಂದರೆ ಈ ಕಾಳಮ್ಮ. ಈ ಕಾಳಮ್ಮನ ಪೂಜೆಯನ್ನು ಹಗರಿಬೊಮ್ಮನಹಳ್ಳಿಯಲ್ಲಿ ಹೆಚ್ಚಾಗಿ ನೋಡಬಹುದು.

೨೩. ಈ ದೇವತೆಯನ್ನು ಚಾಮುಂಡಿ, ದುರ್ಗಿ, ದುರ್ಗದೇವಿ, ದುರ್ಗಮ್ಮ, ದುರುಗಮ್ಮ, ಎಂತಲೂ ಕರೆಯುತ್ತಾರೆ.

೨೪. ಹಳ್ಳಿಯಲ್ಲಿ ಚಿಕ್ಕ ಚಿಕ್ಕ ಮಕ್ಕಳ ಮೇಲೆ ಗುಳ್ಳೆಗಳು ಎದ್ದಾಗ ಆ ಗುಳ್ಳೆಗಳಿಗೆ ದೇವತೆಯನ್ನು ಆರೋಪಿಸಿ ಅಕ್ಕಮ್ಮ, ಅಮ್ಮಮ್ಮ, ಅಮ್ಮ ಬಂದಿದೆ ಎಂದು ತಿಳಿದುಕೊಳ್ಳುತ್ತಾರೆ. ಘೋರ ಕಾಯಿಲೆ ಅಂದರೆ ಕಾಲರಾ, ಪ್ಲೇಗು, ಸಿಡುಬು, ದಡಾರ, ಕುಷ್ಠರೋಗ, ಚರ್ಮರೋಗ, ಮುಂತಾದವುಗಳು ಔಷಧಿಗಳು ಇಲ್ಲದೇ ಇರುವ ಸಂದರ್ಭದಲ್ಲಿ ಈ ದೇವರಿಗೆ ವಿಶೇಷವಾಗಿ ಹರಕೆಗಳಿಂದ ಆಚರಣೆಗಳು ನಡೆಯುತ್ತಿದ್ದವು.

೨೫. ಕೊಟೇಶ್, ಬಳ್ಳಾರಿ ಜಿಲ್ಲೆಯ ಕೋಟೆಗಳು, ಪುಟ ೩

೨೬. ಅದೇ, ಪುಟ ೨

೨೭. ಶಿವಾನಂದ ವಿರಕ್ತಮಠ, ಬಳ್ಳಾರಿ ಜಿಲ್ಲೆಯ ಇತಿಹಾಸ, ಪುಟ. ೩

೨೮. ಅದೇ, ಪುಟ. ೪

೨೯. ಅದೇ, ಪುಟ ೫

೩೦. ಮಂಜುನಾಥ ಬೇವಿನಕಟ್ಟಿ, ಜನಪದ ಆಚರಣೆಗಳು, ಪುಟ, ೧೪

೩೧. ಅದೇ, ಪುಟ ೧೪

೩೨. ಎಚ್. ನರಸಿಂಹಯ್ಯ, ಗದ್ಯಸಿರಿ, ಪುಟ ೧೪-೧೫

೩೩. ಹೆಬ್ಬಾಲೆ ಕೆ. ನಾಗೇಶ್, ಜಾನಪದ ಕೆಲವು ವಿಚಾರಗಳು, ಪುಟ ೨೬

೩೪. ಅದೇ, ಪುಟ ೧೧೨.

೩೫. ಅದೇ, ಪುಟ ೧೧೩-೧೧೪.

೩೬. ಅದೇ, ಪುಟ ೨೭.

೩೭. ಸಿದ್ಧಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಪುಟ ೨೨೫

೩೮. ಚೆನ್ನಣ್ಣ ವಾಲೀಕಾರ, ಹೈದ್ರಾಬಾದ್ ಕರ್ನಾಟಕದ ಗ್ರಾಮದೇವತೆಗಳು, ಪುಟ ೨೦೧

೩೯. ಸಿದ್ದೇಶ್ವರಿ, ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ೨೦೧೪,

೪೦. ಶಿರಸಿಯಲ್ಲಿ ವಿಶೇಷವಾಗಿ ನಡೆಯುವ ಕೋಣ ಬಲಿ ಬಗ್ಗೆ ಪ್ರಸ್ತಾಪ ಮಾಡುತ್ತಾರೆ.

ಅಧ್ಯಾಯ ಎರಡು

ಬಲಿಪದ್ಧತಿಯ ಹುಟ್ಟು ಮತ್ತು ಬೆಳವಣಿಗೆ

೨.೧. ಬಲಿ ಪದನಿಷ್ಪತ್ತಿ ಮತ್ತು ಅರ್ಥ

೨.೨. ಬಲಿಪದ್ಧತಿಯ ಚಾರಿತ್ರಿಕ ಹಿನ್ನೆಲೆ

೨.೩. ಬಲಿಪದ್ಧತಿಯ ಪ್ರಕಾರಗಳು

೨.೪. ಜನಪದ ಮತ್ತು ಶಿಷ್ಟ ಸಾಹಿತ್ಯದಲ್ಲಿ ಬಲಿಪದ್ಧತಿ

ಅಧ್ಯಾಯ : ಎರಡು

ಬಲಿಪದ್ಧತಿಯ ಹುಟ್ಟು ಮತ್ತು ಬೆಳವಣಿಗೆ

ಪ್ರಾಣಿಬಲಿಯನ್ನು ನಂಬಿಕೆಯ ಹಿನ್ನೆಲೆಯಲ್ಲಿ ಗುರುತಿಸಬಹುದಾಗಿದೆ. ಪರಂಪರಾಗತವಾಗಿರುವ ಜೀವನ ಚರಿತ್ರೆಯಲ್ಲಿ ಪ್ರಾಣಿಬಲಿಗೆ ಬಹಳ ಮಹತ್ವವಿದೆ. ಸಾಂಸ್ಕೃತಿಕ ಹಿನ್ನೆಲೆಗೆ ಜನಪದರ ಆಚರಣೆಗಳೇ ಮೂಲ ಎನ್ನಬಹುದು. "ಪ್ರಾದೇಶಿಕವಾಗಿ ಆಚರಣೆಗಳು ನಡೆಯುವ ಸಂದರ್ಭ, ವಿಧಾನ, ನಂಬಿಕೆ, ನಿಷೇಧ, ಪದ್ಧತಿಗಳ ಮಾಹಿತಿ ವಿವರಗಳು ಮುಖ್ಯವೆನಿಸುತ್ತವೆ. ಪ್ರಾದೇಶಿಕವಾಗಿರುವ ಒಂದೊಂದು ಆಚರಣೆಗಳು ವೈವಿಧ್ಯತೆಯಿಂದ ಕೂಡಿದೆ. ಅವುಗಳಲ್ಲಿ ಮಡುಗಟ್ಟಿದ ಪಾರಂಪರಿಕ ಜ್ಞಾನವಿದೆ. ಸಹಸ್ರಾರು ವರ್ಷಗಳ ಅನುಭವಗಳ ಪಾಕಗಳು ಇವು. ಸದಾ ಜೀವಮುಖಿಯಾಗಿರುವ ಇವು ಬಹುತ್ವವನ್ನು ಬೆಂಬಲಿಸುತ್ತವೆ. ಇವು ಸಕ್ಕರೆ ಲೇಪನದ ಮಾತ್ರೆಗಳಿದ್ದಂತೆ. ಸಕಾಲದಲ್ಲಿ ಮನುಷ್ಯನನ್ನು ಎಚ್ಚರಿಸಿ, ಅನುಕೂಲಗಳನ್ನು ಪಡೆದುಕೊಳ್ಳುವಂತೆ ನಂಬಿಕೆಗಳ ಮೂಲಕ ಒತ್ತಾಯಿಸುತ್ತವೆ. ಅವು ನೀಡುವ ದರ್ಶನ ಮತ್ತು ಜ್ಞಾನಗಳು ಆಧುನಿಕ ಜ್ಞಾನವನ್ನು ಮೀರಿಸುತ್ತವೆ. ನಿಸರ್ಗ ವ್ಯಾಪಾರಗಳಾದ ಸೂರ್ಯೋದಯ, ಚಂದ್ರೋದಯ; ವಿಕೋಪಗಳಾದ ಗುಡುಗು, ಸಿಡಿಲು, ಚಂಡಮಾರುತ, ಇತ್ಯಾದಿಗಳ ಭಯವೇ ಅವುಗಳನ್ನು ದೈವೀಕರಿಸಿವೆ. ನಿಸರ್ಗದ ಶಕ್ತಿಯಿಂದ ಪಾರಾಗಲು ಹಾಗೂ ಶಮನ ಮಾಡುವ ಉದ್ದೇಶದಿಂದ ಆಚರಣೆಗಳು ಉದಿಸಿವೆ. ಮಾನವನ ಬದುಕನ್ನು ರೂಪಿಸುವಲ್ಲಿ, ಸಂಸ್ಕೃತಿಯ ಪೋಷಣೆಯಲ್ಲಿ ನಾಗರಿಕತೆಯನ್ನು ಬೆಳೆಸುವಲ್ಲಿ, ಸಂಪ್ರದಾಯ ಆಚರಣೆಗಳು ಮಹತ್ವದ ಪಾತ್ರ ವಹಿಸಿವೆ" ಎಂದು ಪ್ರಸ್ತಾಪಿಸುತ್ತಾರೆ.[೧] ಮಾನವನ ಬದುಕಿನ ಜೊತೆಗೆ ಪ್ರಾಣಿಬಲಿ ನಂಬಿಕೆ ಆಚರಣೆ ಯಾವ ರೀತಿಯಲ್ಲಿ ಮಹತ್ವವನ್ನು ಪಡೆದುಕೊಂಡಿದೆ ಎಂದು ಗುರುತಿಸಲು ಪ್ರಯತ್ನಿಸಿದ್ದಾರೆ. "ಪ್ರಾಚೀನ ಕಾಲದಿಂದಲೂ ಮಾನವನ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಲಯದಲ್ಲಿ ನಂಬಿಕೆ, ಹರಕೆ, ಆಚರಣೆ, ಸಂಪ್ರದಾಯ ಮುಂತಾದವುಗಳು

ಮನೆಮಾಡಿಕೊಂಡಿದ್ದ ಹಬ್ಬ ಹರಿದಿನ, ರಥ ಜಾತ್ರೆ, ಆಯಾ ದೇವತೆಗಳ ಹೆಸರಿನಲ್ಲಿ ಆಯಾ ದೇವತೆಗಳ ಎದುರಿನಲ್ಲಿ ಹರಕೆ ಹೊತ್ತುಕೊಂಡು ವಿವಿಧ ಆಚರಣೆಗಳನ್ನೂ ಮಾಡುತ್ತಾರೆ. ನರಬಲಿಯೂ ಮೊದಲಿಗೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಲಯದಲ್ಲಿ ಸಂಪತ್ತಿನ ಸಮೃದ್ಧಿಗಾಗಿ ಆರಂಭವಾದ ಆಚರಣೆ, ಕಾಲಕ್ರಮೇಣ ಇದು ಮಾಯವಾಗಿ ಈ ಸ್ಥಾನವನ್ನು ಸಾಮೂಹಿಕ ಹಾಗೂ ವೈಯಕ್ತಿಕ ಆಸೆ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವುದರ ಸಲುವಾಗಿ ಆಚರಣೆ ಮಾಡಿಕೊಂಡು ಬಂದಿದ್ದಾರೆ" ಎಂದು ಅಭಿಪ್ರಾಯಪಡಲಾಗಿದೆ.[೨] ಜನಪದ ಸಾಹಿತ್ಯ ಕ್ಷೇತ್ರದಲ್ಲಿ ದೇವತಾರಾಧನೆಗೆ ಹೆಚ್ಚು ಮಹತ್ವವನ್ನು ಕೊಡುವುದು ಇದೆ. ದೇವತೆಗಳ ಆರಾಧನೆಯು ಒಂದು ಸಂಕೀರ್ಣ ವ್ಯವಸ್ಥೆಯೂ ಆಗಿದೆ. ಪ್ರತಿಯೊಂದು ಸಮುದಾಯದವರೂ ಸ್ತ್ರೀದೇವತೆ-ಗಂಡುದೇವತೆ ಎಂದು ಭೇದಭಾವಗಳನ್ನು ಮರೆತು ಅವುಗಳನ್ನು ಪೂಜಿಸಿ ಆಚರಿಸುವುದು ಪ್ರಾಚೀನ ಕಾಲದಿಂದಲೂ ಗುರುತಿಸಬಹುದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ಈ ನಾಲ್ಕು ಸಮುದಾಯಗಳು ತಮ್ಮ ತಮ್ಮ ದೈವಗಳನ್ನು ತಮ್ಮದೇ ರೀತಿ ರಿವಾಜುಗಳಿಗೆ ಅನುಗುಣವಾಗಿ ಆಚರಿಸುವುದು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಪ್ರಾಣಿಬಲಿಗಳನ್ನು ತೆಗೆದುಕೊಳ್ಳುವ ದೇವತೆಗಳಾದ ಕಾಳಿ, ದುರ್ಗಿ, ಮಾರಿ, ಮಸಣಿ, ಮುಂತಾದವುಗಳನ್ನು ಸಾಮಾನ್ಯವಾಗಿ ದಲಿತರು, ಶೂದ್ರಾದಿಶೂದ್ರರು ಪೂಜಿಸುವುದು ಪರಂಪರಾಗತವಾಗಿ ಬಂದಿದೆ. ಈ ಪೂಜಿಸುವುದರ ಮಹತ್ವವನ್ನು ಗಮನಿಸಬೇಕಾದರೆ ಗ್ರಾಮೀಣ ಪ್ರದೇಶದಲ್ಲಿ ನೆಲೆಯಾಗಿರುವ ಆಚರಣಾ ಸೊಗಡನ್ನು ಗುರುತಿಸುವುದು ಅಗತ್ಯವಾಗುತ್ತದೆ. ದುಷ್ಟಶಕ್ತಿಯ ನಿವಾರಣೆಗಾಗಿ ಅಪಾರ ಪ್ರಮಾಣದ ನಂಬಿಕೆಗಳನ್ನು ರೂಢಿಗತಗೊಳಿಸಿಕೊಂಡಿರುವುದು ಗುರುತಿಸಬಹುದು.

"ಆರಾಧನೆಗಳು ಮತ್ತು ಆಚರಣೆಗಳು ಕುರಿತಂತೆ ಖಚಿತವಾದ ವಿವರಣೆ ಕೊಡುವುದು ಕಷ್ಟವಾಗಿದೆ. ಕನ್ನಡ ಜಾನಪದ ಸಂದರ್ಭದಲ್ಲಿ ಬಹಳಷ್ಟು ಪದಗಳು ತೀರಾ ಸರಳವಾದ ಅರ್ಥದಲ್ಲಿ ಬಳಸಲ್ಪಡುತ್ತಿವೆ. ಸಂಪ್ರದಾಯ, ಪದ್ಧತಿ, ಸಂಸ್ಕಾರ, ಆಚರಣೆ, ಆರಾಧನೆ ಇಂತಹ ಪದಗಳ ನಡುವೆ ಅಪಾರವಾದ ವ್ಯತ್ಯಾಸವನ್ನು ಗುರುತಿಸುವುದು ಸಾಧ್ಯವಿಲ್ಲವಾದರೂ ಸರಳವಾದ ಗೆರೆ ಎಳೆಯುವ ಪ್ರಯತ್ನ ಮಾಡಬಹುದು" ಎಂದು ಪ್ರಸ್ತಾಪ ಮಾಡುತ್ತಾರೆ.[೩] ಇದೇ ಪ್ರಕಾರವಾಗಿ 'ಪ್ರಾಣಿಬಲಿ' ಯಾವಾಗ ಹುಟ್ಟಿಕೊಂಡಿತು ಎಂದು ವಿವೇಚಿಸುವುದು ಕಷ್ಟದ ಕೆಲಸವಾಗಿರುವುದನ್ನು ಗುರುತಿಸಬಹುದು. ವೇದಗಳ ಕಾಲದಲ್ಲಿ ಪುರುಷದೇವತೆಗಳು ಮುಖ್ಯವಾಗಿದ್ದವು. ಆದರೆ ಆಗಿನ ಕಾಲಘಟ್ಟದಲ್ಲಿಯೂ ಹೆಚ್ಚಾಗಿ ಹೆಣ್ಣುದೇವತೆಗಳನ್ನು ಪೂಜಿಸುವ ಪರಂಪರೆ ರೂಢಿಸಿಕೊಂಡಿದ್ದರು ಎಂದು ಗುರುತಿಸಬಹುದು. ಪೃಥ್ವಿ, ಅದಿತಿ, ಉಷಸ್, ಸರಸ್ವತಿ, ಕಾಳಿ, ಲಕ್ಷ್ಮಿ ಮುಂತಾದವುಗಳು ಪ್ರಧಾನವಾಗಿದ್ದವು. ಇಲ್ಲಿ 'ಕಾಳಿ' ಹೆಸರೇ ಸೂಚಿಸುತ್ತದೆ ಇದು ಒಂದು 'ಉಗ್ರರೂಪ' ಎಂದು ಭಾವಿಸಲಾಗಿದ್ದು, ಈ ಕಾಳಿ ರೂಪಕ್ಕೆ ರಕ್ತ ತರ್ಪಣವನ್ನು

ಅರ್ಪಿಸುವುದು ರೂಢಿಗೆ ತಂದಿರಬೇಕು. ಮಾತೃಗಳ ಆರಾಧನೆಯಲ್ಲಿ 'ಕಾಳಿ' ಮಹತ್ವದ ಸ್ಥಾನ ಪಡೆದಿದ್ದಾಳೆ. ಪುರಾಣ ಕಲ್ಪಿತ ವೇದಗಳಲ್ಲಿ ದೇವಿಶಕ್ತಿಯ ಬಗೆಗೆ ಉಲ್ಲೇಖ ಬರುವುದು ಗಮನಿಸಬೇಕಾದ ಸಂಗತಿಯಾಗಿದೆ. "ದುಷ್ಟ ಶಕ್ತಿಗಳಿಂದ ತನ್ನನ್ನು ರಕ್ಷಿಸುವ ದೈವವನ್ನು ಸಂಪ್ರೀತಗೊಳಿಸುವಂತೆ ಪ್ರಾರ್ಥಿಸಿ ತನ್ನಿಷ್ಟದ ಆಹಾರ ಪದಾರ್ಥಗಳನ್ನು ಸಲ್ಲಿಸುತ್ತಾ ಬರಲಾಗಿದೆ. ತನಗೆ ಆಹಾರ ಸಿಕ್ಕಾಗ ಸಂತೋಷಪಟ್ಟಿರುವುದು, ಸಿಗದಿದ್ದಾಗ, ದುಃಖಪಟ್ಟಿರುವುದು, ಎರಡನ್ನು ಆಚರಣೆಗಳ ಮೂಲಕ ಜರುಗಿಸಿಕೊಂಡಿರುವುದು ಹಾಗೂ ಕಳೆದಿರುವುದನ್ನು ಮರೆಯಲು ಪ್ರಯತ್ನಿಸಲಾಗಿದೆ. ಅವುಗಳೆಲ್ಲವೂ ಅವನ ಅನುಭವದ ಹಿನ್ನೆಲೆಯಲ್ಲಿ ನಡೆಯುತ್ತಾ ಬಂದಿವೆ. ಕಾಲದ ಗಡಣದಲ್ಲಿ ನುಸುಳಿ ನುಸುಳಿ ಅದರ ಓರೆಕೋರೆಗಳನ್ನು ಕಳಚಿಕೊಂಡು ನೇರವಾಗಿ, ಅರ್ಥವುಳ್ಳ ಆಶಯಗಳಿಂದ ತುಂಬಿದ ಆಚರಣೆಗಳು ಉಳಿದು, ತಲೆಮಾರಿನಿಂದ ತಲೆಮಾರಿಗೆ ಹರಿಯಲಾರಂಭಿಸಿದವು. ಅವುಗಳಲ್ಲಿ ವಿಜ್ಞಾನವಿದೆ, ಮಾನವಿಕ ವಿಚಾರಗಳಿವೆ. ಈ ಜ್ಞಾನವನ್ನು ಪರಂಪರೆಯಿಂದ ಪರಂಪರೆಗೆ ಆಚರಣೆಗಳ ಮೂಲಕ ಸಾಗಿಸುತ್ತವೆ. ಒಟ್ಟಾರೆಯಾಗಿ ಅವು ಒಳಿತನ್ನು ತುಂಬಿಕೊಂಡು ಸದಾ ನಮ್ಮೊಂದಿಗೆ ಬರುತ್ತಿವೆ. ಆಚರಣೆಗಳಲ್ಲಿ ಉಪಕಾರಿ ಪ್ರಾಣಿ, ಪಕ್ಷಿ, ಸಸ್ಯ ಹಾಗೂ ಪ್ರಾಕೃತಿಕ ವಸ್ತುಗಳನ್ನು ಪೂಜನೀಯವಾಗಿ ಕಾಣಲಾಗಿದೆ. ಅವುಗಳ ಸಂರಕ್ಷಣೆಗಾಗಿ ಹಲವು ಬಗೆಯ ನಂಬಿಕೆ ನಿಷೇಧಗಳನ್ನು ಹೆಣೆಯಲಾಗಿದೆ. ಅವುಗಳ ಆಚರಣೆಗಳ ಮುಖಾಂತರ ಮತ್ತೆ ಮತ್ತೆ ಜೀವಂತಗೊಳ್ಳುತ್ತಿರುತ್ತವೆ. ಈ ಜೀವಂತಗೊಳಿಸುವ ಕ್ರಿಯೆ ದೊಡ್ಡದು. ಇದರಲ್ಲಿ ಜೀವಮುಖಿಯಾದ ಯಾವ ವಸ್ತುವು ನಾಶವಾಗಲೇಬಾರದು ಎನ್ನುವ ಎಚ್ಚರಿಕೆಯಿಂದೆ. ಆದರೆ ಆಧುನಿಕ ವ್ಯವಸ್ಥೆ ನಮ್ಮ ಪಾರಂಪರಿಕ ಜ್ಞಾನವನ್ನು ಮರೆಯಿಸುವ ಕುತಂತ್ರ ಮಾಡುತ್ತಿದೆ. ಇದಕ್ಕಾಗಿ ಹಲವು ರೀತಿಯ ನಾಜೂಕಿನ ವೇಷಗಳನ್ನು ಧರಿಸುತ್ತಿದೆ. ಅದರ ಹಿಂದೆ ತನ್ನದೇ ಸಾಮ್ರಾಜ್ಯವನ್ನು ಸ್ಥಾಪಿಸುವ ಹುನ್ನಾರವಿದೆ. ಆದರೆ ಈಗಿರುವ ಒಂದು ಸಂತೋಷದ ಸಂಗತಿ ಎಂದರೆ ಜನರು ಹಳೆಯದರತ್ತ ಹೊರಟಿದ್ದಾರೆ. ಆದರೆ ಇದು ಬೆರಳೆಣಿಕೆಯಷ್ಟು ಮಾತ್ರ. ಆಚರಣೆಗಳಲ್ಲಿ ಹುದುಗಿರುವ ಜೀವಮುಖಿ ಅಂಶಗಳನ್ನು ಗಮನಿಸಬೇಕು. ಅವು ಸಾರುವ ಸಂದೇಶವನ್ನು ಅರಿಯಬೇಕು. ಅವುಗಳಲ್ಲಿರುವ ಆರೋಗ್ಯಪೂರ್ಣ ಜೀವನ, ಪ್ರಕೃತಿ ಸಂರಕ್ಷಣೆ ಮುಂತಾದವುಗಳ ಅರಿವಿನ ಸೂತ್ರಗಳನ್ನು ನಂಬಿಕೆ, ನಿಷೇಧಗಳ ಮೂಲಕ ಅರ್ಥೈಸಿಕೊಳ್ಳಬೇಕು. ನೆಲ ಜಲ, ಅಗ್ನಿ ವಾಯು ಮತ್ತು ಆಕಾಶವನ್ನು ಪೂಜಿಸದ ಆಚರಣೆಗಳಿಲ್ಲ. ಮಣ್ಣು ಅಥವಾ ಸಗಣಿಯಿಂದ ಮಾಡಿದ ಗಣಪ ನೆಲವನ್ನು ಸಂಕೇತಿಸಿದರೆ ಕಳಶದಲ್ಲಿರುವ ನೀರು ಜಲವನ್ನು ಸಂಕೇತಿಸುತ್ತದೆ. ದೀಪಗಳು ಅಗ್ನಿಯನ್ನು, ಸರ್ವವ್ಯಾಪಿಯಾಗಿದ್ದು ಸ್ಪರ್ಶ ಗುಣವನ್ನು ಹೊಂದಿರುವ ಗಾಳಿ, ವಾಯುವನ್ನು, ಆಳ ಅಗಲಗಳಿಲ್ಲದ ನಿರ್ವಾತ ಪ್ರದೇಶವು ಆಕಾಶವನ್ನು ಸಂಕೇತಿಸಿವೆ. ಇವು ಜನಪದ

ಸಂಸ್ಕೃತಿಯ ಜ್ಞಾನ ವಿಶಾಲತೆಗೆ ಸಾಕ್ಷಿ ನೀಡಿವೆ. ಆಚರಣೆಗಳಲ್ಲಿ ನಿಸರ್ಗದ ಯಾವುದೇ ವಸ್ತು, ಪ್ರಾಣಿ, ಪಕ್ಷಿ, ಮರ, ಗಿಡ, ಕಲ್ಲು, ಇತ್ಯಾದಿಗಳು ಸಮಯಾನುಸಾರ ಪೂಜನೀಯವಾಗಿರುತ್ತವೆ. ವಿಜ್ಞಾನ ಹಾಗೂ ಮಾನವಿಕಗಳ ಜ್ಞಾನಪಾಕವಾಗಿದ್ದು, ಕಾಲಕಾಲಕ್ಕೆ ಅಗತ್ಯವಿರುವ ವಸ್ತು ವಿಚಾರಗಳ ಬಗೆಗೆ ಗಮನ ಹರಿಸುವಂತೆ ಒತ್ತಾಯಿಸುತ್ತವೆ"[9] ಇಲ್ಲಿ ಪ್ರಧಾನವಾಗಿ ಕಲ್ಲು, ಮಣ್ಣು, ಮರ, ಅಗ್ನಿ, ವಾಯು ಮುಂತಾದವುಗಳಾದ ನೈಸರ್ಗಿಕ ಪರಿಕಲ್ಪನೆಯಲ್ಲಿ ಮೂರ್ತಿಪೂಜೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿರುವುದನ್ನು ಗುರುತಿಸಬಹುದು. ಈ ನೈಸರ್ಗಿಕ ಅಂಶಗಳಿಗೆ ಮಾರುಹೋದ ಮಾನವ ಅವುಗಳಿಗೆ ರಕ್ತ ತರ್ಪಣವನ್ನು ನೀಡಿ ಸಂಪ್ರೀತಿ ಮಾಡಿರುವುದು ಗುರುತಿಸಬಹುದು.

ಗುಡ್ಡಗಾಡು ಪ್ರದೇಶದಲ್ಲಿ ವಾಸ ಮಾಡುವ ಮಾನವ ಏಳಿಗೆ ಪ್ರಾಚೀನ ಹಂತದಲ್ಲಿಯೇ ಆಗಿದೆ. ಈ ಹಂತದಲ್ಲಿ ಪುರುಷ ಅಥವಾ ಸ್ತ್ರೀದೇವತೆ ಆಚರಣೆ ಪ್ರಾರಂಭವಾಗಿದೆಯೆಂದು ಊಹಿಸುತ್ತಾರೆ. ಭೂಮಿ ಫಲವತ್ತಾದ ಗಡ್ಡೆ ಗೆಣಸು ಕೊಡುತ್ತದೆ. ಜನ್ಮ ಕೊಟ್ಟ ತಾಯಿ ಸ್ತನ್ಯಪಾನ ಕೊಟ್ಟು ಸಾಕುತ್ತಾಳೆ, ಸಲುಹುತ್ತಾಳೆ. ಈ ಹೋಲಿಕೆಯ ಫಲವಾಗಿ ಅಮ್ಮ ಕಲ್ಪನೆಯಲ್ಲಿ ಭೂಮಿಯನ್ನು ಪೂಜಿಸಲು ಪ್ರಾರಂಭಿಸಿರುವುದು. ಆದುದರಿಂದ ಶಕ್ತಿದೇವತೆ ಭೂದೇವಿ ಎನಿಸಿಕೊಂಡು ಆಚರಣೆಯಾಗುತ್ತಿದೆ. ಪ್ರಕೃತಿಯ ಕೂಸಾದ ಮನುಷ್ಯ ತಾನು ವಾಸ ಮಾಡುವ ನಿರ್ಜೀವ ವಸ್ತುಗಳನ್ನು ನೋಡಿ ಭಯಭಕ್ತಿಯಿಂದ ಅವುಗಳನ್ನು ಆರಾಧನೆ ಮಾಡಲು ಮುಂದಾದ. ಸ್ತ್ರೀ ದೇವತೆಗಳನ್ನು ಹಲವಾರು ಸಾಮಾಜಿಕ ಕೌಟುಂಬಿಕ ತೊಂದರೆಗಳ ನಿವಾರಣೆಗಾಗಿ ಪೂಜಿಸುವ ಪರಿಪಾಟವಿರುವುದರಿಂದ ಸ್ತ್ರೀಯರಿಗೆ ಹೆಚ್ಚು ಮಾನ್ಯತೆ ಕೊಡಬೇಕು.

ಪ್ರಾಣಿಬಲಿ ಕುರಿತು ಇಸ್ಲಾಂ ಧರ್ಮದಲ್ಲಿ ಬಹಳ ಮಹತ್ವವಾದ ವಿಶೇಷಗಳನ್ನು ನೋಡಬಹುದು. ದಿನಾಂಕ ೧೫.೦೧.೨೦೧೫ರಂದು ಪ್ರಕಟವಾದ ಪವಿತ್ರ ಸಂದೇಶ ಕನ್ನಡ ಪಾಕ್ಷಿಕ ಪತ್ರಿಕೆಯಲ್ಲಿ ಈ ರೀತಿಯಾದ ಅಂಶಗಳು ಇವೆ. "ಅಲ್ಲಾಹನ ಮಾರ್ಗದಲ್ಲಿ ಬಲಿಯರ್ಪಿಸುವ ಆರಾಧನಾ ಕರ್ಮವು ಮನುಷ್ಯಾರಂಭದಿಂದಲೇ ಪ್ರಾರಂಭಗೊಂಡ ಒಂದು ಪುಣ್ಯಕರ್ಮವಾಗಿದೆ. ಮಾನವೇತಿಹಾಸದ ಪ್ರಥಮ ಕೊಲೆ ನಡೆದದ್ದು ಬಲಿಯರ್ಪಣೆಯ ವಿಷಯದಲ್ಲಾಗಿತ್ತು. ಪ್ರವಾದಿಯವರೇ ಅವರಿಗೆ ಆದಮರ ಇಬ್ಬರು ಪುತ್ರರು ವೃತ್ತಾಂತವನ್ನು ಸತ್ಯವತ್ತಾಗಿ ಹೇಳಿಕೊಂಡಿರುವುದು. ಅಂದರೆ ಅವರಿಬ್ಬರು ಒಂದು ಬಲಿಕರ್ಮ ನಡೆಸಿದಾಗ ಅವರಲ್ಲಿ ಒಬ್ಬರಿಂದ ಅದು ಸ್ವೀಕರಿಸಲ್ಪಟ್ಟಿತ್ತು ಮತ್ತು ಇನ್ನೊಬ್ಬನಿಂದ ಸ್ವೀಕರಿಸಲ್ಪಡಲಿಲ್ಲ. ಅವರು ಬಲಿ ಸ್ವೀಕರಿಸಲ್ಪಡದವರು ಖಂಡಿತವಾಗಿಯೂ ನಿನ್ನನ್ನು ನಾನು ವಧಿಸುವೆನು ಎಂದನು. ಅವರು ಬಲಿ ಸ್ವೀಕರಿಸಲ್ಪಟ್ಟವನು. ದೇವಭಯವುಳ್ಳವರಿಂದಲೇ ಅಲ್ಲಾಹು ಸ್ವೀಕರಿಸುವನು ಎಂದನು. ನನ್ನನ್ನು ವಧಿಸಲಿಕ್ಕಾಗಿ ನನ್ನ ವಿರುದ್ಧ ನೀನು ಕೈಯೆತ್ತಿದರೂ

ನಿನ್ನನ್ನು ವಧಿಸಲಿಕ್ಕಾಗಿ ನಿನ್ನ ವಿರುದ್ಧ ನಾನು ಕೈ ಎತ್ತಲಾರೆ. ನಿಶ್ಚಯವಾಗಿಯೂ ನಾನು ವಿಶ್ವಪ್ರಭುವಾಗಿ ಅಲ್ಲಾಹನನ್ನು ಭಯಪಡುತ್ತೇನೆ" ಎಂದು ಪ್ರಸ್ತಾಪ ಮಾಡುತ್ತಾರೆ.[೫] ಇಲ್ಲಿ ಪ್ರಧಾನವಾಗಿ ಬಲಿಯ ಪ್ರಾಧ್ಯಾನತೆಯ ಹಿನ್ನೆಲೆ ಮಾತು ಇಬ್ಬರ ಪುತ್ರರ ಪ್ರಮುಖ ಮಾತುಗಳನ್ನು ದಾಖಲು ಮಾಡುತ್ತಾರೆ. "ಬಲಿ ಕರ್ಮವೆಂಬುದು ಪವಿತ್ರವಾಗಿದೆ. ಪ್ರವಾದಿರೊಡನೆ ಅಲ್ಲಾಹು ಹೀಗೆ ಹೇಳುತ್ತಾನೆ: 'ನೀವು ನಿಮ್ಮ ಪ್ರಭುವಿಗಾಗಿ ನಮಾಝ್ ನಿರ್ವಹಿಸಿರಿ ಮತ್ತು ಬಲಿದಾನ ಮಾಡಿರಿ'[೬] ಬಲಿದಾನ ಎಂದರೆ ಗಂಡ ಸತ್ತ ನಂತರ ಹೆಂಡತಿ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಿರುವುದು.

ನೆಮ್ಮದಿಯ ಬದುಕು ನಿರ್ವಹಿಸಲು ಪ್ರವಾದಿಗಳು ಮಾಡಿರುವ ಕರ್ಮಧರ್ಮದ ಸಾರವಾಗುತ್ತದೆ. "ಪ್ರಾಣಿಗಳ ಮಾಂಸವಾಗಲಿ, ರಕ್ತವಾಗಲಿ ಅಲ್ಲಾಹನ ಬಳಿಗೆ ತಲುಪುವುದಿಲ್ಲ. ಆದರೆ ನಿಮ್ಮ ಭಯಭಕ್ತಿ ಅವನ ಬಳಿಗೆ ತಲುಪುತ್ತದೆ. ಅಲ್ಲಾಹು ನಿಮಗೆ ಮಾರ್ಗದರ್ಶನ ಮಾಡಿದ್ದಕ್ಕಾಗಿ ಅವನ ಮಹಾನತೆಯನ್ನು ನೀವು ಕೊಂಡಾಡಬೇಕೆಂದು ಅವುಗಳನ್ನು ನಿಮಗೆ ಅವನು ಈ ರೀತಿ ಅಧೀನಗೊಳಿಸಿಕೊಟ್ಟಿರುತ್ತಾನೆ. ಸುಕೃತಗೈಯ್ಯುವವರಿಗೆ ಶುಭ ಸುದ್ದಿ ತಿಳಿಸಿರಿ".[೭] ಇಲ್ಲಿ ಭೂಲೋಕದಲ್ಲಿ ಮುಸ್ಲಿಂ ಸಮುದಾಯದವರು ಪ್ರಾಣಿಬಲಿಗಳನ್ನು ಹೆಚ್ಚಾಗಿ ಮಾಡುವುದು ನೋಡುತ್ತೇವೆ. ಪ್ರಧಾನವಾಗಿ ವ್ಯಾಪಾರದ ದೃಷ್ಟಿಯಿಂದ ನೋಡಿದರೂ ದೇವರ ಪ್ರೀತಿ ಪಾತ್ರಕ್ಕೆ ದಾರಿ ಮಾಡಿಕೊಡುವುದು ಗುರುತಿಸಬಹುದು ಎಂಬ ಸಂದೇಶ ಗುರುತಿಸಬಹುದು. "ಇತರ ಧರ್ಮಗಳ ಬಲಿ ಮತ್ತು ಇಸ್ಲಾಮಿನ ಬಲಿಗಳಲ್ಲಿ ಬಹಳಷ್ಟು ವ್ಯತ್ಯಾಸವಿದೆ. ವಿಗ್ರಹ ಮುಂತಾದ ನಿರ್ಜೀವ ವಸ್ತುಗಳ ಮೇಲೆ ಬೆಲೆ ಬಾಳುವ ತುಪ್ಪ, ಹಾಲು ಇತ್ಯಾದಿಗಳನ್ನು ಅಬಿಷೇಕ ಮಾಡುತ್ತಾರೆ. ಇಂತಹ ಬಲಿಯರ್ಪಣೆಯಿಂದ ಯಾರಿಗೂ ಯಾವುದೇ ಪ್ರಯೋಜನವಾಗುವುದಿಲ್ಲ. ಎಲ್ಲವೂ ವ್ಯರ್ಥವಾಗಿ ಹೋಗುತ್ತವೆ. ಪವಿತ್ರ ಕುರ್‌ಆನ್ ಅದಕ್ಕೊಂದು ಉತ್ತಮ ಮಾರ್ಗವನ್ನು ತೋರಿಸಿಕೊಟ್ಟಿದೆ. ಬಲಿಯ ಮಾಂಸ ನಿಮಗೆ ಮತ್ತು ಬಲಿಯ ಭಕ್ತಿ ನನಗೆ ಎಂಬುದು ಇದ್ದುದರಲ್ಲಿ ತೃಪ್ತಿಪಡುವವನಿಗೂ ಯಾಚಿಸಿ ಬರುವವನಿಗೂ ತಿನ್ನಲು ಕೊಡಿರಿ ನೀವು ಕೃತಜ್ಞತೆ ತೋರಿಸಲಿಕ್ಕಾಗಿ ನಿಮಗೆ ನಾವು ಅವುಗಳನ್ನು ಈ ರೀತಿ ಅಧೀನಗೊಳಿಸಿಕೊಟ್ಟದ್ದೇವೆ" ಎಂದು ಮಾಹಿತಿಗಳು ಸಿಗುತ್ತವೆ.[೮] "ಬಲಿಯೆಂಬುದು ಜನರಿಗೆ ಪ್ರಯೋಜನಕಾರಿಯೂ ಆಗಿದೆ. ಅದರ ತೊಗಲನ್ನು ಸಹ ದಾನದ ವಸ್ತುಗಳಲ್ಲಿ ಸೇರಿಸಬೇಕು. ಅದರೆ ಮೂರನೇ ಒಂದಂಶವನ್ನು ಬಲಿ ಕೊಟ್ಟವನಿಗೆ ತಿನ್ನಲಿಕ್ಕಾಗಿ ತೆಗೆದುಕೊಳ್ಳಬಹುದಾಗಿದೆ. ಬಲಿ ಮತ್ತು ಹರಕೆ ಅಲ್ಲಾಹನ ಹೆಸರಲ್ಲಿ ಮಾತ್ರವಾಗಿರಬೇಕು. ಮೃತ ಅವುಲಿಯಾ, ಬೀಬಿ, ಬಾಬಾಗಳ ಬರ್ಕತ್ತನ್ನು ಆಶಿಸಿ ಅವರ ಕಬರ್(ದರ್ಗಾ)ಗಳಿಗೆ ಆಡು, ಕೋಣ, ಕುರಿ, ಕೋಳಿಗಳನ್ನು ಹರಕೆ ಸಲ್ಲಿಸುವುದು ಅಥವಾ ಬಲಿ ಕೊಡುವುದು ಶಿರ್ಕ್ ಆಗಿದೆ. ಈ ರೀತಿ

ದರ್ಗಾಗಳಿಗೆ ಹರಕೆ, ಬಲಿ ಅರ್ಪಿಸುವವರು ಮುಶ್ರಿಕ್‌ಗಳಾಗಿ ಇಸ್ಲಾಮಿನಿಂದ ಹೊರ ಹೋಗುತ್ತಾರೆ. ಅಲ್ಲಾಹನ ಹೆಸರಲ್ಲಿ ಬಲಿಯ ಮತ್ತು ಅಲ್ಲಾಹನವರ ಅನುಗ್ರಹ ಹಾಗೂ ಸಂಪ್ರೀತಿಯನ್ನರಸುತ್ತ ಬೈತುಲ್ ಹರಾಮನ್ನು ಗುರಿಯಾಗಿರಿಸಿ ಹೋಗುವವರನ್ನೂ ಕೊಡದು" ಎಂದು ಪ್ರಸ್ತಾಪ ಬರುತ್ತವೆ.[೬] ಗ್ರಾಮದೇವತೆಗಳ ಆರಾಧನೆ ಸಮಯದಲ್ಲಿ ಪ್ರಾಣಿಬಲಿ ನಡೆದ ನಂತರ ಕುರಿಯ ಅಂಗಗಳಲ್ಲಿ ಕೆಲವನ್ನು ಯಾವ ಯಾವ ಜನರು ತೆಗೆದುಕೊಳ್ಳಬೇಕು ಎಂದು ಗುರುತಿಸುತ್ತದೆ. ಈಗಲೂ ಕುರಿ, ಕೋಣ ಮೇಕೆಗಳನ್ನು ಕಡಿದಾಗ ತಲೆ, ಚರ್ಮ, ಮಾಂಸ, ಮುಂತಾದವುಗಳನ್ನು ಬೇರೆ ಬೇರೇ ಸಮುದಾಯದವರು ವಿಭಾಗಿಸಿಕೊಂಡು ಹಂಚಿಕೊಳ್ಳುತ್ತಾರೆ.

ಸಾಮಾನ್ಯವಾಗಿ ಮಾನವನಿಗೆ ತೊಂದರೆಗಳು, ಕಷ್ಟಗಳು, ನಿವಾರಣೆ ಮಾಡದ ಸಮಸ್ಯೆಗಳಿಗೆ ದೇವರಿಗೆ ಮಾರುಹೋಗುವುದು ಬೆಳಕಿಗೆ ಬಂದಿದೆ. ಏಕೆಂದರೆ ಗುಹಾಂತರ, ಗುಡ್ಡಗಾಡು ಪ್ರದೇಶಗಳಲ್ಲಿ ಜೀವನವನ್ನು ಮಾಡುತಿದ್ದ ಮನುಷ್ಯನು ಯಾವುದೋ ಒಂದು ಶಕ್ತಿ, ಅಗೋಚರ ಶಕ್ತಿ ಇದೆ ಎಂದು ಅರಿತುಕೊಂಡು ಅದಕ್ಕೆ ಮಾರುಹೋಗಿ ಪೂಜಿಸುವುದನ್ನು ಗುರುತಿಸಿಕೊಂಡನು. ತದನಂತರದಲ್ಲಿ ಹೊಟ್ಟೆ ಪಾಡಿಗಾಗಿ ಅಡವಿಯಲ್ಲಿ ಅಲೆದಾಡುತ್ತಿದ್ದ ಮನುಷ್ಯ ಅಲ್ಲಿ ದೊರೆಯುತ್ತಿದ್ದ ಹೂವುಗಳ ಪರಿಮಳವನ್ನು ಗುರುತಿಸಿ, ಹೂವುಗಳನ್ನು ತಂದು ತಾನು ನಂಬಿಕೊಂಡಿದ್ದ ದೈವಕ್ಕೆ ಅರ್ಪಿಸಿ ಸಂತೋಷಪಡತೊಡಗಿದ. ಈ ಹಿನ್ನೆಲೆಯಲ್ಲಿ ಈ ಹೂವುಗಳಾದ ಮಲ್ಲಿಗೆ, ಜಾಜಿಮಲ್ಲಿಗೆ, ಕನಕಾಂಬರ, ಕಾಕಡ ಹೂ, ಚೆಂಡುಮಲ್ಲಿಗೆ, ಮುಂತಾದವುಗಳನ್ನು ತಂದು ದೈವದ ಮೂರ್ತಿಗಳಿಗೆ ಅರ್ಪಿಸಿತೊಡಗಿರಬೇಕು. ಈ ಪರಿಪಾಟಗಳ ಪರಿಣಾಮವಾಗಿ ಮನುಷ್ಯ ತನಗೆ ಒದಗಿ ಬಂದ ಕಷ್ಟ ಕಾರ್ಪಣ್ಯಗಳಾದ ರೋಗರುಜಿನಗಳು, ಪರಿಸರದಲ್ಲಿ ನಿರ್ಮಾಣವಾಗುತ್ತಿದ್ದ ದುರ್ವಾಸನೆಗಳಿಂದ ಭಯಂಕರ ರೋಗಗಳು ಸೃಷ್ಟಿಯಾಗುತ್ತಿದ್ದವು. ಈ ರೋಗಗಳಿಂದ ವಿಮುಕ್ತಿ ಪಡೆಯಲು, ದೇವಿಗೆ ಹರಕೆಗಳನ್ನು ಹೇಳಿಕೊಂಡನು. ಇಲ್ಲಿ ಗಂಡು-ಹೆಣ್ಣು ಎಂಬ ಭೇದಭಾವ ಇರುವುದಿಲ್ಲ. ಎಲ್ಲರೂ ಒಂದೇ ಎಂಬ ಭಾವನೆಯಲ್ಲಿ ಹರಕೆಗಳನ್ನು ಹೇಳಿಕೊಳ್ಳುತ್ತಿದ್ದರು. ಈ ಹಿನ್ನೆಲೆಯಲ್ಲಿ ದೇವರಿಗೆ ಹರಕೆಯ ರೂಪದಲ್ಲಿ ಸಾಕುವ ಪ್ರಾಣಿಗಳನ್ನು ಅರ್ಪಿಸುವುದು ರೂಢಿಗೆ ತಂದುಕೊಂಡನು.

"ಆಹಾರ ಸಂಗ್ರಹಣೆ, ಬೇಟೆ, ಪಶುಪಾಲನೆ, ಕೃಷಿ ಹೀಗೆ ಮಾನವನ ಆರ್ಥಿಕ ಚಟುವಟಿಕೆಯ ವಿವಿಧ ಹಂತಗಳಲ್ಲಿ ಹುಟ್ಟುವ ಆಚರಣೆಗಳು ತನ್ನ ಹುಟ್ಟಿಗೆ ಕಾರಣವಾದ ಆರ್ಥಿಕ ಚಟುವಟಿಕೆ ಇಳಿಮುಖವಾಗಿ ಹೊಸ ಜೀವನ ವಿಧಾನ ಮಾಡುವ ಕಾಲಕ್ಕೆ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳಬಹುದು, ಇಲ್ಲವೇ ಹೊಸ ರೂಪವನ್ನು ಪಡೆಯಬಹುದು. ಅದನ್ನು

ಮುಂದುವರಿಸಿಕೊಂಡು ಹೋಗಲು ಆಗ ಹೊಸ ಪುರಾಣ ಹುಟ್ಟಿಕೊಳ್ಳುತ್ತದೆ. ಮನುಷ್ಯನನ್ನು ಕುರಿತು ಮಾತ್ರವಲ್ಲ ಸಸ್ಯ, ಪ್ರಾಣಿ, ದೇವರುಗಳನ್ನು ಕುರಿತು ಆಚರಣೆಗಳು ಹುಟ್ಟಿಕೊಂಡಿವೆ. ವರ್ಗ ಮತ್ತು ವರ್ಣಗಳಾಗಿ ವಿಭಜನೆಗೊಂಡಿರುವ ನಮ್ಮ ಸಂಸ್ಕೃತಿಯಲ್ಲಿ ಆಚರಣೆಗಳು ಹುಟ್ಟಿಕೊಂಡಿರುವುದು ಗುರುತಿಸಬಹುದು."[೧೦]

ಅನೇಕ ಶತಮಾನಗಳಿಂದ ಜೀವನವನ್ನು ಮಾಡುತ್ತಿದ್ದ ಮಾನವ ಹೆಚ್ಚಾಗಿ ಅಡವಿಯಲ್ಲಿ ವಾಸ ಮಾಡುತ್ತಿದ್ದನು. ಕೆಲವು ಪುರಾಣಗಳಲ್ಲಿ, ಶಾಸನಗಳಲ್ಲಿ, ಕಲ್ಲುಬಂಡೆಗಳಲ್ಲಿ ದೊರೆತ ಕೆತ್ತನೆಗಳು ಹಾಗೂ ರಚನೆಗಳಲ್ಲಿ ಕಾಣಬಹುದು. ಈ ಪ್ರಾಣಿಬಲಿಯಲ್ಲಿ ಮನುಷ್ಯ ಅಭಿವೃದ್ಧಿ, ಏಳಿಗೆಯೆ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತದೆ. ಈ ಪ್ರಕಾರವಾಗಿ ಪ್ರಾಣಿಬಲಿಯು ರೂಪಾಂತರಗೊಂಡಿರುವುದು ಗುರುತಿಸಬಹುದು.

ಬೇಟೆ ಸಂಸ್ಕೃತಿ

ಅಡವಿಯಲ್ಲಿ ಜೀವನವನ್ನು ಮಾಡುತ್ತಿದ್ದ ಮನುಷ್ಯನಿಗೆ ತಿನ್ನಲು ಯಾವುದೇ ವಸ್ತುಗಳು ದೊರೆಯುತ್ತಿರಲಿಲ್ಲ ಎಂದು ಇತಿಹಾಸ ಅಧ್ಯಯನಕಾರರು ಉಲ್ಲೇಖಿಸುತ್ತಾರೆ. ಈ ಪ್ರಕಾರವಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗಿ ಬೇಟೆಯಾಡುವುದು ಅವನ ವೃತ್ತಿಯಾಗಿತ್ತು. ಈ ಬೇಟೆಯಲ್ಲಿಯೇ ತನಗೆ ದೊರೆತ ಮೊಲ, ಮುಂಗುಸಿ, ಇಲಿ, ಕಾಡುಬೆಕ್ಕು, ಜಿಂಕೆ, ಹಂದಿ, ಮುಂತಾದ ಪ್ರಾಣಿಗಳನ್ನು ತಂದು ದೇವರಿಗೆ ಎಡೆಮಾಡಿ ಬಡಿಸಿ ಅದನ್ನು ತಿನ್ನುವ ಸಂಸ್ಕೃತಿ ಬೆಳೆಸಿಕೊಂಡಿದ್ದ. "ಮಾನವನ ಸಾಂಸ್ಕೃತಿಕ ಇತಿಹಾಸದ ಮುಂದಿನ ಹಂತಗಳಲ್ಲಿ ಬೇಟೆಯು ಒಂದು ಜೀವನ ವಿಧಾನವಾಗಿ ಉಳಿಯುವ ಅನಿವಾರ್ಯತೆ ಸಾರ್ವತ್ರಿಕವಾಗಲಿಲ್ಲ. ಭೌಗೋಳಿಕ ಪರಿಸರದಲ್ಲಿ ಬದುಕುವಾತನಿಗೆ ಮಾತ್ರ ಸ್ವಯಂ ರಕ್ಷಣೆಗಾಗಿ ಬೇಟೆಯು ಒಂದು ಅನಿವಾರ್ಯ ಅಂಶವಾಗಿ ಆ ಮೂಲಕ ಜೀವ ವಿಧಾನವಾಗುವ ಅವಕಾಶವಿದೆ. ಅಂತಹ ಪರಿಸರಿಂದ ದೂರದ ಭೌಗೋಳಿಕ ಆವರಣದಲ್ಲಿ ಬಯಲುನಾಡು ಮುಂತಾದೆಡೆ ಬದುಕುವಾತನಿಗೆ ಕಾಡುಪ್ರಾಣಿಗಳೇ ಇಲ್ಲದಿರುವ ಸ್ಥಿತಿಯಲ್ಲಿ ಬೇಟೆ ಅನಿವಾರ್ಯವಾಗುವುದಿಲ್ಲ. ಆದರೆ ಆಹಾರಕ್ಕಾಗಿ ಮಾಂಸದ ಸಲುವಾಗಿ, ಆತ ತಾನಿರುವ ಸ್ಥಳದಿಂದ ಹತ್ತಿರದ ಅಥವಾ ದೂರದ ಕಾಡುಪ್ರದೇಶಗಳಿಗೆ ಹೋಗಿರುವ ಸಾಧ್ಯತೆ ಇದೆ. ಆದರೆ ಇಂತಹ ಎಲ್ಲ ಸಂದರ್ಭಗಳಲ್ಲೂ ಪ್ರಾಣಿ ಸಿಗುವ ಸಂಭವ ಇಲ್ಲವಾದ್ದರಿಂದ ಇಂತಹ ಪ್ರದೇಶಗಳಲ್ಲಿ ಪ್ರಾಣಿಗಳನ್ನು ಮನೆಗಳಲ್ಲಿ ಸಾಕುವ ಜೀವನವಿಧಾನ ಆರಂಭವಾಗಿರಬೇಕು. ಈ ರೀತಿ ಪ್ರಾಣಿಗಳನ್ನು ಸಾಕುವ ಹಾಗೂ ಇಂತಹ ಸಾಕುಪ್ರಾಣಿಗಳ ಸಂತತಿಯನ್ನು ಬೆಳೆಸುವ ಪ್ರವೃತ್ತಿಯೇ ಬೇಟೆಯ ಸಂಸ್ಕೃತಿಯನ್ನು ಕಡಿಮೆ ಮಾಡಿದಂತೆ ಕಾಣಿಸುತ್ತದೆ. ಆದರೆ ಕಾಡಿನಲ್ಲೆಯೇ ಉಳಿದುಕೊಂಡು, ಪರಿಮಿತ ಭೌಗೋಳಿಕ ಪರಿಸರದಲ್ಲಿ ಬಾಹ್ಯ ಸಂಪರ್ಕಕ್ಕೆ

ಸಾಮಾನ್ಯವಾಗಿ ಒಳಗಾಗದ ಜನಾಂಗಗಳು ವಿಶೇಷವಾಗಿ ಸಿಗುತ್ತವೆ. ಇವುಗಳನ್ನು ಗುಡ್ಡಗಾಡು ಜನಾಂಗಗಳು ಎಂದು ಸಾಮಾನ್ಯವಾಗಿ ಕರೆಯುತ್ತೇವೆ. ಮಾನವನ ಪ್ರಾಚೀನ ಸಂಸ್ಕೃತಿಯ ಅನೇಕ ಪಳೆಯುಳಿಕೆಗಳನ್ನು ಇವರಲ್ಲಿ ಕಾಣುತ್ತೇವೆ. ಸಾಂಸ್ಕೃತಿಕ ವಿಕಾಸದ ಆರಂಭದ ಹಂತಗಳನ್ನು ದಾಟಿಕೊಂಡು ಇವರು ಬಂದಿಲ್ಲ. ಇವರಲ್ಲಿ ಬೇಟೆಯು ಒಂದು ಪ್ರಮುಖ ಜೀವನವಿಧಾನವಾಗಿ ಉಳಿದಿರುವುದರಿಂದ ಇಂತಹ ಜನಾಂಗಗಳು ಪ್ರತ್ಯೇಕವಾಗಿ ಉಳಿದಿರುವ ಸಾಂಸ್ಕೃತಿಕ ಕಾರಣಗಳನ್ನು ಅಲೋಚಿಸುವುದು ಅಗತ್ಯ" ಎಂದು ಪ್ರಸ್ತಾಪ ಮಾಡುತ್ತಾರೆ.[೧೧] "ಆಧುನಿಕ ಸಂದರ್ಭದಲ್ಲಿ ಪರಿಸರ ವಿಜ್ಞಾನದ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆಯು ಮುಖ್ಯ ಅಗತ್ಯವಾಗಿ ಕಾಣಿಸುತ್ತದೆ. ಇದರ ಅಂಗವಾಗಿ ಸಸ್ಯ ಮತ್ತು ವನ್ಯಮೃಗಗಳ ಸಂರಕ್ಷಣೆ ಅಗತ್ಯವಾಗುತ್ತದೆ. ಹಿಂಸೆ ಅಹಿಂಸೆಗಳ ಪರಿಕಲ್ಪನೆ ಪ್ರಧಾನವಾಗಿ ತಾತ್ವಿಕವಾದುದು. ಆದರೆ ಪರಿಸರ ಸಂರಕ್ಷಣೆ ಮತ್ತು ವನ್ಯಮೃಗ ಸಂರಕ್ಷಣೆ ಹೆಚ್ಚು ಪ್ರಾಯೋಗಿಕವಾದುದು. ಪರಿಸರದಲ್ಲಿ ಮನುಷ್ಯನ ಉಳಿವಿಗಾಗಿ ಮೃಗಪಕ್ಷಿಗಳ ಸಹಜ ಪರಿಸರ ಅನಿವಾರ್ಯ. ಈ ಸ್ಥಿತಿಯಲ್ಲಿ ಬೇಟೆ ಸಂಸ್ಕೃತಿ ತನ್ನ ಹಿಂದಿನ ಸಂದರ್ಭವನ್ನು ಅವಶ್ಯಕತೆಯನ್ನು ಕಳೆದುಕೊಳ್ಳುತ್ತದೆ. ಬೇಟೆಯನ್ನೇ ನೆಚ್ಚಿಕೊಂಡ ಬೇಡಜನಾಂಗದವರು ತಮ್ಮ ಜೀವನೋಪಾಯಕ್ಕಾಗಿ ಈಗಾಗಲೇ ಇತರ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಆದರೂ ಕೃಷಿ ಪ್ರಧಾನ ಸಮಾಜಗಳಲ್ಲಿ ಬೆಳೆಗಳ ಸಂರಕ್ಷಣೆಗಾಗಿ ಈಗಲೂ ಬೇಟೆ ಕೆಲವೊಮ್ಮೆ ಅನಿವಾರ್ಯ ವಾಗುತ್ತದೆ. ಮಲೆನಾಡು ಮತ್ತು ಪಶ್ಚಿಮಘಟ್ಟದ ತಪ್ಪಲಿನ ಪ್ರದೇಶಗಳಲ್ಲಿ ವಾಸಿಸುವ ಜನರು ಆತ್ಮರಕ್ಷಣೆ ಮತ್ತು ತಮ್ಮ ಬೆಳೆಗಳ ಸಂರಕ್ಷಣೆಗಾಗಿ ಕೆಲವೊಮ್ಮೆ ಅನಿವಾರ್ಯವಾಗಿ ಬೇಟೆಯಾಡುವ ಕೆಲಸ ಮಾಡಬೇಕಾಗುತ್ತದೆ" ಎಂದು ವಿವೇಚಿಸುತ್ತಾರೆ.[೧೨] "ನಂಬಿಕೆ ಆಚರಣೆಯ ಬೆನ್ನಲುಬು, ನಂಬಿಕೆಯ ಸಿದ್ಧಾಂತ ಆಚರಣೆಯನ್ನು ಕೈಬಿಡದೆ ಮುಂದುವರಿಸಿಕೊಂಡು ಹೋಗುವಂತೆ ಮಾಡುತ್ತದೆ. ಆಚರಣೆಯು ಹುಟ್ಟುವ ಅಥವಾ ನಂತರ ಪುರಾಣಗಳು ಹುಟ್ಟಿಕೊಳ್ಳುತ್ತೇವೆ. ಹೀಗೆ ನಂಬಿಕೆ, ಆಚರಣೆ, ಪುರಾಣ ಜೊತೆಯಾಗಿಯೇ ಇರಬಹುದು. ನಿರ್ದಿಷ್ಟ ಸಮಾಜದಲ್ಲಿ ಒಂದು ಜಾತಿ ಅಥವಾ ಉಪಜಾತಿಯಲ್ಲಿ ಬಳಕೆಯಲ್ಲಿರುವ ಆಚರಣೆಗಳ ಹುಟ್ಟಿಗೆ ಪ್ರಬಲವಾದ ಕಾರಣಗಳು ಇರಲೇಬೇಕು. ಅದು ಆರ್ಥಿಕ, ಸಾಮಾಜಿಕ, ಭಾವನಾತ್ಮಕ, ಹೀಗೆ ಏನಾದರೂ ಆಗಿರಬಹುದು. ಒಬ್ಬ ವ್ಯಕ್ತಿ ಇಷ್ಟಪಟ್ಟು ಒಂದು ಆಚರಣೆಯನ್ನು ಸೃಷ್ಟಿಮಾಡಲು ಸಾಧ್ಯವಿಲ್ಲ. ಒಂದು ಜನಾಂಗದ ಜೀವನ ವಿಧಾನದ ಬೇಡಿಕೆಯ ಅಂಗವಾಗಿ ಆಚರಣೆ ರೂಪು ಪಡೆಯುತ್ತದೆ. ಪ್ರಕೃತಿಯಲ್ಲಿ ಮತ್ತು ಮಾನವನ ದೇಹದಲ್ಲಿ ಉಂಟಾಗುವ ಬದಲಾವಣೆಯನ್ನು ಆಚರಣೆಯ ಮೂಲಕ ಗುರುತಿಸಲಾಗುತ್ತದೆ. ಮಾನವನ ಬದುಕಿಗೆ ಮತ್ತು ಅವನ ಭಾವ'ಪ್ರಪಂಚಕ್ಕೆ ಸಂಬಂಧಿಸಿದ ಆಚರಣೆಗಳೂ, ನೈಸರ್ಗಿಕ ಕ್ರಿಯೆಗಳಿಗೆ ಸಂಬಂಧಿಸಿದ ಆಚರಣೆಗಳೂ, ಆರ್ಥಿಕ ಚಟುವಟಿಗಳಿಗೆ

ಸಂಬಂಧಿಸಿದ ಹಾಗೂ ಸಾಮಾಜಿಕ ರಚನೆಗಳಿಗೆ ಸಂಬಂಧಿಸಿದ ಆಚರಣೆಗಳೆಂದು ಇವನ್ನು ಸ್ಥೂಲವಾಗಿ ವಿಂಗಡಿಸಬಹುದು. ಮನುಷ್ಯನ ಮನಸ್ಸಿನ ಪರಿವರ್ತನೆಯ ಬಗೆಬಗೆಯ ವಿನ್ಯಾಸಗಳನ್ನು ಆಚರಣೆಗಳು ವ್ಯಕ್ತಗೊಳಿಸುತ್ತವೆ."[೧೩] ಮಾನವನ ಮನಸ್ಸಿನ ಭಾವನಾಲೋಕದಲ್ಲಿ ಪ್ರಾಣಿಬಲಿಯ ಆಚರಣೆಯು ಒಂದಾಗಿ ಬರುವುದನ್ನು ಗುರುತಿಸಬಹುದು. "ಜಾತಿಪದ್ಧತಿಗೂ, ಆಚರಣೆಗಳಿಗೂ ಸಂಬಂಧವಿದೆ. ಒಂದು ದೇವತೆಗೆ ಮಾಡುವ ಆಚರಣೆ ದೈಹಿಕವಾಗಿ ಹಿಂಸೆಯನ್ನು ಮಾಡಿಕೊಳ್ಳುವಂಥದ್ದೂ, ಭಯಾನಕವಾದುದೂ ಆಗಿರುತ್ತದೆ. ಮೇಲುಜಾತಿಯ ಜನರ ಆಚರಣೆ ಮೃದುವಾಗಿರುವುದಲ್ಲದೆ ಬಲಿ, ಹಿಂಸೆ ಇತ್ಯಾದಿಗಳನ್ನು ಹೆಚ್ಚಾಗಿ ಒಳಗೊಂಡಿರುವುದಿಲ್ಲ. ಉಗ್ರದೇವತೆಗೆ ವೈದಿಕನೊಬ್ಬ ಅರ್ಚಕನಾದರೆ ಆ ದೇವತೆಗಳಿಗೆ ಪ್ರಿಯವಾದ ಆಚರಣೆಗಳಾದ ಕೊಂಡ, ಬಾಯಿಬೀಗ, ಸಿಡಿ ಇವೆಲ್ಲಾ ಕ್ರಮವಾಗಿ ಮಾಯವಾಗಿ ಬಿಡಬಹುದು. ಎಲ್ಲ ಜಾತಿಯವರು ಸೇರಿ ಮಾಡುವ ಆಚರಣೆಗಳಲ್ಲಿಯೂ ಕೆಳಜಾತಿಯವರದು ದೈಹಿಕವಾಗಿ ಶ್ರಮದಾಯಕ ಆಚರಣೆಗಳು" ಎಂದು ವಿವರಿಸುತ್ತಾರೆ.[೧೪] ಇಲ್ಲಿ ಬಳ್ಳಾರಿ ಜಿಲ್ಲೆಯಾದ್ಯಂತ ಸಾಮಾನ್ಯವಾಗಿ ಪ್ರಾಣಿಬಲಿ ಭಯಂಕರವಾದ ಹಿಂಸಾ ಪ್ರವೃತ್ತಿಯಿಂದ ಕೂಡಿದೆಯಾದ್ದರಿಂದ ಉನ್ನತ ಜಾತಿಯವರು ಪ್ರಾಣಿಬಲಿಗಳನ್ನು ಮಾಡುವುದಿಲ್ಲ. ಕೆಲವು ಗ್ರಾಮಗಳಲ್ಲಿ ಉನ್ನತ ಜಾತಿಯವರು ಕೆಳಜಾತಿಯವರಿಂದ ಪ್ರಾಣಿಬಲಿಗಳನ್ನು ಮಾಡಿಸುತ್ತಾರೆ. ಕೋಣನ ಬಲಿ ಕೊಡುವುದರ ಬಗ್ಗೆ ಸಿದ್ಧಲಿಂಗಯ್ಯ ಅವರು ತಮ್ಮ ವ್ಯಾಖ್ಯಾನವನ್ನು ಹೀಗೆ ಮಾಡುತ್ತಾರೆ. ಕೋಣ ಪ್ರಾಣಿಗೂ ಬಲಿಗೂ ತೀರ ಸಂಬಂಧವನ್ನು ಕಲ್ಪಿಸುವುದನ್ನು ಗಮನಿಸಬಹುದು. "ಮಾರಮ್ಮನ ಹಬ್ಬದಲ್ಲಿ ಕೋಣವನ್ನು ಕಡಿಯಲಾಗುತ್ತದೆ. ಈ ಆಚರಣೆಯ ಹುಟ್ಟು ಸಮೃದ್ಧಿ ಮೂಲವಾಗಿದ್ದರೂ ಇದಕ್ಕೆ ಸಂಬಂಧಿಸಿದ ಪುರಾಣ ನಮ್ಮ ಸಾಮಾಜಿಕ ಸಂಬಂಧದಲ್ಲಿ ಗಮನಾರ್ಹವಾದುದಾಗಿದೆ. ಮಾರಮ್ಮ ಬ್ರಾಹ್ಮಣ ಮಹಿಳೆ, ಈಕೆಯನ್ನು ಹೊಲೆಯನೊಬ್ಬ ತಾನೂ ಬ್ರಾಹ್ಮಣನೆಂದು ಸುಳ್ಳು ಹೇಳಿ ಮದುವೆಯಾಗುತ್ತಾನೆ. ಇವರಿಗೆ ಮಕ್ಕಳೂ ಆಗುತ್ತವೆ. ಕೊನೆಗೆ ಮಾರಮ್ಮನಿಗೆ ತನ್ನ ಗಂಡ ಹೊಲೆಯನೆಂದು ತಿಳಿದು ಅವಳು ಬೆಂಕಿಗೆ ಬಿದ್ದು ಸಾಯುತ್ತಾಳೆ. ಈಗ ಮಾರಮ್ಮನಾಗಿರುವ ಈಕೆಗೆ ಬಲಿಯಾಗಲು ಹೊಲೆಯ ಕೋಣನಾಗಿ ಬಂದಿದ್ದಾನೆ. ಮಾರಮ್ಮ ಹಾಕಿದ ಶಾಪಕ್ಕೆ ಅನುಗುಣವಾಗಿ ಪ್ರತೀ ವರ್ಷ ಜಾತಿಪದ್ಧತಿಯನ್ನು ಭಗ್ನಗೊಳಿಸಿದ ಹೊಲೆಯನನ್ನು ಕೋಣನ ರೂಪದಿಂದ ಹೊಲೆಯರಿಂದಲೇ ಕಡಿಸಲಾಗುತ್ತದೆ. ಈ ಆಶಯವನ್ನು ಉಳ್ಳ ಪುರಾಣ ಬೇರೆ ಬೇರೆ ರೂಪದಲ್ಲಿ ಪ್ರಚಾರದಲ್ಲಿದೆ." ಎಂದು ಕೋಣನ ಬಲಿ ಹುಟ್ಟಿನ ಬಗ್ಗೆ ಪ್ರಸ್ತಾಪಿಸುತ್ತಾರೆ.[೧೫]

ಉಗ್ರ ಸ್ವರೂಪದ ಆಚರಣೆಗಳು

ಪ್ರಾರಂಭದ ಹಂತದಲ್ಲಿ ಮನುಷ್ಯ ತನ್ನ ಹಿತದೃಷ್ಟಿಯಿಂದ ತನಗೆ ತಿಳಿದ ಪ್ರತಿಯೊಂದು ವಸ್ತುವನ್ನು ಆಚರಣೆಗೆ ತಂದುಕೊಂಡಿದ್ದನು. ಅಂಬಳಿಕೆ ಹಿರಿಯಣ್ಣ ಅವರು ತಮ್ಮ ಕೃತಿಯಲ್ಲಿ ಈ ರೀತಿಯಾದ ಮಾತುಗಳನ್ನು ವ್ಯಕ್ತಪಡಿಸುತ್ತಾರೆ. "ದೈವಾರಾಧನೆಯು ಜಗತ್ತಿನ ಎಲ್ಲ ಮಾನವ ಜನಾಂಗಗಳಲ್ಲಿ ಕಂಡುಬರುತ್ತದೆ. ಪ್ರಕೃತಿಯ ವೈಚಿತ್ರ್ಯ, ವೈಪರೀತ್ಯಗಳಿಂದ ಹುಟ್ಟಿದ ಭಯ-ಭಕ್ತಿಯಿಂದ ತನ್ನ ಜೀವನವನ್ನು ಯಾವುದೋ ಕಾಣದ ಕೈ ನಿಯಂತ್ರಿಸುತ್ತದೆಯೆಂದು ಬಲವಾಗಿ ನಂಬಿ, ಆ ನಿಯಾಮಕ ಶಕ್ತಿಯನ್ನು ಒಲಿಸಿಕೊಳ್ಳುವ ಪ್ರಬಲ ಆಶಯವನ್ನು ಮನುಷ್ಯ ಹೊಂದಿದ್ದನು. ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅಗೋಚರ ಶಕ್ತಿಯನ್ನು ಅವಲಂಬಿಸಿ, ಆ ಶಕ್ತಿಯನ್ನು ಸಂಪ್ರೀತಗೊಳಿಸುವ ಯತ್ನದಲ್ಲಿ ತೊಡಗಿ ತನಗೆ ದೊರಕಿದ ವಸ್ತು ವಿಶೇಷತೆಗಳನ್ನು ಸಮರ್ಪಣಾ ಭಾವದಿಂದ ಅರ್ಪಿಸುತ್ತಾ ಬಂದನು"[೧೬] ಈ ಹಿನ್ನೆಲೆಯಲ್ಲಿ ಪೂಜಾರ್ಹವಾಗಿರುವ ಉಗ್ರ ಆಚರಣೆ ಬೆಳಕಿಗೆ ಬಂದಿರುವುದು ಗುರುತಿಸಬಹುದು. "ಸೃಷ್ಟಿಯ ಎಲ್ಲ ಜೀವಿಗಳ ಆತ್ಮವು ಮರಣಾಂತರ ಮರ-ಗಿಡಗಳಲ್ಲಿ ನೆಲೆಸಿರುತ್ತದೆಂಬ ನಂಬಿಕೆ ಆರಂಭ ಕಾಲದಲ್ಲಿ ಸಾಮಾನ್ಯವಾಗಿತ್ತು. ಸಂದರ್ಭ ಬಂದಾಗ ಗುಹೆ, ಬಂಡೆ, ಗವಿಗಳಲ್ಲೋ, ಮರ-ಗಿಡಗಳಲ್ಲೋ ಆತ್ಮಗಳು ನೆಲೆಸಿ, ಅವು ಮಳೆ-ಬೆಳೆಗಳ ಅಭಿವೃದ್ಧಿಗೆ, ವಂಶಾಭಿವೃದ್ಧಿಗೆ ಹೆಣ್ಣು ಮಕ್ಕಳನ್ನು ಪಡೆಯುವುದಕ್ಕೆ ಕಾರಣವಾಯಿತು" ಬದುಕಿನಲ್ಲಿ ಆರಾಧನೆ ಪಡೆದುಕೊಂಡಿರುವ ಮಹತ್ವದ ಬಗ್ಗೆ ವಿವೇಚಿಸುತ್ತಾರೆ.[೧೭] ಈ ಸ್ವರೂಪದಲ್ಲಿ ಪ್ರತಿದಿನ ಜೀವನದಲ್ಲಿ ಮಾನವನು ಪ್ರಕೃತಿಯಿಂದ ಪಡೆಯುವ ಪ್ರಯೋಜನಗಳಿಗಾಗಿ ಹಲವಾರು ಮರಗಳನ್ನು ದೈವದ ಭಾವನೆಯಲ್ಲಿ ಆರಾಧನಾ ಕೇಂದ್ರಗಳನ್ನಾಗಿ ಮಾಡಿಕೊಂಡು ಸಾಮಾಜಿಕ ಜೀವನದ ಮಹತ್ವವನ್ನು ಪಡೆದುಕೊಂಡಿರುವುದನ್ನು ಗುರುತಿಸಬಹುದು. ಆಧುನಿಕ ಸಂದರ್ಭದಲ್ಲಿ ಗೃಹಿಣಿ ತುಳಸಿಗೆ ಪ್ರದಕ್ಷಿಣೆ ಬರುವುದು ಉದಾಹರಣೆಯಾಗಿದೆ.

ದಿನಾಂಕ ೫.೧೨.೨೦೧೦ ರಂದು ಪ್ರಕಟವಾದ ಪ್ರಜಾವಾಣಿ ದಿನ ಪತ್ರಿಕೆಯ ಸಾಪ್ತಾಹಿಕ ಪುರವಣಿಯಲ್ಲಿ ರಹಮತ್ ತರೀಕೆರೆ ಅವರು 'ನರಬಲಿ: ಎಷ್ಟೊಂದು ರೂಪಗಳು' ಎಂಬ ಶೀರ್ಷಿಕೆಯ ಹಿನ್ನೆಲೆಯಲ್ಲಿ ಲೇಖನವನ್ನು ಬರೆದಿದ್ದಾರೆ. ಈ ಲೇಖನದಲ್ಲಿ "ನಮ್ಮಲ್ಲಿ ನರಬಲಿ ವ್ಯಾಪಕವಾಗಿತ್ತು. ಇದಕ್ಕೆ ಸಾಕ್ಷಿ ಕರ್ನಾಟಕದ ತುಂಬ ಇರುವ ಬಲಿಶಿಲ್ಪ ಮತ್ತು ರುಂಡಶಿಲ್ಪ, ಬಲಿಶಿಲ್ಪವು ದೇಹವು ಬಲಿಯಾಗುತ್ತಿರುವ ಹೊತ್ತಿನ ಇಡೀ ಸನ್ನಿವೇಶವನ್ನು ಒಳಗೊಂಡಿರುತ್ತದೆ. ರುಂಡಶಿಲ್ಪವೆಂದರೆ ಬಲಿಯಾದ ವೀರನ ತಲೆಚೆಂಡಿನಷ್ಟೆ ಕೆತ್ತಿರುವುದು, ಶ್ರೀಶೈಲ, ಮೊಳಕಾಲ್ಮೂರು ಬಲಿಯ ಕಡೂರು, ಬಲಿಯ ತುರುವನಹಳ್ಳಿ, ಚಿಕ್ಕಮಗಳೂರು ಸಮೀಪದ ಹಲಸಬಾಳು, ಗೋಕಾಕದ ಜೋಗಿಕೊಳ್ಳ, ಬಳ್ಳಾರಿ ಜಿಲ್ಲೆಯ ಮೈಲಾರ ಮತ್ತು ಹಿರೇಮೈಲಾರ- ಮುಂತಾದ

ಕಡೆ ಈ ಎರಡೂ ಬಗೆಯ ಶಿಲ್ಪಗಳಿವೆ. ಮೇಲೆ ಕಾಣಿಸಿದ ಜಾಗಗಳಲ್ಲಿ ಹೆಚ್ಚಿನವು ಭೈರವಾರಾಧನೆಗೆ ಸಂಬಂಧಪಟ್ಟವು. ಶ್ರೀಶೈಲದ ಮಲ್ಲಿಕಾರ್ಜುನ ಗುಡಿಯ ಪ್ರಾಕಾರವು ಶಿವಭಕ್ತಿರು ಅನೇಕ ವಿಧಾನಗಳಲ್ಲಿ ಬಲಿ ಹೋಗುವ ಉಬ್ಬುಶಿಲ್ಪಗಳಿಂದ ತುಂಬಿದೆ. ಹಳೇಬೀಡಿನ ಹೊಯ್ಸಳೇಶ್ವರ ಗುಡಿಯ ಗೋಡೆಯಲ್ಲೂ ಭೈರವನಿಗೆ ಮಗುವೊಂದನ್ನು ಬಲಿಗೊಡುತ್ತಿರುವ ಶಿಲ್ಪವಿದೆ. ನರಬಲಿಯ ಮುಖ್ಯ ದೈವಗಳೆಂದರೆ. ಭೈರವ ಮತ್ತು ಕಾಳಿ(ಭೈರವಿ). ಈಗಲೂ ಈ ಎರಡು ದೈವಶಿಲ್ಪಗಳಲ್ಲಿ ಕೈಯಲ್ಲಿ ಕತ್ತರಿಸಿದ ನರರುಂಡ, ಕೊರಳಲ್ಲಿ ರುಂಡಮಾಲೆ, ಕೆಲವೊಮ್ಮೆ ತ್ರಿಶೂಲದ ತುದಿಯಲ್ಲಿ ಸಿಲುಕಿರುವ ನರದೇಹ, ಪಾದದಡಿಯಲ್ಲಿ ಕತ್ತರಿಸಿದ ರುಂಡಗಳು ಇವೆ. ಮಹಾಯಾನ ಪಂಥಕ್ಕೆ ಸೇರಿದ ತಾಂತ್ರಿಕ ಬೌದ್ಧರ ಚಿತ್ರಪಟಗಳಲ್ಲೂ ನರಶಿರಗಳ ಮಾಲೆತೊಟ್ಟ ದೇವತೆಗಳಿದ್ದಾರೆ. ನರಬಲಿಯು ಕರ್ನಾಟಕಕ್ಕೆ, ಭಾರತಕ್ಕೆ ಅಥವಾ ಯಾವುದೋ ಒಂದು ಮತಕ್ಕೆ ಸಂಬಂಧಪಟ್ಟಿದ್ದಲ್ಲ. ಇದು ವಿಶ್ವವ್ಯಾಪಿಯಾಗಿ ಕಂಡುಬರುವ ಅತಿ ಪ್ರಾಚೀನವಾದ ಪಂಥೀಯ 'ಕಲ್ಟಿಕ್' ಆಚರಣೆ. ಮುಸ್ಲಿಮರು ಆಚರಿಸುವ ಬಕ್ರಿದ್ ಹಬ್ಬವು ಈಗ ಪ್ರಾಣಿಬಲಿಯ ಮೂಲಕ ನಡೆಯುತ್ತಿದೆ. ಇದರ ಮೂಲವು, ಮೆಕ್ಕಾದಲ್ಲಿ ಪ್ರವಾದಿ ಇಬ್ರಾಹಿಂ, ತನ್ನ ಮಗ ಇಸ್ಮಾಯಿಲನನ್ನು ದೇವರ ಹೆಸರಲ್ಲಿ ಬಲಿ ಕೊಡುವ ಮುಂತಾದ ಘಟನೆಯಲ್ಲಿದೆ. ಭಾರತದಲ್ಲಿ ಮಾರುವೇಷದಲ್ಲಿ ಭಕ್ತರ ಪರೀಕ್ಷೆ ಮಾಡಲೆಂದು ಬಂದ ದೈವಕ್ಕೆ ತಮ್ಮ ಮಗುವನ್ನೇ ಕತ್ತರಿಸಿಟ್ಟು ಬಡಿಸಿದ ತಾಯಿತಂದೆಯರ ಅಪಾರ ಕಥೆಗಳಿವೆ. ಭಕ್ತ ಸಿರಿಯಾಳನ ಕತೆ ಇದರಲ್ಲಿ ಒಂದು. ಚಳ್ಳಕರೆ ತಾಲೂಕಿನ ಖದಾಪುರದ ಭೈರವನಿಗೆ ಸಂಬಂಧಪಟ್ಟ ಕಥೆಯಲ್ಲಿ ಭಕ್ತನೊಬ್ಬನು ತನ್ನ ಕೂಸನ್ನು ಬಲಿ ಕೊಟ್ಟ ಸನ್ನಿವೇಶವಿದೆ. ಮಕ್ಕಳನ್ನು ಪಡೆಯಲು ಹರಸಿಕೊಳ್ಳುವ ತಾಯ್ತಂದೆಯರೆ, ದೈವಗಳನ್ನು ತೃಪ್ತಿಬಡಿಸಲು ಮಕ್ಕಳನ್ನು ಬಲಿ ಕೊಡುವುದು ಇಂದು ವಿಚಿತ್ರ. ಕರ್ನಾಟಕದಲ್ಲಿ ಸಿಗುವ ರುಂಡಶಿಲ್ಪಗಳೂ ಬಹುಶಃ ನರಬಲಿ ಹೋದವರ ಪ್ರತಿಕೃತಿಗಳು, ಮುಚ್ಚಿದ ಕಣ್ಣು, ಆರೋಗ್ಯವಂತಿಕೆಯಿಂದ ತುಂಬಿರುವ ಕೆನ್ನೆ, ಹುರಿಮಾಡಿದ ಮೀಸೆ, ಶಾಂತವಾದ ಮುಖ ಇವುಗಳ ಲಕ್ಷಣ. ಕೆಲವರು ಇವನ್ನು ಬಲಿದಾನ ಎಂದು ಕರೆದಿರುವುದುಂಟು. ಹರಸಿಕೊಂಡ ವ್ಯಕ್ತಿ ತನ್ನ ಜೀವವನ್ನು ದೈವಕ್ಕೆ ಕೊಡುವುದನ್ನು ಬಲಿದಾನವೆಂದರೆ ಕೊಂಚ ಒಪ್ಪಬಹುದು. ಆದರೆ ಕೆಲವರು ಜನರ ಬಲಿಗೆ ಒಪ್ಪಿಸಿಯೋ ಬಲವಂತದಿಂದ ಹಿಡಿದು ತಂದೋ ಬಲಿಕೊಡುವುದನ್ನು ಬಲಿದಾನ ಎನ್ನಲಾಗದು. ಈಗ ನಾನಾ ಕಾರಣಗಳಿಂದ ನರಬಲಿ ಹೋಗುವ ಅಥವಾ ಕೊಡುವ ಪದ್ಧತಿ ಕಡಿಮೆಯಾಗಿದೆ. ಆದರದು ಸಂಪೂರ್ಣ ನಿಂತಂತಿಲ್ಲ. ನಿಧಿಗಾಗಿಯೇ ನಿರ್ದಿಷ್ಟ ಉದ್ದೇಶ ಸಾಧನೆಗಾಗಿಯೇ ಮಕ್ಕಳನ್ನು ಹಿಡಿದು ಗುಪ್ತವಾಗಿ ಬಲಿ ಕೊಟ್ಟ ಘಟನೆಗಳು ವರದಿ ಆಗುತ್ತಲೇ ಇವೆ. ದೈವವು ಕನಸಿನಲ್ಲಿ ಕಾಣಿಸಿಕೊಂಡು ತನ್ನ ತಲೆ ಕೊಡಲು ಸೂಚಿಸಿತು ಎಂದು ಕೆಲವರು ಸ್ವಹತ್ಯೆ

ಮಾಡಿಕೊಳ್ಳುವ ಸುದ್ದಿಗಳು ಪ್ರಕಟವಾಗುತ್ತಲೇ ಇವೆ. ಮಹಾಕಾಳಿ ಉಜ್ಜೈನಿಯ ಕಾಳಿ ಮಂದಿರದಲ್ಲಿ ಅದರ ಮುಂದೆ ವಾರಕಾಲದಿಂದ ಉಪವಾಸ ವ್ರತವಿದ್ದ ಒಬ್ಬ ದೇವೀ ಉಪವಾಸಕನು ಮಹಾಪೂಜೆಯ ದಿನ ತನ್ನ ಕುತ್ತಿಗೆ ಕತ್ತರಿಸಿಕೊಂಡು ಬಲಿಹೋದ ಘಟನೆಯದು. ಚರಿತ್ರೆಯುದ್ದಕ್ಕೂ ದೇವರು, ಧರ್ಮ, ಪಂಥ ಹಾಗೂ ದೊರೆಗಳಿಗೆ ಜನ ಆವೇಶದಿಂದ ತಮ್ಮ ಜೀವ ಅರ್ಪಿಸುವಂತಹ ವಿದ್ಯಮಾನಗಳು ಜರುಗುತ್ತಲೇ ಬಂದಿವೆ. ಬಹುಶಃ ಯಾವುದೋ ಘಟ್ಟದಲ್ಲಿ ನರಬಲಿಗೆ ಬದಲಾಗಿ ಪ್ರಾಣಿಬಲಿ ಆರಂಭವಾಗಿರಬಹುದು. ಆದರೂ ನರಬಲಿಯು ವಿಭಿನ್ನ ರೂಪಾಂತರಗಳಲ್ಲಿ ನಮ್ಮ ನಡುವೆ ಉಳಿದುಕೊಂಡಿದೆ. ದೇವರಿಗೆ ಮಂಡೆಬಿಡುವ ಆಚರಣೆಯು ನರಬಲಿಯ ಪಳೆಯುಳಿಕೆಯಂತೆ ಕಾಣುತ್ತದೆ. ತಲೆಕೊಡ್ತೀನಿ ಇತ್ಯಾದಿ ಮಾತುಗಳಲ್ಲಿ ನರಬಲಿಯ ನೆನಪುಗಳು ಈಗಲೂ ಉಳಿದಂತೆ ಕೋಲಾರ ಸೀಮೆಯಲ್ಲಿ ಭೈರವನ ಭಕ್ತರು ತಲೆಗೆ ಬದಲು ಬೆರಳನ್ನು ಕತ್ತರಿಸಿ ಕೊಡುವ ಪದ್ಧತಿ ಈಚಿನವರೆಗೂ ಇತ್ತು. ಈಚೆಗೆ ಮೈಸೂರು ಜಿಲ್ಲೆಯ ವಡ್ಡಗಲ್ಲು ಬೆಟ್ಟದಲ್ಲಿ ಬೆರಳನ್ನು ಬಲಿ ಅರ್ಪಿಸಿರುವ ಒಬ್ಬ ಮೋಟುಬೆರಳ ಸಾಧನಕನನ್ನು ನಾನು ನೋಡಿದ್ದೇನೆ. ಮಾರ್ಕಂಡೇಯನು ತನ್ನ ಕಣ್ಣನ್ನು ಕಿತ್ತು, ಅರ್ಪಿಸಿದ ಕತೆಯೂ ನಮಗೆಲ್ಲ ಗೊತ್ತಿದೆ. ಜನ್ನ ಯಶೋಧರ ಚರಿತೆಯಲ್ಲಿ ಚಂಡಮಾರಿಗೆ ಕಣ್ಣು ಕಿತ್ತು ಅರ್ಪಿಸುವ ಉಗ್ರಭಕ್ತರನ್ನು ಬಣ್ಣಿಸುತ್ತಾನೆ.

ನರಬಲಿಯು ಜಗತ್ತಿನ ಅನೇಕ ಬುಡಕಟ್ಟುಗಳಲ್ಲಿ, ವಿಶೇಷವಾಗಿ ಆಫ್ರಿಕನ್ ಬುಡಕಟ್ಟುಗಳಲ್ಲಿ ಇತ್ತು. ಆಫ್ರಿಕದ ಲೇಖಕ ಚಿನುವಾ ಅಚಿಬೆಯ ಥಿಂಗ್ಸ್ ಫಾಲ್ ಅಪಾರ್ಟ್ ಎರಡು ಬುಡಕಟ್ಟುಗಳ ಅಂತರ್ ಸಂಘರ್ಷದ ವಸ್ತುವನ್ನು ಒಳಗೊಂಡ ಕಾದಂಬರಿ ಇದರಲ್ಲಿ ಒಂದು ಬುಡಕಟ್ಟಿನವರು ದಾಳಿಯಲ್ಲಿ ಸೆರೆ ಸಿಕ್ಕ ಎದುರಾಳಿ ಬುಡಕಟ್ಟಿನ ಹುಡುಗನನ್ನು ತಮ್ಮ ದೈವಕ್ಕೆ ಬಲಿ ಕೊಡುವ ದಾರುಣ ಪ್ರಸಂಗವಿದೆ. ಆಫ್ರಿಕಾ ಮತ್ತು ಏಳಿಯನ್ ಸಮಾಜಗಳಲ್ಲಿ ಇರುವ ನರಬಲಿ ಪದ್ಧತಿಯನ್ನು ಅನಾಗರಿಕ ಎಂದು ಬಣ್ಣಿಸುವ ಪಾಶ್ಚಿಮಾತ್ಯರ ಈ ಕುರಿತಂತೆ ಬೀಭತ್ಸವಾದ ಸಿನಿಮಾಗಳನ್ನು ತೆಗೆದಿರುವರು ಉದಾ: ಅಪೋಕ್ಯಾಲಿಪ್ಟ್ ಸಿನಿಮಾವನ್ನು ಗಮನಿಸಬಹುದು."[೧೮] ಈ ರೀತಿಯಾದ ಹಲವುಮಾಹಿತಿಗಳನ್ನು ಗಮನಿಸಹುದು.

ನರಬಲಿ

ನಾಡ ಜನರ ಹಿತರಕ್ಷಣೆಗಾಗಿ, ಬಾವಿ ತೋಡಿಸುವಾಗ, ಕೆರೆ ಒಡ್ಡುಗಳನ್ನು ಹಾಕಿಸುವಾಗ ಕೋಟೆಕೊತ್ತಲಗಳನ್ನು ಕಟ್ಟಿಸುವಾಗ, ಸೇತುವೆಗಳನ್ನು ನಿರ್ಮಾಣ ಮಾಡುವಾಗ ಊರಿನ ಅಭಿವೃದ್ಧಿಗಾಗಿ ಬೃಹತ್ ಕಾರ್ಯಗಾರ ಮತ್ತು ಉದ್ಯಮದಂತಹ ಕೆಲಸ ಕೈಗೆತ್ತಿಕೊಂಡಾಗ, ಅಡ್ಡಿ–ಆತಂಕಗಳು ಬರುವುದು ಸಹಜ. ಅಂತಹ ಸಂದರ್ಭಗಳಲ್ಲಿ ಸಹಜವಾಗಿ ಮಾನವ ಪಾರಲೌಕಿಕ, ಅಂತರಾತ್ಮಕ ಪರಾಮರ್ಶೆಗೆ ತೊಡಗುತ್ತಾನೆ. ದೈವಿಭಾವದೆಡೆಗೆ ಓಲುತ್ತಾನೆ.

ಆಗ ಹಿರಿಯರ, ಅನುಭವಿಗಳ ಜೋಯಿಸರ ಮೊರೆ ಹೋದಾಗ, ಪಾರಂಪರಾಗತವಾಗಿ ರೂಢಿಯಲ್ಲಿರುವ 'ನರಬಲಿ' ಜೀವಂತವಾಗಿ ಮನುಷ್ಯನನ್ನು ಕಟ್ಟಡದಲ್ಲಿ ಇರಿಸಿ ಕಟ್ಟುವುದು- ಸಂದರ್ಭಗಳು ಅನಿವಾರ್ಯವಾಗುತ್ತವೆ. ನರಬಲಿ ಪ್ರಸಂಗಗಳನ್ನು ಹದಿಮೂರನೇ ಶತಮಾನದಷ್ಟು ಹಿಂದಿನಿಂದಲೂ ಕಾಣುತ್ತೇವೆ.

ಪ್ರಪಂಚದ ಅನೇಕ ಭಾಗಗಳಲ್ಲಿ 'ಬಲಿ'ಯಾಗುವ ಕ್ರಿಯೆ, ಅನೇಕ ರಾಷ್ಟ್ರ, ಪ್ರಾಂತಗಳಿಂದ ಲಾವಣಿಗಳ ಅಧ್ಯಯನದಿಂದ ತಿಳಿದುಬರುತ್ತದೆ. ಜನಪದ ಸಾಹಿತ್ಯದಲ್ಲಿ 'ಬಲಿ' ಕುರಿತಾದ ಒಂದು ದೊಡ್ಡ ಪರಂಪರೆಯೇ ಇದೆ. ಜಾನಪದ ಹಾರವು ಬಹುವಿಶಾಲವಾದುದು. ಅಂದಿನ ಕಾಲದ ಇತಿಹಾಸ, ರಾಜಕೀಯ, ಸಾಮಾಜಿಕ, ರೂಢಿ ಸಂಪ್ರದಾಯ, ಆಚಾರ-ವಿಚಾರ, ನಡೆ-ನುಡಿ, ಸಂಸ್ಕೃತಿ ಮುಂತಾದ ಜೀವಿತದ ಪ್ರತಿಕ್ಷಣದ ಅನುಭವದ ಚಿತ್ರಣ ಜನಪದದಲ್ಲಿ ಕಾಣಬಹುದು. ಅನಕ್ಷರಸ್ಥ, ಹಳ್ಳಿಯ ಮುಗ್ಧ ಮಹಿಳೆಯ ತ್ಯಾಗ ಬಲಿದಾನ, ಅಸಹಾಯಕತೆ, ಅಂಧಾನುಕರುಣೆಯ ಪ್ರತೀಕವಾಗಿದ್ದು, ಇವು ಕಂಠದಿಂದ ಕಂಠಕ್ಕೆ ಹರಿದು, ಮೌಖಿಕವಾಗಿ ಉಳಿದುಕೊಂಡು ಬಂದ ಮುಕ್ತಗಳಾಗಿವೆ....... ಆಶುಕವಿತೆಗಳಾಗಿವೆ.

ಕೋಟೆಗಳ ಮಹತ್ವ : ಕೋಟೆಗಳು ಮಾನವ ಇತಿಹಾಸದ ಸಾಂಸ್ಕೃತಿಕ ಸಂಪತ್ತುಗಳಾಗಿವೆ. ಊರ ಹಿತಕ್ಕಾಗಿ, ವೈರಿಗಳ, ದುಷ್ಕರ್ಮಿಗಳ ದಾಳಿಯಿಂದಾಗುವ ತೊಂದರೆ ತಾಪತ್ರಯಗಳಿಂದ ಈಕ್ಷಣೆಯ ಸಲುವಾಗಿ ಒಟ್ಟಾರೆ ಆಡಳಿತದ ಸುಭದ್ರತೆಗಾಗಿ ಈ ಕೋಟೆಗಳು ನಿರ್ಮಾಣವಾದವು. ಕೋಟೆಗಳು ಆಯಾಕಾಲದ ವಾಸ್ತುಶಿಲ್ಪದ ಅಮೂಲ್ಯ ಕೊಡುಗೆಗಳಾಗಿವೆ. ಅಂದಿನ ಆಳರಸರ, ಮಾಂಡಲಿಕರ ಮತ್ತು ಆಡಳಿತಾಧಿಕಾರಿಗಳ ಘನತೆ ಮತ್ತು ಗೌರವದ ಸಂಕೇತಗಳಾಗಿವೆ.

ಅಂತಹ ಕೋಟೆಗಳಲ್ಲಿ ಬೀದರ ಕೋಟೆ, ತಾಳಿಕೋಟೆ ಮತ್ತು ರಾಯಚೂರು ಕೋಟೆಗಳಿಗೆ ಬಲಿಯಾದ ಪ್ರಸಂಗಗಳಿವೆ. ಉದಾ: ರಾಯಚೂರಿನ ಕೋಟೆಗೆ 'ಬಾಳೆ ಸಂಗಮ್ಮ' ಕೆರೆಗೆ ಹಾರವಾಗಿ ಭಾಗೀರಥಿ, ಹೊನ್ನಮ್ಮ ಮುಂತಾದವುಗಳನ್ನು ಗಮನಿಸಬಹುದು.

ಸಾಮಾನ್ಯವಾಗಿ ಜನಪದ ಗೀತೆಗಳಲ್ಲಿ ಕಂಡುಬರುವ "ಕೆರೆಗೆ ಹಾರ" ಮದುಗದ ಕೆಂಚಮ್ಮ, ಈರೋಬಿ, ಉತ್ತರ ದೇವಿ, ಬಂಜೆ ಹೊನ್ನಮ್ಮ ಈ ಗೀತೆಗಳು ಸಾಮಾಜಿಕ ದುಃಖಾಂತ ಆಶಯವನ್ನು ಅಭಿವ್ಯಕ್ತಿಸುತ್ತವೆ(ಡಾ.ದೇವೇಂದ್ರ ಕುಮಾರ ಹಕಾರಿ ೧೯೮೫, ಪು. ೧೯೭). ಅವು ತಿಳಿಸುವಂತೆ ಸಾಮಾಜಿಕ ದುಖಾಂತ ಕಥನಗೀತೆಗಳು ಕರ್ನಾಟಕದಲ್ಲಿ ಸುಮಾರು ಸಾವಿರಾರಕ್ಕೂ ಹೆಚ್ಚಿವೆ ಎಂದು ಹೇಳಬಹುದು. ಸಮಾಜದ ಹಿತಕ್ಕಾಗಿ ಜನತೆಯ ಕಲ್ಯಾಣಕ್ಕಾಗಿ ಆತ್ಮರ್ಪಣೆ ಮಾಡಿಕೊಂಡು ಕಥನಗೀತೆಗಳನ್ನು ಜೀ.ಶಂ.ಪರಮಶಿವಯ್ಯ (೧೯೭೯, ಪು, ೪೨೫) ಅವರು ಆತ್ಮಾರ್ಪಣೆಯ ಕಾವ್ಯಗಳು ಎಂಬುದಾಗಿ ಕರೆದಿರುವರು.

ಜನಪದ ಗೀತೆ ಪ್ರಕಾರಗಳಲ್ಲಿ ಸತ್ಯದ ವಾಕ್ಯ ಪರಿಪಾಲಿಸುವಂತಹ ಆಶಯ ಗುಣವುಳ್ಳ ಹಾಡುಗಳಲ್ಲಿ ಗೋವಿನ ಹಾಡು ತುಂಬ ಪ್ರಸಿದ್ಧವಾದುದು ಬಹು ಹಿಂದಿನಿಂದ ಜನ ಸತ್ಯವಾಕ್ಯದ ಗೋವಿನ ಕಥೆ ಹಾಡು ಜನಪದ ಮನಸ್ಸನ್ನು ಸತ್ಯದ ಪರಿಪಾಲನೆಯ ಬಗ್ಗೆ ಪರಿಜ್ಞಾನ ಮೂಡಿಸುವಲ್ಲಿ ಮಾನವೀಯತೆಯ ಅರಿವನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ದುಃಖಾಂತದ ಕಥನಕವನ ಗೀತೆಗಳು ಹೆಚ್ಚಾಗಿ ತ್ಯಾಗ ಮತ್ತು ಆತ್ಮಬಲಿಯ ಆಶಯದೊಂದಿಗೆ ನಡೆದ ಘಟನೆಯನ್ನು ನಿರೂಪಿಸುತ್ತವೆ. ಜನಪದರು ಹಾಡು ಹೇಳುವ ಕಥೆಗಳಲ್ಲಿ ಬಹುತೇಕ ಮುಗ್ಧ ಹೆಣ್ಣು ಪರೋಕ್ಷವಾಗಿ ವಂಚಿಸಲ್ಪಟ್ಟು ದುರಂತದ ಕೂಪಕ್ಕೆ ತಳ್ಳಿದ ಆಶಯ ಪ್ರಮುಖವಾಗಿರುವುದನ್ನು ಅನೇಕ ದುಃಖಾಂತ ಗೀತೆಗಳಲ್ಲಿ ಕಾಣಬಹುದಾಗಿದೆ. ಉದಾಹರಣೆಗೆ ಕೆರೆಗೆ ಹಾರ.

ತ್ಯಾಗ ಅಥವಾ ಆತ್ಮ ಬಲಿಯಾದವರನ್ನು ಮಹಾಸತಿಯಾಗಿ ಕಾಣುವ ಹಾಗೂ ಪೂಜಿಸುವ ಪದ್ಧತಿ ಆಯಾ ಪ್ರದೇಶದ ಸಾಮಾಜಿಕ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಜನಪದರ ಹಾಡುಗಾರಿಕೆಯನ್ನು ತ್ಯಾಗ, ಆತ್ಮಬಲಿ ಈ ವರ್ಣನೆಯ ಹಿನ್ನೆಲೆಯಲ್ಲಿ ವಂಚನೆ, ಶೋಷಣೆಯ ಸುಳಿವು ಪೂರ್ಣವಾಗಿ ಪ್ರಕಟಗೊಳ್ಳದಿರುವುದನ್ನು ಜನಪದ ಗೀತೆಗಳಲ್ಲಿ ಕಾಣಬಹುದಾಗಿದೆ. ಡಾ.ದೇವೇಂದ್ರ ಕುಮಾರ ಹಕಾರಿ ಅವರ ಕೃತಿಯಲ್ಲಿ ದುಃಖಾಂತ ಕಥನಗೀತೆಗಳಲ್ಲಿ ಸಾಮಾಜಿಕ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಕೆರೆ ತೂಬುಗಳಿಗೆ ಬಲಿಯಾದ ಹೆಣ್ಣಿನ ದುರಂತ ಚಿತ್ರಣದ ಆಶಯಗಳನ್ನು ಪ್ರಮುಖವಾಗಿ ಚರ್ಚಿಸಿರುವರು. ಆದರೆ ಕೋಟೆ ಕೊತ್ತಲಗಳಿಗೆ ಬಲಿಯಾದ ದುರಂತ ಚಿತ್ರಣ ಕುರಿತು ಮಾಹಿತಿ ಸಿಗುವುದು ವಿರಳ ಎನ್ನಬಹುದು.

ಕರ್ನಾಟಕದಲ್ಲಿ ಹಲವಾರು ಕೋಟೆ ಕೊತ್ತಲಗಳಿವೆ. ಕೋಟೆ–ಕೊತ್ತಳಗಳ ಕಟ್ಟಡ ಭದ್ರವಾಗಲು ಬಲಿಯಾದ ದುರಂತ ಚಿತ್ರಣ ರಾಯಚೂರು 'ಕೋಟೆಗೆ ಹಾರ' ಜನಪದ ಗೀತೆಯಲ್ಲಿ ತಿಳಿಸಲಾಗಿದೆ. ಐತಿಹಾಸಿಕವಾಗಿ ಹೊಸ ಬೆಳಕು ಚೆಲ್ಲಲು ಮೌಖಿಕ ಆಧಾರಗಳು ಅಗತ್ಯವಾಗಿರುತ್ತವೆ. ಕಟ್ಟಪ್ಪಣೆಯಿಂದ ಬರೆಯಿಸಿದ ಶಾಸನಗಳಿಗಿಂತ ಜನಸಾಮಾನ್ಯರ ಮೌಖಿಕ ಸಾಹಿತ್ಯ ಸಮಾಜದ ವಾಸ್ತವಿಕ ಘಟನೆಗಳ ಮೇಲೆ ಹೆಚ್ಚಿನ ಬೆಳಕು ಚೆಲ್ಲುವ ಸಾಧ್ಯತೆಯಿರುವುದು. ಈ ನಿಟ್ಟಿನಲ್ಲಿ ರಾಯಚೂರು ಕೋಟೆಗೆ ಹಾರ ಜಾನಪದ ಅಧ್ಯಯನ ದೃಷ್ಟಿಯಿಂದ ಮಹತ್ವವುಳ್ಳದ್ದು ಅಲ್ಲದೆ ಐತಿಹಾಸಿಕವಾಗಿಯೂ ಪೂರಕ ಅಂಶಗಳು ಈ ಕಥನ ಗೀತೆಯಲ್ಲಿರುವುದು ವಿಶೇಷವಾಗಿರುತ್ತದೆ.

ರಾಯಚೂರು ಕೋಟೆಗೆ ಹಾರ ಎಂಬ ಜನಪದ ಗೀತೆಯಲ್ಲಿ ಕೆರೆಗೆ ಹಾರ ಎಂಬ ಜನಪದ ಗೀತೆಯಲ್ಲಿ ಭಾಗೀರಥಿ ಯಾವ ರೀತಿಯಾಗಿ ಕೆರೆಗೆ ನೀರು ಬರಲಿಕ್ಕೆ ಭಾಗೀರಥಿಯನ್ನು ಬಲಿ ಕೊಡುತ್ತಾರೆ. ಅದೇ ರೀತಿಯಾಗಿ ರಾಯಚೂರು ಕೋಟೆಗೆ ಮಲ್ಲಮ್ಮನನ್ನು ಸಹ ಬಲಿ

ಕೊಡುತ್ತಾರೆ. ಇತ್ತ ಬಸರಡ್ಡಿಗೆ ತನ್ನ ಹೆಂಡತಿಯನ್ನು ರಾಯಚೂರು ಕೋಟೆಗೆ ಬಲಿ ಕೊಟ್ಟಿದ್ದಾರೆಂದು ಗೊತ್ತಾದ ನಂತರ ಅರಮನೆಯಲ್ಲಿ ತಾವು ಮಲಗುವ ಮಂಚಕ್ಕೆ ತಲೆ ಹೊಡೆದುಕೊಂಡು ಸಾಯುತ್ತಾನೆ ತದ ನಂತರ ಬಸರೆಡ್ಡಿಯನ್ನು ರಾಯಚೂರು ಕೋಟೆಗೆ ಅಡ್ಡ ಹಾಕಿ ಕೋಟೆ ಎತ್ತರಿಸುವರು ಹೀಗೆ ಗಂಡ–ಹೆಂಡಿರ ಪ್ರಾಣಾಹುತಿ ರಾಯಚೂರು ಕೋಟೆಯ ಕಟ್ಟಡಕ್ಕೆ ಬಲಿಯಾದರು ಎಂಬುದನ್ನು ಜನಪದ ಗೀತೆಯಲ್ಲಿ ಗಮನಿಸಬಹುದು.

ಅಂದರೆ ರಾಯಚೂರು ಕೋಟೆಗೆ ಹಾರ ಬಲಿಯಾದ ಹೆಣ್ಣಿನ ಬಗ್ಗೆ ವಿವರಿಸುವ ಈ ಕಥನಗೀತೆ ಕೆರೆಗೆ ಹಾರದ ಆಶಯದಂತೆ ಆರಂಭವಾಗಿರುವುದನ್ನು ನೋಡಿದರೆ ಈ ಎರಡು ಗೀತೆಗಳಲ್ಲಿ ಸ್ವಲ್ಪ ಬದಲಾವಣೆ ಇದ್ದು ಎರಡು ಒಂದೇ ರೀತಿಯ ವಿಷಯಗಳನ್ನು ಜನಪದರಿಗೆ ತಿಳಿಯಪಡಿಸುತ್ತವೆ ಎಂದು ಹೇಳಬಹುದು.

ಅಂದರೆ ಪ್ರಪಂಚದ ಯಾವುದೇ ರಾಷ್ಟ್ರಗಳಲ್ಲಿ ಬಲಿಯಾದ ವ್ಯಕ್ತಿಗಳಲ್ಲಿ ಹೆಣ್ಣು ಮೂಕ ಪಶುವಾಗಿ ವಂಚನೆಯಿಂದ ಅಥವಾ ಪರೋಕ್ಷವಾಗಿ ಬಲಿಯಾಗಿರುವುದು ಅಧ್ಯಯನಗಳಿಂದ ತಿಳಿದುಬರುವುದು ಈ ನಿಟ್ಟಿನಲ್ಲಿ ಮುಖ್ಯವಾಗಿ ತಿಳಿದುಬರುವ ಅಂಶವೇನೆಂದರೆ ಕಟ್ಟಡಕ್ಕೆ ಬಲಿಯಾಗಿರುವ ದುರಂತ ಕ್ರಿಯೆ ಸಾಮಾನ್ಯವಾಗಿ ಎಲ್ಲಾ ಪ್ರಾಂತ್ಯಗಳಲ್ಲಿ ಜನಪ್ರಿಯವಾದ ಲಾವಣಿಗೆಯಾಗಿತ್ತೆಂದು ತಿಳಿದುಬರುವುದು.

ಕಟ್ಟಡಕ್ಕೆ ಬಲಿಯಾದ ದುರಂತ ಹೆಣ್ಣಿನ ಕುರಿತಾಗಿ ಲಾವಣಿ ಸಂಗ್ರಹಿಸಿದ ಕೀರ್ತಿ ಬಾಲ್ಕನ್ ರಾಷ್ಟ್ರದ ಸಂಗ್ರಾಹಕ VUK Karadzic (೧೭೮೪–೧೮೬೪) ಅವನಿಗೆ ಸಲ್ಲುತ್ತದೆ. ಈತನು ಸಂಗ್ರಹಿಸಿದ ಹಲವು ಪಾಠಾಂತರಗಳಿಂದ ಇತರೆ ರಾಜ್ಯದ ವಿದ್ವಾಂಸರು ಆಸಕ್ತಿ ವಹಿಸಿ ದುರಂತ ಗೀತೆಗಳ ಅಧ್ಯಯನ ನಡೆಸಿದ್ದಾರೆ.

VUK Karadzic ಸಂಗ್ರಹಿಸಿದ ಒಂದು ಪಠ್ಯದಲ್ಲಿ ಬಲಿಯಾದ ಹೆಣ್ಣು ಮೇಸ್ತ್ರಿಯನ್ನು ಹೀಗೆಂದು ಕೋರಿಕೊಳ್ಳುತ್ತಾಳೆ. ದಯಮಾಡಿ ನನ್ನ ಕಂದಮ್ಮನಿಗೆ ಮೊಲೆ ಹಾಲು ಉಣಿಸಲೆಂದು ಕಿಂಡಿ ಬಿಡು ನಂತರ ಎತ್ತರಿಸು ಕಟ್ಟಡವ ಇಂತಹ ಆಶಯದ ಮೂಲಕ ಹೆಣ್ಣಿನ ಅಸಹಾಯಕತೆ,ದೈನ್ಯತೆ ಹಾಗೂ ತನ್ನ ಎಳೆಯ ಕಂದನೂ ತಾಯಿ ಹಾಲಿಲ್ಲದೆ ಮೃತ್ಯುವಿನ ಪಾಲಾಗಬಾರದು, ವಂಶದ ಕುಡಿ ಕೊನರಬೇಕು ದೈವ ಸಂಕಲ್ಪ ಇದ್ದಷ್ಟು ದಿನ ಬದುಕಬಲ್ಲೆ ಎಂಬ ಆತ್ಮ ಸಂಕಲ್ಪದ ಧ್ವನಿ ಈ ಲಾವಣಿಯಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇಂಕಾ ಬುಡಕಟ್ಟು ಸಮುದಾಯವು ಒಂದು. ಇಂಕಾ ಸಮುದಾಯದವರು ನರಭಕ್ಷರಲ್ಲ. ದೇವರನ್ನು ಒಲಿಸಿಕೊಳ್ಳುವ ಸಲುವಾಗಿ ನರಬಲಿಯನ್ನು ಕೊಡುತ್ತಿದ್ದರು ಎಂದು ತಿಳಿಯುತ್ತದೆ. ಸುಂದರವಾದ ಮಕ್ಕಳನ್ನು, ತರುಣಿಯರನ್ನು, ಅವರ ಸಮುದಾಯದಿಂದಲೇ ಗುರುತಿಸಿಕೊಂಡು ನರಬಲಿ ಕೊಡುತ್ತಿದ್ದರು. ದಕ್ಷಿಣ ಅಮೆರಿಕದಲ್ಲಿದ್ದ ಪ್ರಾಚೀನ ನಾಗರಿಕತೆಯಲ್ಲಿ ದೇವರ ಅನುಗ್ರಹಕ್ಕಾಗಿ ನರಬಲಿ ಕೊಡುವ ಸಂಪ್ರದಾಯ ಇತ್ತು.

ಹೆಂಗಸರನ್ನು ಮಕ್ಕಳನ್ನೂ ಕುತ್ತಿಗೆಗೆ ಹಗ್ಗದ ನೇಣು ಬಿಗಿದುಕೊಂಡು ಅವರನ್ನು ಕುಳಿತ ಭಂಗಿಯಲ್ಲಿ ಮಮ್ಮಿಗಳಾಗಿ ಮಾರ್ಪಾಟಿಸಿ ಮೃತರಾಜನ ಪಕ್ಕದಲ್ಲಿ ಕೂರಿಸುತ್ತಿದ್ದರು. ಇದೊಂದು ವಿಚಿತ್ರ ಸಂಸ್ಕೃತಿ ಎನ್ನಬಹುದು.

ಶಕ್ತಿಯಾರಾಧನೆ

ಆರಂಭದ ಕಾಲಘಟ್ಟದಿಂದಲೂ ಮಾನವನ ಅಗೋಚರ ಶಕ್ತಿಗೆ ಮಾರುಹೋಗಿ ಅದನ್ನು ಪೂಜೆ ಮಾಡುವುದು ಕಂಡುಕೊಂಡ ನಂತರದಲ್ಲಿ ತನಗೆ ತೋಚಿದ ವಸ್ತುಗಳನ್ನು ಅಗೋಚರ ಶಕ್ತಿಗೆ ಅರ್ಪಿಸಿ ಬಂದಿರುವುದನ್ನು ಗುರುತಿಸಬಹುದು. “ಮಾನವನ ಸೃಷ್ಟಿಯಲ್ಲಿ ಕೇಡುಂಟು ಮಾಡುವ ದ್ವೇಷ ಮತ್ತು ಮತ್ಸರವನ್ನು ಸಾಧಿಸುವ ಹಾಗೂ ಸೇಡು ತೀರಿಸಿಕೊಳ್ಳುವ ದೇವತೆಗಳಿವೆ. ಅನೇಕ ಸ್ವಭಾವದ ದೇವತೆಗಳನ್ನು ಗಮನಿಸಿದಾಗ ಶಕ್ತಿಯಾರಾಧನೆ ಯಾವಾಗ ಆರಂಭವಾಯಿತೆಂದು ಹೇಳುವುದು ಕಷ್ಟವಾಗುತ್ತದೆ. ಹಿಂದೂ ಗ್ರಾಮಜೀವನದ ವೈಶಿಷ್ಟ್ಯವೆಂದರೆ, ಸ್ಥಳೀಯವಾಗಿ ಜನಪ್ರಿಯವಾದ ಶಕ್ತಿಯನ್ನು ಆರಾಧಿಸುವುದು, ಮಕ್ಕಳು ಹೆತ್ತ ತಾಯಿಯನ್ನು ಪೂಜ್ಯಭಾವದಿಂದ ನೋಡುವುದು–ಎಷ್ಟು ಸಹಜವೋ ಗ್ರಾಮವನ್ನು ರಕ್ಷಿಸುವ ಅಮ್ಮನನ್ನು ಊರ ಮಕ್ಕಳು ಆರಾಧಿಸುವುದು ಅಷ್ಟೇ ಸಹಜ” ಎಂದು ವ್ಯಕ್ತಪಡಿಸುತ್ತಾರೆ.[೧೯]

“ಪ್ರಕೃತಿಯನ್ನು ಎದುರಿಸುವ ವಿಷಯದಲ್ಲಿ ಪೂರ್ಣ ವಿಫಲನಾದ ಮಾನವ ತನ್ನ ಅಸಹಾಯಕತೆಯನ್ನು ತೋಡಿಕೊಳ್ಳಲು ಧರ್ಮದ ಮೊರೆಹೊಕ್ಕ. ಮಳೆ, ಗಾಳಿ, ಬಿಸಿಲು, ಗುಡುಗು, ಸಿಡಿಲು, ಮಿಂಚು, ಮಂಜು, ಚಳಿ ಇವನ್ನು ತಡೆಯಲು ಸಾಧ್ಯವಾಗದಿದ್ದಾಗ ಅಧೀರಗೊಂಡು ತನ್ನ ನೆರವಿಗೆ ಶಕ್ತಿಯನ್ನು ಕರೆಯುವ ನಿರ್ಧಾರಕ್ಕೆ ಬಂದ. ಹೀಗೆ ಧಾರ್ಮಿಕ ನಿಷ್ಠೆಯ ಭಾವನೆಗಳು ಬೆಳೆದಂತೆ ಧಾರ್ಮಿಕ ನಂಬಿಕೆಗಳು,ಆಚರಣೆಗಳು ಆವಿರ್ಭಾವಗೊಂಡವು. ಆದಿಮಾನವನು ಪ್ರಾಚೀನ ಶಿಲಾಯುಗ ಮತ್ತು ಮಧ್ಯಶಿಲಾಯುಗದಲ್ಲಿ ಗಡ್ಡೆ ಗೆಣಸುಗಳನ್ನು ಹಾಗೂ ಕಾಡಿನಲ್ಲಿ ಬೇಟೆಯಾಡಿದ ಪ್ರಾಣಿಗಳ ಹಸಿಮಾಂಸವನ್ನು ತಿನ್ನುತ್ತಿದ್ದ. ತರುವಾಯ ಅವನು ದೇವರನ್ನು ಸಂತೃಪ್ತಿಪಡಿಸಲು ಪ್ರಾಣಿಗಳನ್ನು ಬಲಿ ನೀಡಿ ಅದರ ಮಾಂಸವನ್ನು ದೇವರಿಗೆ ಎಡೆಮಾಡುತ್ತಿದ್ದನೆಂದು ತಿಳಿದುಬರುವುದು. ಗ್ರಾಮದೇವತೆಗಳಲ್ಲಿ ಮೊದಲ ಗುಂಪಿನ ದೇವತೆಗಳು ಬೇಡಿಕೆಗಳನ್ನು ಸದಾ ಪೂರೈಸುವಂಥವುಗಳಾದ್ದರಿಂದ ಅವು ಆರಾಧನಾ ವ್ಯಾಪ್ತಿಗೆ ಒಳಪಟ್ಟವು. ಎರಡನೇ ಗುಂಪಿನವು ಸಕಾಲಕ್ಕೆ ಹರಕೆ, ಬಲಿ ಉಗ್ರಸೇವನೆಯ ಸಂಪ್ರದಾಯಗಳನ್ನು ಆಚರಿಸದಿದ್ದರೆ ರೋಗ–ರುಜಿನಗಳನ್ನು ಮತ್ತು ಸಾವನ್ನು ತರುವುದರ ಮೂಲಕ ತಮ್ಮ ಅಸಮಾಧಾನವನ್ನು ತೋರಿಸುವಂತಹವು ಆದ್ದರಿಂದ ಅವುಗಳು ವಿವಿಧ ಬಗೆಯ ದೈಹಿಕಹಿಂಸೆ, ಬಲಿ, ಎಡೆ, ಉಗ್ರ, ಪ್ರಾರ್ಥನೆಗಳಿಗೆ ಮಾತ್ರ ಬಲಿಯುವಂತಹವು ಎಂಬ ವಿಶ್ವಾಸ ಬಲಿಯಿತು. ಹೀಗೆ ಗ್ರಾಮದೇವತೆಗಳ ಆರಾಧನಾ ಪದ್ಧತಿಯನ್ನು ಗುರುತಿಸುತ್ತಾರೆ.[೨೦] ಇದಕ್ಕೆ ಪ್ರತಿಯಾಗಿ

ವಾರ್ಷಿಕವಾಗಿ ಬಳ್ಳಾರಿ ಜಿಲ್ಲೆಯಾದ್ಯಂತ ಪ್ರಾಣಿಗಳನ್ನು ಕಡಿದು ಜಾತ್ರೆ ಮಾಡುವುದು ಕಂಡುಬರುತ್ತದೆ. "ಶಕ್ತಿಯ ಆರಾಧನೆಯು ಮೂಲತಃ ದ್ರಾವಿಡ ಕಲ್ಪನೆಯಾದರೂ ಅದರ ಮೂಲಬೇರು ಆರ್ಯರ ಕುಟುಂಬಜೀವನ ಪದ್ಧತಿಯಲ್ಲೇ ಇದ್ದಂತೆ ಕಾಣುತ್ತದೆ. ಆಹಾರ ಒದಗಿಸಿ ಎಲ್ಲರ ರಕ್ಷಣೆಯ ಜವಾಬ್ದಾರಿ ಹೊತ್ತದ್ದಕ್ಕಾಗಿ ತಂದೆ ಗೌರವಾನ್ವಿತನದ ಹೀಗೆ ಆರ್ಯರ ಕುಟುಂಬ ವ್ಯವಸ್ಥೆಯಲ್ಲಿ ತಾಯಿ-ತಂದೆಗಳು ದೈವದ ಸ್ಥಾನ ಪಡೆದುಕೊಂಡರು" ಮಾತೃಪೂಜೆಗಳ ಬಗ್ಗೆ ಚರ್ಚೆ ಮಾಡುತ್ತಾರೆ.[೨೧] ಮಾತೃ ಜನ್ಮ ಕೊಡುವ ಶಕ್ತಿಯನ್ನು ಪಡೆದುಕೊಂಡಿರುವುದರಿಂದ ಮೊದಲಿಗೆ ತಂದೆ-ತಾಯಿಯನ್ನು ದೇವರೆಂದೇ ಪೂಜಿಸುವುದು ನಮ್ಮ ಮನುಕುಲದ ಧರ್ಮ ಎಂದು ಭಾವಿಸಲಾಗಿದೆ. ಇದಲ್ಲದೇ ಪ್ರಾಶ್ಚಾತ್ಯರಲ್ಲಿ ಕೂಡ ಉಗ್ರ ಆರಾಧನೆಗಳು ನಡೆಯುತ್ತಿದ್ದವು ಎಂದು ಗುರುತಿಸಬಹುದು. ಉತ್ತರ ಅಮೆರಿಕ, ಜಪಾನ್, ಪೆರು, ಮೆಕ್ಸಿಕೋ, ಮಧ್ಯ ಅಮೆರಿಕ, ಆಸ್ಟ್ರೇಲಿಯಾ, ಗ್ರೀಕ್, ಬಲ್ಗೇರಿಯಾ, ರೋಮ್, ಬ್ರಿಟನ್, ಯುರೋಪ್ ಖಂಡ, ಸ್ಕಾಂಡಿನೇವಿಯಾ, ಸೈಬೀರಿಯಾ, ಹಾಲೆಂಡ್, ಡೆನ್ಮಾರ್ಕ್, ಬೊರ್ನಿಯೊ, ಸಯಾಮ, ಆಫ್ರಿಕಾ, ಏಷಿಯಾಮೈನರ್ ಮುಂತಾದ ಪ್ರದೇಶಗಳಲ್ಲಿ ಮಾತೃದೇವತೆಗಳಿಗೆ ಪ್ರಾಣಿಬಲಿಗಳನ್ನು ಕೊಟ್ಟು ಉಗ್ರಪೂಜೆ ಮಾಡುವುದನ್ನು ಗಮನಿಸುತ್ತೇವೆ. ಇಲ್ಲಿ ಪ್ರಧಾನವಾಗಿ ಕೃಷಿಗಳಿಗೆ ನರಬಲಿಗಳನ್ನೇ ಅರ್ಪಿಸುತ್ತಿದ್ದರು ಎಂದು ಐತಿಹಾಸಿಕತೆ ಹೇಳುತ್ತದೆ. ಕನ್ನಡ ಶಾಸನಗಳನ್ನು ಅಧ್ಯಯನ ಮಾಡಿರುವ ಚಿದಾನಂದಮೂರ್ತಿಯವರು ತಮ್ಮ ಕೃತಿಯಲ್ಲಿ ತಮ್ಮ ನಿಲುವನ್ನು ಈ ರೀತಿ ವ್ಯಕ್ತಪಡಿಸುತ್ತಾರೆ. "ಜಪಾನಿನಲ್ಲಿ ಹರಕಿರಿ ಪದ್ಧತಿಯ ಬಹು ಪ್ರಬಲವಾಗಿದ್ದಿತು. ಹರಕಿರಿ ಎಂದರೆ ಹೊಟ್ಟೆಯನ್ನು ಕತ್ತರಿಸಿಕೊಳ್ಳುವುದೆಂದರ್ಥ. ಶತ್ರುಗಳ ಕೈಗೆ ಸಿಕ್ಕು ಅವಮಾನಿತನಾಗುವ ಸಂದರ್ಭ ಒದಗಿ ಬಂದಾಗ, ಹಿರಿಯ ಅಧಿಕಾರಿಗಳಿಂದ ಅವಮಾನಿತನಾದಾಗ ಅಥವಾ ತನ್ನ ಒಡೆಯನು ತಪ್ಪುದಾರಿಯನ್ನು ಹಿಡಿದು ಅದನ್ನು ತೋರಿಸಲು ಇತರ ವಿಧಾನಗಳಿಂದ ವಿಫಲವಾದಾಗ ಅಥವಾ ಮಡಿದುಹೋದ ತನ್ನ ಯಜಮಾನನ ಮೇಲಿನ ನಿಷ್ಠೆಯನ್ನು ಪ್ರಕಟಿಸುವ ಸಂದರ್ಭ ಒದಗಿದಾಗ ವ್ಯಕ್ತಿಯು ಮಾಡಿಕೊಳ್ಳುತ್ತಿದ್ದ ಆತ್ಮಹತ್ಯೆಯೇ ಹರಕಿರಿ. ತಮ್ಮ ಸ್ನೇಹಿತರ ಪ್ರಾಮಾಣಿಕತೆಯನ್ನು ಎತ್ತಿ ಹಿಡಿಯಲು ಹರಕಿರಿಯನ್ನು ಮಾಡಿಕೊಳ್ಳುತ್ತಿದ್ದರು. ಈ ಆತ್ಮಹತ್ಯೆಯ ವಿಧಾನವು ಭಯಾನಕವಾದುದು. ಹರಕಿರಿಯನ್ನು ಮಾಡಿಕೊಳ್ಳುವವನು ತನ್ನ ಹೊಟ್ಟೆಯನ್ನು ಸೀಳಿ, ಕರುಳನ್ನು ಹೊರಕ್ಕೆ ತೆಗೆಯುತ್ತಿದ್ದನು. ಅವನ ಸಂಕಟವನ್ನು ನೋಡಲಾರದೆ ಹತ್ತಿರದಲ್ಲಿ ನಿಂತಿದ್ದವರು ಅವನ ತಲೆಯನ್ನು ಕತ್ತರಿಸಿ ಬಿಡುತ್ತಿದ್ದರು. ಜಪಾನಿನಲ್ಲಿ ಕಳೆದ ಶತಮಾನದ ಉತ್ತರಾರ್ಧದವರೆಗೆ ಈ ಪದ್ಧತಿಯು ನ್ಯಾಯಸಮ್ಮತವಾಗಿದ್ದಿತ್ತು. ಈ ಪದ್ಧತಿಯು ಈಗ ಕಾನೂನಿಗೆ ವಿರೋಧವಾಗಿದ್ದರೂ ಹರಕಿರಿ ಪದ್ಧತಿಯು ಜಪಾನಿನಿಂದ ಸಂಪೂರ್ಣ ಅಳಿಸಿಹೋಗಿದೆಯೆಂದು

ಹೇಳಲು ಸಾಧ್ಯವಿಲ್ಲ."[೨೨] ಇಲ್ಲಿ ತಲೆಕತ್ತರಿಸುವುದು ಒಂದು ನರಮನುಷ್ಯನನ್ನು ಬಲಿ ಕೊಡುವುದೇ ಆಗಿರುವುದು. ಕನ್ನಡ ಜಾನಪದ ವಿಶ್ವಕೋಶ ಸಂಪುಟ ೧ರಲ್ಲಿ ಈ ಮಾತುಗಳಿವೆ. "ವ್ಯಕ್ತಿಯನ್ನು ಜೀವಂತ ಹೂಳುವುದು ಒಂದು ಪುರಾತನ ಶಿಕ್ಷೆಯಾಗಿತ್ತು. ಗೋಡೆಗಳಲ್ಲಿ ನೆಡೆಸುವುದು ಕಂಡುಬರುತ್ತದೆ. ಗೋಡೆಗಳಲ್ಲಿ ಹೂಳುವ ಪದ್ಧತಿಯನ್ನು ಸನ್ಯಾಸಿಗಳೂ, ಸನ್ಯಾಸಿನಿಯರು, ಸರದಾರರ ಹೆಂಡತಿಯರು ಮತ್ತು ಕುಲೀನ ಮನೆತನದ ಹುಡುಗಿಯರನ್ನು ಸಾರ್ವಜನಿಕ ಮರಣದಂಡನೆಯ ಅವಮಾನದಿಂದ ತಪ್ಪಿಸುವುದಕ್ಕಾಗಿ, ಕಾಯ್ದಿಡಲಾಗಿತ್ತು, ರೋಮಿನಲ್ಲಿ ಸನ್ಯಾಸಿನಿಯರು ಅನೈತಿಕ ವ್ಯವಹಾರಗಳನ್ನು ಮಾಡಿದಾಗ ಅವರನ್ನು ಗೋಡೆಯಲ್ಲಿ ಹೂಳಲಾಗುತ್ತಿತ್ತು. ಪೆರುವಿನಲ್ಲಿ ರಾಜನ ಹೆಂಡತಿಯರು, ಅವಿಧೇಯರಾಗಿದ್ದಲ್ಲಿ ಅವರನ್ನು ಜೀವಂತ ಹೂಳುತ್ತಿದ್ದರು. ಮೆಕ್ಸಿಕೋ ಮತ್ತು ಮಧ್ಯ ಅಮೆರಿಕಗಳಲ್ಲಿ ದೊಡ್ಡ ಮನುಷ್ಯನೊಬ್ಬ, ಸತ್ತಾಗ ಅವನ ಅತ್ಯಂತ ಪ್ರೀತಿಯ ಹೆಂಡತಿ ಕೆಲಸಲ ಅವನಿಂದಲೇ ನೇಮಿಸಲ್ಪಟ್ಟು ಅಥವಾ ಸ್ವ–ಇಚ್ಛೆಯಿಂದ ಮುಂದೆ ಬಂದ ಸೇವಕನನ್ನು ಅವನೊಂದಿಗೆ ಜೀವಂತವಾಗಿ ಹೂಳುತ್ತಿದ್ದರು. ಚೀನಾದಲ್ಲಿ ಈ ಪದ್ಧತಿಯು ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿದ್ದು, ಆಧುನಿಕ ಕಾಲದವರೆಗೂ ಮುಂದುವರಿಯಿತು" ಎಂದು ಪ್ರಸ್ತಾಪಿಸುತ್ತಾರೆ.[೨೩] ಇಲ್ಲಿ ಪ್ರಧಾನವಾಗಿ ದೊಡ್ಡ ದೊಡ್ಡ ಗೋಡೆಗಳನ್ನು ನಿರ್ಮಾಣ ಮಾಡಬೇಕಾದರೆ ನರಬಲಿ ಬದಲಿಗೆ ಜೀವಂತವಾಗಿರುವ ಮನುಷ್ಯರನ್ನೇ ಹೂಳುವ ಪದ್ಧತಿ ಒಂದು ಪ್ರಾಣಿಬಲಿಗೆ ನಾಂದಿಯಾಗಿರುವುದನ್ನು ಗುರುತಿಸಬಹುದು. "ಸ್ವಂತದ ಸಾರ್ವಜನಿಕ ಮತ್ತು ಧಾರ್ಮಿಕವಾಗಿ ಕಟ್ಟಡಗಳನ್ನು ಕಟ್ಟುವಾಗಲೂ ಈ ಪದ್ಧತಿಯೂ ನಡೆದುಬಂದಿದೆ. ಆದಿಮಾನವರು ತಮ್ಮ ಉದ್ಯೋಗಕ್ಕೆ ಅನುಕೂಲಕರವಾದ ಸ್ಥಳಗಳನ್ನು ಮಾಡಿಕೊಳ್ಳುತ್ತಿದ್ದರು. ಮಧ್ಯಕಾಲೀನ ಅವಧಿಯಲ್ಲಿ ಮತ್ತು ಆಧುನಿಕ ಯುರೋಪಿನ ಹಿಂದುಳಿದ ಜನಾಂಗಗಳಲ್ಲಿ ಅನೇಕ ಕಾಲಜ್ಞಾನ ಪ್ರಕಾರಗಳನ್ನು ಆಧರಿಸಿ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅವುಗಳಲ್ಲಿ ಪ್ರಾಣಿ ಶಕುನಗಳು ತೀರಾ ಸಾಮಾನ್ಯವಾಗಿದ್ದವು. ಇನ್ನಿತರ ಕಡೆಗಳಲ್ಲಿಯ ಈ ಉದ್ದೇಶಗಳಿಗೆ ಸಂಬಂಧಿಸಿದ ಆಚರಣೆಗಳಿಗೂ ಸಾಮ್ಯವಿದೆ. ಕಟ್ಟಡಕ್ಕೆ ಬಲಿ ಕೊಡುವುದನ್ನು ಡೆನ್ಮಾರ್ಕ್, ಸಯಾಂ ಜಪಾನ್, ಆಸ್ಟ್ರೇಲಿಯಾ, ಮತ್ತು ಇನ್ನಿತರ ಕಡೆಗಳಲ್ಲಿ ಆಚರಣೆಯಲ್ಲಿ ರುವುದು ತಿಳಿದುಬರುತ್ತದೆ. ರಕ್ತದ ಬಲಿಯ ಮೇಲೆ ಕಟ್ಟಡ ಕಟ್ಟದಿದ್ದರೆ ಕಟ್ಟಡವು ಗಟ್ಟಿಯಾಗಿ ನಿಲ್ಲಲಾರದೆಂಬುದು ಸಾಮಾನ್ಯ ನಂಬಿಕೆಯಾಗಿತ್ತು. ಹೀಗಾಗಿ ಈ ಪ್ರಮುಖ ದ್ರವ್ಯಕ್ಕೆ ಇಂಥ ಮಾಂತ್ರಿಕ ಗುಣಗಳನ್ನು ಆರೋಪಿಸಲಾಗಿತ್ತು. ಅದರಂತೆ ಅಸಂಸ್ಕೃತ ಮತ್ತು ಕ್ರಿಶ್ಚಿಯನ್, ಕಾಲಗಳೆರಡರಲ್ಲೂ ಮನೆಯ ಕೊತ್ತಲದ, ಕೋಟೆಯ ಅಥವಾ ಚರ್ಚಿನ ಗೋಡೆಯಲ್ಲಿ ಮನುಷ್ಯನನ್ನು ಇಡುವ ಆಚರಣೆ ಅಸ್ತಿತ್ವದಲ್ಲಿತ್ತು. ಹೆಚ್ಚಾಗಿ ಈ ಉದ್ದೇಶಕ್ಕಾಗಿಯೇ ಮಗುವನ್ನು ಅದರ ತಾಯಿಯಿಂದ ಕೊಂಡುಕೊಳ್ಳ

ಲಾಗುತ್ತಿತ್ತು. ಇಂಥ ಬಲಿಗಳ ಬಗ್ಗೆ ಅನೇಕ ಮನಮುಟ್ಟುವ ಐತಿಹ್ಯಗಳು, ದಂತಕಥೆಗಳೂ ಇವೆ. ಕಟ್ಟಡದ ಭದ್ರತೆಗಾಗಿ ಗೋಡೆಯಲ್ಲಿ ಮನುಷ್ಯನನ್ನು ಹೂಳುವ ನಂಬಿಕೆ ೧೯ನೇ ಶತಮಾನದ ಮಧ್ಯಭಾಗದವರೆಗೂ ಅಸ್ತಿತ್ವದಲ್ಲಿತ್ತು. ತಳಪಾಯಗಳಿಗೆ ರಕ್ತಸ್ನಾನ ಮಾಡಿಸುವುದನ್ನು ಸಾಧಿಸಲಿಕ್ಕಾಗಿ ಬಲಿಪಶುವನ್ನು ಗುಂಡಿಯಲ್ಲಿ ಹಾಕಿ ಜಜ್ಜಿ ಬಿಡುವ ಪ್ರಾಚೀನ ಪದ್ಧತಿ ಬೋರ್ನಿಯೋ ಮತ್ತು ಸಯಾಮಗಳಲ್ಲಿ ಬಳಕೆಯಲ್ಲಿತ್ತು. ಈ ಆಚರಣೆಗಳು ಕೇವಲ ಐತಿಹ್ಯಗಳಲ್ಲಿ ವಿಶ್ವಾಸಾರ್ಹ ದಾಖಲೆಗಳಿಂದ ರುಜುವಾತುಗೊಂಡವು ಎಂದು ಇಲ್ಲಿ ಹೇಳಲೇಬೇಕು" ಎಂದು ಪ್ರಸ್ತಾಪ ಮಾಡುತ್ತಾರೆ.[೨೪] ಇಲ್ಲಿನ ಚರ್ಚಿನ ಗೋಡೆಗಳಲ್ಲಿ ಮನುಷ್ಯನನ್ನು ನಿಲ್ಲಿಸುವ ವಿವರಗಳು ಬಂದರೆ ಮಂಗಳೂರು ಪ್ರಾಂತ್ಯದಲ್ಲಿರುವ ಚರ್ಚ್ ಒಳಗೆ ಸಮಾಧಿಗಳಿರುವುದು ಈಗಲೂ ಕಾಣಬಹುದು. ಇಲ್ಲಿ ಪ್ರಾಣಿಗಳನ್ನು ಜಜ್ಜಿ ಎಂಬ ಮಾತು ಬಂದಿದೆ. ಕ್ರೂರವಾಗಿ ಪ್ರಾಣಿಗಳನ್ನು ಜಜ್ಜಿ, ಹಿಂಸೆ ಮಾಡಿ ಅದರ ರಕ್ತದಿಂದ ಗೋಡೆಕಂಬಗಳನ್ನು ಸ್ನಾನ ಮಾಡಿಸುವುದು. ಇದರಿಂದ ಪ್ರಾಣಿಬಲಿಯ ಪ್ರಾಚೀನತೆಯನ್ನು ಗುರುತಿಸಬಹುದು. "ಪ್ರಾಣಿಗಳನ್ನು ಗೋಡೆಗಳಲ್ಲಿ ಹೂಳುವ ಪದ್ಧತಿ ಪ್ರತ್ಯಕ್ಷ ಆಚರಣೆಯಲ್ಲಿತ್ತು. ಸಾಂಕೇತಿಕ ಬಲಿಗೆಂದೇ ಹೆಚ್ಚಾಗಿ ಕೋಳಿ, ಹುಂಜಗಳನ್ನು ಅಥವಾ ಪ್ರಾಣಿಯನ್ನು ಕೊಂಡು ಅದರ ರಕ್ತವನ್ನು ಅಡಿಪಾಯದ ಗುಂಡಿಯಲ್ಲಿ ತೊಟ್ಟಿಕ್ಕಿಸಲಾಗುತ್ತಿತ್ತು. ಇಂಗ್ಲೆಂಡ್ ಮತ್ತು ಇತರ ಭೂಖಂಡಗಳಲ್ಲಿ ಮನೆಗಳ ಮತ್ತು ಚರ್ಚುಗಳ ಗೋಡೆಗಳನ್ನು ಕೆಡುವುವಾಗ ಪ್ರಾಣಿಗಳ ಎಲುಬುಗಳು, ಗೊಂಬೆಗಳೂ, ಶವಸಂಪುಟಗಳು, ಪ್ರತಿಮೆಗಳು ಮುಂತಾದ ವಸ್ತುಗಳನ್ನು ಶೋಧಿಸಿದ್ದಾರೆ. ಬಹುಶಃ ಇವುಗಳನ್ನು ಅಡಿಪಾಯ ಆಚರಣೆಯ ಸಂದರ್ಭದಲ್ಲಿ ಕೊಡಲಾಗುತ್ತಿದ್ದ ಮನುಷ್ಯ ಬಲಿಗಳಿಗೆ ಬದಲಾಗಿ ಉಪಯೋಗಿಸಿಕೊಂಡಂತೆ ಕಾಣುತ್ತದೆ."[೨೫]

ಮೂಢನಂಬಿಕೆಗಳು

ಜನಪದ ಸಾಹಿತ್ಯದಲ್ಲಿ ಮೂಢನಂಬಿಕೆಗಳೇ ಹೆಚ್ಚು ಪ್ರಭಾವವನ್ನು ಪಡೆದುಕೊಂಡಿವೆ. ಸಾಮಾಜಿಕವಾಗಿ, ಧಾರ್ಮಿಕವಾಗಿ ಪ್ರತಿಯೊಂದು ವಿಧಾನಕ್ಕೂ ಒಂದೊಂದು ಮೂಢನಂಬಿಕೆಯನ್ನು ಆರೋಪಿಸುತ್ತಾರೆ. ಪ್ರಧಾನವಾಗಿ ಕೃಷಿಗಳಿಗೆ ಯಾವುದಾದರೂ ಭಯಂಕರವಾದ ಕೀಟಬಾಧೆ ಬಂದರೆ ಅವುಗಳನ್ನು ದೇವರಿಗೆ ಹೇಳಿಕೊಳ್ಳುತ್ತಾರೆ. ರಾತ್ರಿಯಲ್ಲಿ ತಾವು ಬೆಳೆದ ಫಸಲನ್ನು ಯಾವುದಾದರೂ ಒಂದು ಪ್ರಾಣಿ ಬಂದು ತಿಂದರೆ ತಾವು ಬೆಳೆದ ಫಸಲನ್ನು ಆ ಪ್ರಾಣಿಯ ಹೆಸರಿನಲ್ಲಿ ಪೂಜೆ ಮಾಡುವುದು ಇದೆ. ಇದಕ್ಕೆ ಅಪೂರ್ಣವಾದ ಜ್ಞಾನಗಳೇ ಕಾರಣ. ಪ್ರತಿಯೊಬ್ಬರೂ ತಮ್ಮ ತಿಳಿವಳಿಕೆಯನ್ನು ಪರಿಶೀಲಿಸಿಕೊಂಡರೆ ಮೂಢ ಭಾವನೆಗಳಿಂದ ದೂರವಿರಬಹುದು. ಎಚ್.ನರಸಿಂಹಯ್ಯನವರು ತಮ್ಮ ಅಭಿಪ್ರಾಯವನ್ನು ಹೀಗೆ ಮಂಡಿಸುತ್ತಾರೆ. "ಎಷ್ಟೋ ಸಲ ಮೂಢನಂಬಿಕೆಗಳೇ ಆಧ್ಯಾತ್ಮಿಕ ವಿಷಯಗಳೆಂದು ಪರಿಗಣಿಸಲ್ಪಟ್ಟಿವೆ. ಹೆಚ್ಚು

ಮೂಢನಂಬಿಕಸ್ಥನು ಕಡಿಮೆ ಮೂಢನಂಬಿಕಸ್ಥನನ್ನು ನಾಸ್ತಿಕನೆಂದು ಕರೆದರೂ ಹೆಚ್ಚಲ್ಲ. ಕೆಲವು ಅದ್ವೈತಿಗಳಿಗೆ ಬುದ್ಧ ನಾಸ್ತಿಕ, ಹಲವು ದ್ವೈತಿಗಳಿಗೆ ಅದ್ವೈತಿಯ ಪ್ರಚ್ಛನ್ನಿ ಬುದ್ಧ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಮೂಢನಂಬಿಕೆಗಳು ವಿಪುಲವಾಗಿ ಬೆಳೆದು ಬಂದು ಹಬ್ಬಿವೆ. ನಮ್ಮ ದೇಶದಲ್ಲಿ ಈ ಅವಲಕ್ಷಣ ಕಪ್ಪುಚುಕ್ಕೆ ಬೆಕ್ಕಿಗೆ ಮಾತ್ರ ಮೀಸಲು. ಸಹಜವಾದ ಅಂಗೈ ಗೆರೆಗಳಿಗೆ ಎಲ್ಲಾ ದೇಶಗಳಲ್ಲಿಯೂ ಮಹದರ್ಥ ಕೊಡಲಾಗಿದೆ. ಬುಡುಬುಡಿಕೆಯವನು ತ್ರಿಕಾಲಜ್ಞಾನಿಯಾಗಿ ಹಲ್ಲಿಯ, ಲೊಚಗುಟ್ಟುವಿಕೆಯಲ್ಲಿ ಮನುಷ್ಯನು ಸಂದೇಶವನ್ನು ಕಲ್ಪಿಸಿಕೊಂಡನು. ಮಂಗಳವಾರ ಅಮಂಗಳದ ಚಿಹ್ನೆಯಾಗಿದೆ. ಮತ್ತೆ ಕೆಲವರಿಗೆ ಅದು ಪವಿತ್ರ ಪ್ರಾರ್ಥನಾ ದಿನವಾಯಿತು. ದಿನದ ಇಂತಿಷ್ಟು ಕಾಲ ರಾಹುಕಾಲ, ಗುಳಿಕಕಾಲ, ಯಮಗಂಡ ಕಾಲಗಳಾಗಿ ಶುಭಕಾರ್ಯಗಳಿಗೆ ನಿಷೇಧವಾಯಿತು. ಇನ್ನು ಕೆಲವರಿಗೆ ಎಲ್ಲಾ ಕಾಲವೂ ಒಂದೇ, ಮುಂಜಾನೆಯಿಂದ ಮಲಗುವ ತನಕ ಜೀವನ ಮೂಢನಂಬಿಕೆಗಳ ಮಯವಾಯಿತು. ಯಾವ ದಿಕ್ಕಿಗೆ ಮಲಗಬೇಕು? ಎಡಗಡೆ ಏಳಬೇಕೆ? ಬಲಗಡೆ ಏಳಬೇಕೆ? ಎಷ್ಟು ಸೀನು ಸೀತರೆ ಒಳ್ಳೆಯದು? ಕೆಲವು ಸಂಖ್ಯೆಗಳು ಒಳ್ಳೆಯವು ಮತ್ತೆ ಕೆಲವು ಕೆಟ್ಟವು"[೨೬] ಇಂತಹ ಮಾತುಗಳನ್ನು ಇಂದಿಗೂ ಪ್ರಸ್ತುತ ಎಂದು ತಿಳಿಯಬಹುದು. ಮಂಗಳವಾರ ಅಶುಭ, ಮಂಗಳವಾರ ಯಾವುದೇ ಬಾರ್ಬರ್ ಶಾಪ್ ತೆಗೆಯುವುದಿಲ್ಲ. ಯಾರೂ ಸಹ ತಲೆಕೂದಲನ್ನು ತೆಗೆಸಿಕೊಳ್ಳುವುದಿಲ್ಲ. ಹಾಗೆಯೇ ಮಂಗಳವಾರ ಮಗು ಜನನವಾದರೇ ಮಂಗಳಕರವಾಗಿದೆ ಎಂದು ಭಾವಿಸುವ ಜನರೂ ಇದ್ದಾರೆ. ಇಂತಹ ಮೂಢತ್ವಗಳು ತೊಲಗಬೇಕು ಉತ್ತಮ ಮಟ್ಟದ ಜ್ಞಾನದ ಶಿಸ್ತುಗಳು ಮನಕುಲದ ಮೇಲೆ ಪ್ರಭಾವ ಬೀರಬೇಕಾದ ಪರಿಸ್ಥಿತಿ ಬರಬೇಕು.

೨.೧. ಬಲಿ ಪದದ ನಿಷ್ಪತ್ತಿ ಮತ್ತು ಅರ್ಥ

ಸಾಂಸ್ಕೃತಿಕವಾಗಿ ಜಾನಪದವನ್ನು ಒಂದು ವಿಷಯವಸ್ತುವಾಗಿ ಪರಿಗಣಿಸುತ್ತೇವೆ. ಪ್ರತಿಯೊಂದು ಆಚರಣಾ ವಿಧಾನಕ್ಕೂ ನಿಯಮಗಳಿವೆ. ಪ್ರಧಾನವಾಗಿ ಗ್ರಾಮದೇವತೆಗಳ ಆರಾಧನೆ ಎಂದರೆ ಅದು ಪರಂಪರಾಗತವಾಗಿ ಬಂದ ಒಂದು ಶಿಷ್ಟ ಎಂದು ಗುರುತಿಸಬಹುದು. ಪ್ರಾಚೀನ ಕಾಲಘಟ್ಟದಿಂದ ಪಲ್ಲಟಗೊಂಡ ಪ್ರಕ್ರಿಯೆ ಎನ್ನಬಹುದು. ಮಾನವನಿಗೂ ಮತ್ತು ಭಗವಂತನಿಗೂ ನಿಕಟ ಸಂಬಂಧಗಳನ್ನು ಇಟ್ಟುಕೊಂಡು ಪೂಜೆ, ಪುನಸ್ಕಾರಗಳನ್ನು ಮಾಡುತ್ತಾರೆ. ದೇವರಿಗೆ ವಿವಿಧ ರೀತಿಯ ಭಕ್ಷ್ಯಗಳು, ನೈವೇದ್ಯಗಳೂ, ಮಾಂಸದ ನೈವೇದ್ಯ ಇವುಗಳಿಂದ ಅರ್ಪಿಸಿ ಸಂತೋಷಪಡುವುದು ಹಿಂದಿನಕಾಲದಿಂದಲೂ ನಡೆದುಕೊಂಡು ಬಂದಿರುವ ವಿಷಯವಾಗಿದೆ.

ಬಲಿ ಎಂದರೆ ಆಹುತಿ, ಅರ್ಪಿಸು, ದಮನಮಾಡು ಎಂದು ಅರ್ಥ ಬರುತ್ತದೆ. (ಕನ್ನಡ ರತ್ನಕೋಶ).

ದಾನ ಎಂದರೆ ಕೊಡುಗೆ ಎಂದು ಅರ್ಥ ಇದೆ(ಕನ್ನಡ ರತ್ನಕೋಶ). (ಅನ್ನದಾನ, ಭೂದಾನ, ವಿದ್ಯಾದಾನ, ಗೋದಾನ) ಮುಂತಾದವುಗಳನ್ನು ಗುರುತಿಸಬಹುದು.

ಋಗ್ವೇದದ ಕರ್ಮ ಕಾಂಡದಲ್ಲಿ ಪ್ರಾಣಿ ಪಶುಗಳನ್ನು ಬಲಿ ಕೊಡುವುದರಿಂದ ದೇವರು ಒಲಿದು ಜನರನ್ನು ಸುಖವಾಗಿಡುತ್ತವೆ ಎಂದು ಮಾಹಿತಿಗಳು ಸಿಗುತ್ತದೆ.

ಪುರಾಣಗಳಲ್ಲಿ ದೇವಾನುದೇವತೆಯರು ಕೋಪಗೊಂಡಾಗ ಅವುಗಳನ್ನು ಸಂತೋಷ ಪಡಿಸಲು ಪ್ರಾಣಿಬಲಿ, ಪಾಣಿಬಲಿ ಎಡೆ, ಅರ್ಪಿಸಿ ಪ್ರಾರ್ಥನೆಗಳನ್ನು ಮಾಡುವುದರಿಂದ ಅವು ಸಂತೃಪ್ತಿಗೊಳ್ಳುತ್ತವೆಂಬ ಭಾವನೆ ಇದೆ.

ಸ್ಮೃತಿಶಾಸ್ತ್ರದಲ್ಲಿ ಯಜ್ಞಕ್ಕೆ ಪ್ರಾಣಿ, ಪಶುಬಲಿ ಕೊಡುವುದನ್ನು ಸಮರ್ಥಿಸುತ್ತವೆ. ಕೆಲವು ಸ್ಮೃತಿಕಾರರು ಇಂತಹ ಪದ್ಧತಿಯನ್ನು ತಿರಸ್ಕಾರ ಮಾಡಿದರು.

ಪ್ರಾಣಿಗಳಾದ ಕುರಿ, ಕೋಣ, ಹಂದಿ, ಕೋಳಿ, ಆಡು, ಪಕ್ಷಿ, ಪ್ರಾಣಿ ಪಕ್ಷಿಗಳನ್ನು ಕೊಂದು ಅದರ ರಕ್ತವನ್ನು ದೇವರಿಗೆ ಅರ್ಪಿಸುವುದು ಎಂದು ಪ್ರಧಾನವಾಗಿ ತಿಳಿಯಲಾಗುತ್ತದೆ. ಅನೇಕ ಪುರಾಣ ಕಲ್ಪಿತವಾದ ಪುಸ್ತಕಗಳು ಪ್ರಾಣಿಬಲಿಯ ಬಗ್ಗೆ ವಿಸ್ತೃತವಾದ ಮಾಹಿತಿಗಳನ್ನು ತಿಳಿಸುತ್ತವೆ. ಸಾಮವೇದ, ಋಗ್ವೇದ, ಯಜುರ್ವೇದ, ಅತರ್ವಣವೇದ, ಮಹಾಭಾರತ, ರಾಮಾಯಣ ಕಾಲದಲ್ಲೂ ಪ್ರಾಣಿಬಲಿಯ ಬಗ್ಗೆ ಮಾಹಿತಿಗಳು ದೊರೆಯುತ್ತವೆ. ಸಾಮಾನ್ಯವಾಗಿ ಬಲಿ ಎಂದರೆ ಮನುಷ್ಯ ಅಥವಾ ಪ್ರಾಣಿ ಯಾವುದಾದರೂ ಒಂದನ್ನು ಕಡಿದು ದೇವರಿಗೆ ಅರ್ಪಿಸುವುದು ಎಂದು ತಿಳಿಸುತ್ತದೆ. ಈ ಅರ್ಪಿಸುವ ವಿಧಾನವನ್ನೇ ಹಿಂದೆ ಪ್ರಾಂೀನ ಮಾನವ ಮತ್ತು ಆಧುನಿಕ ಮಾನವ ದೇವರಿಗೆ ಪ್ರಾಣಿಗಳನ್ನು ಬಲಿಯಾಗಿದೆ ಎಂದು ತಿಳಿದುಕೊಳ್ಳಲಾಗುತ್ತದೆ. ಜಾನಪದ ವಿದ್ವಾಂಸರು ತಮ್ಮ ತಮ್ಮ ಕೃತಿಗಳಲ್ಲಿ ಇಂತಹ ಮಾಹಿತಿಗಳನ್ನೇ ವ್ಯಕ್ತಪಡಿಸುತ್ತಾರೆ. ಜನಪದರ ಮಾನಸಿಕ ಅಂತರಂಗವನ್ನು ಕಂಡುಕೊಳ್ಳ ಬೇಕಾದರೆ ಆಚರಣಾತ್ಮಕವಾಗಿರುವ ವಿಧಾನಗಳನ್ನು ಗಮನಿಸಬೇಕಾಗುತ್ತದೆ.

ಗ್ರಾಮದೇವತೆಗಳಲ್ಲಿ ಜನಪದ ದೇವತೆಗಳಾದ ಮಾರಮ್ಮ, ಮಾಯಮ್ಮ, ಕಾಳಮ್ಮ, ಕರಿಯಮ್ಮ, ಗಂಗಮ್ಮ, ಗೌರಮ್ಮ, ತುಳಿಸೆಮ್ಮ, ದುರುಗಮ್ಮ, ಚಾಮುಂಡಿ, ಮಸಣಿ, ಮಲ್ಲಮ್ಮ, ಮುಂತಾದ ಹೆಸರುಗಳಿಂದ ಸಂಬೋಧಿಸಿ ಅವುಗಳನ್ನು ಪೂಜಿಸಿ ಅವುಗಳಿಗೆ ಪ್ರಾಣಿಗಳನ್ನು ತಂದು ಪ್ರಾಣಿಗಳಿಗೆ ಅಲಂಕಾರ ಮಾಡಿ ಅವುಗಳನ್ನು ನಿರ್ದಿಷ್ಟ ವ್ಯಕ್ತಿಯ ಕೈಯಿಂದ ಕಡಿಸಿ ಅರ್ಪಿಸುವುದೇ ಆಗಿದೆ. ದೇವರ ಮುಂದೆ ಪ್ರಾಣಿಗಳನ್ನು ಕಡಿಯುವುದರಿಂದ ದೇವರಿಗೆ ಪ್ರಾಣಿಯನ್ನು ಮತ್ತು ಮನುಷ್ಯನ ಮನಸ್ಸಿನಲ್ಲಿ ಮೂಡಿರುವ ಅಲೌಕಿಕ ಭಾವನೆಗಳನ್ನು ದೇವರಿಗೆ ಸಮರ್ಪಿಸಿದಂತಾಗಿದೆ ಎಂದು ಭಾವಿಸುತ್ತಾರೆ.

೨.೨. ಬಲಿಪದ್ಧತಿಯ ಚಾರಿತ್ರಿಕ ಹಿನ್ನೆಲೆ

ಪ್ರಾಣಬಲಿ ಬಹಳಷ್ಟು ಪುರಾತನ ಕಾಲದಿಂದಲೂ ನಡೆದು ಬಂದಿರುವ ಸಂಪ್ರದಾಯ

ವಾಗಿದೆ. ಪ್ರಾಣಿ ಬಲಿಗೆ ಸಂಬಂಧಿಸಿದಂತೆ ಜಗತ್ತಿನಾದ್ಯಂತ ಅನೇಕ ರೀತಿಯ ಆಚರಣೆಗಳು ಇವೆ. ಇದು ಧಾರ್ಮಿಕ ಆಚರಣೆ ಬಹಳ ಮಹತ್ವದ ಕ್ರಿಯೆಯಾಗಿ ಜಗತ್ತಿನಾದ್ಯಂತ ಅನೇಕ ರೀತಿಯಲ್ಲಿ ನಡೆಯುತ್ತಾ ಬಂದಿದೆ. ಬಲಿಯೆಂದರೆ ಯಾವುದೇ ಒಂದು ಪ್ರಾಣಿಯನ್ನು "ಅಲೌಕಿಕ ಶಕ್ತಿಗೆ ಅರ್ಪಿಸುವುದು" ಎಂಬ ಅರ್ಥದ ಹಿನ್ನೆಲೆಯಲ್ಲಿ ಪ್ರಾಣಿಬಲಿಗಳನ್ನು ನಡೆಸಿಕೊಂಡು ಬರುತ್ತಿದ್ದರು. ಹಿಂದಿನ ಕಾಲದಲ್ಲಿ ಜನರಿಗೆ ವಿದ್ಯಾಭ್ಯಾಸವಿರಲಿಲ್ಲ. ಮನುಷ್ಯನಿಗೆ ಕಾಯಿಲೆಗಳು ಬಂದರೆ ವೈದ್ಯರುಗಳು ಇರಲಿಲ್ಲ. ಅದರ ಬದಲು ಅಂದಿನ ಜನರು ದೇವರನ್ನೇ ಹೆಚ್ಚಾಗಿ ನಂಬುತ್ತಿದ್ದರು. ಹಾಗಾಗಿ ಅಂದಿನ ಜನರು ಕುಟುಂಬದ ಕ್ಷೇಮಾಭಿವೃದ್ಧಿ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಸಲುವಾಗಿ ಆ ಊರಿನ ಗ್ರಾಮದೇವತೆಗೆ ಪ್ರಾಣಿಯನ್ನು ಬಲಿ ಕೊಡುತ್ತಿದ್ದರು. ಆದರೆ ಈ ಪದ್ಧತಿಯು ಈಗಲೂ ಕೂಡ ಜಾರಿಯಲ್ಲಿದೆ. ಅಷ್ಟೆ ಅಲ್ಲದೇ ಊರಿಗೆ ಬರಗಾಲ ಬಂದಾಗ ನೈಸರ್ಗಿಕ ದುರಂತಗಳಾದಾಗ ಜನರು ಪ್ರಕೃತಿ ದೇವಿಗೆ ಪ್ರಾಣಿಬಲಿಯನ್ನು ಕೊಟ್ಟು ದೇವರನ್ನು ತೃಪ್ತಿಪಡಿಸುತ್ತಿದ್ದರು. ಅದರಿಂದ ಬಂದ ಸಂಕಟಗಳನ್ನು ತಡೆಗಟ್ಟುತ್ತದೆ ಎಂದು ಜನರು ನಂಬುತ್ತಿದ್ದರು.

ಹಿಂದಿನ ಕಾಲದಲ್ಲಿ ಜನರು ಏನೇ ತಮಗೆ ಒಳ್ಳೆಯ ಕೆಲಸವಾಗಬೇಕದರೂ ಕೂಡ ದೇವರಿಗೆ ಹರಕೆಯಾಗಿ ಪ್ರಾಣಿಬಲಿಯನ್ನು ಕೊಡುತ್ತಿದ್ದರು. ಈಗಲೂ ಸಹಿತ ಉಗ್ರದೇವತೆಗಳಿಗೆ ಪ್ರಾಣಿಬಲಿಯನ್ನು ಕೊಡುವ ಪದ್ಧತಿ ಇದೆ. ಹಿಂದಿನ ಕಾಲದಲ್ಲಿ ಊರುಗಳ ರಚನೆಗಳಿರಲಿಲ್ಲ. ಪ್ರಾದೇಶಿಕವಾಗಿ ಕಾಡಿನಲ್ಲಿ ಗುಡಿಸಲನ್ನು ಕಟ್ಟಿಕೊಂಡು ಮಾನವ ಜೀವನವನ್ನು ಮಾಡುತ್ತಿದ್ದ. ಗುಹೆಗಳಲ್ಲಿ ವಾಸ ಮಾಡುತ್ತಿದ್ದ. ನಾಗರಿಕತೆಗೆ ಬಂದಾಗ ಊರುಗಳ ರಚನೆ ಮಾಡಿಕೊಂಡು ಹಳ್ಳಿಗಳನ್ನು ಕಟ್ಟಿಕೊಂಡು ಜೀವನವನ್ನು ಮಾಡತೊಡಗಿದ. ಒಂದೊಂದು ಊರಿಗೆ ಒಂದೊಂದು ಹೆಸರಿನಲ್ಲಿ ಮಾರಮ್ಮನ ಗುಡಿಗಳಿಗಳಿವೆ. ಅಲ್ಲಿ ವರ್ಷದಲ್ಲಿ ಒಮ್ಮೆ ಆ ದೇವಿಗೆ ಪ್ರಾಣಿಬಲಿಯನ್ನು ಕೊಡಲೇಬೇಕು. ಎಚ್.ತಿಪ್ಪೇರುದ್ರಸ್ವಾಮಿ ಅವರು ಸಂಪಾದಿಸಿರುವ ಮಲೆನಾಡು ಜಾನಪದ ವಿಚಾರ ಸಂಕಿಣರದ ಪ್ರಬಂಧಗಳು ಎಂಬ ಕೃತಿಯಲ್ಲಿ ಈ ರೀತಿಯಾದ ಮಾತುಗಳಿವೆ. "ಸಾಮಾನ್ಯವಾಗಿ ನಮ್ಮ ಜನಪದರು ನಡೆದುಕೊಳ್ಳುವ ಉಗ್ರದೇವತೆಗಳಲ್ಲಿ ದುರ್ಗಮ್ಮ ಮತ್ತು ಮಾರಮ್ಮನ ಹಬ್ಬ ಒಂದು ವೈಶಿಷ್ಟ್ಯತೆ ಪರಂಪರೆಯನ್ನು ಉಳ್ಳುವಂತಹದ್ದು. ಇದಕ್ಕೆ ಅಂತರ್ಜಾತೀಯ ವಿವಾಹದ ಹಿನ್ನೆಲೆ ಒಂದು ಕಾರಣವಾಗಿದ್ದು 'ಒಲಿದರೆ ನಾರಿ, ಮುನಿದರೆ ಮಾರಿ' ಎನ್ನುವಂತೆ ತನ್ನ ಇಷ್ಟು ದಿವಸದ ಸಂಸಾರದ ಗುಟ್ಟು ತಿಳಿದು ಕೊನೆಗೆ ಗಂಡ(ಕೋಣ)ನನ್ನೇ ಕಡಿಸಿಕೊಳ್ಳುವುದು ಗಾವುಮರಿ ಎಂದು(ಮಗನನ್ನು) ಕರೆಸಿಕೊಳ್ಳುವುದು".[೨೭] ಜಾತಿಹೀನವಾಗಿರುವ ಬ್ರಾಹ್ಮಣ ಹೆಣ್ಣುಮಗಳು ದಲಿತನಾದ ಮಾದಿಗನನ್ನು ಕೋಣದ ರೂಪದಲ್ಲಿ ಬಲಿ ತೆಗೆದುಕೊಳ್ಳುವುದು ಎಷ್ಟು ಸಮಂಜಸವಾಗಿದೆ ಎಂದು ಗಮನಿಸುವುದು ಇದೆ.

ಒಂದು ವೇಳೆ ಹಾಗೆ ಪ್ರಾಣಿಬಲಿಯನ್ನು ಕೊಡದಿದ್ದರೆ ಆ ಊರಿನ ಜನರಿಗೆ ಅನೇಕ ತೊಂದರೆಗಳಾಗಿ ಮನುಷ್ಯನ ರಕ್ತವೇ ಚೆಲ್ಲುತ್ತವೆ. ಈ ಪದ್ಧತಿಯನ್ನು ಈಗಲೂ ಮುಂದು ವರಿಸುತ್ತಿದ್ದಾರೆ. ಏಕೆಂದರೆ ಇಲ್ಲಿ ಜನರಿಗೆ ನಂಬಿಕೆಯೇ ಹೆಚ್ಚಾಗಿದೆ. ನಂಬಿಕೆಗಿಂತ ಹೆಚ್ಚು ಯಾವುದೂ ಇಲ್ಲ ಎನ್ನುವುದನ್ನು ವೈಜ್ಞಾನಿಕವಾಗಿ ನಿರೂಪಿಸಿದ್ದಾರೆ. ಹಿಂದಿನ ಕಾಲದಲ್ಲಿ ಜನರು ಮೇಲ್ಜಾತಿ ಸಮುದಾಯಗಳು ಮಾಡದ ಆಚರಣೆಯನ್ನು ಶ್ರೇಷ್ಠ ಎಂದು, ಕೆಳಜಾತಿಯವರು ಮಾಡಿದ ಆಚರಣೆಯನ್ನು ಕನಿಷ್ಠ ಎಂದೂ ಭಾವಿಸುತ್ತಿದ್ದರು ಹಾಗೂ ಪ್ರಾಣಿ ಬಲಿಯನ್ನು ಅನಾಗರಿಕ ಆಚರಣೆ ಎಂದು ಪರಿಗಣಿಸುತ್ತಿದರು. 'ದಿ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿ ಮದ್ರಾಸ್' ಎಂಬ ಕೃತಿಯಲ್ಲಿ ಈ ಮಾತುಗಳಿವೆ. "ಐತಿಹಾಸಿಕವಾಗಿ ೫ನೇ ಶತಮಾನದ ಶಿಲಾಶಾಸನಗಳಲ್ಲಿ ದೇವಿ ಪೂಜೆಯ ಬಗ್ಗೆ ಉಲ್ಲೇಖಗಳಿವೆ. ಅರಸರೂ ಕೂಡಾ ಪ್ರಾಕೃತಿಕ ಶಕ್ತಿಗಳ ಮೇಲೆ ನಿಯಂತ್ರಣ ಪಡೆಯಲು ಇಂಥ ತಾಂತ್ರಿಕಮಯ ವಿದ್ಯೆಗಳನ್ನು ಬಳಸಿಕೊಳ್ಳುತ್ತಿದ್ದರು. ೭ನೇ ಶತಮಾನದಲ್ಲಿ ಸುಪ್ರಸಿದ್ಧ ಚರ್ಕವರ್ತಿ ಹರ್ಷವರ್ಧನನು ಸ್ವತಃಶಕ್ತಿ ಆರಾಧಕನಾಗಿದ್ದನು ಎಂದು ಇತಿಹಾಸ ಹೇಳುತ್ತದೆ. ವರ್ದನೆಂಬ ರಾಜಕುಮಾರನು ರೋಗಬಾಧೆಯಿಂದ ನರಳುತ್ತಿದ್ದಾಗ ಶಕ್ತಿಯ ಮೂಲಕ ಅವನ ಜೀವಕ್ಕೆ ಸಾಂತ್ವನ ನೀಡಲು ತರುಣ ಯೋಧರು ಚಿಕ್ಕ ದೀಪಗಳಿಂದ ತಮ್ಮ ಮೈಸುಟ್ಟುಕೊಳ್ಳುತ್ತಿದ್ದರು. ಕರ್ನಾಟಕ ಯೋಧನೊಬ್ಬ ತನ್ನ ರುಂಡವನ್ನೇ ಅರ್ಪಿಸಲು ಸಿದ್ಧನಾಗಿದ್ದನು" ಎಂದು ಇತಿಹಾಸ ತಿಳಿಸುತ್ತದೆ.[೨೮] "ಸಿಂಧೂ ನಾಗರಿಕತೆಯೊಂದಿಗೆ ಮಾತೃದೇವತೆಯ ಸ್ಥಾನವು ಭಾರತದಲ್ಲಿ ಕಂದಿಹೋಗಲಿಲ್ಲ. ಅವಳು ತಾಯಿ, ಮಹಾತಾಯಿ, ಪ್ರಕೃತಿ ಮೊದಲಾದ ಹೆಸರುಗಳೊಂದಿಗೆ 'ಶಕ್ತಿ' ಎಂಬ ವೈಭವಕ್ಕೆ ಪಾತ್ರಳಾದಳು. ಅವಳ ಪ್ರತಿನಿಧಿಗಳೇ ಗ್ರಾಮದೇವತೆಗಳು. ಆ ದೇವತೆಗಳ ಹೆಸರುಗಳು ನೂರಾರು. ಒಂದೇ ಶಕ್ತಿಯ ಮೂರ್ತಿ ಕೃತ ಸ್ವರೂಪಗಳಾದರೂ ಸ್ಥಳೀಯ ಲಕ್ಷಣಗಳು ಬೇರೆ ಬೇರೆ. ಮುಖ್ಯವಾಗಿ ಅವೆಲ್ಲಾ ಫಲವತ್ತೆತೆಯ ಧಾರಕಶಕ್ತಿಗಳು. ಆರ್ಯೇತರರಲ್ಲಿ ಅವಕ್ಕೆ ವಿಶಿಷ್ಟ ಸ್ಥಾನ. ಬ್ರಾಹ್ಮಣರ ಪಾತ್ರವೇನೂ ಇಲ್ಲ. ಪಾತ್ರವಿರುವುದು ಕೆಳಜಾತಿಗಳವರದ್ದು. ಪರ್ಯಾಯಗಳದ್ದು. ಅವರು ಬೇರೆ ಬೇರೆ ಹಳೆಯ ಬುಡಕಟ್ಟುಗಳ ಸಂತತಿಯವರು; ಮಾತೃದೇವತೆಯನ್ನು ಪೋಷಿಸುವ ಪರಿ ಅವರಿಗೆ ತಿಳಿದಿದೆ. ಆರ್ಯ-ಪೂರ್ವ ಬುಡಕಟ್ಟುಗಳಷ್ಟೋ ಹಿಂದೂಧರ್ಮದ ತೆಕ್ಕೆಗೆ ಬರಲೇ ಇಲ್ಲ. ಈ ಬುಡಕಟ್ಟುಗಳಲ್ಲಿ ತಾಯಿ ಅಥವಾ ಭೂಮಿ ದೇವತೆಯ ಆರಾಧನೆ ವಿಶೇಷವಾದುದು. ಆ ಆದಿಮ ದೇವತೆಯು ಇಂದಿಗೂ ಕೆಲವು ಹಿಂದುಳಿದ ಜನಾಂಗಗಳ ಮಾನಸದಲ್ಲಿ ಸ್ಥಿರವಾಗಿದ್ದಾಳೆ. ಅಂತಹ ಪಂಗಡಗಳ ಪಟ್ಟಿಯೊಂದನ್ನು ಕೊಡಬಹುದು. ಬಿಳಿಹಗ್ಗ, ಬುಡುಬುಡುಕಿ, ಡೊಂಬ, ಗಡಬ, ಗಂಗಡಿಕಾರ, ಒಕ್ಕಲು, ಗೊಲ್ಲ, ಹಡ್ಡಿ, ಹೆಳವ, ಹೊಲೆಯ, ಈಡಿಗ, ಮುಂತಾದ ಬುಡಕಟ್ಟು ಸಮುದಾಯಗಳ ಪಟ್ಟಿಯನ್ನು ಕೊಡುತ್ತಾರೆ. ಗ್ರಾಮದೇವತೆಗಳು 'ತಾಯಿ' ಅಥವಾ

ಮಹಾತಾಯಿಯ ಪ್ರತಿನಿಧಿಗಳೆಂಬ ಅಭಿಪ್ರಾಯ ಸರಿಯಾದರೆ, ಅಸಮಾನ ಬೆಳವಣಿಗೆಗೆ ಇನ್ನೊಂದು ಉದಾಹರಣೆ ಇದಾಗುತ್ತದೆ. ಆ ತಾಯಂದಿರ ಅವಶೇಷಗಳು ಐದು ಸಾವಿರ ವರ್ಷಗಳ ಹಿಂದಿನವು. ಈ ಜನ ಇಂದಿಗೂ ಭಾರತದಲ್ಲಿ ಉಳಿದಿದ್ದಾರೆ. ಅವೇ ಹಳೆಯ ನಂಬಿಕೆಗಳಿಗೆ ಪಕ್ಕಾಗಿದ್ದಾರೆ. ಸಾವಿರಾರು ವರ್ಷಗಳ ಹಿಂದೆ ಸಿಂಧೂ ನಾಗರಿಕತೆಯ ಪ್ರವರ್ತಕರಾಗಿದ್ದವರ ಪೂರ್ವಜರು ಇವರು. ಭಾರತದ ರೈತಾಪಿ ಜನರ ವಿಶಾಲ ಸಮುದಾಯಗಳು ಇಂದಿಗೂ ಪುರುಷ ದೇವತೆಗಳನ್ನು ಹಚ್ಚಿಕೊಂಡಿರುವುದು ಅಷ್ಟಕ್ಕಷ್ಟೆ. ಅವರೆಲ್ಲ ಬುಡಕಟ್ಟು ಸಮಾಜದಲ್ಲಿ ಉಳಿದಿರುವವರೇನಲ್ಲ. ಅವರ ಜೀವನದ ಮೇಲೆ ಹಿಡಿತವಿರುವ ದೇವತೆಗಳು ಬಹುತೇಕ ಸ್ತ್ರೀದೇವತೆಗಳು. ಅವರಲ್ಲಿ ಪ್ರಮುಖರೆಂದರೆ ದುರ್ಗೆ, ಕಾಳಿ, ಚಂಡಿ ಮುಂತಾದವರು. ಅವರ ಹೆಸರುಗಳಲ್ಲಿರುವ ವ್ಯತ್ಯಾಸ ನಂತರದ ಕಾಲದಲ್ಲಿ ಹುಟ್ಟಿಕೊಂಡದ್ದು. ಅಂತೆಯೇ ಅ ದೇವತೆಗಳ ಲಕ್ಷಣಗಳು ಮತ್ತು ಇತಿಹಾಸ ಕೂಡ. ಆದರೆ ಅದು ಅಮುಖ್ಯ, ಅವುಗಳೆಲ್ಲದರ ಹಿಂದಿರುವುದು ಆದಿ ಸ್ತ್ರೀ-ದೇವತೆ. ಆ ದೇವತೆಯ ಮಣ್ಣಿನ ಪ್ರತಿಮೆಗಳು ಪ್ರಾಚೀನ ನಾಗರಿಕತೆಗಳ ಕೇಂದ್ರಗಳಲ್ಲೂ ಉತ್ಖನನದಿಂದ ದೊರಕಿವೆ. ಭಾರತದ ಜನಸಮುದಾಯದ ಪ್ರಜ್ಞೆಯಲ್ಲಿ ಈ ಆದಿಮಾತೆ ಉಳಿದಿರುವುದನ್ನು ವಿವರಿಸುವುದು ಹೇಗೆ? ಅದಕ್ಕಿರುವ ವಿವರಣೆ ಒಂದೇ; ಆ ಮಾತೆಯ ಭೌತಿಕ ಆಧಾರವು ಹಾಗೆಯೇ ಉಳಿದಿರುವುದು. ಭಾರತದ ಸಾಮಾಜಿಕ ಚರಿತ್ರೆಯ ಇನ್ನೊಂದು ವೈಲಕ್ಷಣವನ್ನು ಇದು ಸ್ಪಷ್ಟಗೊಳಿಸುತ್ತದೆ" ಎಂದು ಸ್ತ್ರೀದೇವತೆಯ ಬಗ್ಗೆ ವಿವರಿಸುತ್ತಾರೆ.[೨೯] ಇಲ್ಲಿ ಪ್ರಧಾನವಾಗಿ ಮಾತೃ ಮೂರ್ತಿಗಳನ್ನು ಹೊತ್ತುಕೊಂಡು ಪೂಜಿಸುವುದು ರೂಢಿಗೆ ತಂದಿರುವುದು ಸಿಂಧೂ ನಾಗರಿಕತೆಯ ಮಹತ್ವ ಎಂದು ತಿಳಿದುಕೊಳ್ಳಬಹುದು.

ಆದರೆ ಯಾವುದನ್ನು ಅನಾಗರಿಕ ಆಚರಣೆ ಎಂದು ಪರಿಗಣಿಸಿದ್ದಾರೋ ಅದನ್ನು ತಮಗರಿವಿಲ್ಲದೆಯೆ ತಾವು ಆಚರಿಸುತ್ತಿದ್ದಾರೆ. ಹೇಗೆಂದರೆ ವಿದ್ಯಾವಂತರಾದವರು ಪ್ರಾಣಿಬಲಿಯನ್ನು ನಿಷೇಧಿಸಿದರೂ ಕೂಡ ತಮ್ಮ ಆಹಾರದಲ್ಲಿ ಆ ಪ್ರಾಣಿಗಳನ್ನೇ ತಿಂದು ಬದುಕುತ್ತಿದ್ದಾರೆ. ಹಾಗಾಗಿ ಅದೂ ಕೂಡ ಪ್ರಾಣಿಬಲಿಯೇ ಆಗುತ್ತದೆ. ಅವಿದ್ಯಾವಂತರು ದೇವರ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿ ಕೊಟ್ಟರೆ, ವಿದ್ಯಾವಂತರು ತಮ್ಮ ಬಾಯಿ ಚಪಲಕ್ಕೆ ಪ್ರಾಣಿಗಳನ್ನು ಬಲಿ ಕೊಡುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ವಿದ್ಯಾವಂತರೂ ಕೂಡ ಈ ಪದ್ಧತಿಯನ್ನು ಆಚರಿಸುವುದನ್ನು ನಾವು ನೋಡಬಹುದು. ಪ್ರಾಣಿಬಲಿಗಿಂತಲೂ ಮೊದಲು ನರಬಲಿಗಳನ್ನು ಕೊಡುತ್ತಿದ್ದರು. ಮನುಷ್ಯ ನಾಗರಿಕನಾಗುತ್ತಾ ಬಂದ ನಂತರ ನರಬಲಿಯನ್ನು ನಿಲ್ಲಿಸಿ ಪ್ರಾಣಿಗಳನ್ನು ಬಲಿ ಕೊಡಲು ಪ್ರಾರಂಭಿಸಿದ. ಪ್ರಾಣಿಬಲಿ ಎಂದರೆ ಪ್ರಧಾನವಾಗಿ ಕೋಣ, ಆಡು, ಕುರಿ, ಕೋಳಿ, ಹಂದಿ ಇವುಗಳನ್ನು ಬಲಿಕೊಡುವ ಮೂಲಕ ಮಾರಿಕಾಂಬ. ದುರ್ಗಾಂಬೆ, ಕಾಳಿದೇವತೆಗಳಾದ ಮಾರಮ್ಮಗಳು ತೃಪ್ತಿಪಡುತ್ತವೆಂಬ ಭಾವನೆಯಿಂದ

ಸಾಮುದಾಯಿಕ ಆರೋಗ್ಯ ಸಂರಕ್ಷಣೆಯಾಗುತ್ತದೆ ಎಂದು ಜನರು ನಂಬಿಕೆಯಿಂದ ಭಾವಿಸುತ್ತಾರೆ. ಈ ಪ್ರಾಣಿಬಲಿಯು ಬಹಳ ಹಿಂದಿನ ಕಾಲದಿಂದಲೂ ನಡೆದು ಬಂದಿರುವುದರಿಂದ ಅದರಲ್ಲಿ ಬಹಳಷ್ಟು ನಂಬಿಕೆಗಳಿವೆ, ಏಕೆಂದರೆ ಮೊದಲಿನ ಕಾಲದಲ್ಲಿ ಜನರು ಆ ನಂಬಿಕೆಯಿಂದಲೇ ನೂರಾರು ಕಾಲ ಬಾಳಿ ಬದುಕಿದರು. ಆದುದರಿಂದ ಇಂದಿನ ಜನರು ಅದನ್ನು ಒಪ್ಪಲೇಬೇಕಾಗಿದೆ.

"ಪ್ರಾಣಿಗಳು ಮತ್ತು ಸಸ್ಯಗಳನ್ನು ಕುರಿತಂತೆ ನಿರ್ದಿಷ್ಟವಾದ ಸಂದರ್ಭಗಳಲ್ಲಿ ವಿಶೇಷ ಆಚರಣೆಗಳನ್ನು ಕೈಗೊಳ್ಳುವ ಗ್ರಾಮೀಣರು ಅವುಗಳಲ್ಲಿ ಚೇತನವನ್ನು ಕಾಣುತ್ತಾರೆ. ಸುತ್ತಲಿನ ಪರಿಸರದ ಬಗ್ಗೆ ಅವರ ಪ್ರೀತಿ ಮತ್ತು ಭಕ್ತಿ ಜನಪದ ಸಂಸ್ಕೃತಿಗೆ ಅಹಿಂಸಾತ್ಮಕ ಸ್ವರೂಪವನ್ನು ದೊರಕಿಸಿಕೊಡುತ್ತದೆ. ಈ ಪ್ರಾಣಿಪ್ರೇಮ ಮತ್ತು ಪ್ರಕೃತಿಪ್ರೇಮ ಧಾರ್ಮಿಕ ಭಾವನೆಯಿಂದ ಜಾಗೃತವಾದದ್ದು. ದೈವಸಂಬಂಧಿ ಆಚರಣೆಗಳು ಜಾನಪದದ ಬದುಕಿನ ಹೆಚ್ಚು ಭಾಗವನ್ನು ಆಕ್ರಮಿಸಿವೆ. ದಿನಕ್ಕೊಂದು ಸಾರಿ, ವಾರಕ್ಕೊಂದು ಸಾರಿ, ತಿಂಗಳಿಗೊಂದು ಸಾರಿ, ಒಂದು ದೇವರ ಆರಾಧನೆ ಆಗುತ್ತದೆ. ಸಕಲ ಪೂರ್ವಸಿದ್ಧತೆಯೊಂದಿಗೆ ಆಗುವ ಹಬ್ಬಗಳು ಅನೇಕ ಆಚರಣೆಗಳ ಮೊತ್ತವಾಗಿವೆ. ಕೃಷಿ ಸಂಸ್ಕೃತಿಯ ಅಂಗವಾಗಿ ಬಂದ ಗ್ರಾಮದೇವತೆಗಳು ಅತ್ಯಂತ ಪ್ರಬಲವಾಗಿದ್ದು, ಗ್ರಾಮದ ರಕ್ಷಣೆ ಮತ್ತು ಜನತೆಯ ಆರೋಗ್ಯ ರಕ್ಷಣೆಯ ಹೊಣೆಯನ್ನು ಹೊತ್ತಿವೆ. ಒಂದೊಂದು ನಿರ್ದಿಷ್ಟವಾದ ರೋಗಕ್ಕೂ ಒಂದೊಂದು ದೇವತೆ ಇರುತ್ತದೆ. ಈ ದೇವತೆಗಳಿಗೆ ಸೂಕ್ತವಾದ ಹಬ್ಬ, ಆಚರಣೆಗಳು ನೆರವೇರದೆ ಇದ್ದಲ್ಲಿ ಇಡೀ ಗ್ರಾಮಕ್ಕೆ ರೋಗ ಬಂದು ಸಾಮೂಹಿಕ ಸಾವು ಸಂಭವಿಸಬಹುದೆಂಬ ಭೀತಿಗೆ ಜನ ಒಳಗಾಗುತ್ತಾರೆ. ಇದಕ್ಕಾಗಿ ಹೇರಳವಾದ ಪ್ರಾಣಿಬಲಿಯನ್ನು ಕೊಡಲಾಗುತ್ತದೆ. ಒಂದು ದೇವತೆಗೆ ಬಲಿ ಕೊಡುವುದು ಅರ್ಪಣೆ ಅಷ್ಟೇ ಅಲ್ಲ. ಒಂದು ಜನಾಂಗ ತನ್ನ ದೇವರೊಂದಿಗೆ ಒಂದಾಗುವುದನ್ನು ಸಾಧಿಸುವ ದಾರಿಯಾಗಿದೆ. ದೇವತೆಗಾಗಿ ರಕ್ತವನ್ನು ಚೆಲ್ಲುವುದರ ಮೂಲಕ ಒಂದು ಜನಾಂಗಕ್ಕೆ ದೇವತೆಯೊಡನೆ ಒಂದು ಬಗೆಯ ರಕ್ತಸಂಬಂಧ ಏರ್ಪಟ್ಟಿತೆಂದು ಜನ ಭಾವಿಸುತ್ತಾರೆ."[೩೦] ಈ ಹಿನ್ನೆಲೆಯಲ್ಲಿ ಜನಪದರ ದೇವತೆಯರಲ್ಲಿ ಒಂದಾಗುವ ಭಾವನೆಯಿಂದ ಪ್ರಾಣಿಬಲಿಗಳನ್ನು ಮಾಡುವುದು ಮುಂದುವರಿಸಿಕೊಂಡು ಹೋಗುವುದು.

ಮೇಲ್ಜಾತಿ ಎಂದು ಹೇಳುವ ಜನಾಂಗದವರು ಕೂಡ ತಮ್ಮ ಮನೆಯಲ್ಲಿ ದೈವಗಳನ್ನು ನಂಬಿ ಆ ದೈವಗಳಿಗೆ ವರ್ಷಕ್ಕೊಮ್ಮೆ ಪ್ರಾಣಿಬಲಿಯನ್ನು ಕೊಡುವುದು ನಮ್ಮ ಕರ್ನಾಟಕಾದ್ಯಂತ ನೋಡುತ್ತೇವೆ. ಆದರೂ ಬಲಿ ಕೊಟ್ಟ ಪ್ರಾಣಿಗಳನ್ನು ತಾವು ತಿನ್ನದ ಕಾರಣ ತಿನ್ನುವ ಜನಾಂಗದವರಿಗೆ ಕೊಡುವುದು ಇದೆ. ಇದರಿಂದ ನಾವು ಪ್ರಾಣಿ ಬಲಿಯೆಂಬುವುದು ಎಲ್ಲಾ ವರ್ಗದ ಜನರಲ್ಲಿಯೂ ಇತ್ತು ಎಂಬುದು ಗುರುತಿಸಬಹುದು.

ಪ್ರಾಚೀನ ಕಾಲದಿಂದಲೂ ನಡೆದು ಬಂದ ರೀತಿ ನೋಡಿದರೆ ಪ್ರಾಣಿಬಲಿಯ ಆಚರಣೆಗೂ ಮತ್ತು ಜನರ ಆಹಾರಕ್ರಮಕ್ಕೂ ಹತ್ತಿರದ ಸಂಬಂಧವಿದೆ ಎಂದೇ ಹೇಳಬಹುದು. ಏಕೆಂದರೆ ಪ್ರಾಣಿಬಲಿ ಕೊಡುವವರು ಹೆಚ್ಚಿನವರು ಮಾಂಸಾಹಾರಿಗಳೇ ಆಗಿರುತ್ತಾರೆ. ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಾಗಿ ಅವರವರ ಕ್ರಮಕ್ಕೆ ತಕ್ಕಂತೆ ಪ್ರಾಣಿಗಳನ್ನು ಬಲಿ ಕೊಡುತ್ತಾರೆ. ಪ್ರಾಂತೀಯ ಪ್ರದೇಶದಲ್ಲಿ ಪ್ರಾದೇಶಿಕವಾಗಿ ತಮ್ಮ ಮಕ್ಕಳಿಗೆ ಕಾಲರಾ, ಸಿಡುಬು, ಅರ್ಬುದ ದೊಡ್ಡರೋಗ ಮಾರಿರೋಗ, ಕಾಲುರೋಗ, ಬಾಯಿರೋಗ, ಮುಂತಾದ ರೋಗಗಳಿಗೆ ಪರಿಹಾರಗಳೇ ಇಲ್ಲದ ಸಂದರ್ಭಗಳಲ್ಲಿ ಈ ಪ್ರಾಣಿಬಲಿಗಳೂ ಹೆಚ್ಚು ಪ್ರಾಮುಖ್ಯತೆಗಳನ್ನು ಪಡೆದುಕೊಂಡಿರುವುದು ಗುರುತಿಸಬಹುದು. ದಿ ಹೆರಿಟೇಜ್ ಇಶ್ಯೂ ನವೆಂಬರ್ ೧೯೮೮ ಸಂಚಿಕೆಯಲ್ಲಿ ಈ ರೀತಿಯಾದ ವಿವರಗಳಿವೆ. "ಶಾಕ್ತ ವೇದಾಂತವು ಶಕ್ತಿಯೇ ಅಖಿಲ ಸೃಷ್ಟಿ ವಿಶ್ವದ ಸಂಚಾಲಿಕೆ, ಸೃಷ್ಟಿ ಸ್ಥಿತಿ ಲಯಗಳ, ಕಾರಣಕರ್ತಳು, ಎನ್ನುತ್ತಿದ್ದ ಅವಳನ್ನು ಪೂಜಿಸಲು ೪ ಹೆಜ್ಜೆಗಳೂ ಹೇಳುತ್ತವೆ. ಚರ್ಯ, ಕ್ರಿಯೆ, ಯೋಗ, ಮತ್ತು ಜ್ಞಾನ ಪದಗಳು ಪೂಜೆ ಮತ್ತು ನೇಮೋತ್ಸವ, ನಿತ್ಯ ಅನುಷ್ಠಾನಗಳಿಂದ ಹಲವು ಸಂಕೇತಗಳ ಮೂಲಕ ಭಕ್ತನು, ಶಕ್ತಿಯನ್ನು ಪಡೆಯಬಲ್ಲನು. ಕ್ರಿಯಾಪಾದವು ವ್ಯಕ್ತಿಯ ಸಮಷ್ಟಿಯ ಮುಖಾಂತರ ಸಮಾಜದ ಕ್ರಿಯಾಶೀಲವಾದ ಅಂಗವಾಗಿ ಶ್ರಮಿಸಲೇಬೇಕು, ಸಾಮಾಜಿಕ ನೈತಿಕ ಹಾಗೂ ಆಧ್ಯಾತ್ಮಿಕ ಉನ್ನತಿಗಾಗಿ ದೇವಾಲಯಗಳು, ಅವುಗಳ ಕಾರ್ಯಕ್ರಮಗಳಿಂದ ಯಜ್ಞ ಯಾಗಾದಿಗಳಿಂದ ಜಾತ್ರೆ, ದೀಪೋತ್ಸವಗಳು ಪಾಲಿಸಿ ಉತ್ಸವ ಶೋಭಾಯಾತ್ರೆಗಳು, ಸಮಾಜದ ಅತ್ಯಾವಶ್ಯಕವಾಗಿ ಸುಧಾರಿಸಬಹುದು" ಎಂದು ತಿಳಿಸುತ್ತವೆ.[೩೧] ದೇವಿಯ ಕೋಪದಿಂದಲೆ ರೋಗ ಬಂದಿರುವುದು ಎಂದು ದೇವರಿಗೆ ಹರಕೆ ಕಟ್ಟುತ್ತಾರೆ. ಕಾಯಿಲೆ ಗುಣವಾದ ನಂತರ ಆ ಮಗುವನ್ನು ತಾವು ನಂಬಿಕೊಂಡ ಹರಕೆ ಹೇಳಿಕೊಂಡ ದೇವಿ–ದೇವಿಗುಡಿಗೆ ಕರೆದುಕೊಂಡು ಹೋಗಿ ಹರಕೆಯ ಮೂಲಕ ಕೋಳಿ, ಕುರಿ, ಕೋಣವನ್ನು ಕಡಿದು ರಕ್ತಹಾರವನ್ನು ದೇವರಿಗೆ ಕೊಟ್ಟು ನಂತರ ಅ ಪ್ರಾಣಿಯ ಮಾಂಸವನ್ನು ಆಹಾರವಾಗಿ ತಿನ್ನುತ್ತಾರೆ. ಈ ಪದ್ಧತಿ ಈಗಲೂ ನಡೆಯುತ್ತ ಇದೆ. ಮುಂದೆಯೂ ನಡೆಯುತ್ತದೆ.

ಪ್ರಾಣಬಲಿಯ ಇನ್ನೊಂದು ಹಿನ್ನೆಲೆಯನ್ನು ನಾವು ಇಲ್ಲಿ ನೋಡಬಹುದು. ಕೃತಯುಗದಲ್ಲಿ ನಡೆದ ಗ್ರಾಮದೇವಿ ಜಾತ್ರೆಯ ಪರಿಕಲ್ಪನೆಗಳು ಬರುತ್ತವೆ. ಆ ಪ್ರದೇಶದ ಜನರು ಮಹಿಷಾಸುರ ಮರ್ದಿನಿಯ ಕಥೆಯನ್ನೇ ನಂಬಿಕೊಂಡಿದ್ದಾರೆ. ಚಾಮುಂಡೇಶ್ವರಿಯ ಕಥೆ ಏನೇ ಇದ್ದರೂ ಕೃತಯುಗದಲ್ಲಿ ನಡೆದ ಘಟನೆ ತ್ರೇತಾ, ದ್ವಾಪರಾದಿ ಯುಗಗಳಲ್ಲಿ ದಾಟಿ ಕಲಿಯುಗದವರೆವಿಗೂ ನಡೆದುಕೊಂಡು, ಹಬ್ಬಿಕೊಂಡು ವಿಸ್ತೃತಗೊಂಡು ಬಂದಿರುವುದು ನಿಜಕ್ಕೂ ಅಚ್ಚರಿಯ ಸಂಗತಿಯಾಗಿದೆ.

ಪ್ರಾಣಿಗಳನ್ನು ಬಲಿ ಕೊಡಬೇಕಾದರೆ ಕಾಳಿ, ಮಾರಿ, ದುರ್ಗಿ, ಚಾಮುಂಡಿ, ಸ್ವರೂಪಗಳು, ಆಕಾರಗಳು ಮುಖ್ಯ ಪಾತ್ರ ವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಮಾರಿ, ಕಾಳಿ, ದುರ್ಗಿ, ಚಾಮುಂಡಿ ಸ್ವರೂಪಗಳ ಕಲ್ಪನೆ ಯಾವಾಗ ಮನುಷ್ಯನಿಗೆ ಮೂಡಿದೆ ಎಂದು ಗಮನಿಸಲು ಸಾಧ್ಯವಿಲ್ಲದ ಮಾತಾಗಿದೆ. ಈ ಕಲ್ಪನೆಯಲ್ಲಿ ಪ್ರಾಣಿಬಲಿಗಳನ್ನು ಕೊಡುವುದು ರೂಢಿಗೆ ತಂದಿರುವುದನ್ನು ಗುರುತಿಸಬಹುದು. ಏಕೆಂದರೆ ಕಾಳಿ, ದುರ್ಗಿ ಚಾಮುಂಡಿ ಕಲ್ಪನೆಗಳು ಪುರಾಣಗಳಲ್ಲಿ ಬರುತ್ತವೆ ಆದರೂ ಅವುಗಳ ಸ್ವರೂಪದಲ್ಲಿ ಆಕಾರದಲ್ಲಿ ಮನುಷ್ಯನ ರುಂಡಗಳನ್ನು ಧರಿಸಿರುವ ಕಲ್ಪನೆಗೆ ಇದೆ. ಈ ಹಿನ್ನೆಲೆಯಲ್ಲಿ ಚಾರಿತ್ರಿಕತೆಯನ್ನು ಗುರುತಿಸಬಹುದು.

ಪೌರಾಣಿಕವಾಗಿ ಗಮನಿಸುವಾಗ ಪೂಜೆಗೆ ಆಧಾರ ಈಶ್ವರನ ಹೆಂಡತಿಯಾದ ಪಾರ್ವತಿಯೇ ಮೂಲ. ಪಾರ್ವತಿಯೇ ಅವತಾರ ತಾಳಿ ಚಾಮುಂಡೇಶ್ವರಿಯಾಗಿರುವುದನ್ನು ಗುರುತಿಸಬಹುದು. ಚಾಮುಂಡೇಶ್ವರಿಯೇ ಕಥೆಯೇ ಆಧಾರವಾಗುತ್ತದೆ. ಅಂದು ಚಾಮುಂಡಿಯಾಗಿದ್ದರೆ ಆಧುನಿಕ ಸಂದರ್ಭದಲ್ಲಿ ಮಾರಿ, ಮಸಣಿಯಾಗಿದ್ದಾಳೆ. ಪ್ರತ್ಯೇಕ ಕಾರಣಗಳನ್ನು ಕೊಡಬಹುದಾದರೂ ನಮಗೆ ಪ್ರಾಣಿಬಲಿಯ ಹಿನ್ನೆಲೆಯೇ ಪ್ರಮುಖವಾಗುತ್ತದೆ.

ಪಾರ್ವತಿಯ ಸ್ವರೂಪದಲ್ಲಿ ಹುಟ್ಟಿರುವ ದೇವತೆಗಳಾದ ಮಾರಿಯಮ್ಮ, ಕಾಳಿಯಮ್ಮ ದುರ್ಗಮ್ಮ, ದುರ್ಗಾಭವಾನಿ, ಚಾಮುಂಡೇಶ್ವರಿ ರೂಪಾಂತರಗಳು ಪಡೆದಿರುವುದು ಗುರುತಿಸಬಹುದಾದರೂ ಅವುಗಳ ಆರಾಧನೆಗಳಲ್ಲಿ ನಡೆದ ಘಟನೆಗಳಂತೂ ಭಿನ್ನವಾಗಿವೆ. ಮಹಿಷಾಸುರನೆಂಬ ರಾಕ್ಷಸ ಈಶ್ವರನಿಂದ ವರ ಪಡೆದು ಲೋಕಕಂಟಕನಾಗಿರುವಾಗ ಅವನು ತಪಸ್ಸುಮಾಡಿ ವರ ಪಡೆದದ್ದು, ತನಗೆ ಲೋಕದಲ್ಲಿ ಯಾವುದರಿಂದ, ಕ್ರಿಮಿ–ಕೀಟಾದಿಗಳಿಂದಲೂ ಸಾವು ಬರದಂತೆ ವರವನ್ನು ಪಡೆದುಕೊಂಡಿದ್ದು, ಆದರೆ ಈಶ್ವರನು ಸ್ತ್ರೀಯನ್ನು ಮರತೇಬಿಟ್ಟಿದ್ದ. ಹೀಗಿರುವಾಗ ದಿನದಿಂದ ದಿನಕ್ಕೆ ಮಹಿಷಾಸುರನ ಉಪಟಳ ಜಾಸ್ತಿಯಾಗಿ ಅವನನ್ನು ಕೊಲ್ಲಲೇಬೇಕೆಂದ. ಇದಕ್ಕೆ ಒಂದು ನಿರ್ಣಯವನ್ನು ಮಾಡಿಕೊಂಡರು ದೇವಾನುದೇವತೆಗಳು. ಹೀಗಿರುವಾಗ ತ್ರಿಮೂರ್ತಿಗಳ ಸಮಕ್ಷಮದಲ್ಲಿ ಈಶ್ವರನಂತೂ ನಿಸ್ಸಾಯಕ, ಬ್ರಹ್ಮನಂತೂ ಅಸಹಾಯಕ, ಕೊನೆಗೆ ವಿಷ್ಣುವೇ ಉಪಾಯ ಹುಡುಕಿ ಈಶ್ವರನ ಅರ್ಧಾಂಗಿಯಾದ ಪಾರ್ವತಿಯನ್ನು ಶಕ್ತಿಯ ಅವತಾರವಾಗಲು ಪ್ರಚೋದಿಸುತ್ತಾನೆ. ಈ ದಿಶೆಯಲ್ಲಿ ಶಕ್ತಿಗೂ ರಾಕ್ಷಸನಿಗೂ ಘೋರಯುದ್ಧ ನಡೆಯುತ್ತದೆ. ರಾಕ್ಷಸ, ಶಕ್ತಿಯ ಉಪಟಳಗಳನ್ನು ತಡೆಯಲಾರದೆ ಕೋಣದ ಜೀವ ತಾಳುತ್ತಾನೆ. ಪಾರ್ವತಿ ಶಕ್ತಿಯಾಗಿ ಪಣ ತೊಡುತ್ತಾಳೆ. ನಿನ್ನನ್ನು ಕೊಂದು ನಿನ್ನ ಬಲಗಾಲನ್ನು ಕಡಿದು ನಿನ್ನ ಬಾಯಲ್ಲಿಟ್ಟು, ನಿನ್ನ ರಕ್ತವನ್ನು ಹೀರಿ ಕುಡಿದು ನಿನ್ನ ರುಂಡವನ್ನು ಹೂಮಾಲೆಯಾಗಿ ಧರಿಸಿ ನಿನ್ನನ್ನು ಎದುರಿಗೆ ಉಳಿಸಿಕೊಳ್ಳುತ್ತೇನೆ ಎಂದು ಶಪತ ಮಾಡುತ್ತಾಳೆ. ಅದೇ ರೀತಿಯಲ್ಲಿ ಶಕ್ತಿಯಾಗಿ ಮಾರ್ಪಡುತ್ತಾಳೆ.

ಮಹಿಷಾಸುರನಾದ ರಾಕ್ಷಸನನ್ನು ಕೊಲ್ಲಲು ಅವತರಿಸಿದ ಶಕ್ತಿಯ ರುದ್ರ ರೂಪವನ್ನೇ ಪ್ರಸ್ತುತ ಜನರು ತಮ್ಮ ಆಶಯಕ್ಕೆ ತಕ್ಕಂತೆ ವಿವಿಧ ನಾಮಗಳಿಂದ ಕರೆದುಕೊಂಡಿದ್ದಾರೆ. ಅವಳೇ ಮಾರಿ, ದುರ್ಗಿ, ಮಸಣಿ, ಕಾಳಿ, ಚಾಮುಂಡಿಯಮ್ಮಗಳು. ಆಚ್ಚರಿಯೆಂದರೆ ಆ ಘಟನೆ ಮೂರು ಯುಗಗಳನ್ನು ದಾಟಿದ್ದರೂ ಇಂದಿನ ಜನಾಂಗದವರೂ ಕೂಡ ತಮ್ಮ ನಂಬಿಕೆಯಂತೆ ಅದನ್ನು ಆಚರಿಸುವುದನ್ನು ನಾವು ನೋಡಬಹುದು. ಇಂದಿಗೂ ಜನರು ತಮ್ಮ ಪ್ರಾಂತ್ಯದಲ್ಲಿ ಕಾಳಿ, ದುರ್ಗಿ, ಮೂರ್ತಿಗಳನ್ನು ಪ್ರತಿಷ್ಠಾಪಿನೆ ಮಾಡುವುದು ಕೋಣವನ್ನು ಕೊಂದು ಅದರ ಬಾಯಿಗೆ ಬಲಗಾಲನ್ನು ಕಡಿದು ಅದರ ಮುಂದೆ ಇಡುವುದನ್ನು ಗುರುತಿಸಬಹುದು.

೨.೩. ಬಲಿಪದ್ಧತಿಯ ಪ್ರಕಾರಗಳು

ಆಧುನಿಕ ಜಗತ್ತಿನಲ್ಲಿ ಬದುಕುತ್ತಿರುವ ನಾವು ಇಂದು ಆಧುನೀಕರಣದ ತುತ್ತತುದಿ ಯಲ್ಲಿದ್ದೇವೆ. ವೈಜ್ಞಾನಿಕ ಅನ್ವೇಷಣೆಗಳು ಇಂದು ನಮ್ಮನ್ನು ವೈಚಾರಿಕತೆಯತ್ತ ಕೊಂಡೊಯ್ಯುತ್ತಿವೆ. ವೈಚಾರಿಕತೆಯನ್ನು ನಮ್ಮಲ್ಲಿ ಆಳವಡಿಸಿಕೊಂಡು ನಾವು ಮೌಢ್ಯ ವಿಚಾರಗಳಿಗೆ ಮಾರುಹೋಗಿ ವೈಜ್ಞಾನಿಕ ವಿಚಾರಗಳಿಂದ ದೂರ ಸರಿದಿದ್ದೇವೆ ಎಂದು ಭಾವಿಸಿದ್ದೇವೆ. ಆದರೆ ನಮ್ಮ ಬದುಕಿನಲ್ಲಿ ಪರಂಪರೆಯಿಂದ ಹಾಸುಹೊಕ್ಕಾಗಿರುವ ಧರ್ಮ, ದೇವರು, ದೈವ ಎನ್ನುವ ಪರಿಕಲ್ಪನೆಯಿಂದ ಹೊರಬಂದು ಬದುಕಲು ನಮಗೆ ಇಂದಿಗೂ ಆ ಕೊಂಡಿಯಿಂದ ಕಳಚಿಕೊಳ್ಳುವುದು ಅಷ್ಟು ಸುಲಭವಲ್ಲದ ಸಂಗತಿಯಾಗಿದೆ. ಜಗತ್ತಿನ ವಿಚಾರವಾದಿಗಳು ವೈಜ್ಞಾನಿಕ ದೃಷ್ಟಿಕೋನವುಳ್ಳವರು ಕೂಡ ಇದರಿಂದ ಹೊರತಾಗಿಲ್ಲ. ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಧರ್ಮದ, ದೇವರ, ದೈವದ ಜೊತೆಗೆ ಸಂಬಂಧವನ್ನು ಇರಿಸಿಕೊಂಡೇ ಬಂದಿರುತ್ತಾರೆ.

ಪ್ರಕೃತಿಯ ನಡುವೆ ಬದುಕುತ್ತಿದ್ದ ಆದಿ ಮನುಷ್ಯನಿಗೆ ಪ್ರಕೃತಿಯು ಆತಂಕ–ಆಹ್ಲಾದ ಎರಡನ್ನೂ ನೀಡಿದೆ. ಪ್ರಕೃತಿಯಲ್ಲಿ ನಡೆಯುವ ವೈಪರೀತ್ಯಗಳಾದ ಗುಡುಗು, ಚಂಡಮಾರುತ, ಪ್ರವಾಹ, ಕಾಡ್ಗಿಚ್ಚು ಇವೆಲ್ಲವೂ ಆದಿಮನುಷ್ಯನಿಗೆ ಬಿಡಿಸಲಾರದ ಒಗಟುಗಳಾಗಿದ್ದವು. ತನ್ನನ್ನು ಮೀರಿದ ಅಗೋಚರ ಶಕ್ತಿಯೊಂದಿದೆ ಎನ್ನುವ ನಂಬಿಕೆಯಿಂದ ಆ ಶಕ್ತಿಯನ್ನು ಕಲ್ಪಿಸಿಕೊಂಡು ಆತ ಅದನ್ನು ಒಲಿಸಿಕೊಂಡು ತನಗೆ ಬರುವ ಕಷ್ಟವನ್ನು ನಿವಾರಿಸಿಕೊಳ್ಳಬೇಕು ಎಂಬುದು ಆತನ ಮುಖ್ಯ ಉದ್ದೇಶವಾಗಿತ್ತು. ಆದ್ದರಿಂದ ಆತ ಆರಾಧನೆಯ ಮುಖಾಂತರ ಆ ಆಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾದನು ಎಂದು ಗಮನಿಸಬಹುದು.

ದೇವರನ್ನು ಒಲಿಸಿಕೊಳ್ಳುವುದಕ್ಕೆ ಮನುಷ್ಯ ಬೇರೆ ಬೇರೆ ವಿಧಾನಗಳನ್ನು ಬಳಸಿಕೊಂಡ. ಬೇರೆ ಬೇರೆ ಸ್ವರೂಪದ ಆರಾಧನಾ ವಿಧಾನಗಳು ತಮ್ಮ ನಡುವೆ ಇವೆ. ಅದರಲ್ಲಿ ಬಹಳ ಮುಖ್ಯ ಆರಾಧನಾ ವಿಧಾನವೆಂದರೆ ಪ್ರಾಣಿಬಲಿ. ಇದು ದೇವರಿಗೆ ಪ್ರೀತಿಪಾತ್ರವಾದ.

ಅರ್ಥವತ್ತಾದ ವಿಧಾನವಾಗಿರುವುದನ್ನು ಗುರುತಿಸಬಹುದು ಎಂಬುದು ಜನಪದರು ನಂಬಿಕೆಯಾಗಿದೆ. ಜನಪದರು ವಸ್ತುಗಳನ್ನು, ಪ್ರಾಣಿಗಳನ್ನು ದೇವರಿಗೆ ಬಲಿ ನೀಡುವುದರ ಮೂಲಕ ಆ ಶಕ್ತಿಯನ್ನು ಒಲಿಸಿಕೊಳ್ಳುವುದು ಪರಂಪರೆಯಿಂದ ಬಂದಿರುವ ವಿಧಾನಕ್ರಮ.

ಪ್ರಮುಖವಾಗಿ ಪ್ರಾಣಿಗಳನ್ನು ಬಲಿ ಕೊಡಲು ಕೆಲವು ನಿಯಮಗಳನ್ನು ಗಮನಿಸಬಹುದು. ಇಲ್ಲಿ ಪ್ರಧಾನವಾಗಿ ಎರಡು ಭಿನ್ನ ಹಂತಗಳನ್ನು ಪ್ರಾಣಿಗಳನ್ನು ಬಲಿ ಕೊಡುವುದನ್ನು ಗುರುತಿಸುತ್ತೇವೆ. **ಅ. ಪ್ರಾಣಿವಧೆ:** ಇಲ್ಲಿ ಪ್ರಧಾನವಾಗಿ ಪ್ರಾಣಿಗಳನ್ನು ವಧೆ ಮಾಡುವುದು ವೈಶಿಷ್ಟ್ಯವಾಗಿ ಗುರುತಿಸುತ್ತೇವೆ. ನರಬಲಿ, ಪ್ರಾಣಿಬಲಿಗಳು ವಿಶೇಷಗಳನ್ನು ಪಡೆದುಕೊಳ್ಳುತ್ತವೆ. ನರಬಲಿ ಗುಂಪುಗಳಲ್ಲಿ ಸಮಾಧಿ ಮರಣ, ದೇವರಿಗೆ ಬಲಿದಾನ ಮರಣ, ವೀರಮರಣಗಳೆಂದು ವಿಂಗಡಿಸಿಕೊಂಡು ಕರೆಯಬಹುದು. **ಆ. ಮನುಷ್ಯನ ದೇಹದಂಡನೆ:** ಈ ವಿಧಾನದಲ್ಲಿ ಸ್ವತ ದೇಹವನ್ನು ಬಾನಾಮತಿ, ಮಾಟ–ಮಂತ್ರ, ಶಸ್ತ್ರದಿಂದ, ಹೊಡೆತದಿಂದ, ದಿವ್ಯದಿಂದ, ಕೆಂಡದಿಂದ ಮುಂತಾದ ವಿಧಾನಗಳಿಂದ ದೇಹದಂಡನೆಯನ್ನು ಮಾಡಿಕೊಳ್ಳುವುದು ಇದೆ. ಮಾರಮ್ಮನ ಜಾತ್ರಾ ಸಮಯದಲ್ಲಿ ವಲಸೆ ದುರುಗಿ ಮರುಗಿಯರು ತಮ್ಮ ಛಾಟಿಯಿಂದ ಮೈಗೆ ಪೆಟ್ಟುಕೊಟ್ಟುಕೊಳ್ಳುವುದು, ಮೈಗೆ ಬಿಸಿಲಲ್ಲಿ ಹೊಡೆದುಕೊಳ್ಳುವುದು ಇದರ ಪ್ರಭಾವವೆನ್ನಬಹುದು.

ಬಲಿ ಈ ಪದದ ಬಳಕೆ ತುಂಬಾ ವಿಸ್ತಾರವಾದ ಚರಿತ್ರೆಯನ್ನು ಹೊಂದಿದೆ. ಇದು ಧಾರ್ಮಿಕ ಆಚರಣೆಯ ಬಹುಮುಖ್ಯ ಭಾಗವಾಗಿದೆ. ಜಗತ್ತಿನಲ್ಲೆಡೆ ಬೇರೆ ಬೇರೆ ರೂಪದಲ್ಲಿ ಬಲಿ ಪ್ರಕ್ರಿಯೆ ನಡೆದು ಬಂದಿದೆ. ಬಲಿ ಎಂದರೇನು ಎನ್ನುವ ಪ್ರಶ್ನೆಗೆ ಒಂದು ಪ್ರಾಣಿ ಅಥವಾ ವಸ್ತುವನ್ನು ಅಲೌಕಿಕ ಶಕ್ತಿಗೆ ಅರ್ಪಿಸುವುದು ಎನ್ನುವ ಉತ್ತರ ಸಿಗುತ್ತದೆ. ಇದು ಲೌಕಿಕ ಮತ್ತು ಅಲೌಕಿಕ ಜಗತ್ತಿನ ನಡುವೆ ಕೊಂಡಿಯಂತೆ ಕೆಲಸ ಮಾಡುತ್ತದೆ. ಲೌಕಿಕದ ಜನರು ತಾವು ಕೊಡುವ ಬಲಿಯಿಂದ ಅಲೌಕಿಕದ ದೈವಗಳು ತಮ್ಮ ಇಷ್ಟಾರ್ಥವನ್ನು ಈಡೇರಿಸುತ್ತದೆ ಅಥವಾ ಸಂತೃಪ್ತಿಗೊಳ್ಳುತ್ತವೆ ಎಂದು ಭಾವಿಸುತ್ತಾರೆ. ಶುಭಶ್ಚಂದ್ರ ನಾಟೀಕಾರ ಅವರು ತಮ್ಮ ಕೃತಿಯಲ್ಲಿ ಈ ರೀತಿಯಾಗಿ ನರಬಲಿಯನ್ನು ಪ್ರಸ್ತಾಪ ಮಾಡುತ್ತಾರೆ. "ಮಾನವ ಜೀವಿ ಇನ್ನೂ ಶೈಶವಾವಸ್ಥೆಯಲ್ಲಿದ್ದಾಗ ಪ್ರಕೃತಿದತ್ತವಾದ ಆಹಾರವನ್ನು ಹಾಗೂ ಪ್ರಾಣಿಗಳನ್ನು ತಿಂದು ಬದುಕುತ್ತಿದ್ದ. ಆಗ ಮನುಷ್ಯ ಪ್ರಕೃತಿಯಲ್ಲಿ ನಡೆಯುವ ಘಟನೆಗಳೆಲ್ಲ ಸಹಜ ಹಾಗೂ ಅಗೋಚರ ಶಕ್ತಿಯೇ ಇದಕ್ಕೆ ಕಾರಣ ಎಂದು ನಂಬಿದ. ಪ್ರಕೃತಿಯಲ್ಲಿ ಸಂಭವಿಸುವ ಘಟನಾವಳಿಯಿಂದ ಆತ ರಕ್ಷಣೆ ಪಡೆಯಲು ಪ್ರಾಕೃತಿಕ ಶಕ್ತಿಗಳಿಗೆ ಶರಣಾಗಿ, ಅವುಗಳನ್ನು ಪೂಜಿಸತೊಡಗಿದ. ಒಂದೊಂದು ಘಟನೆಗಳೂ ಒಬ್ಬೊಬ್ಬ ದೇವರ ಅವತಾರವಾಯಿತು. ಈ ದೇವರುಗಳನ್ನು ತೃಪ್ತಿಪಡಿಸಲು ಮೊದಲಿಗೆ ನರಬಲಿಯು ಅಜ್ಞಾನ, ಅವೈಚಾರಿಕತೆ,

ಭಯದ ಫಲವಾಗಿ ಮೂಡಿಬಂದಿತು. ಆದಿಮಾನವನ ಆಹಾರಪದ್ಧತಿಯಲ್ಲಿ ನರಭಕ್ಷಣೆಯೂ, ಪ್ರಾಣಿ, ಗಡ್ಡೆ, ಗೆಣಸುಗಳನ್ನು ತಿನ್ನುವುದು ಒಂದು ಅಂಗವಾಗಿತ್ತು. ಕಾಲಕ್ರಮೇಣ ಉತ್ಪಾದನಾ ವಿಧಾನ ಬದಲಾದಂತೆ ಕೃಷಿಪದ್ಧತಿ ಬೆಳೆದಂತೆ ಆಹಾರ ರೀತಿಯ ಬದಲಾವಣೆಯಾಗತೊಡಗಿತು. ಆದರೆ ಮನುಷ್ಯನ ಚಿತ್ತವೃತ್ತಿ ಮತ್ತು ವಾಸನೆಗಳು ನರಭಕ್ಷಣೆಯನ್ನು ಹೇಗಾದರೂ ಉಳಿಸಿಕೊಳ್ಳಬೇಕಾದ ಒತ್ತಡವನ್ನು ಅವನ ಮೇಲೆ ತಂದವು. ಅದರಿಂದಾಗಿ ಆರಂಭದಲ್ಲಿ ಆಹಾರದ ಅಂಗವಾಗಿದ್ದ ನರಭಕ್ಷಣೆಯು ಕ್ರಮೇಣ ಧಾರ್ಮಿಕ ರೂಪವನ್ನು ಪಡೆಯುತ್ತ ಬಂತು. ನರಬಲಿ ಅದರ ಮೂಲ ಅರ್ಥ ಮತ್ತು ಸ್ವರೂಪಗಳಲ್ಲಿ ಇಂದಿಗೂ ಉಳಿದಿರುವುದರಿಂದ ಅದರ ಉಗಮ ಮತ್ತು ಬೆಳವಣಿಗೆಯ ಬಗ್ಗೆ ಹಲವು ಅಂಶಗಳನ್ನು ಗುರುತಿಸಬಹುದಾಗಿದೆ. ಆದಿಮಾನವ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ಬಗ್ಗೆ ಹೇಗೆ ಖಚಿತವಾಗಿ ಹೇಳಲು ಆಧಾರಗಳಿಲ್ಲವೋ ಹಾಗೆಯೇ ಧರ್ಮದ ಒಂದು ಅಂಗವಾದ ನರಬಲಿಯ ಬಗ್ಗೆ ಕೂಡ ಖಚಿತವಾದ ವಿವರಗಳು ತಿಳಿದುಬರುವುದಿಲ್ಲ. ನರಬಲಿ ಪ್ರಪಂಚದ ಎಲ್ಲಾ ಜನಾಂಗಗಳಲ್ಲೂ ಹೆಚ್ಚು ಕಡಿಮೆ ವ್ಯಾಪಕವಾಗಿ ಕಂಡುಬಂದಿರುವ ಒಂದು ಸಾಂಸ್ಕೃತಿಕ ಸಾರ್ವತ್ರಿಕ ಅಂಶ. ಆದ್ದರಿಂದ ಎಲ್ಲ ಸಂಸ್ಕೃತಿಗಳೂ ಒಂದಲ್ಲ ಒಂದು ರೀತಿಯಿಂದ ನರಬಲಿಯನ್ನು ಒಪ್ಪಿದವೆಂದು ತಿಳಿಯಬಹುದು"[೨]

ನರಬಲಿಯ ಕುರಿತು ಮಾತನಾಡುವಾಗ ಎರಡು ಅಂಶಗಳನ್ನು ಗುರುತಿಸಬಹುದು. ಒಂದು ಅವೈಜ್ಞಾನಿಕ, ಮೂಢತೆಗಳು ಇದ್ದ ಸಂದರ್ಭಕ್ಕೆ ಇಂತಹ ಬಲಿ ಪ್ರಕಾರಗಳು ಇದ್ದವು ಎಂದು ಗುರುತಿಸಬಹುದು. ಟಿ.ಎಸ್.ಸತ್ಯನಾಥ್ ಅವರು ತಮ್ಮ ಕೃತಿಯಾದ 'ನರಬಲಿ: ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಪುಸ್ತಕದಲ್ಲಿ ಈ ರೀತಿಯಾಗಿ ವಿವರಿಸುತ್ತಾರೆ. "ಮೊದಲಿಗೆ ಅವನ ಆರ್ಥಿಕ ವ್ಯವಸ್ಥೆಯು ಆಹಾರ ವ್ಯವಸ್ಥೆಯ ಒಂದು ಅಂಗವೂ ಆಗಿದ್ದಿರಬೇಕು. ಆದರೆ ಮಾನವ ನಾಗರಿಕನಾಗುತ್ತಾ ಬಂದಂತೆ ಅವನ ಆಹಾರ ವ್ಯವಸ್ಥೆಯು ಬದಲಾಗುತ್ತಾ ಬಂದಿತು. ಆಹಾರ ಸಂಗ್ರಹಣೆ ಹಂತದಿಂದ ಪಶುಪಾಲನೆ, ಕೃಷಿ ಮುಂತಾದ ಮುಂದುವರಿದ ಹಂತಗಳಿಗೆ ಜನಾಂಗ ಹೊಂದಿಕೊಂಡಾಗ, ನರಭಕ್ಷಣೆಯು ಕಣ್ಮರೆಯಾಯಿತು" ಎಂದು ತಿಳಿಸುತ್ತಾರೆ.[೩] ಮೊದಲಿಗೆ ಮಾನವ ಆಹಾರ ಸಂಸ್ಕೃತಿಯಲ್ಲಿ ಮಾನವನ ನರಮಾಂಸಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಿದ್ದ ಎಂದು ಮೇಲಿನ ಉಲ್ಲೇಖಗಳಿಂದ ತಿಳಿದುಕೊಳ್ಳಬಹುದು. "ಆದಿಮಾನವ ಪಿತೃದೇವತೆಗಳ ವಿಧಿಯೊಂದಿಗೆ ನರಮಾಂಸ ಭಕ್ಷಣೆಯನ್ನು ಅದರ ಒಂದು ಅಂಗವಾಗಿ ಉಳಿಸಿಕೊಂಡಿದ್ದನ್ನು ಮಾನವಶಾಸ್ತ್ರಜ್ಞರು ಗುರುತಿಸಿದ್ದಾರೆ. ಸುಮಾರು ೫,೦೦,೦೦೦ ವರ್ಷಗಳ ಹಿಂದೆಯೇ ಪೀಕಿಂಗ್ ಮಾನವ ಈ ಆಚರಣೆಯನ್ನು ಉಳಿಸಿಕೊಂಡಿದ್ದ. ನಮಗೆ ಈವರೆಗೂ ಅಧಿಕೃತವಾಗಿ ತಿಳಿದುಬಂದಿರುವ ಈತನೇ ಪ್ರಪ್ರಥಮ ನರಭಕ್ಷಕ. ಇವನಷ್ಟೇ ಅಲ್ಲದೇ 'ಜಾವಾ' ಮನುಷ್ಯ ಮತ್ತು ನಿಯಾಂಡರ್‌ಥಾಲ್ ಮನುಷ್ಯರಲ್ಲೂ

ಹಾಗೂ ಪ್ರಾಚೀನ ಮತ್ತು ನೂತನ ಶಿಲಾಯುಗದ ಮಾನವರಲ್ಲೂ ಈ ಪದ್ಧತಿ ಪ್ರಚಲಿತವಿದ್ದುದಕ್ಕೆ ದಾಖಲೆಗಳಿವೆ." ನರಭಕ್ಷಣೆಯನ್ನು ಮಾಡುವ ಪದ್ಧತಿಯನ್ನು ತಿಳಿಸಿಕೊಡುತ್ತಾರೆ.[೩೪] ಈ ಹಿನ್ನೆಲೆಯಲ್ಲಿ ಧಾರ್ಮಿಕ ಆಚರಣೆಯಲ್ಲಿ ಕೂಡ ಸೂರ್ಯ ದೇವರಿಗೆ ನರಬಲಿ ಪ್ರಧಾನ ಪಾತ್ರ ವಹಿಸುತ್ತಿತ್ತು ಎಂದು ಗುರುತಿಸಬಹುದು. ಉದಾಹರಣೆ ಅನುಬಂಧದಲ್ಲಿ ನೀಡಿರುವ ಛಾಯಾಚಿತ್ರಗಳನ್ನು ಗಮನಿಸಬಹುದು.

ಆಫ್ರಿಕಾಖಂಡದಲ್ಲಿ ಒಂದು ವಿಶೇಷವಾದ ಒಂದು ವಿಧಾನವನ್ನು ಇಲ್ಲಿ ಗಮನಿಸಬಹುದು. "ನರಬೇಟೆ, ನರಭಕ್ಷಣೆಗಳ ಮೂಲಕ ಹೆಚ್ಚಿನ ಆತ್ಮದ್ರವ್ಯವನ್ನು ಗಳಿಸಿಕೊಳ್ಳುವ ಕಲ್ಪನೆ ಸಾಮಾಜಿಕ ವ್ಯವಸ್ಥೆಯ ಒಂದು ಅಂಗವಾಗಿ ವಿವಾಹಕ್ಕೂ ವ್ಯಾಪಿಸಿದ್ದು ಕಂಡುಬರುತ್ತದೆ. ಆಫ್ರಿಕಾದ ಕೆಲವು ಜನಾಂಗಗಳಲ್ಲಿ ಮದುವೆಯಾಗಬಯಸುವ ವರ, ತಾನು ಬೇಟೆಯಾಡಿದ ಮನುಷ್ಯನ ತಲೆಯೊಂದನ್ನು ತಂದು ತೋರಿಸಬೇಕಾಗಿತ್ತು. ಒಂದೊಂದು ಪರಿಸ್ಥಿತಿಯಲ್ಲಿ ಉಂಟಾದಂತಹ ನರಭಕ್ಷಣೆ ನರಬಲಿ ಆಚರಣೆ ಕ್ರಮೇಣವಾಗಿ ಸಾಂಪ್ರದಾಯಿಕ, ಧಾರ್ಮಿಕ ವಿಧಿಗಳಾಗಿ ಮಾರ್ಪಟ್ಟವು. ವೈಯಕ್ತಿಕ ಆಶೆ ಸಿದ್ಧಿಗಾಗಿ ಅಲ್ಲದೇ ಇದೇ ಜನಾಂಗಗಳ ಹಿತಕ್ಕಾಗಿ ದೇವತೃಪ್ತಿಯ ಉದ್ದೇಶದಿಂದ ವೈಯಕ್ತಿಕ ಹಾಗೂ ಸಾಮೂಹಿಕ ನರಬಲಿ ಪದ್ಧತಿ ಬೆಳೆದುಬಂತು. ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ತಾನೇ ತಾನಾಗಿ ಅಥವಾ ಪರರಿಂದ ಬಲಿಯಾಗುವ ವ್ಯಕ್ತಿಯ ಸಹಜ ಸಾವಿಗೆ ಮೊದಲೇ ಮಾಡುವ ಉದ್ದೇಶಿತ ಪ್ರಾಣಹರಣ ಒಂದು ಧಾರ್ಮಿಕ ವಿಧಿಯೊಂದಿಗೆ ನಡೆದಾಗ ಅದನ್ನು ನರಬಲಿ ಎಂದು ಕರೆಯಬಹುದು. ನರಬಲಿಯು ದಹಿಸುವಿಕೆ, ಹೂಳುವಿಕೆ, ಮತ್ತು ರಕ್ತಪಾತ, ನೀರಿನಲ್ಲಿ ಮುಳುಗಿಸುವಿಕೆ ಮತ್ತು ನೇಣುಹಾಕುವಿಕೆ ನಿಸರ್ಗಾರ್ಪಣೆಯಿಂದ ನರಬಲಿ ಜರಗುತ್ತಿತ್ತೆಂದು ತಿಳಿದುಬರುತ್ತದೆ". ನರಬಲಿಯ ಸ್ವರೂಪದ ಬಗ್ಗೆ ಹೀಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ.[೩೫]

ಬಲಿ ಎಂದರೆ ಅದು ಪ್ರಭಾವವಾಗಿ ರಕ್ತ ಚೆಲ್ಲುವಿಕೆಯನ್ನು ಸೂಚಿಸುತ್ತದೆ. ಸಮೃದ್ಧದ ಭಾಗವೇ ಅದು. ಮನುಷ್ಯ ಅಥವಾ ಪ್ರಾಣಿಯನ್ನು ಉದಾತ್ತೀಕರಣದ ನೆಲೆಯಲ್ಲಿ ಕೊಲ್ಲುವಿಕೆಯ ಮೂಲಕ ಅಲೌಕಿಕ ಶಕ್ತಿಗೆ ಅರ್ಪಿಸುವುದೇ ಬಲಿಯ ಮುಖ್ಯ ಉದ್ದೇಶ. ಇದು ಕೇವಲ ಜೀವಂತ ಪ್ರಾಣಿಗೆ ಮಾತ್ರ ಅನ್ವಯಿಸದೆ ಪ್ರಾಣಿರಹಿತ ವಸ್ತುವಿಗೂ ಅನ್ವಯಿಸುತ್ತದೆ.

ಸಮಾಧಿ ಮರಣ: ಜೈನ ಸಾಹಿತ್ಯದಲ್ಲಿ ಇದು ಪ್ರಮುಖವಾಗಿ ಬರುತ್ತದೆ. ಜೈನರು ಧಾರ್ಮಿಕ ಮೋಕ್ಷ ಪಡೆದುಕೊಳ್ಳಲು ಈ ರೀತಿಯಾದ ಸಮಾಧಿ ಮರಣವನ್ನು ಸಾಧಿಸುತ್ತಾರೆ. ಜೀವನಪರ್ಯಂತ ವ್ರತ, ನೇಮ, ನಿಷ್ಠೇ, ಮುಂತಾದ ವಿಧಾನಗಳಿಂದ ಸಲ್ಲೇಖನ ವ್ರತ ಮಾಡಿ ಸಮಾಧಿ ಮರಣ ಹೊಂದುತ್ತಾರೆ. ಈ ಹಿನ್ನೆಲೆಯಲ್ಲಿ ಮನುಷ್ಯ ಆತ್ಮಗಳ ಅನುಸಂಧಾನಕ್ಕಾಗಿ ಮೋಕ್ಷ ಮತ್ತು ಸದ್ಗತಿ ಹೊಂದಲು ಬಲಿದಾನಗಳ ಪರಂಪರೆ ಆರಂಭವಾಗಿರುವುದು ಧಾರ್ಮಿಕವಾಗಿ ಎಂದು ತಿಳಿದುಕೊಳ್ಳಬಹುದು.

ಪ್ರಾಣಿಬಲಿಯು ಬೇರೆ ಬೇರೆ ಕಾರಣಗಳಿಗಾಗಿ ನಡೆಯುತ್ತದೆ. ಸಾರ್ವಜನಿಕ ಕಾರಣಗಳಿಗಾಗಿ ಕುಟುಂಬದ ಕ್ಷೇಮಕ್ಕಾಗಿ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಸಲುವಾಗಿ, ದುಷ್ಟಶಕ್ತಿಗಳಾದ ಪ್ರೇತ, ಭೂತ, ಪಿಚಾಚಿ, ನಿವಾರಣೆಗಾಗಿ, ನೈಸರ್ಗಿಕ ದುರಂತಗಳು–ಹೀಗೆ ಅನೇಕ ಕಾರಣಗಳಿಗಾಗಿ ಬಲಿಯಂತಹ ಆಚರಣೆಗಳು ನಡೆಯುದನ್ನು ಇಂದಿಗೂ ಕಾಣಬಹುದು. ಹೀಗೆ ಅನೇಕ ಕಾರಣಳಿಗಳಾಗಿ ನಡೆಯುವ ಬಲಿಯು ಪ್ರಧಾನವಾಗಿ ಎರಡು ರೀತಿಯಲ್ಲಿ ನಡೆಯುತ್ತದೆ. ೧. ರಕ್ತಸಹಿತ ಬಲಿ, ೨. ರಕ್ತರಹಿತ ಬಲಿ

ಬಲಿಯು ಈ ಎರಡು ಪ್ರಕಾರಗಳನ್ನು ಈ ರೀತಿಯಾಗಿ ಸ್ಥೂಲವಾಗಿ ವಿವರಿಸಿಕೊಳ್ಳಬಹುದು.

ಬಲಿಯ ಪ್ರಕಾರಗಳು

೧. ರಕ್ತಸಹಿತ ಬಲಿ

ನರಬಲಿ – ಮಕ್ಕಳ ಬಲಿ, ಗರ್ಭಿಣಿ ಸ್ತ್ರೀಯರ ಬಲಿ.

ಪ್ರಾಣಿಬಲಿ– ಕೋಳಿ, ಕುರಿ, ಆಡು, ಹಂದಿ, ಕೋಣ

೨. ರಕ್ತರಹಿತ ಬಲಿ– ಕುಂಬಳಕಾಯಿ, ತೆಂಗಿನಕಾಯಿ, ಹೊಂಬಾಳೆ, ನಿಂಬೆಕಾಯಿ

ರಕ್ತ ಸಹಿತ ಬಲಿಗಳು

ಬಲಿಯ ಮೂಲಕ ಚಿಮ್ಮಲ್ಪಡುವ ರಕ್ತ ದೈವಕ್ಕೆ ಸಂತೃಪ್ತಿಯನ್ನು ನೀಡಿ ಆ ಮೂಲಕ ಮನುಷ್ಯನ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತದೆ ಎಂಬ ನಂಬಿಕೆಯಿಂದ ಈ ಬಲಿ ಕ್ರಿಯೆ ನಡೆಯುತ್ತದೆ. ಇಲ್ಲಿ ಮುಖ್ಯವಾಗಿ ನರಬಲಿ ಮತ್ತು ಪ್ರಾಣಿಬಲಿಯನ್ನು ಗಮನಿಸಬಹುದು.

ನರಬಲಿ: ಸಮುದಾಯದ ಒಳಿತಿಗಾಗಿ ಹಿಂದೆ ನರಬಲಿಯನ್ನು ನೀಡಲಾಗುತ್ತಿತ್ತು. ನಮ್ಮ ಜನಪದ ಲಾವಣಿಯಾದ ಕೆರೆಗೆ ಹಾರ ಇದಕ್ಕೆ ಉತ್ತಮ ನಿದರ್ಶನ ಕೆರೆಗೆ ಹಾರ ಲಾವಣಿಯಲ್ಲಿ ಇಂತಹ ಒಂದು ನರಬಲಿ ನಡೆದ ಉಲ್ಲೇಖವಿದೆ. ಕಲ್ಲನಕೆರೆ ಮಲ್ಲನಗೌಡ ಕಟ್ಟಿದ ಕೆರೆಯಲ್ಲಿ ನೀರಿಲ್ಲದ ಕಾರಣ ಮನೆಯ ಸೊಸೆಯನ್ನು ಬಲಿ ಕೊಡಬೇಕೆಂದು ಜೋಯಿಸರ ಮಾತಿಗೆ ಕಿರಿಯ ಸೊಸೆ ಭಾಗೀರಥಿಯನ್ನು ಕೆರೆಗೆ ಬಲಿಕೊಡಬೇಕು ಎಂದು ನಿರ್ಧರಿಸಲಾಗುತ್ತದೆ. ಅದೇ ರೀತಿ ಆಕೆಯನ್ನು ಈ ಕೆರೆಗೆ ಬಲಿಕೊಡಲಾಗುತ್ತದೆ ಆಕೆಯ ಬಲಿಯಿಂದಾಗಿ ಆ ಕೆರೆ ತುಂಬಿತು ಎನ್ನುವಲ್ಲಿ ಈ ಲಾವಣಿ ಬಲಿಪದ್ಧತಿಯನ್ನು ಸಮರ್ಥಿಸಿದಂತೆ ಕಂಡುಬರುತ್ತದೆ.

ಅದೇ ರೀತಿ ಜನ್ನನ ಯಶೋಧರನ ಚರಿತೆ ಕಾವ್ಯದಲ್ಲೂ ನರಬಲಿ ಕೊಡುವ ಸಂದರ್ಭದ ಉಲ್ಲೇಖವಿದೆ. ಮಾರಿದತ್ತನ ರಾಜ್ಯದಲ್ಲಿ ಪ್ರತಿ ಅಶ್ವಯುಜಗಳಲ್ಲಿ ನಡೆಯುವ ಜಾತ್ರೆಯಲ್ಲಿ ಪ್ರಾಣಿಬಲಿಗಳನ್ನು, ನರಬಲಿಗಳನ್ನು ಕೊಡಲಾಗುತ್ತದೆ. ಇಂತಹ ಒಂದು ಸಂದರ್ಭದಲ್ಲಿ ಚಂಡಕರ್ಮ ಎನ್ನುವ ನರಬಲಿಗಾಗಿ ಅಭಯಮತಿ ಮತ್ತು ಅಭಯರುಚಿ ಎನ್ನುವ ಅಣ್ಣ

ತಂಗಿಯರನ್ನು ಬಲಿ ಕೊಡಲು ಕರೆದೊಯ್ಯುವ ಸನ್ನಿವೇಶದ ಚಿತ್ರಣವಿದೆ. ಅದೇ ಸಂದರ್ಭದಲ್ಲಿ ಕವಿ ನೀಡುವ ಇಡೀ ಮಾರಿಗುಡಿಯ ಚಿತ್ರಣ ನರಬಲಿಯ ಭೀಕರತೆಯನ್ನು ವಿವರಿಸುತ್ತದೆ. ಮನುಷ್ಯ ಮುಂದೆ ನಾಗರಿಕನಾಗುತ್ತಾ ಬಂದಂತೆ ನರಬಲಿ ಕ್ರಮೇಣವಾಗಿ ಕಡಿಮೆ ಆದದ್ದನ್ನು ಗಮನಿಸಬಹುದು. ಆದರೆ ಉತ್ತರ ಭಾರತದ ಕಡೆಗಳಲ್ಲಿ ಇಂದಿಗೂ ನರಬಲಿ ನಡೆಯುತ್ತಿರುವುದನ್ನು ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆಯೇ ಹೊರತು ಇಂದು ಬಹುಪಾಲು ನರಬಲಿ ಆಚರಣೆ ಇಲ್ಲ. ಮೊದಲು ಧಾರ್ಮಿಕ ಆಚರಣೆಯ ಭಾಗವಾಗಿ ನಡೆಯುತ್ತಿದ್ದ ನರಬಲಿಗಳು ಇಂದು ಮನುಷ್ಯನ ಮೂಢನಂಬಿಕೆ ಅಜ್ಞಾನದಿಂದ ನಡೆಯುತ್ತದೆ. ನಿಧಿಯ ಆಸೆಗಾಗಿ ಮಕ್ಕಳನ್ನು, ಗರ್ಭಿಣಿ ಸ್ತ್ರೀಯರನ್ನು ಬಲಿ ಕೊಡುವ ಸಂಖ್ಯೆ ಹೆಚ್ಚಾಗಿರುವುದನ್ನು ಕಾಣಬಹುದು. ಹಲವಾರು ಸಿನಿಮಾಗಳಲ್ಲಿ ಕೂಡ ನರಬಲಿಗೆ ಸಂಬಂಧಪಟ್ಟ ಸನ್ನಿವೇಶಗಳನ್ನು ಪದೇ ಪದೇ ತೋರಿಸುವುದರಿಂದ ಮನುಷ್ಯನ ಮೇಲೆ ಪರಿಣಾಮ ಬೀರಿ ಆತ ಇಂತಹ ಕೃತ್ಯಕ್ಕೆ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ. ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ದಿನಾಂಕ ೧೭.೦೩.೧೬ರಂದು ಅರೆಬೆತ್ತಲೆ ಸೇವೆ ಎಂಬ ಆಚರಣೆ ನಡೆದಿರುವ ಬಗ್ಗೆ ಮಾಹಿತಿ ಸಿಗುತ್ತದೆ. ಇಲ್ಲಿ ಪ್ರಧಾನವಾಗಿ ದಾವಣಗೆರೆ ಗ್ರಾಮಕ್ಕೆ ಸಂಬಂಧಪಟ್ಟಂತೆ ದುರ್ಗಾಂಬಿಕಾ ದೇವಿಯ ಜಾತ್ರೆ ನಡೆಯುತ್ತದೆ. "ನಗರದೇವತೆ ದುರ್ಗಾಂಬಿಕಾ ದೇವಿಯ ಜಾತ್ರೆಯ ಅಂಗವಾಗಿ ನಡೆಯುವ ಪ್ರಾಣಿಬಲಿಯನ್ನು ದೇವಸ್ಥಾನದ ಆವರಣದಲ್ಲಿ ತಡೆಯಲು ಜಿಲ್ಲಾಡಳಿತ ಬುಧವಾರ ಯಶಸ್ವಿಯಾದರೂ ದೂರದಲ್ಲಿ ಕೋಣ ಸೇರಿದಂತೆ ಸಾವಿರಾರು ಸಂಖ್ಯೆಯ ಕುರಿಬಲಿ ನೀಡಲಾಯಿತು. ಜೊತೆಗೆ ಮಹಿಳೆಯರ ಅರೆಬೆತ್ತಲೆ ಬೇವಿನುಡಿಗೆ ಸೇವೆ ನಿರಾತಂಕವಾಗಿ ನಡೆಯಿತು. ಈ ಮಧ್ಯೆ ಜಾತ್ರೆಗೂ ವಾರದ ಮೊದಲೇ ಜಿಲ್ಲಾಡಳಿತ ಸುಪರ್ದಿಗೆ ನೀಡಲಾಗಿದ್ದ ಕೋಣವೊಂದರ ರಕ್ತವನ್ನು ಡಿಸಿ ನೇತೃತ್ವದಲ್ಲಿ ಸಿರಿಂಜ್ ಮೂಲಕ ತೆಗೆದು ದೇವಸ್ಥಾನ ಸಮಿತಿಯವರಿಗೆ ನೀಡಿ ದೇವಿಗೆ ಪೂಜೆ ಸಲ್ಲಿಸಲಾಯಿತು. ಜಾತ್ರೆಗೆ ಸಂಬಂಧಿಸಿದಂತೆ ಕೆ.ಟಿ.ಜೆ. ನಗರ, ನಿಟುವಳ್ಳಿ, ಸರಸ್ವತಿ ನಗರ, ವಿನೋಬನಗರ, ಗಾಂಧಿನಗರ, ಕೊರಚರಹಟ್ಟಿ, ಎಚ್.ಕೆ.ಆರ್ ವೃತ್ತ ಸೇರಿದಂತೆ ವಿವಿಧ ಬಡಾವಣೆಗಳಿಂದ ಬೇವಿನುಡಿಗೆ ತೊಟ್ಟ ಭಕ್ತರು ಉಧೋ-ಉಧೋ ಎಂದು ಕೂಗುತ್ತಾ ದೇವಸ್ಥಾನದ ಆವರಣದಲ್ಲಿ ಉರುಳುಸೇವೆ, ದೀಡು ನಮಸ್ಕಾರ ಹಾಕಿದರು. ಇನ್ನು ಕೆಲವರು ಅರೆಬೆತ್ತಲೆ ಬೇವಿನುಡಿಗೆ ಸೇವೆ ಸಲ್ಲಿಸಿದರು. ರಾತ್ರಿಯಿಡೀ ಈ ಸೇವೆಗಳು ನಡೆದವು. ಸ್ಥಳದಲ್ಲಿದ್ದ ಪೊಲೀಸರು ಮೂಕಪ್ರೇಕ್ಷಕರಾಗಿದ್ದರು. ದೇವರ ಹೆಸರಿನಲ್ಲಿ ಭಕ್ತರ ಮನೆಯ ಎದುರು ಸಾವಿರಾರು ಸಂಖ್ಯೆಯಲ್ಲಿ ಕುರಿಬಲಿ ನೀಡಲಾಯಿತು. ನಗರದ ವಿವಿಧ ರಸ್ತೆಗಳ ಚರಂಡಿಗಳು ಪ್ರಾಣಿಗಳ ರಕ್ತದಿಂದ ಆವೃತ್ತವಾಗಿದ್ದವು. ಬುಧವಾರ ಮಧ್ಯಾಹ್ನದ ವೇಳೆಗೆ ಭರ್ಜರಿ ಬಾಡೂಟವೂ ನಡೆಯಿತು. ವಿವಿಧ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ

ಭಕ್ತರು ಜಾತ್ರೆಗೆ ಆಗಮಿಸಿದ್ದ ಪರಿಣಾಮ ನಗರವಿಡೀ ಗಿಜಿಗುಡುತ್ತಿತ್ತು" ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ಮಾಹಿತಿ ಲಭ್ಯವಾಗುತ್ತದೆ.[೩೫] ಪ್ರಾದೇಶಿಕ ಆಚರಣೆಯ ಮಹತ್ವವನ್ನು ಇದರಲ್ಲಿ ಗುರುತಿಸಬಹುದಾದರೂ ಗ್ರಾಮದೇವತೆಯ ಮೇಲೆ ಇಟ್ಟಿರುವ ಮಮತೆ, ಪ್ರೀತಿ ವಾತ್ಸಲ್ಯಗಳೇ ಇದಕ್ಕೆ ಕಾರಣವಾಗುತ್ತದೆ.

ಧಾರ್ಮಿಕ ಆಚರಣೆ ಅಂಗವಾಗಿ ನಡೆಯುವ ಬಲಿಯ ಮತ್ತೊಂದು ರೂಪವೆಂದರೆ ಪ್ರಾಣಿಬಲಿ. ಹಿಂದೆ ನಡೆಯುತ್ತಿದ್ದ ನರಬಲಿಯ ಬದಲಾಗಿ ಇಂದು ಪ್ರಾಣಿಗಳನ್ನು ಬಲಿಕೊಡಲಾಗುತ್ತದೆ. ಕೋಳಿ, ಕುರಿ, ಆಡು, ಕೋಣ, ಹಂದಿ, ಮುಂತಾದ ಪ್ರಾಣಿಗಳನ್ನು ಬಲಿಯ ಸಂದರ್ಭದಲ್ಲಿ ಬಳಸುತ್ತಾರೆ. ಇವುಗಳನ್ನು ಬಲಿ ಕೊಡುವುದರ ಮೂಲಕ ತಾವು ನಂಬಿಕೊಂಡು ಬಂದ ದೇವತೆಗಳು ತೃಪ್ತಿಪಡುತ್ತಾರೆಂಬ ಆ ಮೂಲಕ ಸಮುದಾಯದ ಆರೋಗ್ಯದ ರಕ್ಷಣೆಯಾಗುತ್ತದೆಂದು ಭಾವಿಸುತ್ತಾರೆ. ಹೆಚ್ಚಾಗಿ ಮಾರಿರೋಗಗಳು ದೂರವಾಗುತ್ತವೆಂಬ ಜನರ ನಂಬಿಕೆ.

ಈ ಹಿಂದೆ ಮಾರಿರೋಗಗಳೆಂದು ಕರೆಯಲ್ಪಡುತ್ತಿದ್ದ ಸಿಡುಬು, ಕಾಲರಾ, ಪ್ಲೇಗು, ಮುಂತಾದ ರೋಗಗಳು ಸಾಮಾನ್ಯವಾಗಿದ್ದರೂ ಇವು ಮಾರಿದೇವತೆಯ ಕೋಪದಿಂದ ಉಂಟಾಗುತ್ತದೆಂದು ನಂಬಿದ ಜನರು ಆಕೆಗೆ ಪ್ರಾಣಿಯನ್ನು ಬಲಿ ಕೊಟ್ಟು ಈ ರೀತಿಯ ರೋಗಗಳಿಂದ ಪಾರಾಗಬಹುದೆಂದು ನಂಬಿದ್ದರು. ಈ ರೀತಿಯ ನಂಬಿಕೆಯು ಪ್ರಾಣಿಬಲಿಯನ್ನು ಹೆಚ್ಚಾಗಿ ಪ್ರೇರೇಪಿಸುತ್ತದೆ. ಶಿರಸಿ ಜಾತ್ರೆಯಲ್ಲಿ ಕೋಣವನ್ನು ಬಲಿ ಕೊಡುವ ಪದ್ಧತಿ ತೀರ ಇತ್ತೀಚಿನವರೆಗೂ ಇತ್ತು. ಇಂದು ಸರಕಾರ ಇದನ್ನು ನಿಷೇಧಿಸಿದೆ. ಆದರೂ ಕೆಲವು ಕಡೆ ಸರ್ಕಾರದ ನಿಷೇಧವಿದ್ದಾಗಲೂ ಪ್ರಾಣಿಬಲಿಯ ಆಚರಣೆಗಳು ನಿರಂತರವಾಗಿ ನಡೆಯುವುದನ್ನು ಕಾಣಬಹುದು. ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಶಿರಸಿ ಮಾರಿಗುಡಿಯ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ದಿನಾಂಕ ೧೨.೦೩.೨೦೧೬ರಂದು ನಡೆದ ಮಾರಿಜಾತ್ರೆಯ ಮಹತ್ವವನ್ನು ತಿಳಿಸುವ ಲೇಖನ ಇದೆ. "ಲಕ್ಷಾಂತರ ಭಕ್ತ ಸಮೂಹದ ಜೈಕಾರ, ಭಕ್ತಿಯ ಪರಾಕಾಷ್ಠೆಯ ನಡುವೆ ತ್ರಿಶಕ್ತಿ ಸ್ವರೂಪಿಣಿ, ಮಲೆನಾಡಿನ ನಾಡದೇವಿ ಮಾರಿಕಾಂಬೆಯ ರಥೋತ್ಸವ ಬುಧವಾರ ಇಲ್ಲಿ ವಿಜೃಂಭಣೆಯಿಂದ ನಡೆಯಿತು. ಬೆಳಕು ಹರಿಯುವ ಮುನ್ನವೇ ಭಕ್ತರು ದೇವಾಲಯದ ಎದುರು ಕಾತುರದಿಂದ ಕಾಯುತ್ತಿದ್ದಾಗ ಮಾರಿಕಾಂಬೆ ಸರ್ವಾಲಂಕಾರ ಭೂಷಿತೆಯಾಗಿ ರಥಾರೂಢಳಾದಳು. ರಥದ ಎದುರು ನೂರಾರು ಮಹಿಳೆಯರು, ಪುರುಷರು 'ಅಮ್ಮ'ನನ್ನು ಮೈಮೇಲೆ ಆವಾಹನೆ ಮಾಡಿಕೊಂಡು ಹರಕೆ ತೀರಿಸಿದರು. ರಥ ಮುಂದಕ್ಕೆ ಸಾಗುತ್ತಿರುವಾಗ ಭಕ್ತರು ಬಾಳೆಹಣ್ಣು, ದುಡ್ಡು, ಕೋಳಿ ಎಸೆದು ಕೃತಾರ್ಥರಾದರು. ಸಿರಸಿ ಜಾತ್ರೆಗೆ ಬೇರೆ ಬೇರೆ ಪ್ರದೇಶಗಳಿಂದ ಬಂದಿದ್ದ ದುರಗ-ಮುರಗಿ ತಂಡದವರು ಚಾವಟಿ ಮೈಮೇಲೆ

ಹೊಡೆದುಕೊಂಡು ಸೇವೆ ಸಲ್ಲಿಸಿದರು. ಲಂಬಾಣಿ ಮಹಿಳೆಯರು ಮೆರವಣಿಗೆಯ ಉದ್ದಕ್ಕೂ ಸೋಬಾನೆ ಪದ ಹಾಡಿದರು. ಮಾದಿಗ ಯುವಕನಿಂದ ಮೋಸಹೋದ ಬ್ರಾಹ್ಮಣ ಕನ್ಯೆ ಸತ್ಯ ಅರಿತಾಗ ಆತನ ವಧೆ ಮಾಡಿ ಸತಿ ಸಹಗಮನ ಮಾಡಿಕೊಂಡ ಕಥಾ ಭೂಮಿಕೆಯಲ್ಲಿ ನಡೆಯುವ ಜಾನಪದೀಯ ಆಚರಣೆಯಲ್ಲಿ ದೇವಿಯು, ದೇವಾಲಯದಿಂದ ಹೊರಡುವ ಪೂರ್ವದಲ್ಲಿ ಭೂತರಾಯನ ಎದುರು ಕುಂಬಳಕಾಯಿ ಸಾತ್ವಿಕ ಬಲಿ ನೀಡಲಾಯಿತು. ಕಹಳೆ, ಡೊಳ್ಳುವಾದ್ಯಗಳೊಂದಿಗೆ ಶೋಭಾಯಾತ್ರೆಯಲ್ಲಿ ಬಂದ ದೇವಿಯನ್ನು ಬಿಡಕಿಬೈಲಿನಲ್ಲಿ ಜಾತ್ರಾ ಗದ್ದುಗೆಯಲ್ಲಿ ಪ್ರತಿಷ್ಠಾಪಿಸಲಾಗಿದೆ."[೩೬] ಗುರುವಾಗ ಬೆಳಿಗ್ಗೆ ೬ ಗಂಟೆಯಿಂದ ದೇವಿಗೆ ಹಣ್ಣು ಕಾಯಿ ತುಲಾಭಾರ, ಉಡಿ, ಬೇವಿನ ಉಡುಗೆ ಸೇವೆಗಳು ಪ್ರಾರಂಭವಾಗಲಿವೆ. ಎಂಟು ದಿನಗಳ ಕಾಲ ಗದ್ದುಗೆಯಲ್ಲಿ ವಿರಾಜಮಾನಳಾಗುವ ದೇವಿ ಇದೇ ಮರುವಾರ ಅಟ್ಟಲಿಯಲ್ಲಿ ಮರಳುವ ಮೂಲಕ ಯಾತ್ರೆ ಅಂತ್ಯಗೊಳ್ಳಲಿದೆ. ಹಾವೇರಿ, ಹಾನಗಲ್, ಹುಬ್ಬಳ್ಳಿ, ಸಾಗರ, ಕುಂದಾಪುರ, ಕೇರಳ, ಆಂಧ್ರಪ್ರದೇಶಗಳಿಂದಲೂ ಜನರು ಆಗಮಿಸಿದರು, ಅದಲ್ಲದೇ ಮಹಾರಾಷ್ಟ್ರ, ಗೋವಾದಿಂದ ಕೂಡ ಭಕ್ತರು ಆಗಮಿಸಿದರು. ಈ ರೀತಿಯ ವಿಚಾರಗಳನ್ನು ತೌಲನಿಕವಾಗಿ ವಿಮರ್ಶೆ ಮಾಡಬಹುದಾಗಿದೆ. ಇಲ್ಲಿ ಪ್ರಧಾನವಾಗಿ ಮಾರಿಯಮ್ಮನ ಗಂಡನಾಗಿ ಮಾದಿಗ ಬರುತ್ತಾನೆ. ಮಾದಿಗ ಸಮುದಾಯದಿಂದ ನೊಂದಿರುವ ಬ್ರಾಹ್ಮಣ ಮಹಿಳೆ ರುದ್ರಸ್ವರೂಪವನ್ನು ತಾಳಿ ಕೋಣ, ಕುರಿ ರೂಪದಲ್ಲಿ ಆಹುತಿ ತೆಗೆದುಕೊಳ್ಳುವುದನ್ನು ಕಾಣಬಹುದು. ಶಿರಸಿ ಅಲ್ಲದೇ ಕರ್ನಾಟಕಾದ್ಯಂತ ಅಂತರ್ಜಾತಿ ವಿವಾಹ ಮಾಡಿಕೊಂಡಿರುವ ಕಟ್ಟುಕತೆಗಳು ಮಾರಿಯಮ್ಮನಿಗೆ ಸಿಗುತ್ತವೆ.

ಗಂಡನನ್ನೆ ಕೋಣನ ರೂಪದಲ್ಲಿ ಬಲಿ ಪಡೆಯುವ ಪದ್ಧತಿಯಲ್ಲಿ ತಾರ್ತಿಕ ಅಂಶಗಳು ಸಿಗುತ್ತವೆ. ಮನುಷ್ಯನನ್ನು ದೇವತೆಗೆ ಅರ್ಪಿಸುತ್ತಿದ್ದ ಸಂದರ್ಭಗಳು ಪಲ್ಲಟವಾಗಿ ರಕ್ತ ಬಲಿಯ ಅನಂತರ ಕೆಲವು ವಸ್ತುಗಳ ಅರ್ಪಿಸುವಿಕೆಗೆ ವರ್ಗಾಯಿಸುತ್ತಿದ್ದನ್ನು ಕಾಣುತ್ತೇವೆ. ಧಾರ್ಮಿಕ ಆಚರಣೆಯ ಅಂಗವಾಗಿ ನಡೆಯುವ ಮುಡಿಯೊಪ್ಪಿಸುವುದು, ತುಲಾಭಾರ, ಮುಂತಾದ ಆಚರಣೆಗಳು ತಲೆಯ ಬದಲಿಗೆ ಮುಡಿ, ದೇಹದ ಬದಲಿಗೆ ಅಷ್ಟೇ ತೂಕದ ದವಸ ಧಾನ್ಯ ಹಣ ಇತ್ಯಾದಿ ವಸ್ತುಗಳ ಅರ್ಪಣೆ ಮಾಡುವುದನ್ನು ಗುರುತಿಸಬಹುದು. ಮನುಷ್ಯ ಬಲಿಗೆ ಬದಲಾಗಿ ಹುಟ್ಟಿಕೊಂಡ ಆಚರಣೆಗಳಾಗಿವೆ. ಪ್ರಾಣಿಬಲಿಗೆ ಬದಲಾಗಿ ಸಸ್ಯ ಪದಾರ್ಥಗಳಾದ ಬೂದುಕುಂಬಳಕಾಯಿ ಬಳಸಲಾಗುತ್ತದೆ. ರಕ್ತಕ್ಕೆ ಬದಲಾಗಿ ಓಕುಳಿ(ಕೆಂಪು) ನೀರನ್ನು ಚೆಲ್ಲುವ ಮೂಲಕ ಸಾಂಕೇತಿಕವಾಗಿ ಬಲಿಯನ್ನು ನೆರವೇರಿಸಲಾಗುತ್ತದೆ. ತೆಂಗಿನಕಾಯಿ, ನಿಂಬೆಹಣ್ಣು ಕೂಡ ಬಲಿಗಾಗಿ ಬಳಸಲಾಗುತ್ತದೆ. ಒಟ್ಟಿನಲ್ಲಿ ಧಾರ್ಮಿಕ ಆಚರಣೆಯ ಅಂಗವಾಗಿ ಬಂದಿರುವಂತಹ ಬಲಿಪದ್ಧತಿಗಳೂ ಇಂದು ಬಹಳಷ್ಟು ಕಡಿಮೆಯಾಗಿದೆ. ವೈಜ್ಞಾನಿಕ

ಆವಿಷ್ಕಾರಗಳು ಹೆಚ್ಚಾದಂತೆ ಯಾವುದೇ ಕಾಯಿಲೆಗಳ ಭಯವಿಲ್ಲ. ವೈದ್ಯಕೀಯ ಸಂಶೋಧನೆಗಳು ಸಾಕಷ್ಟು ಪ್ರಗತಿ ಸಾಧಿಸಿವೆ. ಜನರಲ್ಲಿ ಹಿಂದಿಗಿಂತ ಇಂದು ಹೆಚ್ಚಿನ ವೈಚಾರಿಕತೆ ಬೆಳೆದು ಬಂದಿದೆ. ಮೂಢನಂಬಿಕೆಗಳು ಸಾಕಷ್ಟು ಕಡಿಮೆಯಾಗಿವೆ. ಆದರೂ ಕೂಡ ನಂಬಿಕೆಯ ಒಂದು ಭಾಗವಾಗಿ ನಮ್ಮಲ್ಲಿ ಬಲಿ ಪದ್ಧತಿಗಳು ಇಂದಿಗೂ ಆಚರಣೆಯಲ್ಲಿವೆ.

೨.೪. ಜನಪದ ಮತ್ತು ಶಿಷ್ಟಸಾಹಿತ್ಯದಲ್ಲಿ ಬಲಿಪದ್ಧತಿ

ಜನಪದವನ್ನು ನಾವು ಹಳೆಯದು ಹೊಸದು ಎಂಬ ಆಧಾರದ ಮೇಲೆ ನಿರ್ಧರಿಸುವುದು ಸರಿಯಲ್ಲ. ಈ ಪದ್ಧತಿಯನ್ನು ಒಬ್ಬ ವ್ಯಕ್ತಿ ಮಾಡುವ ಕೆಲಸಕ್ಕಾಗಲಿ ಅಥವಾ ನಿರ್ದಿಷ್ಟ ಕಾಲಕ್ಕಾಗಲಿ ಬಂಧಿಸಿ ಅದನ್ನು ನಿರೂಪಿಸಲು ಸಾಧ್ಯವಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲಿ ಭಾಷೆ ಒಂದು ಪರಿಮಿತ ಮಾಧ್ಯಮವಾಗಿದೆ. ಜಾನಪದದಲ್ಲಿ ಕೂಡ ಭಾಷೆಗೆ ಮೊದಲು ಪ್ರಾಮುಖ್ಯತೆ ಇದೆ. ಜಾನಪದಲ್ಲಿ ಪ್ರಾಣಿಗಳನ್ನು ಬಲಿ ಕೊಡುವುದು ಮಾತ್ರವಲ್ಲದೇ ಪ್ರಾಣಿಗಳಿಗೂ ಮನುಷ್ಯರಿಗೆ ಅತಿ ಹತ್ತಿರದ ಸಂಬಂಧವಿದೆ ಎನ್ನಬಹುದು. ಏಕೆಂದರೆ ಅಂದಿನ ಕಾಲದಲ್ಲಿ ಜನಪದರು ತಮ್ಮ ಮನೆಗಳಲ್ಲಿ ಸಾಕುಪ್ರಾಣಿಗಳಾದ ನಾಯಿ, ಕೋಳಿ, ಕುರಿ, ಹಂದಿ, ಕೋಣ ಇತ್ಯಾದಿ ಪ್ರಾಣಿಗಳನ್ನು ಸಾಕುತ್ತಿದ್ದರು, ಅಲ್ಲದೇ ಅವುಗಳ ಜೊತೆ ಅನ್ಯೋನ್ಯ ಸಂಬಂಧವನ್ನು ಇರಿಸಿಕೊಂಡಿದ್ದರು. ಈ ಕಾರಣದಿಂದಲೇ ಪ್ರಾಣಿ ಜನಪದ ಹುಟ್ಟಿಕೊಂಡಿದೆ. ಪ್ರಾಣಿ ಮತ್ತು ಮಾನವ ಸಂಬಂಧ ಅತಿ ಪ್ರಾಚೀನವಾದುದು.

ಮತೀಯ ಮತ್ತು ಧಾರ್ಮಿಕ ಜನಪದಗಳ ಪ್ರಾಣಿ ಮಾನವ ಸಂಬಂಧವನ್ನು ವೃತ್ತಿ ಜನಪದಗಳ ಪ್ರಾಣಿ ಮಾನವ ಸಂಬಂಧವನ್ನು ಸ್ಪಷ್ಟವಾಗಿ ಗುರುತಿಸಬಹುದು. ಭಿನ್ನ ಗುಣಸ್ವಭಾವಗಳು ನಮಗೆ ಕಾಣುತ್ತವೆ. ಕಾಗೆಯನ್ನು ಕಂಡರೆ ಶನಿದೇವರ ವಾಹನವೆಂದು ಧಾರ್ಮಿಕವಾಗಿ ಜನಪದರು ಕೈಮುಗಿಯುತ್ತಾರೆ. ಆದರೆ ವೃತ್ತಿ ಜನಪದರಿಗೆ ಇದೇ ರೀತಿಯ ಭಕ್ತಿ ಇದ್ದರೂ ಅವರಿಗೆ ಗರುಡ ಕೋಳಿ ಮರಿಗಳನ್ನು ಕದಿಯುವ ಕಳ್ಳ ಎಂಬ ಭಾವನೆ ಇರುತ್ತದೆ. ವೃತ್ತಿ ಜನಪದಗಳಲ್ಲಿ ಪ್ರತಿ ಪ್ರಾಣಿಯ ಬಗ್ಗೆ ಬೇರೆ ಬೇರೆಯಾದ ಅಭಿಪ್ರಾಯವಿದೆ.

ಶಿಷ್ಟ ಸಾಹಿತ್ಯದಲ್ಲಿ ಪ್ರಾಣಿಗಳು ಅವುಗಳ ವ್ಯಕ್ತಿತ್ವ ಆಚರಣೆ ನಿರೂಪಿತ ಮತ್ತು ಸೀಮಿತ. ಇಂತಹ ಪ್ರಾಣಿ ಇಂತಹ ಕೆಲಸಗಳನ್ನು ಮಾಡಬೇಕು. ಗರುಡ ವಿಷ್ಣುವಿಗೆ ವಾಹನ, ವೃಷಭ ಶಿವನ ವಾಹನ, ನವಿಲು ಸುಬ್ರಹ್ಮಣ್ಯನಿಗೆ ವಾಹನ ಎಂಬ ಪರಿಕಲ್ಪನೆ ಇದೆ. ಈ ಪ್ರಾಣಿಗಳು ಮನುಷ್ಯರಿಗೆ ದೇವರಷ್ಟೆ ಭಕ್ತಿಗೆ ಅರ್ಹವಾದುವು. ಅಲ್ಲದೇ ಇಂಥ ಪ್ರಾಣಿ ಮುಖದ ದೇವತೆಗಳೂ ಉಂಟು. ಶಿಷ್ಟಸಾಹಿತ್ಯಲ್ಲಿ ಈ ಪ್ರಾಣಿ ದೇವತೆಗಳನ್ನು ಪೂಜಿಸಿದರೆ ಪುಣ್ಯ ಲಭಿಸುತ್ತದೆ. ಸ್ವರ್ಗ ಮತ್ತು ಮನುಷ್ಯ ಜನ್ಮದಿಂದ ಮುಕ್ತಿ ದೊರೆಯುತ್ತದೆ ಎಂಬ ನಂಬಿಕೆಯು ಇದೆ. ಅಲ್ಲದೇ ಈ ಪ್ರಾಣಿಗಳ ಸಂಬಂಧಪಟ್ಟ ದೇವತೆಗಳ ಜೊತೆಯಲ್ಲಿ ಕೆಲವು ಅನಿವಾರ್ಯ ಕಾರ್ಯಾರ್ಥವಾಗಿ

ಬರುತ್ತವೆ ಎಂಬ ನಂಬಿಕೆಯೂ ಈ ಜನರಲ್ಲಿ ಇದೆ. ಅಂದರೆ ಶಿಷ್ಟ ಜನಪದರಲ್ಲಿ ಪ್ರಾಣಿಗಳ ಕಾರ್ಯಕಲಾಪಗಳೇ ಏನೆಂಬುದು ಗುರುತಿಸಬಹುದು.

ನಾವು ಜನಪದರಲ್ಲಿ ಪ್ರಾಣಿಗಳನ್ನು ದೇವರಿಗೆ ಬಲಿ ಕೊಟ್ಟರೆ ಈ ಶಿಷ್ಟ ಜನಪದಲ್ಲಿ ಮೊದಲನೆಯ ಪೂಜೆ ಪ್ರೌಢ ಧರ್ಮ ಮತ್ತು ಪುರಾಣದಲ್ಲಿ ಪ್ರಾಣಿಗಳಿಗೆ ಸಂಬಂಧಿಸಿದ್ದು. ಗರುಡನ ಪೂಜೆ ಮತ್ತು ಗರುಡೋತ್ಸವ ಆಚರಣೆ ಹೇಗಿದೆ ಎಂದರೆ, ಇಲ್ಲಿ ಗರುಡ ಒಂದು ಶಿಷ್ಟದೇವತೆಯ ವಾಹನವಾಗಿ ಶಿಷ್ಟಸಂಸ್ಕೃತ ಉದ್ಧಾರಕ್ಕಾಗಿ ಸಹಕರಿಸಿದ ಪ್ರಾಣಿ. ಇದರ ಪೂಜೆಯನ್ನು ಕೂಡ ಜನರು ಶಿಷ್ಟ ನಡವಳಿಕೆಯಂತೆ ನಯ ವಿನಯದಿಂದಲೇ ಪೂಜೆ ಮಾಡುತ್ತಾರೆ. ಇಲ್ಲಿ ಪ್ರಾಣಿಬಲಿಯ ಬದಲು ಅನ್ನದ ಉಳಿವಿಗಾಗಿ ಪೂಜೆ ಮಾಡುವುದು ಗುರುತಿಸಬಹುದು. ಇದು ಪ್ರಾಣಿ ಬದಲಿಗೆ ಪೂರಕವಾಗಿ ಒಂದು ಸೌಮ್ಯ ಪರ್ಯಾಯ ವಾಗಿರುವುದು ಗಮನಿಸುತ್ತೇವೆ. ಬೇರೆ ವಿಧಾನ ಎಂದರೆ ವರ್ಷದಪೂಜೆ ಮತ್ತು ಬಲಿ ವಿಧಾನ ರೋಚಕವಾದುದು. ಪ್ರಾಣಿಯೊಂದನ್ನು ಪೂರ್ವಜನ ಆತ್ಮರಕ್ಷಕ, ಕುಲದೇವತೆ, ಮುಂತಾದ ಅನೇಕ ಕಲ್ಪನೆಗಳ ಆಧಾರದ ಮೇಲೆ ಪೂಜಿಸಲಾಗುತ್ತದೆ. ಹುಲಿ, ಕರಡಿ, ಟಗರು, ಮೊಸಳೆ, ಎಮ್ಮೆ, ಹಂದಿ, ಕೋಣ, ಹಾವು, ಮುಂತಾದ ಕ್ರೂರ ಮತ್ತು ಸಾಕು ಪ್ರಾಣಿಗಳಲ್ಲ ಪೂಜೆಗೆ ಅರ್ಹವಾದದ್ದು. ಭಯಮಿಶ್ರಿತವಾವ ಭಕ್ತಿಯೇ ಇವುಗಳ ಪೂಜೆಗೆ ಕಾರಣ ಪ್ರಕೃತಿ ವಿಕೋಪವಾದಾಗ, ಅದನ್ನು ಹೋಗಲಾಡಿಸುವ ಶಕ್ತಿ ಇವುಗಳಿಗೆ ಇದೆ ಎಂದು ಜನರು ನಂಬುತ್ತಾರೆ. ತಾವು ನಂಬಿದ ತಮ್ಮ ರಕ್ಷಕಪ್ರಾಣಿಗಳು ಇವಾಗಿವೆ ಎಂದು ಜನರು ನಂಬುತ್ತಿದ್ದರು. ಅದಕ್ಕೋಸ್ಕರ ಈ ಪ್ರಾಣಿಗಳನ್ನು ಸಂತೃಪ್ತಿಪಡಿಸಲು ಪೂಜೆ ಮತ್ತು ಬಲಿಯನ್ನು ನಡೆಸಲಾಗುತ್ತದೆ. ಮೊದಲನೇ ಪೂಜೆಯ ಉದ್ದೇಶದಲ್ಲಿ ಸ್ವರ್ಗ, ಮುಕ್ತಿ, ಪುನರ್ಜನ್ಮದ ಬೇಡಿಕೆಗಳಿರುತ್ತವೆ. ಎರಡನೇ ಪೂಜೆಯ ಉದ್ದೇಶ ಕೇವಲ ತಾತ್ಕಾಲಿಕವಾಗಿ ಭೂಮಿಯ ಮೇಲೆ ಬದುಕಲು ಯೋಗ್ಯವಾದ ವಾತಾವರಣವನ್ನು ನಿರ್ಮಿಸಿಕೊಳ್ಳುವುದಾಗಿರುತ್ತದೆ. ಪೂಜೆಯ ಉದ್ದೇಶದಲ್ಲಿ ಪ್ರಾಣಿಯನ್ನು ಬಲಿ ಕೊಡುವ ಪದ್ಧತಿ ಉಂಟು. ಈ ಪ್ರಾಣಿಯ ಪೂಜೆ ಮಾಡುವ ಪ್ರಾಣಿಯ ಜಾತಿಯದೇ ಆಗಬಹುದು ಇಲ್ಲವೇ ಬೇರೊಂದು ವರ್ಗದ ಪ್ರಾಣಿಯಾಗಬಹುದು. ಅದೇ ವರ್ಗದ ಪ್ರಾಣಿಯೊಂದನ್ನು ಬಲಿಕೊಡುವುದರಿಂದ ಆ ವರ್ಗದ ಉಳಿದೆಲ್ಲ ಜೀವಿತ ಪ್ರಾಣಿಗಳಿಗೆ ಅನುಕೂಲವಾಗುತ್ತದೆಂದು ಜನರ ಭಾವನೆ. ಇದು ನರಹತ್ಯೆ ವಿಧಾನದ ಮತ್ತೊಂದು ರೂಪ ಅಲ್ಲದೇ ಇದು ಮಾಂತ್ರಿಕ ವಿದ್ಯೆಯ ಒಂದು ಭಿನ್ನ ವಿಧಾನವೂ ಆಗಿದೆ.

ಈ ಪ್ರಾಣಿಬಲಿಯ ಉದ್ದೇಶ ಅವುಗಳ ಬದುಕು ವೃದ್ಧಿಸಲೆಂದು. ಕುರಿ ಸಾಕುವುದು ವರ್ಷಕ್ಕೊಮ್ಮೆ ಕಸರ ಹಾಕುವ ಆಚರಣೆ ಮಾಡುತ್ತಾನೆ. ತಮ್ಮ ಸಾಕುವ ಕುರಿಗಳಲ್ಲಿ ಕೆಲವು ಕುರಿಗಳನ್ನು ಬಲಿಗೆಂದೇ ಬೆಳೆಸುತ್ತಾರೆ. ಈ ಕುರಿ ಬಲಿ ಆಚರಣೆಯ ದಿನ ವಿಧಿವತ್ತಾಗಿ ಕುರಿಯ ಒಳಭಂಡಾರ ತೆಗೆದು ಅಡುಗೆ ಮಾಡುತ್ತಾರೆ. ಕೊಯ್ದ ಕುರಿಯ ಕರುಸು ಮತ್ತು

ಒಳಭಂಡಾರದ ಸಾರನ್ನು ಕುರಿಮಂದೆಗಳ ಸುತ್ತ ಎರಚುತ್ತಾರೆ. ಏಕೆಂದರೆ ಕ್ರೂರ ಜಂತುಗಳ ಬಂದು ಕುರಿ ಮಂದೆಯನ್ನು ನಾಶ ಮಾಡದಿರಲಿ ಮತ್ತು ಕ್ರೂರವಾದ ರೋಗರುಜಿನಗಳು ಕುರಿಗಳಿಗೆ ಬಾರದಿರಲಿ ಎಂಬುದು ಈ ಆಚರಣೆಗಳ ಉದ್ದೇಶವಾಗಿರುವುದು.

ಇದನ್ನೆಲ್ಲಾ ಗಮನಿಸಿದಾಗ ಶಿಷ್ಟ ಜನಾಂಗಗಳಲ್ಲಿ ಕೂಡ ಜಾನಪದವಿರುವು ತಿಳಿಯುತ್ತದೆ. ಸಾಮಾನ್ಯತೆ, ಸಮೂಹತೆ, ಸರಳತೆ, ಪ್ರಜ್ವಲತೆ ಮತ್ತು ಸಜೀವತೆಗಳೇ ಜಾನಪದ ಪಂಚಪ್ರಜ್ಞೆಗಳ ಶಿಷ್ಟ ಧರ್ಮ ಸಂಘ ಸಮೂಹಗಳಲ್ಲಿ ಈ ಬಗೆಯ ಜಾನಪದ ಕಲ್ಪನೆಗಳು ಸೇರಿರುತ್ತವೆ. ಶಿಷ್ಟ ಮತ್ತು ಸರಳ ಜನಪದಗಳ ದೃಷ್ಟಿಯಲ್ಲಿ ಪ್ರಾಣಿಬಲಿ ಬೇರೆ ಬೇರೆಯಾಗಿದೆ. ನಿರೂಪಿತ ಸಿದ್ಧ ಸಿದ್ಧಾಂತಗಳ ಬದುಕನ್ನು ಬದುಕುವವರನ್ನು ಶಿಷ್ಟ ಜನಪದರೆಂದು ಋತು ಮತ್ತು ವೃತ್ತಿಗಳಿಗೆ ಅನುಗುಣವಾಗಿ ಬದುಕನ್ನು ಸೃಜನಶೀಲಗೊಳಿಸಿಕೊಂಡು ಬದುಕುತ್ತಾ ಹೋಗುವವರನ್ನು ಸರಳ ಜನಪದರೆಂದೂ ಕರೆಯುತ್ತಾರೆ. ಶಿಷ್ಟ ಜನಪದರು ಸಿದ್ಧ ಮತ್ತು ಉಳಿಕೆಯ ಜನಪದವನ್ನು ಪ್ರತಿನಿಧಿಸುತ್ತಾರೆ. ಸರಳ ಜನಪದರು ಸಮಕಾಲೀನ ಜೀವಂತ ಜಾನಪದ ಅಂಶಗಳ ಜೊತೆ ಅವುಗಳ ಬೆಳವಣಿಗೆಯ ಸ್ವಭಾವಗಳನ್ನು ಪ್ರತಿನಿಧಿಸುತ್ತಾರೆ. ಶಿಷ್ಟ ಜಾನಪದಗಳಲ್ಲಿ ಪ್ರಾಣಿಗಳಿಗೆ ಎರಡು ರೂಪ ಮತ್ತು ಎರಡು ಗುಣಗಳಿವೆ. ಒಂದು ಆರೋಪಿತ ರೂಪ, ನೀತಿನಿಯಮ ಸಂಯೋಜಿತ ನಿರ್ದಿಷ್ಟ ಗುಣ. ಎರಡನೆಯ ಸಹಜವಾದ ಪ್ರಾಕೃತಿಕ ಸ್ವರೂಪ ಮತ್ತು ಗುಣ. ಅವು ನೈಸರ್ಗಿಕ ರೂಪದವು. ನೈಸರ್ಗಿಕ ಸ್ವಭಾವಗಳ ಮೇಲೆ ಕಟ್ಟುಕಥೆಗಳನ್ನು ಕಟ್ಟುವ ಮೂಲಕ ಅವುಗಳಿಗೆ ಜಾನಪದ ಸೃಷ್ಟಿಸುತ್ತಾರೆ.

ಆ ದೇವಿಯ ಜಾತ್ರೆಗೆ ಮೊಳೆ
ವೋದೆಳೆವೆಱ ಸಿರದ ಗಾಳಮುರಿಯುಯ್ಯಾಲೆ ಕೈ
ವೋದಸುಕೆ ಕೋಕಿಲ ಧ್ವನಿ
ಮೂದಲೆಯುರಿಯಾಗೆ ಬಂದುದಂದು ಬಸಂತಂ.

ಪ್ರಾಚೀನ ಕಾಲಘಟ್ಟದಲ್ಲಿ ಗ್ರಾಮದೇವತೆಗೆ ನಡೆಯುತ್ತಿದ್ದ ಜಾತ್ರೆಯ ಸ್ವರೂಪವನ್ನು ಮೇಲಿನ ಪದ್ಯವು ತಿಳಿಸುತ್ತದೆ.

ಸಿಸಿರಮನೆ ಪಿಡಿದು ಪರಕೆಗೆ
ಬಸಂತನಲರ್ವೋದ ಮಾವಿನಡಿ ಮಂಚಿಕೆಯೊಳ್
ಕುಸುರಿದಱದಡಗಿನಂತೆವೊ
ಲೆಸೆದುವು ತದ್ವನ ದೊಳುದಿರ್ದ ಮುತ್ತದ ಮುಗುಳ್ಗಳ್ (ಪದ್ಯ ೩೭)

ಜನರು ಕುರಿ, ಕೋಳಿ, ಕೋಣಗಳನ್ನು ಬಲಿ ಅರ್ಪಿಸುವಾಗ ಆ ಪ್ರದೇಶ ಹೇಗಿತ್ತು ಎಂಬುದನ್ನು ವರ್ಣಿಸುತ್ತಾನೆ. ಮಾಂಸದ ರಾಶಿಯನ್ನು ಮುತ್ತುಗದ ಹೂವುಗಳಿಗೆ ಹೋಲಿಸುತ್ತಾನೆ.

ಸುರಿಗಿಱದರ್ಚನೆ ಯಾಡುವ
ಪರಕೆಯ ನೊಪ್ಪಿಸುವ ಲಕ್ಕ ಲೆಕ್ಕದ ಲೆಂಕ

ವೆರಸು ಬಲವಂದು ದೇವಿಯ

ಚರಣಂಗಳ್ಗೆಱಗಿ ರಂಗಮಂಟಪದೆಡೆಯೊಳ್ (ಪದ್ಯ ೪೦)

ನಿಂದು ನರಪತಿ ತಳಾಱಂ

ಗೆಂದಂ ನೀಂ ಬರಿಸು ಮನುಜಯುಗಮಂ ಮುನ್ನಂ

ಕೊಂದರ್ಗಸುವೆಂ ಪೂಜೆಯೊ

ಳೆಂದಿನ ಪರಿ ತಪ್ಪೆ ದೇವಿ ತಪ್ಪದೇ ಮಾಣಳ್ (ಪದ್ಯ ೪೧)[೩೭]

ದೇವಿಜಾತ್ರಾ ಸಂದರ್ಭದಲ್ಲಿ ಜನರು ಮಾಡುತ್ತಿದ್ದ ವಿವರಗಳನ್ನು ಚರ್ಚೆ ಮಾಡುತ್ತಾ, ಕಠಾರಿಯಿಂದ ಇರಿದುಕೊಂಡು(ಈಗ ಸಣ್ಣ ಸಣ್ಣಸಲಾಕೆಗಳಿಂದ ಬಾಯಿಬೀಗ ಹಾಕುವುದು, ಬೆನ್ನಿಗೆ ಸಲಾಕೆ ಕೊಕ್ಕೆಗಳಿಂದ ಸಿಕ್ಕಿಸಿಕೊಂಡು ಸಿಡಿ ಆಡುವುದು, ಮುಂತಾದವುಗಳು ಬದಲಾವಣೆ ಇರುವುದು) ಪೂಜೆಯ ರೂಪದಲ್ಲಿ ನರ್ತಿಸುವ ಮತ್ತು ಹರಕೆಯನ್ನೊಪ್ಪಿಸುವ ಪರಂಪರೆಯ ಇರುವುದು ಗುರುತು ಮಾಡುತ್ತಾನೆ ಜನ್ನ. ಬಲಿಪೀಠದ ಬಳಿ ನಿಂತ ತಳವಾರನಿಗೆ ವಿಧೇಯಕವಾಗಿ ನಮಿಸುವುದು(ಈಗ ಜಾತ್ರಾ ಸಂದರ್ಭದಲ್ಲಿ ಕೋಣನನ್ನು ಬಲಿಕೊಡುವಾಗ ಬಲಿಪೀಠದ ಹತ್ತಿರ ನಿಂತ ತಳವಾರಿಗೆ ಪೂಜಿಸುತ್ತಾರೆ. ಅವನನ್ನು ಪೋತುರಾಜ ಎಂದಲೂ ಕರೆಯುತ್ತಾರೆ). ಜೋಡಿ ವ್ಯಕ್ತಿಗಳನ್ನು ಬಲಿಕೊಟ್ಟು ದೇವಿಯನ್ನು ಅರ್ಪಿಸುತ್ತೇನೆ ಎಂದು ಹೇಳುವಾಗ ನರಬಲಿ ಇತ್ತು. ಪ್ರಾಚೀನ ಕಾಲದ ಆರಾಧನಾ ವಿಧಾನಗಳ ವಿವರಗಳನ್ನು ಚಿತ್ರಿಸು ಪ್ರಾಣಿಬಲಿಯೇ ದೇವಿಗೆ ಪ್ರಿಯವಾದುದೆಂಬ ಪರಿಕಲ್ಪನೆ ಇಲ್ಲಿ ವ್ಯಕ್ತವಾಗುತ್ತದೆ.

ಇಂತೋರೊವರ ನೋರ್ವರ್

ಸಂತೈಸುತ್ತುಂ ನೃಪೇಂದ್ರತನು ಜಾತರ್ ನಿ

ಶ್ಚಿಂತಂ ಪೂಕ್ಕರ್ ಪಸಿದ ಕೃ

ತಾಂತನ ಬಾಣಸುವೊಲಿರ್ದ ಮಾರಿಯ ಮನೆಯಂ (ಪದ್ಯ ೫೩)[೩೮]

ಅಭಯಮತಿ, ಅಭಯರುಚಿ ಹಸಿದ ಯಮನ ಅಡುಗೆ ಮನೆಯಂತಿದ್ದ ಆ ಮಾರಿ ದೇವತೆ ಗುಡಿಯ ಮನೆಯನ್ನು ನಿಶ್ಚಿಂತೆಯಿಂದ ಹೊಕ್ಕರು. ಪ್ರಾಚೀನ ಕಾಲದಲ್ಲಿದ್ದ ಗುಡಿಗಳ ಸ್ವರೂಪದ ಬಗ್ಗೆ ತಿಳಿಸುತ್ತದೆ.

ತಪಸ್ವೀಕುಮಾರ್ ಅವರು ತಮ್ಮ ಕೃತಿಯಲ್ಲಿ "ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಯಕ್ಷ-ಯಕ್ಷಿಯರಿಗೆ ಮಾನ್ಯತೆ ಇರುವುದು ಕಂಡುಬರುತ್ತದೆ. ಯಕ್ಷ-ಯಕ್ಷಿಯರ ಬಗೆಗಿರುವ ವಾದವಿವಾದಗಳಲ್ಲಿ ಕೆಲವನ್ನು ಗಮನಿಸಬಹುದು. ಯಕ್ಷ-ಯಕ್ಷಿಯರು ಅತಿಮಾನುಷ ಶಕ್ತಿಯನ್ನು ಪಡೆದವರೆಂದೂ ಅವರು ಜಿನಶಾಸನ ರಕ್ಷಕರೆಂದೂ ತಿಳಿಯುತ್ತದೆ" ಎಂದು ಅಭಿಪ್ರಾಯ ಪಡುತ್ತಾರೆ.(ಪುಟ.೨೦) ಪ್ರಾಚೀನ ಕಾಲಘಟ್ಟಗಳಲ್ಲಿ ಜೈನರು ಅತಿಮಾನುಷ ಶಕ್ತಿಯರನ್ನು ಯಕ್ಷ-ಯಕ್ಷಿ ಎಂದು ಕರೆದು ಪೂಜಿಸುತ್ತಿದ್ದರು. ಭಕ್ತಿಯುಗ, ೧೨ನೇ ಶತಮಾನದಲ್ಲಿ ಬಳಕೆಯಲ್ಲಿದ್ದ

ವಚನ ಸಾಹಿತ್ಯಗಳಲ್ಲಿ ಕೂಡ ಆರಾಧಿಸುತ್ತಿದ್ದ ದೇವಾನುದೇವತೆಗಳ ಪ್ರಸ್ತಾಪಗಳು ಬರುತ್ತವೆ. ಸಾಮಾಜಿಕವಾಗಿ ಆಚರಣೆಯಾಗುತ್ತಿದ್ದ ಕೆಲವು ದೈವಗಳ ಬಗೆಗೆ ಮಾಹಿತಿಗಳು ದೊರೆಯುತ್ತವೆ.

ಹಾಳು ಮೊರಡಿಗಳಲ್ಲಿ ಊರದಾರಿಗಳಲ್ಲಿ
ಕೆರೆಬಾವಿ ಹೂಗಿಡ ಮರಂಗಳಲ್ಲಿ
ಗ್ರಾಮ ಮಧ್ಯಗಳಲ್ಲಿ ಚೌಪಥ ಪಟ್ಟಣ ಪ್ರದೇಶದಲ್ಲಿ
ಹಿರಿಯಾಲದ ಮರದಲ್ಲಿ ಮನೆಯ ಮಾಡಿ
ಕರೆವೆಮ್ಮೆ ಹಸುಗೂಸು ಬಸುರಿ ಬಾಣತಿ
ಕುಮಾರಿ ಕೊಡಗೂಸೆಂಬವರ ಹಿಡಿದುಂಬ ತಿರಿದುಂಬ
ಮಾರಯ್ಯ ಬೀರಯ್ಯ ಕೇಚರಗಾವಲ ಅಂತರ ಬೆಂತರ
ಕೂಳಯ್ಯ ದೂಳಯ್ಯ ಮಾಳಯ್ಯ ಕೇತಯ್ಯಗಳೆಂಬ ಸೂರು ಮಡಕೆಗೆ ನಮ್ಮ
ಕೂಡಲಸಂಗಮದೇವ ಶರಣೆಂಬುವುದೊಂದುದಡೆ ಸಾಲದೇ (ಬಸವಣ್ಣನ ವಚನ)[೩೯]

ಬಸವಣ್ಣ ಅಲ್ಲದೇ ವಚನಕಾರರಾದ ಮಾದಾರ ಚನ್ನಯ್ಯ, ಚೆನ್ನಬಸವಣ್ಣ, ಡಕ್ಕೆಯ ಮಾರಯ್ಯ, ಅಲ್ಲಮ್ಮಪ್ರಭುಗಳು ಮಾತೃದೇವತೆಗಳ ಬಗೆಗೆ ಉಲ್ಲೇಖಿಸುತ್ತಾರೆ. ಮೈಲಾರ, ಜೋಕುಮಾರ, ಮಾರಿ, ಕಾಳಿ, ದುರ್ಗಿ, ಚೌಡೇಶ್ವರಿ, ಕಾಟುಗ, ಸ್ತ್ರೀ–ಪುರುಷ ದೇವತೆಗಳಿವೆ. ಪ್ರಕೃತಿಪೂಜೆ, ಪ್ರಾಣಿಪೂಜೆ, ದೈವಿ ವಿಗ್ರಹಾರಾಧನೆ, ದೈವಿಜಾತ್ರೆ, ಉತ್ಸವ–ಸಂಪ್ರದಾಯ, ದೈವೀಹಬ್ಬಗಳ ಬಗ್ಗೆ ವಿವರಗಳು ವಚನಗಳಲ್ಲಿ ಸಿಗುತ್ತವೆ. "ಡಕ್ಕೆಯ ಬೊಮ್ಮಯ್ಯನೆಂಬ ಶರಣ 'ಮಾರಿ'ಯನ್ನು ಹೊತ್ತು ಕುಣಿಸುತ್ತಿದ್ದ, 'ಡಕ್ಕೆ' ಎಂಬ ಚರ್ಮವಾದ್ಯ ಬಾರಿಸುತ್ತ 'ಮಾರಿ' ಯನ್ನು ಕುಣಿಸುವ ಈತನನ್ನು ಡಕ್ಕೆಯ ಮಾರಯ್ಯ(ಬೊಮ್ಮಯ್ಯ) ಎನ್ನುವರು. ಡಕ್ಕೆಯ ಮಾರಯ್ಯಗಳು ಭಕ್ತರಂಗಳದಲ್ಲಿ ಡಕ್ಕೆಯ ಬಾರಿಸಿ, ಮಾರಿಯಂ ಕುಣಿಸಿ, ಉಡಿಯಲ್ಲಿ, ತಲೆಯಲ್ಲಿ ಬೇವಿನ ಸೊಪ್ಪು ಕಟ್ಟಿಕೊಂಡು, ಮಾರಿಯಂ ಮುಂದಿಟ್ಟುಕೊಂಡು ಆಚಾರವಂ ತೋಱ ಸಾರುತ್ತ, ಜೀವಿಸುವ ಕಾಯಕ ವನ್ನು ಹೊಂದಿದನೆಂಬ ಉಲ್ಲೇಖಗಳು 'ಕಥಾಮಣಿ ಸೂತ್ರರತ್ನಾಕರ' ಎಂಬ ಕೃತಿಯಲ್ಲಿ ಸಿಗುತ್ತವೆ"[೪೦]

ದಾಸ ಸಾಹಿತ್ಯದಲ್ಲಿ ದೇವತೆಗಳ ಆರಾಧನಾ ಸ್ವರೂಪದ ಬಗ್ಗೆ ಮಾಹಿತಿಗಳು ಸಿಗುತ್ತವೆ. ದಾಸರು ಬದುಕಿದ ಸಂದರ್ಭದಲ್ಲಿ ಆರಾಧನೆ, ಆಚರಣೆಗಳ ಬಗ್ಗೆ ದಾಖಲಿಸುತ್ತಾರೆ.

"ಮಾರಿ ಮಸಣಿ ಜಟ್ಟಿ ಜಟ್ಟಂಗ ಬೇತಾಳ
ವರಪೋತರಾಜಾ ಬೊಮ್ಮಯನು
ಬೀರೆದ್ಯಾವರು ಹಾರಿ ಬೀದಿಯ ಬಸವಣ್ಣ
ಚಾರು ದೈವ ವಿಚಾರವಲ್ಲದೇ ಹೊಲ್ಲಾ"[೪೧]

ಈ ಪದ್ಯದಲ್ಲಿ ಪ್ರಾಣಿ ಬಲಿಯನ್ನು ತೆಗೆದುಕೊಳ್ಳುವ ದೇವತೆಗಳು ಹೆಚ್ಚಾಗಿ ಬಂದಿವೆ. ಅಂದರೆ ದಾಸ ಸಾಹಿತ್ಯದಲ್ಲಿ ಪ್ರಾದೇಶಿಕವಾಗಿ ಪ್ರಾಣಿಬಲಿಗಳು ದೇವತೆಗೆ ಅರ್ಪಿಸುತ್ತಿದ್ದರು ಎಂದು ಗುರುತಿಸಬಹುದು.

ಜಾನಪದದ ಪ್ರಕಾರ ಆದಿಮಾನವ ಕಾಲದಿಂದಲೂ ಪ್ರಾಣಿ ಮತ್ತು ಮಾನವನ ಮಧ್ಯೆ ತುಂಬ ಒಳ್ಳೆಯ ಸಂಬಂಧವಿದೆ ಎಂದು ಹೇಳಬಹುದು. ನಾವು ಅಮೆರಿಕ–ಇಂಡಿಯನ್ನರ ಪ್ರಾಣಿ ಕಥೆಗಳನ್ನು ಗಮನಿಸಬಹುದು. ಅಲ್ಲಿಯ ಪ್ರಮುಖ ಪ್ರಾಣಿಗಳೇ ಮಾನವ ಮತ್ತು ಭೂಮಿಯ ಸೃಷ್ಟಿಕರ್ತನಾಗಿರುವುದು ತಿಳಿದುಬರುತ್ತದೆ. ಭಾರತೀಯ ಜನಪದರಲ್ಲಿ ಪ್ರಾಣಿಗಳಿಗೆ ಇರುವ ಕಥೆಗಳನ್ನು ನೋಡಿದಾಗ ಹೆಚ್ಚಿನ ಪ್ರಾಣಿಗಳ ಮನುಷ್ಯರ ಜೊತೆಗೆ ಮನುಷ್ಯರಂತೆ ಬದುಕಿವೆ. ಧಾರ್ಮಿಕ ಜನಪದದಲ್ಲಿ ಧಾರ್ಮಿಕ ಸಂಸ್ಕಾರದೊಂದು ಪ್ರಾಣಿ ಜಾನಪದವು ವೃತ್ತಿ ಜನಪದಗಳಲ್ಲಿ ವೃತ್ತಿನಿರತ ಪ್ರಾಣಿ ಜಾನಪದವೂ ಕಂಡುಬರುತ್ತದೆ. ಹಿಂದೂ ಧಾರ್ಮಿಕ ಸಂಸ್ಕೃತಿಯಲ್ಲಿ ಸೃಷ್ಟಿಯಾದ ಪ್ರಾಣಿ ಜಾನಪದದ ಅನೇಕ ಸಾಂಸ್ಕೃತಿಕ ಮಾದರಿಗಳು ಇವೆ. ಈ ಎರಡೂ ಬಗೆಯ ಜಾನಪದ ಸ್ವಭಾವಗಳಿಗೆ ಉದಾಹರಣೆಗಳಾಗಿವೆ. ಗೋಪೂಜೆ ಅಂದರೆ ದನವನ್ನು ಪೂಜಿಸುವುದು ಗೋರಕ್ಷಣೆಯ ಕಲ್ಪನೆ ಮೇಲ್ಜಾತಿ ಮತ್ತು ಕೆಳವರ್ಗದ ಜನರಲ್ಲಿ ಪಡೆದಿರಬಹುದಾದ ಜಾನಪದೀಯ ಕಲ್ಪನೆಗಳ ದ್ವಂದ್ವವೇ ಇದಕ್ಕೆ ಸಾಕ್ಷಿ. ಆದರೆ ಈ ದ್ವಂದ್ವ ಭಾರತೀಯ ಶಿಷ್ಟ ಪುರಾಣ ಮತ್ತು ಪುಣ್ಯ ಕಥೆಗಳಲ್ಲಿ ಉಳಿದಿಲ್ಲ. ಅಲ್ಲಿಯ ಜಾನಪದೀಯ ಕಲ್ಪನೆ ಏಕಮುಖವಾದ ಸಂದೇಶವನ್ನು ಹೊಂದಿದೆ.

ಜನಪದ ಪ್ರಾಣಿ ಪುರಾಣಕ್ಕೆ ಉದಾಹರಣೆ ಎಂದರೆ ದೇವಲೋಕದ ಮೂಲಕ ಬಸವ ಭೂಲೋಕಕ್ಕೆ ಬಂದು ಹೊಲ ಉಳುವ ಕೆಲಸಕ್ಕೆ ನಿಯಮಿತನಾಗುತ್ತದೆ. ಭೂಲೋಕದಲ್ಲಿರುವ ಮನುಷ್ಯರಲ್ಲಿ ಮಕ್ಕಳಿಗೆ ದಿನಕ್ಕೆ ಮೂರು ಹೊತ್ತು ಊಟ ದೊಡ್ಡವರಿಗೆ ಒಂದು ಹೊತ್ತು ಊಟ ಎಂದು ಸಾರಿ ಬರಲು ಶಿವನು ಬಸವನನ್ನು ಕಳಿಸುತ್ತಾನೆ. ಮೈಮರೆತ ಬಸವ ದೊಡ್ಡವರಿಗೆ ಮೂರು ಹೊತ್ತು ಊಟ ಮಕ್ಕಳಿಗೆ ಲೆಕ್ಕವಿಲ್ಲದಷ್ಟು ಊಟ ಎಂದು ತಪ್ಪಾಗಿ ಸಾರುತ್ತಾನೆ. ಇದರಿಂದ ಕೋಪಗೊಂಡ ಶಿವನು ಮಾಡದ ತಪ್ಪಿಗಾಗಿ ಬಸವನನ್ನು ಭೂಲೋಕದಲ್ಲಿಯೇ ಇರುವಂತೆ ಆಜ್ಞೆ ಮಾಡುತ್ತಾನೆ. ಅಷ್ಟೆ ಅಲ್ಲದೇ ಭೂಲೋಕದ ಜನರಿಗೆ ದುಡಿದು ಆಹಾರ ಒದಗಿಸುವ ಕೆಲಸವನ್ನು ವಹಿಸಿಕೊಡುತ್ತಾನೆ. ಇದರಿಂದಾಗಿ ಬಸವನಿಗೆ ಹೆಗಲು ನೋಯದಿರಲು ಎಂದು ವಜ್ರೌಷಧಿಯನ್ನು ಹಂದಿಯ ಮೂಲಕ ಕಳಿಸಿಕೊಡುತ್ತಾನೆ. ಹಂದಿ ವಜ್ರೌಷಧಿಯನ್ನು ತನ್ನ ಮುಸುಡಿಗೆ ತೀಡಿಕೊಂಡು ತನ್ನ ಮುಸುಡಿಯನ್ನು ವಜ್ರದಂತೆ ಗಟ್ಟಿ ಮಾಡಿಕೊಳ್ಳುತ್ತದೆ. ಬಸವ ಮಾತ್ರ ಯಥಾಪ್ರಕಾರ ಹೆಗಲು ನೋಯಿಸಿಕೊಂಡು ದುಡಿಯಬೇಕಾಗುತ್ತದೆ. ಇಂತಹ ಅನೇಕ ಕಥೆಗಳು ಜನಪದರಲ್ಲಿ ಇವೆ. ಆದರೆ ಇಂತಹ ಕಥೆಗಳು ಶಿಷ್ಟ ಸಾಹಿತ್ಯದಲ್ಲಿ ಕಂಡುಬರುವುದಿಲ್ಲ. ಜಾನಪದದಲ್ಲಿ ಪ್ರಾಣಿ ಬಲಿಯು ತುಂಬಾ ಭಯಾನಕವಾಗಿ ಕಾಣುತ್ತದೆ. ಅದೇ ಶಿಷ್ಟಸಾಹಿತ್ಯದಲ್ಲಿ ಪ್ರಾಣಿಯ ಬದಲಾಗಿ ತರಕಾರಿಗಳ ಬಲಿಯನ್ನು ಕೊಡುತ್ತಾರೆ.

"ಕೆರೆಯ ಕಟ್ಟೆಯ ಭದ್ರವಾಗಿ ನಿಲ್ಲಲಿ ಎಂಬ ಕಾರಣಕ್ಕಾಗಿ ಅಥವಾ ಕೆರೆಯಲ್ಲಿ ನೀರು ನಿಲ್ಲಲಿ ಎಂಬ ಉದ್ದೇಶಕ್ಕಾಗಿ ಬಲಿಯಾದವರನ್ನು ದೈವವೆಂದು ಪೂಜಿಸಿ ಆರಾಧಿಸುವುದು ವಾಡಿಕೆ. ಜನ ಹಿತಕ್ಕಾಗಿ ಈ ರೀತಿಯಾಗಿ ಪ್ರಾಣಾರ್ಪಣೆ ಮಾಡಿದವರನ್ನು ದೈವತ್ವಕ್ಕೆ ಏರಿಸುವುದಲ್ಲದೆ ಆಚರಣೆಗಳನ್ನು ಕೈಗೊಳ್ಳುತ್ತಾರೆ. ಆದರೆ ನಗರಗೆರೆಯ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಬೈಯ್ಯಮ್ಮನನ್ನು ಪೂಜಿಸುವುದು ವಿಶೇಷವೆನಿಸುತ್ತದೆ. ಆಕೆಯ ಗಂಡನ ಮನೆಯ ವಂಶಸ್ಥರೆಂದು ಕರೆಯಲ್ಪಡುವವರೇ ಅಲ್ಲದೇ ಸುತ್ತಮುತ್ತಲಿನ ಪ್ರಾದೇಶಿಕ ಸಮುದಾಯ ವರ್ಗಗಳೂ ಬೈಯಮ್ಮನ ಆಚರಣೆಯನ್ನು ಮಾಡುವುದು ಗಮನ ಸೆಳೆಯುತ್ತದೆ. ಮಕ್ಕಳಿಲ್ಲದ ದಂಪತಿಗಳು ಸಂತಾನ ಭಾಗ್ಯಕ್ಕಾಗಿ ಬೈಯಮ್ಮನಿಗೆ ಹರಕೆ ಕಟ್ಟುತ್ತಾರೆ. ಅದರಂತೆ ತಮಗೆ ಮಕ್ಕಳಾದರೆ ಸಮುದಾಯಸೂಚಕ ಪದಗಳು ಆಯಾ ಹೆಸರಿನೊಂದಿಗೆ ಸೇರುವ ಸಾಧ್ಯತೆಯೂ ಇರುತ್ತದೆ. ಇದು ಪುರುಷ ವಲಯಕ್ಕೆ ಮಾತ್ರ ಅನ್ವಯವಾಗುತ್ತದೆ. ಕೆರೆಯಲ್ಲಿ ಸಾವನ್ನಪ್ಪದ ಕಾರಣಕ್ಕೆ ಕೆರೆಯ ಕಡೆಯಿಂದ ರಾತ್ರಿಯಿಡೀ ಕೂಗು ಕೇಳಿಬರುತ್ತಿತ್ತು. ಒಂದು ರಾತ್ರಿ ಮಾದಿಗರ ವ್ಯಕ್ತಿಯೊಬ್ಬನು ತಾನು ಕದ್ದಂತಹ ಹಸುವೊಂದನ್ನು ಬೈಯಮ್ಮನ ಗುಡಿಗೆ ಎಳೆದೊಯ್ದು ಕೊಯ್ದು ಮಾಂಸವನ್ನು ಬಿಡಿಸಿದ. ಅಂದಿನಿಂದ ಗುಡಿಯು ಅಪವಿತ್ರಗೊಂಡಿದ್ದರಿಂದ ಬೈಯ್ಯಮ್ಮನಿಗೆ ಮತ್ತೆ ಮಕ್ಕಳಾಗಲಿಲ್ಲ. ಮಕ್ಕಳ ಅಳುವಿಕೆ ತಾಯಿಯ ಸಾಂತ್ವನ ಇತ್ಯಾದಿಗಳಾವುವೂ ಕೇಳಿಬರಲಿಲ್ಲ. ಐತಿಹ್ಯದ ಕೊನೆಯ ಭಾಗದಲ್ಲಿ ಗೋವಿನ ವಧೆ ಗೋಮಾಂಸದ ನಿಷೇಧ ಹಾಗೂ ದಲಿತರು ಸಾರ್ವಜನಿಕ ಹಾಗೂ ಧಾರ್ಮಿಕ ಸ್ಥಳಗಳಿಗೆ ಪ್ರವೇಶಿಸಿದರೆ ಕೇಡುಂಟಾಗುತ್ತದೆಂಬ ನಂಬಿಕೆಗಳಿಂದ ಮುಕ್ತಾಯವಾಗುತ್ತದೆ. ಬಲಿಗೆ ಸಂಬಂಧಿಸಿದ ಐತಿಹ್ಯಗಳಲ್ಲಿ ಮಹಿಳೆಯ ಪಾತ್ರ ಪ್ರಧಾನವಾಗಿರುತ್ತದೆ. ಬಲಿಯಾಗುವ ಮಹಿಳೆಯರು ಸಾಮಾನ್ಯವಾಗಿ ಸೊಸೆಯಂದಿರಾಗಿರುತ್ತಾರೆ. ಮಗಳನ್ನು ಬಲಿ ಕೊಡುವುದು ಅಪರೂಪ. ಬಲಿಯಾದ ಮಹಿಳೆಯು ದೇವತೆಯಾಗುತ್ತಾಳೆ. ಪೂಜೆ ಜಾತ್ರೆಗಳು ನಡೆಯುತ್ತವೆ. ಗಂಡ ದಂಡಿನಲ್ಲಿರುತ್ತಾನೆ ಅಥವಾ ವ್ಯಾಪಾರಕ್ಕೆ ಹೋಗಿರುತ್ತಾನೆಂಬ ಸೂಚನೆಗಳು ಸಿಗುತ್ತವೆ. ಮುತ್ತೈದೆಯರು ವಿವಾಹಿತ ಸ್ತ್ರೀಯರು ಹೆಚ್ಚು ಬಲಿಗೆ ಒಡ್ಡಿಕೊಳ್ಳುತ್ತಾರೆ. ಅವರು ಅಸಹಾಯಕ ಸ್ಥಿತಿಯಲ್ಲಿ ತ್ಯಾಗ ಮಾಡಿರುತ್ತಾರೆ. ಬಾಲೆಯರ ಬಲಿಯೆಂದರೆ ದಲಿತ ಬಾಲೆಯದಿರುತ್ತದೆ. ಹೆಣ್ಣಿನ ಬಲಿಯಿಂದ ಕೆರೆ–ಕಟ್ಟೆಗಳಿಗೆ ನೀರೊದಗುವುದರೊಂದಿಗೆ ಭದ್ರತೆ ಒದಗುತ್ತದೆ ಎಂಬ ನಂಬಿಕೆ ಪ್ರಧಾನವಾದುದು. ಕೋಟೆಗಳು ಬೀಳದ ಹಾಗೆಯೇ ಇಂಥ ಬಲಿಗಳನ್ನು ನೀಡುವುದರಿಂದ ಕೋಟೆಗಳೂ ಚಿತ್ರಗೊಳ್ಳುತ್ತವೆಂಬ ಕೋಟೆಗಳಿಗೆ ಸಂಬಂಧಿಸಿದ ನಂಬಿಕೆ ಗಮನಾರ್ಹವಾದುದು. ಬಲಿ ಐತಿಹ್ಯಗಳು ಕೆರೆಗಳು ಮತ್ತು ಕೋಟೆಗಳಿಗೆ ಸಂಬಂಧಿಸಿರುತ್ತವೆ. ಕೆರೆ ಮತ್ತು ಕೋಟೆಗಳಿಗೆ ಮಹಿಳೆಯರನ್ನು ಬಲಿ ಕೊಟ್ಟಿರುತ್ತಾರೆ. ಕೆರೆಗೆ ಕಿರಿಸೊಸೆಯ ಬಲಿ

ಸಾಮಾನ್ಯವಾದುದು. ವಿವಾಹಿತರು, ಮುತ್ತೈದೆಯರು, ಗರ್ಭಿಣಿಯರು ಹೀಗೆ ಕೆರೆಗೆ ನೀರು ಬರದಿದ್ದಾಗ ಆಹುತಿಯಾಗುತ್ತಾರೆ. ಕೋಟೆಗಳಿಗೆ ಕನ್ಯೆಯರು ಅಥವಾ ಗರ್ಭಿಣಿಯರು ಬಲಿಯಾಗುತ್ತಾರೆ. ಬೆಂಗಳೂರು ಕೋಟೆಗೆ ಕೆಂಪೇಗೌಡನ ಸೊಸೆ ಬಲಿಯಾದಳು. ಹಲಸಂಗಿ ಕೋಟೆಗೆ ಬಲಿಯಾದ ಜಕ್ಕವ್ವೆಯು ಮಾದಿಗರ ಬಾಲೆ. ಇಂಥವರನ್ನು ಕೆರೆಗೆ ನೀರು ಬರದಿದ್ದಾಗ. ಕೆರೆಯ ಕಟ್ಟೆಯು ಭದ್ರವಾಗಿ ನಿಲ್ಲದಿರುವಾಗ, ಕೋಟೆಯ ಗೋಡೆ ಕುಸಿದು ಬೀಳುವಾಗ, ಬಲಿ ನೀಡಲಾಗಿದೆ. ಈಗಲೂ ದೊಡ್ಡ ದೊಡ್ಡ ಕಟ್ಟಡಗಳು ಮತ್ತು ಸೇತುವೆಗಳ ನಿರ್ಮಾಣದ ನಂತರ ಪ್ರಾಣಿಗಳನ್ನು ಬಲಿ ನೀಡುತ್ತಾರೆ. ಹಾಗೆ ನೀಡದಿದ್ದರೆ ಕಟ್ಟಡವು ಶಿಥಿಲಗೊಂಡು ಕುಸಿಯುತ್ತದೆಂದು ನಂಬಿಕೆ. ಶಿಷ್ಟ ಪರಂಪರೆಯಲ್ಲಿ ಪ್ರಾಣಿಬಲಿಗೆ ಸಾಂಕೇತಿಕವಾಗಿ ಕುಂಬಳಕಾಯಿ ಬಲಿಯನ್ನು ನೀಡಲಾಗಿದೆ. ಯಲ್ಲಂಪಲ್ಲಿ ಕೋಟೆಗೆ ಸಂಬಂಧಿಸಿದಂತೆ ಜೋಗರೆಡ್ಡಿ ಎಂಬಾತನು ಈ ಕೋಟೆಯನ್ನು ಕಟ್ಟಿಸಿದ. ಗೋಡೆಯು ಭದ್ರವಾಗಿ ನಿಲ್ಲದಿರಲು ಗರ್ಭಿಣಿಯಾಗಿದ್ದ ತನ್ನ ಮಗಳನ್ನೇ ಬಲಿ ನೀಡಿದ. ಅಂದಿನಿಂದ ಕೋಟೆಯಲ್ಲಿ ಅಮಾವಾಸ್ಯೆ ಮತ್ತು ಹುಣ್ಣಿಮೆಯ ರಾತ್ರಿಗಳಲ್ಲಿ ಅಳುತ್ತಿರುವ ಮಗುವನ್ನು ಹೆಂಗಸು ಸುಧಾರಿಸುವುದು ಕೇಳಿಬರುತ್ತದೆ. ಎಂಬ ನಂಬಿಕೆಯಿದೆ. ಟಿಪ್ಪು ಸುಲ್ತಾನನ ಕಾಲದಲ್ಲಿ ಕೋಟೆಯ ಸುತ್ತಲೂ ಕಂದರವನ್ನು ಮಾಡಿಸಿ ನೀರು ತುಂಬಿಸಿರುತ್ತಿದ್ದ. ದಾಟಲು ಹೋದವರು ಕಂದರದಲ್ಲಿ ಬಿದ್ದು ಸಾಯುತ್ತಿದ್ದರು. ಹೀಗೆ ಕೋಟೆಗೆ ಮುತ್ತಿಗೆ ಹಾಕಿದ ಸೈನಿಕರನ್ನು ಕಂದರಕ್ಕೆ ಬಲಿ ನೀಡುತ್ತಿದ್ದರೆಂದು ಐತಿಹ್ಯಗಳಿವೆ" ಎಂದು ಪ್ರಸ್ತಾಪ ಮಾಡುತ್ತಾರೆ.[೪೨] ಜನಪದ ಪ್ರಾಣಿ ಬಲಿಯಲ್ಲಿ ಜೀವಂತದ ಪ್ರಾಣಿಗಳನ್ನು ಕಡಿದು ದೈವ ದೇವರುಗಳಿಗೆ ರಕ್ತವನ್ನು ಚೆಲ್ಲಿದರೆ, ಶಿಷ್ಟಸಾಹಿತ್ಯದಲ್ಲಿ ಬಲಿದಾನವು ವಿರೋಧವಾಗಿರುತ್ತದೆ. ಇದರ ಪ್ರಕಾರ ಇವರು ಒಂದು ಕುಂಬಳಕಾಯಿಯನ್ನು ತೆಗೆದುಕೊಂಡು ಅದನ್ನು ತ್ರಿಕೋನದಲ್ಲಿ ಕತ್ತರಿಸಿ ಅದಕ್ಕೆ ಕೆಂಪು ಕುಂಕುಮವನ್ನು ತುಂಬಿಸಿ ಅನಂತರ ದೇವರ ಎದುರಿಗೆ ಅದನ್ನು ಕಡಿಯುತ್ತಾರೆ. ಆಗ ಅದರೊಳಗಿದ್ದ ಕುಂಕುಮ ರಕ್ತದಂತೆ ಹೊರ ಚೆಲ್ಲುತ್ತದೆ. ಇದನ್ನು ಗಮನಿಸುವಾಗ ಮಾಂಸಾಹಾರಿಗಳು ಮಾತ್ರವಲ್ಲದೆ ಸಸ್ಯಾಹಾರಿಗಳು ಕೂಡ ಬಲಿಯನ್ನು ಕೊಡುತ್ತಾರೆ ಎಂಬುದು ನಿಜವಾದ ಸತ್ಯ. ಕುಂಬಳಕಾಯಿಯಿಂದ ಮಾತ್ರವಲ್ಲದೆ ನಿಂಬೆಹಣ್ಣನ್ನು ಕೂಡ ಬಲಿ ಕೊಡುತ್ತಾರೆ. ಎಲ್ಲಿ ಜನಪದರಿಗೆ ಪ್ರಾಣಿಗಳ ಮೇಲೆ ಎಷ್ಟು ನಂಬಿಕೆ ಇತ್ತೋ ಅಷ್ಟೇ ನಂಬಿಕೆ ಶಿಷ್ಟ ಜನಪದರಿಗೆ ಕುಂಬಳಕಾಯಿ, ನಿಂಬೆ ಹಣ್ಣಿನಲ್ಲಿವೆ. ಏಕೆಂದರೆ ನಿಂಬೆ ಹಣ್ಣು ಕೆಟ್ಟ ಶಕ್ತಿಯನ್ನು ಓಡಿಸಿ ಒಳ್ಳೆಯದನ್ನು ಮಾಡುವ ಒಂದು ವಸ್ತುವಾಗಿದೆ. ಅದನ್ನು ಈಗಲೂ ಜನರು ನಂಬುತ್ತಾರೆ. ಇತ್ತೀಚಿನ ದಿನಗಳಲ್ಲಿ ಪ್ರಾಣಿಬಲಿಗಿಂತ ಈ ಪದ್ಧತಿಯೇ ಹೆಚ್ಚಾಗಿ ಜಾರಿಯಲ್ಲಿದೆ ಎನ್ನಬಹುದು. ಏಕೆಂದರೆ ಮೊದಲಿನ ಹಾಗೆ ಹೆಚ್ಚಿನ ಜನರು ಅವಿದ್ಯಾವಂತರಾಗಿ ಉಳಿದಿಲ್ಲ. ಹಾಗಾಗಿ ಕೆಲವರು ಈ ಪ್ರಾಣಿಬಲಿಯನ್ನು

ನಿಷೇಧಿಸುವಲ್ಲಿ ಅದರ ಬದಲಿಗೆ ಇಂತಹ ಬಲಿಯನ್ನೇ ಮಾಡುತ್ತಾರೆ. ಎಲ್ಲ ಮಾಟ ಮಂತ್ರದಲ್ಲಿ ನಿಂಬೆಹಣ್ಣನ್ನೇ ಬಳಸುತ್ತಾರೆ. ಮಾಟ ಮಂತ್ರದಲ್ಲಿ ನಿಂಬೆ ಹಣ್ಣನ್ನು ಕೊಯ್ದು ನಿವಾಳಿಸಿ ಬಿಸಾಡುತ್ತಾರೆ. ಇಂತಹ ಪದ್ಧತಿಯನ್ನು ನಾವು ಈಗಲೂ ನೋಡುತ್ತೇವೆ. ಈಗಿನ ಜನಾಂಗದವರು ಪ್ರಾಣಿಬಲಿಯನ್ನು ಕಡಿಮೆ ಮಾಡಿ ಈ ತರಹದ ಬಲಿಯನ್ನು ಮಾಡುವುದಕ್ಕೆ ಅವರ ಆರ್ಥಿಕ ಪರಿಸ್ಥಿತಿಯೂ ಕಾರಣವಾಗಬಹುದು. ಏಕೆಂದರೆ ಕುರಿ, ಕೋಳಿ ಪ್ರಾಣಿಗಳನ್ನು ಕೊಂಡುಕೊಳ್ಳಬೇಕಾದರೆ ಸಾವಿರಾರು ರೂಪಾಯಿಗಳು ಬೇಕಾಗುತ್ತದೆ. ಆದರೆ ನಿಂಬೆಹಣ್ಣಿಗೆ ಅಥವಾ ಕುಂಬಳಕಾಯಿಗಳಿಗೆ ಕಡಿಮೆ ಖರ್ಚಾಗುವುದು ಎನ್ನುವ ಮಾನವರ ಭಾವನೆಯೂ ಇದಕ್ಕೆ ಕಾರಣವಾಗಿದೆ. ಇತ್ತೀಚೆಗೆ ಗಮನಿಸಿದಾಗ ಒಂದು ಕಟ್ಟಡವನ್ನು ಕಟ್ಟಲು ಆರಂಭಿಸುವಾಗ ಬಲಿ ಕೊಡುವುದು ಮೊದಲಿನಿಂದಲೂ ಬಂದ ಪದ್ಧತಿ ಹಿಂದಿನ ಜನಪದ ಜನಾಂಗದವರು ಈ ಕೆಲಸವನ್ನು ಪ್ರಾರಂಭಿಸುವ ಮುನ್ನ ಪ್ರಾಣಿಗಳನ್ನೇ ಬಲಿ ಕೊಡುತ್ತಿದ್ದರು. ಆದರೆ ಶಿಷ್ಟ ಸಾಹಿತ್ಯದಲ್ಲಿ ತೆಂಗಿನಕಾಯಿ ಅಥವಾ ಕುಂಬಳಕಾಯಿಯ ಬಲಿಯನ್ನು ಕೊಡುತ್ತಾರೆ.

ಅಂದಿನ ಕಾಲದಲ್ಲಿ ಮಾಟ ಮಂತ್ರಗಳ ಆಚರಣೆಯಲ್ಲಿ ಪ್ರಾಣಿಗಳ ಪಾತ್ರ ಪ್ರಧಾನವಾಗಿದೆ. ಮಾಟ ಮಾಡಲು ಮತ್ತು ಮಾಟ ತೆಗೆಯಲು ಹಂದಿ ಮರಿಗಳು ಅಥವಾ ಕೋಳಿ ಬೇಕು. ಸೋಂಕಿನ ಅನ್ನ ಮಾಡಲು ಕೋಳಿ ಅಥವಾ ಹಂದಿಯ ರಕ್ತಬೇಕು. ಅಷ್ಟೇ ಅಲ್ಲದೇ ದೇವರು ಚೌಡಿ, ಮಾರಿ ಮಸಣಿಗಳನ್ನು ಒಲಿಸಿಕೊಳ್ಳಲು ಕೋಳಿ ಕುರಿಗಳು ಬೇಕು. ಕ್ರೂರವಾದ ಮಾರಿಗಳಿಗೆ ಹಂದಿ ನಾಲಗೆಯ ಮೇಲೆ ದೀಪ ಅಥವಾ ಕರಿಹೋತನ ತಲೆಯ ಮೇಲೆ ದೀಪ ಉರಿಯಬೇಕು. ಮೋಸ ಮಾಡಿದವನಿಗೆ ತಕ್ಕ ಶಾಸ್ತಿ ಮಾಡಲು ಕೊನೆಯ ಪಕ್ಷ ಒಂದು ಕೋಳಿ ಮೊಟ್ಟೆಯಾದರೂ ಬೇಕು. ಒಂದು ಪ್ರಾಣಿಗೆ ಮತ್ತೊಂದು ಪ್ರಾಣಿ ಬಲಿ ಬೇಕು. ಪ್ರಾಣಿಬಲಿಯು ಇಲ್ಲದೆ ಮಾಟ ಮಂತ್ರಗಳು ನಡೆಯುತ್ತಲೇ ಇರಲ್ಲಿಲ್ಲ. ಆದರೆ ಶಿಷ್ಟ ಜನಪದರಲ್ಲಿ ಶಾಖಾಹಾರಿ ಧರ್ಮಗಳಲ್ಲಿ ಹುಟ್ಟಿಕೊಂಡಾಗ ಅದು ಸಸ್ಯಬಲಿಯಾಗಿ ಮಾರ್ಪಟ್ಟವು. ಹೇಗೆಂದರೆ ಮೇಲೆ ಹೇಳಿದಂತೆ ಕುಂಬಳಕಾಯಿ, ತೆಂಗಿನಕಾಯಿ, ನಿಂಬೆಹಣ್ಣು ಅನ್ನದ ಮೂಲಕ ಮತ್ತು ಓಕುಳಿ ನೀರಿನ ಮೂಲಕ ಬಲಿ ಕೊಡುತ್ತಾರೆ ಎಂಬುದನ್ನು ಗಮನಿಸಬೇಕು. ಇದನ್ನೆಲ್ಲಾ ಗಮನಿಸಿದರೆ ಅವರವರ ಆಹಾರ ಪದ್ಧತಿಯಿಂದಲೇ ಇದೆಲ್ಲಾ ನಡೆಯುವುದು ಎಂಬುದನ್ನು ಗಮನಿಸಬಹುದು. ಇತ್ತೀಚಿನ ದಿನಗಳಲ್ಲಿ ಮಂತ್ರವಾದಿಗಳು ಮಾಟ ಮಾಡಲು, ಮಾಟ ತೆಗೆಯಲು ನಿಂಬೆಹಣ್ಣನ್ನೇ ಬಳಸುವುದನ್ನು ನಾವು ನೋಡಬಹುದು. ಏಕೆಂದರೆ ಈಗ ಹಂದಿಗಳ ಸಂಖ್ಯೆಯೂ ಕಡಿಮೆಯಾಗಿದೆ. ಅಲ್ಲದೇ ಬೆಲೆಯೂ ಜಾಸ್ತಿಯಾಗಿದೆ. ಆದ್ದರಿಂದ ಯಾವುದು ಸುಲಭವಾಗಿ ಕಡಿಮೆ ಖರ್ಚಿನಲ್ಲಿ ಆಗುತ್ತದೆಯೇ ಅದನ್ನೇ ಜನರು ಮಾಡುತ್ತಾರೆ.

ಅಡಿ ಟಿಪ್ಪಣಿಗಳು

೧. ಸ.ಚಿ. ರಮೇಶ, ಕರ್ನಾಟಕ ಜನಪದ ಆಚರಣೆಗಳು, ಪುಟ ೬
೨. ಸುಭಾಶ್ಚಂದ್ರ ನಾಟೀಕಾರ, ಕರ್ನಾಟಕದಲ್ಲಿ ಸಿಡಿ ಸಂಪ್ರದಾಯ, ಪುಟ ೧೪
೩. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪುಟ ೨೫೭
೪. ಸ.ಚಿ.ರಮೇಶ, ಕರ್ನಾಟಕ ಜನಪದ ಆಚರಣೆಗಳು, ಪುಟ ೭
೫. ಕುರ್‌ಆನ್ ಗ್ರಂಥ, ೫. ೨೮, ೨೯
೬. ಅದೇ ಗ್ರಂಥ ಪುಟ ೧೦೮
೭. ಅದೇ ಗ್ರಂಥ, ಪುಟ ೨೨, ೩೭
೮. ಕುರ್ ಆನ್, ಪುಟ ೨೨, ೩೬
೯. ಅದೇ, ಪುಸ್ತಕ....
೧೦. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪುಟ ೨೫೮
೧೧. ವಿವೇಕ ರೈ, ತುಳು ಜನಪದ ಸಾಹಿತ್ಯ, ಪುಟ ೧೮೨
೧೨. ವಿವೇಕ ರೈ, ತುಳು ಜನಪದ ಸಾಹಿತ್ಯ, ಪುಟ ೧೮೮
೧೩. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪುಟ ೨೫೮
೧೪. ಅದೇ, ಪುಟ ೨೫೫
೧೫. ಅದೇ, ಪುಟ ೨೫೪
೧೬. ಅಂಬಳಿಕೆ ಹಿರಿಯಣ್ಣ, ಜಾನಪದ ವೀಕ್ಷಣೆ, ಪುಟ ೯೭
೧೭. ಅಂಬಳಿಕೆ ಹಿರಿಯಣ್ಣ, ಜಾನಪದ ಅಲೋಚನೆಗಳು, ಪುಟ ೨೩
೧೮. ರಹಮತ್ ತರೀಕೆರೆ, ಪ್ರಜಾವಾಣಿ, ೨೦೧೬, ಸಾಪ್ತಾಹಿಕ ಪುರವಣಿ
೧೯. ಅಂಬಳಿಕೆ ಹಿರಿಯಣ್ಣ, ಜಾನಪದ ಅಲೋಚನೆಗಳು, ಪುಟ ೯೮
೨೦. ಸುಬಾಶ್ಚಂದ್ರ ನಾಟೀಕಾರ, ಕರ್ನಾಟಕದಲ್ಲಿ ಸಿಡಿ ಸಂಪ್ರದಾಯ, ಪುಟ ೩೫
೨೧. ಅಂಬಳಿಕೆ ಹಿರಿಯಣ್ಣ, ಜಾನಪದ ವೀಕ್ಷಣೆ, ಪುಟ ೧೦೧
೨೨. ಚಿದಾನಂದಮೂರ್ತಿ, ಪುಟ ೩೦೫
೨೩. ಚಂದ್ರಶೇಖರ ಕಂಬಾರ, ನರಬಲಿ ಲೇಖನ, ಪುಟ ೮೮೫
೨೪. ಅದೇ, ಪುಟ ೨೪೯
೨೫. ಅದೇ, ಪುಟ ೨೫೬
೨೬. ಎಚ್.ನರಸಿಂಹಯ್ಯ, ಗದ್ಯಸಿರಿ ಲೇಖನ, ೨೦೧೪, ಪುಟ ೨೧
೨೭. ಲಕ್ಕಪ್ಪಗೌಡ, ಜನಪದ ಆಚರಣೆಗಳು, ಪುಟ ೧೫೫

೨೮. ರಾಮಕೃಷ್ಣ, ಪ್ರಾಣಿಬಲಿ ಆಚರಣೆ, ಪುಟ ೧೮೬

೨೯. ಸಿದ್ದಲಿಂಗಯ್ಯ, ಗ್ರಾಮದೇವತೆಗಳು, ಪುಟ ೨೬೦

೩೦. ದಿ ಹೆರಿಟೇಜ್ ಇಶ್ಯೂ, ಸಂಚಿಕೆ, ೬ ಸಂಚಿಕೆ, ೩ ೧೯೮೮

೩೧. ಟಿ ಎಸ್. ಸತ್ಯನಾಥ, ನರಬಲಿ, ಪುಟ ೮

೩೨. ಅದೇ, ಪುಟ ೮

೩೩. ಅದೇ, ಪುಟ ೨೦

೩೪. ಶುಭಾಶ್ಚಂದ್ರ ನಾಟೀಕಾರ, ಕರ್ನಾಟಕದಲ್ಲಿ ಸಿಡಿ ಸಂಪ್ರದಾಯ, ಪುಟ ೪೯

೩೫. ಪ್ರಜಾವಾಣಿ ದಿನ ಪತ್ರಿಕೆ, ೨೦೧೬, ಸಾಪ್ತಾಹಿಕ ಪುರವಣಿ

೩೬. ಪ್ರಜಾವಾಣಿ ದಿನ ಪತ್ರಿಕೆ, ೨೦೧೬, ಸಾಪ್ತಾಹಿಕ ಪುರವಣಿ

೩೭. ಶ್ರೀನಿವಾಸ ಮೂರ್ತಿ, ಸಂಪಾದಕರು, ಜನ್ನನ ಯಶೋಧರ ಚರಿತ್ರೆ, ಪುಟ ೫೧

೩೮. ಜನ್ನ, ಯಶೋಧನ ಚರಿತೆ, ಪುಟ ೫೩

೩೯. ಬಸವಣ್ಣ, ವಚನ ಸಾಹಿತ್ಯ ಸಂಪುಟ–೨, ಪುಟ ೨೮

೪೦. ಸುಬ್ರಮಣಿ ಸುಣ್ಣಂಗೂರ್, ತುಳುನಾಡಿನ ಮಾರಿಯಮ್ಮ, ಪುಟ ೨೨೫

೪೧. ಬಸವಣ್ಣ, ವಚನ ಸಾಹಿತ್ಯ ಸಂಪುಟ–೩, ಪುಟ ೪೪

೪೨. ಲಕ್ಷ್ಮೀದೇವಿ, ಕೋಲಾರ ಜಿಲ್ಲೆಯ ಐತಿಹ್ಯಗಳು, ಪುಟ ೧೩೧

ಅಧ್ಯಾಯ : ಮೂರು

ಜನಪದ ಆಚರಣೆಗಳಲ್ಲಿ ಬಲಿಪದ್ಧತಿ

೩.೧. ಬಳ್ಳಾರಿ ಜಿಲ್ಲೆಯ ಭೌಗೋಳಿಕ ಪರಿಚಯ

೩.೨. ಜೀವನಾವರ್ತನ ಆಚರಣೆಗಳಲ್ಲಿ ಬಲಿಪದ್ಧತಿ

೩.೩. ವಾರ್ಷಿಕಾವರ್ತನ ಆಚರಣೆಗಳಲ್ಲಿ ಬಲಿಪದ್ಧತಿ

೩.೪. ಬಲಿಪದ್ಧತಿಯಲ್ಲಿ ನಂಬಿಕೆ ಮತ್ತು ನಿಷೇಧಗಳು

ಅಧ್ಯಾಯ : ಮೂರು

ಜನಪದ ಆಚರಣೆಗಳಲ್ಲಿ ಬಲಿಪದ್ಧತಿ

ಪ್ರಸ್ತಾವನೆ

ಪ್ರಸ್ತುತ ಅಧ್ಯಯನಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತಿರುವ ಗ್ರಾಮದೇವತೆಗಳ ಆರಾಧನೆಯನ್ನು ಲಕ್ಷಿಸಿಕೊಂಡು ಕ್ಷೇತ್ರಕಾರ್ಯ ಮಾಡುವ ಮೂಲಕ ಮಾಹಿತಿಗಳನ್ನು ದಾಖಲು ಮಾಡಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯಾದ್ಯಂತ ಒಟ್ಟು ೭ ತಾಲೂಕುಗಳಲ್ಲಿ ಪ್ರಾಣಿಬಲಿಗಳು ನಡೆಯುತ್ತಿವೆ. ಇಲ್ಲಿ ಪ್ರಾಣಿಬಲಿಗೆ ಹೆಚ್ಚು ಮಹತ್ವವನ್ನು ನೀಡಿ ಅಧ್ಯಯನ ಮಾಡಲಾಗಿದೆ. ಎಲ್ಲಿ ಪ್ರಾಣಿಬಲಿಗಳು ನಡೆಯುತ್ತವೆಂದು ಪಟ್ಟಿ ಮಾಡಿಕೊಂಡು ಆ ಆಚರಣೆಯಲ್ಲಿ ಪ್ರಾಣಿಬಲಿಗಳನ್ನು ಗುರುತಿಸಿ ಚರ್ಚೆ ಮಾಡಲಾಗಿದೆ. ಅದಕ್ಕೆ ರೂಪಕೊಡುವುದು ಬಹುಮುಖ್ಯ ವಾಗುತ್ತದೆ.

ಬಳ್ಳಾರಿ ಜಿಲ್ಲೆಗೆ ತನ್ನದೇ ಅದ ಚರಿತ್ರೆ ಇದೆ. ವಾಣಿಜ್ಯ ನಗರಿಯಾಗುತ್ತಿರುವ ಸಂದರ್ಭದಲ್ಲಿ ಈ ಪ್ರಾದೇಶಿಕ ಗ್ರಾಮದೇವತೆಗಳ ಆಚರಣೆಗಳಲ್ಲಿ ಪ್ರಾಣಿಬಲಿಗಳು ಎಷ್ಟರಮಟ್ಟಿಗೆ ಜನಸಾಮಾನ್ಯರ ಮಚ್ಚುಗೆಯನ್ನು ಪಡೆದುಕೊಳ್ಳುತ್ತೆಂದು ಗಮನಿಸುವುದು ಇದೆ. “ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ ತಾಲೂಕುಗಳು ೭. ೧.ಹೊಸಪೇಟೆ ೨.ಬಳ್ಳಾರಿ ೩.ಸಿರುಗುಪ್ಪ ೪.ಕೂಡ್ಲಿಗಿ ೫.ಹೂವಿನ ಹಡಗಲಿ ೬. ಸೊಂಡೂರು ೭. ಹಗರಿಬೊಮ್ಮನಹಳ್ಳಿ. ಬಳ್ಳಾರಿ ಜಿಲ್ಲೆಯ ವಿಸ್ತೀರ್ಣ ೦.೮,೪೪೭ ಚ.ಕಿ.ಮೀ. ಇದು ರಾಜ್ಯದಲ್ಲಿ ೮ನೇ ಸ್ಥಾನದಲ್ಲಿದೆ. ಈ ಜಿಲ್ಲೆಯ ಜನಸಂಖ್ಯೆ ೧೬,೫೦ ಲಕ್ಷ ಇದು ರಾಜ್ಯದಲ್ಲಿ ೯ನೇ ಸ್ಥಾನದಲ್ಲಿದೆ. ಈ ಜಿಲ್ಲೆಯ ಪ್ರತಿಯೊಬ್ಬ ಮನುಷ್ಯನಿಗೂ ಒಂದಲ್ಲ ಒಂದು ಕಲೆ ಇದ್ದೇ ಇರುತ್ತದೆ. ಅದಕ್ಕೆ ವೇದಿಕೆ ಮುಖ್ಯವಾಗಿ ಬೇಕು. ಈ ಜಿಲ್ಲೆಯಲ್ಲಿ ಸುಮಾರು ಜನ ರಂಗಕಲಾವಿದರು, ರಂಗನಟಿಯರು ಇದ್ದಾರೆ. ಉದಾಹರಣೆಗೆ ಏಣಗಿಯ ಕೆ.ಖಾಸಿಂ ಸಾಹೇಬರು, ಮರಿಯಮ್ಮನಹಳ್ಳಿ ನಾಗರತ್ನಮ್ಮ, ಸೋಗಿ ನಾಗರತ್ನ, ಕೂಡ್ಲಿಗಿ ಪದ್ಮ, ಹುಲಿಗೇಶ್, ದೀಲಿಪ್ ಕುಮಾರ್, ಎಂ.ಪಿ.ಪ್ರಕಾಶ್, ತೋಮ, ಶಂಕ್ರಯ್ಯ, ಹೆಚ್.ಎಂ,

ಕೊಟ್ರಯ್ಯ, ನಾಗರಾಜಶೆಟ್ಟಿ, ನೂರಾರು ಜನರು ಇದ್ದಾರೆ. ಯಡ್ರಮ್ಮನಹಳ್ಳಿ ಭರಮಪ್ಪನಂತಹ ತೊಗಲು ಬೊಂಬೆಯಾಟ ಕಲಾವಿದ, ಕಿಳ್ಳಿಕ್ಯಾತರು ಇದ್ದಾರೆ." ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಸಂದರ್ಭವನ್ನು ಹಲವು ಬಗೆಯಲ್ಲಿ ಗುರುತಿಸಬಹುದು.[೧]

ಬಳ್ಳಾರಿ ಜಿಲ್ಲೆಯು ಭೌಗೋಳಿಕವಾಗಿ ಏಳು ತಾಲೂಕುಗಳನ್ನು ಹೊಂದಿದೆ. ಈ ಏಳು ತಾಲೂಕುಗಳಲ್ಲಿ ಗ್ರಾಮದೇವತೆ ಮಾಯಮ್ಮ, ಮಾರಮ್ಮ, ಕಾಳಮ್ಮ, ದುರುಗಮ್ಮ, ಅಕ್ಕಮ್ಮ ಮುಂತಾದ ಹೆಸರುಗಳಿಂದ ಕರೆದು ಹಬ್ಬ ಆಚರಿಸುತ್ತಾರೆ. ಇಂತಹ ಹಬ್ಬ ಜಾತ್ರೆಗಳಿಗೆ ಹೋಗಿ ಕ್ಷೇತ್ರಕಾರ್ಯ ಮಾಡುವ ಮೂಲಕ ಮಾಹಿತಿಗಳನ್ನು ಕಲೆಹಾಕಲಾಗಿದೆ. "ಈ ದೇವತೆಗಳ ಬಗೆಗೆ ವಿಶೇಷವೆನ್ನಬಹುದಾದ ಮೌಖಿಕ ಸಾಹಿತ್ಯವೇನೂ ಪ್ರಚಲಿತವಿಲ್ಲ. ಸೋಬಾನೆ ರೂಪದಲ್ಲೂ, ಭಜನೆ ರೂಪದಲ್ಲೂ ಗಾಳೆಮ್ಮನನ್ನು ಸ್ತುತಿಸುವ ಹಲವು ಹಾಡುಗಳು ಲಭಿಸುತ್ತವೆ. ಅಂಥ ಕೆಲವು ಹಾಡುಗಳಲ್ಲಿ ಗಾಳೆಮ್ಮನ ತೇರಿಗೆ ಹೊರಡುವ ಸಿದ್ಧತೆಯ ಬಗ್ಗೆ, ಪ್ರಯಾಣದ ಬಗ್ಗೆ ವಿವರಗಳು ಸಿಗುತ್ತವೆ. ಮತ್ತೆ ಕೆಲವು ಹಾಡುಗಳಲ್ಲಿ ಗಾಳೆಮ್ಮನ ಭೌತಿಕ ರೂಪ ಲಾವಣ್ಯಗಳು, ಉಡುಗೆ ತೊಡುಗೆಗಳು ವರ್ಣಿತವಾಗಿವೆ. ಇವುಗಳಲ್ಲಿ ಆಕೆಯ ಸಹದೇವತೆಗಳ ವಿವರಗಳೂ ಇವೆ."[೨] ಮೌಖಿಕ ಸಾಹಿತ್ಯ ಪರಂಪರೆಯನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಬಳ್ಳಾರಿ ಜಿಲ್ಲೆಗೆ ಸೇರಿದ ಹೊಸಪೇಟೆ ಪ್ರಾಂತ್ಯದ ಗಾಳೆಮ್ಮನ ಸಂಪೂರ್ಣ ಮಾಹಿತಿಗಳನ್ನು ಕಲೆಹಾಕಲು ಪ್ರಯತ್ನಿಸಲಾಗಿದೆ. ಇಲ್ಲಿ ಜಾನಪದ ಸಾಹಿತ್ಯ ಪರಂಪರೆಯಲ್ಲಿ ಮೌಖಿಕ ಸಾಹಿತ್ಯಕ್ಕೆ ಹೆಚ್ಚು ಮಹತ್ವ ಇರುವುದು ಇದೆ. ಮೌಖಿಕ ಸಾಹಿತ್ಯ ಹಿನ್ನೆಲೆಯಲ್ಲಿ ಹಲವು ಅಧ್ಯಯನಗಳು ಸಾಗಬೇಕಾಗುತ್ತದೆ.

ಬಳ್ಳಾರಿ ಜಿಲ್ಲೆಯಾದ್ಯಂತ ಆಚರಣೆ ನಡೆಯುವ ಗ್ರಾಮದೇವತೆಗಳ ಹಿನ್ನೆಲೆಯಲ್ಲಿ ಪ್ರಾಣಿಬಲಿಗಳು ನಡೆಯುತ್ತವೆ. ಈ ಪ್ರಾಣಿಬಲಿಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಅಧ್ಯಯನ ನಡೆಸಲಾಗುತ್ತದೆ. ತೌಲನಿಕ ಅಧ್ಯಯನಕ್ಕಾಗಿ ಸಂಬಂಧಿಸಿದಂತೆ ಕರ್ನಾಟಕದ ಇತರೆ ಭಾಗಗಳಲ್ಲಿ ನಡೆಯುವ ಪ್ರಾಣಿಬಲಿಗಳನ್ನು ಗಮನಿಸಲಾಗಿದೆ. ನಂಬಿಕೆಯ ಮೂಲಕ ಆಚರಣೆ–ಆರಾಧನೆಗಳು ನಡೆಯುತ್ತವೆ. ಆದರೂ ಗ್ರಾಮದೈವಗಳ–ಗ್ರಾಮದೇವತೆಗಳ, ಗ್ರಾಮದೇವರು, ಶಿಷ್ಟದೇವತೆಗಳ (ಪುರುಷ–ಸ್ತ್ರೀ) ಪರಿಕಲ್ಪನೆಯಲ್ಲಿ ಯಾವುದೇ ಒಂದು ಗ್ರಾಮದೈವಕ್ಕೆ ತನ್ನದೇ ಆದ ಯಾವುದಾದರೂ ಒಂದು ವಸ್ತುವನ್ನು ಅಥವಾ ಪ್ರಾಣಿಯನ್ನು ಅರ್ಪಿಸಿ ದೇವರುಗಳನ್ನು ತೃಪ್ತಿಪಡಿಸಿ, ಶಾಂತಿಪಡಿಸುವುದು ಉದಾಹರಣೆಗಳು ದೊರೆಯುತ್ತವೆ. "ದೇವಾಲಯ ಸಂಸ್ಕೃತಿಯ ಕೇಂದ್ರ ಬಳ್ಳಾರಿ ಜಿಲ್ಲೆ. ಅದರಲ್ಲೂ ಈ ಪ್ರದೇಶದ ಪಂಪಾಕ್ಷೇತ್ರ, ಸಂಡೂರಿನ ಕಾರ್ತಿಕೇಯ ತಪೋಭೂಮಿ, ಮೈಲಾರ, ಕುರುವತ್ತಿ, ಕುರುಗೋಡು, ಉಜ್ಜನಿ ಮುಂತಾದವು ಪ್ರಾಚೀನ ಧಾರ್ಮಿಕ ಪುಣ್ಯಕ್ಷೇತ್ರಗಳಾಗಿವೆ. ಜೈನ, ವೈಷ್ಣವ, ಶೈವ, ಇತರೆ ಧರ್ಮದ

ದೇವಾಲಯಗಳು ಸೇರಿದಂತೆ ಸುಮಾರು ಒಂದು ಸಾವಿರಕ್ಕೂ ಹೆಚ್ಚು ದೇವಾಲಯಗಳಿವೆ. ನಾಗರಶೈಲಿ, ದ್ರಾವಿಡಶೈಲಿ, ಜೊತೆಗೆ ಜಿಲ್ಲೆಯ ವಿಶಿಷ್ಟವಾದ ವಿಜಯನಗರ ಶೈಲಿಗಳಿಂದ ಇವು ಕಂಗೊಳಿಸುತ್ತವೆ. ಆತ್ಮಪರಮಾತ್ಮರ ಧರ್ಮ ಅವರವರ ಭಾವದಂತೆ ದೇವರನ್ನು ಕಾಣಲು ಹಂಬಲಿಸುತ್ತದೆ. ವೈದಿಕ ಮೊದಲಾದ ಧರ್ಮಗಳು ಪರಮಾತ್ಮನನ್ನು ಸಾಕಾರ ರೂಪದಲ್ಲಿ ಮೂರ್ತಿಕರಿಸಿ ದೇವಾಲಯ ನಿರ್ಮಿಸಿವೆ. ಜೈನ, ಬೌದ್ಧರು ಪರಮಾತ್ಮನ ನಿರಾಕರಿಸಿ ಆತನ ಸ್ಥಾನದಲ್ಲಿ ಜೈನ-ಬೌದ್ಧರೆನಿಸಿ ಆರಾಧಿಸುವ ಸಲುವಾಗಿ ಸ್ಮಾರಕ ಸ್ಥಾಪಿಸುತ್ತಿವೆ. ಧರ್ಮದ ಅನುಯಾಯಿಗಳಾದ ವೀರಶೈವ, ಕ್ರೈಸ್ತ, ಮುಸ್ಲಿಂ ಸಮೂಹಗಳು ತಮ್ಮ ಮಹಾತ್ಮರನ್ನೆ ಪರಮಾತ್ಮರೆಂದು ಭಾವಿಸಿಕೊಂಡು ಅವರ ಆರಾಧನೆಗೆ ಸಮೂಹ ಸಂಸ್ಕೃತಿ ಕೇಂದ್ರಗಳೆನಿಸುವ ಅನುಭಾವ ಮಂಟಪ, ಮಸೀದಿ, ಚರ್ಚುಗಳನ್ನು ಹುಟ್ಟುಹಾಕಿವೆ. ಹೀಗೆ ಜಿಲ್ಲೆಯ ಹಲವು ಜನಸಮೂಹದ ದೇವಾಲಯ ನಿರ್ಮಾಣ, ಕಾಲಾನಂತರದಲ್ಲಿ ಸಂಘರ್ಷದೊಂದಿಗೆ ಅವುಗಳ ನಾಶ ನಿರಂತರವಾಗಿ ನಡೆದುಕೊಂಡು ಬಂದಿವೆ. ಹೀಗಾಗಿ ಮೊದಲಿದ್ದ ಜೈನ ಬಸದಿಗಳು ಶಿವದೇವಾಲಯಗಳಾಗಿ, ಶಿವದೇವಾಲಯಗಳು ಮತ್ತಾವುದೋ ರೂಪದಲ್ಲಿ ಪರಿವರ್ತನೆಗೊಂಡ ನಿದರ್ಶನಗಳು ಜಿಲ್ಲೆಯ ಮತೀಯ ಸಾಮರಸ್ಯಕ್ಕೆ ಸಾಕ್ಷಿಯಾಗಿವೆ." ಎಂದು ಜಿಲ್ಲೆಯ ಸೊಗಡನ್ನು ಪ್ರಸ್ತಾಪಿಸುತ್ತಾರೆ.[೩]

ಬಳ್ಳಾರಿ ಜಿಲ್ಲೆ ಮುಖ್ಯವಾಗಿ ಅನೇಕ ವ್ಯವಹಾರಗಳನ್ನು ಒಳಗೊಂಡಿದೆ. ಬೃಹತ್‌ಗಾತ್ರದ ಬಂಡೆಗಳಿಂದ ರಚನೆಯಾದ ಬೆಟ್ಟಗಳು, ಹಳ್ಳ, ನದಿ, ತೊರೆಗಳು, ಕಾಣಿಸಿಗುತ್ತವೆ. ನೀರಿನ ನೆಲೆಗಳು ಅದಿರಿನ ನಿಕ್ಷೇಪಗಳು, ಭೂಮಿಯ ಫಲವತ್ತಾದ ಭೂಭಾಗಗಳು ಸೇರಿಕೊಂಡು ಸಮೃದ್ಧಿಯನ್ನು ಪಡೆದುಕೊಂಡಿದೆ. ಆದಿ ಶಿಲಾಯುಗದಿಂದ ಮಾನವನ ತಾಣವಾಗಿ ಈ ಜಿಲ್ಲೆಯು ಪ್ರಮುಖ ಸ್ಥಾನವನ್ನು ಪಡೆದುಕೊಳ್ಳುತ್ತದೆ. "ಪ್ರತಿಯೊಂದು ಸ್ಥಳವೂ ತನ್ನದೇ ಆದ ಸ್ಥಳ ಐತಿಹ್ಯ ಮತ್ತು ಸ್ಥಳಪುರಾಣವನ್ನು ಹೊಂದಿರುತ್ತದೆ. ಸ್ಥಳ ಐತಿಹ್ಯ ಪುರಾಣದ ನೆಲೆಯ ಅಂಶಗಳನ್ನು ಒಳಗೊಂಡಂತೆ ಮನಶ್ಯಾಸ್ತ್ರ, ಮಾನವಶಾಸ್ತ್ರ, ಇತಿಹಾಸ ಜಾನಪದ ಇತ್ಯಾದಿ ಯಾವುದೇ ಅಂಶಗಳನ್ನು ಒಳಗೊಂಡಿರುತ್ತದೆ. ಆದರೆ ಸ್ಥಳ ಪುರಾಣವು ಯಾವುದಾದರೂ ಪೌರಾಣಿಕ ಘಟನೆಯೊಂದಿಗೆ ತನ್ನ ಸಂಬಂಧವನ್ನು ಗುರುತಿಸಿಕೊಂಡಿರುತ್ತದೆ. ಐತಿಹಾಸಿಕ ವಿವರಗಳು ಇಲ್ಲವೇ ಜಾನಪದ ಅಂಶಗಳು ಮೌಖಿಕ ಪರಂಪರೆಯಲ್ಲಿ ಉಳಿದಿದ್ದು ಬೆಳವಣಿಗೆಯನ್ನು ಪಡೆಯುವ ಪ್ರತಿ ಹಂತದಲ್ಲೂ ಅಲ್ಪ ಸ್ವಲ್ಪ ವ್ಯತ್ಯಾಸವಾಗುವುದು ಸಹಜ. ಇಂಥ ಸಂದರ್ಭದಲ್ಲಿ ಜನಪದರು ತಾವು ಕೇಳಿದ ಇಲ್ಲವೇ ನೋಡಿದ ಘಟನೆಗಳೊಂದಿಗೆ ತಮ್ಮ ನಿರೂಪಣೆಗಳನ್ನು ಮೇಳೈಸಿಕೊಳ್ಳುತ್ತಾರೆ. ಕುಮಾರರಾಮನೆಂಬ ಚಾರಿತ್ರಿಕ ವ್ಯಕ್ತಿಗೆ ಪರನಾರಿ ಸೋದರನೆಂಬ ಜನಪದ ಸಾಮಾಜಿಕ ಆಶಯದ ಮೌಲ್ಯ ಹಾಗೂ ಆತ ಅರ್ಜುನನ

ಅವತಾರವೆಂಬ ಪುರಾಣದ ಸಂಬಂಧ ಇತ್ಯಾದಿ ಭೂಷಣಗಳಿವೆ. ಜನಪದವಲಯವು ಆತನನ್ನು ತಮ್ಮ ಮೂರ್ತ ಅಮೂರ್ತ ಭಾವನೆಗಳ ಅನುಭಗಳ ಹಾಗೂ ಆಶಯಗಳ ಜೊತೆಗೆ ಚಿತ್ರಿಸಿಕೊಂಡಿದ್ದನ್ನು ಇಂಥ ಕಾರಣಗಳು ಸಾರುತ್ತವೆ. ಅಲ್ಲದೆ ತಮ್ಮ ಅನುಭವದ ಮೂಲಕ ವ್ಯಕ್ತಿತ್ವವನ್ನು ವ್ಯಕ್ತಿಯನ್ನು ಅರ್ಥೈಸಿಕೊಳ್ಳುವ ರೀತಿಗೆ ಇಂಥವು ಸಾಟಿಯಾಗುತ್ತವೆ." ಎಂದು ಮಾತನಾಡುತ್ತಾರೆ.[೪] ಇಲ್ಲಿ ಸ್ಥಳ ಮಹತ್ವದ ಬಗ್ಗೆ ಕೂಲಂಕಶವಾಗಿ ಬರೆಯುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಸ್ಥಳಗಲ್ಲಿ ಬಲಿಯಾಗುವುದು ಇದೆ. ಪ್ರಾಣಿಬಲಿ ಮಾಡಲಿಕ್ಕೆ ಅನೇಕ ಉದಾಹರಣೆಗಳನ್ನು ನೀಡಬಹುದಾದರೂ ಪುರಾಣ ಕಲ್ಪಿತ ಪ್ರಕಾರವಾಗಿ ನಡೆಯುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಕೂಡ ಸ್ಥಳ ಐತಿಹ್ಯಗಳು, ಸ್ಥಳ ಮಹತ್ವಗಳು ಇರುತ್ತವೆ.

ಕ್ಷೇತ್ರಕಾರ್ಯ ಮಾಡುವಾಗ ಗ್ರಾಮಗುಡಿಗಳ ರಚನಾವಿನ್ಯಾಸಕ್ಕೂ ಈ ಜಿಲ್ಲೆಯಲ್ಲಿ ಕೋಟೆ ಕೊತ್ತಲುಗಳ ವಿನ್ಯಾಸಕ್ಕೂ ತಳಕುಹಾಕುತ್ತದೆ ಎಂದು ಊಹಿಸಲು ಒಂದು ಅವಕಾಶ ಇದೆ. ಬಳ್ಳಾರಿ ಜಿಲ್ಲೆಯಲ್ಲಿ ಕೋಟೆ ಕೊತ್ತಲುಗಳ ಬಗ್ಗೆ ಈ ರೀತಿಯಾದ ಮಾಹಿತಿಗಳು ಲಭ್ಯವಾಗುತ್ತವೆ. ಕೊಟ್ರೇಶ್ ಅವರು "ಪ್ರಾಗೈತಿಹಾಸಕಾಲದ ಜನಸಂಸ್ಕೃತಿಯನ್ನು ಗಮನಿಸಿದರೆ ಹಲವು ಪ್ರಭಾವ ಅಂಶಗಳು ಕಂಡುಬರುತ್ತವೆ. ಈ ಅವಧಿಯಲ್ಲಿ ಮಾನವನು ಬೇಟೆಯಾಡುತ್ತಾ ಆಹಾರ ಸಂಗ್ರಹಿಸುತ್ತಾ ಜೀವನ ನಡೆಸುತ್ತಿದ್ದನು. ಆತನು ನಿರಂತರವಾಗಿ ಪ್ರಕೃತಿಯೊಡನೆ ಸೆಣಸಬೇಕಾಗಿತ್ತು. ಮಳೆ, ಗುಡುಗು, ಸಿಡಿಲಿ ಕಾಳ್ಗಿಚ್ಚು ನಿಸರ್ಗದಲ್ಲಿ ನಡೆಯುವ ಇಂತಹ ಘಟನೆಗಳು ಆತನಲ್ಲಿ ಭಯ ಹುಟ್ಟಿಸಿದವು. ಇವುಗಳಿಂದ ರಕ್ಷಣೆ ಪಡೆಯುವ, ರಕ್ಷಣೆ ಪಡೆಯುವುದಕ್ಕಾಗಿ ದೊಡ್ಡ ದೊಡ್ಡ ಬಂಡೆಗಳ ಆಶ್ರಯದಲ್ಲಿ ವಾಸಿಸಿದನು. ತಾನು ಸುರಕ್ಷಿತವಾಗಿ ಇರಬೇಕೆಂದರೆ ಬೃಹತ್ ಬಂಡೆಗಳ ಸಮೂಹಗಳ ಮಧ್ಯದಲ್ಲಿ ಎಂದು ಅರಿತನು. ಇಂಥ ಬೃಹತ್ ಬಂಡೆಗಳು ಸಮೂಹಗಳು ಗುಡೇಕೋಟೆ, ಜರಿಮಲೆ, ಕುರುಗೋಡು, ಹಂಪಿ ಮುಂತಾದ ಸ್ಥಳಗಳಲ್ಲಿ ಕಾಣಿಸಿಗುತ್ತವೆ. ಹೀಗೆ ರಕ್ಷಣೆಯ ಕಲ್ಪನೆಯಲ್ಲಿ ನಾವಿಲ್ಲಿ ಕಾಣಬಹುದು" ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.[೫] ಬೃಹತ್ ಬಂಡೆಗಳ ಸಂದುಗಳಲ್ಲಿ ಮನುಷ್ಯ ಜೀವನ ಮಾಡುವ ಪರಂಪರೆ ಇರುವಾಗ ತನ್ನ ಸುತ್ತಮುತ್ತಲಿನಲ್ಲಿ ಸಿಗುವ ಗುಂಡು ಗುಂಡಾಗಿರುವ ಕಲ್ಲುಗಳನ್ನು ದೇವರೆಂದು ಭಾವಿಸಿ ಪೂಜಿಸಿರಬೇಕು ಎಂಬುದಕ್ಕೆ ಬಳ್ಳಾರಿ ಜಿಲ್ಲೆ ಒಂದು ಉತ್ತಮ ಉದಾಹರಣೆಯಾಗುತ್ತದೆ.

ಬಳ್ಳಾರಿ ಪ್ರದೇಶದಲ್ಲಿ ಶಾತವಾಹನರು, ಮೌರ್ಯರು, ಬಾದಾಮಿ ಚಾಲುಕ್ಯರು, ಪಲ್ಲವರು, ರಾಷ್ಟ್ರಕೂಟರು, ಕಳಚೂರಿಗಳು, ಕಲ್ಯಾಣ ಚಾಲುಕ್ಯರು, ಕದಂಬರು, ನೊಳಂಬ, ಪಾಂಡ್ಯರು, ಸಿಂಧುರು, ಹೊಯ್ಸಳರು, ಪಾಳೆಯಗಾರರು, ಸಂಡೂರು ಘೋರ್ಪಡೆಯವರು, ಬಿಜಾಪುರದ ಸುಲ್ತಾನರು, ಹಂಡೆ ಪಾಳೆಯಗಾರರು, ಹೈದರಾಲಿ, ಟಿಪ್ಪು, ಬ್ರಿಟಿಷ್ ಮುಂತಾದವರು ತನ್ನ

ರಾಜ್ಯಭಾರವನ್ನು ಮಾಡಿರುವ ಇತಿಹಾಸದ ಉಲ್ಲೇಖಗಳು ದೊರೆಯುತ್ತವೆ. ಕೊಟ್ರೇಶ್ ಅವರು "ಮೌರ್ಯರ ನಂತರ ಆಡಳಿತಕ್ಕೆ ಬಂದ ಶಾತವಾಹನರು ಮಹಾರಾಷ್ಟ್ರ ಕರ್ನಾಟಕ ಮತ್ತು ಆಂಧ್ರಪ್ರದೇಶ ಬಹುಭಾಗವನ್ನು ತಮ್ಮ ಆಡಳಿತ ವ್ಯಾಪ್ತಿಯಲ್ಲಿ ತಂಡುಕೊಂಡರು. ಈ ಅವಧಿಯಲ್ಲಿ ಅವರು ಕರ್ನಾಟಕ ಸನ್ನತಿ ಮತ್ತು ಬನವಾಸಿಗಳಲ್ಲಿ ಕೋಟೆ ಕಟ್ಟಿಕೊಂಡರು" ಎಂದು ದಾಖಲು ಮಾಡುತ್ತಾರೆ.[೬] ಯಾವ ಸಂದರ್ಭದಲ್ಲಿ ಕೋಟೆಗಳನ್ನು ಕಟ್ಟಲು ಪ್ರಾರಂಭ ಮಾಡಿದರೋ ಅದೇ ಸಂದರ್ಭಕ್ಕೆ ಅವರು ನಂಬಿಕೊಂಡು ಬಂದ ದೇವರುಗಳಿಗೆ ದೇವಸ್ಥಾನಗಳನ್ನು ನಿರ್ಮಾಣ ಮಾಡಿದರು. ಬಳ್ಳಾರಿ ಜಿಲ್ಲೆಯಲ್ಲಿ ದೊರೆತ 'ತಾಮ್ರಪಟ ಮತ್ತು ಅಣಜಿ' ಶಾಸನಗಳು ಇದನ್ನು ಉಲ್ಲೇಖಿಸುತ್ತವೆ.

ಬಳ್ಳಾರಿ ಜಿಲ್ಲೆಯಾದ್ಯಂತ ಭಾಷೆ, ಪ್ರಾದೇಶಿಕತೆ, ಸಾಂಸ್ಕೃತಿಕತೆ, ಭೌಗೋಳಿಕತೆ, ಆಚರಣೆಗಳ ಮೂಲಗಳ ಬಗ್ಗೆ ಬೆಳಕು ಚೆಲ್ಲುವ ಕೆಲವು ಗೆಜೆಟಿಯರ್ ಮತ್ತು ವಿದ್ವಾಂಸರು ಬರೆದಿರುವ ಪುಸ್ತಕಗಳು ಇವೆ. ದೇವಸ್ಥಾನಗಳ ನಿರ್ಮಾಣಗಳ ಬಗ್ಗೆ, ವಿಶಿಷ್ಟವಾದ ಕೆತ್ತನೆಗಳ ಬಗ್ಗೆ ಶಾಸನ, ತಾಮ್ರದ ಪಟಗಳಲ್ಲಿ ದೊರೆಯುತ್ತವೆ. ಬಲಿಪದ್ಧತಿಯನ್ನು ಈ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲಾಗಿದೆ. ಹೆಚ್ಚು ಹೆಚ್ಚು ಪ್ರಾಣಿಬಲಿಗಳನ್ನು ಕೊಡುವ ಸ್ಥಳಗಳನ್ನು ಮತ್ತು ಪ್ರದೇಶಗಳಿಗೆ ಮಹತ್ವ ಕೊಡಲಾಗಿದೆ.

ಪ್ರಾದೇಶಿಕ ಹಿನ್ನೆಲೆಯಲ್ಲಿ ಬಳ್ಳಾರಿಯು "ಪ್ರಾಕೃತಿಕ ಸಂಪತ್ತನಲ್ಲಿ ಬೆಟ್ಟಗಳ ಶ್ರೀಮಂತಿಗೆ ಸಿಂಹಪಾಲು ಸಂದರೆ, ಉಳಿದ ಭಾಗ ತುಂಗಭದ್ರಾ ನದಿಗೆ ಸಂಬಂಧಿಸಿದೆ. ಹೊಸಪೇಟೆ, ಸೊಂಡೂರು, ದೇವಗಿರಿ ಪ್ರದೇಶಗಳ ಬೆಟ್ಟಗಳಲ್ಲಿ ಖನಿಜ ನಿಕ್ಷೇಪಗಳಿದ್ದು ಇವು ಅಂತರರಾಷ್ಟ್ರೀಯ ಮಾನ್ಯತೆಯನ್ನು ಪಡೆದುಕೊಂಡಿರುವುದು ಕಾಣಬಹುದು. ಹಂಪಿ ಸುತ್ತಮುತ್ತಲಿನ ಬೃಹದಾಕಾರವಾದ ಕಲ್ಲು ಬಂಡೆಗಳ ಬೆಟ್ಟಗಳು ತುಂಗಭದ್ರಾ ನದಿಯ ಇಕ್ಕಲೆಗಳಲ್ಲಿ ಕಂಗೊಳಿಸುವ ಸಹಜ ಸಂಪತ್ತು, ಬೆಟ್ಟ ಪ್ರದೇಶಗಳ ಗಿರಿಕಂದರಗಳಲ್ಲಿ ವಾಸಿಸುವ ಪ್ರಾಣಿ ಸಂಪತ್ತು, ಸಂರಕ್ಷಿತ ದರೋಜಿ ಕರಡಿಧಾಮ, ಇವು ಜೈವಿಕ ಸಂಪತ್ತಿನ ಭಾಗವಾಗಿದೆ" ಎಂದು ಚರ್ಚೆ ಮಾಡುತ್ತಾರೆ.[೭] ಚರಿತ್ರೆಯನ್ನಾಧರಿಸಿ ಹೇಳುವುದಾದರೆ "ಬಳ್ಳಾರಿ ಜಿಲೆಯನ್ನು ವಿಜಯನಗರ ಪೂರ್ವದ ಚರಿತ್ರೆಯಿಂದ ಈ ಪರಂಪರೆಯನ್ನು ಕಲ್ಪಿಸಬೇಕಾಗುತ್ತದೆ. ಕಂಪ್ಲಿಯ ಸಂಸ್ಥಾನದ ಚರಿತ್ರೆಯ ಬಳ್ಳಾರಿಯ ಚಹರೆಯನ್ನು ಪಾಳೇಗಾರಿಕೆಯ ನೆಲೆಯಿಂದ ಆರಂಭಿಸುತ್ತದೆ. ಇದರ ವಿಸ್ತೃತ ಸಾಮ್ರಾಜ್ಯಶಾಹಿನೆಲೆ ವಿಜಯನಗರದಿಂದ ಅನಾವರಣಗೊಂಡಿದೆ. ಕಂಪಿಲರಾಯ ಮತ್ತು ಕುಮಾರರಾಮರ ಸಾಂಸ್ಕೃತಿಕ ಭಿತ್ತಿಯು ಚರಿತ್ರೆಯದಿಂದಾಚೆ ಐತಿಹ್ಯ, ಪುರಾಣ, ಸಾಹಿತ್ಯ ವಲಯಗಳಿಗೂ ಚಾಚಿಕೊಂಡಿದೆ. ವಿಜಯನಗರದ ಕಥನವು ಚರಿತ್ರೆಯಲ್ಲಿ ಮಾತ್ರವಲ್ಲದೇ ಆಧುನಿಕ ಭಾರತದ ಸ್ವಾತಂತ್ರ್ಯ ಸಂದರ್ಭದ ರಾಷ್ಟ್ರೀಯ ಹೋರಾಟ ಭೂಮಿಕೆಯನ್ನು ಒದಗಿಸಿದೆ. ವಿಜಯನಗರದ ಅರಸರು ಶೈವ ಮತ್ತು ವೈಷ್ಣವ ಮುಂತಾಗಿ ಬಹುಧಾರ್ಮಿಕ

ಸಂಸ್ಕೃತಿಯ ಅಭಿವ್ಯಕ್ತಿ ರೂಪಗಳಾಗಿ ದೇವಾಲಯ ವಾಸ್ತು ಶಿಲ್ಪವನ್ನು ಬೆಳೆಸಿದರು. ಇಂಥದೇ ಬಹುಸಂಸ್ಕೃತಿಗಳ ಸಾಹಿತ್ಯ ಸೃಷ್ಟಿ, ಧಾರ್ಮಿಕ ಉತ್ಸವ–ತೇರು ಆಚರಣೆಗಳನ್ನು ಅಸ್ತಿತ್ವದಲ್ಲಿ ತಂದದ್ದು ಪ್ರೌಢದೇವರಾಯ. ಪ್ರೌಢದೇವರಾಯ 'ಕುರ್ ಆನ್' ಪುಸ್ತಕವನ್ನು ತನ್ನ ಪಕ್ಕದಲ್ಲಿಟ್ಟುಕೊಂಡೇ ರಾಜ್ಯಭಾರ ಮಾಡುತ್ತಿದ್ದ" ಎಂದು ಪ್ರಸ್ತಾಪ ಮಾಡುತ್ತಾರೆ.[೮] ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬಳ್ಳಾರಿಯು ವೈಶಿಷ್ಟ್ಯತೆಯನ್ನು ಗುರುತಿಸುತ್ತದೆ. ಮುಸ್ಲಿಂ ಪಾರುಪತ್ಯ ಕೂಡ ಈ ಪ್ರದೇಶದಲ್ಲಿ ಅಧಿಕವಾಗಿ ಇತ್ತು ಎಂದು ಗುರುತಿಸಬಹುದು.

ಬಳ್ಳಾರಿ ಜಿಲ್ಲೆಯಾದ್ಯಂತ ಬಹು ಭಾಷಿಕರು ನೆಲೆಯಾಗಿರುವುದನ್ನು ಕಾಣಬಹುದು. ತೆಲುಗು, ಹಿಂದಿ, ಕನ್ನಡ ತ್ರಿಭಾಷಾ ಪರಿಸರದ ಇಲ್ಲಿನ ಜನ ಸಮುದಾಯಗಳ ಅಭಿವ್ಯಕ್ತಿ. ತುಂಗಭದ್ರಾ ಪ್ರಾಂತ್ಯದಲ್ಲಿ ವಾಸಮಾಡುತ್ತಿದ್ದ ತಮಿಳರು ತಮಿಳುಭಾಷೆಯನ್ನು ಮಾತನಾಡುತ್ತಾರೆ. ನೀರಾವರಿ ಉತ್ಪನ್ನಗಳ ಜೊತೆಗೆ ವಲಸಿಗರಾಗಿ ಬಂದ ಆಂಧ್ರದ ಭಾಷಿಕರು ತೆಲುಗನ್ನು ಮಾತನಾಡುತ್ತಾರೆ. ಪ್ರವಾಸಿ ತಾಣವಾದ ಹಂಪಿಯಲ್ಲಿ ವಿದೇಶಿಗರು ಬರುವ ಹಿನ್ನೆಲೆಯಲ್ಲಿ ಆಂಗ್ಲಭಾಷೆಯನ್ನು ಮಾತನಾಡುತ್ತಾರೆ. "ಈಗಾಗಿ ಸ್ಟಾಂಡರ್ಡ್ ಕನ್ನಡ, ಗ್ರಾಮೀಣ ಪ್ರದೇಶದ ಆಡುನುಡಿ ಕನ್ನಡ, ತೆಲುಗು ಹಾಗು ಇಂಗ್ಲಿಷ್ ಮಿಶ್ರಣ ಕನ್ನಡ ಇಂತಹ ಬಹುಭಾಷಾ ಸ್ವರೂಪವನ್ನು ಬಳ್ಳಾರಿಯ ಪರಂಪರೆಯಾಗಿದೆ" ಎಂದು ಪ್ರಸ್ತಾಪಿಸುತ್ತಾರೆ.[೯] ಈ ಹಿನ್ನೆಲೆಯಲ್ಲಿ ಗ್ರಾಮದೇವತೆಗಳ ಆಚರಣಾ ಸ್ವರೂಪದಲ್ಲಿ ಅವರದೇ ಅದರ ಭಾಷಾವೈಖರಿಗಳಿಂದ ಸಂಬೋಧಿಸುವುದನ್ನು ಸಾಂಸ್ಕೃತಿಕವಾಗಿ ಗಮನಿಸುತ್ತೇವೆ.

ಆರಾಧನಾ ಭಾಗವಾಗಿ ಮೌಖಿಕಪರಂಪರೆಯೇ ಅತಿ ಹೆಚ್ಚಾಗಿ ಬಳ್ಳಾರಿ ಜಿಲ್ಲೆಯಾದ್ಯಂತ ನಡೆಯುವುದು ಇದೆ. ವಿವಿಧ ರೀತಿಯ ವೈವಿಧ್ಯಮಯವಾದ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಗ್ರಾಮದೈವಗಳಾದ ಶ್ರೀಶಕ್ತಿ ದೇವತೆಗಳು, ಅಲೆಮಾರಿ ದೈವಗಳು, ಸನಾತನ ಗುಡಿಗಳು, ಶಿಷ್ಟದೈವಗಳು, ಜನಪದ ದೈವಗಳು ಮುಂತಾದವು ಅನಾವರಣಗೊಳ್ಳುತ್ತವೆ. ಪುರಾಣ ಕಲ್ಪಿತವಾಗಿ ಸಿಡಿ ಆಚರಣೆಗಳು ನಡೆಯುವುದಿದೆ. ದುರ್ಗಮ್ಮ, ಹುಲಿಗೆಮ್ಮ, ಗಾಳೆಮ್ಮ, ಉಚ್ಚಂಗಿದುರ್ಗಿ, ಆದಿಮರ ಮೈಲಾರ, ಸಂತರ ಗೂಳಿಬಸವೇಶ್ವರ, ಹಂಪೆಯ ವಿರೂಪಾಕ್ಷ ದೈವಸ್ಥಾನಗಳಲ್ಲಿ ವಿವಿಧ ರೀತಿಯ ಆರಾಧನೆಗಳು ವಿಪರೀತವಾಗಿ ಆಚರಣೆಗಳಲ್ಲಿವೆ. ಅದಲ್ಲದೇ ಜಾತ್ರೆ, ಹಬ್ಬ, ಸಂಪ್ರದಾಯ, ಉತ್ಸವಗಳು ಲೌಕಿಕ ಪರಂಪರೆ ಇಂದಿಗೂ ತನ್ನ ಸೊಗಡನ್ನು ಉಳಿಸಿಕೊಂಡಿರುವುದು ಗಮನಿಸಬಹುದು. ಆಚರಣೆಯ ಭಾಗವಾಗಿ ಪ್ರಾಣಿಬಲಿಗಳನ್ನು ನಡೆಸುವ ಪ್ರಕ್ರಿಯೆಯಿಂದ ಇದರಲ್ಲಿ ಮೌಢ್ಯತೆ ಮಹಾವಿಶೇಷಣಗಳ ಸಂದೇಶಗಳು ಸಮಸ್ತ ಜನಪದರಿಗೆ ರವಾನೆಯಾಗುತ್ತಾ ಬೇರೆಬೇರೆ ಆಕಾರಗಳಲ್ಲಿ ಸಮ್ಮಿಳನಗೊಳ್ಳುತ್ತದೆ.

ಬಳ್ಳಾರಿಯ ಈ ಏಳು ತಾಲೂಕುಗಳಲ್ಲಿ ವಿವಿಧ ರೀತಿಯ ಆಚರಣೆಗಳು ರೂಢಿಯಲ್ಲಿದ್ದು ಗ್ರಾಮದೇವತೆಗಳಿಗೆ ತನ್ನದೇ ಆದ ರೀತಿಯಲ್ಲಿ ಆರಾಧನೆಗಳು ನಡೆಯುತ್ತಿವೆ. ಗ್ರಾಮದೇವತೆಗಳು

ಬಹುಮುಖ್ಯವಾಗಿ ಮಾಂಸಾಹಾರಿಗಳು, ಹೆಚ್ಚು ಮಾಂಸವನ್ನು, ರಕ್ತವನ್ನು ಅಪೇಕ್ಷಿಸುತ್ತವೆ ಎಂದು ಜನಪದ ನಂಬಿಕೆಯಾಗಿದೆ. ದೇವರಿಗೆ ಪ್ರಾಣಿಗಳನ್ನು ಬಲಿ ಕೊಟ್ಟು ಅವುಗಳಿಂದ ಮಾಡಿದ ಆಹಾರವನ್ನು ಸೇವಿಸಿವುದು ವಾಡಿಕೆಯಾಗಿದೆ. ಇದನ್ನು ಹಬ್ಬದೂಟ, ಬಾಡೂಟ ಎಂದು ಕರೆಯುತ್ತಾರೆ. ವಿಶೇಷವಾಗಿ ಮಾರಮ್ಮ, ದುರ್ಗಿ, ಉಲಿಗೆಮ್ಮ, ಮಾಯಮ್ಮ, ಮಾತಂಗಿ ಉಚ್ಚಂಗಿ, ಸ್ತ್ರೀದೇವತೆಗಳು ಸ್ತ್ರೀನಾಮಧೇಯಗಳಿಂದ ಪ್ರಖ್ಯಾತಿಯನ್ನು ಪಡೆದುಕೊಂಡು ಆಚರಣೆ ಆಗುವುದನ್ನು ಗುರುತಿಸಬಹುದು. ಜಿಲ್ಲೆಯಾದ್ಯಂತ ಆಚರಣೆಗೊಳ್ಳುತ್ತಿರುವ ಸ್ತ್ರೀದೈವಗಳು ವಿಶಿಷ್ಟ ಸ್ಥಾನಮಾನವನ್ನು ಪಡೆದುಕೊಂಡಿವೆ. ಮಂಜುನಾಥ ಬೇವಿನಕಟ್ಟಿ "ದೇವಿ–ಭಕ್ತಿ ಸಂಬಂಧ ಅನ್ಯೋನ್ಯ ತಾಯಿ ಮಕ್ಕಳು ಇದ್ದಂತೆ. ಅವಿವಾಹಿತ ತಾಯಿ ಮತ್ತು ಭಕ್ತವಲಯ ವರ್ತಮಾನ ಭವಿಷತ್‌ಗಳಲ್ಲಿ ಇದ್ದಂತೆ. ಬಂಧು ಬಳಗವನ್ನು ಬಯಸುವುದು ಮಾತೃಮೂಲ ಮನಸ್ಸು. ದಾಯಾದಿತನ, ಪಿತೃ ಪರಂಪರೆ ಈ ದೇವತೆಯ ಪರಧಿಗೆ ಬರುವುದಿಲ್ಲ. ಆಚರಣೆಗಳಲ್ಲಿ ಆಹಾರ ಪದ್ಧತಿ, ಉಡುಗೆ–ತೊಡುಗೆ, ವಾದ್ಯ, ಎಲ್ಲವೂ ದೈಹಿಕ ಸುಖ. ಮಾನಸಿಕ ನೆಮ್ಮದಿ ಸಂತಾನ ಅಭಿವೃದ್ಧಿಯ ಪೂರಕ ಅಂಶಗಳು. ಇಲ್ಲಿ ಮೈಲಿಗೆಯ ಪ್ರಶ್ನೆಯೇ ಇಲ್ಲ. ಈರುಳ್ಳಿ ಬೆಳ್ಳುಳಿ, ಹುಣಿಸೆಯ ಹುಳಿ, ಮಾಂಸಾಹಾರಗಳಿಗೆ ಆದ್ಯತೆಯು ಇವು ಹೆಣ್ಣಿನ ಫಲವಂತಿಕೆಗೆ ಸತ್ವ ವೃದ್ಧಿಸುವಂತಹದು" ಎಂದು ಪ್ರಸ್ತಾಪಿಸುತ್ತಾರೆ.[೧೦]

ಹಗರಿಬೊಮ್ಮನಹಳ್ಳಿ ತಾಲೂಕು ಪ್ರದೇಶದಲ್ಲಿ ಬಲಿ ನಡೆಯುವ ಸ್ಥಳಗಳು: ಹೊಸಕೇರಿ, ಹಿರೇಗೂಂದನಹಳ್ಳಿ, ಹಂಪಾಪಟ್ಟಣ, ಹಲಗಾಪುರ, ಹಗರಿಬೊಮ್ಮನಹಳ್ಳಿ, ಸೊನ್ನ, ಸೀಗೇನಹಳ್ಳಿ, ವ್ಯಾಸಪುರ, ವರದಪುರ, ಮೋರಗೇರಿ, ಮುದ್ಲಾಪುರ, ಮುತ್ಕೂರು, ಮಾನ್ವಿ, ಮೂರೂರು, ಬೈಸಿಗದೇರಿ, ಬೆಣಕಲ್ಲು, ಬ್ಯಾಟೆಗೊಂಡನಹಳ್ಳಿ, ಬಂಕಾಪುರ, ಬಸರಕೋಡು, ಬನ್ನಿಗೋಳ, ದಶಮಾಪುರ, ತಂಬ್ರಹಳ್ಳಿ, ಚಿಂತ್ರಪಳ್ಳಿ, ಗುಳೇದಹಾಳ ಮೊದಲಾದವುಗಳಲ್ಲಿ ನಡೆಯುತ್ತವೆ.

ಹೊಸಪೇಟೆ ತಾಲೂಕು ಪ್ರದೇಶದಲ್ಲಿ ಬಲಿ ನಡೆಯುವ ಸ್ಥಳಗಳು: ಅಮರಾವತಿ, ಇಟಗಿ, ಕಮಲಾಪುರ, ಗರಗ, ಗೋನಹಾಳ, ಚಿಲಕನಟ್ಟಿ, ತೆಲುಗುಬಾಳು, ನಾಗಲಾಪುರ, ಬಸಾಪುರ, ಬೆಳಗೋಡು, ಬೈಲಕುಂದಿ, ಮಾವಿನಹಳ್ಳಿ, ರಾಜಾಪುರ, ರಾಮಸಾಗರ, ವೆಂಕಟಾಪುರ, ಮುದ್ದಾಪುರ, ಮರಿಯಮ್ಮನಹಳ್ಳಿ, ದಾನಾಪುರ, ಸಣಾಪುರ, ಸಂಕಲಾಪುರ, ಹರಪನಹಳ್ಳಿ, ಹಂಪಿ, ಹೊನಹಳ್ಳಿ, ನಿಂಬಾಹಳ್ಳೀ, ಗೊಲ್ಲರಹಳ್ಳಿ ಮೊದಲಾದವುಗಳಲ್ಲಿ ನಡೆಯುತ್ತವೆ.

ಕೂಡ್ಲಿಗಿ ತಾಲೂಕು ಪ್ರದೇಶದಲ್ಲಿ ಬಲಿ ನಡೆಯುವ ಸ್ಥಳಗಳು: ಹೊಸಹಳ್ಳಿ, ಪೂಜಾರಹಳ್ಳಿ, ಬಣವಿಕಲ್ಲು, ಉಜ್ಜಯನಿ, ಕಡೆಕೊಳ, ಅಮರದೇವರಗುಡ್ಡ, ಅಯ್ಯನಹಳ್ಳಿ, ಇಮಡಾಪುರ, ಕನ್ನನಾಯಕನಹಳ್ಳಿ, ಕಮಲಾಪುರ, ಕಸಾಪುರ, ಕೂಡ್ಲಿಗಿ, ಕುಪ್ಪಿನಕೆರೆ, ಕುಮುತಿ, ಜರಿಮಲಿ, ತುಪ್ಪೇನಹಳ್ಳಿ, ಚಿರಲಗುಂಡಿ, ಗುಡೇಕೋಟೆ, ಗುಂಡಿನಹೋಳು, ಗಜಾಪುರ, ಕೊಟ್ಟೂರು, ಕೊಂಬಿಹಳ್ಳಿ, ಕೋಡಿಹಳ್ಳಿ, ನಾಗೇನಹಳ್ಳಿ, ನಿಂಬಲಗೇರಿ

ಬಳ್ಳಾರಿ ತಾಲೂಕು ಪ್ರದೇಶದಲ್ಲಿ ಬಲಿ ನಡೆಯುವ ಸ್ಥಳಗಳು: ಅಮಲಾಪುರ, ಅಲ್ಲಿಪುರ, ಅಸುಂಡಿ, ಆಂದ್ರಾಳ, ಇಬ್ರಾಹಿಂಪುರ, ಇಳಿಜೊತೆ, ಓರುವಾಯ, ಕಪ್ಪಗಲ್ಲು, ಕಮ್ಮರಚೇಡು, ಕರೇಕಲ್ಲು, ಕಲ್ಲುಕಂಬ, ಕುಡುತಿನಿ, ಕುರುಗೋಡು, ಕೆರೆಕೇರಿ, ಕೋಳೂರು, ಗುತ್ತಿಗನೂರು, ಗುಡ್ಡದದೂರು, ಗೆಣಕಿಹಾಳು, ಗೋಟಾರು, ಗೋಡೆಹಾಳು, ಚಾಗನೂರು, ಚನಹಾರು, ಚಂದೂರು, ಜಾನಿಕುಂಟ, ಜಾಲಿಹಾಳು ಮೊದಲಾದ ಊರುಗಳಲ್ಲಿ ನಡೆಯುತ್ತವೆ.

ಸಿರುಗುಪ್ಪ ತಾಲೂಕು ಪ್ರದೇಶದಲ್ಲಿ ಬಲಿ ನಡೆಯುವ ಸ್ಥಳಗಳು: ಗುಟ್ಟಿಹಾಳೂ, ಹೊಸಬಾಳೂ, ಚಿಕ್ಕಬಳ್ಳಂದಿ, ಚನಕನೂರು, ತಾಳೂರು, ತೆರಳೂಕೋಟೆ, ತೊಂಡೆಹಾಳು, ದರೂರು, ದಾಸಾಪುರ, ದೇದಲಾಪುರ, ನಡವಿ, ನಾಗರಹಾಳು, ನಾಡಂಗ, ನಿಟ್ಟೂರು, ಬಸರಹಳ್ಳಿ, ಹೊಳಗುಂದಿ, ಬಾಗವಾಡಿ, ಬೀರಳ್ಳಿ, ಬೂದಿಗುಪ್ಪೆ, ಅಕ್ಕಬೆಂಗೇರಿ, ಅಗಸನೂರು, ಇಟಗಿಹಾಳ, ಉತ್ತನಪುರ, ಉಳೂರು, ಕರೂರು ಮೊದಲಾದ ಸ್ಥಳಗಳಲ್ಲಿ ನಡೆಯುತ್ತವೆ.

ಸಂಡೂರು ತಾಲೂಕು ಪ್ರದೇಶದಲ್ಲಿ ಬಲಿ ನಡೆಯುವ ಸ್ಥಳಗಳು: ಚಿಕ್ಕಕೆರೆಯಾಗಿಹಳ್ಳಿ, ಗಾಲಿಹಳ್ಳಿ, ಗೊಲ್ಲಲಿಂಗಮ್ಮನಹಳ್ಳಿ, ಕನಕಪುರ, ಕಲ್ಲಹಳ್ಳಿ, ಕಾಳಿಂಗೇರಿ, ಕುರೇಕುಪ್ಪ, ಕೋರಾಳ, ಗಂಗಲಾಪುರ, ಗುಂಡ್ಲಹಳ್ಳಿ, ಗೊಲ್ಲರಹಳ್ಳಿ, ಅಯ್ಯನಹಳ್ಳಿ, ಅಂಕಮ್ಮನಹಾಳ್, ಉಬ್ಬಲಗಂಡಿ, ತಾರಾ ನಗರ, ಚಿಕ್ಕಅಂತಾಪುರ, ತಿಮ್ಮಲಾಪುರ, ತುಮಟಿ, ತೋಣಸಿಗೇರಿ, ದರೋಜಿ, ದೇವಗಿರಿ, ದೋಣಮಲೈ,ಧರ್ಮಾಪುರ, ನಾಗಲಾಪುರ, ನಿಡಗುರ್ತಿ ಮೊದಲಾದ ಸ್ಥಳಗಳಲ್ಲಿ ನಡೆಯುತ್ತವೆ.

ಹೂವಿನ ಹಡಗಲಿ ತಾಲೂಕು ಪ್ರದೇಶಗಳಲ್ಲಿ ಬಲಿ ನಡೆಯುವ ಸ್ಥಳಗಳು: ಹೊಳಲು, ಹೊಳಗುಂಡಿ, ಹಿರೇಕೊಳಂ, ಹ್ಯಾರದ, ಹರವಿ, ಹಡಗಲಿ, ಹಗಲೂರು, ಹಗನೂರು, ಹಕ್ಕುಂಡಿ, ಸೋಗಿ, ಶಿವಲಿಂಗನಹಳ್ಳಿ, ವೀರಾಪುರ, ವರಕನಹಳ್ಳಿ, ರಂಗಾಪುರ, ಮೈಲಾರ, ಮುದೇನೂರು, ಮುಗಳ, ಮಾಕದಬ್ಬಿ, ಮಹಾಜಹಳ್ಳಿ, ಮಣಿಹಳ್ಳಿ, ಬಿದೇನೂರು, ಬೀರಬ್ಬಿ, ಬೈಲಹುಣಸಿ, ನೋವಾಲಿ, ನಂದಿಹಳ್ಳಿ ಮೊದಲಾದ ಊರುಗಳಲ್ಲಿ ಆಚರಿಸುತ್ತಾರೆ.

"ಒಂದು ಅಗೋಚರ ಕಲ್ಪನೆ ಸಮಾಜದಲ್ಲಿ ಸಂಭವಿಸುವ ಅನೇಕ ದುಷ್ಟರೋಗಗಳಿಗೆ ಕಾರಣಕರ್ತಳು ಎಂಬ ಅಲೌಕಿಕ ಭಾವನೆಯಿರುವುದರಿಂದ ಮಾತೃದೇವತೆಗಳು ಕೊಲ್ಲುವ ದೇವತೆ, ರೋಗಗಳನ್ನು ತರುವ ದೇವತೆಗಳು ಎಂದು ಪೂಜಿಸಲು ಪ್ರಾರಂಭ ಮಾಡಿರಬೇಕು. ರಕ್ಷಿಸುವ–ಸಂರಕ್ಷಿಸುವ ಶಕ್ತಿಯನ್ನು ಮಾತೃದೇವತೆಗಳು ಹೊತ್ತುಕೊಂಡಿರುತ್ತವೆ. ಮಾತೃದೇವತೆಗಳು ಸಕಲ ಜೀವರಾಶಿಗಳನ್ನು ಸಂರಕ್ಷಿಸುವ ಮನೋಧರ್ಮವನ್ನು ಇಟ್ಟುಕೊಂಡಿರುವುದರಿಂದ ಆ ಮಾತೃದೇವತೆ ಕೊಲ್ಲುವ ದೇವತೆಯಾಗಲು ಸಾಧ್ಯವೇ ಇಲ್ಲ. ಇಂಥ ಭ್ರಾಂತಿಗಳು ಮನುಷ್ಯನ ಮನಸ್ಸಿನಿಂದ ಹೊರ ಹೋಗಬೇಕಾಗುತ್ತದೆ."[೧೧] ಪ್ರಾಣಿ ಬಲಿಗಳನ್ನು ಪಡೆದುಕೊಂಡಿರುವುದಕ್ಕೆ ಮತ್ತು ಪ್ರಾಚೀನ ಕಾಲದಲ್ಲಿದ್ದ ಗ್ರಾಮೀಣ ಬದುಕಿನ ಒಂದು

ಅಂಗವಾಗಿ ಆರಾಧನೆಗಳೂ ಬರುತ್ತವೆ. ಹಳೆ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಿರುವ ನಮ್ಮ ಜನಪದರು ಅವುಗಳನ್ನು ಮರೆಯಲು ಸಾಧ್ಯವಿಲ್ಲದ ಹಂತಕ್ಕೆ ತಲುಪಿದ್ದಾರೆ. ಪ್ರಾದೇಶಿಕವಾಗಿ ಭಯದ ಹಿನ್ನೆಲೆಯಲ್ಲಿ ಮನುಷ್ಯನು ನೆಲೆಯಾಗಿರುವುದರಿಂದ ಈ ಭಯವನ್ನು ಹೋಗಲಾಡಿಸಲು ಒಂದು ದೈವವನ್ನು ಪೂಜಿಸುತ್ತಾನೆ. ದೈವಕ್ಕೆ ತಮ್ಮದೇ ಆದ ಹರಕೆಯಗಳನ್ನು ತೀರಿಸಿಕೊಳ್ಳುತ್ತಾನೆ. ಪುರಾಣ ಕಲ್ಪಿತವಾಗಿರುವ ಈ ದೈವಗಳಿಗೆ ಪ್ರಾಣಿಗಳನ್ನು ಬಲಿಯಾಗಿ ಅರ್ಪಿಸಿಕೊಂಡು ಬಂದಿರುವುದು ಗುರುತಿಸಬಹುದು. ಪ್ರಾಣಿಬಲಿಯನ್ನು ಮಾಡಲಿಕ್ಕೆ ಕೆಲವು ಕಾರಣಗಳನ್ನು ಕೊಡಬಹುದಾದರು "ಮನುಷ್ಯ ಮೂಢಪದ್ಧತಿಯನ್ನು ಬೆಳೆಸಿಕೊಂದು ಬಂದಿರುತ್ತಾನೆ. ಇದೊಂದು ದೈಹಿಕ ಕ್ರಿಯೆ. ಏಕಾಗಿ ಈ ಪದ್ಧತಿಯನ್ನು ಇರಿಸಿಕೊಂಡು ಬಂದಿರುವರು. ಅಂದರೆ ಮನೆಯಲ್ಲಿ ಮಕ್ಕಳು ಆರಾಮ ಇಲ್ಲದಾಗ, ವಾಂತಿಬೇಧಿಯಿಂದ ನರಳುತ್ತಿದ್ದಾಗ, ಅಥವಾ ಜನರ ಯಾವುದೇ ತೆರನಾದ ಬಯಕೆಗಳು ಈಡೇರಿಸಿದಾಗ, ಅಥವಾ ತಮ್ಮ ಕುಟುಂಬದಲ್ಲಿ ಸಾವು ನೋವುಗಳು ಆಗಿಂದಾಗ್ಗೆ ಘಟಿಸುತ್ತಿದ್ದಾಗ, ಮನುಷ್ಯರು ಹರಕೆ ಮಾಡಿಕೊಳ್ಳುವರು. ತಮ್ಮೆಲ್ಲ ಕಷ್ಟ ಕಾರ್ಪಣ್ಯಗಳನ್ನು ಕಾಪಾಡುವ ತಾಯಿ, ನಿನ್ನ ಸನ್ನಿಧಿಗೆ ಬಂದು ನಾನು ನಿನಗೆ ಮುಡಿ ಕೊಡುತ್ತೇನೆಂದು ಹರಕೆ ಕಟ್ಟಿಕೊಳ್ಳುತ್ತಾನೆ. ಅದರಂತೆ ಯಾವ ದೇವಿಗೆ ಹರಕೆ ಮಾಡಿಕೊಂಡಿರುತ್ತಾನೆಯೋ ಆ ದೈವದ ಜಾತ್ರೆ, ಹಬ್ಬ, ತೇರಿನ ಸಂದರ್ಭದಲ್ಲಿ ಕುಟುಂಬದವರೊಂದಿಗೆ ತೆರಳಿ ಮುಡಿ ತೆಗೆಸುತ್ತಾನೆ. ಅನಂತರ ಪೂಜೆ ಮಾಡಿಸುವನು. ಈ ಕಾರ್ಯದಲ್ಲಿ ಆಯಾ ಮನೆ, ಕುಲ ನೆಂಟರಿಷ್ಟರೊಂದಿಗೆ ತೆರಳಿ ಕಾರ್ಯವನ್ನು ಮಾಡುವರು. ಕೆಲವರು ತಮ್ಮ ಹೆಂಡತಿ ಗರ್ಭಿಣಿಯಾಗಿದ್ದಾಗ ಮುಡಿಕೊಡುವ ಪ್ರಕ್ರಿಯೆಯನ್ನು ನಿಲ್ಲಿಸಿ ಹೆರಿಗೆ ನಂತರವೇ ಕಾರ್ಯ ಮಾಡುವರು. ಈ ಮುಡಿಯನ್ನು ಆ ಕುಟುಂಬದ ಕುಲದೈವಿಗೆ ಕೊಡುವರು. ಮುಡಿ ತೆಗೆಯುವ ಕ್ಷೌರಿಕನಿಗೆ ಕಾಣಿಕೆ ರೂಪದಲ್ಲಿ ಹಣ ಅಥವಾ ಹಿಂದೆ ದವಸ ಧಾನ್ಯ ಕೊಡುವ ಪದ್ಧತಿ ಇತ್ತು" ಎಂದು ಪ್ರಸ್ತಾಪ ಮಾಡುತ್ತಾರೆ.[೧೨] ಈ ಮಾತುಗಳನ್ನು ಒಪ್ಪಬಹುದಾದರೂ ಹರಕೆಯ ರೂಪದಲ್ಲಿ ದೇವರನ್ನು ಒಲಿಸಿಕೊಳ್ಳುವ ಪರಂಪರೆ ಈ ಪದ್ಧತಿ ಬಂದಿರುವುದು ಗುರುತಿಸಬಹುದು. ಮನುಷ್ಯನಿಗೆ ಯಾವುದೇ ತೊಂದರೆಗಳಿಗೆ ಪ್ರಕೃತಿಯಲ್ಲಿ ನಿರ್ಮಾಣವಾಗಿರುವ ಪ್ರಕೃತಿಯ ವೈಚಿತ್ರಗಳಿಗೆ ದೇವರೇ ಕಾರಣ ಎಂದು ತಿಳಿದು ಆ ದೈವಕ್ಕೆ ನಮಿಸಿರುವುದು ಮನುಷ್ಯನ ಧರ್ಮ ಎಂದು ಗುರುತಿಸಬಹುದು.

೩.೨ ಜೀವನಾವರ್ತನ ಆಚರಣೆಗಳಲ್ಲಿ ಬಲಿ ಪದ್ಧತಿ

ಮಾನವನ ಜೀವನ ಸಂಸ್ಕೃತಿಯೇ ಭಿನ್ನವಾದುದು. ಗ್ರಾಮೀಣ ಸಂಸ್ಕೃತಿಯನ್ನು ತಿಳಿದು ಕೊಳ್ಳಬೇಕಾದರೆ ಹಳ್ಳಿಯ ಜನಪದ ಆಚರಣೆಗಳನ್ನು ಗಮನಿಸಬೇಕಾಗುತ್ತದೆ. ಇಲ್ಲಿ ಪ್ರಧಾನವಾಗಿ

ಜನಪದರ ಆಚಾರ ವಿಚಾರ ಮುಖ್ಯವಾಗಿರುತ್ತವೆ. ತಾವು ನಂಬಿಕೊಂಡ ಬಂದ ದೇವಾನು ದೇವತೆಗಳಿಗೆ ತನ್ನದೇ ಆದ ಶೈಲಿಯಲ್ಲಿ ಪೂಜೆ ಮಾಡುವುದು ಅರ್ಪಿಸುವುದು, ಎಡೆಮಾಡುವುದು, ಹೊಸಬಟ್ಟೆ ತರುವುದು, ಮನೆಗಳನ್ನು ಸಿಂಗರಿಸುವುದು, ರಸ್ತೆಗಳನ್ನು ಸಿಂಗರಿಸುವುದು, ಅಲಂಕಾರ ಮಾಡುವುದು, ದೇವಸ್ಥಾನಗಳನ್ನು ಅಲಂಕರಿಸುವುದು, ಗುಡಿಗೋಪುರಾದಿಗಳನ್ನು ಅಲಂಕಾರ ಮಾಡುವುದು, ಸಂಬಂಧಿಕರಿಗೆ ಹಬ್ಬ, ಜಾತ್ರೆಯ ಆಹ್ವಾನ ಹೇಳುವುದು ಸಂಬಂಧ ವರ್ಗದವರನ್ನು ಸಂತೋಷಪಡಿಸುವುದು ಇದೆಲ್ಲ ಹಳ್ಳಿಯ ಸೊಗಡನ್ನು ಗುರುತಿಸುತ್ತದೆ. ಪ್ರಧಾನವಾಗಿ ಬಳ್ಳಾರಿ ಜಿಲ್ಲೆಯಲ್ಲಿ ನಿರ್ದಿಷ್ಟ ಸಮಯಕ್ಕೆ ನಿರ್ದಿಷ್ಟ ಆಚರಣೆಗಳು ಜಿಲ್ಲೆಯಾದ್ಯಂತ ನಡೆಯುತ್ತವೆ.

ಬಳ್ಳಾರಿ ಜಿಲ್ಲೆಯಲ್ಲಿ ನಡೆಯುವ ಜೀವಾವರ್ತನ ಆಚರಣೆಗಳನ್ನು ವಿವಿಧ ರೀತಿಯಲ್ಲಿ ಗುರುತಿಸಬಹುದು. ನೆಲಸಂಬಂಧಿ ಆಚರಣೆಗಳು, ಜನಸಂಬಂಧಿ ಆಚರಣೆಗಳು, ಅಗ್ನಿ ಸಂಬಂಧಿ ಆಚರಣೆಗಳು, ಆಕಾಶ ಸಂಬಂಧಿ ಆಚರಣೆಗಳು, ಪ್ರಾಣಿಸಂಬಂಧಿ ಆಚರಣೆಗಳು ಮುಂತಾದವುಗಳನ್ನು ಗಮನಿಸಬಹುದು. ಕೆಲವು ಆಚರಣೆಗಳಲ್ಲಿ ಮಾತ್ರ ಪ್ರಾಣಿ ಬಲಿ ನಡೆಯುತ್ತವೆ. ಪ್ರಾಣಿಬಲಿ ನಡೆಯುವ ಸಂದರ್ಭಗಳೇ ಬೇರೆ ಬೇರೆ ಇರುತ್ತವೆ. ಪ್ರಾದೇಶಿಕವಾಗಿ ಹಬ್ಬ, ಜಾತ್ರಾ ಸಮಯಕ್ಕೆ ಬಲಿಗಳು ನಡೆಯುತ್ತವೆ. "ನದಿ, ಕೆರೆ, ಕಲ್ಯಾಣಿಗಳ ದಡದಲ್ಲಿನ ದೈವಗಳ ಗುಡಿಗಳು, ದೇವಾಲಯಗಳು ಹಾಗೂ ನದಿ ದಡದಲ್ಲಿನ ತೀರ್ಥಕೊಳ್ಳಗಳು ನೀರಿನ ಜೀವಮುಖಿ ಅಂಶಗಳನ್ನು ಸದಾ ನಾಮಫಲಕದಂತೆ ಪ್ರತಿಫಲಿಸಿ, ಶುಚಿತ್ವಕ್ಕೆ ಒತ್ತಾಯಿಸುತ್ತವೆ. ಶುದ್ಧನೀರಿಗೆ ಔಷಧಿ ಗುಣವಿದೆ. ಮಾಟ ಮಂತ್ರ ತಂತ್ರಾಚರಣೆಗಳಲ್ಲಿ ಬಳಸುವ ನೀರಿಗೆ ಕ್ಷುದ್ರ ಶಕ್ತಿಯನ್ನು ಬಿಡಿಸುವ ಮತ್ತು ರೋಗ ಗುಣಪಡಿಸುವ ಶಕ್ತಿಯಿದೆ ಎಂಬ ನಂಬಿಕೆ ಇದೆ. ಶುದ್ಧವಾದ ನೀರನ್ನು ಕುಡಿಯುವುದರಿಂದ ನೂರಾರು ಕಾಯಿಲೆಗಳನ್ನು ತಡೆಗಟ್ಟಬಹುದೆಂದು ಭಾರತೀಯ ಯೋಗ ವಿಜ್ಞಾನ ಸಂಶೋಧನಾ ಸಂಸ್ಥೆ ಖಚಿತಪಡಿಸಿದೆ. ಈ ಎಲ್ಲಾ ಜೀವಪರ ವಿಚಾರಗಳನ್ನು ಅನುಭವದಿಂದ ಅರಿತ ಜನಪದರ ಮನಸ್ಸು ನೀರನ್ನು ದೈವವಾಗಿಸಿ, ಆಚರಣೆಯ ಸಿಹಿಲೇಪನದೊಂದಿಗೆ ಇಂದಿಗೂ ವ್ಯವಸ್ಥಿತವಾಗಿ ನಡೆಯುವಂತೆ ಮಾಡುತ್ತದೆ" ಎಂದು ನೀರಿನ ಮಹತ್ವವನ್ನು ವಿವರಿಸುತ್ತಾರೆ.[೧೩] ಪ್ರಾಚೀನ ಕಾಲದಿಂದಲೂ ಗಂಗಾ ಭವಾನಿಗೆ ಗಂಗೆಪೂಜೆ ಮಾಡುವುದು ನಮ್ಮ ಸಂಸ್ಕೃತಿಯ ಒಂದು ಭಾಗವಾಗಿ ಅರ್ಥೈಸಿಕೊಳ್ಳುತ್ತೇವೆ. ಕೆರೆಗೆ ದೀಪಾವಳಿ ಹಬ್ಬ ಮಾಡುವುದು ಇದರೆ ಉದ್ದೇಶವಾಗಿದೆ. ಮಳೆ ಬಂದು ಊರಿನ ಕೆರೆ ತುಂಬಿದಾಗ ಊರಿನ ಎಲ್ಲಾ ಸಮುದಾಯದವರು ಸೇರಿಕೊಂದು ಮಾಡುವ ಆಚರಣೆ ಬಹಳ ಮಹತ್ವವನ್ನು ಪಡೆದುಕೊಳ್ಳುತ್ತದೆ.

"ಜೀವನಾವರ್ತನ ಹಾಗೂ ವಾರ್ಷಿಕಾವರ್ತನ ಆಚರಣೆಗಳು ಜನಕೇಂದ್ರಿತವಾಗಿರುವುದನ್ನು ಗಮನಿಸಬಹುದು. ನಾಮಕರಣದಂದು ಐದು ಜನ ಮುತ್ತೈದೆಯರು ಬಾವಿಯಿಂದ ಹೊತ್ತು ತಂದ ತುಂಬಿದ ಕೊಡಗಳ ಸಾಕ್ಷಿಯಲ್ಲಿಯೇ ಮಗುವಿನ ಹೆಸರನ್ನು ಅಧಿಕೃತಗೊಳಿಸುತ್ತಾರೆ. ತುಂಬಿದ ಕೊಡ ತುಂಬಿದ ಜೀವನದ ಸಂಕೇತವಾಗುತ್ತದೆ. ಋತುಮತಿಯಾದ ಸಂದರ್ಭದಲ್ಲಿ ನೀರೆರೆಯುವ ಶಾಸ್ತ್ರ, ಮದುವೆಯಲ್ಲಿ ಜರುಗುವ ಗಂಗಮ್ಮನ ಪೂಜೆ, ನದಿ ಕೆರೆಗಳು ತುಂಬಿದಾಗ ಅರ್ಪಿಸುವ ಬಾಗಿನ, ಸಮುದಾಯಗಳಿಂದ ಬಹಿಷ್ಕಾರಗೊಂಡ ವ್ಯಕ್ತಿಗಳಿಗೆ ಬೆಂಕಿ ಮತ್ತು ನೀರನ್ನು ನೀಡದಿರುವುದು. ವ್ಯಕ್ತಿಯ ಸಾವಿನ ಕ್ಷಣದಲ್ಲಿ ಬಾಯಿಗೆ ನೀರು ಹಾಕುವುದು. ಅಂತಿಮ ಸಂಸ್ಕಾರದಲ್ಲಿ ತುಂಬಿದ ಕೊಡವೊಂದನ್ನು ಹೊತ್ತು ಮೂರು ಸುತ್ತು ಬಂದು ನೆಲಕ್ಕೆ ಜರಿಯುವುದು. ಪ್ರಾಣಬಿಟ್ಟ ಸ್ಥಳದಲ್ಲಿ ಮಣೆಯ ಮೇಲೆ ತುಂಬಿದ ಕೊಡವನ್ನು ಇಡುವುದು, ಹನ್ನೆರಡನೇ ದಿನ ದೇವಮೂಲೆಯಲ್ಲಿ ನೀರು ತುಂಬಿದ ಗಡಿಗೆ ಇಟ್ಟು ಎಡೆ ಸಲ್ಲಿಸಿ, ಸತ್ತ ವ್ಯಕ್ತಿಯನ್ನು ದೈವವಾಗಿರುವುದು ಇತ್ಯಾದಿ ಆಚರಣೆಗಳಲ್ಲಿ ನೀರು ಮತ್ತು ಮನುಷ್ಯನ ಸಂಬಂಧ ಹಬ್ಬಸಾಂಕೇತಿಕವಾಗಿ ಕಾಣಬಹುದು" ಎಂದು ನೀರಿನ ಮಹತ್ವದ ಹಿನ್ನೆಲೆಯ ಬಗ್ಗೆ ಚರ್ಚೆ ಮಾಡುತ್ತಾರೆ.[೧೪] ಇಲ್ಲಿ ಪ್ರಧಾನವಾಗಿ ಅನೇಕ ವ್ಯಕ್ತಿಗಳು ಗಂಗೆ ಪವಿತ್ರವಾದುದು ಎಂದು ಭಾವಿಸಿ ದೊಡ್ಡ ದೊಡ್ಡ ನದಿಗಳಿಗೆ ಹಾರಿ ಪ್ರಾಣಾರ್ಪಣೆ ಮಾಡಿಕೊಂಡಿರುವುದು ನೋಡುತ್ತೇವೆ. ನದಿಗೆ ಹಾರಿ ಪ್ರಾಣಾರ್ಪಣೆ ಮಾಡಿಕೊಂಡರೆ ನಾನು ಗಂಗಾಭವಾನಿಯಲ್ಲಿ ಐಕ್ಯನಾದೆ ಎಂಬ ಭಾವನೆ ಆತನಲ್ಲಿ ಇರುತ್ತದೆ. "ಇನ್ನು ಪ್ರತಿನಿತ್ಯ ತನ್ನ ಬದುಕಿನಲ್ಲಿ ಭಾಗವಾಗಿರುವ ಪಾನೀಯಗಳಲ್ಲಿ ನೀರು ಮುಖ್ಯವಾಗಿರುತ್ತದೆ. ಆಯಾ ದೈವದ ಮೂರ್ತಿಯನ್ನು ಹೊಳೆ, ಕೆರೆ, ಕೊಳ, ಬಾವಿ, ಹರಿಯುವ ನದಿಯಿಂದ ನೀರನ್ನು ತಂದು ದೇವರ ಮೂರ್ತಿಯನ್ನು ತೊಳೆದು ಅದೇ ನೀರನ್ನು ತೀರ್ಥದಂತೆ ಭಕ್ತರಿಗೆ ಕೊಡುತ್ತಿದ್ದರು. ನೀರಿನ ಪ್ರತಿರೂಪವೆಂದು ಜನರು ಭಾವಿಸಿರುವರು. ಆದುದರಿಂದ ವಿಶೇಷವಾಗಿ ಸ್ತ್ರೀದೈವಗಳಿಗೆ ಅರ್ಪಿಸುವುದನ್ನು ಕಾಣುತ್ತೇವೆ. ಮನುಷ್ಯ ತನ್ನ ಇಡೀ ಬದುಕಿನ ತೊಳಲಾಟದಲ್ಲಿ, ಅಡ್ಡಾದಿಡ್ಡಿಯಾಗಿ ಜಂಜಾಟಗಳ ನಡುವೆ ಬದುಕಿ ಬದುಕು ಎಂತಹ ನಿಗೂಢ ಎಷ್ಟೊಂದು ಸಮಸ್ಯೆಗಳಿವೆ. ಇಂತಹ ನೋವುಗಳಿಂದ ಪಾರಾಗುವ ಬಗೆ ಹೇಗಪ್ಪ ಅಂದುಕೊಂಡು ಅಲೋಚನೆಗೆ ತೊಡಗಿಕೊಳ್ಳುವಾಗ ಆಗ ಅವನಿಗೆ ಅಮ್ಮನ ನೆನಪಾಗುತ್ತಾಳೆ. ಅವರೇ ಸ್ತ್ರೀ ದೈವಗಳು" ಎಂದು ಪ್ರಸ್ತಾಪ ಮಾಡುತ್ತಾರೆ.[೧೫] ನೀರಿನ ಮಹತ್ವವನ್ನು ತಿಳಿಸುವಾಗ ಪ್ರಾಣಿಗಳನ್ನು ದೇವತೆಯ ಮುಂದೆ ನಿಲ್ಲಿಸಿ ಅದಕ್ಕೆ ಕೊರಳಲ್ಲಿ ಚೆಂಡುಮಲ್ಲಿಗೆ ಹೂವುಗಳನ್ನು ಹಾಕಿ ಮುಖಕ್ಕೆ ಅರಿಶಿನ, ಕುಂಕುಮ ಹಚ್ಚಿ, ಮುಖಕ್ಕೆ ನೀರನ್ನು ಎರಚುತ್ತಾರೆ. ದೇವರ ಎದುರಲ್ಲಿ ನೀರನ್ನು ಎರಚಿದಾಗ ಆ ಪ್ರಾಣಿ ತಲೆ ಒದರಬೇಕು. ಆಗ ಅದನ್ನು ಕಡಿಯಲಾಗುತ್ತದೆ. ಇಂತಹ ಒಂದು ಹರಕೆ, ನಂಬಿಕೆ ಜನಪದರಲ್ಲಿ ನಿಗೂಢವಾಗಿರುವುದು ಗುರುತಿಸಬಹುದು.

ದೀಪಾವಳಿ ಹಬ್ಬದ ವಿಶೇಷಗಳು

ವಾರ್ಷಿಕವಾಗಿ ಬರುವ ದೀಪಾವಳಿ ಹಬ್ಬವನ್ನು ಹಟ್ಟಿ ಹಬ್ಬವೆಂದು ಕರೆಯುತ್ತಾರೆ. ಸಾಮಾನ್ಯವಾಗಿ ರೈತರಿಗೆ ಪೌರಾಣಿಕವಾಗಿ ಬರುವ ಪಾಂಡವರು ಬಹಳ ವಿಶೇಷವಾಗಿರುವುದು ಗುರುತಿಸಬಹುದು. ಇದನ್ನು ಪಾಂಡವರ ಹಬ್ಬವೆಂತಲೂ ಮಾಮೂಲಾಗಿ ಕರೆಯುತ್ತಾರೆ. ಬಳ್ಳಾರಿ ಜಿಲ್ಲೆಗೆ ಸೇರಿದ ೭ ತಾಲೂಕುಗಳಲ್ಲಿ ಈ ಹಬ್ಬವನ್ನು ಮಾಡುತ್ತಾರೆ. ಹೆಚ್ಚಾಗಿ ಬುಡಕಟ್ಟು ಸಮುದಾಯಗಳು ವಾಸವಾಗಿರುವ ಪ್ರದೇಶದಲ್ಲಿ ಹೆಚ್ಚು ಕಡಿಮೆ ವಿಶೇಷಗಳನ್ನು ಗಮನಿಸಬಹುದು. ಈ ಭಾಗದಲ್ಲಿ ದೀಪಾವಳಿ ದಿನದ ಪಾಡ್ಯದಂದು ಹಟ್ಟಿಹಾಕುವುದು ಎಂಬ ಸಂಪ್ರದಾಯ ಕಂಡುಬರುತ್ತದೆ. ತಮ್ಮ ತಮ್ಮ ಮನೆಗಳನ್ನು ರಂಗೋಲಿಗಳಿಂದ ಸಿಂಗಾರ ಮಾಡಿಕೊಳ್ಳುತ್ತಾರೆ. ಒಂದು ಹಲಗೆಯ ಮೇಲೆ ಗೋಸಗಣಿಯಿಂದ ವಿಶೇಷ ಆಕಾರದಲ್ಲಿ ಗುಮ್ಮಟಾಕಾರದಲ್ಲಿ ಗುರ್ಜಿಗಳನ್ನು ರಚಿಸಿಕೊಳ್ಳುತ್ತಾರೆ. ಈ ಗುರ್ಜಿಗಳು ಐದು ಲೆಕ್ಕದಲ್ಲಿರಬೇಕು ಎಂದು ಅಂದಾಜಿಸುತ್ತಾರೆ. ಮನೆಯ ಹೊಸ್ತಿಲಕ್ಕೆ ವಿಶೇಷ, ವಿವಿಧ ಹೂವುಗಳಿಂದ ಅಲಂಕಾರ ಮಾಡುತ್ತಾರೆ. ಉತ್ತರಾಣಿಕಡ್ಡಿ, ಜೋಳದ ತೆನೆ, ಸೇವಂತಿಗೆ, ಚಂಡುಹೂ ಮುಂತಾದ ಹೂವುಗಳಿಂದ ಅಲಂಕಾರ ಮಾಡಿ ಪೂಜಿಸುತ್ತಾರೆ. ತಮ್ಮ ತಮ್ಮ ಮನೆಯ ಅಂಗಳದಲ್ಲಿ ಪಾಂಡವರು ಬರುವರೆಂದು ಸುಣ್ಣಬಣ್ಣದಿಂದ ಪಾದಗಳನ್ನು ರಚಿಸಿಕೊಳ್ಳುತ್ತಾರೆ. ಗೋಸಗಣಿಯನ್ನು ಲಕ್ಕವ್ವನ ಪ್ರತೀಕ ಎಂದು ಭಾವಿಸಿಕೊಂಡು ಜಾನುವಾರುಗಳಿಗೆ ಸ್ನಾನ ಮಾಡಿಸಿ, ಸುಂದರವಾಗಿ ಅಲಂಕಾರ ಮಾಡುವುದು ಇದೆ. ಗೋವುಗಳಿಗೆ ಬಣ್ಣ ಹಚ್ಚಿ ವಿಶೇಷ ಬಟ್ಟೆಗಳಿಂದ ಗೋವುಗಳ ಹೊಟ್ಟೆಯ ಮೇಲೆ ಇಳಿಬಿಡುತ್ತಾರೆ. ಜಾನುವಾರುಗಳು ರೈತರಿಗೆ ಪೋಷಾಕಾಧಾರಗಳೆಂದು, ತಮ್ಮ ಬದುಕಿನ ಸಂಪತ್ತಾಗಿಯೂ ಪರಿಭಾವಿಸಿಕೊಂಡು ಅವುಗಳನ್ನು ವೈವಿಧ್ಯಮಯವಾಗಿ ಪೂಜಿಸುವುದು ವಾಡಿಕೆಯಾಗಿರುವುದನ್ನು ಗುರುತಿಸಬಹುದು.

ಪ್ರಾಚೀನ ಕಾಲದಿಂದಲೂ ಮಾನವ ಬೇಟೆ, ಆಯುಧ, ಕೃಷಿ ಮುಂತಾದ ಹಂತಗಳನ್ನು ದಾಟಿಬಂದಿರುವುದು ಇಂತಹ ಆಚರಣೆಗಳಿಂದ ಗಮನಿಸಬಹುದು. ಮಾನವನ ಪಶುಪಾಲನ ಹಂತದಲ್ಲಿಯೇ ಈ ಹಟ್ಟಿ ಆಚರಣೆಯು ಪ್ರಾರಂಭವಾಗಿರಬೇಕೆಂದು ಊಹಿಸಲು ಒಂದು ಅವಕಾಶ ಇದೆ. ಈ ಪೂಜೆಯು ಸಕಲ ಸಂಪತ್ತನ್ನು ಕರುಣಿಸುವ ದೇವತೆಯಾದ ಲಕ್ಷ್ಮೀಗೆ ಹೋಲಿಸಿ ಪೂಜಿಸಲಾಗುತ್ತದೆ. ರೈತರಿಗೆ ಭೂಮಿಯ ಮಣ್ಣು, ಬೀಜ, ನೀರು, ಸಗಣಿ ಬಹಳ ಪ್ರಮುಖವಾಗಿರುತ್ತದೆ. ಗೋ ಸಗಣಿಯು ಕೃಷಿಗೆ ಗೊಬ್ಬರವಾಗಿ ಬಳಸುವುದರಿಂದ ಫಲಂತಿಕೆಯ ಸಂಕೇತವೂ ಆಗಿರುತ್ತದೆ. ಗ್ರಾಮದೇವತೆ ಹಟ್ಟೇವ್ವನಿ ಪ್ರಥಮ ಪೂಜೆ ಮಾಡುವ ಸಂದರ್ಭಗಳು ಹೆಚ್ಚಾಗಿ ಬಳ್ಳಾರಿ ಜಿಲ್ಲೆಯಾದ್ಯಂತ ಗುರುತಿಸಬಹುದು.

ಜಾನುವಾರುಗಳು ನೀಡುವ ಸಗಣಿಯಿಂದ ಗೊಬ್ಬರ ತಯಾರಿಸಿ ಅದನ್ನು ಹೊಲಕ್ಕೆ, ಗದ್ದೆಗಳಿಗೆ ಹಾಕುವುದರಿಂದ ಸಮೃದ್ಧಿ ಫಲಗಳು ದೊರೆಯುತ್ತವೆಂಬ ಭಾವನೆ ಇದೆ. ಈ ಆಧುನಿಕ ಸಂದರ್ಭದಲ್ಲಿ ಫಸಲುಗಳಿಗೆ ಆಧುನಿಕ ರಾಸಾಯನಿಕಗಳನ್ನು ಸಿಂಪಡಿಸುವುದು ಗುರುತಿಸಬಹುದು. ಆಧುನಿಕ ಸಂದರ್ಭದಲ್ಲಿ ಬೆಳೆಯುತ್ತಿರುವ ಟೊಮೊಟೋ, ಬೀನ್ಸ್, ಆಲೂಗಡ್ಡೆ, ಮುಂತಾದ ಪದಾರ್ಥಗಳಲ್ಲಿ ಹೆಚ್ಚಾಗಿ ರಾಸಾಯನಿಕಗಳು ಇದ್ದು ಮನುಷ್ಯನ ಆರೋಗ್ಯದ ಮೇಲೆ ರಾಸಾಯನಿಕಗಳು ಪ್ರಭಾವ ಬೀರಿ ರೋಗಗಳು ಸೃಷ್ಟಿಯಾಗುತ್ತಿರುವುದು ಇದೆ. ಜಾನುವಾರುಗಳು ನೀಡುವ ಸಗಣಿಗೆ ಸಾವಯವ ಗೊಬ್ಬರವಾಗಿ ಮಣ್ಣಿಗೆ ಫಲವತ್ತತೆಯನ್ನು ಕೊಡುತ್ತಾರೆ. ಸಿದ್ಧೇಶ್ವರಿಯವರು ತಮ್ಮ ಅಭಿಪ್ರಾಯಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ: "ಯಾವಾಗಲೂ ಗೋವುಗಳಲ್ಲಿ ಲಕ್ಷ್ಮೀ ಇರುತ್ತಾಳೆ, ನೆಲೆಸಿರುವಳೆಂಬ ಪ್ರತೀತಿ ಇದೆ. ಜನಪದ ಕಥೆಯ ಪ್ರಕಾರ ಪಾಂಡವರು ಒಂದು ವರ್ಷದ ಅಜ್ಞಾತವಾಸ ಮುಗಿಸಿ, ಕೌರವರಿಂದ ಒಯ್ಯಲ್ಪಟ್ಟ ಗೋವುಗಳನ್ನು ಗೆದ್ದು, ಹಸ್ತಿನಾವತಿಯನ್ನು ಸೇರಿದರೆಂದೂ ಈ ನೆನಪಿನ ಸಂಕೇತವಾಗಿ ಗೋವಿನ ಸಗಣಿಯಿಂದ ಪಾಂಡವರನ್ನು ಮಾಡಿ, ಅಂಗಳದಲ್ಲಿ ಹೆಜ್ಜೆ ಗುರುತುಗಳನ್ನು ಮೂಡಿಸಿ ಬರಮಾಡಿಕೊಳ್ಳುತ್ತಾರೆ. ಈ ಸಂದರ್ಭವು ಆಯಾ ಭಾಗಗಳಲ್ಲಿ ತನ್ನದೇ ಆದ ರೀತಿಯಲ್ಲಿ ಆಚರಣೆಯಲ್ಲಿ ಅಭಿವಕ್ತಿಗೊಂಡಿವೆ. ಅಂದು ಜಾನುವಾರುಗಳ ಕೊಟ್ಟಿಗೆ ಸ್ವಚ್ಛತೆಯೊಂದಿಗೆ ಅವುಗಳ ಔಷಧೋಪಚಾರಗಳು ನಡೆಯುತ್ತಿರುತ್ತವೆ. ಜಾನುವಾರುಗಳಿಗೆ ಗಾಯವಾದ ಸ್ಥಳಕ್ಕೆ ಜೇಡಿಮಣ್ಣು, ಕೆಮ್ಮಣ್ಣು, ಲೇಪಿಸಿ ಕಬ್ಬಿಣದ ಸೇರನ್ನು ತಾಗಿಸುತ್ತಾರೆ. ಇದು ಕ್ರಿಮಿನಾಶಕವಾಗಿ ನೋಣಗಳ ರಕ್ತ ಹೀರುವಿಕೆಯನ್ನು ತಡೆಗಟ್ಟುತ್ತದೆ. ನಾರಿನಿಂದ ಹೊಸ ಹಗ್ಗ ತಯಾರಿಸಿ ಜಾನುವಾರುಗಳ ಕೊರಳಿಗೆ ಕಟ್ಟಲಾಗುತ್ತದೆ. ಪ್ರಾಣಿಗಳ ಬಗೆಗಿನ ಪ್ರೀತಿ, ಸಾಮೂಹಿಕವಾಗಿ ಬದುಕು ಸಮೂಹದ ಒಳಿತಿನ ಆಶಯಗಳನ್ನು ಬಿಂಬಿಸುವ ಇಂಥ ಆಚರಣೆಗಳು, ಕೃಷಿಕರ ಮತ್ತು ಜಾನುವಾರುಗಳ ಸಂಬಂಧವನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ದೀಪಾವಳಿಯನ್ನು ಪಾಂಡೋರ ಹಬ್ಬವೆಂದು ಕರೆಯುವುದು ಖಚಿತವಾಗಿಲ್ಲ. ಇಲ್ಲಿ ಸೀಗೆಹುಣ್ಣಿಮೆಯಂದು ಪಾಂಡವರು ಬರುತ್ತಾರೆಂಬ ಪ್ರತೀತಿ ಹೆಚ್ಚಾಗಿದೆ. ಅಂದು ಕೊಂತೆಮ್ಮನ ಆಚರಣೆ ಪ್ರಚಲಿತದಲ್ಲಿದೆ. ದೀಪಾವಳಿಯನ್ನು ಹಟ್ಟಿಹಬ್ಬವೆಂದು ಕರೆಯುವ ವಾಡಿಕೆ ಇದೆ."[೧೬] ಪ್ರಧಾನವಾಗಿ ಗೋವುಗಳು ಮಾನವನಿಗೆ ಸಹಕಾರಿಯಾಗಿರುವುದು ಕೂಡ ಮರೆಯುವಂತಿಲ್ಲ. ಗೋಮೂತ್ರ, ಗೋಸಗಣಿ ಮುಂತಾದವುಗಳು ಭೂಮಿಗೆ ಫಲವಂತಿಕೆಯಾಗಿ ಕೊಟ್ಟು ಜನರಿಗೆ ಸಹಾಯವಾಗಿರುವ ಈ ಗೋವುಗಳನ್ನು ಪೂಜೆ ಮಾಡಿ ಸತ್ಕರಿಸುವುದು ವಿಶೇಷವಾಗಿರುವುದು ಇದೆ.

ಅದೇ ದಿನದಂದು ಬಳ್ಳಾರಿ ಜಿಲ್ಲೆಯಲ್ಲಿ ಬಲಿ ನಡೆಯಲಾಗುತ್ತದೆ. ಕೂಡ್ಲಿಗಿ ತಾಲೂಕಿನ ಕೆಲವು ಗ್ರಾಮಗಳಲ್ಲಿ ಬಲಿಪಾಡ್ಯಮಿ ದಿನ ಕೋಣನ ಬಲಿಯನ್ನು ಮಾಡಲಾಗುತ್ತದೆ. ಈ ಕೋಣ ಬಲಿಯ ಉದ್ದೇಶ ಕೂಡ ಲಕ್ಷ್ಮಿಯನ್ನು ಒಲಿಸಿಕೊಳ್ಳುವುದು ಎಂದು ಅಲ್ಲಿನ ಜನರ ಅಭಿಮತವಾಗಿದೆ. ಈ ಬಲಿಪಾಡ್ಯಮಿಯಿಂದ ಪ್ರಾಣಿಬಲಿಯನ್ನು ಮಾಡುವ ಪದ್ಧತಿ ಬೆಳೆದು ಬಂದಿದೆ ಎಂದು ಅಲ್ಲಿನ ಜನಪದರು ಹೇಳುತ್ತಾರೆ. ಈ ಸಂದರ್ಭದಲ್ಲಿ ಹಿರಿಯರಿಗೆ ಪಿತೃವಾಕ್ಯಪರಿಪಾಲನಾ ವಿಧಾನದಲ್ಲಿ ಪೂಜೆಗಳು ನಡೆಯುತ್ತವೆ. ಲಂಬಾಣಿ ಸಮುದಾಯದವರು ತಾಂಡಾಗಳಲ್ಲಿ ವಾಸ ಮಾಡುತ್ತಾರೆ. ದೀಪಾವಳಿ ದಿನದಂದು ಕಾಳಿಮಾಸ ಎಂದು ಕರೆದು ಪೂಜೆ ಮಾಡುತ್ತಾರೆ. ಸಪ್ತಮಾತೃಕೆಯರಲ್ಲಿ ಬರುವ ಕಾಳಿಯನ್ನು ಸಮಾಧಾನಪಡಿಸಲು, ಲಕ್ಷ್ಮೀಯ ಭೀಕರತೆಯನ್ನು ಶಾಂತಿ ಮಾಡಲು ಕಪ್ಪು ಬಣ್ಣದ ಮೇಕೆಯನ್ನು ಬಲಿ ಮಾಡುತ್ತಾರೆ. ಇದು ತಾಂಡಾ ಸಂಸ್ಕೃತಿಯ ಮತ್ತೊಂದು ಪ್ರತೀಕ ಎನ್ನಬಹುದು. ಗ್ರಾಮದ ಜನಪದರು ಮಾಡುವ ಆಚರಣೆಗಳು ಯಾವ ಕಾಲಕ್ಕೂ ವಿಶೇಷಗಳನ್ನು ಪಡೆದುಕೊಳ್ಳುತ್ತವೆ. ಇಲ್ಲಿ ಪ್ರಧಾನವಾಗಿ ಕಪ್ಪು ಮೇಕೆ ಎಂದರೆ ಕಾಳಿಗೆ ತುಂಬಾ ಇಷ್ಟವಾಗಿರುತ್ತದೆ ಎಂದು ವಕ್ತೃಗಳು ಹೇಳುತ್ತಾರೆ. ಮೇಕೆಯನ್ನು ಕಾಳಿದೇವತೆಗೆ ಬಲಿ ನೀಡುವುದರಿಂದ ಸಮೃದ್ಧಿಯನ್ನು ಪಡೆದುಕೊಳ್ಳುತ್ತವೆ ಎಂಬ ಜನಪದ ನಂಬಿಕೆಯಾಗಿರುವುದನ್ನು ಗುರುತಿಸಬಹುದು. ಕಾಳಿ ದೇವತೆಯು ನಮ್ಮನ್ನು ಕಾಪಾಡುತ್ತಾಳೆ, ನಮ್ಮ ಜಾನುವಾರಗಳನ್ನು, ತಮ್ಮ ಫಸಲಗಳನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾಳೆ ಎಂಬ ಭಾವನೆಯು ಸ್ಥಿರವಾಗಿರುವುದು ಗುರುತಿಸಬಹುದು. ಕಾಳಿದೇವತೆ ಕಪ್ಪು ಮೇಕೆಯನ್ನು ಬಲಿ ಕೊಡಬೇಕಾದರೆ ಸೂರ್ಯೋದಯಕ್ಕೆ ಮುಂಚಿತವಾಗಿ ಮಾಡಬೇಕೆಂಬ ನಂಬಿಕೆ ಪ್ರಬಲವಾಗಿರುವುದು ಇದೆ. ಸೂರ್ಯೋದಯ ನಂತರ ಬೆಳಕು ಬಂದರೆ ಅದು ಮಾನವನ ಏಳಿಗೆಯನ್ನು ಸೂಚಿಸುತ್ತದೆ ಎಂದು ಭಾವಿಸುತ್ತಾರೆ. ಮೇಕೆಯ ಬಲಿ ಕೊಟ್ಟ ನಂತರ ಸೂರ್ಯನ ಬೆಳಕು ಮಕ್ಕಳಿಗೆ, ಜಾನುವಾರುಗಳಿಗೆ, ಫಸಲಿಗೆ ಆರೋಗ್ಯವನ್ನು ಕರುಣಿಸುತ್ತದೆಂಬ ದೃಢವಾದ ನಂಬಿಕೆಯಿದೆ. ದೀಪಾವಳಿ ದಿನ ಜಾನುವಾರುಗಳಿಗೆ ದೀಪದ ಬೆಳಗುವುದು ಇದೆ. ಈ ದೀಪ ಬೆಳಗುವುದು, ಆರತಿ ಮಾಡುವುದು ಸಮೃದ್ಧಿಯ ಸಂಕೇತವೆಂದು ಭಾವಿಸುತ್ತಾರೆ. ಪ್ರಧಾನವಾಗಿ ಬೆಳಕು ಮಾನವನಿಗೆ ಸಂಪತ್ತನ್ನು, ಸಮೃದ್ಧಿಯನ್ನು ಕರುಣಿಸುವುದು ಇದೆ. ಲಂಬಾಣಿ ಮಹಿಳೆಯರು ಹೊಲಗಳಿಂದ ತಮ್ಮ ತಮ್ಮ ಬುಟ್ಟಿಗಳಲ್ಲಿ ವಿವಿಧ ರೀತಿಯಲ್ಲಿ ಹೂವುಗಳನ್ನು ತೆಗೆದುಕೊಂಡು ಬಂದು ಸಗಣಿಯಿಂದ ರಚಿತವಾದ ನಮೂನೆಗೆ ಅಲಂಕಾರ ಮಾಡುತ್ತಾರೆ. ಹೂವುಗಳಿಗೂ ಮತ್ತು ಗೋಪೂಜೆಗೂ ಸಂಬಂಧವನ್ನು ಕಲ್ಪಿಸಿಕೊಡುತ್ತಾರೆ.

ಪಂಜಿನ ಸೇವೆಯ ಮಹತ್ವ

ಗ್ರಾಮೀಣ ಬಾಗದಲ್ಲಿ ನಡೆಯುವ ಗ್ರಾಮದೇವತೆಗಳ ಆಚರಣೆಯಲ್ಲಿ ಈ ಪಂಜುಗಳು ಕಂಡುಬರುತ್ತವೆ. ಸಾಮಾನ್ಯವಾಗಿ ದೇವತೆಗಳನ್ನು ರಸ್ತೆಗಳಲ್ಲಿ ಮೆರವಣಿಗೆ ಮಾಡುವಾಗ ರಸ್ತೆಗೆ ಬೆಳಕನ್ನು ತೋರಲೆಂದು ಈ ಪಂಜುಗಳನ್ನು ಬಳಸುತ್ತಾರೆ. ರಾತ್ರಿ ಸಮಯದಲ್ಲಿ ತಮ್ಮ ತಮ್ಮ ಹೊಲ ಗದ್ದೆಗಳಿಗೆ ಎಡೆಯ ಚೆಲ್ಲಬೇಕಾದರೆ ಈ ಪಂಜುಗಳನ್ನು ಬಳಸಿಕೊಳ್ಳುತ್ತಾರೆ. "ಬಳ್ಳಾರಿ ಜಿಲ್ಲೆಯಲ್ಲಿ ಸಾಮಾನ್ಯವಾಗಿ ದೈವಗಳ ಆಚರಣೆಗಳಲ್ಲಿ ಪಂಜಿನ ಸೇವೆ ನಡೆಯುತ್ತದೆ. ಗ್ರಾಮಗಳ ಹಬ್ಬ, ಆಚರಣೆಗಳಲ್ಲಿ ರಾತ್ರಿಯಲ್ಲಿ ನಡೆಯುವ ಆಚರಣೆಗಳಲ್ಲಿ ಗಂಗೆ ತರುವಾಗ, ದೈವದ ಜಾತ್ರೆಗಳಲ್ಲಿ ಪಂಜು ಹಿಡಿಯುವ ಕಾಯಕ ಮಡಿವಾಳ ಸಮುದಾಯದವರದ್ದಾಗಿರುತ್ತದೆ. ಅದನ್ನು ವಂಶಪಾರಂಪರಿಕವಾಗಿ ಇಂದಿಗೂ ಮುಂದುವರಿಸಿಕೊಂಡು ಬರುತ್ತಾರೆ. ಇದು ಅವರ ಹಕ್ಕಿನ ವಿಷಯವಾಗಿದೆ. ಕೃಷಿಕರು ಇವರ ಕಾರ್ಯಕ್ಕೆ ಧಾನ್ಯ ರೂಪದ ಸುಂಕ ನೀಡಿ ಗೌರವಿಸುತ್ತಾರೆ. ಇಂದಿನ ಆಧುನಿಕ ಯುಗದಲ್ಲಿ ಜಗಮಗಿಸುವ ವಿದ್ಯುತ್ ದೀಪಗಳಿದ್ದರೂ ಸಾಂಪ್ರದಾಯಿಕವಾಗಿ ಪಂಜಿನ ಬೆಳಕಿನಲ್ಲಿ ದೈವಗಳ ಉತ್ಸವಗಳನ್ನು ನಡೆಸುತ್ತಾರೆ. ಪಂಜು ಹಿಡಿಯುವಿಕೆ ಆಚರಣೆಗಳಲ್ಲಿ ಕಡ್ಡಾಯ. ವೈವಿಧ್ಯಮಯವಾದ ಕೌಶಲ್ಯ ಪರದರ್ಶನಗಳು ಪಂಜಿನ ಕುಣಿದಲ್ಲಿದೆ. ಇಲ್ಲಿ ಅಗ್ನಿ ಶುಭ ಹಾಗೂ ಶಾಂತಿಯ ಸಂಕೇತ. ಅದು ಆಚರಣೆಗಳಲ್ಲಿ ಜ್ಯೋತಿ ಸ್ವರೂಪವಾಗಿದೆ" ಎಂದು ಪ್ರಸ್ತಾಪಿಸುತ್ತಾರೆ.[೭] ಶಾಂತಿ, ಜ್ಯೋತಿ ಸ್ವರೂಪಗಳು ಮನುಷ್ಯನಿಗೆ ಯಾವಾಗಲೂ ಬೇಕಾಗಿರುವುದರಿಂದ ಪಂಜುಗಳನ್ನು ಗ್ರಾಮದೇವತೆಗಳ ಆಚರಣೆಗಳಲ್ಲಿ ಬಳಸುತ್ತಾರೆ.

ಕುರಿ ಪೂಜೆ

ಕುರಿ ಪೂಜೆ ಆಚರಣೆ ಕರ್ನಾಟಕದ ಎಲ್ಲಾ ಭಾಗದಲ್ಲೂ ಕಾಣಬಹುದು. ಸಂಕ್ರಾಂತಿ ಸಮಯಕ್ಕೆ ಸಮೃದ್ಧಿ ಬೆಳೆ ಬೆಳೆದ ಸಮಯಕ್ಕೆ ಗೋವುಗಳನ್ನು ಅಲಂಕರಿಸಿ ಪೂಜೆ ಮಾಡುವುದು ಇದೆ. ಇದೇ ಸಮಯಕ್ಕೆ ಹಬ್ಬ ಮಾಡುವಾಗ ಕುರಿಗಳನ್ನು ಪೂಜೆ ಮಾಡುವುದು ಇದೆ. ಆದರೆ ಹರಕೆ ಹೊತ್ತ ಜನಪದರು ಕುರಿಗಳನ್ನು ಸಂಕ್ರಾಂತಿ ಹಬ್ಬದಂದು ಬಲಿ ಕೊಡುತ್ತಾರೆ.

ಗಾವು ಜಗಿಯುವ ಆಚರಣೆ

ಇದು ಅತ್ಯಂತ ಭಯಂಕರವಾಗಿರುತ್ತದೆ. ಭಯಂಕರವಾದರೂ ಗಾವು ಸಿಗುವ ಆಚರಣೆ ಬಳ್ಳಾರಿ ಜಿಲ್ಲೆಯಾದ್ಯಂತ ಇದೆ. ಹೊಸಪೇಟೆ, ಸಂಡೂರು, ಸಿರುಗುಪ್ಪ, ಹಗರಿಬೊಮ್ಮನಹಳ್ಳಿ, ತಾಲೂಕುಗಳಲ್ಲಿ ಮಾರಮ್ಮ, ಊರಮ್ಮ, ಗಂಗಮ್ಮ, ದುರುಗಮ್ಮ, ಜಾತ್ರಾ ಸಂದರ್ಭಕ್ಕೆ ಪೋತುರಾಜ ಗಾವು ಸಿಗಿಯುವುದು ಮಾಡುತ್ತಾನೆ. ಪೋತುರಾಜ ದೈವಸಂಬಂಧಿಯಾಗಿ ಬಂದು ಪ್ರಾಣಿಗಳ ಬಲಿಯನ್ನು ತೆಗೆದುಕೊಳ್ಳುತ್ತಾನೆಂಬ ಭಾವನೆಯಿದೆ. "ಕರ್ನಾಟಕದ ಎಲ್ಲಕಡೆ

ಗ್ರಾಮದೈವಗಳ ಹಬ್ಬದಲ್ಲಿಯ ಬಲಿಪದ್ಧತಿ ಕಂಡುಬರುತ್ತದೆ. ಇದೊಂದು ಭಯಾನಕವಾದ ಆಚರಣೆ. ಕಪ್ಪುಬಣ್ಣದ ಕುರಿಯನ್ನು ಮಡಿವಾಳ ಅಥವ ನಾಯಕರ ಪೋತರಾಜ ಹಲ್ಲುಗಳಿಂದ ಕಚ್ಚಿ, ಸಿಗಿದು, ಅದರ ರಕ್ತ ಮಾಂಸಗಳನ್ನು ತಿನ್ನುವ ವಿಚಿತ್ರ ಆಚರಣಾ ಪದ್ಧತಿ. ಗಾವು ಸಿಗಿಯುವುದನ್ನು ವಂಶಪಾರಂಪಯವಾಗಿ ಮಾಡಿಕೊಂಡು ಬರುವ ಮನೆಯವರು ದೇವತೆಯ ಹಬ್ಬದಂದು ದೇವರು ಮೈತುಂಬಿದಾಗ ಗಾವು ಸಿಗಿಯುತ್ತಾನೆ. ಗಾವು ಎಂದರೆ ದೇವರ ಆಹಾರ ಎಂದು ಅರ್ಥವಿದೆ. ಗಾವು ಸಿಗಿಯಲು ಕುರಿಯ ಜೊತೆಗೆ ಕೋಳಿ, ಅಲ್ಲದೇ ಬಾಳೆಹಣ್ಣುಗಳನ್ನು ತೆಗೆದುಕೊಳ್ಳುತ್ತಾನೆ. ಗಾವುಗು ಎಂದ್ರೆ ಗಾವು ಕಟ್ಟಲು ಮೀಸಲಾಗಿರುವ ಕುರಿ ಎಂಬ ಅರ್ಥವಿದೆ. ಗಾವು ಸಿಗಿಯುವಾತ ಮೂರು ದಿನಗಳ ಹಿಂದಿನಿಂದ ಉಪವಾಸವಿರಬೇಕೆಂಬ ನಿಯಮವಿದೆ. ದಿನವೊಂದಕ್ಕೆ ಮೂರು ಏಲಕ್ಕಿಯನ್ನು ತಿನ್ನಬೇಕು. ಅಲ್ಲದೇ ಮಡಿಯಿಂದ ಇದ್ದು, ಮಡದಿಯಿಂದ ದೂರವಿರಬೇಕು. ಆ ದಿನಗಳಲ್ಲಿ ದೈವಕ್ಕೆ ನಿಷ್ಠೆನಾಗಿದ್ದು, ಭಕ್ತಿಯಿಂದ ಪೂಜಿಸುತ್ತಿರಬೇಕು. ಹೀಗೆ ಇರುವುದರಿಂದ ಗಾವು ಸಿಗಿಯಲು ಶಕ್ತಿ ಬರುತ್ತದೆಂದು ನಂಬುತ್ತಾರೆ. ಗಾವು ಜಿಗಿಯುವವನನ್ನು ಪೋತರಾಜನೆಂದು, ಅವನು ಗ್ರಾಮದೇವತೆಯ ಸೇವಕನೆಂದು, ಸಹೋದರನೆಂದೂ, ಗಂಡನೆಂದೂ, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ಭಾವಿಸಲಾಗುತ್ತದೆ. ಗಾವು ಜಿಗಿಯುವ ದಿನ ಪೋತರಾಜನು ಸ್ನಾನ ಮಾಡಿ ಜೇಡಿಮಣ್ಣಿನಿಂದ ಏಳು ಸುತ್ತಿನ ಕೋಟೆಯನ್ನು ಕಟ್ಟುತ್ತಾನೆ. ಅಲ್ಲಿ ಭಕ್ತರು ಪೋತುರಾಜನನ್ನು ಪೂಜಿಸಿ ಮೇಳದೊಂದಿಗೆ ದೇವಾಲಯಕ್ಕೆ ಕರೆತರುತ್ತಾರೆ. ಪೋತರಾಜನ ಮುಖಕ್ಕೆ ಬಣ್ಣ ಬಳಿದು ಬಿಳಿಯ ಬಣ್ಣದ ಚುಕ್ಕೆ ಇಟ್ಟು ಅರಿಶಿಣದ ಬಟ್ಟೆಯನ್ನು ಹೊದಿಸಿ, ಮೇಳದೊಂದಿಗೆ ಗಾವು ಸಿಗಿಯಲು ಕರೆತರುತ್ತಾರೆ. ಗಾವು ಸಿಗಿದ ಪೋತುರಾಜ ಅದರ ರಕ್ತವನ್ನು ಅನ್ನಕ್ಕೆ ಮಿಶ್ರಣ ಮಾಡುತ್ತಾನೆ. ಹೀಗೆ ಸಿಗಿಯುವ ಎಲ್ಲಾ ಪೋತರಾಜರು ರಕ್ತಕ್ಕೆ ಅನ್ನವನ್ನು ಮಿಶ್ರ ಮಾಡಿದ ನಂತರ ನೆರೆದ ಭಕ್ತರು ಅನ್ನವನ್ನು ಸ್ವೀಕರಿಸಿ ತಮ್ಮ ಮನೆಯ ಸೂರಿಗೆ, ಮಕ್ಕಳ ಕೊರಳಿಗೆ ತಾಯತಕ್ಕೆ ಭಕ್ತಿಯಿಂದ ಕಟ್ಟುತ್ತಾರೆ." ಹೀಗೆ ಗಾವು ಜಿಗಿಯುವ ವಿಧಾನಗಳ ಬಗ್ಗೆ ದಾಖಲು ಮಾಡುತ್ತಾರೆ.[೧೮]

ಗಡಿಮಾರಿ ಆಚರಣೆ

ಇದು ಮಾರಮ್ಮ ದೇವಿಗೆ ಸಂಬಂಧಿಸಿದ ಆಚರಣೆಯಾಗಿದೆ. ವಾರ್ಷಿಕವಾಗಿ ನಡೆಯುವ ಮಾರಿ ಜಾತ್ರೆ, ಮಾರಿ ಹಬ್ಬ, ಮುಗಿದ ನಂತರ ಊರಿನ ಗಡಿವರೆಗೂ ಮಾರಿಯನ್ನು ಓಡಿಸಿಕೊಂಡು ಗಡಿಯಲ್ಲಿ ಮಾಡುವ ಆಚರಣೆಯಾಗಿರುತ್ತದೆ. ಮಾರಮ್ಮ, ಊರಮ್ಮ, ಕರಿಯಮ್ಮ, ದುರುಗಮ್ಮ ಮುಂತಾದ ಗ್ರಾಮದೇವತೆಗಳ ಹಬ್ಬಗಳು ನಡೆಯುವುದು ಇದೆ. ಬುಡಕಟ್ಟು ಸಮುದಾಯಗಳಲ್ಲಿ ಮಾರಮ್ಮನ ಹಬ್ಬಗಳನ್ನು ಮಾಡುತ್ತಾರೆ. ಈ ಮಾರಿ ಹಬ್ಬಗಳಲ್ಲಿ ಗಡಿ

ಮಾರಿ ಆಚರಣೆಯನ್ನು ಮಾಡುತ್ತಾರೆ. ಇಲ್ಲಿ ಪ್ರಧಾನವಾಗಿ ಊಗೆ ಮಾರಿರೋಗಳು ಬಾರದಿರಲಿ ಎಂಬ ಭಾವನೆ ಇದೆ. ಗಡಿಯಲ್ಲಿ ಪ್ರಾಣಿಗಳನ್ನು ಬಲಿ ಮಾಡುವುದು ಇದೆ. ಕುರಿ, ಮೇಕೆ, ಟಗರು, ಕೋಳಿ, ಮುಂತಾದ ಪ್ರಾಣಿಗಳನ್ನು ಬಲಿಕೊಟ್ಟು ಮಾಂಸವನ್ನು ಮನೆಗಳಿಗೆ ತರುವುದು ಇದೆ. ಈ ಗಡಿಮಾರಿ ಆಚರಣೆಯಲ್ಲಿ ಪ್ರಾದೇಶಿಕ ಭಿನ್ನತೆಗಳನ್ನು ಕಾಣಬಹುದು. ಒಂದೊಂದು ಪ್ರದೇಶಕ್ಕೆ ಒಂದೊಂದು ಭಿನ್ನವಾದ ಆಚರಣೆ ಇರುತ್ತದೆ. "ರೋಗ ರುಜಿನಗಳ ಮೂರ್ತಿಗಳನ್ನು ಮಾಡಿ ಊರಿನ ಗಡಿ ದಾಟಿಸುತ್ತಾರೆ. ಗಡಿಮಾರಿಯ ಗೊಂಬೆಗಳನ್ನು ಚಿತ್ರವಿಚಿತ್ರವಾಗಿ ಕೆಲವೊಮ್ಮೆ ಭಯಾನಕವಾಗಿ ಅಲಂಕರಿಸುತ್ತಾರೆ. ಊರಿನ ಜನ ಅಲಂಕೃತಗೊಂಡ ರೋಗ ಸಂಕೇತಿಸುವ ಗೊಂಬೆಗಳನ್ನು ಪೂಜಿಸಿ, ಮಾಂಸಾಹಾರ ಹಾಗೂ ಸಸ್ಯಾಹಾರಗಳ ಎಡೆಯನ್ನು ಮಾಡಿ ಸಲ್ಲಿಸಿ ಗಡಿಮುಟ್ಟಿಸಿ ಗಡಿಮಾರಿ ತೊಲಗುಮಾರಿ ಎಂದು ಹೇಳಿ ಗಡಿಪಾರು ಮಾಡುತ್ತಾರೆ. ಮುಂದಿನ ಊರಿನವರು ಆ ಗೊಂಬೆಗೆ ಪೂಜೆ ಇತ್ಯಾದಿಗಳಿಂದ ಉಪಚರಿಸಿ ಆ ಊರಿನ ಗಡಿ ದಾಟಿಸುತ್ತಾರೆ. ಹೀಗೆ ನಿರಂತರವಾಗಿ ನಡೆದು ಗೊಂಬೆಗಳು ಕಾಡಂಚಿನಲ್ಲಿ ಮರದ ತೋಪನ್ನೋ ಹೊಳೆಯನ್ನೊ, ಕೆರೆಯನ್ನೋ ಸೇರುತ್ತವೆ" ಎಂದು ವಿವರಿಸುತ್ತಾರೆ.[೯]

ಗಡಿಮಾರಿ ಎಂದು ಕರೆಯುವ ಗ್ರಾಮದೇವತೆಗೆ ವಿಶೇಷ ಸ್ಥಾನಮಾನವನ್ನು ಕೊಟ್ಟಿದ್ದಾರೆ. ಹೊಸಪೇಟೆಯ ಏಳುಕೇರಿ ಊರಲ್ಲಿ ಬೇಡಕುಲದವರು ಬುಡಕಟ್ಟು ಆಚರಣೆಗಳನ್ನು ಉಳಿಸಿಕೊಂದು ಬಂದಿದ್ದಾರೆ. ಗಡಿಮಾರಿ ಆಚರಣೆಯಲ್ಲಿ ಅಮ್ಮನನ್ನು ಕಳಿಸುವ ವಿಧಾನವಾಗಿರುತ್ತದೆ. ಅಮ್ಮನನ್ನು ಕಳಿಸಬೇಕಾದರೆ ಮಂಗಳವಾರ ಬರಬೇಕು. ಅಂದು ಸಾರು ಹಾಕಲಾಗುತ್ತದೆ. ರೈತರು ಹೊಲಗಳಿಗೆ ಹೋಗುವಂತಿಲ್ಲ. ಎತ್ತಿನ ಬಂಡಿ ಕಟ್ಟುವಂತಿಲ್ಲ. ಊರಿಗೆ ಸಂಬಂಧಿಸಿದ ಆಚಾರಿಗಳು ಅತ್ತಿ ಮರವನ್ನು ಕಡಿದು ದೇವಿಯ ಮೂರ್ತಿಯನ್ನು ಮಾಡುತ್ತಾರೆ. ಮರದಮೂರ್ತಿಗೆ ದೇವಿ ಸೀರೆ, ಅರಿಶಿನ, ಕುಂಕುಮ, ಹೂ ಭಂಡಾರಗಳಿಂದ ಅಲಂಕಾರ ಮಾಡುತ್ತಾರೆ. ಅಲಂಕಾರಗೊಂಡ ಮೂರ್ತಿಯನ್ನು ನೋಡಲು ಬಹಳ ಸುಂದರವಾಗಿರುತ್ತದೆ. ಭಯಂಕರವಾಗಿ ಕಾಣಲು, ಭಯಾನಕವಾಗಿ ಕಾಣಲು, ಅಲಂಕಾರ ಮಾಡುತ್ತಾರೆ. ಈ ಅಲಂಕಾರ ಮಾಡುವ ಉದ್ದೇಶ ರೋಗಗಳ ಸಂಕೇತವೂ ಆಗಿರುತ್ತದೆಂದು ಜನಪದರ ನಂಬಿಕೆಯಾಗಿದೆ. ಗ್ರಾಮದೇವತೆಯ ಗದ್ದಿಗೆಯ ಸುತ್ತಲೂ ಚಿಕ್ಕ ಚಿಕ್ಕ ಕಡ್ಡಿಗಳಿಂದ ತಡಿಕೆಯಿಂದ ರಕ್ಷಣ ಗೋಡೆಯಾಗಿ ನಿರ್ಮಾಣ ಮಾಡುತ್ತಾರೆ. ಅಮ್ಮನ ಮುಖ ಮಾತ್ರ ಕಾಣಲು ಒಂದು ಚಿಕ್ಕ ರಂಧ್ರವನ್ನು ಇಟ್ಟಿರುತ್ತಾರೆ. ಈ ಭಯಂಕರವಾದ ಅಮ್ಮನನ್ನು ನೋಡಲು ಚಿಕ್ಕಮಕ್ಕಳು ಬರುವುದಿಲ್ಲ. ಅಷ್ಟೊಂದು ಭಯಂಕರವಾಗಿರುತ್ತದೆ ಅಮ್ಮನ ಮುಖ. ಇದರಿಂದ ಗ್ರಾಮದೇವತೆಯ ಭೀಕರತೆ ಗೊತ್ತಾಗುತ್ತದೆ. ಅಂದು ಎಲ್ಲರೂ ಸೇರಿ ದೂಳುಮರಿಯನ್ನು ದೇವತೆಗೆ ಬಲಿ ಕೊಟ್ಟು ಶಾಂತಿ ಮಾಡುತ್ತಾರೆ. ಸಿದ್ಧೇಶ್ವರಿ ಅವರು ತಮ್ಮ ಅಭಿಪ್ರಾಯಗಳನ್ನು

ಹೀಗೆ ವ್ಯಕ್ತಪಡಿಸಿದ್ದಾರೆ. "ಅಮ್ಮ ತನಗಿಷ್ಟವಾದವರ ಮೈಮೇಲೆ ಬಂದು ತನ್ನ ಆಸೆಗಳನ್ನು ನಿವೇದಿಸಿಕೊಳ್ಳುತ್ತಾಳೆ. ಉಡಿ ತುಂಬಿ ಪೂಜಿಸಿದ ವಸ್ತುಗಳನ್ನು ಮನೆಗೆ ತೆಗೆದುಕೊಂಡು ಹೋಗುವಂತಿಲ್ಲ. ಅಮ್ಮನನ್ನು ಕಳುಹಿಸುವಾಗ ಹಿಂದೆ ಕೋಣ ಬಲಿ ಕೊಡಲಾಗುತ್ತಿತ್ತೆಂದು ಹೇಳಲಾಗುತ್ತಿದೆ. ಮೆರವಣಿಗೆಯಲ್ಲಿ ಅಮ್ಮನ ರಥದ ಜೊತೆ ಪೂಜಿಸಿದ ಸಾಮಗ್ರಿ, ಕಸ, ಕಡ್ಡಿಗಳನ್ನು ಸಂಪೂರ್ಣವಾಗಿ ಒಯ್ಯುತ್ತಾರೆ. ರಥದ ಬದಲಾಗಿ ಕೆಲವೊಮ್ಮೆ ಗರ್ಭ ಪ್ರತೀಕವಾದ ಕುಂಭದಲ್ಲಿ ಕಳುಹಿಸುವ ಪದ್ಧತಿ ಇದೆ. ಕುಬುಸದ ಕಣ, ಕುಂಕುಮ ಭಂಡಾರಗಳಿಂದ ಸಿಂಗರಿಸಿದ ಕುಂಭವನ್ನು ಪುರುಷರು ಹೊರುತ್ತಾರೆ. ಕುಂಭ ಹೊತ್ತವನ ಮೈಮೇಲೆ ಅಮ್ಮ ಬರುತ್ತಾಳೆಂದು ನಂಬಿಕೆಯಿದೆ. ಹೀಗೆ ಸಕಲ ಗೌರವಗಳಿಂದ ಗ್ರಾಮದ ಗಡಿಯಾಚೆ ಸಾಗಿಸುತ್ತಾರೆ. ಹೀಗೆ ಪ್ರತಿ ಗ್ರಾಮದವರಿಂದ ದಾಟಿಸಲ್ಪಟ್ಟ ಅಮ್ಮ ಅಂತಿಮವಾಗಿ ಹಂಪಿ ರಸ್ತೆಯಲ್ಲಿರುವ ಗಾಳೆಮ್ಮನ ಗುಡಿ ಸೇರುತ್ತಾಳೆ. ಇಲ್ಲಿಂದ ಮುಂದೆ ಸಾಗುವಂತಿಲ್ಲ. ಏಕೆಂದರೆ ಗಾಳೆಮ್ಮನ ಗುಡಿ ಮಾರಿದೈವಗಳ ತವರು ಇಲ್ಲಿಂದ ಮುಂದೆ ದಾಟಿಸುವ ಕ್ರಿಯೆ ಇಂದಿಗೂ ನಡೆದಿಲ್ಲ. ಹಿಂದೆ ಬಯಲಲ್ಲಿ ಇರುತ್ತಿದ್ದ ದೈವಗಳು ಒಂದು ಗುಡಿಸೇರಿ ಪೂಜಿಸಲ್ಪಡುತ್ತಿವೆ. ಜನಪದ ಸಂಸ್ಕೃತಿಯಲ್ಲಿ ಗಾಳಿ ದೈವವು ಗಾಳೆಮ್ಮನಾಗಿ, ರಕ್ಷಕ ದೈವಕ್ಕಿಂತ, ಶಿಕ್ಷಕದೈವವಾಗಿ ಹೆಚ್ಚು ಪ್ರಚಲಿತದಲ್ಲಿದೆ."[೨೦] ಅಮ್ಮನನ್ನು ಗಡಿ ದಾಟಿಸುವ ಪದ್ಧತಿ ಬಹಳ ವಿಶೇಷವನ್ನು ಪಡೆದುಕೊಳ್ಳುತ್ತದೆ. ಇದೇ ಪ್ರಕಾರವಾಗಿ ಸಂಡೂರು ತಾಲೂಕಿನ ಯಶವಂತಪುರ, ಬಂಡ್ರಿ, ಧರ್ಮಾಪುರ ಮಾರ್ಗವಾಗಿ ನಾರಿಹಳ್ಳಿ ಎಂಬ ಗ್ರಾಮದಲ್ಲಿ ಅಮ್ಮನನ್ನು ಗಡಿ ದಾಟಿಸಿ ಬರುತ್ತಾರೆ. ಇದರಲ್ಲಿ ಗಂಡು ಮತ್ತು ಹೆಣ್ಣು ಮೂರ್ತಿಗಳಿದ್ದು. ಪ್ರಧಾನವಾಗಿ ಹೆಣ್ಣುಮೂರ್ತಿಗೆ ಮಾತ್ರ ಪೂಜೆ ಮಾಡುತ್ತಾರೆ. ರೋಗಗಳ ಆದಿದೇವತೆಯಾಗಿರುವುದರಿಂದ ಚಿಕ್ಕ ಚಕ್ರ ಜೋಡಿಸಿ ಅದನ್ನು ಎಳೆದುಕೊಂಡು ಹೋಗುತ್ತಾರೆ. ನವೀನ ಸಂಬಂಧಗಳು ನಶಿಸಿ ಹೋಗುತ್ತಿರುವ ಸಂದರ್ಭದಲ್ಲಿ ಇಂತಹ ಆಚರಣೆಗಳಿಂದ ಸಂಬಂಧಗಳು ನಿರ್ಮಾಣ ವಾಗುವುದು ಇದೆ. ಸಮಾಜಕ್ಕೆ ಉತ್ತಮ ಮಾರ್ಗದರ್ಶನವೂ ಒದಗಿಬರುತ್ತದೆ. ಈ ಆಚರಣೆಗಳ ಮೂಲಕ ಗ್ರಾಮಗಳು ಶುಭ್ರಗೊಳ್ಳುವುದು ಗಮನಿಸಬಹುದು.

ಚರಗ ಚೆಲ್ಲುವ ಆಚರಣೆ

ಇದೊಂದು ಅದ್ಭುತ ಆಚರಣೆ ಎಂದು ತಿಳಿಯಬಹುದು. ಪ್ರತೀ ಗ್ರಾಮದೇವತೆಯ ಆರಾಧನೆಯ ಸಂದರ್ಭದಲ್ಲಿ ನಡೆಯುವ ಈ ಚರಗ ಚೆಲ್ಲುವ ಪದ್ಧತಿ ಬಹಳ ವಿಶಾಲವಾದ ಅರ್ಥವನ್ನು ಕೊಡುತ್ತದೆ. ಪ್ರಾದೇಶಿಕವಾಗಿ ಇದು ಹೊಲ, ಗದ್ದೆಗಳಿಗೆ ಮಾರಕ ರೋಗಗಳು ಬಾರದೆಂಬ ನಂಬಿಕೆಯಿಂದ ಈ ಚರಗ ಚೆಲ್ಲುವ ಪದ್ಧತಿ ಆಚರಿಸುತ್ತಾರೆ. ಮಾರಮ್ಮ, ಮಾರೆಮ್ಮ, ತುಲಸಿ, ಕಾಳಮ್ಮ, ದುರಗಮ್ಮ, ಗಾಳೆಮ್ಮ, ಚಾಮುಂಡಿ ದೇವತೆಯ ಆರಾಧನೆ

ಜಾತ್ರೆ ಆದ ನಂತರ ನಡೆಯುವ ಕಾರ್ಯಕ್ರಮವೇ ಈ ಚರಗ ಚೆಲ್ಲುವ ವಿಧಾನ. ಕರ್ನಾಟಕದ ಪ್ರತಿ ಗ್ರಾಮದಲ್ಲಿ ಮತ್ತು ಪಟ್ಟಣಗಳಲ್ಲಿ ಈ ಪದ್ಧತಿ ಇದೆ. ಅನ್ನದಿಂದ ಮಾಡಿದ ಮುದ್ರಗೆ ಕುರಿ, ಕೋಳಿ ಕಡಿದ ರಕ್ತವನ್ನು ಅನ್ನಕ್ಕೆ ಮಿಶ್ರಮಾಡಿ ಅದನ್ನು ಕೆಂಪುಬಣ್ಣದಿಂದ ಕೂಡಿದ ನಂತರ ಊರುಗಳ ಗಡಿಗಳಿಗೆ ಚೆಲ್ಲುವ ಪದ್ಧತಿಯನ್ನೇ ಚರಗ ಎಂದು ಕರೆಯುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಈ ಚೆರಗವನ್ನು ಹುಲಸು ಎಂದು ಕರೆಯುವುದು ಇದೆ. ಪ್ರಾಣಿಬಲಿ ನಡೆದ ನಂತರ ಈ ಹುಲಸು ಚೆಲ್ಲುವ ಪದ್ಧತಿ ಗಾಳೆಮ್ಮ, ಮಾಯಮ್ಮ, ಮಾರೆಮ್ಮ, ಊರಮ್ಮ ದೇವಸ್ಥಾನಗಳಲ್ಲಿ ನಡೆಯುತ್ತದೆ. "ಕೃಷಿ ಸಂಬಂಧಿ ವರ್ಷಕ್ಕೊಮ್ಮೆ ಕೃಷಿಕರು ತಮ್ಮ ತಮ್ಮ ಹೊಲಗಳಿಗೆ ಚರಗದ ಮೂಲಕ ಚೈತನ್ಯ ಬರಲು ನೈವೇದ್ಯ ಅರ್ಪಿಸುತ್ತಾರೆ. ರೈತರು ತಮ್ಮ ಹೊಲಗಳಿಗೆ ಅನ್ನ ಬೀರುವ ಪದ್ಧತಿ ಇದೆ. ಅಲ್ಲದೇ ರಕ್ತ ಕಲಿಸಿದ ಅನ್ನವನ್ನು ಗದ್ದೆಗಳಿಗೆ ಹಾಕುವ ಪದ್ಧತಿಯೂ ಇದೆ. ಎಳ್ಳು ಅಮವಾಸ್ಯೆಯ ಹಬ್ಬದ ನಸುಕಿನಲ್ಲಿ ಎದ್ದ ಯುವಕರು ಬಂಡಿ ತೊಳೆದು ಚಕ್ರಕ್ಕೆ, ಎಣ್ಣೆ ಹಾಕಿ ಕಮಾನು ಕಟ್ಟಿ ವಿವಿಧ ಬಗೆಯ ಹೂಗಳಿಂದ ಅಲಂಕರಿಸುತ್ತಾರೆ. ಎತ್ತುಗಳ ಮೈತೊಳೆದು, ಬಣ್ಣ ಹಚ್ಚಿ, ಕೊಂಬುಗಳಿಗೆ ಎಣ್ಣೆ ಹಚ್ಚಿ, ಕೋಡು ಹಣಸುಹಾಕಿ, ಹಣೆಪಟ್ಟಿ ಕಟ್ಟುತ್ತಾರೆ. ಕೊರಳಿಗೆ ಕಿರುಗಜ್ಜೆ, ಗಂಟೆಗಳ ಸರಕಟ್ಟಿ ಮೈಮೇಲೆ ಚಿತ್ತಾರದ ಜೂಲ ಹೊದಿಸುತ್ತಾರೆ. ಹಬ್ಬಕ್ಕಾಗಿ ರಾತ್ರಿಯಿಡೀ ನಿದ್ರೆ ಮಾಡದೆ ಹೆಂಗಸರು ಅಡುಗೆ ತಯಾರಿಸುತ್ತಾರೆ. ಅಂದು ಅವರು, ಎಳ್ಳು ಹೋಳಿಗೆ, ಕಡಕ್ ಸಜ್ಜಿರೊಟ್ಟಿ, ಕರಿಗಡಬು, ಕರಾವರಿ ಮಸಾಲೆ, ಉಸುಳಿ, ಖಾರಸಾರು, ಎಣ್ಣೆಗಾಯಿ, ಬದನೆಕಾಯಿ, ಪಲ್ಯೆ ಕೆನೆಮೊಸರು ಹಾಗೂ ಚರಗದ ನೈವೇದ್ಯಕ್ಕಾಗಿ ಜೋಳ, ಅವರೆ, ಅಕ್ಕಿ, ಕಿಚಡಿ ತಯಾರಿಸಿಕೊಳ್ಳುತ್ತಾರೆ."[೨೧] ಚರಗದ ಮಹತ್ವದ ಬಗ್ಗೆ ವಿವರಿಸುತ್ತಾರೆ. ಮತ್ತೊಂದು ಉದಾಹರಣೆಯಾಗಿ "ಸಾಮಾನ್ಯವಾಗಿ ಮನುಷ್ಯರಿಗೆ ಕಷ್ಟ ಒದಗಿ ಬಂದಾಗ ಮುಡಿ ಕೊಡುವುದಾಗಿ ಹರಕೆ ಹೇಳಿಕೊಳ್ಳುತ್ತಾರೆ. ಇನ್ನು ಯಾವುದೇ ವ್ಯಕ್ತಿಯ ತಂದೆ ತಾಯಿ ಮರಣ ಹೊಂದಿದಾಗ ಆ ಕುಟುಂಬದ ಹಿರಿಯ ಮಗ ಮುಡಿ ತೆಗೆಸುವ ಕಾರ್ಯ ಮಾಡುವನು. ಒಟ್ಟಾರೆಯಾಗಿ ಮುಡಿಯನ್ನು ಸ್ತ್ರೀ ದೈವಗಳ ಅಥವಾ ಪುರುಷ ದೈವಗಳ ಆಸುಪಾಸಿನಲ್ಲಿ ಅದರಲ್ಲೂ ನದಿ, ಹೊಳೆ, ದೇವಸ್ಥಾನದ ಆಜು ಬಾಜಿನಲ್ಲಿ ತೆಗೆಯುವುದು ವಾಡಿಕೆ. ದಲಿತ ಸ್ತ್ರೀ ದೈವಗಳ ಆಹಾರಪದ್ಧತಿಯ ಪರಿಕಲ್ಪನೆಯಲ್ಲಿ ಈ ವಿಚಾರವನ್ನು ಚರ್ಚಿಸುವುದಾದರೆ ಸಾಮಾನ್ಯವಾಗಿ ದಲಿತರು ಕೃಷಿಕರು ಮತ್ತು ದಿನನಿತ್ಯದ ಬದುಕಿಗಾಗಿ ಕೂಲಿಯನ್ನು ಅವಲಂಬಿಸಿರುವರು, ಆಹಾರದ ರೂಪದಲ್ಲಿ ಧಾನ್ಯಗಳನ್ನು ಬಳಸಿದರೆ, ಕ್ರಮೇಣ ಧಾನ್ಯಗಳಾಗಿ ರಾಗಿ, ನವಣೆ, ಗೋದಿ, ಜೋಳ, ಭತ್ತ, ದ್ವಿದಳ ಧಾನ್ಯಗಳು ಪ್ರಧಾನವಾಗಿ ಬಳಸುತ್ತಾ ಬಂದಿರುವರು. ಈ ಎಲ್ಲಾ ಧಾನ್ಯಗಳನ್ನು ಆಯಾ ದೈವಗಳಿಗೂ ಅರ್ಪಿಸುತ್ತಾ ಬಂದಿರುತ್ತಾರೆ. ತಮ್ಮ ಬದುಕಿನಲ್ಲಿ ಆಹಾರದ ಕ್ರಮ

ಬದಲಾದಂತೆ ದೈವಗಳಿಗೂ ತಾವು ಉತ್ತಿ ಬಿತ್ತಿ ಬೆಳೆದ ಆಹಾರಧಾನ್ಯಗಳನ್ನು ಕೂಡ ಊರು, ಕೇರಿ, ನಾಡು, ಹೊಲ, ಕೆರೆ, ಮನೆಗಳಲ್ಲಿ ದೇವರಿಗೆ ಕೂಡ ಅಕ್ಕಿ, ಗೋದಿ, ಕಡಲೆ, ತೊಗರಿ, ಬೇಳೆ ಬೆಲ್ಲ, ಮೆಣಸು, ಉತ್ತತ್ತಿ, ಬೆಳ್ಳೊಳ್ಳಿ, ಒಣಮೆಣಸಿಕಾಯಿ, ಎಣ್ಣೆ, ಇನ್ನೂ ಮುಂತಾದ ಸಾಮಗ್ರಿಗಳನ್ನು ಆಯಾ ದೈವಗಳನ್ನು ಪೂಜೆ ಮಾಡುವ ಪೂಜಾರಿಗೆ ನೀಡುತ್ತಿದ್ದನು. ಮದುವೆ ಸಂದರ್ಭದಲ್ಲಿ ಮತ್ತು ಸ್ತ್ರೀಗೆ ಗರ್ಭನಿಲ್ಲದಿದ್ದಾಗ, ಈ ತೆರನಾದ ಧಾನ್ಯಗಳನ್ನು ಎಡೆಯಲ್ಲಿ ಇಡುತ್ತಿದ್ದರು" ಎಂದು ಪ್ರಸ್ತಾಪ ಮಾಡುತ್ತಾರೆ.[೨] ಬದುಕು, ಜಂಜಾಟ, ಕೃಷಿ, ರೋಗಗಳಿಂದ ಮುಕ್ತಿ ಹೊಂದಲು ಪ್ರಾಣಿಬಲಿಗಳನ್ನು ಕೊಡುವುದನ್ನು ಗಮನಿಸಬಹುದು.

ಜೋಕುಮಾರನ ಆಚರಣೆ

ಇಲ್ಲಿ ಪ್ರಧಾನವಾದ ಆಚರಣೆ ಇದಾಗಿದೆ. ಬಳ್ಳಾರಿ ಅಲ್ಲದೆ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆಯುವ ಜೋಕುಮಾರ ಪೂಜೆ ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತದೆ. ಇದಕ್ಕೆ ಸಮೃದ್ಧಿ ಸಂಕೇತವೂ ಇದೆ. ಜೋಕುವರ, ಜೋಕುಮಾರ ಎಂಬ ನಾಮಧೇಯಗಳಿಂದ ಕರೆಯುತ್ತಾರೆ. "ಅನಂತನ ಹುಣ್ಣಿಮೆಯಲ್ಲಿ ಉತ್ತರ ಕರ್ನಾಟಕದ ಕಡೆ ಈ ಆಚರಣೆ ನಡೆಯುತ್ತದೆ. ಇದನ್ನು ಜನ ಜ್ಯೋಕ್ಯಾನ ಹುಣ್ಣಿಮೆ ಎಂದೂ ಕರೆಯುತ್ತಾರೆ. ಭಾದ್ರಪದ ಮಾಸದಲ್ಲಿ ಶುಕ್ಲಪಕ್ಷದ ಸಂದರ್ಭದಲ್ಲಿ ಗಂಗಾಮತದ ಹೆಣ್ಣುಮಕ್ಕಳು ಗಣಪತಿ ಕಳುಹಿಸಿದ ನಂತರ ಬೇವಿನ ಸೊಪ್ಪಿನಿಂದ ತುಂಬಿದ ಬುಟ್ಟಿಯಲ್ಲಿ ಒಂದು ಮೂರ್ತಿಯನ್ನಿಟ್ಟುಕೊಂಡು ಮನೆ ಮನೆಗೂ ಹೋಗಿ ಕಾಳು ಕಡ್ಡಿಗಳನ್ನು ಪಡೆದುಕೊಳ್ಳುವ ವಿಶೇಷ ಆಚರಣೆ. ಅಗಲಮುಖ, ತಕ್ಕಂತೆ ಕಣ್ಣು, ತಲೆಗೆ ಕಿರೀಟದಂತೆ ಭಾಸವಾಗುವ ತಲೆಸುತ್ತು, ಮುಖಕ್ಕೆ ಚೂಪಾದ ಹುರಿಮೀಸೆ, ತೆರೆದ ಬಾಯಿ, ಹಣೆಗೆ ವಿಭೂತಿ ಕುಂಕುಮದ ಪಟ್ಟಿಗಳು, ಗಿಡ್ಡದಾದ ಕಾಲುಗಳಿರುವ ಕೈಯಲ್ಲಿ ಸಣ್ಣ ಕತ್ತಿ ಹಿಡಿದ ಮಣ್ಣಿನ ಈ ಬೊಂಬೆಯನ್ನು ಪೂರ್ಣ ಬೇವಿನಸೊಪ್ಪು ತುಂಬಿದ ಪುಟ್ಟಿಯಲ್ಲಿಟ್ಟುಕೊಂಡು ಗಂಗೆ ಮಕ್ಕಳು ಇಲ್ಲವೇ ತಳವಾರರು ಅವನನ್ನು ವರ್ಣಿಸುವ ಹಾಡುಗಳನ್ನು ಹಾಡುತ್ತಾರೆ. ಆರಂಭದಲ್ಲಿ ಜೋಕುಮಾರನನ್ನು ಹೊತ್ತ ಮಹಿಳೆಯರು ಊರಿನ ಗೌಡ ಅಥವಾ ಶಾನುಭೋಗರ ಮನೆಗೆ ಭೇಟಿ ನೀಡಿ ಕಾಳು ಕಡ್ಡಿಗಳನ್ನು ಪಡೆದ ನಂತರವೇ ಊರು ಸುತ್ತಲೂ ಆರಂಭಿಸುತ್ತಾರೆ. ಇದು ಏಳು ದಿನಗಳ ಕಾಲ ನಡೆಯುತ್ತದೆ. ಜೋಕುಮಾರನನ್ನು ಗ್ರಾಮೀಣ ದೇವತೆ, ಫಲದೇವತೆ, ಮಳೆದೇವತೆ, ಮಕ್ಕಳನ್ನು ಕೊಡುವ ದೇವತೆ ಹೀಗೆ ಹಲವು ವಿಧಗಳಿಂದ ನೋಡಿ ಭಕ್ತಿ ಗೌರವಗಳಿಂದ ಪೂಜಿಸುತ್ತಾರೆ. ಭಾದ್ರಪದದಲ್ಲಿ ಭೂಮಿಗೆ ಬಂದ ಗಣೇಶನು ಮಳೆ ತರದೇ ಕೈಲಾಸಕ್ಕೆ ಹೋದಾಗ ಈತನು ರೈತರ ಬವಣೆ ಕಂಡು ಮಳೆ ತರುತ್ತಾನೆಂದು ನಂಬುತ್ತಾರೆ. ಈ ಹಿನ್ನೆಲೆಯಲ್ಲಿ ಈತನು ಮಳೆ ದೇವತೆ. ಈ ದೇವತೆಯನ್ನು ಹೊತ್ತವರು ಪ್ರಸಾದದ ರೂಪದಲ್ಲಿ ಹುಳಿ, ಅಂಬಲಿ,

ನುಚ್ಚುಗಳೊಂದಿಗೆ ಆತನ ಸುತ್ತಲೂ ಹೊದಿಸಿದ ಬೇವಿನ ಸೊಪ್ಪನ್ನೇ ಪ್ರಸಾದದ ರೂಪದಲ್ಲಿ ಪ್ರತಿಯಾಗಿ ನೀಡುತ್ತಾರೆ. ಜೋಕುಮಾರನು ಮನೆ ಮನೆಗೆ ತೆರಳಿದಾಗ ಆ ಮನೆಯವರು ಹೈನುಗಾರರಾದರೆ ಅವನ ಬಾಯಿಗೆ ಬೆಣ್ಣೆಯನ್ನು ಸವರುತ್ತಾರೆ. ಮತ್ತೆ ಕೆಲವು ಮನೆಯವರು ತಮ್ಮ ಮನೆಯಲ್ಲಿರುವ ಸೊಳ್ಳೆ ಹಾಗೂ ತಗಣಿಗಳನ್ನು ತಂದು ಜೊಕುಮಾರನ ಬುಟ್ಟಿಗೆ ಹಾಕುತ್ತಾರೆ. ಕ್ಷುದ್ರ ದೇವತೆಯಾದ ಜೋಕುಮಾರನನ್ನು ಸಂತೃಪ್ತಿಪಡಿಸದಿದ್ದರೆ ತೊಂದರೆ ಕೊಡುತ್ತಾನೆ ಎಂದು ನಂಬಿದ್ದಾರೆ. ಗಣಪತಿ ರಾಜ ಐಶ್ವರ್ಯದ ಪ್ರತೀಕವೆಂತಲೂ, ಜೋಕುಮಾರನು ಬಡವರ ಪ್ರತಿನಿಧಿಯೆಂದಲೂ, ಬಡವರಿಗಾಗಿ ಮಳೆ ತರಿಸುತ್ತಾನೆಂಬ ನಂಬಿಕೆಯಿದೆ. ಜೋಕುಮಾರ ಮೂರ್ತಿಯನ್ನು ಕುಂಬಾರರು ಮಾಡುತ್ತಾರೆ. ಅಂಬಿಗರು, ಕಬ್ಬಲಿಗರು, ತಳವಾರರು ಈ ಮೂರ್ತಿಗಳನ್ನು ಕುಂಬಾರರಿಂದ ಕೋಡು ಪುಟ್ಟಿಯಲ್ಲಿಟ್ಟು ಅದಕ್ಕೆ ಬೇವಿನ ಸೊಪ್ಪಿನ ಶೃಂಗಾರ ಮಾಡುತ್ತಾರೆ. ಹೀಗೆ ಶೃಂಗಾರಗೊಂಡ ಬುಟ್ಟಿಗಳನ್ನು ತಲೆಯ ಮೇಲೆ ಹೊತ್ತು ಊರೂರು ಸುತ್ತುತ್ತಾರೆ. ಜೋಳ ಇತ್ಯಾದಿ ಧಾನ್ಯ ನೀಡಿದವರಿಗೆ ಪ್ರತಿಯಾಗಿ ಬೇವಿನ ತಪ್ಪಲು, ಹುಳಿ ಸೊಪ್ಪನ್ನು ನೀಡುತ್ತಾ ಏಳು ದಿನಗಳ ಕಾಲ ಸಂಚರಿಸುತ್ತಾರೆ. ಏಳನೇ ದಿನ ರಾತ್ರಿ ಹೊಲೆಮಾದಿಗರ ಕೇರಿಯ ಆಯ್ದು ಸ್ಥಳದಲ್ಲಿಟ್ಟು ಅದರ ಸುತ್ತಲೂ ಮುಳ್ಳಿನ ಕಂಟಿಗಳನ್ನು ಇಟ್ಟು ಹೆಣ್ಣುಮಕ್ಕಳು ಅದರ ಸುತ್ತಲೂ ಹಾಡುತ್ತಾ ಸುತ್ತುತ್ತಾರೆ. ಹೀಗೆ ಸುತ್ತುವ ಸಂದರ್ಭದಲ್ಲಿ ಹೆಣ್ಣುಮಕ್ಕಳು ಸೆರಗಿಗೆ ಮುಳ್ಳುಗಳು ಚುಚ್ಚಿದಾಗ, ಗಂಡಸರು ತಮ್ಮ ಹೆಂಗಸರ ಸೆರಗನ್ನು ಜೋಕುಮಾರ ಎಳೆದನೆಂದು ಭಾವಿಸಿ ಒನಕೆಯಿಂದ ಬಡಿಯುತ್ತಾರೆ. ಜೋಕುಮಾರ ಮೂರ್ತಿಯ ರುಂಡ ಅಂಗಾತಬಿದ್ದರೆ ಸುಖಕಾಲವೆಂತಲೂ ಬೋರಲಾಗಿ ಬಿದ್ದರೆ ದುಃಖದ ಕಾಲವೆಂತಲೂ ನಂಬುತ್ತಾರೆ. ಈ ರುಂಡ ಮುಂಡಗಳನ್ನು ಆಯ್ದು ಅಗಸರ ಕಾಯಕದ ಸ್ಥಳವಾದ ಹೊಳೆಯ ಕಲ್ಲಿನಡಿ ಹಾಕಿ ಬರುತ್ತಾರೆ."[೨೩] ಅಂದರೆ ಸತ್ತ ಜೋಕುಮಾರನಿಗೆ ಬೆಳಗಿನ ಜಾವದಲ್ಲಿ ಊರಿನವರು ಅಂದರೆ ಕುರಿ ಹಿಂಡು ಇರುವವರು ಪ್ರತಿ ವರ್ಷ ಒಂದು ಮನೆಯವರು ಜೋಕಪ್ಪನಿಗೆ ಬಲಿ ಕೊಡಬೇಕೆಂದು ತೀರ್ಮಾನ ಮಾಡಿಕೊಂಡಿರುತ್ತಾರೆ. ಆದ್ದರಿಂದ ಪ್ರತಿವರ್ಷವೂ ಒಂದು ಮನೆಯವರು ಜೋಕಪ್ಪನು ಸತ್ತ ನಂತರ ಒಂದು ಕುರಿಯನ್ನು ಬಲಿ ಕೊಡುತ್ತಾರೆ. ನೆಂಟರು, ಸಂಬಂಧಿಕರು, ಸ್ನೇಹಿತರು ಮುಂತಾದವರು ಸೇರಿಕೊಂಡು ಸಾಮೂಹಿಕವಾಗಿ ಊಟವನ್ನು ಮಾಡುತ್ತಾರೆ. ನಂತರ ಮಧ್ಯಾಹ್ನ ೧೨ ಗಂಟೆಯ ಹೊತ್ತಿಗೆ ಜೋಕಪ್ಪನ ಪ್ರಸಾದವನ್ನು ತೆಗೆದುಕೊಂಡು ಹೋಗಿ ತಮ್ಮ ಹೊಲಗಳಿಗೆ ಚರಗವನ್ನು ಚೆಲ್ಲುತ್ತಾರೆ. ಹೀಗೆ ಮಾಡಿದರೆ ಬೆಳೆಯು ಚೆನ್ನಾಗಿ ಬರುತ್ತದೆ ಎಂಬುದು ಜನಪದರ ನಂಬಿಕೆಯಾಗಿದೆ.

ನೀಲಿ ರೋಗದ ಹರಕೆ ಆಚರಣೆ

ಇದು ಪ್ರಾದೇಶಿಕವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಬಳಕೆಯಲ್ಲಿದೆ. ದನಕರುಗಳಿಗೆ ಬರುವ

ಭಯಂಕರ ರೋಗಗಳನ್ನು ನಿರ್ಮೂಲನೆ ಮಾಡುವ ಸಲುವಾಗಿ ಮಾಡುವ ಹರಕೆಯಾಗಿದೆ. ಮುಖ್ಯವಾಗಿ ಕುರಿಗಳಿಗೆ ನೀಲಿರೋಗ ಬರುವುದು ಇದೆ. ಮೇವಿನ ಮೂಲಕ ಅಜೀರ್ಣವಾದ ಮೇಲೆ ಕುರಿಗಳಿಗೆ ನೀಲಿರೋಗ ಬರುತ್ತದೆ. ಈ ರೋಗಕ್ಕೆ ವಿಶೇಷವಾದ ಹರಕೆಯನ್ನು ಗ್ರಾಮದೇವತೆಗೆ ಹೇಳಿಕೊಳ್ಳುತ್ತಾರೆ. "ಕುರಿಗಳಿಗೆ ಬರುವ ನೀಲಿರೋಗದ ನಿವಾರಣೆಗೆ ಹಿಂಡಿನ ಕುರಿಯೊಂದನ್ನು ಬಲಿ ಕೊಡುವ ವಿಶಿಷ್ಟ ಆಚರಣೆ ಕೆಲವು ಭಾಗದಲ್ಲಿ ಇದೆ. ಜೀವಂತ ಕುರಿಯೊಂದನ್ನು ತಲೆಕೆಳಗಾಗಿ ಮರಕ್ಕೆ ಕೆಂಪು ದಾರದಿಂದ ನೇಣು ಹಾಕುವುದರೊಂದಿಗೆ ಬಲಿ ನೀಡಲಾಗುತ್ತದೆ. ಈ ಬಗೆಯ ವಿಚಿತ್ರ ಹರಕೆಯನ್ನು ಕೊಪ್ಪಳ ಜಿಲ್ಲೆಯ ಇಳಕಲ್ಲ ಗುಡ್ಡ, ಗಿಣಿಗೇರ, ಇಂದರಗಿ ವೆಂಕಟಾಪುರ, ಚಿಲ್ಕಮಕ್ಕಿ, ಲೇಬಗೆರಾ ಮುಂತಾದ ಊರುಗಳಲ್ಲಿ ಕಾಣಬಹುದಾಗಿದೆ. ಆನೆ ತಿರುಗಾಡುವ ದಾರಿಗಳ ಪಕ್ಕದಲ್ಲಿ ಕುರಿಗಳನ್ನು ತಲೆಕೆಳಗು ಮಾಡಿ ತೂಗುಹಾಕುವುದು ರೂಢಿ. ಮಂದೆಯ ಕುರಿಗಳಲ್ಲಿ ಯಾವುದೇ ಒಂದಕ್ಕೆ ರೋಗ ಬಂದರೂ ಒಂದು ಮರಿಯನ್ನು ಅಮ್ಮನಿಗೆ ಮೇಲಿನ ರೀತಿಯಲ್ಲಿ ಬಲಿ ಕೊಡುತ್ತಾರೆ. ಹೀಗೆ ಕಾಲಿಗೆ ಕೆಂಪು ದಾರವನ್ನು ಕಟ್ಟಿಸಿಕೊಂಡು, ಮರದ ರೆಂಬೆಯಲ್ಲಿ ನೇತಾಡುವ ಕುರಿಮರಿ ನೀರು, ಆಹಾರವಿಲ್ಲದೆ ಒದ್ದಾಡಿ, ರಕ್ತಕಾರಿ ಸಾಯುತ್ತದೆ. ಹೆದ್ದಾರಿ ಬದಿಯಲ್ಲಿ ಬರುವ ಹುಣಿಸೆ, ಆಲ, ಕರಿಜಾಲಿ, ಬಸುರಿ ಅಥವಾ ಬಾರೆ ಮರಗಳೇ ಬಲಿಕಂಬಗಳು." ಈ ಬಗೆಯ ವಿಶಿಷ್ಟವಾದ ಬಲಿ ಸ್ವರೂಪವನ್ನು ದಾಖಲುಮಾಡುತ್ತಾರೆ.[೨೪]

ಪ್ರಾಣಿಬಲಿಯಲ್ಲಿ ಭಾಗವಹಿಸುವ ಜಾತಿಗಳ ವಿವರಗಳು

ಬಳ್ಳಾರಿ ಜಿಲ್ಲೆಗೆ ಸೇರಿದ ಸುಮಾರು ೭ ತಾಲೂಕುಗಳಲ್ಲಿ ಪ್ರಾಣಿಬಲಿಗಳು ನಡೆಯುತ್ತವೆ. ಪ್ರತಿಯೊಂದು ಊರಲ್ಲಿ ಒಂದೊಂದು ಗ್ರಾಮದೈವಕ್ಕೆ ಪ್ರಾಣಿಬಲಿಗಳೂ ನಡೆಯುತ್ತವೆ. ವಿವಿಧ ರೀತಿಯ ಆಚರಣೆಗಳಲ್ಲಿ ಪ್ರಾಣಿಬಲಿಯನ್ನು ಮಾಡುವುದನ್ನು ಈಗಾಲೇ ಚರ್ಚೆ ಮಾಡಲಾಗಿದೆ. ಪ್ರತಿಯೊಂದು ಗ್ರಾಮದೇವತೆಯ ಆಚರಣಾತ್ಮಕ ಹಿನ್ನೆಲೆಯಲ್ಲಿ ಊರಿನ ಸಮಸ್ತ ಜನರೂ ಸೇರುತ್ತಾರೆ. ಗೌಡ, ರೆಡ್ಡಿ, ಒಕ್ಕಲಿಗ, ಹೊಲೆಯ, ಮಾದಿಕ, ಕೊರಚ, ತಳವಾರ, ಬಾರಿಕರು, ನಾಯಕರು, ಭೋವಿ ಹಾಗೂ ಲಂಬಾಣಿ ಮುಂತಾದ ಸಮುದಾಯದವರೂ ಸೇರುತ್ತಾರೆ. ಆದರೆ ಪ್ರತ್ಯೇಕವಾಗಿ ಪ್ರಾಣಿಬಲಿಯನ್ನು ಕೊಡುವುದು ಆದಿಕರ್ನಾಟಕ, ಆದಿದ್ರಾವಿಡ ಸಮುದಾಯಕ್ಕೆ ಸೇರಿದವರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ ಎಂಬುದನ್ನು ಗಮನಿಸಬಹುದು. ಇತ್ತೀಚಿಗೆ ರೆಡ್ಡಿ, ಗೌಡ ಮುಂತಾದ ಸಮುದಾಯದವರೂ ಪ್ರಾಣಿ ಬಲಿಯನ್ನು ನಿರ್ವಹಿಸುತ್ತಾರೆ. ಪ್ರಾಚೀನ ಕಾಲದಲ್ಲಿ ಅಥವಾ ೨೦, ೩೦ ದಶಕದಲ್ಲಿ ಅಡವಿಯ ಜನಾಂಗಗಳು, ಹಿಂದುಳಿದ ಪಂಗಡಗಳು, ಹಿಂದುಳಿದ ಜಾತಿಗಳವರು, ಇವರ ಜೊತೆಯಲ್ಲಿ ಮುಸಲ್ಮಾನರೂ ಸೇರಿಕೊಳ್ಳುತ್ತಿದ್ದರು ಎಂದು ಮಾಹಿತಿದಾರು ತಿಳಿಸಿದ್ದಾರೆ. ಮುಸಲ್ಮಾನರು ತಮ್ಮ ಸಮುದಾಯದ

ಪೀರ ಸಾಹೇಬನ ಹೆಸರಿನಲ್ಲಿ ಪ್ರಾಣಿ ಬಲಿ ಮಾಡುತ್ತಿದ್ದರು ಎಂದು ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ತಿಳಿಸಿದ್ದಾರೆ. ಅಡವಿ ಜನಾಂಗದವರು ತಮ್ಮತಮ್ಮ ಕುಲದೇವತೆಗಳಿಗೆ ಊರಹಬ್ಬ ಮಾಡುವಾಗ ಪ್ರಾಣಿಬಲಿಗಳನ್ನು ಮಾಡುತ್ತಿದರು ಎಂದು ಗಮನಿಸಬಹುದು. ಕೆಲವರು ಈ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದವರು ಹಿಂದೂ ದೇವತೆಗಳ ಹೆಸರಿನಲ್ಲಿ ಪ್ರಾಣಿಬಲಿ ಮಾಡುವ ಪದ್ಧತಿ ಬಳ್ಳಾರಿ ಜಿಲ್ಲೆಯಲ್ಲಿ ಇತ್ತು ಎಂದು ಮಾಹಿತಿದಾರರು ತಿಳಿಸುತ್ತಾರೆ. ತದನಂತರದಲ್ಲಿ ಜೈನರು, ಬೌದ್ಧರು, ಕ್ರಿಶ್ಚಿಯನ್ ಸಮುದಾಯಗಳು ಪ್ರಾಣಿಬಲಿಗಳನ್ನು ನೀಡುವುದಿಲ್ಲ. ಇವರು ವಾರ್ಷಿಕವಾಗಿ ನಡೆಯುವ ಊರಹಬ್ಬ, ಊರಜಾತ್ರೆಗಳನ್ನು ಪ್ರಾಣಿಬಲಿ ಮಾಡುವ ಸಮಯದಲ್ಲಿ ಪಾಲ್ಗೊಳ್ಳುವುದಿಲ್ಲ. ಇದರಿಂದ ಸಾಮರಸ್ಯ ಮನೋಭಾವನೆಗಳು ನಿರ್ಮಾಣವಾಗುತ್ತವೆ.

೩.೩ ವಾರ್ಷಿಕಾವರ್ತನ ಆಚರಣೆಗಳಲ್ಲಿ ಬಲಿಪದ್ಧತಿ

ಆಧುನಿಕ ಕ್ಷೇತ್ರಕಾರ್ಯ ಸಂದರ್ಭದಲ್ಲಿ ವಿವಿಧ ರೀತಿಯ ಸಿದ್ಧಾಂತಗಳು ರೂಪುಗೊಳ್ಳುತ್ತಿವೆ. ಈ ಸಿದ್ಧಾಂತಗಳು ಮೌಖಿಕ ಸಾಹಿತ್ಯದ ಮೇಲೆ ಬೆಳಕು ಚೆಲ್ಲುತ್ತವೆ. ಸಂಪ್ರದಾಯಗಳು, ಪೂಜೆ ಪುನಸ್ಕಾರಗಳು, ನಂಬಿಕೆಗಳು, ಆಚರಣೆಗಳಿಗೆ ಸಂಬಂಧಿಸಿದಂತೆ ಮೌಖಿಕ ಸಾಹಿತ್ಯ ಸಿದ್ಧಾಂತದ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ. ಭೌಗೋಳಿಕವಾಗಿ ಮತ್ತು ಪ್ರಾದೇಶಿಕವಾಗಿ ಜಾತ್ರೆ, ಆಚರಣೆ, ಹಬ್ಬ ಹರಿದಿನಗಳ ಮೇಲೆ ಅಧ್ಯಯನ ನಡೆಸಬೇಕಾದರೆ ಯಾವುದೇ ಸಿದ್ಧ ಮಾದರಿಗಳಿರುವುದಿಲ್ಲ. ವ್ಯಾಪಕವಾದ ಕ್ಷೇತ್ರಕಾರ್ಯ ಬಹಳ ಮುಖ್ಯವಾಗುತ್ತವೆ. ಇಂತಹ ಮಾದರಿಗಳನ್ನು ಅನುಸರಿಸಿ ಸಂಶೋಧನೆ ನಡೆಸಬೇಕಾಗುತ್ತದೆ.

ಈ ಮೌಖಿಕ ಸಾಹಿತ್ಯ ಪರಂಪರೆಯಲ್ಲಿ ಆಚರಣಾ ವಿಧಿ ವಿಧಾನಗಳನ್ನು ಸ್ಪಷ್ಟವಾಗಿ ಗಮನಿಸಬಹುದು. ಇಲ್ಲಿ ಪ್ರಧಾನವಾಗಿ ಮಹಿಳಾ ನಾಮಧೇಯಗಳ ಆಚರಣೆ ಮನುಷ್ಯನಿಗೆ ಮುಖ್ಯವೆನಿಸುತ್ತದೆ. ಮಾನವನಿಗೆ ದೇವತೆ, ದೇವರು ಎಂದರೆ ಬಹಳ ಭಯ ಮತ್ತು ಭಕ್ತಿ. ಈ ಭಕ್ತಿಯ ಹಿನ್ನೆಲೆಯಲ್ಲಿ ಬದುಕನ್ನು ಸಾಗಿಸುವ ಪರಂಪರೆಯನ್ನು ಮಾನವ ನಡೆಸಿಕೊಂಡು ಬಂದಿದ್ದಾನೆ. ಈ ಹಿನ್ನೆಲೆಯಲ್ಲಿ ಜಾನಪದ ಶಾಸ್ತ್ರವು ಬಹಳ ಮುಖ್ಯವಾಗಿರುತ್ತದೆ. ಸಾಂಸ್ಕೃತಿಕ ಅಧ್ಯಯನಕ್ಕೆ ವಿಶಿಷ್ಟ ಸ್ಥಾನಮಾನವಿದ್ದರೂ ಪರಂಪರೆ ಒಂದು ಭಾಗವಾಗಿ ನೋಡುತ್ತೇವೆ. ಪ್ರಧಾನವಾಗಿ ಮಾನವ ಜೀವನಚರಿತ್ರೆಯನ್ನು ಅಧ್ಯಯನ ನಡೆಯುವ ಒಂದು ಸಿದ್ಧಾಂತವಾಗಿ ಕಂಡುಬರುತ್ತದೆ. ಪರಂಪರಾಗತವಾಗಿ ಬಂದ ಮಾನವ ಜೀವನದ ಚರಿತ್ರೆಗಳನ್ನು ತಿಳಿದುಕೊಳ್ಳಲು ನಂಬಿಕೆ ಮತ್ತು ಆಚರಣೆಗಳು ಮಹತ್ವ ಪಡೆದುಕೊಳ್ಳುತ್ತವೆ. ಸಾಮಾನ್ಯವಾಗಿ ಗ್ರಾಮ, ಹಳ್ಳಿಗಳಲ್ಲಿ ನೆಲೆಯಾಗಿರುವ ಆಚಾರ ವಿಚಾರಗಳು, ಸಂಪ್ರದಾಯಗಳು, ಆರಾಧನೆಗಳು, ಕುಣಿತಗಳು, ಹಾಡುಗಳು, ಕಥೆಗಳು, ಐತಿಹ್ಯಗಳು, ಸ್ಥಳಪುರಾಣಗಳು, ನಂಬಿಕೆಗಳು ನಿಷೇಧಗಳು, ಪುರಾಣಗಳು, ಬೈಗಳು ಮುಂತಾದವುಗಳನ್ನು ಗಮನಿಸುವಾಗ ಮಾನವನ ಸಾಂಸ್ಕೃತಿಕ

ಚಿತ್ರಣ ಕಂಡುಕೊಳ್ಳಬಹುದು. ಊರನ್ನು ಅಥವಾ ಗ್ರಾಮವನ್ನು ಕಾಯುವ, ರಕ್ಷಿಸುವ, ಸಲುಹುವ ದೇವರೇ ಗ್ರಾಮದೇವತೆಗಳೆಂದು ಕರೆಯುತ್ತಾರೆ. ಮಾರಮ್ಮ, ಮಾರಿ, ಕರಿಯವ್ವ, ಸಿರಿಯವ್ವ, ಮಾಯವ್ವ, ದ್ಯಾಮವ್ವ, ದೇವಮ್ಮ, ದೊಡ್ಡಮ್ಮ, ದುರುಗಮ್ಮ, ಕನಕ ಪರಮೇಶ್ವರಿ, ಮೈಲ್ಲಾರಿದೇವಿ, ಮುಂತಾದ ದೇವಾನು ದೇವತೆಗಳಿಗೆ ಎಡೆ ಅರ್ಪಿಸುವುದು ಇದೆ. ಈ ಸಮರ್ಪಿಸುವ ಭಾವನೆ ಪರಂಪರಾಗತವಾಗಿ ಆರಾಧನಾ ಲೋಕದಲ್ಲಿ ವಿಶಿಷ್ಟ ರೀತಿಯಲ್ಲಿರುತ್ತದೆ. ಎಡೆ ಅರ್ಪಿಸುವ ಸಂದರ್ಭಕ್ಕೆ ಪ್ರಾಣಿಬಲಿ ಕೊಡುತ್ತಾರೆ. ಪ್ರಾಣಿಬಲಿಗಳಿಗೆ ತನ್ನದೇ ಆದ ಚಾರಿತ್ರಿಕ ನಿಯಮಗಳು ಇವೆ ಎಂದು ಜನಪದರು ನಂಬುತ್ತಾರೆ.

ಬಳ್ಳಾರಿ ಜಿಲ್ಲೆಯಾದ್ಯಂತ ಗ್ರಾಮದೈವಗಳ ಆಚರಣೆಗಳು ಬಹಳ ಮಹತ್ವವನ್ನು ಪಡೆದುಕೊಂಡು ನಡೆಯುತ್ತಿವೆ. ವಿವಿಧ ರೀತಿಯ ವೈವಿಧ್ಯಮಯವಾದ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಗ್ರಾಮದೈವಗಳಾದ ಶಕ್ತಿದೇವತೆಗಳು, ದೊಡ್ಡದೊಡ್ಡ ಗೋಪುರಗಳು, ಗುಡಿಗಳು, ಶಿಷ್ಟದೈವಗಳು, ಜನಪದ ದೈವಗಳು ಅನಾವರಣಗೊಳ್ಳುತ್ತವೆ. ಹುಲಿಗೆಮ್ಮ, ಗಾಳೆಮ್ಮ, ಉಚ್ಚಂಗಿದುರ್ಗಿ, ಹಂಪೆಯ ವಿರೂಪಾಕ್ಷ, ವಿವಿಧ ರೀತಿಯ ದೇವಾಲಯಗಳು, ಗೋಪುರಾದಿಗಳು ಇವೆ. ದೇವಸ್ಥಾನಗಳಲ್ಲಿ ವಿವಿಧ ರೀತಿಯ ಆರಾಧನೆಗಳ ಜಾತ್ರೆ, ಹಬ್ಬ, ಸಂಪ್ರದಾಯ, ತೇರು, ರಥೋತ್ಸವ, ಪಲ್ಲಕಿ, ಉತ್ಸವ, ಜನಪದರ ಸೊಗಡನ್ನು ಉಳಿಸಿಕೊಂಡಿರುವುದು ಪ್ರಸ್ತುತ ಕೂಡ ಗಮನಿಸಬಹುದು. ಪ್ರಾಣಿಬಲಿಗಳನ್ನು ನಡೆಸುವ ಪ್ರಕ್ರಿಯೆಯಿಂದ ಮೌಢ್ಯತೆ ಸಂದೇಶಗಳು ಸಮಸ್ತ ಜನಪದರಿಗೆ ರವಾನೆಯಾಗುತ್ತಿರುವುದು ಗುರುತಿಸಬಹುದು. ಏಳು ತಾಲೂಕುಗಳಲ್ಲಿ ವಿವಿಧ ರೀತಿಯ ಆಚರಣೆಗಳು ರೂಢಿಯಲ್ಲಿರುವ ದೇವತೆಗಳಿಗೆ ತನ್ನದೇ ಆದ ರೀತಿ–ರಿವಾಜುಗಳಲ್ಲಿ ವಾರ್ಷಿಕವಾಗಿ ಆಚರಣೆಗಳು ಮಾಡುತ್ತಾರೆ. ಜನಪದ ದೇವತೆಗಳು ಯಾವಾಗಲೂ ಮಾಂಸಾಹಾರಿಗಳು ಎಂದು ಜನರು ನಂಬುತ್ತಾರೆ. ರಕ್ತವನ್ನು ಅಪೇಕ್ಷಿಸಿ ಸ್ವೀಕರಿಸುವ ದೇವತೆಗಳೇ ಹೆಚ್ಚು ಎಂದು ನಂಬಿಕೆಯಾಗಿದೆ. ಇದನ್ನು ಹಬ್ಬದೂಟ, ಬಾಡೂಟ ಎಂದಲೂ ಕರೆದು ವಿಶೇಷವಾಗಿ ಮಾರಮ್ಮ, ದುರ್ಗಿ, ಮಾಯಮ್ಮ, ಮಾತಂಗಿ ದುರ್ಗಿ, ಉಚ್ಚಂಗಿದುರ್ಗಿ, ಉಚ್ಚಂಗೆಮ್ಮ, ಮಾರಿಯಮ್ಮ, ಸ್ತ್ರೀದೇವತೆಗಳು ಆಚರಣೆಯಲ್ಲಿ ಪ್ರಾಣಿಬಲಿಗಳನ್ನು ಕೊಡುತ್ತಾರೆ.

ದೇವತೆಗಳನ್ನು ಶಾಂತಿ ಮಾಡುವುದಕೋಸ್ಕರ ಮಾಂಸವನ್ನು ಮತ್ತು ರಕ್ತವನ್ನು ಅರ್ಪಿಸುವ ಪರಂಪರೆಯನ್ನು ಬೆಳೆಸಿಕೊಂಡಿರುವುದು ಗುರುತಿಸಬಹುದು. ಗ್ರಾಮದೇವತೆಯರು ಮತ್ತು ಸಪ್ತಮಾತೃಕೆಯರು ಸ್ತ್ರೀಯರು ಆದುದರಿಂದ ಆ ದೇವತೆಗಳ ಮುಖಗಳು ಕಪ್ಪಾಗಿರುವ ಮತ್ತು ಕೆಂಪಾಗಿ ಇರುತ್ತವೆ. ಈ ಕೆಂಪು ಮತ್ತು ಕಪ್ಪು ದೇವತೆಗಳಿಗೆ ಪ್ರಾಣಿಬಲಿಗಳು ಬೇಕೇ ಬೇಕು ಎಂದು ಪ್ರಾಣಿಬಲಿಗಳನ್ನು ಕೊಡಬೇಕೆಂದು ಮಾನವರು ನಂಬುತ್ತಾರೆ.

ದೇವಾನುದೇವತೆಗಳಿಗಳಿಗೆ ತಳಸಮುದಾಯಗಳು ನಡೆದುಕೊಳ್ಳುವ ರೀತಿ ರಿವಾಜುಗಳ ಬಗ್ಗೆ ಪ್ರಾಣಿಬಲಿ ಬೆಳಕು ಚೆಲ್ಲುತ್ತದೆ. ಹಾಗೆಯೇ ಬಲಿಯನ್ನು ಅಪೇಕ್ಷಿಸುವ ರಕ್ತವನ್ನು ಸಮರ್ಪಿಸಿ ಶಾಂತಿ ಮಾಡುವ ದೇವರುಗಳಾದ ದುರ್ಗೆ, ಮಾರಿ, ಮಸಣಿ, ಮೈಲಾರ ಈ ದೇವತೆಗಳು ರೋಗಗಳನ್ನು ಮತ್ತು ದುಷ್ಟ ಶಕ್ತಿಗಳನ್ನು ಸರ್ವನಾಶ ಮಾಡುವ ಶಕ್ತಿ ಪಡೆದುಕೊಂಡಿವೆ ಎಂದು ಅವುಗಳಿಗೆ ಪ್ರಾಣಿಗಳ ಬಲಿ ಕೊಡುವುದು ರೂಢಿಸಿಕೊಂಡಿದ್ದಾರೆ.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ಈ ಜಾತಿಗಳು ತಮ್ಮ ಕುಲದೈವಗಳನ್ನು ತಮ್ಮದೇ ಆದ ರೀತಿ ರಿವಾಜುಗಳಿಗೆ ಅನುಗುಣವಾಗಿ ಆಚರಿಸುತ್ತಾರೆ. ಪ್ರಾಣಿಬಲಿಯನ್ನು ನಂಬಿಕೆಯ ಹಿನ್ನೆಲೆಯಲ್ಲಿ ಗುರುತಿಸಬಹುದುದಾಗಿದೆ. ಮಾನವನ ಚರಿತ್ರೆಯಲ್ಲಿ ಪ್ರಾಣಿಬಲಿಗೆ ಬಹಳ ಮಹತ್ವವಿದೆ. ಇದರ ಹಿನ್ನೆಲೆಯಲ್ಲಿ ಜನಪದರ ಆಚರಣೆಗಳೇ ಮೂಲವಾಗಿದ್ದು, ಮಾನವನ ಬದುಕಿನ ಜೊತೆಗೆ ಪ್ರಾಣಿಬಲಿ ಮಹತ್ವವನ್ನು ಪಡೆದುಕೊಂಡಿದೆ. ಮೊದಲಲ್ಲಿ ನರಮನುಷ್ಯನನ್ನು ದೇವತೆಗೆ ಬಲಿಯಾಗಿ ಅರ್ಪಿಸುತ್ತಿದ್ದ ಸಂದರ್ಭಗಳು ಹೆಚ್ಚು, ಇದರ ಜೊತೆಯಲ್ಲಿ ತಾನು ಸಾಕಿಸಲುಹಿದ ಪ್ರಾಣಿಗಳನ್ನು, ಪಶುಗಳನ್ನು ದೇವತೆಗೆ ಬಲಿಯಾಗಿ ಅರ್ಪಿಸುವುದು ಒಂದು ವಿಪರ್ಯಾಸವೆಂದು ಭಾವಿಸಬಹುದು. ಮೂಕ ಮತ್ತು ಮುಗ್ಧ ಪ್ರಾಣಿಗಳಿಗೆ ತಾನು ದೇವತೆಗಳಿಗೆ ಬಲಿಯಾಗುತ್ತಿರುವುದು ಗೊತ್ತಾಗುವುದಿಲ್ಲ. ಆದರೂ ತಾನು ಸಾಕಿಸಲುಹಿದ ಯಜಮಾನನ್ನೇ ದೈವವೆಂದು ತಿಳಿದಿರುವ ಈ ಮುಗ್ಧಪ್ರಾಣಿಗಳು ದೇವತೆಗಳ ಹೆಸರಿನಲ್ಲಿ ಬಲಿಯಾಗುತ್ತವೆ. ಸ್ತ್ರೀ ದೇವತೆಗಳನ್ನು ಹಲವಾರು ಸಾಮಾಜಿಕ ಕೌಟುಂಬಿಕ ತೊಂದರೆಗಳ ನಿವಾರಣೆಗಾಗಿ ಗುಡ್ಡಗಾಡುಗಳಲ್ಲಿ ವಾಸ ಮಾಡುವ ಮಾನವ ಭೂಮಿ ಫಲವತ್ತಾದ ಗಡ್ಡೆ ಗೆಣಸು ಕೊಡುತ್ತದೆ. ಜನ್ಮ ಕೊಟ್ಟ ತಾಯಿ ಕಷ್ಟಪಟ್ಟು ಸಾಕುತ್ತಾಳೆ, ಸಲುಹುತ್ತಾಳೆ. ಈ ಹೋಲಿಕೆಯ ಫಲವಾಗಿ ಅಮ್ಮನ ಕಲ್ಪನೆಯಲ್ಲಿ ಭೂಮಿಯನ್ನು ಪೂಜಿಸಲು ಪ್ರಾರಂಭಿಸಿದ. ಈಗಲೂ ಮುಂಗಾರು ಮಳೆ ಬಂದ ನಂತರದಲ್ಲಿ ಕೃಷಿಕರು ಭೂಮಿ ಪೂಜೆ ಮಾಡುವುದು ಇದೆ. ಇದನ್ನೇ ಶಕ್ತಿದೇವತೆ, ಭೂದೇವಿ, ಭೂದೇವತೆ ಎಂದು ಕರೆಯುವುದು ಇದೆ. ಮನುಷ್ಯ ತಾನು ವಾಸ ಮಾಡುವ ನಿರ್ಜೀವ ವಸ್ತುಗಳನ್ನು ನೋಡಿ ಭಯ ಭಕ್ತಿಯಿಂದ ಅವುಗಳನ್ನು ಆರಾಧನೆ ಮಾಡಲು ಮುಂದಾದನು.

ಗ್ರಾಮದೇವತೆಗಳಾದ ಮಾಯಮ್ಮ, ಮಾರಮ್ಮ, ಕಾಳಮ್ಮ, ದುರುಗಮ್ಮ, ಅಕ್ಕಮ್ಮ ಮುಂತಾದ ಹೆಸರುಗಳಿಂದ ಕರೆದು ಹಬ್ಬ ಆಚರಿಸುತ್ತಾರೆ. ಹಲವಾರು ರೀತಿಯ ಸಮುದಾಯಗಳು ನೆಲೆಯಾಗಿರುವುದು ಗುರುತಿಸಬಹುದು. ವಿಶೇಷವಾಗಿ ಈ ಬುಡಕಟ್ಟು ಸಮುದಾಯಗಳು ಆಚರಿಸುವ ಗ್ರಾಮದೇವತಾ ಪೂಜೆಗಳಲ್ಲಿ ಪ್ರಾಣಿಬಲಿಗಳ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ತೌಲನಿಕ ಅಧ್ಯಯನಕ್ಕಾಗಿ ಸಂಬಂಧಿಸಿದಂತೆ ಕರ್ನಾಟಕದ ಇತರೆ ಭಾಗಗಳಲ್ಲಿ ನಡೆಯುವ ಪ್ರಾಣಿಬಲಿಗಳನ್ನು ಗಮನಿಸಲಾಗಿದೆ. ನಂಬಿಕೆಯ ಮೂಲಕ ಆಚರಣೆ–ಆರಾಧನೆಗಳು

ನಡೆಯುತ್ತವೆ ಆದರೂ ಗ್ರಾಮದೈವಗಳ-ಗ್ರಾಮದೇವತೆಗಳ, ಗ್ರಾಮದೇವರು, ಶಿಷ್ಟದೇವತೆಗಳ (ಪುರುಷ-ಸ್ತ್ರೀ) ಪರಿಕಲ್ಪನೆಯಲ್ಲಿ ಯಾವುದೇ ಒಂದು ಗ್ರಾಮದೈವಕ್ಕೆ ತನ್ನದೇ ಆದ ಯಾವುದಾದರೂ ಒಂದು ವಸ್ತುವನ್ನು ಅಥವಾ ಪ್ರಾಣಿಯನ್ನು ಅರ್ಪಿಸಿ ದೇವರುಗಳನ್ನು ತೃಪ್ತಿಪಡಿಸಿ, ಶಾಂತಿಪಡಿಸುವ ಉದಾಹರಣೆಗಳು ದೊರೆಯುತ್ತವೆ.

ಬಳ್ಳಾರಿ ತಾಲೂಕು

ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆಗೆ ಒಂದು ವಿಶೇಷ ಸ್ಥಾನಮಾನ ಇದೆ. ಸಾಂಸ್ಕೃತಿಕವಾಗಿ ವಿವಿಧ ರೀತಿಯ ಆಚರಣೆಗಳು ಇಲ್ಲಿ ನಡೆಯುವುದನ್ನು ಗುರುತಿಸಬಹುದು. ಗ್ರಾಮದೇವತೆಗಳ ಆರಾಧನೆಯು ಇಲ್ಲಿ ಸಮೃದ್ಧವಾಗಿ ನಡೆಯುತ್ತವೆ. ತಾಲೂಕಿನಾದ್ಯಂತ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡು ಆರಾಧನೆಗೊಳ್ಳುತ್ತಿರುವ ಬಳ್ಳಾರಿಯಮ್ಮ ಅಥವಾ ಬಳ್ಳಾರಿ ಶ್ರೀ ಕನಕದುರ್ಗಮ್ಮ ದೇವಿ ದೇವಾಲಯ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಬಳ್ಳಾರಿ ತಾಲೂಕಿನಾದ್ಯಂತ ಇಂತಹ ಪರಂಪರೆಯನ್ನು ಗುರುತಿಸಬಹುದಾರೂ ವಿಶೇಷವಾಗಿ ಗ್ರಾಮದೇವತೆ ಮಾರಮ್ಮನಿಗೆ ಶಾಂತಿ ಮಾಡುವುದು ಅತ್ಯಂತ ವಿಶಿಷ್ಟವಾಗಿರುವುದು ಗಮನಿಸುತ್ತೇವೆ. ವೈ.ಹನುಮಂತ ರೆಡ್ಡಿಯವರು ಬಳ್ಳಾರಿ ಶ್ರೀ ಕನಕದುರ್ಗಮ್ಮ ಎಂಬ ಕೃತಿಯಲ್ಲಿ ಈ ಮಾತುಗಳನ್ನು ವ್ಯಕ್ತಪಡಿಸುತ್ತಾರೆ. "ಬಳ್ಳಾರಿ ಎಂಬ ದೇವತೆಯ ಹೆಸರು ಕಾಲಕ್ರಮೇಣ ರೂಢಿ ತಪ್ಪುತ್ತಾ ಬಂದಂತೆ ಆ ಪದದೊಂದಿಗೆ ದುರ್ಗಮ್ಮ ಎಂಬ ಹೆಸರನ್ನು ಜೋಡಿಸಿ ಕರೆಯಲಾಗಿದೆ. ಆದ್ದರಿಂದ ಈಗ ಬಳ್ಳಾರಿ ದುರ್ಗಮ್ಮ ಎಂದು ಕರೆಯಲಾಗುತ್ತದೆ. ತೀರ ಇತ್ತೀಚೆಗೆ ಕನಕದುರ್ಗಮ್ಮ ಎಂದು ಕರೆಯಲು ಪ್ರಾರಂಭಿಸಿದ್ದಾರೆ. ಈಗ ಈ ದೇವಾಲಯ ಬಳ್ಳಾರಿ ಮಹಾನಗರದ ಮಧ್ಯದಲ್ಲಿದೆ."[೨೫]

ಸಾಮಾಜಿಕವಾಗಿ ಈ ದೇವತೆಗೆ ಪ್ರಾಣಿಬಲಿಗಳು ಬೇಕೇ ಬೇಕು ಎಂದು ಸಮಸ್ತ ಜನಪದರು ನಂಬುತ್ತಾರೆ. ಸಾಮಾಜಿಕವಾಗಿ ತಲೆದೋರುವ ಮಾನಸಿಕ ಕಾಯಿಲೆಗಳು, ದೈಹಿಕ ಕಾಯಿಲೆಗಳು ನಿವಾರಣೆ ಮಾಡಿಕೊಳ್ಳಲು ಈ ದೇವತೆಗೆ ಪೂಜೆ ಮಾಡುತ್ತಾರೆ. ಮಾರಿಪೂಜಾ ಸಮಯಕ್ಕೆ ಪ್ರಾಣಿ ಬಲಿಗಳು ನಡೆಯುತ್ತವೆ. ತಾವು ನಂಬಿಕೊಂಡು ಬಂದಿರುವ ದೇವಾನು ದೇವತೆಗಳಿಗೆ ತನ್ನದೇ ಆದ ಶೈಲಿಯಲ್ಲಿ ಪ್ರಾಣಿಗಳನ್ನು ಬಲಿ ಕೊಟ್ಟು ಅವುಗಳ ಮಾಂಸದಿಂದ ಅಡುಗೆ ಮಾಡಿ ತಿನ್ನುವ ಪರಂಪರೆಯನ್ನು ಗುರುತಿಸುತ್ತೇವೆ.

ಮಾನವನಿಗೆ ಯಾವುದೇ ರೀತಿಯ ತೊಂದರೆಗಳು ಅಲ್ಪ ಪ್ರಮಾಣದ ದುಃಖಗಳು ತಲೆದೋರಿದರೂ ದೇವಾನುದೇವತೆಗಳ ಕೋಪದಿಂದ ಬಂದಿವೆ ಎಂದು ತೀರ್ಮಾನಿಸುತ್ತಾನೆ. ಆದುದರಿಂದ ದೇವಾನುದೇವತೆಗಳಲ್ಲಿ ಪ್ರಧಾನವಾಗಿ ರೋಗಗಳನ್ನು ಹರಡುವ ಮತ್ತು ರೋಗಗಳಿಂದ ಮುಕ್ತಿ ಹೊಂದುವ ದೇವತೆಗಳಿಗೆ ಹೆಚ್ಚು ನಡೆದುಕೊಳ್ಳುತ್ತಾರೆ. ರೋಗಗಳು ತಲೆದೋರಿದರೆ ಅದಕ್ಕೆ ಬೇವಿನ ಸೊಪ್ಪಿನಿಂದ ತಯಾರಿಸಿದ ಮದ್ದನ್ನು ಉಪಯೋಗಿಸುತ್ತಾರೆ.

ಸಿಡುಬು, ಕಾಲರಾ, ಪ್ಲೇಗು, ದಢಾರ, ಪೋಲೇರಮ್ಮ, ಮುಂತಾದ ಅಮ್ಮ ಸ್ವರೂಪದ ಮೈಮೇಲೆ ಹರಡುವ ದಢಾರ, ಕಾಲರಾ, ಮೈಲಮ್ಮ ಮುಂತಾದ ರೀತಿಯಲ್ಲಿ ಬರುವ ರೋಗಗಳಿಗೆ ಬೇವಿನ ಸೊಪ್ಪೇ ಮದ್ದಾಗಿ ಗುರುತಿಸುತ್ತಾರೆ. ಈ ಬೇವಿನ ಸೊಪ್ಪು ಮಾರಮ್ಮನಿಗೆ ಬಹಳ ಪ್ರಿಯವಾದದ್ದು. ಮಾರಮ್ಮನ ಗುಡಿಗಳ ಪಕ್ಕದಲ್ಲಿ ಬೇವಿನ ಮರಗಳಿರುವುದನ್ನು ಗುರುತಿಸಬಹುದು.

ಮಾರಮ್ಮನ ಗುಡಿಗಳ ಪಕ್ಕದಲ್ಲಿ ಬೇವಿನ ಮರದ ಜೊತೆಯಲ್ಲಿ ಆಲದ ಮರ ಇರುತ್ತದೆ. ಸಾಧಾರಣವಾಗಿ ಮಾರಿಗುಡಿಗಳು ಊರು ಹೊರಗೆ ಊರ ಮಧ್ಯದಲ್ಲಿ ಊರನ್ನು ಕಾಪಾಡುವ 'ಗಡಿಮಾರಿ' ಎಂದು ತಿಳಿದು ಅವುಗಳಿಗೆ ನಡೆದುಕೊಳ್ಳುವುದು ರೂಢಿಯಲ್ಲಿದೆ. ಇಲ್ಲಿ ಪ್ರಧಾನವಾಗಿ ಪ್ರಾಣಿಬಲಿಗೆ ಪ್ರೇರಣೆ ಮತ್ತು ಪ್ರೀತಿಪೂರ್ವವಾಗಿ ಪ್ರಾಣಿಗಳನ್ನು ಕಡಿಯಬೇಕಾದರೆ ಅವುಗಳಲ್ಲಿ ತನ್ನದೇ ಅದ ಮಹತ್ವನ್ನು ಬಯಸುತ್ತಾರೆ. ಸಾಮಾನ್ಯವಾಗಿ ಪುರಾತನ ಕಾಲದಿಂದಲೂ ಪ್ರಾಣಿಗಳನ್ನು ಕಡಿದು ಅದರ ರಕ್ತದಿಂದ ದೇವರನ್ನು ಅರ್ಚಿಸುತ್ತಿದ್ದರು ಎಂದು ಈಗಾಗಲೇ ಅನೇಕ ಅಧ್ಯಾಯಗಳಲ್ಲಿ ಬರೆಯಲಾಗಿದ್ದರೂ ಈ ಪ್ರಾಣಿಬಲಿಗೆ ತನ್ನದೇ ಆದ ತಾತ್ವಿಕ ಚಿಂತನೆಯಲ್ಲಿ ಪ್ರಾಣಿಗಳನ್ನು ಕಡಿಯುವುದು ಇದೆ.

ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ ಏಳು ತಾಲೂಕಿನಲ್ಲಿ ನಡೆಯುವ ವಿವಿಧ ರೀತಿಯ ಗ್ರಾಮ ಗುಡಿಗಳ ಸೇವೆ ಅಥವಾ ಉತ್ಸವಗಳು

ಬಳ್ಳಾರಿ ಜಿಲ್ಲೆಯಾದ್ಯಂತ ಇರುವ ಸುಮಾರು ಏಳು ತಾಲೂಕಿನಲ್ಲಿ ಒಂದೇ ತರದ ಆಚರಣೆಗಳು ನಡೆಯುತ್ತವೆ. ಪ್ರಧಾನವಾಗಿ ವಿಶೇಷ ಎನಿಸಿದ ಕೆಲವು ಆಚರಣೆಗಳನ್ನು ಇಲ್ಲಿ ಪಟ್ಟಿ ಮಾಡಿಕೊಡಲಾಗಿದೆ. ಈ ಆಚರಣೆಗಳ ಸಮಯದಲ್ಲಿ ಬಲಿಯಾಚರಣೆಯನ್ನು ಮಾಡುತ್ತಾರೆ. ಕೆಲವು ಕಡೆಗಳಲ್ಲಿ ರಾತ್ರಿ ಸಮಯದಲ್ಲಿ ಬಲಿ ಮಾಡುತ್ತಾರೆ. ಸರ್ಕಾರ ಇದ್ದರೂ ಬಲಿನಿಷೇಧ ಕಾಯ್ದೆ-೧೯೫೯-೬೦ ನಿಯಮಗಳನ್ನು ಕಟ್ಟುಪಾಡುಗಳನ್ನು ಮೀರಿ ಬಲಿಯನ್ನು ಮಾಡುವುದು ಇದೆ. ಅಂತಹ ಸಮಯದಲ್ಲಿ ಮಾಹಿತಿದಾರರಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಪ್ರಾಣಿ ದಯಾ ಸಂಘದವರು ಪ್ರಾಣಿಗಳನ್ನು ಕೊಲ್ಲಬಾರದು ಎಂದು ಕಟ್ಟು ನಿಟ್ಟಿನ ಅಪ್ಪಣೆ ಮಾಡುತ್ತಾರೆ. ಜಾತ್ರಾ ಸಮಯಕ್ಕೆ, ಹಬ್ಬಗಳ ಸಮಯಕ್ಕೆ ಪೊಲೀಸ್ ಬಂದೋಬಸ್ತ್ ಇದ್ದರೂ ತಾವು ನಂಬಿಕೊಂಡು ಬಂದ ದೇವಾನುದೇವತೆಯರಿಗೆ ಪ್ರಾಣಿಗಳನ್ನು ಬಲಿ ಕೊಟ್ಟು ತಮ್ಮ ತಮ್ಮ ಮನೆಗಳಿಗೆ ಒಯ್ಯುವುದು ಗಮನಿಸಬಹುದು. ಬುಡಕಟ್ಟು ಸಮುದಾಯದವರು ಮಾಡುವ ಹಬ್ಬಗಳಲ್ಲಿ ಮಾಂಸದ ಅಡುಗೆ ಮಾಡಿ ಸಾಮೂಹಿಕವಾಗಿ ಊಟ ಮಾಡುವ ಪರಂಪರೆ ಇರುವುದು ಗುರುತಿಸಬಹುದು.

೧. ವಾರ್ಷಿಕ ಆಚರಣೆಗಳು

೨. ಅರ್ಧವಾರ್ಷಿಕ ಆಚರಣೆಗಳು

೩. ಯುಗಾದಿ ಸಮಯಕ್ಕೆ ಪಲ್ಲಕಿ ಸೇವೆ

೪. ದೀಪಾವಳಿ ಉತ್ಸವಗಳು

೫. ಹರಕೆ ಸೇವೆಗಳು

೬. ವೈಯಕ್ತಿಕ ಸೇವೆಗಳು

೭. ಸಿಡಿ ಆಚರಣೆಗಳು

೮. ಸಮುದಾಯಗಳ ಆಚರಣೆಗಳು

೯. ದೀಡು ಉರುಳಿಕೆ ಸೇವೆ

೧೦. ತಲೆಮುಂಡೆ ಕೊಡುವ ಸೇವೆ

೧೧. ದೀಡ್ ನಮಸ್ಕಾರ ಸೇವೆ

೧೨. ಕರ್ಪೂರ ಆರತಿ ಸೇವೆ

೧೩. ಸರ್ವಾಲಂಕಾರ ಪೂಜೆಗಳು

೧೪. ಎಲೆ ಪೂಜೆ

೧೫. ಹಣ ಸಮರ್ಪಣೆ ಪೂಜೆ

೧೬. ಅಲಂಕಾರ ಪೂಜೆ

೧೭. ಎಳೆನೀರು ಅಭಿಷೇಕ ಪೂಜೆ

೧೮. ಕುಂಕುಮಾರ್ಚನೆ ಸೇವೆ

೧೯. ಪ್ರಾಣಿ ಬಲಿ ಸೇವೆ

೨೦. ತುಳಸಿ ಸೇವೆ – ಹೀಗೆ ಹಲವಾರು ರೀತಿಯ ಹರಕೆಯ ಸೇವೆಗಳನ್ನು ಜನಪದರು ಮಾಡುವುದನ್ನು ಗಮನಿಸಬಹುದು.

ಯಾವುದೇ ಆಚರಣೆ ಇದ್ದರೂ ಸಾಮಾನ್ಯವಾಗಿ ದೇವರಿಗೆ ವಿವಿಧ ರೀತಿಯಲ್ಲಿ ಪೂಜೆ ಮಾಡುವುದು ಇದೆ. ಪರಂಪರಾಗತವಾಗಿ ಬಂದಿರುವ ಪೂಜೆಗಳಲ್ಲಿ ಕೆಲವನ್ನು ಬದಲಾಯಿಸಿಕೊಂಡಿರುವುದನ್ನು ಗುರುತಿಸಬಹುದು. ಇದರ ಜೊತೆಯಲ್ಲಿ ಹರಕೆಯಾಗಿ ತಂದಿರುವ ಕೋಳಿ, ಕುರಿ, ಆಡುಗಳನ್ನು ಬಲಿ ಕೊಟ್ಟು ತಮ್ಮ ತಮ್ಮ ಮನೆಗಳಿಗೆ ಹೂಯ್ಯುವುದು ಇದೆ. ರಕ್ತತರ್ಪಣಕ್ಕೆ ಹೆಚ್ಚು ಅವಕಾಶಗಳು ಕೆಲವು ಕಡೆ ಇಲ್ಲದಿರುವುದು ಕಂಡುಬರುತ್ತದೆ. ಸಾಮೂಹಿಕವಾಗಿ ನಡೆಯುವ ಜಾತ್ರಾ ಮಹೋತ್ಸದಲ್ಲಿ ಪ್ರಾಣಿ ಬಲಿಗಳನ್ನು ಮಾಡುತ್ತಾರೆ. ವಿಶೇಷವಿರುವಾಗ ಹರಕೆ ಹೊತ್ತ ಮನೆಯವರು ಕುರಿಯನ್ನು ಗ್ರಾಮದೇವತೆಯ ಹೆಸರಿನಲ್ಲಿ ಬಲಿ ಕೊಟ್ಟು ಸಾಮೂಹಿಕ ಊಟಮಾಡುವ ಪದ್ಧತಿಗಳು ಬಳ್ಳಾರಿ ತಾಲೂಕಿನಾದ್ಯಂತ ಕಂಡುಬರುತ್ತದೆ. ಕೆಲವರು ಬುಡಕಟ್ಟು ಸಮುದಾಯಗಳಾದ ಮಾಸ್ತಿಕರು, ಬುಡುಬುಡಿಕಿಯವರು ವರ್ಷದಲ್ಲಿ ನಿರ್ದಿಷ್ಟ ಸಮಯಕ್ಕೆ ಸಮುದಾಯದವರ ಏಳಿಗೆಗಾಗಿ ಸಮೃದ್ಧಿಯ ಫಲಗಳನ್ನು ಬೇಡಿಕೊಂಡು ಬೇಡಿಕೆ ಈಡೇರಿದರೆ ಒಟ್ಟು ಸಮುದಾಯದವರು ಸೇರಿ ಕುರಿ ಅಥವಾ

ಹಂದಿಯನ್ನು ದೇವತೆಯ ಹೆಸರಿನಲ್ಲಿ ಬಲಿ ಕೊಡುವುದು ಗಮನಿಸಬಹುದು. ವೈ. ಹನುಮಂತ ರೆಡ್ಡಿಯವರ ಪ್ರಕಾರ "ವಿಶೇಷ ಉತ್ಸವಗಳೂ ಮಾತ್ರವಲ್ಲದೇ ಪ್ರತಿ ಹುಣ್ಣಿಮೆ ಅಮಾವಾಸ್ಯೆ ಮತ್ತು ಪ್ರತಿ ಮಂಗಳವಾರ ಶುಕ್ರವಾರಗಳಂದು ದೇವಿಗೆ ವಿಶೇಷ ಅಲಂಕಾರ, ಪೂಜಾದಿಗಳೂ ಜರುಗುತ್ತವೆ. ಈ ದಿನಗಳಂದು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದೇವಸ್ಥಾನಕ್ಕೆ ಭೇಟಿ ನೀಡುತ್ತಾರೆ. ತಮ್ಮ ಕುಟುಂಬದಲ್ಲಿ ಯಾರಿಗಾದರೂ ಬೇನೆ, ಬೇಸರಿಕೆ, ರೋಗ ರುಜಿನಗಳು, ಕಷ್ಟ ಕಾರ್ಪಣ್ಯಗಳು ಬಂದಾಗ ದೇವಿಗೆ ಹರಕೆ ಹೊತ್ತುಕೊಂಡು ತಮ್ಮ ಬೇಡಿಕೆ ಈಡೇರಿದರೆ ಅವರು ದೇವಿಗೆ ಪೂಜೆ ಸಲ್ಲಿಸಿ, ಬೆಳ್ಳಿ ಬಂಗಾರದ ಮೀಸೆ, ಕಣ್ಣು, ಬಳೆ ಅಥವಾ ದೇವಿಯ ಮುಖವಾಡ ಇಲ್ಲವೇ ನಗದು ಹಣದ ರೂಪದಲ್ಲಿ ಮುಡಿಯನ್ನು ಕಾಣಿಕೆಯನ್ನು ಅರ್ಪಿಸುವರು. ಇನ್ನು ಕೆಲವರು ರೇಷ್ಮೆ ಸೀರೆ, ಹಣ, ಬಟ್ಟೆ ಮೊದಲಾದವುಗಳನ್ನು ಕೊಡುತ್ತಾರೆ. ಇನ್ನು ಸಾಮಾನ್ಯರು ಸೇವೆಯ ರೂಪದಲ್ಲಿ ತಮ್ಮ ಹರಕೆಯನ್ನು ತೀರಿಸುತ್ತಾರೆ. ಹರಕೆಗಳಲ್ಲಿ ಅನೇಕ ರೀತಿಯವು ಇವೆ."[೨೬] ಅವುಗಳ ಪ್ರಕಾರ ಹರಕೆಗಳನ್ನು ತೀರಿಸುತ್ತಾರೆ. ಪ್ರಧಾನವಾಗಿ ಬಳ್ಳಾರಿ ತಾಲೂಕಿನಲ್ಲಿ ವಿವಿಧ ರೀತಿಯ ಆಚರಣೆಗಳೂ ನಡೆಯುವುದು ಗುರುತಿಸಬಹುದು. ಬಳ್ಳಾರಿಯ ಕನಕ ದುರ್ಗಮ್ಮ ದೇವಿಗೆ ನಡೆಯುವ ಸೇವೆಗಳಲ್ಲಿ ಒಂದಾದ ಪ್ರಕಾರವನ್ನು ಇಲ್ಲಿ ದಾಖಲು ಮಾಡಲಾಗಿದೆ. ಗಂಡಾ ದೀಪ ಸಮರ್ಪಣೆ ಸೇವೆ ಎಂಬುದು ವಿಶೇಷವಾಗಿರುತ್ತದೆ. ಇದರಲ್ಲಿ ಪ್ರಧಾನವಾಗಿ ತಮ್ಮ ತಮ್ಮ ಬೇಡಿಕೆಯನ್ನು ತೀರಿಸುವವರು ಮಂಗಳವಾರ ಮತ್ತು ಶುಕ್ರವಾರಗಳು ಬರಬೇಕು ಎಂದು ಕಟ್ಟುನಿಟ್ಟಿನ ನಿಯಮವಿದೆ. ಮಂಗಳವಾರ ಮತ್ತು ಶುಕ್ರವಾರದ ದಿನದಂದು ಬಳಗ್ಗೆ ಶುಭ್ರವಾಗಿ ಸ್ನಾನ ಮಾಡಿ ಮಡಿಯಿಂದ ಪೂಜೆಯಲ್ಲಿ ಪಾಲ್ಗೊಳ್ಳಬೇಕು. ಮಡಿಯಿಂದ ಉಡುಪುಗಳನ್ನು ಧರಿಸಿಕೊಂಡು ಹಣೆಗೆ ಹರಿಷಿಣ ಕುಂಕುಮಗಳನ್ನು ಬಳಿದುಕೊಳ್ಳಬೇಕು. ಅಂದು ಗಂಡಾ ದೀಪವನ್ನು ಹೊರುವವರು ಒಂದು ವಾರದಿಂದ ನೇಮ ನಿಷ್ಠೆಗಳಿಂದ ಇರುತ್ತಾರೆ. ಪೂಜೆ ಇರುವಾಗ ಉಪವಾಸ ಇದ್ದು ಗಂಡಾ ದೀಪವನ್ನು ಹೊರುತ್ತಾರೆ. ಮಣ್ಣಿನಿಂದ ಮಾಡಿದ ಗಡಿಗೆಯನ್ನು ತಂದು ಅದರಲ್ಲಿ ಬಹಳಷ್ಟು ಅಕ್ಕಿ ಹಾಕಿ ಹೂವು, ವಿಭೂತಿಗಳಿಂದ ಪೂಜಿಸಬೇಕು. ಅದಕ್ಕೆ ಹೂವುಗಳಿಂದ ಅಲಂಕಾರ ಮಾಡಿ ಒಂದು ಹೂವಿನ ಸರವನ್ನು ಅದಕ್ಕೆ ಸುತ್ತಬೇಕಾಗುತ್ತದೆ. ಅ ಗಂಡಾ ಗಡಿಗೆಗೆ ಮುಚ್ಚಳವಾಗಿ ಒಂದು ದೊಡ್ಡ ಮುಚ್ಚಳಿಕೆಯನ್ನು ತಂದು ಮುಚ್ಚಬೇಕಾಗುತ್ತದೆ. ಈ ಮುಚ್ಚಳಿಕೆಯಲ್ಲಿ ಒಂದು ದೀಪವನ್ನು ಉರಿಸಬೇಕಾಗುತ್ತದೆ. ಎಣ್ಣೆ ಚೆಲ್ಲದ ರೀತಿಯಲ್ಲಿ ಅದನ್ನು ಅಲುಗಾಡಿಸದೇ ಮನೆಯಿಂದ ಹೊತ್ತುಕೊಂಡು ಬರಬೇಕಾಗುತ್ತದೆ. ಅಲಂಕಾರ ಮಾಡಿದ ಗಂಡಾ ದೀಪ ನೋಡಲು ಬಹಳ ಸುಂದರವಾಗಿ ಕಾಣಿಸುತ್ತದೆ. "ಸಾಮಾನ್ಯವಾಗಿ ಸ್ತ್ರೀಯರೇ ಈ ಗಂಡಾ ದೀಪವನ್ನು ಹೊರುತ್ತಾರೆ. ಅವರ ಕುಟುಂಬದವರು ಮತ್ತು ಸಂಬಂಧಿ ಬಾಂಧವರು ಈ ಕಾರ್ಯದಲ್ಲಿ ಪಾಲ್ಗೊಂಡು ಸಹಾಯ ಮಾಡುವರು. ದೀಪ ಆರದಂತೆ ಇತರರು ಅದರ ಸುತ್ತಲೂ ಹೊಸದಾದ ಹೊದಿಕೆಯನ್ನು ಅದಕ್ಕೆ ತಾಗದಂತೆ ಗಾಳಿಗೆ ಆರದಂತೆ ರಕ್ಷಣೆ ನೀಡುತ್ತಾರೆ. ಗುಡಿಗೆ ತಲುಪುವ ಮೊದಲೇ

ದೀಪ ಆರಿದರೆ ಅದು ಅಪಶಕುನ ಎಂದು ಪರಿಗಣಿಸಲಾಗುತ್ತದೆ. ಅಲ್ಲದೆ ಅವರಿಗೆ ಕೆಡಕೂ ಆಗಬಹುದು ಎಂಬ ನಂಬಿಕೆ ಇದೆ. ದೀಪ ಹೊತ್ತವರಿಗೆ ಮಡಿ ಸೀರೆಗಳನ್ನು ಹಾಸಿ ಅವರ ಪಾದ ನೆಲಕ್ಕೆ ತಾಗದಂತೆ ಕರೆದುಕೊಂಡು ಹೋಗುವರು. ಅವರ ಸುತ್ತಲೂ ಬಂದು ಬಾಂಧವರು ನೆರೆದಿದ್ದು. ಮುಂದೆ ಡೊಳ್ಳು ಮೇಳ ತಾಳ ಮೊದಲಾದ ಮಂಗಳ ವಾದ್ಯಗಳಿಂದ ದೇವರನ್ನು ಕರೆದುಕೊಂಡು ಹೋಗುವಂತೆ ಭಕ್ತಿಪೂರ್ವಕವಾಗಿ ಆಚರಿಸುತ್ತಾರೆ. ದೀಪ ಹೊತ್ತುಕೊಂಡು ಗುಡಿ ತಲುಪಿದ ಮೇಲೆ ಗುಡಿಯ ಸುತ್ತ ೩ ಅಥವಾ ೫ ಬಾರಿ ಪ್ರದಕ್ಷಿಣೆ ಹಾಕಿ ದೇವಿಯ ಮುಂದೆ ದೀಪವನ್ನು ಇಟ್ಟು, ದೇವಿಗೆ ಹೂ, ಹಣ್ಣು, ಕಾಯಿ ಕಾಣಿಕೆ ಅರ್ಪಿಸಿ ಹರಕೆ ತೀರಿಸುತ್ತಾರೆ. ಹರಕೆ ಹೊತ್ತವರು ಮಾಂಸಾಹಾರಿಗಳಾಗಿದ್ದರೆ ಕುರಿ ಟಗರು ತಂದು ಅದಕ್ಕೆ ದೇವಿಯ ಕುಂಕುಮ ಬಂಡಾರ ಹಾಕಿಸಿ ಅದನ್ನು ದೇವಿಗೆ ಬಲಿ ಕೊಡುವ ಪದ್ಧತಿಯು ಮೊದಲಿನಿಂದಲೂ ನಡೆದುಬಂದಿದ್ದು, ಇತ್ತೀಚೆಗೆ ಕಡಿಮೆಯಾಗಿದೆ." ಎಂದು ಹೇಳುತ್ತಾರೆ.[೨೬] ಇಲ್ಲಿಗೆ ಪ್ರಧಾನವಾಗಿ ಗ್ರಾಮದೇವತೆಯ ಆಚರಣೆಯಲ್ಲಿ ಪ್ರಾಣಿಬಲಿ ಬೇಕೇ ಬೇಕು ಎಂಬ ಸಂಪ್ರದಾಯ ಇರುವುದು ಗಮನಿಸುತ್ತೇವೆ.

ಸಣ್ಣ ದುರುಗಮ್ಮ ಆಚರಣೆ

ಸಣ್ಣ ದುರುಗಮ್ಮ ದೇವಸ್ಥಾನವು ಬಳ್ಳಾರಿ ನಗರದಲ್ಲಿದೆ. ಬಹಳ ಹೆಸರುವಾಸಿಯನ್ನು ಪಡೆದುಕೊಂಡಿರುವ ಈ ದೇವರಿಗೆ ಅಪಾರ ಮಹತ್ವವಿದೆ ಎಂದು ಮಾಹಿತಿದಾರರು ತಿಳಿಸುತ್ತಾರೆ. ಬೆಂಗಳೂರು ರಸ್ತೆಯ ಪಕ್ಕದಲ್ಲಿರುವ ಈ ದೇವತೆಗೆ ಹರಕೆಯ ಪೂಜೆಗಳು ನಡೆಯುತ್ತವೆ. ಸಾಮಾನ್ಯವಾಗಿ ಬರಗಾಲ ಬಂದಾಗ ಮತ್ತು ಮಕ್ಕಳ ಮೇಲೆ ಅಮ್ಮ ಬಂದಾಗ ಈ ಸಣ್ಣ ದುರುಗಮ್ಮನ ಆಚರಣೆಯನ್ನು ಮಾಡುತ್ತಾರೆ. ಗರ್ಭಗುಡಿಯು ನೋಡಲು ಬಹಳ ಸುಂದರವಾಗಿಯೂ ಕಾಣುತ್ತದೆ. ಹುತ್ತಿನ ಮಣ್ಣನ್ನು ತಂದು ದುರುಗಮ್ಮನ ಮೂರ್ತಿಯನ್ನು ಮಾಡುತ್ತಾರೆ. ಅಗಲವಾದ ಮುಖದಿಂದ ಕಂಗೊಳಿಸುವ ದುರುಗಮ್ಮನ ಮೂರ್ತಿ ನೋಡಲು ಅತಿ ಭಯಂಕರವಾಗಿಯೂ ಕಾಣುತ್ತದೆ. ಈ ದೇವತೆಯನ್ನು ಕನಕದುರ್ಗಿಗೂ ಹೋಲಿಸಿ ನೋಡುತ್ತಾರೆ ಜನಪದರು. ಜಾನುವಾರುಗಳಿಗೆ ಏನಾದರೂ ಭಯಂಕರವಾದ ರೋಗಗಳು ಬಂದಾಗ ದುರುಗಮ್ಮನ ಗುಡಿಗೆ ಬಂದು ದೇವತೆಯ ಭಂಡಾರವನ್ನು ತೆಗೆದುಕೊಂಡು ಹೋಗುತ್ತಾರೆ. ದಸರಾ ಹಬ್ಬದಲ್ಲಿ ವಿಶೇಷವಾಗಿ ಅಲಂಕಾರ ಮಾಡಿ ಪೂಜೆ ಮಾಡುತ್ತಾರೆ. ಮುಖವಾಡ, ಸಣ್ಣ ಕಿರೀಟ, ಕಣ್ಣು ಮತ್ತು ಮೀಸೆಗಳನ್ನು ಇಟ್ಟು, ಕುಂಕುಮ ಭಂಡಾರವನ್ನು ಹಚ್ಚಿ ಹೂವುಗಳಿಂದ ಪ್ರಮುಖವಾಗಿ ಅಲಂಕಾರ ಮಾಡುತ್ತಾರೆ. ಹರಕೆ ಹೊತ್ತ ಮಹಿಳೆಯರು ಮಂಗಳವಾರ ಮತ್ತು ಶುಕ್ರವಾರಗಳಂದು ವಿಶೇಷ ಪೂಜೆ ಮಾಡುವುದರ ಮೂಲಕ ಹರಕೆ ತೀರಿಸಿಕೊಳ್ಳುತ್ತಾರೆ. ಹಳೆಯ ಕಾಲದಲ್ಲಿ ಈ ದೇವತೆಗೆ ಸುಮಾರು ಕುರಿ ಕೋಣಗಳನ್ನು ಬಲಿ ಕೊಡುತ್ತಿದ್ದರು ಎಂದು ಮಾಹಿತಿದಾರರು ತಿಳಿಸುತ್ತಾರೆ. ಸದ್ಯ ಕುರಿ ಕೋಣಗಳನ್ನು

ಕಡಿಯುವುದಿಲ್ಲ. ಹಬ್ಬ ಮತ್ತು ಜಾತ್ರಾ ಸಮಯಕ್ಕೆ ಕದ್ದು ಮುಚ್ಚಿ ಕೋಳಿಯನ್ನು ಕೊಯ್ದು ತಮ್ಮ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗುತ್ತಾರೆ.

ಗ್ರಾಮದೇವತೆ ಪೋಲೇರಮ್ಮನ ಆಚರಣೆ

ಗ್ರಾಮದೇವತೆ ಪೋಲೇರಮ್ಮನ ಆಚರಣೆಯನ್ನು ಬಳ್ಳಾರಿ ತಾಲೂಕಿನಲ್ಲಿ ಮಾಡುತ್ತಾರೆ. ಈ ಪೋಲೇರಮ್ಮ ಬಹಳ ಪ್ರಖ್ಯಾತಿಯನ್ನು ಪಡೆದುಕೊಂಡಿದೆ ಎಂದು ತಿಳಿಸುತ್ತಾರೆ. ದೇವತೆಯ ಹೆಸರೇ ಇದು ಆಂಧ್ರಪ್ರದೇಶದಿಂದ ವಲಸೆ ಬಂದ ದೇವತೆ ಎಂದು ತಿಳಿಯುತ್ತದೆ. ಪೋಲೇರಮ್ಮನ ಗುಡಿಯನ್ನು ಕನಕದುರ್ಗಮ್ಮನ ದೇವತೆಯ ದೇವಸ್ಥಾನದ ಪಕ್ಕದಲ್ಲಿರುವ ಮೋಕ ರಸ್ತೆಯ ಪಕ್ಕದಲ್ಲಿ ನೋಡಬಹುದು. ಈ ಗುಡಿಯು ಅತೀ ಪುರಾತನವಾಗಿಯೂ ಕಾಣುತ್ತದೆ. ಪೋಲೇರಮ್ಮನ ಗುಡಿಯ ಪಕ್ಕದಲ್ಲಿ ದೊಡ್ಡ ಬೇವಿನಮರ ಇದ್ದು, ಈ ಬೇವಿನ ಮರದಲ್ಲಿ ಅಡಿಯಲ್ಲಿ ಚಿಕ್ಕ ಗುಡಿಯನ್ನು ರಚನೆ ಮಾಡಲಾಗಿದೆ. ಬೇವಿನ ಮರದ ಬುಡಕ್ಕೆ ಪೋಲೇರಮ್ಮನ ಮುಖವಾಡ ಇಟ್ಟು ಪೂಜೆ ಮಾಡುವ ಪದ್ಧತಿ ಇದೆ. ಇದರ ಪಕ್ಕದಲ್ಲಿಯೇ ಚಿಕ್ಕ ಚಿಕ್ಕ ನಾಗನ ಕಲ್ಲುಗಳನ್ನು ನೋಡಬಹುದು. ಪೋಲೇರಮ್ಮನಿಗೆ ಪೂಜೆ ನಡೆಯುವಾಗ ನಾಗನಿಗೂ ಪೂಜೆಗಳು ನಡೆಯುತ್ತವೆ. ನಾಗನ ಪೂಜಾರಿಗಳೂ ದುರ್ಗಮ್ಮನ ಪೂಜಾರಿಗಳಾಗಿರುತ್ತಾರೆ. ಕೆಲವು ಕಡೆ ನಾಗನನ್ನು ಪೂಜೆ ಮಾಡುವುದು ಬ್ರಾಹ್ಮಣವರ್ಗದವರು. ಇಲ್ಲಿ ಪ್ರಧಾನವಾಗಿ ಪೋಲೇರಮ್ಮನ ದೇವಸ್ಥಾನದ ಕಡೆಯಿಂದಲೇ ನಾಗನನ್ನು ಪೂಜೆ ಮಾಡುತ್ತಾರೆ. ಗ್ರಾಮದೇವತೆ ಪೋಲೇರಮ್ಮನಿಗೆ ಸಿಡಿ ಅಚರಣೆಯು ಬಹಳ ಸೊಗಸು ಮತ್ತು ಶಿಸ್ತುಬದ್ಧವಾಗಿ ಮಾಡುತ್ತಾರೆ. ಸಿಡಿ ಆಡುವ ಬಂಡಿಗೆ ಕಟ್ಟುವ ಎತ್ತುಗಳನ್ನು ದೇವಾಲಯದ ಹತ್ತಿರಕ್ಕೆ ಹೊಡೆದುಕೊಂಡು ಬಂದು ಪೂಜೆ ಮಾಡಲಾಗುತ್ತದೆ. ವಿಜಯ ದಶಮಿಯಂದು ದೇವಿಯ ಪಲ್ಲಕಿ ಉತ್ಸವವನ್ನು ಮಾಡುತ್ತಾರೆ. ಪೋಲೇರಮ್ಮದೇವಿಗೂ ಮತ್ತು ಅಕ್ಕಪಕ್ಕದ ದೇವಿ ದೇವಾಲಯಗಳಿಗೂ ಸಂಬಂಧವನ್ನು ಕಲ್ಪಿಸಲಾಗಿದೆ. ಇದೊಂದು ಬಾಂಧವ್ಯವನ್ನು ಇಟ್ಟುಕೊಂಡಿರುವುದು ಕಾಣಬಹುದು. ಪೋಲೇರಮ್ಮನ ಆಚರಣಾ ಸಮಯಕ್ಕೆ ಕುರಿ, ಕೋಣ, ಕೋಳಿ ಮೇಕೆಗಳನ್ನು ಬಲಿ ಕೊಟ್ಟ ಸಂದರ್ಭಗಳು ಇದ್ದವು. ತದನಂತರ ಪ್ರಾಣಿಬಲಿ ನಿಂತುಹೋಗಿದೆ ಎಂದು ಮಾಹಿತಿದಾರರು ಹೇಳುತ್ತಾರೆ. ಪ್ರಾಣಿಬಲಿ ಮಾಡುವುದಕ್ಕೆ ಮಾನವನ ಮಾನಸಿಕ ದೌರ್ಬಲ್ಯಗಳೇ ಕಾರಣ ಎಂದು ವಿವೇಚಿಸಬಹುದು.

ಬಲಿಪೀಠ

ಇಲ್ಲಿ ಪ್ರಧಾನವಾಗಿ ಬಲಿಪೀಠವಿದೆ. ಬಲಿಪೀಠವೆಂದರೆ ಪ್ರಾಣಿಗಳನ್ನು ಬಲಿ ಕೊಡಲು ನಿರ್ದಿಷ್ಟವಾದ. ಬಳ್ಳಾರಿ ಜಿಲ್ಲೆಯಾದ್ಯಂತ ಗ್ರಾಮದೇವತೆಯ ಗುಡಿಗಳ ಎದುರಲ್ಲಿ ಬಲಿಪೀಠಗಳು ಕಂಡುಬರುವುದು ಬಹಳ ವಿರಳ. ಅಂದರೆ ದೇವತೆಗಳ ಗುಡಿಯ ಮುಂದೆ ಒಂದು ಸಣ್ಣದಾದ ತೆಗ್ಗನ್ನು ತೆಗೆದು ಅದರಲ್ಲಿ ಬಲಿಕೊಟ್ಟ ರಕ್ತ ಹೋಗುವಂತೆ ಮಾಡಿರುವುದೇ ಹೆಚ್ಚಿನದಾಗಿ

ಕಂಡುಬರುತ್ತದೆ. ಕೆಲವು ಕಡೆ ಜಾತ್ರಾ ಮತ್ತು ಹಬ್ಬಗಳ ಸಮಯಕ್ಕೆ ಈ ಬಲಿಪೀಠದಲ್ಲಿಯೇ ಪ್ರಾಣಿಗಳನ್ನು ಕಡಿಯಬೇಕೆಂದು ಮಾಹಿತಿದಾರ ತಿಳಿಸುತ್ತಾರೆ. ಊರ ಹಬ್ಬದಲ್ಲಿ ಗುಡಿಯ ಎದುರಲ್ಲಿ ಪ್ರಾಣಿಗಳನ್ನು ನಿಲ್ಲಿಸಿ ಕಡಿಯುವುದು ಇದೆ. ಬಲಿಪೀಠಕ್ಕೆ ಪೌರಾಣಿಕ ಹಿನ್ನೆಲೆಯನ್ನು ಕಲ್ಪಿಸುತ್ತಾರೆ ಚಾಮುಂಡಿ ತಾಯಿ ಬಲಶಾಲಿಯಾದ ಮಹಿಷಾ ಸುರನನ್ನು ಕೊಂದ ಸ್ಥಳವಾಗಿ ತಿಳಿದುಕೊಳ್ಳುತ್ತಾರೆ. ಬಲಿಪೀಠಗಳನ್ನು ದೇವಸ್ಥಾನಗಳ ಎದುರಲ್ಲಿ ಸ್ವಲ್ಪ ದೂರದಲ್ಲಿ ಕಟ್ಟಿರುವುದು ಇದೆ. ಸುಮಾರು ಜನರು ಅಲ್ಲಿ ನೆರೆಯುತ್ತಾರೆಂಬ ಭಾವನೆಯಿಂದ ಬಲಿಪೀಠಗಳನ್ನು ಕಟ್ಟುತ್ತಾರೆ. ಊರಮ್ಮನಿಗೆ ಪೂಜೆಯೆಲ್ಲಾ ಮುಗಿದ ನಂತರ ಮಧ್ಯರಾತ್ರಿಯಲ್ಲಿ ನಡೆಯುವ ಈ ಪ್ರಾಣಿಬಲಿ ವಿಶೇಷವಾಗಿ ಜನಪದರು ಸೇರುತ್ತಾರೆ. ಹರಕೆಗಳನ್ನು ತೀರಿಸುವ ಸಲುವಾಗಿ ಸಾಲು ಸಾಲಾಗಿ ನಿಂತು ಬಲಿಯನ್ನು ಕೊಡುವವರೂ ಇದ್ದಾರೆ. ಪ್ರಾಣಿಬಲಿಯನ್ನು ಕೊಡುವ ನಿರ್ದಿಷ್ಟವಾಗಿ ದೇವಾಲಯಕ್ಕೆ ಸೇರಿದ ಜನರು ಇರುತ್ತಾರೆ. ಇವರನ್ನು ತಳವಾರರು ಎಂದು ಕರೆಯುತ್ತಾರೆ. ದಲಿತರು ಎಂದು ಕರೆಯುತ್ತಾರೆ. ಬಲಿಪೀಠಗಳನ್ನು ಬೇವಿನ ಮರ ಇರುವ ಜಾಗದಲ್ಲಿ ಅದಕ್ಕೆ ಗದ್ದುಗೆಯಾಕಾರದಲ್ಲಿ ಬೇವಿನ ಮರವನ್ನು ಸೇರಿಸಿ ಕಟ್ಟಿಕೊಳ್ಳುತ್ತಾರೆ. ಈ ಬಲಿಪೀಠವು ದೇವಿಯು ಪ್ರಧಾನ ಗದ್ದುಗೆಯಲ್ಲಿ ಕುಳಿತಾದ ದೇವಿ ಪ್ರಾಣಿಬಲಿಯನ್ನು ನೋಡಬೇಕೆಂಬ ಭಾವನೆಯೂ ಇದೆ. ಈ ದೇವಿಗಳು(ಮಾರಮ್ಮ, ಕಾಳಮ್ಮ, ದುರ್ಗಮ್ಮ, ದುರುಗಮ್ಮ, ಉಚ್ಚಂಗಿ, ದ್ಯಾಮವ್ವ, ಕನಕಮ್ಮ, ಊರಮ್ಮ) ಆಗಬಹುದು. ಪ್ರಾಣಿಬಲಿಗಳು ಇವುಗಳ ಎದುರಲ್ಲಿ ನಡೆಯಬೇಕೆಂಬುದು ಜನಪದರ ನಂಬಿಕೆಯಾಗಿರುತ್ತದೆ. ಕೆಲವರು ಬಲಿಪೀಠಗಳನ್ನು ಹಿತ್ತಾಳೆ, ತಾಮ್ರ, ಕಂಚು ಮುಂತಾದ ಲೋಹಗಳಿಂದ ತಯಾರು ಮಾಡಿಕೊಳ್ಳುತ್ತಾರೆ. ಕೆಲವು ಕಡೆ ಇದನ್ನು ಕೋಣವನ್ನು ಕಡಿಯುವ ಸ್ಥಳಗಳು ಎಂದು ಕರೆಯಲಾಗುತ್ತದೆ. ಬಲಿಪೀಠಗಳಲ್ಲಿ ದೇವಿಯ ಪಾದಗಳನ್ನು ಇಟ್ಟಿರುತ್ತಾರೆ. ಮಾರಿಯಮ್ಮ ಕೋಣವನ್ನು ಬಲಿ ತೆಗೆದುಕೊಳ್ಳುತ್ತಾಳೆ, ಚಾಮುಂಡಿ ಮಹಿಷಾಸುರನನ್ನು ಬಲಿ ತೆಗೆದುಕೊಳ್ಳುತ್ತಾಳೆ. ಕಾಳೀಯಮ್ಮ ದುಷ್ಟರನ್ನು ಬಲಿ ತೆಗೆದುಕೊಳ್ಳುತ್ತಾಳೆ, ದುರ್ಗಾಮಾತೆಯು ಊರಿನ ಅನಿಷ್ಟಗಳನ್ನು ದೂರ ಮಾಡುತ್ತಾಳೆ, ಸ್ತ್ರೀಮಾತೆಯು ಸಕಲ ಸಂಪತ್ತನ್ನು ನೀಡುತ್ತಾಳೆ ಎಂಬ ದೃಢನಂಬಿಕೆಯು ಜನಪದರಲ್ಲಿ ನೆಲೆಯಾಗಿರುವುದನ್ನು ಗುರುತಿಸಬಹುದು. ಅದ್ದರಿಂದಲೇ ಬಲಿಪೀಠದಲ್ಲಿ ಪ್ರಾಣಿಗಳನ್ನು ಕಡಿಯುವಂತಹದು ಎಂದು ಮಾಹಿತಿದಾರರು ತಿಳಿಸುತ್ತಾರೆ. ಉಚ್ಚಂಗಿಯಮ್ಮ, ಗುಳ್ಳಮ್ಮ, ದ್ಯಾಮವ್ವ, ಊರವ್ವ, ಇವರಿಗೆ ಬಲಿ ಮಾಡಿದಾಗ ಊರು ಸುಭೀಕ್ಷವಾಗಿರುತ್ತದೆ. ಯಾವುದೇ ರೋಗಗಳು, ತಂಟೆ ತಕರಾರುಗಳು ಇರುವುದಿಲ್ಲ. ಯಾವುದೇ ಭೂತ ಪಿಶಾಚಿಗಳ ಕಾಟಗಳು ಇರುವುದಿಲ್ಲ. ಸಾವು ನೋವುಗಳು ಬರುವುದಿಲ್ಲ ಎಂಬ ಭಾವನೆಗಳು ಇವೆ. ಹೆಬ್ಬಾಲೆ ಕೆ.ನಾಗೇಶ್ ಅವರ ಪ್ರಕಾರ"ದಲಿತರು ಪೂಜಿಸುವ ದೈವಗಳಾದ ದಲಿತ ದೈವಗಳಿಗೆ ಹರಕೆಯ ರೂಪಗಳೇ ಬೇರೆ. ಇವರಿಗೆ ದಲಿತರು ಒಪ್ಪಿಸುವ ರೀತಿ ಬಹಳವಾಗಿ ರೋಚಕವಾಗಿದೆ.

ಏಕೆಂದರೆ ಸ್ತ್ರೀದೈವಗಳಿಗೆ ಕೋಣ, ಕುರಿ, ಮೇಕೆ, ಕೋಳಿ, ಹಂದಿಯನ್ನು ಬಲಿ ಕೊಡುವರು. ದಲಿತ ಸ್ತ್ರೀದೈವಗಳು ಸಮಾಜದಲ್ಲಿ ಇತರೆ ವರ್ಗದವರು ಪೂಜಿಸುವ ದೈವಗಳು ಅತ್ಯಂತ ಶಕ್ತಿಯುತವಾಗಿವೆ ಎಂದು ಶತಶತಮಾನಗಳಿಂದಲೂ ನಂಬಿಕೊಂಡು ಬಂದಿರುತ್ತಾರೆ. ಇಲ್ಲಿ ಚರ್ಚೆಯ ತುಣುಕುಗಳನ್ನು ತುಚ್ಛವಾಗಿ ಕಾಣಬೇಕಾಗಿಲ್ಲ. ಒಂದು ಸಮಾಜದಲ್ಲಿ ವಾಸವಾಗಿರುವ ಮನುಷ್ಯರು ಯಾವ ರೀತಿಯಲ್ಲಿ ಬದುಕನ್ನು ಕಟ್ಟಿಕೊಂಡು ಮುನ್ನಡೆಯುತ್ತಾರೆ ಆ ದಾರಿಯ ಜಾಡಿನಲ್ಲಿ ಸಾಗುತ್ತಿರುತ್ತಾರೆ. ಈ ಮೇಲಿನ ಎಲ್ಲ ವಿಷಯಗಳ ದೃಷ್ಟಿಯಲ್ಲಿ ದಲಿತ ಸ್ತ್ರೀ ದೈವಗಳು ಅಸ್ಪೃಶ್ಯವಾಗಿವೆ ಎಂಬುದನ್ನು ಸ್ಪಷ್ಟಪಡಿಸಬಹುದು. ಸಮಕಾಲೀನತೆಯ ಸಂದರ್ಭದಲ್ಲಿ ವಿದ್ವಾಂಸರು, ಪುರೋಹಿತರು, ಮಠಾದೀಶರು, ಸವರ್ಣೀಯರು ತಮ್ಮ ನೆಲೆಯಲ್ಲಿ ಹೇಳುವುದು ಬೇರೆಯೇ. ಆದರೆ ಇವರ್‍ಯಾರು ಅಸ್ಪೃಶ್ಯ ದೈವಗಳ ಆರಾಧಕರಲ್ಲ" ಎಂದು ಮಾತನಾಡುತ್ತಾರೆ.[೨೮] ಇಲ್ಲಿ ಪ್ರಧಾನವಾಗಿ ಬಲಿಪೀಠಗಳಲ್ಲಿ ಕೋಣ, ಕೋಳಿ, ಹಂದಿಗಳನ್ನು ಕಡಿಯಬೇಕಾದರೆ ದಲಿತರು ಬೇಕೇಬೇಕು ಎಂಬ ದೃಢವಾದ ಮಾತು ಇದೆ.

ಪ್ರಾಣಿಬಲಿ ಮಾಡುವ ಬಲಿಯ ಆಯುಧಗಳು

ಸಾಮಾನ್ಯವಾಗಿ ಗ್ರಾಮದೇವತೆಗಳ ಆರಾಧನೆಯಲ್ಲಿ ಸ್ತ್ರೀದೈವಗಳ ಪಾತ್ರ ವಿಶಿಷ್ಟ ವಾಗಿರುತ್ತವೆ. ಇಲ್ಲಿ ಪ್ರಧಾನವಾಗಿ ಸ್ತ್ರೀದೈವಗಳನ್ನು ಪೂಜೆ ಮಾಡಿದ ನಂತರದಲ್ಲಿ ಪ್ರಾಣಿಬಲಿಗಳನ್ನು ಮಾಡುತ್ತಾರೆ. ಸ್ತ್ರೀದೈವಗಳ ಆಕಾರಗಳೇ ಚಿತ್ರ ವಿಚಿತ್ರವಾಗಿರುತ್ತವೆ. ಪ್ರಾಣಿಬಲಿಯನ್ನು ಮಾಡಲು ನಿರ್ದಿಷ್ಟ ಆಯುಧಗಳನ್ನು ಬಳಸುತ್ತಾರೆ. ಬಳ್ಳಾರಿ ಜಿಲ್ಲೆಯಾದ್ಯಂತ ಪ್ರಚಲಿತದಲ್ಲಿರುವ ಪ್ರಾಣಿಬಲಿ ಮಾಡುವ ಆಯುಧಗಳು ವಿಶಿಷ್ಟವಾಗಿರುವುವು. ಈ ಆಯುಧಗಳು ಗುಡಿಗಳ, ದೇವಸ್ಥಾನಗಳ ಸಮಕ್ಷಮದಲ್ಲಿರುತ್ತವೆ. ದೇವಸ್ಥಾನದ ಆಡಳಿತ ಮಂಡಳಿಯವರ ಕೈಯಲ್ಲಿರುತ್ತದೆ. ಕೊಡಲಿ, ಗಂಡುಗೊಡಲಿ, ಮಚ್ಚು, ದೊಡ್ಡ ಮಚ್ಚು, ಖಡ್ಗ, ಕತ್ತಿ ಮುಂತಾದವುಗಳನ್ನು ಬಳಸುತ್ತಾರೆ.

ಕುಂಭಗಳ ಉತ್ಸವ

ಇದು ಪ್ರಧಾನವಾಗಿ ಬಳ್ಳಾರಿಯಲ್ಲಿ ನಡೆಯುತ್ತದೆ. ದೇವಾಲಯಗಳಲ್ಲಿ ಮಾಮೂಲಾಗಿ ನಡೆಯುವ ಆಚರಣೆ ಎಂದರೆ ಕುಂಭಗಳ ಉತ್ಸವ. ಈ ಉತ್ಸವದಲ್ಲಿ ಪೂಜಾರಿಗಳು ಮತ್ತು ಬೇರೆ ಎಲ್ಲರೂ ಸೇರಬಹುದು. ಐದು ವರ್ಷಕೊಮ್ಮೆ ಈ ಉತ್ಸವನ್ನು ಮಾಡುತ್ತಾರೆ. ಭರತದ ಹುಣ್ಣಿಮೆಯಂದು ವಿಶೇಷ ದಿನ ಎಂದು ಕರೆಯುತ್ತಾರೆ. ಈ ಗ್ರಾಮಕ್ಕೆ ಸೇರಿದ ಕಟ್ಟೇಮನೆ ಗೌಡ ಮನೆಗೆ ಸೇರಿದ ಬೀರಗೌಡ ಗಾದೆಪ್ಪ ಎಂಬ ವಂಶಸ್ಥರಿಂದ ಈ ಉತ್ಸವವು ನಡೆದುಕೊಂಡು ಬಂದಿರುವುದು ಕಾಣಬಹುದು. ತಾವು ನಂಬಿರುವ ದೇವಿ ದೇವರಿಗೆ ಮೇಟಿ ಕುಂಭವನ್ನು ಹೊತ್ತು ಪೂಜೆ ಮಾಡುವುದು ಗುರುತಿಸಬಹುದು. ಉತ್ಸವನ್ನೆ ಸಂಬಂಧಿಸಿದ ಗ್ರಾಮದ ಎಲ್ಲ ಜಾತಿಯ ಜನರು ಪಾಲ್ಗೊಳ್ಳುತ್ತಾರೆ. ಈ ಕುಂಭವನ್ನು ಹೊತ್ತು ತರುವ

ಸಂದರ್ಭದಲ್ಲಿ ಎಲ್ಲರೂ ಭಾಗವಹಿಸುತ್ತಾರೆ. ಕುಂಭದ ಪೂಜೆ ಎಂದರೆ ಬಹಳ ವಿಶಿಷ್ಟ ಭಯದಿಂದ ಪೂಜೆ ಮಾಡುತ್ತಾರೆ. ಯಾವುದೇ ಲೋಪಗಳು ಆಗದ ರೀತಿಯಲ್ಲಿ ಕುಂಭಕ್ಕೆ ಪೂಜೆ ಮಾಡುತ್ತಾರೆ. ಲೋಪಗಳು ಬಂದರೆ ಊರಿಗೆ ಆಪತ್ತು ಬಂದಿದೆ ಎಂದು ತಿಳಿದುಕೊಳ್ಳುತ್ತಾರೆ. ಲೋಪಗಳು ಬಾರದ ರೀತಿಯಲ್ಲಿ ಕುಂಭದ ಉತ್ಸವ ಮಾಡಿದರೆ ಅದು ಶಕ್ತಿದೇವತೆಗೆ ಸಲ್ಲುತ್ತದೆ ಎಂಬ ಭಾವನೆ ಇದೆ. ಕುಂಭದ ಉತ್ಸವದಲ್ಲಿ ವಿಶೇಷವಾಗಿ ಪ್ರಾಣಿಗಳು ಪಾತ್ರ ವಹಿಸುತ್ತವೆ. ಕುರಿ, ಕೋಳಿ, ಹಂದಿ, ಆಡು, ಟಗರುಗಳನ್ನು ಅಲಂಕಾರ ಮಾಡಿ ದೇವಸ್ಥಾನದಲ್ಲಿ ನಿಲ್ಲಿಸಿರುತ್ತಾರೆ. ಮೇಟಿ ಕುಂಭದ ದಿನ ಕೋಳಿಗಳನ್ನು ಟಗರುಗಳನ್ನು ಬಲಿ ಕೊಡುವುದು ಒಂದು ಸಂಪ್ರದಾಯವಾಗಿ ಬೆಳೆದುಕೊಂಡಿದೆ. ಈ ಗ್ರಾಮಕ್ಕೆ ಅಲ್ಲದೆ ಅಕ್ಕ ಪಕ್ಕ ಗ್ರಾಮಸ್ಥರೂ ಈ ಕುಂಭೋತ್ಸವದಲ್ಲಿ ಪಾಲ್ಗೊಳುತ್ತಾ ತಮ್ಮ ತಮ್ಮ ಹರಕೆ ಕುರಿಗಳನ್ನು ಬಲಿಯಾಗಿ ಸಮರ್ಪಿಸುತ್ತಾರೆ. ಪ್ರಾಣಿಬಲಿಗಳನ್ನು ಮಾಡಿದ ನಂತರದಲ್ಲಿ ಮಾಂಸಾಹಾರಿಗಳು ಊಟವನ್ನು ಮಾಡುತ್ತಾರೆ. ನವರಾತ್ರಿ ಸಮಯದಲ್ಲಿ ಮಹಿಳೆಯರಿಂದ ವಿಶೇಷ ಪೂಜೆಗಳು ನಡೆಯುತ್ತವೆ. ಪ್ರಧಾನವಾಗಿ ಗ್ರಾಮ ಸ್ತ್ರೀಶಕ್ತಿ ಗುಂಪಿನವರು ಭಜನೆ ಮಾಡುವುದು ಇದೆ. ಇಲ್ಲಿ ವಿಜಯದಶಮಿಯಂದು ದೇವಿಯ ಮೂರ್ತಿಯನ್ನು ಪಲ್ಲಕಿಯಲ್ಲಿಟ್ಟು ಮೂರ್ತಿಯನ್ನು ಮೆರವಣಿಗೆ ಮಾಡುವುದು ಒಂದು ವಿಶೇಷವೆನ್ನಬಹುದು. ಸಾಂಸ್ಕೃತಿಕವಾಗಿ ಜಾತಿ ಬಾಂಧವರೆಲ್ಲರೂ ಸೇರುವುದರಿಂದ ಒಗ್ಗಟ್ಟು ಪ್ರದರ್ಶನ ನಿರ್ಮಾಣವಾಗುವುದು ಇದೆ.

ಸಿರುಗುಪ್ಪ ತಾಲೂಕು

ಸಿರುಗುಪ್ಪ ತಾಲೂಕಿನಲ್ಲಿ ವಿಶೇಷವಾಗಿ ಗ್ರಾಮದೇವತೆಗಳನ್ನು ಪೂಜೆ ಮಾಡುತ್ತಾರೆ. ಪ್ರಧಾನವಾಗಿ ಕೃಷಿಯನ್ನು ನಂಬಿಕೊಂಡಿರುವ ಜನಪದರು ಅಮ್ಮನ ನೆನಪಿನಲ್ಲಿ ದ್ಯಾವಮ್ಮ, ಮಾರಮ್ಮ, ದುರುಗಮ್ಮನ ಪೂಜೆಗಳನ್ನು ಮಾಡುತ್ತಾರೆ. ತಾಲೂಕಿನಾದ್ಯಂತ ಗ್ರಾಮದೇವತೆಗಳ ಮೂರ್ತಿಗಳನ್ನು ನೋಡಬಹುದು. ಬುಡಕಟ್ಟು ಸಮುದಾಯದವರಾದ ಲಂಬಾಣಿಗಳು ವಾರ್ಷಿಕವಾಗಿ ಪೂಜೆಗಳನ್ನು ಮಾಡುತ್ತಾರೆ. ನಿಗದಿ ಮಾಡಿದ ದಿನದಂದು ಲಂಬಾಣಿಗಳು ಪೂಜೆ ಮಾಡುವುದು ಇದೆ. ತಮ್ಮ ತಮ್ಮ ಕುಟುಂಬದಲ್ಲಿ ಯಾವುದಾದರೂ ವಿಶೇಷವಿದ್ದಾಗ, ತಮ್ಮ ಜಾನುವಾರುಗಳಿಗೆ ಕಾಯಿಲೆ ಕಸಾಲೆಗಳು ಬಂದಾಗ, ಮಕ್ಕಳಿಗೆ ಸಿಡುಬುರೋಗಗಳು ಬಂದಾಗ ಮಾರಮ್ಮನ ಪೂಜೆಯನ್ನು ಮಾಡಿ ಪ್ರಾಣಿಬಲಿಯನ್ನು ಮಾಡುತ್ತಾರೆ. ಪ್ರಧಾನವಾಗಿ ಕುಲದೈವವಿದ್ದರೂ ಶಕ್ತಿದೇವತೆಯೆಂದು ತಿಳಿದಿರುವ ಮಾರಮ್ಮ, ದ್ಯಾಮವ್ವ, ದುರುಗಮ್ಮನನ್ನು ಪೂಜಿಸಿ ಕುರಿಗಳನ್ನು ಬಲಿ ಕೊಟ್ಟು ಸಾಮೂಹಿಕ ಬಾಡೂಟವನ್ನು ಮಾಡುವುದು ಇದೆ. ಈ ಸಾಮೂಹಿಕ ಬಾಡೂಟ ಮಾಡುವುದರಿಂದ ಸಂಬಂಧಗಳು ಬೆಸೆದು ನೆರೆಹೊರೆಯ ಸಮುದಾಯದವರ ಸಂಬಂಧಗಳು ಗಟ್ಟಿಗೊಳ್ಳುತ್ತವೆಂಬ ಭಾವನೆ ನೆಲೆಯಾಗಿರುವುದನ್ನು ಗುರುತಿಸಬಹುದು. ಬಹುಸಂಖ್ಯಾತವಾಗಿರುವ ಬುಡಕಟ್ಟುಗಳ ನಿಯಮದ ಪ್ರಕಾರವಾಗಿ

ಪ್ರಾಣಿಬಲಿಯನ್ನು ಮಾಡುತ್ತಾರೆ. ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಹಬ್ಬವನ್ನು ಮಾಡುತ್ತಾರೆ. ತಳಿರುತೋರಣಗಳಿಂದ ಮನೆಗಳನ್ನು ಅಲಂಕಾರ ಮಾಡಿ ಮಾರಿಗುಡಿಯನ್ನು ಶುದ್ಧ ಮಾಡುತ್ತಾರೆ. ಸಂಬಂಧಿಕರನ್ನು ಹಬ್ಬಕ್ಕೆ ಕರೆಯುತ್ತಾರೆ. ಹರಕೆ ಹೊತ್ತ ಮಹಿಳೆಯರು ನಿರ್ದಿಷ್ಟವಾದ ಪೂಜೆ ನಡೆಯುವವರೆಗೂ ಊಟಗಳನ್ನು ಮಾಡುವಂತಿಲ್ಲ. ಗ್ರಾಮದೇವತೆ, ಎಡೆ ಮಾಡಿ ಪೂಜೆ ಮಾಡಿ ವಿವಿಧ ಭಕ್ಷ್ಯಗಳಿಂದ ದೇವರ ಮುಂದೆ ಇಡುತ್ತಾರೆ. ತದನಂತರ ಹರಕೆ ಯಾಗಿರುವ ಹಂದಿ, ಕುರಿ ಮತ್ತು ಆಡುಗಳನ್ನು ಬಲಿಕೊಡುತ್ತಾರೆ. ವಿಶೇಷವಾಗಿ ಅಲಂಕಾರ ಮಾಡಿದ ಕುರಿ ಮತ್ತು ಆಡುಗಳನ್ನು ಗ್ರಾಮದೈವದ ಗರ್ಭಗುಡಿ ಎದುರಲ್ಲಿ ತಂದು ನಿಲ್ಲಿಸಿ ಅದಕ್ಕೆ ಪೂಜೆ ಮಾಡಿ ನಿರ್ದಿಷ್ಟ ವ್ಯಕ್ತಿಯಿಂದ ಅದನ್ನು ಕಡಿಸಲಾಗುತ್ತದೆ. ಪ್ರಾಣಿಗಳನ್ನು ಕಡಿದ ನಂತರ ಅದರ ರಕ್ತವನ್ನು ಎಡೆಗೆ ಹಾಕಿ ಚರಗ ತಯಾರು ಮಾಡುತ್ತಾರೆ. ಈ ಚೆರಗವನ್ನು ಅಥವಾ ಹುಲುಸನ್ನು ತಮ್ಮ ಗದ್ದೆ, ಹೊಲ, ತೋಟ, ಮತ್ತು ತಾವು ಸಾಕುವ ಕುರಿಗಳ ದೊಡ್ಡಿಗಳಿಗೆ ಚೆಲ್ಲುವ ಪದ್ಧತಿದೆ ಇದೆ. ಇದರಿಂದ ದೇವರಲ್ಲಿ ನಾವು ಒಂದಾಗಿ ದೇವರಿಗೆ ಪ್ರೀತಿಪಾತ್ರರಾಗಿದ್ದೇವೆ ಎಂಬ ಭಾವನೆಯು ಕುಟುಂಬಗಳಲ್ಲಿ ನೆಲೆಸಿರುವುದನ್ನು ಗಮನಿಸಬಹುದು. ಈ ಹುಲುಸು ಚೆಲ್ಲುವ ಪದ್ಧತಿಯಿಂದ ಹೊಲಗಳಿಗೆ ಯಾವುದೇ ರೀತಿಯ ಕೀಟ ಬಾಧೆಗಳು ಬಾರದೆಂಬ ಭಾವನೆಯೂ ಇದೆ.

ಸಾಂಸ್ಕೃತಿಕವಾಗಿ ಪ್ರಕೃತಿಯಲ್ಲಿ ನಡೆಯುವ ಚಿತ್ರ ವಿಚಿತ್ರ ಸನ್ನಿವೇಶಗಳಿಗೆ ತನ್ನದೇ ಆದ ರೂಪವನ್ನು ಕೊಟ್ಟ ನಂತರ ಪ್ರಕೃತಿಯ ಚಿತ್ರ ವಿಚಿತ್ರ ಸನ್ನಿವೇಶಗಳನ್ನು ಪೂಜ್ಯಭಾವನೆ ಯಿಂದ ಆರಾಧಿಸಿ ಮಾನವನು ಬೆಳೆದುಬಂದಿರುವುದು ಕಾಣಬಹುದು. ಅಂತಹ ಪದ್ಧತಿ ಇಂದಿಗೂ ಮುಂದುವರಿದುಕೊಂಡು ಬಂದಿದೆ ಮುಂದೆಯೂ ಇರುತ್ತದೆ. ಸಂಪ್ರದಾಯಗಳು, ನಂಬಿಕೆ, ಆರಾಧನೆ, ಮೂಢನಂಬಿಕೆ, ಆಚರಣೆ, ರೂಪಗಳು ಹುಟ್ಟಿ ಅವುಗಳ ಮಹತ್ವವು ಹೆಚ್ಚಾಗಿರುವುದನ್ನು ಗಮನಿಸಬಹುದು. ತಲೆಮಾರುಗಳಿಂದ ತಲೆಮಾರುಗಳಿಗೆ ಆಚರಣೆಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ನರಬಲಿ ಮಾಡುವುದರಿಂದಲೇ ಕೋಣ, ಹಂದಿ, ಕುರಿ, ಮೇಕೆ, ಕೋಳಿ ಬಲಿಗಳು ಬಂದಿವೆ. ರಕ್ತ ಮಿಶ್ರಿತ ಆರಾಧನೆ ಸೂರ್ಯದೇವರಿಗೆ ಬಹಳ ಪ್ರಿಯವೆಂದು ಭಾವಿಸಿ ಅವುಗಳನ್ನು ಕಡಿದು ಆಚರಣೆ ಮಾಡಿರುವುದನ್ನು ಗಮನಿಸಬಹುದು.

ಸಂಡೂರು ತಾಲೂಕು

ಸಂಡೂರು ತಾಲೂಕಿನಾದ್ಯಂತ ವಾರ್ಷಿಕವಾಗಿ ಜಾತ್ರೆ, ಹಬ್ಬಗಳ ಆಚರಣೆ ಮಾಡುತ್ತಾರೆ. ವಿಶೇಷವಾಗಿ ಮೂಲದ ಈಶ್ವರನ ಹೆಂಡತಿಯೆಂದು ತಿಳಿದುಕೊಂಡು ಅಥವಾ ಪಾರ್ವತಿಯ ಮತ್ತೊಂದು ರೂಪ ಎಂದು ಅರ್ಥ ಮಾಡಿಕೂಡುವ ಗ್ರಾಮದೇವತೆ ಮಾರಮ್ಮನ ಪೂಜೆ ಮಾಡುತ್ತಾರೆ. ಕುಟುಂಬದಲ್ಲಿ ದಂಪತಿಗಳಿಗೆ ತಮ್ಮ ತಮ್ಮ ಮಕ್ಕಳಿಗೆ, ತಮ್ಮ ಸಂಬಂಧಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆಗಳು ಬಾರದಿರಲೆಂಬ ನಂಬಿಕೆಯಿಂದ ತಮ್ಮ ಕುಲದೈವಗಳನ್ನು

ಆಚರಿಸುತ್ತಾರೆ. ಗ್ರಾಮದ ಹಿರಿಯ ವ್ಯಕ್ತಿಯ ಸಮ್ಮುಖದಲ್ಲಿ ಜಾತ್ರೆ, ನಡೆಯುತ್ತದೆ. ಪ್ರತಿಯೊಂದು ಹೋಬಳಿ ಮಟ್ಟದಲ್ಲಿ ಗ್ರಾಮದೇವತೆಯರ ಹಬ್ಬ, ಹರಿದಿನಗಳನ್ನು ಮಾಡುತ್ತಾರೆ. ಇಲ್ಲಿ ಪ್ರಧಾನವಾಗಿ ಮಾರಮ್ಮ, ಹುಲಿಗೆಮ್ಮ, ಗುಳ್ಳಮ್ಮ, ಅಂಬಾಭವಾನಿ ಮುಂತಾದ ಸ್ತ್ರೀದೇವತೆಗಳ ಹಬ್ಬವನ್ನು ವಿಜೃಂಭಣೆಯಿಂದ ಮಾಡುತ್ತಾರೆ. ಆದಿಮ ಕಾಲದಿಂದಲೂ ಮನುಷ್ಯನಿಗೆ ಅನುಕೂಲ ಆಗುವಂತೆ ಆಚರಣೆಯನ್ನೇ ನಂಬಿಕೊಂಡಿದ್ದಾನೆ. ಪ್ರಕೃತಿಯ ಸಹಜ ವರ್ತನೆಯನ್ನು ಕಂಡು ಗಾಬರಿಯಾಗಿ ಅದನ್ನು ಪೂಜ್ಯಭಾವನೆಯಿಂದ ಕಂಡುಕೊಂಡಿರುವುದು ಈ ಆಚರಣೆಗಳಿಂದ ಕಾಣಬಹುದು. ಜಗತ್ತು ಅಮೂರ್ತ ಶಕ್ತಿಗೆ ಶರಣಾಗಿದ್ದು ಪೂಜೆ, ಆರಾಧನೆಯಿಂದ. ಆಚರಣೆಗಳು ಹುಟ್ಟಿ ಸಾಂಸ್ಕೃತಿಕ ಹಿನ್ನೆಲೆಯನ್ನು ಪಡೆದುಕೊಂಡಿದೆ. ಮಾನವನು ಮಾಡುವ ಆಚರಣೆಯ ರೂಪದಲ್ಲಿ 'ಬಲಿ' ವಿಶೇಷ ಪಾತ್ರ ವಹಿಸುವುದು ಇದೆ. ಆಚರಣೆಯ ಜೊತೆ ಜೊತೆಗೆ ಗಾಢವಾದ ಸಂಬಂಧವನ್ನು ಹೊಂದಿರುತ್ತದೆ.

ಬಲಿಯ ಆಚರಣೆಯು ಒಂದಲ್ಲ ಒಂದು ರೀತಿಯಲ್ಲಿ ಎಲ್ಲಾ ಕಡೆಗಳಲ್ಲಿ ನಡೆಯುವುದನ್ನು ಕಾಣಬಹುದು ಅದು ಸಮುದಾಯಗಳ ನಡುವೆ ಇರಬಹುದು. ಧಾರ್ಮಿಕ ಕ್ಷೇತ್ರಗಳ ನಡುವೆ ಇರಬಹುದು. ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೆರೆ ಸ್ವರೂಪಗಳಲ್ಲಿ ಇದರ ಇರುವಿಕೆಯನ್ನು ಗುರುತಿಸಬಹುದು. ಧಾರ್ಮಿಕ ಆಚರಣೆಯ ಬಹಳ ಮಹತ್ವದ ಕ್ರಿಯೆಯಾಗಿ ಜಗತ್ತಿನಾದ್ಯಂತ ಅನೇಕ ರೀತಿಗಳಲ್ಲಿ 'ಬಲಿ'ಯ ಪ್ರಕ್ರಿಯೆಯನ್ನು ನೋಡಬಹುದು. 'ಬಲಿ' ಎಂಬ ವಿಚಾರ ಬಂದಾಗ ಅಲ್ಲಿ ಪ್ರಾಣಿ ಇಲ್ಲವೇ ವಸ್ತುವಿನ ರೂಪದ ಅರ್ಪಣೆ ಇರುವುದನ್ನು ಗಮನಿಸಬಹುದು. ಈ ಬಲಿ ಎಲ್ಲಿಗೆ ಸಮರ್ಪಣೆ ಆಗುತ್ತದೆ ಎಂದರೆ ಅದು ಒಂದು ಅಲೌಕಿಕ ಶಕ್ತಿಗೆ. ಈ ರೀತಿಯ ಬಲಿಯ ಹಿಂದೆ ಒಂದು ರೀತಿಯ ಮುಗ್ಧನಂಬಿಕೆ ಅಥವಾ ಕೆಲವು ಬಾರಿ ಮೂಢನಂಬಿಕೆ ಕೆಲಸ ಮಾಡುವುದನ್ನು ಗಮನಿಸಬಹುದು. ಸುಭಾಶ್ಚಂದ್ರ ನಾಟೀಕಾರ ಅವರು ತಮ್ಮ 'ಉಗ್ರ ಅಚರಣೆಗಳು' ಎಂಬ ಪುಸ್ತದಲ್ಲಿ ಕೆಲವು ಮಾಹಿತಿಗಳನ್ನು ವ್ಯಕ್ತಪಡಿಸುತ್ತಾರೆ. "ಕೋಣ ಬಲಿ ಆಚರಣೆ ಉತ್ತರ ಕರ್ನಾಟಕದಾದ್ಯಂತ ರಾತ್ರಿಯ ಹತ್ತು ಗಂಟೆಯ ಸಮಯದಲ್ಲಿ ಇಲ್ಲವೇ ಮುಂಜಾನೆ ಸೂರ್ಯೋದಯದ ಮುಂಚಿತವಾಗಿ ಮಾರಮ್ಮನ ಗದ್ದುಗೆಯ ಮುಂದುಗಡೆಯಲ್ಲಿ ತೋರಣವನ್ನು ಕಟ್ಟಿ, ತೋರಣಕ್ಕೆ ಬೇವಿನ ಎಲೆ, ಮಾವಿನ ಎಲೆ, ಬಾಳೆಯ ಕಂಬಗಳಿಂದ ಅಲಂಕರಿಸಿ ಗದ್ದುಗೆಯ ಮೇಲಿರುವ ಬೆಳ್ಳಿಯ ಇಲ್ಲವೇ ಕಟ್ಟಿಗೆಯಿಂದ ತಯಾರಿಸಿದ ವಿವಿಧ ಬಣ್ಣಗಳನ್ನು ಕೊಟ್ಟಿರುವ ಉತ್ಸವದ ಮೂರ್ತಿಗೆ ಸೀರೆ ಉಡಿಸಿ, ಬಳೆ ತೊಡಿಸಿ, ಮೂಗಿನಲ್ಲಿ ಮೂಗುತಿ ಇಟ್ಟು, ಕೊರಳಿನಲ್ಲಿ ತಾಳಿ ಹಾಕಿ, ಸುತ್ತೆಲ್ಲಾ, ಬೇವಿನ ಸೊಪ್ಪನ್ನು ಕಟ್ಟಲಾಗುತ್ತದೆ. ಗ್ರಾಮದ ಮುತ್ತೈದೆಯರು ತಲೆಯ ಮೇಲೆ ಹೊತ್ತು ಮಡಿಯಿಂದ ತುಂಬಿದ ಐದು ಘಂಟೆಗಳನ್ನು ರಂಗದ ನಾಲ್ಕೂ ಬದಿಗಳಿಗೆ ಒಂದೊಂದನ್ನು ಇಟ್ಟು, ನಂತರ ಮಧ್ಯದಲ್ಲಿ ಒಂದು ಇಟ್ಟು ಪೂಜೆ ಸಲ್ಲಿಸುತ್ತಿರುವಾಗಲೇ ಗ್ರಾಮದಲ್ಲಿ ಮೆರವಣಿಗೆಗೆ

ಹೋದ ಉತ್ಸವದ ಮೂರ್ತಿಯು ಗದ್ದಿಗೆಯ ಕಡೆಗೆ ಆಗಮಿಸುತ್ತಿರುವಂತೆ ವಾದ್ಯಗಳ ಬಡಿತ ಇನ್ನಷ್ಟು ಜೋರಾಗುತ್ತದೆ. ದೇವಿಯು ಗದ್ದಿಗೆಯಲ್ಲಿ ಬಂದು ಪ್ರತಿಷ್ಠಾಪನೆಗೊಳ್ಳುತ್ತಿರುವಂತೆ ಪರಂಪರಾಗತವಾಗಿ ಕೋಣ ಕಡಿಯಲು ಸಿದ್ಧರಾದ ಕಬ್ಬಲಿಗ, ತಳವಾರ, ಹರಿಜನರು ತಮ್ಮ ತಮ್ಮ ಗಂಡುಗೊಡಲಿ ಖಡ್ಗವನ್ನು ಹಿಡಿದುಕೊಂಡು ಕೋಣ ಕಡಿಯಲು ಸಿದ್ಧರಾಗುವರು. ಹತ್ತಾರು ಹುರಿಯಾಳುಗಳು ಕೋಣವನ್ನು ತಲೆಯನ್ನು ಹಗ್ಗದಿಂದ ಬಿಗಿದು ಹಿಡಿದಿರುತ್ತಾರೆ, ಹಿಂದಿನ ಭಾಗವನ್ನು ಜಗ್ಗಿ ಹಿಡಿಯುವರು. ಈ ಕೋಣನ ಎಳೆದಾಟದಲ್ಲಿ ಕೋಣನ ರುಂಡವನ್ನು ಮುಂದಕ್ಕೆ ಜಗ್ಗಿ ಹಿಡಿದು ಕೊಡಲಿಯಿಂದ ಒಂದು ಹೊಡೆತ, ಮೂರು ಹೊಡೆತಕ್ಕೆ ರುಂಡವು ಬೇರ್ಪಡುವುದು. ಕೋಣನ ಮುಂದಿನ ಬಲಗಾಲನ್ನು ಕಡಿದು ಬಾಯಲ್ಲಿ ಅಡ್ಡಲಾಗಿ ಸಿಕ್ಕಿಸಿ ರಂಗದ ಮಧ್ಯದಲ್ಲಿಟ್ಟು, ಕೋಣನ ತಲೆಯ ಮೇಲೆ ದೀಪದ ಹಣತೆಯಿಂದ ದೀಪ ಹಚ್ಚಿ ಉರಿಸುವರು. ಕೋಣ ಬಿದ್ದ ತಕ್ಷಣವೇ ದೇವಿಯ ಬಳೆಗಳು ಒಡೆದು, ಮೂಗುತಿ ತೆಗೆದು, ಕೊರಳ ತಾಳಿ ಹರಿದು ಅಮ್ಮನಿಗೆ ತೆರೆಯಿಂದ ಮುಚ್ಚಲಾಗುತ್ತದೆ. ಈಗ ಅಮ್ಮ ವಿಧವೆಯಾದಳೆಂದು ಇವಳನ್ನು ಕೋಣನಾದ ಗಂಡನನ್ನು ಕುರಿತಂತೆ ಅನೇಕ ಹಾಡುಗಳನ್ನು ಹಾಡುತ್ತಾರೆ."[೨೯] ಈ ತರಹದ ಪದ್ಧತಿಗಳು ಮಾಯವಾಗಿ ಹಂದಿ, ಕುರಿ, ಕೋಳಿ, ಮೇಕೆಗಳನ್ನು ದೇವತೆಗಳಿಗೆ ಅರ್ಪಿಸುತ್ತಾರೆ. ಈ ಅರ್ಪಿಸುವ ಪದ್ಧತಿಯೇ ವಿಶಿಷ್ಟವಾಗಿ ಕಂಡುಬರುತ್ತದೆ. ವೈ. ಹನುಮಂತರೆಡ್ಡಿ ಅವರ ಪ್ರಕಾರ "ಸಂಡೂರು ಒಂದು ಪ್ರಾಚೀನ ಕಾಲದಲ್ಲಿ ಚೆಂಡಿಯ ಆರಾಧನಾ ಕೇಂದ್ರವಾಗಿತ್ತು ಎಂಬುದಾಗಿ ಅಲ್ಲಿನ ಅವಶೇಷಗಳನ್ನು ಪರಿಶೀಲಿಸಿದಾಗ ಕಂಡುಬರುತ್ತದೆ. ಸಂಡೂರಿನ ಪಕ್ಕದಲ್ಲಿ ಪ್ರಕೃತಿ ಸೌಂದರ್ಯದಿಂದ ಕೂಡಿದ ಕುಮಾರಸ್ವಾಮಿಯ ಗುಡ್ಡವಿದೆ. ಇದನ್ನು 'ಸ್ವಾಮಿಮಲೆ' ಎಂದು ಕರೆಯುವರು. ಈ ಗುಡ್ಡದ ಮೇಲೆ ಕುಮಾರಸ್ವಾಮಿ ಮತ್ತು ಅತನ ತಾಯಿ ಪಾರ್ವತಿಯ ಪುರಾತನ ದೇವಾಲಯಗಳು ಇವೆ. ಈಗ ಪಾರ್ವತಿ ದೇವಾಲಯವೆಂದು ಕರೆಯುತ್ತಿರುವುದು ಪೂರ್ವದಲ್ಲಿ ಚಂಡಿ ದೇವಾಲಯವಾಗಿದೆ. ಅದರ ಕುರುಹಾಗಿ, ಆ ದೇವಾಲಯದ ಸುಖನಾಸಿಯ ಮೇಲೆ ಇರುವ ಗೋಪುರದ ಮುಂಭಾಗದಲ್ಲಿ ರುಂಡಮಾಲೆಯನ್ನು ಧರಿಸಿರುವ ಚೆಂಡಿಯ ವಿಗ್ರಹವನ್ನು ಗಾರೆಯಲ್ಲಿ ರಚಿಸಲಾಗಿದೆ. ಇದು ಪುರಾತನ ಕಾಲದಲ್ಲಿ ನಿರ್ಮಿಸಲ್ಪಟ್ಟ ವಿಗ್ರಹ ಕಾಲಾಂತರದಲ್ಲಿ ಬಿಸಿಲು, ಮಳೆ, ಗಾಳಿಗಳಿಂದಾಗಿ ಅದು ಸವೆದು, ಈಗ ಸರಿಯಾಗಿ ಕಾಣಿಸುತ್ತಿಲ್ಲ. ಲಕ್ಷ್ಮೀಪುರ ಮೊದಲು ಚಿಕ್ಕಸಂಡೂರು ಎಂದು ಕರೆಯಲಾಗುತ್ತಿತ್ತು. ಅದು ಇತ್ತೀಚೆಗೆ ಲಕ್ಷ್ಮೀಪುರ ಎಂದು ಬದಲಾಯಿಸಲಾಗಿದೆ. ಇಲ್ಲಿ ಗಾಣಿಗರು ವಾಸವಾಗಿದ್ದರು. ಇವರ ಮತ್ತು ಕಾಳರ ಚೆಂಡಿಯ ಆರಾಧನ ದೇವತೆಯಾಗಿದ್ದಾಳೆ."[೩೦] ಚೆಂಡಿಯ ಮಾತು ಬಂದಿರುವುದರಿಂದ ಇದನ್ನೇ ಸಂಡೂರು ಎಂದು ಕರೆದಿರಬಹುದು ಎಂದು ಮಾಹಿತಿದಾರರು ತಿಳಿಸುತ್ತಾರೆ. ಚೆಂಡಿಯ ಆಚರಣೆಯು ಮಾರಿಯಮ್ಮನ ಆಚರಣೆಗೆ ಸಾಮ್ಯವಾಗುತ್ತದೆ. ಪ್ರಧಾನವಾಗಿ ಯಾವುದೇ ಒಂದು ಆಚರಣೆ

ಮಾಡಬೇಕಾದರೆ ಅದರಲ್ಲಿ ಒಂದು ವಿಶೇಷತೆಯನ್ನು ಕಂಡುಕೊಂಡು ಪೂಜೆ ಮಾಡುತ್ತಾರೆ. ಕೌಟುಂಬಿಕ ಕಲಹ, ವ್ಯಾಜ್ಯ, ಮದುವೆ ಸಮಸ್ಯೆ, ಮಕ್ಕಳ ಸಮಸ್ಯೆ, ಭೂಮಿ ವ್ಯಾಜ್ಯಗಳು, ಆರೋಗ್ಯ ವಿಚಾರಗಳು, ಉದ್ಯೋಗ ವಿಚಾರಗಳು, ಕೃಷಿ ವಿಚಾರಗಳು ಮುಂತಾದ ಸಮಸ್ಯೆಗಳೂ ಬಂದಾಗ ಈ ಗ್ರಾಮದೇವತೆ ಸಮಕ್ಷಮದಲ್ಲಿ ಬಂದು ಬಗೆಹರಿಸಿಕೊಳ್ಳುತ್ತಾರೆ. ವಾರ್ಷಿಕವಾಗಿ ನಡೆಯುವ ಆಚರಣೆಯಲ್ಲಿ ಗಾಣಿಗ ಸಮುದಾಯದವರು ವಿವಿಧ ರೀತಿಯಲ್ಲಿ ಗ್ರಾಮದೈವ ಮತ್ತು ಶಕ್ತಿದೇವತೆಯ ಹೆಸರಿನಲ್ಲಿ ಪೂಜೆ ಮಾಡುವುದು ಇದೆ. ಸಿದ್ಧೇಶ್ವರಿ ಅವರ ಪ್ರಕಾರ "ಸಂಡೂರು ತಾಲೂಕಿನ ಧರ್ಮಾಪುರದಲ್ಲಿ ಶ್ರೀಗಂಡಿ ನರಸಿಂಹಸ್ವಾಮಿ ರಥೋತ್ಸವದ ಸಮಯದಲ್ಲಿ ಬ್ಯಾಟಿಮರದ ಆಚರಣೆ ಇದೆ. ಇಲ್ಲಿ ಬ್ಯಾಟಿಮರ ತರುವ ಪೂಜಾರಿ ಲಕ್ಷ್ಮೀಪುರದ ತಿಮ್ಮಪ್ಪ. ಬ್ಯಾಟಿಮರ ತರುವಾಗ ಪೂಜಾರಪ್ಪ ಎಚ್ಚರ ತಪ್ಪುತ್ತಾನೆ. ಆಚರಣೆಯ ನಂತರ ನೀರು ಚಿಮುಕಿಸಿದಾಗ ಪ್ರಜ್ಞೆ ಬರುತ್ತದೆ. ಅಂದರೆ ಇಲ್ಲಿ ಒಬ್ಬರು ಸತ್ತು ಮತ್ತೊಬ್ಬರು ಹುಟ್ಟುತ್ತಾರೆ. ದೈವ ವ್ಯಕ್ತಿಯನ್ನು ಮರು ಸೃಷ್ಟಿಸುತ್ತದೆಂಬ ನಂಬಿಕೆಯಿದೆ. ಗುಡಿಯನ್ನು ಮೂರು ಸುತ್ತುಹಾಕುವುದರೊಳಗೆ ಜೀವ ದೈವಕ್ಕೆ ಬಲಿಯಾಗಿ, ಪುನಃ ಮರುಹುಟ್ಟು ಪಡೆಯುತ್ತದೆ. ಇದು ನರಬಲಿಯನ್ನು ಸಂಕೇತಿಸುತ್ತದೆ"[೨೧] ಎಂಬ ಮಾತುಗಳು ಮಾನವನ ಮಾನಸಿಕ ಸ್ಥಿತಿಮಿತಿಗಳನ್ನು ಧ್ವನಿಸುತ್ತದೆ. ಏಕೆಂದರೆ ದೇವರಲ್ಲಿ ಭಕ್ತಿ ಮತ್ತು ಭಯ ಇರುವಾಗ ಇಂತಹ ಪ್ರಜ್ಞಾಹೀನ ಸ್ಥಿತಿ ತಲುಪುವುದು ಸಾಮಾನ್ಯ. ಇದಕ್ಕೆ ಭಯವೇ ಪ್ರಮುಖ ಕಾರಣವಾಗುತ್ತದೆ. ಪ್ರಧಾನವಾಗಿ ಇಲ್ಲಿ ದೇವರೇ ಶ್ರೇಷ್ಠ ಎಂಬ ಭಾವನೆಯು ನೆಲೆಯಾಗಿರುವುದು ಗುರುತಿಸಬಹುದು. ಪೂರ್ವದಲ್ಲಿ ಮಾನವನ ಯೋಗಕ್ಷೇಮಕ್ಕಾಗಿ ನರಬಲಿಯನ್ನು ಮಾಡುತ್ತಿದ್ದರು ಎಂಬುದು ಗುರುತಿಸಬಹುದು.

ಸಂಡೂರು ಪಟ್ಟಣದ ಚಿಕ್ಕಸಂಡೂರಿನ(ಲಕ್ಷ್ಮೀಪುರ) ಈ ದೇವರ ಬಲಿಯನ್ನು ಹೀಗೆ ಕೊಡುವರು: ಬೆಳಗಿನ ಜಾವ ಐದರ ಸುಮಾರಿಗೆ ದೇವರಿಗೆ ಬಿಟ್ಟ ಕೋಣವನ್ನು ಬಲಿಕೊಡುತ್ತಾರೆ. ಇದಕ್ಕೆ ಮಾದಿಗ ಮತ್ತು ನಾಯಕರು(ವಾಲ್ಮೀಕಿ) ಸಮುದಾಯವರು ನಿಂತು ಶಾನಭೋಗ ಮತ್ತು ದೇವರ ಪೂಜಾರಿ ಅನುಮತಿಯ ಮೇರೆಗೆ ಸಮಯಕ್ಕೆ ಸರಿಯಾಗಿ ಬಲಿಯನ್ನು ಕೊಡುತ್ತಾರೆ. ಈ ಕೋಣ ಬಿದ್ದಮೇಲೆ ಜೋಗತಿಯರು ಅಂದರೆ ಆ ಊರಿನ ಐದು ಜನ ದೇವದಾಸಿ ಮಹಿಳೆಯರು(ಮುತ್ತೈದರೆಂದು ಕೂಡ ಸಂಬೋಧಿಸುತ್ತಾರೆ) ಸೇರಿ ಉದ್ಧೋ... ಉದ್ಧೋ... ಎಂದು ಜೋಗ ಹಾಕಿದ ಮೇಲೆಯೇ ಆ ಕೋಣದ ಕಾಲನ್ನು ಅದರ ಬಾಯಲ್ಲಿ ಕಡಿದು ಇಡುತ್ತಾರೆ. ಜೋಗ ಹಾಕುವವರು ಜೋರಾಗಿ ಉದ್ಧೋ ಉದ್ಧೋ ಎಂದು ಕೂಗಿಕೊಂಡಾಗ ಕೋಣದ ತಲೆ ಮುಂದಕ್ಕೆ ಸರಿಯುತ್ತದೆ. ಇದರಿಂದ ಅಲ್ಲಿನ ಜನರು ಕೇಕೆ–ಸಿಳ್ಳೇ ಹಾಕುತ್ತಾ ದೇವರನ್ನು ಮಹಿಮೆ ಪಡಿಸುತ್ತಾರೆ. ಇದರ ಅರ್ಥ ಏನೆಂದರೆ, ಆ ದೇವರ ಕಾರ್ಯ ಸುಗಮವಾಗಿ ನಡೆದಿದೆ ಎಂದರ್ಥ. ಬಲಿಯನ್ನು ಈ ದೇವರಿಗೆ

ಸಮರ್ಪಕವಾಗಿ ನೀಡಲಾಗಿದೆ ಎಂದೇ ಅರ್ಥ. ಇಲ್ಲವಾದರೆ ಈ ಕಾರ್ಯ ನಡೆದೇ ಇಲ್ಲವೆಂದರೆ ದೇವರಿಗೆ ಬಲಿ ಸರಿಯಾಗಿ ಆಗಿಲ್ಲವೆಂದೇ ಅರ್ಥ.

ಹೊಸಪೇಟೆ ತಾಲೂಕು

ಹೊಸಪೇಟೆ ತಾಲೂಕಿನಲ್ಲಿ ಗ್ರಾಮದೇವತೆಗಳನ್ನು ಪೂಜೆ ಮಾಡುತ್ತಾರೆ. ಪ್ರಧಾನವಾಗಿ ಹೊಸಪೇಟೆ ನಗರಕ್ಕೆ ಹೊಂದಿಕೊಂಡಿರುವ ಮಾರಮ್ಮನನ್ನು ವಿಶೇಷವಾಗಿ ಪೂಜೆ ಮಾಡುತ್ತಾರೆ. ಇದೊಂದು ವಿಶಿಷ್ಟ ಆಚರಣೆಯಾಗಿ ಮಾಡುತ್ತಾರೆ. ಮಾರಿ ಎಂದು ಕರೆಯುವ ಗ್ರಾಮದೇವತೆಯನ್ನು ಹೊಸಪೇಟೆಯ ಏಳುಕೇರಿಯಲ್ಲಿ ಬೇಡ ಕುಲದವರು ಪೂಜೆ ಮಾಡುತ್ತಾರೆ. ಈ ಆಚರಣೆಯನ್ನು ಬುಡಕಟ್ಟುಗಳು ಉಳಿಸಿಕೊಂಡು ಬಂದಿವೆ. ವಾರ್ಷಿಕವಾಗಿ ನಡೆಯುವ ಆಚರಣೆಯಲ್ಲಿ ಗಡಿಮಾರಿಯ ಹೆಸರಿನಲ್ಲಿ ಅಮ್ಮನನ್ನು ಒಂದೂರಿಂದ ಮತ್ತೊಂದು ಊರಿಗೆ ಗಡಿ ದಾಟಿಸುವ ಪರಂಪರೆಯು ಇದೆ. ಮಂಗಳವಾರ ವಿಶೇಷ ದಿನ ಎಂದು ತಿಳಿದ ಬುಡಕಟ್ಟು ಜನರು ಗಡಿಮಾರಿಯನ್ನು ಆಚರಿಸುತ್ತಾ ಬಂದಿದ್ದಾರೆ. ಮಂಗಳವಾರ ಬೇಡ ಜಾತಿಯವರು ತೋಟಿಗನಿಂದ ಸಾರು ಹಾಕಿಸುತ್ತಾರೆ. ಮಾರಿ ಇರುವ ದಿನ ರೈತರು ತಮ್ಮ ತಮ್ಮ ಗದ್ದೆ, ಹೊಲಗಳಿಗೆ ಹೋಗುವುದಿಲ್ಲ ಮತ್ತು ಹೋಗಬಾರದೆಂಬ ಕಟ್ಟು ನಿಟ್ಟಿನ ಪದ್ಧತಿ ಇದೆ. ಚಕ್ಕಡಿಗೆ ಎತ್ತುಗಳನ್ನು ಕಟ್ಟುವಂತಿಲ್ಲ ಇದೊಂದು ಕಟ್ಟುಪಾಡು, ಈ ಕಟ್ಟುಪಾಡನ್ನು ಮುರಿಯುವಂತಿಲ್ಲ. ಪ್ರದಾನವಾಗಿ ಮಾರಿ ಮಾಡುವ ಊರಿನ ಸಮಸ್ತ ಜನರು ಸೇರಿ ನಿರ್ದಿಷ್ಟ ವ್ಯಕ್ತಿಯ ಕೈಯಲ್ಲಿ ಅತ್ತಿ ಮರವನ್ನು ಕಡಿಸಿ ದೇವಿಯ ಮೂರ್ತಿಯನ್ನು ತಯಾರಿಸುತ್ತಾರೆ. ಈ ಮರದ ಮೂರ್ತಿಯನ್ನು ಮಾಡಬೇಕಾದರೆ ಆಚಾರಿಗಳೇ ಬೇಕೆಂದು ನಿಯಮ ಇದೆ. ಮರದಿಂದ ತಯಾರಿಸಿದ ಮೂರ್ತಿಗೆ ಕೆಂಪು ಸೀರೆ, ಕುಂಕುಮ, ಹೂ, ಭಂಡಾರಗಳಿಂದ ವಿಶೇಷವಾಗಿ ಅಲಂಕಾರ ಮಾಡುತ್ತಾರೆ. ಗದ್ದುಗೆಯಲ್ಲಿ ಪ್ರತಿಷ್ಠಾಪನೆ ಮಾಡಿದ ಮರದ ಮೂರ್ತಿಯು ನೋಡಲು ಬಹಳ ಸುಂದರವಾಗಿ ಕಾಣುತ್ತದೆ. ಕೆಂಪುಸೀರೆಯನ್ನು ಉಡಿಸುವುದರಿಂದ ಮತ್ತು ದೇವಿಯ ಕಣ್ಣುಗಳು ಭಯಾನಕವಾಗಿ ಇರುತ್ತವೆ. ಮಾನವನ ಭಯದ ಸಂಕೇತವಾಗಿ ಮೂರ್ತಿ ರಚನೆ ಮಾಡಲಾಗುತ್ತದೆ. ಈಗೆ ಭಯಂಕರವಾಗಿ ಅಲಂಕಾರ ಮಾಡುವ ಉದ್ದೇಶ ಗ್ರಾಮಗಳಲ್ಲಿ ಯಾವುದೇ ರೀತಿಯ ಮಾರಿರೋಗಗಳು ಬರಬಾರದು ಮತ್ತು ರೋಗಗಳ ಸಂಕೇತವೂ ಆಗಿರುತ್ತವೆ ಎಂದು ಜನಪದರು ಭಾವಿಸುತ್ತಾರೆ. ಈ ರೀತಿಯಲ್ಲಿ ಅಲಂಕಾರ ಮಾಡಿದ ದೇವತೆಯನ್ನು ಹೊಸಪೇಟೆ ಅಲ್ಲದೆ ಬೇಡ ಸಮುದಾಯದವರು ಎಲ್ಲಿ ಎಲ್ಲಿ ನೆಲೆಯಾಗಿದ್ದಾರೋ ಅಲ್ಲಿ ದೇವತೆಯನ್ನು ಪೂಜೆ ಮಾಡಿ ಗಡಿ ದಾಟಿಸಿ ಬರುತ್ತಾರೆ. ಗುಡಿಗಳಲ್ಲಿ ಹರಕೆ ಹೊತ್ತುಕೊಂಡಿರುವ ಬೇಡ ಕುಲದವರು ಕುರಿ ಕೋಳಿ, ಆಡು, ಮುಂತಾದ ಪ್ರಾಣಿಗಳನ್ನು ಬಲಿ ಕೊಡುವುದು ಇದೆ. ಗದ್ದುಗೆಯಲ್ಲಿ ಪ್ರತಿಷ್ಠಾಪಿಸಿದ ಮಾರಿಯಮ್ಮನ ಮೂರ್ತಿಗೆ ಧೂಳಿನಮರಿಯನ್ನು ಬಲಿಯಾಗಿ ಅರ್ಪಿಸುವುದು ಇದೆ. ಇದರ

ಪ್ರಕಾರ ಸಮುದಾಯದ ಏಳಿಗೆಯನ್ನು ಮತ್ತು ಸಮೃದ್ಧಿಯನ್ನು ಕರುಣಿಸುತ್ತದೆಂಬ ಬಲವಾದ ನಂಬಿಕೆ ಬೇಡ ಸಮುದಾಯದಲ್ಲಿರುವುದು ಗುರುತಿಸಬಹುದು.

ಚರಗ

ಚರಗದ ಆಚರಣೆಯನ್ನು ಪ್ರಧಾನವಾಗಿ ಗ್ರಾಮದೇವತೆಗಳ ಆಚರಣೆಯಲ್ಲಿ ಬಳಸುತ್ತಾರೆ. ಆಚರಣಾತ್ಮಕವಾಗಿ ಚರಗಕ್ಕೆ ವಿಶೇಷ ಪ್ರಾಮುಖ್ಯವೂ ಇದೆ. ಅಕ್ಕಿಯಿಂದ ತಯಾರಿಸಿದ ಅನ್ನಕ್ಕೆ ಚರಗ ಎನ್ನುವರು. ಈ ಚರಗಕ್ಕೆ ಕುರಿ, ಕೋಣ, ಕೋಳಿ, ಹಂದಿ ಬಲಿ ಮಾಡಿ ಅವುಗಳ ರಕ್ತವನ್ನು ಹಾಕುತ್ತಾರೆ. ರಕ್ತ ಹಾಕಿದ ನಂತರ ಕುಂಕುಮ ಅರಿಶಿಣದಿಂದ ಪೂಜೆ ಮಾಡಿ ರಕ್ತಮಿಶ್ರಿತ ಅನ್ನವನ್ನು ಚರಗ ಎಂದು ಕರೆಯುತ್ತಾರೆ. ಗ್ರಾಮದೈವ ಯಾವುದೇ ಇರಲಿ ಅದು ಗಂಡುದೇವರು ಇರಲಿ, ಹೆಣ್ಣುದೇವರು ಇರಲಿ ದೇವಸ್ಥಾನದಲ್ಲಿ ತಯಾರು ಮಾಡುವ ಚರಗಕ್ಕೆ ಬಹಳ ಮಹತ್ವ ಇದೆ. ಕುಟುಂಬದಲ್ಲಿ ಮತ್ತು ಹೊಲಗಳಲ್ಲಿ ಅಭಿವೃದ್ಧಿಯ ಸಂಕೇತವಾಗಿ ಚರಗವನ್ನು ಬಳಸುತ್ತಾರೆ. ಹರಕೆ ಹೊತ್ತುಕೊಂಡ ಕುಟುಂಬದವರು ತಮ್ಮ ಊರು ದೇವತೆಯ ಹಬ್ಬದಲ್ಲಿ ಚರಗವನ್ನು ತಂದು ಸ್ವೀಕರಿಸುವುದು ಮತ್ತು ಚರಗವನ್ನು ಹೊಲಗಳಿಗೆ ಹಾಕುವುದರಿಂದ ರೋಗಗಳೂ ಕಾಯಿಲೆಗಳು ಮಾಯವಾಗುತ್ತವೆಂಬ ಭಾವನೆಯು ಜನಸಾಮಾನ್ಯರಲ್ಲಿ ಮನೆಮಾತಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಸ.ಚಿ.ರಮೇಶ್ ಅವರ ಪ್ರಕಾರ "ಅಮಾವಾಸ್ಯೆಯಂದು ನಡೆಯುವ ಕೃಷಿಸಂಬಂಧಿ ವರ್ಷಕ್ಕೊಂದು ಬಾರಿ ಕೃಷಿಕರು ತಮ್ಮ ತಮ್ಮ ಹೊಲಗಳಿಗೆ ಚರಗದ ಮೂಲಕ ನೈವೇದ್ಯ ಅರ್ಪಿಸುತ್ತಾರೆ. ಮಲೆನಾಡಿನ ಭಾಗಗಳಲ್ಲಿ ಭೂಮಿ ಹುಣ್ಣಿಮೆಯಿಂದ ಭೂಮಿಗೆ ಎಡೆ ಅರ್ಪಿಸಿ, ರೈತರು ತಮ್ಮ ಹೊಲಗಳಿಗೆ ಅನ್ನ ಚೆಲ್ಲುವ ಪದ್ಧತಿ ಇದೆ. ಅಲ್ಲದೆ ಕಟ್ಟಿಜ್ಜಿಯಲ್ಲಿ ರಕ್ತದ ಅನ್ನವನ್ನು ಗದ್ದೆಗಳಿಗೆ ಹಾಕುವ ಪದ್ಧತಿಯೂ ಇದೆ. ಎಳ್ಳು ಅಮಾವಾಸ್ಯೆಯ ಹಬ್ಬದ ನಸುಕಿನಲ್ಲಿ ಎದ್ದ ಯುವಕರು ಬಂಡಿ ತೊಳೆದು ಚಕ್ರಕ್ಕೆ ಎಣ್ಣೆ ಹಾಕಿ, ಕಮಾನು ಕಟ್ಟಿ ವಿವಿಧ ಬಗೆಯ ಹೂಗಳಿಂದ ಅಲಂಕರಿಸುತ್ತಾರೆ. ಎತ್ತುಗಳ ಮೈ ತೊಳೆದು ಬಣ್ಣ ಹಚ್ಚಿ, ಕೊಂಬುಗಳಿಗೆ ಎಣ್ಣೆ ಹಚ್ಚಿ, ಕೋಡು ಹಣಸು ಹಾಕಿ ಹಣೆಪಟ್ಟಿ ಕಟ್ಟುತ್ತಾರೆ. ಕೊರಳಿಗೆ ಕಿರುಗಜ್ಜೆಯ ಸರಕಟ್ಟಿ, ಮೈಮೇಲೆ ಚಿತ್ತಾರದ ಜೂಲ ಹೊದಿಸುತ್ತಾರೆ. ಹಬ್ಬಕ್ಕಾಗಿ ರಾತ್ರಿಯಿಡೀ ನಿದ್ರೆ ಮಾಡದೆ ಹೆಂಗಸರು ಅಡುಗೆ ತಯಾರಿಸುತ್ತಾರೆ. ಅಂದು ಅವರು. ಎಳ್ಳು ಹೋಳಿಗೆ ಕಡಕ್ ಸಜ್ಜೆರೊಟ್ಟಿ ಕರಿಕಡ್ಲೆ, ಮಸಾಲೆ, ಉರುಳಿ, ಕಾರಸಾರು, ಎಣ್ಣೆಗಾಯಿ, ಬದನೆಕಾಯಿ ಪಲ್ಯೆ ಕೆನೆಮೊಸರು ಹಾಗೂ ಚರಗದ ನೈವೇದ್ಯಕ್ಕಾಗಿ ಜೋಳ, ಅವರೆ, ಅಕ್ಕಿ ಕಿಚಡಿ ತಯಾರಿಸಿಕೊಳ್ಳುತ್ತಾರೆ. ಬಿದಿರು ಬುಟ್ಟಿಯಲ್ಲಿ ಅಡುಗೆ ಹಾಗೂ ನೈವೇದ್ಯಗಳನ್ನು ತುಂಬಿಕೊಂಡು ಹೊಸ ಹೊಸ ಉಡುಗೆಗಳನ್ನು ತೊಟ್ಟು ಹೆಣ್ಣುಮಕ್ಕಳು ಬುಟ್ಟಿಗಳನ್ನು ಹೊತ್ತು ಬಂಡಿಯ ಬಳಿಗೆ ಬರುತ್ತಾರೆ. ಅಗಲೇ ಸಿದ್ಧವಾದ ಬಂಡಿಗಳ ಮೇಲೆ ಬುಟ್ಟಿಗಳನ್ನು ಹಿಡಿದುಕೊಳ್ಳುತ್ತಾರೆ."[೨೨] ಯಾವುದೇ ಸಮಯದಲ್ಲಿ ಈ ಚರಗ, ಎಡೆ, ನೈವೇದ್ಯಗಳು

ಹಬ್ಬದ, ಜಾತ್ರೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಹೊಲಗಳಿಗೆ, ದನದ ಕೊಟ್ಟಿಗೆಗಳಿಗೆ, ಚಿಕ್ಕ ಚಿಕ್ಕ ಮಕ್ಕಳಿಗೆ ಕಾಯಿಲೆಗಳು ಬಂದಾಗ ಈ ಚರಗವನ್ನು ಬಳಸುತ್ತಾರೆ. ಈ ಚರಗವನ್ನು ತಮ್ಮ ತಮ್ಮ ಹೊಲ ಗದ್ದೆಗಳಿಗೆ ಹಾಕುವುದರಿಂದ ಸಮೃದ್ಧಿಯ ಫಲಸಲನ್ನು ಕೊಡುತ್ತದೆಂಬ ದೃಢನಂಬಿಕೆ ಜನಪದರಲ್ಲಿದೆ. ಪ್ರಸ್ತುತ ಆಧುನಿಕ ಸಂದರ್ಭದಲ್ಲಿ ಬೂದುಕುಂಬಳ ಕಾಯಿಯನ್ನು ಕತ್ತರಿಸಿ ಅದಕ್ಕೆ ಅನ್ನವನ್ನು ಇಟ್ಟು ಚರಗವಾಗಿ ತಯಾರಿಸುತ್ತಾರೆ. ಬೂದುಕುಂಬಳ ಕಾಯಿಯನ್ನು ಎರಡು ಭಾಗವಾಗಿ ಕತ್ತರಿಸಿ ಅದಕ್ಕೆ ಅರಿಶಿನ ಕುಂಕುಮವನ್ನು ಹಚ್ಚಲಾಗುತ್ತದೆ. ಕೆಲವು ಕಡೆಗಳಲ್ಲಿ ಬೂದುಕುಂಬಳ ಕಾಯಿಯನ್ನು ಚಿಕ್ಕ, ಚಿಕ್ಕದಾಗಿಯೂ ಕತ್ತರಿಸಲಾಗುತ್ತದೆ. ಈ ಚಿಕ್ಕ ಚಿಕ್ಕ ಕತ್ತರಿಸಿದ ಬೂದುಕುಂಬಳ ಕಾಯಿಗಳಿಗೆ ಕುಂಕುಮವನ್ನು ಹಚ್ಚಿದಾಗ ಅದು ಮಾಂಸಾದಾಕಾರದಲ್ಲಿ ಕಂಡುಬರುತ್ತದೆ. ಅದನ್ನೇ ದೇವರಿಗೆ ಅರ್ಪಿಸುವುದು ಒಂದು ಬದಲಾವಣೆಯ ಸಂಸ್ಕೃತಿಯೂ ಹೌದು ಎನ್ನಬಹುದು. ಪ್ರಾಣಿಗಳ ಬದಲಿಗೆ ಬೂದು ಕುಂಬಳಕಾಯಿ ಪ್ರಧಾನ ಪಾತ್ರ ವಹಿಸುವುದು ಕಂಡುಬರುತ್ತದೆ. ನವರಾತ್ರಿಯ ಸಂದರ್ಭದಲ್ಲಿ ಮತ್ತು ದಸರಾ ಹಬ್ಬದ ಸಮಯಕ್ಕೆ ಬೂದು ಕುಂಬಳಕಾಯಿಗಳನ್ನು ಬಳಸುತ್ತಾರೆ.

ಕೂಡ್ಲಿಗಿ ತಾಲೂಕು

ಬಳ್ಳಾರಿ ಜಿಲ್ಲೆಗೆ ಸೇರಿದ ಕೂಡ್ಲಿಗಿ ತಾಲೂಕಿನಲ್ಲಿ ಹಲವಾರು ರೀತಿಯ ಆಚರಣೆಗಳಿವೆ. ಕೂಡ್ಲಿಗಿ ತಾಲೂಕಿನ ಗ್ರಾಮದೈವಗಳ ಆಚರಣೆ ಮಾಡುತ್ತಾರೆ. ಬಲಿಪಾಡ್ಯಮಿ ದಿನ ವಿಶೇಷ ಪೂಜೆ ಮಾಡಲಾಗುತ್ತದೆ. ಲಕ್ಷ್ಮಿಯನ್ನು ಒಲಿಸಿಕೊಳ್ಳುವುದು ಪೂಜಾವಿಧಾನಗಳ ಆಶಯವಾಗಿದೆ ಯೆಂದು ಜನರ ಅಭಿಮತವಾಗಿದೆ. ಗ್ರಾಮದೇವತೆಗಳ ಸಮಕ್ಷಮದಲ್ಲಿ ನಡೆಯುವ ಬಲಿಪಾಡ್ಯಮಿ ಆಚರಣೆ ಮೂಲಕ ಜನಪದರ ಯೋಗಕ್ಷೇಮವನ್ನು ಗುರುತಿಸಬಹುದು. ಈ ಆಚರಣೆಯು ಹಳೆಯ ಕಾಲದಿಂದಲೂ ಬೆಳೆದುಬಂದಿದೆ ಎಂದು ಅಲ್ಲಿನ ಜನಪದರು ಹೇಳುತ್ತಾರೆ. ಈ ಸಂದರ್ಭದಲ್ಲಿ ಪಿತೃವಾಕ್ಯ ಮಹತ್ವವನ್ನು ಪಡೆದುಕೊಳ್ಳುತ್ತದೆ. ಪರಿಪಾಲನಾ ಶಕ್ತಿಯನ್ನು ಪಡೆದುಕೊಂಡಿರುವ ಈ ಗ್ರಾಮದೇವತೆಯರು ಮನುಷ್ಯನನ್ನು ಕಾಪಾಡುತ್ತವೆ ಎಂಬ ಭಾವನೆ ಇದೆ. ಪೂಜೆಗಳ ವೈವಿಧ್ಯತೆಗಳು ಬಹಳ ಮುಖ್ಯವಾಗಿ ನಡೆಯುತ್ತವೆ. ಲಂಬಾಣಿಗಳು ತಮ್ಮ ತಾಂಡಾಗಳಲ್ಲಿ ವಾಸ ಮಾಡುವಾಗ ತಮ್ಮ ಕುಲದೈವವನ್ನು ಪೂಜಿಸುವುದು ರೂಢಿ. ಸಪ್ತಮಾತೃಕೆಯರಲ್ಲಿ ಒಂದಾದ ಕಾಳಿಯಮ್ಮನನ್ನು ತೃಪ್ತಿಪಡಿಸಲು ಆಚರಣೆಯನ್ನು ಮಾಡುತ್ತಾರೆ. ಈ ಆಚರಣೆಯು ತಾಂಡಾ ಜಾತಿಯವರ ಸಂಸ್ಕೃತಿಯಲ್ಲಿ ಭಿನ್ನವಾಗಿರುವುದು ಗುರುತಿಸ ಬಹುದು. ಪ್ರಾಣಿಬಲಿ ಇಲ್ಲಿ ನಡೆಯುವುದಿಲ್ಲ. ಅದರ ಬದಲಿಗೆ ಬೂದುಕುಂಬಳಕಾಯಿಯನ್ನು ದೇವರಿಗೆ ಅರ್ಪಿಸುವುದು ಇದೆ. ಆಚರಣೆಗಳು ಕಾಲ ಕಾಲಕ್ಕೆ ಬದಲಾವಣೆಗಳು ಪಡೆದು ಕೊಳ್ಳುವುದು ಇದೆ. ಇವು ತಮ್ಮದೇ ಆದ ಸಾಂಸ್ಕೃತಿಕ ವಿಶೇಷತೆಗಳನ್ನು ಪಡೆದುಕೊಳ್ಳುತ್ತವೆ. ಮಾಹಿತಿದಾರರ ಪ್ರಕಾರ 'ಬಲಿ' ನೀಡುವುದರಿಂದ ಸಾಂಕೇತಿಕವಾಗಿರುವುದು ಅಷ್ಟೇ ಎಂದು

ತಿಳಿಸುತ್ತಾರೆ. ಯಾವುದೇ ಒಂದು ವಸ್ತುವನ್ನು ಸಹ ದೇವರಿಗೆ ಅರ್ಪಿಸಬಹುದು. ಅದು ಸಮೃದ್ಧಿಯ ಸಂಕೇತವಾಗಿರುತ್ತದೆ. ನಾವು ಮಾಡುವ ಯಾವುದೇ ಆಚರಣೆಯಲ್ಲಿ ನಂಬಿಕೆ ಪ್ರಧಾನ ಪಾತ್ರ ವಹಿಸುತ್ತದೆ. ದನಕರುಗಳನ್ನು, ತಮ್ಮ ಹೊಲಗಳನ್ನು ಪೋಷಿಸುವ, ಸಂರಕ್ಷಿಸುವ ಕೆಲಸವನ್ನು ದೇವತೆ ಮಾಡುತ್ತಾಳೆ ಎಂದು ಭಾವಿಸುತ್ತಾರೆ. ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಗ್ರಾಮದೇವತೆಗಳಿಗೆ ವೀಳ್ಯದ ಎಲೆ ಸಮರ್ಪಿಸುವುದು ಇದೆ. ಇದೊಂದು ವಿಶಿಷ್ಟ ಆಚರಣೆ ಎನ್ನಬಹುದು. ಗ್ರಾಮದೇವತೆಯರು ಸಮೃದ್ಧಿಯನ್ನು ಕರುಣಿಸುತ್ತಾಳೆಂಬ ಭಾವನೆಯಿಂದ ಎಲೆಗಳನ್ನು ದೇಣಿಗೆಯಾಗಿಯೂ ಕೊಡುತ್ತಾರೆ. ಇಲ್ಲಿ ತಾವು ಬೆಳೆಯುವ ಬೆಳೆಯಾದ ಎಲೆ ತೋಟದಲ್ಲಿ ಯಾವುದೇ ರೀತಿಯ ಕೀಟ ಬಾಧೆಗಳು ಬರಬಾರದೆಂಬ ಭಾವನೆಯೂ ಇಲ್ಲಿ ನಿರ್ಮಾಣವಾಗಿರುವುದು ಇದೆ. ಕೂಡ್ಲಿಗಿ ತಾಲೂಕಿನಾದ್ಯಂತ ಕೃಷಿಯಾಗಿ ವೀಳ್ಯದೆಲೆಯ ತೋಟಗಳು ತುಂಬಾ ಕಂಡುಬರುತ್ತವೆ. ವಾರ್ಷಿಕವಾಗಿ ಮಾಡುವ ಜಾತ್ರಾ ಮಹೋತ್ಸದಲ್ಲಿ ದೇವರಿಗೆ ಬೆಲೆಬಾಳುವ ವಸ್ತುಗಳಾದ ಬಂಗಾರದ ಸರ, ಬೆಳ್ಳಿ ಸರದ ಜೊತೆಯಲ್ಲಿ ಎಲೆಗಳನ್ನು ಇಟ್ಟು ಪೂಜೆ ಮಾಡುವುದು ಗುರುತಿಸಬಹುದು. ಇದೂಂದು ವಿಶಿಷ್ಟ ಪದ್ಧತಿಂಯಾಗಿದೆ. ಮದುವೆ ಶುಭಕಾರ್ಯದಲ್ಲಿ ತಾಂಬೂಲವನ್ನು ಉಪಯೋಗಿರುವುದರಿಂದ ಮೊದಲಿಗೆ ದೇವರಿಗೆ ತಾಂಬೂಲವನ್ನು ಅರ್ಪಿಸುವ ಪದ್ಧತಿ ಇಟ್ಟುಕೊಂಡಿದ್ದಾರೆ.

ಹಗರಿಬೊಮ್ಮನಹಳ್ಳಿ ತಾಲೂಕು

ತನ್ನದೇ ಆದ ಸಾಂಸ್ಕೃತಿಕ ಇತಿಹಾಸವನ್ನು ಪಡೆದುಕೊಂಡಿರುವ ಈ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ವಿವಿಧ ರೀತಿಯ ಜನಪದರು ವಾಸ ಮಾಡುತ್ತಿದ್ದಾರೆ. ವಿವಿಧ ರೀತಿಯ ಜಾನಪದ ವಿಚಾರಗಳು ಸಮ್ಮಿಳನಗೊಳ್ಳುತ್ತಿರುವುದು ಇದೆ. ಪರಂಪರಾಗತವಾಗಿ ನೆಲೆಯಾಗಿರುವ ಮೂಲ ಆರಾಧನೆಯ ಜೊತೆಗೆ ಜನಪದ ದೈವಗಳ ಆರಾಧನೆ ಬಹಳ ಮಹತ್ವವನ್ನು ಪಡೆದುಕೊಂಡಿರುವುದು ಗುರುತಿಸಬಹುದು. ಕುಲದೈವಗಳ ಆರಾಧನೆಯಂತಹ ಮಾರಿಯಮ್ಮ, ಗಾಳಮ್ಮ, ಗುಳ್ಳಮ, ದ್ಯಾಮವ್ವ, ಮುಂತಾದ ದೇವತೆಗಳನ್ನು ಪೂಜೆ ಮಾಡುವುದು ರೂಢಿಯಲ್ಲಿದೆ. ಗ್ರಾಮಗಳ ಸುಭಿಕ್ಷೆಗೋಸ್ಕರ, ಕೃಷಿಕರ ಯೋಗ ಕ್ಷೇಮಕ್ಕೋಸ್ಕರ ಪೂಜೆಗಳನ್ನು ಮಾಡುವುದು ರೂಢಿಯಲ್ಲಿದೆ. ಪ್ರಧಾನವಾಗಿ ಗ್ರಾಮದೈವಗಳ ಆಚರಣಾ ಹಿನ್ನೆಲೆಯಲ್ಲಿ ಪ್ರಾಣಿಬಲಿ ಸಂಪ್ರದಾಯವನ್ನು ಗಮನಿಸಬೇಕಾಗುತ್ತದೆ.

ಪ್ರಧಾನವಾಗಿ ದಲಿತರು ನಿಗದಿ ಮಾಡಿದ ದಿನದಂದು ದುರ್ಗಮ್ಮನಿಗೆ ಆಚರಣೆ ಮಾಡುವುದು ವಿಶಿಷ್ಟವೆನ್ನಬಹುದು. ಮರದ ಮೂರ್ತಿಗೆ ವಿವಿಧ ರೀತಿಯ ಹೂವುಗಳಿಂದ ಅಲಂಕಾರ ಮಾಡಿ, ಹೊಸ ಬಟ್ಟೆ ತೊಡಿಸಿ, ಕುಂಕುಮ ಇಟ್ಟು, ಮುಖವಾಡ ಇಟ್ಟು, ಕೆಂಪು ವಸ್ತ್ರದಿಂದ ಅಲಂಕಾರ ಮಾಡುತ್ತಾರೆ. ಮರದ ಮೂರ್ತಿಯಲ್ಲಿ ಮಾರಿಯಮ್ಮ ಮತ್ತು ದುರ್ಗಮ್ಮ ದೇವಿ ಇರುತ್ತಾಳೆಂಬ ಭಾವನೆಯಿಂದ ಅದಕ್ಕೆ ಭಯ ಭಕ್ತಿಯಿಂದ ಪೂಜೆ ಮಾಡುತ್ತಾರೆ.

ಮುತ್ತೈದೆಯರು ವಿವಿಧ ರೀತಿಯಲ್ಲಿ ಅಲಂಕಾರ ಮಾಡಿಕೊಂಡು ಅಂದು ದೇವಿ ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ. ಹರಕೆ ಹೊತ್ತ ಮಹಿಳೆಯರು ವಿವಿಧ ರೀತಿಯ ಭಕ್ಷ್ಯಗಳನ್ನು ತಯಾರಿಸಿ ದೇವಿಯ ಎದುರಲ್ಲಿ ಎಡೆಯಾಕುವುದು ಇದೆ. ಈ ಎಡೆಗೆ ಬಲಿಗಾಗಿ ತಂದಿದ್ದ ಕುರಿ, ಕೋಳಿಗಳನ್ನು ಬಲಿ ಕೊಟ್ಟು ಅದರ ರಕ್ತವನ್ನು ಎಡೆಗೆ ಹಾಕಿ ಹುಲುಸಾಗಿ ತಯಾರುಮಾಡುತ್ತಾರೆ. ಈ ಹುಲುಸನ್ನು ದೇವರ ಎದುರಲ್ಲಿ ಆಚರಣೆ ಮಾಡಿದ ನಂತರದಲ್ಲಿ ತಮ್ಮ ತಮ್ಮ ಗದ್ದೆ, ಜಾನುವಾರು ಕಟ್ಟಿಯಾಕುವ ಕೊಟ್ಟಿಗೆಗೆ, ಊರು ಗಡಿಗಳಿಗೆ ಚೆಲ್ಲುತ್ತಾರೆ. ಈ ಹುಲುಸನ್ನು ಚೆಲ್ಲುವುದರಿಂದ ದುರ್ಗಮ್ಮ ಮತ್ತು ಮಾರಮ್ಮ ತಮ್ಮನ್ನು, ಜಾನುವಾರುಗಳನ್ನು, ಹೊಲಗಳನ್ನು ಕಾಯುತ್ತಾಳೆಂಬ ನಂಬಿಕೆ ಅವರಲ್ಲಿ ಇದೆ. ಹರಕೆ ಹೊತ್ತವರು ತಮ್ಮ ತಮ್ಮ ಊರುಗಳಿಗೆ ಹುಲುಸನ್ನು ಮನೆಗಳಿಗೆ ಹೊಯ್ಯುತ್ತಾರೆ.

ಹೂವಿನ ಹಡಗಲಿ ತಾಲೂಕು

ಸಾಮಾಜಿಕ ಚೌಕಟ್ಟಿನೊಳಗೆ ಆಚರಣೆಗಳು ನಡೆಯುತ್ತವೆ. ಹೂವಿನ ಹಡಗಲಿ ತಾಲೂಕಿನಲ್ಲಿ ಹಲವಾರು ಗ್ರಾಮದೇವತೆಗಳ ಆಚರಣೆಗಳು ನಡೆಯುತ್ತವೆ. ಗುಳ್ಳವ್ವ, ದ್ಯಾಮವ್ವ, ಕಾಳಮ್ಮ, ಮರಿಯಮ್ಮ ಮುಂತಾದ ಹೆಸರುಗಳನ್ನು ಗಮನಿಸಬಹುದು. ದೇವತೆಗಳ ಆಚರಣೆಯಲ್ಲಿ ಒಂದು ರೀತಿಯ ಸಾಮೂಹಿಕ ಸಂಬಂಧಗಳನ್ನು ಗುರುತಿಸಬಹುದಾದರೂ, ಪ್ರೀತಿ ವಾತ್ಸಲ್ಯಗಳು ನಿರ್ಮಾಣವಾಗಿ ಸಮಾಜ ಉತ್ತಮ ಬೆಳವಣಿಗೆಗೆ ನಾಂದಿಯಾಗುವುದನ್ನು ಗುರುತಿಸಬಹುದು. ಪ್ರಧಾನ ದೇವತೆಯರು ಎಂದರೆ ಹೆಣ್ಣುದೇವತೆಯರು. ಇವರು ಜನ್ಮ ಕೊಡುವ ಮಾತೃವಾಗಿರು ವುದರಿಂದ ಹೆಣ್ಣು ದೇವತೆಯರನ್ನು ಪೂಜಿಸುವುದು ಮಾನವನ ನಂಬಿಕೆ. ಜಾತ್ರೆ ಸನ್ನಿವೇಶ ನೋಡಲು ಅದ್ಭುತವಾಗಿಯೂ ಕಂಡುಬರುತ್ತವೆ. ವಾರ್ಷಿಕವಾಗಿ ನಡೆಯುವ ಸಾರ್ವಜನಿಕ ಜಾತ್ರಾ ಮಹೋತ್ಸವಕ್ಕೆ ಅನೇಕ ಜಾತಿ ವರ್ಗದವರು ತಮ್ಮ ತಮ್ಮ ನಿರ್ದಿಷ್ಟ ಕೆಲಸಗಳನ್ನು ಮಾಡುತ್ತಾರೆ. ಸಿದ್ಧೇಶ್ವರಿ ಅವರ ಪ್ರಕಾರ "ಹಡಗಲಿ ತಾಲೂಕಿನ ಹಗರನೂರಿನಲ್ಲಿ ಯುಗಾದಿಯ ನಂತರ ಆಂಜನೇಯ ಸ್ವಾಮಿಯ ಜಾತ್ರೆ ನಡೆಯುತ್ತದೆ. ಈ ಸಮಯದಲ್ಲಿ ಹೊಳೆಯಿಂದ ಪೂಜಿಸಿ ತಂದ ಉತ್ಸವಮೂರ್ತಿಯೊಂದಿಗೆ ಭಕ್ತರು ಕೊಂಡ ಹಾಯ್ದು ದೇವಸ್ಥಾನ ಪ್ರವೇಶಿಸುತ್ತಾರೆ. ಇಲ್ಲಿ ಕೊಂಡಕ್ಕೆ ಹುಣಸೆ ಚಕ್ಕೆ ಮಾತ್ರ ಬಳಸುತ್ತಾರೆ. ಇದರಿಂದ ತಯಾರಾದ ಕೆಂಡದಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಾಗಿರುತ್ತದೆಂಬ ನಂಬಿಕೆಯಿದೆ. ಈ ಹಿನ್ನೆಲೆಯಲ್ಲಿ ಬಾಣಂತಿಯರಿಗೆ ಹೆಚ್ಚಾಗಿ ನರದೌರ್ಬಲ್ಯವಿರುವ ಪ್ರಯುಕ್ತ ಹುಣಸೆ ಚಕ್ಕೆಯ ಕೆಂಡದಿಂದ ಕಾವು ಕೊಡುವುದನ್ನು ನೆನಪಿಸಬಹುದು. ಆಂಜನೇಯಸ್ವಾಮಿಯ ಹೆಸರಿನಲ್ಲಿ ಭಕ್ತರಿಗೆ ಭುಜದ ಎಡ, ಬಲಕ್ಕೆ ಶಂಖ, ಚಕ್ರದ ಮುದ್ರೆ ಹಾಕುತ್ತಾರೆ. ಸಂಸಾರಿಗಳಾದ ಇವರನ್ನು ದಾಸದಾಸಿಯ ರೆಂದು ಕರೆಯುತ್ತಾರೆ. ಇವರು ದೈವದ ಪರಿಚಾರಕರಾಗಿ ಗುರುತಿಸಿಕೊಂಡಿರುವುದಲ್ಲದೇ ಸುಳ್ಳು ಹೇಳುವಂತಿಲ್ಲ. ತಪ್ಪು ಮಾಡುವಂತಿಲ್ಲ. ಇವರಿಗಿರುವ ವಿಧಿ ನಿಷೇಧಗಳು ದೈವೀಭಯದ

ನೆರಳಲ್ಲಿ ಸಮಾಜ ತಿದ್ದುವಿಕೆ ಕಾರ್ಯ ನಡೆಸುತ್ತವೆ.''[೩೩] ಮಾನವನಿಗೆ ಯಾವುದಾದರೂ ಭಯಂಕರವಾಗಿ ರೋಗ ರುಜಿನಗಳು ಬಂದಾಗ ದೇವರ ಹೆಸರಿನಲ್ಲಿ ಹರಕೆ ಹೊತ್ತುಕೊಳ್ಳುವುದು ಇದಕ್ಕೆ ಮೂಲ ಕಾರಣ ಎನ್ನಬಹುದು. ಮಾಮೂಲಾಗಿ ರೋಗಗಳು ಯಾವ ರೀತಿಯಲ್ಲಿ ಬರುತ್ತವೆ ಎಂದು ತಿಳಿದುಕೊಂಡು ಅವುಗಳನ್ನು ನಿರ್ಮೂಲನೆ ಮಾಡಿಕೊಳ್ಳಬೇಕಾಗುತ್ತದೆ. "ಹಿಂದೆ ಕಾಡು ಕಡಿದು ವ್ಯವಸಾಯಕ್ಕೆ ಭೂಮಿಯನ್ನು ಸಿದ್ಧಗೊಳಿಸಿಕೊಳ್ಳಲು ಕೊಂಡ ಹಾಯುವ ಪದ್ಧತಿ ಬಂದಿರಬೇಕು. ಇಂದು ನಿಸರ್ಗ ನಾಶದಿಂದ ಮರಗಿಡಗಳು ವಿರಳವಾಗಿದೆ. ಬದಲಾದ ಪರಿಸರದ ಕಾರಣದಿಂದ ಇಂಥ ಆಚರಣೆಗಳು ತಮ್ಮ ಅಸ್ತಿತ್ವ ಕಳೆದುಕೊಳ್ಳುವಂತಾಗಿದೆ. ಜನಪದ ಆಚರಣೆಗಳು ಕಾಲಮಾನಕ್ಕೆ ತಕ್ಕಂತೆ ಬದಲಾವಣೆಯಾಗಿ ಈಗ ಸಾಂಕೇತಿಕವಾಗಿ ಉಳಿದಿರುವುದನ್ನು ತಳ್ಳಿಹಾಕುವಂತಿಲ್ಲ. ಇವು ದೈವೀಭಯದ ಹಿನ್ನೆಲೆಯಲ್ಲಿ ನಡೆಯುವ ಹರಕೆ ರೂಪದ ಆಚರಣೆಗಳಾಗಿವೆ. ಇವನ್ನು ಸಮಾನ್ಯ ದಿನಗಳಲ್ಲಿ ಮಾಡಲು ಸಾಧ್ಯವಿಲ್ಲ. ಇಲ್ಲಿ ಹಲವಾರು ಕಟ್ಟುಪಾಡುಗಳಿದ್ದು, ಅತಿಮಾನುಷ ಕ್ರಿಯೆಯಾಗಿ ನೆರವೇರುವುದರಿಂದ ಪವಾಡಗಳೆಂದು ಕರೆಯುವುದುಂಟು. ಇವು ದೈವದ ಮಹತ್ವವನ್ನು ಜಗತ್ತಿಗೆ ಸಾರುವ ಪ್ರಭಾವಿ ಆಚರಣೆಗಳಾಗಿವೆ."[೩೪] ಆಚರಣೆಗಳ ಹಿನ್ನೆಲೆಯು ಯಾವ ರೀತಿ ಪ್ರಭಾವವನ್ನು ಪಡೆದುಕೊಳ್ಳುತ್ತದೆಂದು ವಿಮರ್ಶೆ ಮಾಡುವುದು ಕಷ್ಟದ ಕೆಲಸ. ಕೊಂಡ ಹಾಯುವ, ಕೆಂಡವನ್ನು ತುಳಿಯುವ ಪದ್ಧತಿಯನ್ನು ಅತಿಮಾನುಷ ಎಂದು ತಿಳಿದಾಗ ಪ್ರಾಣಿಬಲಿಯೂ ಒಂದು ಅತಿಮಾನುಷ ಎಂದು ತಿಳಿದುಕೊಳ್ಳಬೇಕಾಗುತ್ತದೆ.

ಮುಖ್ಯವಾಗಿ ಜೀವನಾವರ್ತನ ಆಚರಣೆಗಳನ್ನು ಜಿಲ್ಲೆಯಾದ್ಯಂತ ನಡೆಯುವ ವಿವಿಧ ರೀತಿಯಲ್ಲಿ ವಿಂಗಡಿಸಿ ಚರ್ಚೆ ಮಾಡಬಹುದು. ಪ್ರಾಣಿಸಂಬಂಧಿ, ಆಕಾಶಸಂಬಂಧಿ ಆಚರಣೆಗಳು, ನೆಲಸಂಬಂಧಿ ಆಚರಣೆಗಳು, ಜನಸಂಬಂಧಿ ಆಚರಣೆಗಳು, ಅಗ್ನಿಸಂಬಂಧಿ ಆಚರಣೆಗಳು, ಮುಂತಾದವುಗಳಾಗಿ ವಿಂಗಡಿಸಿಕೊಂಡು ವಿಶ್ಲೇಷಣೆ ಮಾಡುವುದು ಇದೆ. ಕೆಲವು ಸಂದರ್ಭಗಳಲ್ಲಿ ಮಾತ್ರ ಆಚರಣೆಗಳು ನಡೆಯುವುದು ಇದೆ. ಕೆಲವರು ಮಾತ್ರ ಕುಲದೈವಗಳಿಗೆ ಪ್ರಾಣಿಬಲಿ ನಡೆಸುತ್ತಾರೆ. ವರ್ಷದಲ್ಲಿ ಬಲಿ ನಡೆಯುವ ಸಂದರ್ಭಗಳೇ ವಿಶೇಷವಾಗಿ ಬೇರೆ ಬೇರೆ ಇರುತ್ತವೆ. ಯುಗಾದಿ ಸಂದರ್ಭಕ್ಕೆ ಮತ್ತು ಹರಕೆ ಹೊತ್ತ ಸಂದರ್ಭಗಳು ಇರುತ್ತವೆ. ಸಾರ್ವಜನಿಕ ಜಾತ್ರಾ ಹಬ್ಬ ಸಮಯಕ್ಕೆ ಸಾಂಕೇತಿಕ ಬಲಿಗಳು ನಡೆಯುತ್ತವೆ. ಬಲಿ ನೀಡುವುದು ಸಮೃದ್ಧಿಯ ಸಂಕೇತವೋ ಆಗಿರುತ್ತದೆ. ಪ್ರಧಾನವಾಗಿ ಮಾನವನಿಗೆ ಸಂಪತ್ತನ್ನು, ಸಮೃದ್ಧಿಯನ್ನು ಕರುಣಿಸುವುದೇ ಈ ಆಚರಣೆಗಳ ಮೂಲ ಉದ್ದೇಶಗೂ ಆಗಿರುತ್ತದೆ. ಲಂಬಾಣಿ, ಬೇಡ, ಬುಡುಬುಡಿಕೆ, ಮ್ಯಾಸಬೇಡರು, ಊರು ನಾಯಕರು ವಿವಿಧ ರೀತಿಯಲ್ಲಿ ಪೂಜೆಗಳನ್ನು ಮಾಡುತ್ತಾರೆ. ಪೂಜಾರಾಧನೆ ಆದ ನಂತರ ಪ್ರಾಣಿಬಲಿಗಳನ್ನು ದೇವತೆಗೆ ಅರ್ಪಿಸಿ ತೃಪ್ತಿಪಡಿಸುವ ಪದ್ಧತಿ ಪ್ರತಿ ತಾಂಡಾಗಳಲ್ಲಿ ನೋಡಬಹುದು.

ಬಲಿ ಆಚರಣೆಯ ಪ್ರಭಾವ

ಗ್ರಾಮಗಳಲ್ಲಿ ಔಷದೋಪಚಾರಗಳು ಇಲ್ಲದೇ ಇರುವ ಸಂದರ್ಭದಲ್ಲಿ ಸಾಂಕ್ರಾಮಿಕ ರೋಗಗಳು ಹರಡುತ್ತಿದ್ದವು. ಈ ಸಾಂಕ್ರಾಮಿಕ ರೋಗಗಳಾದ ಕಾಲರಾ, ಪ್ಲೇಗು, ಸಿಡುಬು, ದೊಡ್ಡರೋಗ, ಮಾರಿರೋಗ, ಮುಂತಾದ ರೋಗಗಳನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ ಪ್ರಾಣಿಬಲಿಗಳನ್ನು ಮಾಡುತ್ತಿದ್ದರು. ಹರಕೆಯ ಸಂದರ್ಭದಲ್ಲಿ ಪ್ರಾಣಿಬಲಿಗಳು ಹೆಚ್ಚಾಗಿ ನಡೆಯುತ್ತವೆ. ಏಕೆಂದರೆ ಮಾರ್ಚ್–ಏಪ್ರಿಲ್ ತಿಂಗಳಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿದ್ದು ಉಷ್ಣತೆ ತೀವ್ರತೆ ಜನರಿಗೆ ತೊಂದರೆಯನ್ನು ಕೊಡುತ್ತದೆ. ಅಂತಹ ಸಮಯದಲ್ಲಿ ಮಕ್ಕಳ ಮೈಮೇಲೆ ಚಿಕ್ಕ ಚಿಕ್ಕ ಗುಳ್ಳೆಗಳು ಬರುವುದು ಇದೆ. ಬಿಸಿಲಿನ ತಾಪಮಾನಕ್ಕೆ ಜನರಿಗೆ ಚರ್ಮದ ರೋಗಗಳು ಬರುವುದು ಇದೆ. ಬಿಸಿಲಿನ ಬೇಗೆಗೆ ಮನುಷ್ಯರು ತಂಪು ಮಾಡಿಕೊಳ್ಳಲು ತಂಪಾದ ಪಾನೀಯಗಳನ್ನು ಮತ್ತು ತಂಪಾದ ಪದಾರ್ಥಗಳನ್ನು ಸೇವಿಸುವುದು ರೂಢಿ. ಚಿಕ್ಕ ಚಿಕ್ಕ ಮಕ್ಕಳ ಮೈಮೆಲೆ 'ಅಮ್ಮ' ಹೆಸರಿನಲ್ಲಿ ರೋಗಗಳು ಬಂದಾಗ ಮಾರಮ್ಮನಿಗೆ ಕಾಳಮ್ಮ, ದುರ್ಗಮ್ಮನಿಗೆ ತಂಪು ತೋರುವುದು ಎಂಬ ಆಚರಣೆ ನಡೆಯುತ್ತದೆ. ಈ ತಂಪು ತೋರುವ ಉದ್ದೇಶ ವಿಶೇಷವಾಗಿ ಹರಕೆಗಳನ್ನು ಹೇಳಿಕೊಂಡು ಅನ್ನದ ಮುದ್ರೆಯನ್ನು ಮಾರಿಯಮ್ಮನಿಗೆ ಅರ್ಪಿಸುವುದೇ ಆಗಿದೆ. ಇದನ್ನು ಚರಗ ಎಂತಲೂ ಕರೆಯುತ್ತಾರೆ. ಮೈತುಂಬಾ ಗುರುತು ಸಿಗದ ರೀತಿಯಲ್ಲಿ 'ಅಮ್ಮ' ಬಂದಾಗ ಅಂತಹ ಮಕ್ಕಳನ್ನು ಬೇವಿನ ಎಲೆಗಳ ಮೇಲೆ ಮಲಗಿಸುತ್ತಿದ್ದರು. ಅಂತಹ ಸಂದರ್ಭದಲ್ಲಿ ಸಾಮೂಹಿಕವಾಗಿ ಊರಲ್ಲಿ ಅಮ್ಮ ಎಂಬ ಮಾರಿರೋಗಗಳು ಬಂದಿವೆ ಎಂದು ತಿಳಿದು ಮಾರಿಯಮ್ಮ, ಮಾರಮ್ಮ, ಊರಮ್ಮ ಕೋಪಿಸಿಕೊಂಡಿದ್ದಾಳೆಂದು ಸಾಮೂಹಿಕ ಪೂಜೆ ಮಾಡುತ್ತಾರೆ.

ಧಾರ್ಮಿಕ ಸ್ವರೂಪವನ್ನು ಗಮನಿಸುತ್ತಾ ಹೋದಾಗ ಸಾಕಷ್ಟು ಜನಪದರ ನಂಬಿಕೆ ಕೆಲಸ ಮಾಡಿರುವುದನ್ನು ಗಮನಿಸುತ್ತೇವೆ. ಗ್ರಾಮಸ್ಥರು ನಂಬಿರುವ ದೇವತೆಗಳಿಗೆ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಪ್ರಾಣಿಬಲಿ ನಡೆಸುತ್ತಾರೆ. ದೇವರನ್ನು ಸಂಪ್ರೀತಿಗೊಳಿಸುವುದರ ಜೊತೆಯಲ್ಲಿ ಕುಟುಂಬಗಳು ತೃಪ್ತಿಯಾಗುವುದನ್ನು ಗಮನಿಸಬಹುದು. ವಾರ್ಷಿಕವಾಗಿ ಬೇರೆ ಬೇರೆ ದಿನಗಳಲ್ಲಿ ಪ್ರಾಣಿಬಲಿ ಜರುಗುತ್ತವೆ. ಆದರೂ ಪ್ರಾಣಿಬಲಿ ಅರ್ಪಣೆಯೇ ಆಗಿರಬೇಕು ಎಂದು ನಿರ್ದಿಷ್ಟವಾದ ನಂಬಿಕೆಯಾಗಿದೆ. ಕೆಲವು ಕಡೆ ಬೂದುಗುಂಬಳಯನ್ನು ಕೂಡ ಬಲಿ ಎಂದೇ ಕರೆದು ಪೂಜೆ ಮಾಡುತ್ತಾರೆ. ಬಲಿಯನ್ನು ತೆಗೆದುಕೊಳ್ಳುವ ಉದ್ದೇಶ ಮಾನವನ ಒಳ್ಳೆಯ ಅಭಿವೃದ್ಧಿಗಾಗಿಯೇ ಎನ್ನುತ್ತಾರೆ. ಕೆಲವು ಕಡೆಯಲ್ಲಿ ಸ್ವಾರ್ಥಕ್ಕಾಗಿ ಇನ್ನೊಂದು ಜೀವವನ್ನು ಪಣಕ್ಕಿಡುವುದನ್ನು ಕಾಣಬಹುದು. ಮಾಂಸವನ್ನು ತಿನ್ನುವ ಪರಂಪರೆಯಲ್ಲಿ ಸಹ ಸ್ವಾರ್ಥ ಅಡಗಿರುವುದನ್ನು ಗಮನಿಸಬಹುದು. ದೊಡ್ಡ ದೊಡ್ಡ ಕುಟುಂಬದವರು, ಅಥವಾ ಅವಿಭಕ್ತ ಕುಟುಂಬದವರು ಮನೆಗಳಲ್ಲಿ ಜನಗಳ ಸಂಖ್ಯೆಯು ಹೆಚ್ಚಾಗಿರುವಾಗ ಗ್ರಾಮದೇವತೆಯ

ಹೆಸರಲ್ಲಿ ಕುರಿ, ಮೇಕೆ, ಟಗರುಗಳನ್ನು ಬಲಿ ಕೊಟ್ಟು ಹಬ್ಬದೂಟವನ್ನು ಮಾಡುವುದನ್ನು ಕಾಣಬಹುದು. ಪ್ರಾಪಂಚಿಕವಾಗಿ ನರಬಲಿ ಕೂಡ ತಮ್ಮ ಮತ್ತು ತಮ್ಮವ ಯೋಗಕ್ಷೇಮಕ್ಕಾಗಿಯೇ ನಡೆಯುತ್ತಿತ್ತು ಎಂದು ಗಮನಿಸಬಹುದು. ಆಧುನಿಕ ಕಾಲದಲ್ಲಿ ತಂತ್ರಜ್ಞಾನ, ವಿಜ್ಞಾನ, ವಿದ್ಯಾಭ್ಯಾಸ ಇದ್ದರೂ ಇಂದು ನಾವು ಎಷ್ಟೇ ಮುಂದುವರಿದರೂ ಕೂಡ ಇಂತಹ ಪ್ರಾಣಿಬಲಿಯಂತ ಕೃತ್ಯಗಳು ತಡೆಯಲು ಸಾಧ್ಯವಿಲ್ಲ.

ಮನುಷ್ಯನು ಸಾಂಕ್ರಾಮಿಕ ರೋಗ, ಕುಟುಂಬದ ವ್ಯಾಜ್ಯ, ಕ್ಷಾಮ, ಪರಿಸರ, ಅಪಘಾತಗಳು, ವೈಯಕ್ತಿಕ ರೋಗಗಳು ಮುಂತಾದ ಅನೇಕ ಕಾರಣಗಳಿಗಾಗಿ ಪ್ರಾಣಿಬಲಿಗಳನ್ನು ಮಾಡುತ್ತಾನೆ. ಪ್ರಾಣಿಬಲಿ ಆಚರಣೆ ನಡೆಯುವ ಸಂದರ್ಭದಲ್ಲಿ ಸಾಮೂಹಿಕ ಪ್ರಾರ್ಥನೆಯೇ ಮುಖ್ಯವೆನಿಸುತ್ತದೆ. ಹೊಸ ವಾಹನ, ಕಟ್ಟಡ, ಭಾವಿ, ದೊಡ್ಡ ದೊಡ್ಡ ಕಾಲುವೆ, ಸೃಷ್ಟಿಯಾದಾಗ ಪ್ರಾಣಿಬಲಿಯು ಜರುಗುತ್ತಿತ್ತು. ಪ್ರಾಚೀನ ಕಾಲದ ಸಂದರ್ಭಕ್ಕೆ ದೇವಸ್ಥಾನಗಳಲ್ಲಿ ಪ್ರಾಣಿಬಲಿಗಳು ವಿವಿಧ ರೂಪಗಳಲ್ಲಿ ಮಾಡುತ್ತಿದ್ದನ್ನು ಕಾಣಬಹುದು. ಪ್ರಾಣಿರೂಪವಾಗಿ ಹಂದಿ, ಕೋಣ, ಕೋಳಿ, ಕುರಿಗಳನ್ನು ಬಲಿಯಾಗಿ ನೀಡಿದರೆ ಬದಲೀ ರೂಪದಲ್ಲಿ ಸಸ್ಯ ಆಹಾರವಾದ ಕುಂಬಳಕಾಯಿ, ತೆಂಗಿನಕಾಯಿ, ಹೊಂಬಾಳೆ ಇತ್ಯಾದಿಗಳನ್ನು ಸಮರ್ಪಣೆ ಮಾಡುತ್ತಾರೆ. ರಕ್ತಸಹಿತವಾದ ಬಲಿ ಅರ್ಪಣೆಯೇ ದೇವತೆಗಳಿಗೆ ಪ್ರಧಾನ ಮತ್ತು ಪ್ರಾಮುಖ್ಯವೆಂತಲೂ ನಂಬುತ್ತಾರೆ.

ಭೂಮಿಸಂಬಂಧಿ ಆಚರಣೆಗಳು

ಬಳ್ಳಾರಿ ಜಿಲ್ಲೆಯಾದ್ಯಂತ ಪ್ರಮುಖವಾಗಿ ಭೂಮಿಗೆ ಸಂಬಂಧಿಸಿದಂತೆ ವಿವಿಧ ರೀತಿಯಲ್ಲಿ ಪೂಜೆಗಳನ್ನು ಮಾಡುವುದು ನೋಡುತ್ತೇವೆ. ಮ್ಯಾಸಬೇಡರು ಮ್ಯಾಸನಾಯಕರು, ಬುಡು ಬುಡುಕಿಯರು, ಗಾಣಿಗರು, ಗೌಡರು, ಲಂಬಾಣಿಗರು ವಾಸ ಮಾಡುವ ಪ್ರದೇಶಗಳಲ್ಲಿ ಈ ಆಚರಣೆಗಳನ್ನು ಗಮನಿಸುತ್ತೇವೆ. ಹಳೆಯ ಕಾಲದಲ್ಲಿ ಅಥವಾ ಗುಹೆಗಳಲ್ಲಿ ವಾಸ ಮಾಡುವ ಸಂದರ್ಭದಲ್ಲಿ ಬೇಟೆಯಾಡುವುದನ್ನು ಕಲಿತುಕೊಂಡ ಮಾನವ ತದನಂತರ ಕೃಷಿ ಮಾಡುವುದು ಪ್ರಾರಂಭವಾಗಿರಬೇಕು. ತದನಂತರ ಬೇಟೆಯಲ್ಲಿ ಪ್ರಾಣಿ ಮತ್ತು ಪಕ್ಷಿಗಳನ್ನು ಬೇಟೆಯಾಡಿ ಆಹಾರವಾಗಿ ತಂದು ಹಸಿ ಹಸಿಯಾಗಿ ತಿಂದು ತನ್ನ ಹಸಿವನ್ನು ನೀಗಿಸಿಕೊಳ್ಳುತ್ತಿದ್ದ ಎಂದು ಅನೇಕ ಮಾಹಿತಿಗಳು ಸಿಗುತ್ತವೆ. ತದನಂತರದಲ್ಲಿ ಭೂಮಿಯನ್ನು ಉಳುಮೆ ಮಾಡುವ ಪರಂಪರೆ ಬೆಳೆಸಿಕೊಂಡು ಬಂದಿರಬೇಕು. ಈ ಭೂಮಿಯಲ್ಲಿ ಫಲವತ್ತಾದ ಹಸಿರನ್ನು, ಹಣ್ಣು ಹಂಪಲವನ್ನು ಗಡ್ಡೆ ಗೆಣಸನ್ನು ನೋಡಿದ ಮಾನವ ಭೂಮಿಪೂಜೆ ಮಾಡುವುದು ಕಂಡುಕೊಂಡಿರಬೇಕು. ಹೆಣ್ಣು ಮತ್ತು ಭೂಮಿಯ ಅರ್ಥದಲ್ಲಿ ಭೂತಾಯಿಯ ಹೆಸರಿನಲ್ಲಿ ಭೂಮಿಗೆ ವಾರ್ಷಿಕವಾಗಿ ಆಚರಣೆ ಮಾಡುವುದು ನೋಡುತ್ತೇವೆ. ಪ್ರಧಾನವಾಗಿ ಹೊಲ, ಗದ್ದೆಗಳಿಗೆ ಒಳ್ಳೆಯ ಮಳೆ ಬೆಳೆ ಚೆನ್ನಾಗಿ ಬಂದು ಜೀವನ ಹಸನಾಗಬೇಕೆಂಬ ಉದ್ದೇಶದಿಂದ

ಭೂಮಿಗೆ ಪೂಜೆ ಮಾಡುವುದು ಗಮನಿಸಬೇಕಾಗುತ್ತದೆ. ಸಿದ್ಧೇಶ್ವರಿ ಅವರ ಪ್ರಕಾರ "ಬೇಟೆ ಸಂಸ್ಕೃತಿಯ ಹಂತದ ಬಳಿಕ ಮಾನವನ ಕೌಟುಂಬಿಕ ಜೀವನ ಒಂದೆಡೆ ನೆಲೆಗೊಂಡಿತು. ಕೃಷಿ ಆವಿಷ್ಕಾರದ ಪರಿಣಾಮದಿಂದ ಹೆಣ್ಣಿನ ಫಲವಂತಿಕೆಯ ಮತ್ತೊಂದು ರೂಪವಾಗಿ ಭೂಮಿ ಕಂಡಿತು. ಹೆಣ್ಣು ಹಾಗೂ ಭೂಮಿಯಲ್ಲಿಯ ಸಮಾನ ಗುಣಗಳನ್ನು ದೇವತೆಯ ರೂಪದಲ್ಲಿ ಪೂಜಿಸಲಾಯಿತು. ಮಾನವನ ಬದುಕಿಗೆ ಭೂಮಿ ಅತ್ಯಮೂಲ್ಯ ಮತ್ತು ಅನಿವಾರ್ಯ. ಹಾಗಾಗಿ ಮಾನವನ ಅಸ್ತಿತ್ವವೇ ಭೂಮಿ. ಅದು ಅವನ ಪಾಲಿಗೆ ಪ್ರತ್ಯಕ್ಷ ದೈವ, ಪ್ರಯೋಗ ಕ್ಷೇತ್ರ. ತನ್ನ ಉಪಜೀವನಕ್ಕಾಗಿ ಆಹಾರ ಪೂರೈಕೆಗಾಗಿ ಉಳುವ ಕ್ರಮ ಪ್ರಾರಂಭಗೊಂಡಿತು."[೩೫] ಈ ರೀತಿಯಲ್ಲಿ ಬಳ್ಳಾರಿ ಜಿಲ್ಲೆಯಾದ್ಯಂತ ಮಾಮೂಲಾಗಿ ಕೃಷಿ ಮಾಡುವುದು ಇದೆ. ಮುಂಗಾರು ಮಳೆ ಬಂದಾಗ ಭೂಮಿಯನ್ನು ಉಳುಮೆ ಮಾಡುವುದು ಕೃಷಿ ಚಟುವಟಿಕೆಗಳಲ್ಲಿ ರೈತಾಪಿ ವರ್ಗದವರು ತೊಡಗುತ್ತಾರೆ. ಅಂದು ನೇಗಿಲುಗಳಿಗೆ ಪೂಜೆ ಮಾಡುವ ಶಾಸ್ತ್ರ ಮಾಡುತ್ತಾರೆ. ದನಗಳನ್ನು ತೊಳೆದು ನೇಗಿಲುಗಳನ್ನು ಹೂಡುತ್ತಾರೆ. ಹೊಲದಲ್ಲಿ ಸೀಮಿತವಾದ ಸ್ಥಳದಲ್ಲಿ ಅರಿಶಿನ, ಕುಂಕುಮ ಹೂವು ಮುಂತಾದ ಪದಾರ್ಥಗಳಿಂದ ಪೂಜೆ ಮಾಡುತ್ತಾರೆ. ಪ್ರಧಾನವಾಗಿ ದನಗಳಿಗೆ ಅಲಂಕಾರ ಮಾಡುವುದು ಇದೆ. ಇದೇ ಪ್ರಕಾರವಾಗಿ ಹೊಲಗಳಿಂದ ಫಸಲನ್ನು ಮನೆಗಳಿಗೆ ತರುವಾಗ ಸಂಕ್ರಾಂತಿ ಹಬ್ಬದ ರೀತಿಯಲ್ಲಿ ಪೂಜೆ ಮಾಡುತ್ತಾರೆ. ಸಿದ್ಧೇಶ್ವರಿ ಅವರ ಪ್ರಕಾರ "ತನ್ನೆಲ್ಲಾ ಸುಖ-ದುಃಖ, ತಾಳ್ಮೆ, ಸಹನೆಗಳಿಗೆ ಆಶ್ರಯ ತಾಣವಾಯಿತು. ಕಾಲಕ್ರಮೇಣ ಫಲ ನೀಡುವ ಭೂಮಿ ಮಾತೃಸ್ವರೂಪ ಪಡೆಯಿತು. ಭೂಮಿ ಬಂಜೆಯಾದರೆ ಜೀವರಾಶಿಯೇ ನಿರ್ನಾಮಗೊಳ್ಳುತ್ತದೆಂಬ ಭಯ ಆರಾಧನೆ, ಆಚರಣೆಗೆ ನಾಂದಿಯಾಗಿರುವುದು ಕಂಡುಬರುತ್ತದೆ."[೩೬] ಮಾನವನಿಗೆ ಅಗೋಚರ ಮತ್ತು ಅಗಮ್ಯ ಮುಖ್ಯವಾದವುಗಳು. ಅಗೋಚರವಾದ ಶಕ್ತಿಗೆ ಮಾರುಹೋದ ಮನುಷ್ಯ ತನ್ನ ಯೋಗಕ್ಷೇಮವನ್ನು ಕಾಪಾಡಿಕೊಂಡು ಬರುವ ಶಕ್ತಿದೇವತೆಗೆ ಹಲವಾರು ವಿಧಾನಗಳನ್ನು ನಡೆದುಕೊಂಡಿರಬೇಕು. ಇದರಲ್ಲಿ ಭೂಮಿ ಪ್ರಜನನ ಶಕ್ತಿಯನ್ನು ಪಡೆದುಕೊಂಡಿರುವುದರಿಂದ ಅದು ಬಂಜೆಯಾಗಬಾರದೆಂಬ ನಿಯಮಾನುಸಾರ ಭೂಮಿಯನ್ನು ಪೂಜೆ ಮಾಡಿಕೊಂಡು ಬಂದಿರುವುದು ಗುರುತಿಸುತ್ತೇವೆ. ಪ್ರಧಾನವಾಗಿ ಗ್ರಾಮದೇವತೆಗಳ ಆರಾಧನೆಯ ನಂತರ ಚರಗ ಚೆಲ್ಲುವುದು ಇದರ ಉದ್ದೇಶದಿಂದಲೇ ಎನ್ನಬಹುದು. ಭೂಮಿಯ ಫಸಲಿಗೆ ಯಾವುದೇ ರೀತಿಯ ಕೀಟ ಬಾಧೆಗಳು ಬರಬಾರದೆಂಬ ನಂಬಿಕೆಯ ಹಿನ್ನೆಲೆಯಲ್ಲಿ ರಾಗಿ, ಭತ್ತ, ಜೋಳ, ಆಲೂಗಡ್ಡೆ, ಬಾಳೇಹಣ್ಣು, ಮೆಣಸಿನಕಾಯಿ ಮುಂತಾದ ಫಸಲುಗಳಿಗೆ ದೇವಾಲಯ ದಿಂದ ಚರಗವನ್ನು ತಂದು ತಮ್ಮ ತಮ್ಮ ಹೊಲಗಳಿಗೆ ಚೆಲ್ಲುತ್ತಾರೆ. ಎಂ.ಜಿ.ಈಶ್ವರಪ್ಪನವರ ಪ್ರಕಾರ "ಹರಪ್ಪಾ-ಮಹೆಂಜೋದಾರೋ ಸಂಸ್ಕೃತಿಯ ಕ್ರಿ.ಶ. ಮುನ್ನೂರು ವರ್ಷಗಳ ಹಿಂದೆ ಗಿಡಮರಗಳ ಹುಟ್ಟಿಗೆ ಕಾರಣವಾದ ಭೂಮಿಯನ್ನು ಮಾತೃದೇವತೆ, ಅನ್ನಪೂರ್ಣ, ಶಾಕಾಂಬರಿ ಎಂಬ

ಹೆಸರುಗಳಿಂದ ಕರೆದಿದ್ದಾರೆ."[೩೭] ಹಳೆಯ ಕಾಲದ ನಾಗರಿಕತೆಗಳು ಸಹ ಭೂಮಿಯಲ್ಲಿ ಕೃಷಿಯನ್ನು ಮಾಡಿ ಫಲವತ್ತತೆಯನ್ನು ಪಡೆದುಕೊಳ್ಳುತ್ತಿದ್ದರು. ಎಂದು ತಿಳಿಯಬಹುದು. ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಜನರು ಕೃಷಿ ಮಾಡುವ ಸಮಯಕ್ಕೆ ಬೇವಿನ ಮರ ಇರುವ ಸ್ಥಳದಲ್ಲಿ ಪೂಜೆ ಮಾಡುತ್ತಾರೆ. ತಮ್ಮ ತಮ್ಮ ಹೊಲಗಳಲ್ಲಿ ಅಥವಾ ಬೇರೆ ಬೇರೆಯವರ ಹೊಲಗಳಲ್ಲಿ ಬೇವಿನ ಮರ ಇದ್ದರೆ ಅದಕ್ಕೆ ಹೊಸ ಬಳೆ, ಕುಂಕುಮ, ಸೀರೆ, ಕುಪ್ಪಸ ಇಟ್ಟು ಚೆಂಡುಮಲ್ಲಿಗೆ, ಕಾಕಡ, ಸೇವಂತಿಗೆ, ಮಲ್ಲಿಗೆ, ಕನಕಾಂಬರ ಹೂಗಳಿಂದ ಅಲಂಕಾರ ಪೂಜೆ ಮಾಡಲಾಗುತ್ತದೆ. ತದ ನಂತರ ಕೃಷಿಯಲ್ಲಿ ಭಿತ್ತನೆ ಕಾರ್ಯ ಪ್ರಾರಂಭ ಮಾಡುವುದು ಇದೆ. ಬೇವಿನ ಮರದಲ್ಲಿ ದೇವಿಯ ಶಕ್ತಿ ಇದೆ ಎಂದು ತಮ್ಮ ತಮ್ಮ ಹೊಲ ಗದ್ದೆ, ಫಸಲನ್ನು ಕಾಪಾಡಿಕೊಂಡು ಬರುತ್ತಾಳೆ ಎಂಬ ಭಾವನೆ ಇದರಲ್ಲಿ ಇರುವುದನ್ನು ಗುರುತಿಸಬಹುದು. ಇಲಿಗಳು, ಕೀಟಗಳು, ಹಂದಿಗಳು, ಪಕ್ಷಿಗಳು, ಮಂಗಗಳು ಮುಂತಾದ ಪ್ರಾಣಿ ಪಕ್ಷಿಗಳಿಂದ ರಾಗಿ, ಭತ್ತ, ಜೋಳ, ಮುಂತಾದ ಫಸಲುಗಳಿಗೆ ತೊಂದರೆಗಳು ಬರಬಾರದೆಂಬ ಹಿನ್ನೆಲೆಯಲ್ಲಿ ಬೇವಿನ ಮರಕ್ಕೆ ಪೂಜೆ ಮಾಡುತ್ತಾರೆ.

ಈ ಆಚರಣೆಯು ಪೌರಾಣಿಕವಾಗಿರುವ ಶಿವನ ಹೆಂಡತಿಯಾದ ಪಾರ್ವತಿಯ ಮಹತ್ವವನ್ನು ತಿಳಿಸುತ್ತದೆ. ಈ ಆಚರಣೆಯಲ್ಲಿ ಪಾರ್ವತಿಯನ್ನು ಗಣಪನ ತಾಯಿ ಎಂತಲೂ ಕರೆಯುತ್ತಾರೆ. ಪಾರ್ವತಿಯೇ ಇಲ್ಲಿ ಪ್ರಧಾನವಾಗಿ ಫಲವಂತಿಕೆಯ ಪ್ರತೀಕವಾಗಿರುವ ಭೂದೇವಿಯ ಪ್ರಭಾವವನ್ನು ತಿಳಿಸುತ್ತಾರೆ. ಗೌರಿಯನ್ನು ಮೂರ್ತಿ ಮಾಡಿ ನದಿಯಲ್ಲಿ ವಿಸರ್ಜಿಸುವ ಪದ್ಧತಿಯಿದೆ. ಸಿದ್ಧೇಶ್ವರಿಯವರ ಪ್ರಕಾರ "ಗೌರಿಯನ್ನು ಕೆರೆಯಲ್ಲೋ, ನದಿಯಲ್ಲೋ ವಿಸರ್ಜಿಸಿ ಅಲ್ಲಿಂದ ಹಿಡಿಮಣ್ಣನ್ನು ತಂದು, ತೋಟ ಗದ್ದೆಗಳಿಗೆ ಎರಚುತ್ತಾರೆ. ಕುಂಭ, ಕಲಶ, ಧಾನ್ಯ ಶೇಖರಿಸಿಡುವ ಖನಿಜಗಳು ಗರ್ಭಸೂಚಕಗಳಾಗಿ ಪೂಜಿಸಲ್ಪಡುತ್ತವೆ. ಗೌರಿಯ ಮೈಯ ಮಣ್ಣಿನಿಂದ ತಯಾರಾದ ಗಣಪನನ್ನು ಮಣ್ಣಿನ ಮಗನೆಂದು ಬೀಜರಕ್ಷಕ ದೈವವೆಂದು ಕರೆಯಲಾಗುತ್ತದೆ. ಖನಿಜ, ವಾಡೆಗಳು ಕಾಲಕ್ರಮೇಣ ಗಣಪನ ಆಕಾರಕ್ಕೆ ರೂಪಾಂತರ ಗೊಂಡಿರಬೇಕು. ಸಗಣಿಯೂ ಸಹ ಜೀವಪೋಷಕವಾದ ಮಣ್ಣಿನ ಮತ್ತೊಂದು ರೂಪವಾಗಿದೆ. ಅದು ಗೊಬ್ಬರವಾಗಿ ಕೃಷಿಕರಿಂದ ಅಗ್ರಪಂಕ್ತಿಯಲ್ಲಿ ಆರಾಧಿಸಲ್ಪಡುತ್ತದೆ. ಮಣ್ಣಿನಿಂದ ಮಾಡಿದ ಬೆನಕ, ಕೃಷಿಸಂಸ್ಕೃತಿಯಲ್ಲಿ ವಿಘ್ನವಿನಾಶಕನಾಗಿ ಪ್ರಥಮವಾಗಿ ಪೂಜಿಸಲ್ಪಡುತ್ತಾನೆ. ಭೂಮಿಯು ತಾಯಿಯಾಗಿ, ದೈವವಾಗಿ ಸಂಪತ್ತನ್ನು ಕೊಡುವ ಸಸ್ಯವರ್ಗ ಹಾಗೂ ಪ್ರಾಣಿವರ್ಗಕ್ಕೂ ಆಶ್ರಯದಾತಳು, ರಕ್ಷಕ ತತ್ವದ ಸಂಕೇತ ಆದರೆ ಕೆಲವೊಂದು ಸಂದರ್ಭಗಳಲ್ಲಿ ಬಿರುಗಾಳಿ, ನೆರೆ ವಾತಾವರಣದ ವೈಪರೀತ್ಯಗಳಿಂದಾಗುವ ಭೂಕಂಪಗಳ ಮೂಲಕ ಮನುಕುಲವನ್ನೇ ನುಂಗುವಳು."[೩೮] ಭೂಮಿಯ ವಿವರಗಳನ್ನು ಚರ್ಚೆ ಮಾಡುತ್ತಾರೆ. ಭೂಮಿತಾಯಿಯು ಮಾನವನಿಗೆ ಎಷ್ಟು ಮಹತ್ವವನ್ನು ಕೊಡುತ್ತದೆ ಎಂದು ಗುರುತಿಸಬಹುದು. ಧಾರ್ಮಿಕ

ವಾತಾವರಣವೇ ಇಲ್ಲಿ ಪ್ರಧಾನವಾಗಿ ನೆಲೆಯಾಗುತ್ತದೆ. ಭೂಮಿ ಅರಿಶಿನ, ಕುಂಕುಮಗಳು, ಕರ್ಪೂರ, ತೆಂಗಿನಕಾಯಿ, ನಿಂಬೆಹಣ್ಣು, ಇವು ಸಮೃದ್ಧಿಯನ್ನು ಸಂಕೇತಿಸುತ್ತವೆ. ಪ್ರಧಾನವಾಗಿ ಪ್ರಜನನ ಶಕ್ತಿಯನ್ನು ಪಡೆದುಕೊಂಡಿರುವ ಈ ಭೂದೇವಿಯನ್ನು ಎಷ್ಟು ಪೂಜೆ ಮಾಡಿದರೂ ಸಾಲದು ಎಂದು ಮಾಹಿತಿದಾರು ತಿಳಿಸುತ್ತಾರೆ. ಪ್ರದಾನವಾಗಿ ಕೃಷಿಯಲ್ಲಿ ನಿರತರಾಗಿದ್ದಾಗ ಕೈ, ಕಾಲು, ಮೈಗೆ ಯಾವುದಾದರೂ ಗಾಯವಾದಾಗ ಮಣ್ಣನ್ನು ಗಾಯಕ್ಕೆ ಹಾಕುತ್ತಾರೆ. ಜನಪದರು ಇದನ್ನೇ ಔಷಧವೆಂತಲೂ ಕರೆಯುತ್ತಾರೆ. ಗರ್ಭಿಣಿ ಸ್ತ್ರೀಯು ಹುತ್ತದ ಮಣ್ಣನ್ನು ತಿನ್ನುವ ಪದ್ಧತಿಯೂ ಇದೆ. ಹುತ್ತದ ಮಣ್ಣನ್ನು ತಿನ್ನುವುದರಿಂದ ಆರೋಗ್ಯ ಚೆನ್ನಾಗಿರುತ್ತದೆ ಎಂದು ಜನಪದರ ನಂಬಿಕೆಯಾಗಿದೆ. ಹುತ್ತದ ನಾಗರಹಾವು ಇರುವುದೆಂದು, ನಾಗರಹಾವು ಹುತ್ತದ ಮೇಲೆ ಸಂಚರಿಸಿರುತ್ತದೆ ಎಂದು ಜನಪದರು ಭಾವಿಸುತ್ತಾರೆ. ಈ ಮಣ್ಣನ್ನು ಸ್ವಲ್ಪ ಪ್ರಮಾಣದಲ್ಲಿ ಸೇವಿಸುವುದರಿಂದ ಚರ್ಮರೋಗಗಳು ಬರುವುದಿಲ್ಲ ಎಂದು ನಂಬುತ್ತಾರೆ. ಈ ಹಿನ್ನೆಲೆಯಲ್ಲಿ ಭೂಮಿ ಮತ್ತು ತಮ್ಮ ತಮ್ಮ ಹೊಲ ಗದ್ದೆಗಳಿಗೆ ವಿಶೇಷ ಪೂಜಾ ಕಾರ್ಯಗಳನ್ನು ಮಾಡುವುದು ಬಳ್ಳಾರಿ ಜಿಲ್ಲೆಯಾದ್ಯಂತ ನೋಡುತ್ತೇವೆ. "ಇತರ ಮಣ್ಣುಗಳಿಗಿಂತ ಹುತ್ತದ ಮಣ್ಣು ಭಿನ್ನ ಸ್ವರೂಪ ಪಡೆದಿದೆ. ಆಚರಣೆಯ ಮೂಲಕ ಹಾಲು, ತುಪ್ಪ, ಮೊಸರನ್ನು ಹುತ್ತಕ್ಕೆ ಎರೆಯುವುದು, ರೋಗನಿವಾರಕ ಗುಣ ಹೊಂದಿದೆ. ಆರೋಗ್ಯಕರವಾದ ಅಂಶ ಹುತ್ತದ ಮಣ್ಣಿನಲ್ಲಿರುತ್ತದೆ."[೫] ಇಲ್ಲಿ ಮುಖ್ಯವೆನಿಸುವುದು ಹುತ್ತದ ಮಣ್ಣು ನುಣುಪಾಗಿರುತ್ತದೆ. ಯಾವುದೇ ಕಡ್ಡಿಗಳಿರುವುದಿಲ್ಲ ಗಟ್ಟಿ ಮಣ್ಣು ಇರುವುದಿಲ್ಲ. ನಾಲಿಗೆಯ ಮೇಲೆ ಇರಿಸಿಕೊಂಡರೆ ಕರಗಿಹೋಗುತ್ತದೆ. ಅಂತಹ ಮಣ್ಣನ್ನು ತಿನ್ನುವ ಪದ್ಧತಿ ಇದೆ.

ಮಾರೆಮ್ಮ, ಕಾಳಮ್ಮ, ದುರುಗಮ್ಮ, ಗುಳ್ಳಮ್ಮ, ದ್ಯಾಮವ್ವ, ಮುಂತಾದ ದೇವತೆಗಳ ಆಚರಣೆಗಳು ಬಹಳ ಮಹತ್ವವೂ ಆಗಿರುವುದು ಭೂಮಿಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಮಾನವ ಭೂಮಿ ಮತ್ತು ಆಕಾಶದ ಸ್ವರೂಪದಲ್ಲಿ ಹೆಣ್ಣು-ಗಂಡು ಎಂದು ತಿಳಿಯುವ ಪದ್ಧತಿ ಹೆಣ್ಣು ಮತ್ತು ಗಂಡು 'ಕೂಡುವ' ಪದ್ಧತಿಯೆಂದು ಭಾವಿಸುತ್ತಾರೆ. ಮಳೆ ಮತ್ತು ಭೂಮಿ ಹೆಣ್ಣು ಮತ್ತು ಗಂಡು ಸ್ವರೂಪಗಳನ್ನು ಆರೋಪಿಸಿಕೊಂಡು ಪೂಜಿಸುವುದು ರೂಢಿಯಲ್ಲಿದೆ. ಇದಕ್ಕೆ ಜೋಕುಮಾರಸ್ವಾಮಿಯ ಆಚರಣೆಯೂ ಒಂದಾಗಿದೆ. "ಜನಪದರ ಪ್ರಕಾರ ಮಳೆರಾಜ ಗಂಡಾದರೆ ಭೂತಾಯಿ ಹೆಣ್ಣು ಮಾತೃದೇವತೆ. ಸಪ್ತ ಮಾತೃಕೆಯರೆಂದು ಪೂಜಿಸಲ್ಪಡುವ ದೈವಗಳು, ಭೂಮಾತೆಯ ಪ್ರತಿರೂಪಗಳು. ಕೃಷಿಕರಲ್ಲಿ ಋತುಮಾನಕ್ಕೆ ಅನುಗುಣವಾಗಿ ಭೂಮಿಯನ್ನು ಉಳುವ, ಬಿತ್ತುವ, ಕಟಾವು ಮಾಡುವ, ರಾಶಿ ಮಾಡುವ ಹಿಗೆ ಒಂದೊಂದು ಕ್ರಿಯೆಗೂ ದೇವ ದೇವತೆಗಳ ಕಲ್ಪನೆಯನ್ನು ನೀಡಲಾಗಿದೆ. ಬಲಿ ನೀಡಿಕೆ ಹಾಗೂ ಚರಗ ಚೆಲ್ಲುವ ಸಂಪ್ರದಾಯಗಳ ಹಿನ್ನೆಲೆ ಭೂಮಾತೆಯಲ್ಲಿರುವ ಜೀವರಕ್ಷಕವಾಗಿರುವ ಶಕ್ತಿ ಎಂದಿಗೂ ಕುಗ್ಗದಂತೆ ವೃದ್ಧಿಸಲಿ ಎಂಬ ಆಶಯವಿದೆ. ಹುಟ್ಟಿಗೆ, ಬದುಕಿಗೆ, ಸಾವಿಗೆ

ಆಶ್ರಯತಾಣವಾದ ಮಣ್ಣಿಗೆ ಅರಗಿಸಿಕೊಳ್ಳುವ ಮತ್ತು ಪರಿವರ್ತಿಸುವ ಗುಣವಿದೆ. ಅದು ಮಾನವನ ಹಸಿವನ್ನು ಹಿಂಗಿಸುವ ಶಕ್ತಿ ಹೊಂದಿದೆ. ಕೃಷಿ ಆಚರಣೆಗಳೆಲ್ಲ ಭೂಮಿಯ ಜೊತೆಗಿನ ಸಂಪರ್ಕದಿಂದ ಮಾನವ ಪಡೆದುಕೊಂಡ ಅನುಭವಗಳಾಗಿವೆ. ಅವು ಆಚರಣೆಯ ಮುಖೇನ ಮುಂದಿನ ತಲೆಮಾರುಗಳಿಗೆ ವರ್ಗಾವಣೆಗೊಳ್ಳುತ್ತಿವೆ. ಯಾವುದೇ ಗುಡಿ ಗೋಪುರಗಳಲ್ಲಿನ ವೃಕ್ಷದ ಕೆಳಭಾಗದಲ್ಲಿರುವ ಕಲ್ಲು, ಮಣ್ಣು, ಮಡಿಕೆಗಳೇ ಭೂಮಾತೆಯ ಪ್ರತಿರೂಪವಾಗಿ ಇಂದಿಗೂ ಪೂಜಿಸಲ್ಪಡುತ್ತಿವೆ. ಇಂತಹ ಆಚರಣೆಗಳು ಒಂದು ಕಾಲದಲ್ಲಿ ಅತ್ಯಂತ ಉಪಯುಕ್ತ ತಂತ್ರ ಜ್ಞಾನಗಳಾಗಿರಲು ಸಾಧ್ಯವಿದೆ."[೪೦] ಇದರ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಭೂದೇವಿಯ ಸ್ವರೂಪದಲ್ಲಿ ಪೂಜೆ ಮಾಡಿ ತದನಂತರ ರಕ್ತತರ್ಪಣ ಮಾಡುವುದು ಪೂರ್ವ ಕಾಲದಿಂದಲೂ ಬಳಕೆಯಲ್ಲಿ. ಪ್ರಧಾನವಾಗಿ ನರಮನುಷ್ಯನ ರಕ್ತವೇ ಭೂದೇವಿಗೆ ಮತ್ತು ಸೂರ್ಯದೇವನಿಗೆ ಶ್ರೇಷ್ಠ ಎಂತಲೂ ಭಾವಿಸುತ್ತಾರೆ. ಕೆಲವು ಕಡೆಗಳಲ್ಲಿ ಕುಂಭಗಳ ಆಚರಣೆಯನ್ನು ಮಾಡುತ್ತಾರೆ. ಕುಂಭಗಳಲ್ಲಿ ನವದಾನ್ಯಗಳನ್ನು ಹಾಕಿ ಮೊಳಕೆ ಬರಿಸುವುದು ಸಮೃದ್ಧಿಯ ಸಂಕೇತವೂ ಆಗಿದೆ. "ಗುಡಿಯನ್ನು ಮೂರು ಸುತ್ತು ಹಾಕಿ ದೇವಿಯ ಮುಂದೆ ಕುಂಭಗಳನ್ನು ಪ್ರತಿಷ್ಠಾಪಿಸುತ್ತಾರೆ. ಮೇಕೆಮರಿಯನ್ನು ಬಲಿ ನೀಡುವುದರ ಮೂಲಕ ಕುಂಭಗಳಲ್ಲಿಯ ಪ್ರಸಾದವನ್ನು ರಾಶಿ ಮಾಡಿ ಪೂಜೆ ಸಲ್ಲಿಸುತ್ತಾರೆ. ರಕ್ತತರ್ಪಣದ ಪ್ರಸಾದವನ್ನು ಊರಿನ ಗಡಿಭಾಗದ ಸುತ್ತ ಗ್ರಾಮ ರಕ್ಷಕವೆಂದು ಚರಗ ಚೆಲ್ಲುತ್ತಾರೆ. ಭೂಮಿ ಗಟ್ಟಿಯಾಗಲು, ಫಲ ಸಮೃದ್ಧಿಯಾಗಲು ಪ್ರಾಣಿಬಲಿಯ ಮೂಲಕ ಭೂಮಿಗೆ ರಕ್ತತರ್ಪಣ ನೀಡುವುದು ಹಿಂದಿನಿಂದ ನಡೆದುಬಂದ ಸಂಪ್ರದಾಯ. ಇದರಿಂದ ಊರಿಗೆ ಶಾಂತಿಯಾಗುವುದೆಂಬ ಆಶಯ ಸ್ಥಳೀಯರದ್ದಾಗಿದೆ. ಅಲ್ಲದೇ ರಕ್ತ ಪ್ರೋಕ್ಷಣೆ ಮಾಡಿದ ಅನ್ನದ ಆಗುಳುಗಳನ್ನು ಆ ಗ್ರಾಮದ ಫಲಸಮೃದ್ಧಿಗಾಗಿ ಪೈರಿನ ಸುತ್ತ ಉಗ್ಗುತ್ತಾರೆ. ಇಲ್ಲಿ ಕ್ಷುದ್ರಶಕ್ತಿಗಳು, ಕೃಷಿ ರೋಗಗಳು ಮುಂತಾದವುಗಳನ್ನು ನಿರ್ಬಂಧಿಸುವ ಆಶಯವಿದೆ."[೪೧] ಇದನ್ನೇ ಕೆಲವು ಕಡೆಗಳಲ್ಲಿ ಪ್ರಮುಖವಾಗಿಯೂ ಭಾವಿಸುತ್ತಾರೆ.

ಪ್ರಧಾನವಾಗಿ ಗ್ರಾಮದೈವಗಳ ಆರಾಧನೆ, ಆಚರಣೆ, ಸಂಪ್ರದಾಯಗಳನ್ನು ಸುಮಾರು ಶತಮಾನಗಳಿಂದ ಗಮನಿಸಿದರೂ ಅವುಗಳ ಆಶಯ ಒಂದೇ ರೀತಿಯಲ್ಲಿರುವುದನ್ನು ಗಮನಿಸುತ್ತೇವೆ. ಇಲ್ಲಿ ಮಾನವನ ಯೋಗಕ್ಷೇಮ ಪ್ರಮುಖ ಕಾರಣವಾಗಿರುವುದನ್ನು ಅವಲೋಕಿಸಬಹುದು. "ಜನಪದ ಆಲೋಚನೆಯಿಂದ ಹೊರಹೊಮ್ಮಿದ ಆಚರಣಾ ವ್ಯವಸ್ಥೆಗಳು ಮಾನವ ಮತ್ತು ಪ್ರಕೃತಿಯ ನಡುವಿನ ಸಂಬಂಧಗಳನ್ನು ಗಟ್ಟಿಗೊಳಿಸಿವೆ. ಅಲ್ಲದೇ ನಿಸರ್ಗದ ಮೇಲಿನ ಸಂಪೂರ್ಣ ನಿಯಂತ್ರಣದ ಭ್ರಮೆಯನ್ನು ಮಾನವನಲ್ಲಿ ಉಂಟುಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ವಿಭಿನ್ನ ರೀತಿಯ ಕ್ರಿಯಾಚರಣೆಗಳು ರೂಪುಗೊಂಡಿವೆ. ಅವು ಸಂಸ್ಕಾರ ಹೊಂದಿ ಉಳಿದು, ಬೆಳೆದು ಆಚರಣೆಗಳಾಗಿವೆ. ಅವು ಒಮ್ಮೊಮ್ಮೆ ಸಾಮಾಜಿಕ, ಧಾರ್ಮಿಕ,

ಪೌರಾಣಿಕ, ಚಾರಿತ್ರಿಕ, ವೈಚಾರಿಕ ಘಟನೆಗಳಿಂದ ಪ್ರಭಾವಿತವಾಗಿರುವುದುಂಟು. ಸಂಸ್ಕೃತಿಯನ್ನು ಬಿಂಬಿಸಲು ವಿವೇಕ ಮತ್ತು ನೈತಿಕತೆಯಿಂದ ಬದುಕು ನಡೆಸಲು, ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು, ಪ್ರತಿನಿತ್ಯದ ಕೆಲಸ ಕಾರ್ಯಗಳಲ್ಲಿ ಹುರುಪು, ಚೈತನ್ಯ ತುಂಬಲು ಆಚರಣೆಗಳು ಅವಶ್ಯಕ. ತಾನು ನಂಬಿದ ಅಗೋಚರ ಶಕ್ತಿಯ ಪ್ರೀತಿಗೆ ಪಾತ್ರರಾಗಲು ಆಚರಣೆಗಳು ನಡೆಯುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಆಚರಣೆಗಳು ನಡೆದುಬಂದರೂ ಅವುಗಳಲ್ಲಿ ವೈಜ್ಞಾನಿಕ ಅಂಶಗಳು, ತತ್ವ ಸಿದ್ಧಾಂತಗಳು, ಗರ್ಭೀಕರಿಸಿಕೊಂಡಿರುವುದನ್ನು ತಳ್ಳಿಹಾಕುವಂತಿಲ್ಲ. ಆಚರಣೆಗಳು ಸಮೃದ್ಧ ಬಾಳಿನ ಸೂತ್ರಗಳಿದ್ದಂತೆ. ಅವುಗಳಲ್ಲಿ ಆರೋಗ್ಯ, ಸ್ವಚ್ಛತೆ, ಸಹಬಾಳ್ವೆ, ಹಂಚಿ ಉಣ್ಣುವ ನೀತಿಗಳಿವೆ. ಸಂಬಂಧಗಳನ್ನು ಬೆಸೆಯುವ ಬೆಸುಗೆಯಿದೆ. ಚರ್ಚಿಸುವ ಗುಣ, ಸಹನೆ, ತರ್ಕ, ವಿನೋದ, ಜಾಣ್ಮೆ ರಕ್ಷಣಾತ್ಮಕ ತತ್ವಗಳಿವೆ. ಜನರ ಬದುಕಿನ ಭಾಗವಾದ ಆಚರಣೆಗಳು ಶಾಸನದಂತೆ ಎಚ್ಚರಿಸಿ ಮಾರ್ಗದರ್ಶನ ನೀಡುತ್ತವೆ."[೨] ವಾರ್ಷಿಕವಾಗಿ ನಡೆಯುವ ಜಾತ್ರಾ ಮತ್ತು ಹಬ್ಬಗಳು ಇಂತಹ ಮಾಹಿತಿಗಳನ್ನು ನೋಡಬಹುದಾದರೂ ಮಾನವನ ಆಗು ಹೋಗುಗಳನ್ನು ಸದಾ ಅಗೋಚರ ಶಕ್ತಿಗಳು ಗಮನಿಸುತ್ತಿರುತ್ತವೆ ಎಂದು ಭಾವಿಸುತ್ತಾರೆ. ಪ್ರಧಾನವಾಗಿ ಹೊಸ ಹೊಸ ವಸ್ತುಗಳನ್ನು ತೆಗೆದುಕೊಳ್ಳುವಾಗ ಆ ವಸ್ತುವು ಯಾವುದೇ ರೀತಿಯಲ್ಲಿ ಹಾನಿಯಾಗದ ರೀತಿಯಲ್ಲಿ ತನಗೆ ಉಪಯೋಗವಾದರೆ ಅದು ದೈವ ಇಚ್ಛೆ ಎಂದು ಭಾವಿಸುತ್ತಾರೆ. ಇಲ್ಲ ಅಂದರೆ ಆ ವಸ್ತುಗಳು ಕೆಲವೇ ದಿನಗಳಲ್ಲಿ ಕೆಟ್ಟು ಹೋದರೆ ಅದು ಕಾಲ ಸರಿಯಿಲ್ಲ. ಅದು ದೈವದ ಕಾಟದಿಂದ ಕೆಟ್ಟುಹೋಗಿದೆ ಎಂತಲೂ ಭಾವಿಸುತ್ತಾರೆ. ಉದಾ: ಹೊಸ ಬೈಕ್ ಮೋಟರು ವಾಹನ ತೆಗೆದುಕೊಂಡಾಗ ಅದನ್ನು ಸರಿಯಾದ ರೀತಿಯಲ್ಲಿ ಓಡಿಸಿಕೊಂಡು ಹೋದರೆ ವಾಹನ ಸವಾರನಿಗೆ ತೊಂದರೆ ಇಲ್ಲ. ಹೋಗುವ ದಾರಿ ಮಧ್ಯದಲ್ಲಿ ಅಪಘಾತವಾದರೆ ಅದು ತಾವು ನಂಬಿರುವ ದೈವಗಳ ಕಾಟ ಎಂದು ತಿಳಿದು ಅದಕ್ಕೆ ಪೂಜೆಗಳನ್ನು ಮಾಡುವುದು ಇದೆ. ಮತ್ತು ಆ ಹೊಸ ಬೈಕ್‌ಗೆ ಪ್ರಾಣಿಬಲಿಯನ್ನು ಕೊಡುವುದು ಕಂಡುಬರುತ್ತದೆ. ದಸರಾ ಸಮಯದಲ್ಲಿ ವಿಶೇಷವಾಗಿ ಆಯುಧ ಪೂಜೆಯನ್ನು ಮಾಡುವುದು ನೋಡಬಹುದು. ಇಲ್ಲಿ ಸಾಂದರ್ಭಿಕ ಚಿತ್ರಣ ನಮಗೆ ಮುಖ್ಯವೆನಿಸುತ್ತದೆ. ಮಾನವನ ಉನ್ನತಿಯಲ್ಲಿ ದೇವರ ಮತ್ತು ಅಗೋಚರ ಕಲ್ಪನೆಗಳು ಎಷ್ಟು ಮಹತ್ವವನ್ನು ಪಡೆದುಕೊಂಡಿವೆ ಎನ್ನುವುದನ್ನು ಅವಲೋಕಿಸುತ್ತೇವೆ. ಹೊಸ ನಮೂನೆಯ ವಸ್ತುವಿನ ಮಹತ್ವಕ್ಕೆ ಮುಗ್ಧ ಪ್ರಾಣಿಗಳಾದ ಕೋಳಿ, ಕುರಿಗಳು ಬಲಿಯಾಗುವುದು ವಿಪರ್ಯಾಸವೆನ್ನಬಹುದು. ಬೈಕ್ ವಾಹನವನ್ನು ಓಡಿಸುವಾಗ ದಾರಿ ಮಧ್ಯದಲ್ಲಿ ಗ್ರಾಮದೇವತೆಯಾದ ಮಾರಮ್ಮ, ಕಾಳಮ್ಮ, ದುರ್ಗಮ್ಮ, ಗುಡಿಗಳಿದ್ದಾಗ ಈ ಗುಡಿಗಳ ಅಕ್ಕ ಪಕ್ಕದಲ್ಲಿ ವಾಹನ ಬಿದ್ದು ಅಪಘಾತವಾದರೆ ಮಾರಿ ಮುನಿಸಿಕೊಂಡು ಬಲಿ ತೆಗೆದುಕೊಂಡಿದೆ ಎಂದು ಭಾವಿಸುತ್ತಾರೆ. ಎಷ್ಟೋ ವಾಹನಗಳು ದೇವಿ ಸ್ಥಳದಲ್ಲಿ ಅಪಘಾತಗಳು ಸಂಭವಿಸಿ

ಪ್ರಾಣ ಕಳೆದುಕೊಂಡತಹ ಪ್ರಸಂಗಗಳು ಇವೆ. ಅದಕ್ಕೆ ದಾರಿ ಮಧ್ಯದಲ್ಲಿರುವ ಮಾರಮ್ಮ ಊರಮ್ಮ, ಕಾಳಮ್ಮ, ದುರುಗಮ್ಮ ದೇವರನ್ನು ಶಾಂತಿಪಡಿಸಲು ಹಂದಿ, ಕುರಿ, ಕೋಳಿಯನ್ನು ಬಲಿಕೊಡುವುದು ಇದೆ. ಪಟ್ಟದ ಕೋಣ ಬಲಿಯಾಗಬೇಕಾದರೆ ಇದಕ್ಕೆ ಕಟ್ಟು ಕತೆ ಕಲ್ಪಿಸಿದ್ದಾರೆ. ಜನಪದರ ಪ್ರಕಾರ ಮಾರಮ್ಮ ಗಂಡನಾದ ಕೋಣನನ್ನು ವಾರ್ಷಿಕವಾಗಿ ಕಡಿಯಲಾಗುತ್ತದೆ. ಮಾರಮ್ಮನ ಕತೆಯಲ್ಲಿ ಎರಡು ಜಾತಿಗಳ ಜಂಜಾಟ, ಮೋಸ, ವಂಚನೆ, ವರ್ಣ ಸಂಕರಣಗಳು ಇದೆ. ಆದುದರಿಂದ ಮಾರಮ್ಮನಿಗೆ ತಂಪು ತೋರುವುದು, ಕೋಣನ ರೂಪದಲ್ಲಿ ಬಲಿಮಾಡುವುದು ಇದೆ. ಶಿರಸಿ ಮಾರಮ್ಮ ಗುಡಿಯಲ್ಲಿ ಗರ್ಭಗುಡಿಯ ಪಕ್ಕದಲ್ಲಿ ಕೋಣವನ್ನು ಕಟ್ಟಿರುವುದು ಇಂದಿಗೂ ನಾವು ನೋಡಬಹುದು. ಸಿದ್ಧೇಶ್ವರಿ ಅವರ ಪ್ರಕಾರ "ಅಮ್ಮನ ಜಾತ್ರೆಗಳಲ್ಲಿ ತಮ್ಮ ನಾಯಕನ ಬಲಿಯನ್ನು ಪ್ರತಿಭಟಿಸಲು ಅಮ್ಮನನ್ನು ಅಶ್ಲೀಲ ಶಬ್ದಗಳಿಂದ ಬೈಯುವ ಪದ್ಧತಿ ಬಳ್ಳಾರಿ ಜಿಲ್ಲೆಯಲ್ಲಿದೆ. ಹೆಣ್ಣು ದೇವರ ಜಾತ್ರೆಗಳಲ್ಲಿ ಅಮ್ಮನನ್ನು ಬಯ್ಯಲು ಸೊನ್ನ ಗ್ರಾಮದಿಂದ ಆಸಾದಿಗರನ್ನು ಕರೆತರುತ್ತಾರೆ. ಅವರು ಜನಪದ ಹಾಡುಗಳ ಮೂಲಕ ದೈವವನ್ನು ಬಯ್ಯುತ್ತಾರೆ. ಹೀಗೆ ಜಾತ್ರೆಗಳಲ್ಲಿ ದೇವರನ್ನು ಬಯ್ಯುವುದು ಹೊಗಳುವುದು ಸಹ ಒಂದು ಆಚರಣೆಯಾಗಿದೆ. ತಾರಾನಗರದ ವೀರಗಾಸೆಯವರು ಕಣಿ ಹೇಳುವ ಮೂಲಕ ದೇವರನ್ನು ಹೊಗಳುತ್ತಾರೆ. ಆಚರಣೆಗಳು ಧಾರ್ಮಿಕ ಚೌಕಟ್ಟಿನಲ್ಲಿ ನಡೆಯುತ್ತಿರುತ್ತವೆ. ಇದು ತುಳಿಯಲ್ಪಟ್ಟ ಸಮುದಾಯದವರಿಂದ ಆಚರಣೆಗಳ ಮೂಲಕ ಶೋಷಕ ಸಮಾಜಕ್ಕೆ ತಮ್ಮ ಪ್ರತಿಭಟನೆಯನ್ನು ಸಲ್ಲಿಸುವ ರೀತಿಯೂ ಹೌದು. ಬಲಿ ಆಚರಣೆಯಲ್ಲಿ ಪ್ರಧಾನವಾದುದು ಕೋಣ ಬಲಿ. ಇತ್ತೀಚೆಗೆ ಕೋಣ ಬಲಿಯ ಬದಲು ಕುರಿಬಲಿಯನ್ನು ನೀಡುವ ಪದ್ಧತಿ ಹೆಚ್ಚಾಗುತ್ತಿದೆ, ಯಮಧರ್ಮರಾಯನ ವಾಹನವಾದ ಕೋಣ ತಳಸಮುದಾಯ ದೇವತೆಗಳಿಗೆ ಬಲಿಯಾಗುತ್ತಿದೆ ಎಂಬುದು ಮೇಲುವರ್ಗದವರ ಪುರಾಣ ಮೂಲಗಳು ಹುಟ್ಟಿಸಿದ ಕಥೆಯಾಗಿದೆ. ಕೋಣ ಬಲಿ ತಳವರ್ಗವನ್ನು ಹಿಂಸಿಸಿ ಸೇಡು ತಿರಿಸಿಕೊಳ್ಳಲು ನಡೆಸಿದ ಹುನ್ನಾರ ಎಂಬುದು ತಳವರ್ಗದ ಜನರ ಮನೋಭಾವ."[೪೬] ಈಗಾಗಲೇ ಪ್ರಸ್ತಾಪ ಮಾಡಿದ ರೀತಿಯಲ್ಲಿ ಕೋಣ ಮುಗ್ಧ ಪ್ರಾಣಿ ಅಷ್ಟೆ ಅದನ್ನು ಕೊಲ್ಲುವುದು, ತಿನ್ನುವುದು, ಹಿಂಸೆ ಮಾಡುವುದು, ಅಗೋಚರವಾದ ಶಕ್ತಿಗಳಿಗೆ ಬಲಿಯಾಗಿಸುವುದು, ಕೋಣಕ್ಕೆ ಪುರಾಣ ಕಟ್ಟುಕತೆಗಳನ್ನು ಆರೋಪಿಸುವುದು, ಕೆಳವರ್ಗ ಮತ್ತು ಮೇಲುವರ್ಗ ಎಂದು ಎರಡು ಜಾತಿಗಳ ಜಂಜಾಟಗಳು ಅದಕ್ಕೆ ಆರೋಪಿಸುವುದು ಎಷ್ಟರ ಮಟ್ಟಿಗೆ ಸರಿ ಎಂದು ಸಮಾಜ ಅವಲೋಕಿಸುವ ಭಾಗವಾಗಿದೆ. ಪ್ರಧಾನವಾಗಿ ಪ್ರಾಣಿಯನ್ನು ಪ್ರಾಣಿಯಾಗಿಯೇ ನೋಡಬೇಕಾಗುತ್ತದೆ.

ವಿಶೇಷವಾಗಿ ಬಳ್ಳಾರಿ ಜಿಲ್ಲೆಯಾದ್ಯಂತ ಗ್ರಾಮದೇವತೆಗಳ ಪೂಜೆಗಳು ನಡೆಯುತ್ತವೆ. ವಾರ್ಷಿಕವಾಗಿ ಹಬ್ಬ ಜಾತ್ರೆ, ಉತ್ಸವಗಳು ನಡೆಯುವುದು ಕಂಡುಬರುತ್ತದೆ. ಪ್ರಾದೇಶಿಕವಾಗಿ ಗ್ರಾಮದೈವಗಳ ಉತ್ಸವಗಳು ಬಹಳ ವಿಜೃಂಭಣೆಯಿಂದ ನಡೆಯುವುದು ಕ್ಷೇತ್ರಕಾರ್ಯದಿಂದ

ಗಮನಿಸಲಾಗಿದೆ. ಬುಡಕಟ್ಟು ಸಮುದಾಯದವರು ನೆಲೆಯಾಗಿರುವ ಪ್ರದೇಶಗಳನ್ನು ಗಮನಿಸಿಕೊಂಡು ಪ್ರಾಣಿಬಲಿಯ ಆಚರಣೆಯನ್ನು ಗುರುತಿಸಲಾಗಿದೆ. ಜಿಲ್ಲೆಗೆ ಸಂಬಂಧಿಸಿದ ೭ ತಾಲೂಕುಗಳಲ್ಲಿ ಪ್ರಾಣಿಬಲಿಯ ಆಚರಣೆಗಳು ನಡೆಯುತ್ತವೆ.

ವರ್ಷದ ಕೊನೆಯಲ್ಲಿ ನಡೆಯುವ ಗ್ರಾಮದೇವಿ ಮಾರಮ್ಮನ ಜಾತ್ರಾ ವಿವರಗಳು

ಕೂಡ್ಲಿಗಿ ತಾಲೂಕಿನಲ್ಲಿ ನಡೆಯುವ ಗ್ರಾಮದೇವತೆಯ ಆರಾಧನಾ ವಿವರಗಳನ್ನು ಇಲ್ಲಿ ಈ ಕೆಳಗಿನಂತೆ ವಿವರಿಸಲಾಗಿದೆ.

ಮಾರಮ್ಮನನ್ನು ಕುರಿತು ಪುರಾಣಗಳು

ಕರ್ನಾಟಕದ ಎಲ್ಲೆಡೆಯಲ್ಲಿ ಪ್ರಚಲಿತವಾಗಿರುವ ಗ್ರಾಮದೇವತೆಯ ಕಥೆಯ ಮೂಲ ಆಶಯ ಒಂದೇ ಆದರೂ ಅದರ ಒಳವಿವರಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿರುವುದನ್ನು ಕಾಣುತ್ತೇವೆ. ಆಸಾದಿಗಳು ಗ್ರಾಮದೇವತೆಯ ಹಬ್ಬದಲ್ಲಿ ಮಾರಮ್ಮನ ಕಥೆಯನ್ನು ವಿಸ್ತಾರವಾಗಿ ಹೇಳುತ್ತಾರೆ. ಉರುಮೆ ವಾದ್ಯದೊಂದಿಗೆ ಅವರು ಹಾಡುವ ಹಾಡಿನ ಮೂಲಕವೂ ಸಹ ತಿಳಿಯಬಹುದು. ಆಸಾದಿಗಳು ಮಾರಮ್ಮನ ಮಕ್ಕಳಂತೆ ಮಾರಮ್ಮನಿಗೆ ಕೆಟ್ಟ ಮಾತುಗಳಿಂದ ಬಯ್ಯುತ್ತಾರೆ. ಅವರು ಏನೇ ಬೈದರೂ ಮಾರಮ್ಮನಿಗೆ ಇಷ್ಟವಂತೆ ಎಂದು ಪುರಾಣಗಳ ಮೂಲಕ ತಿಳಿಯಬಹುದು. ಗೆಜ್ಜಲು ರಾಜನ ಪಟ್ಟಣದಲ್ಲಿ ಕದಿರಪ್ಪ–ಕದಿರಮ್ಮ ಎಂಬ ದಂಪತಿಗಳು ಅವರ ಮಗನ ಹೆಸರೂ ಕದಿರಪ್ಪ. ಇವರು ಮಾದಿಗ ಜನಾಂಗಕ್ಕೆ ಸೇರಿದವರು. ತಂದೆ–ತಾಯಿಗಳು ಹುಡುಗನನ್ನು ಓದಲು ಕಳುಹಿಸಿದಾಗ ಜಾತಿಯ ಕಾರಣದಿಂದ ಇವನನ್ನು ಹೊರಗೆ ಕೂರಿಸುತ್ತಾರೆ. ಇದರಿಂದ ಬೇಸರಗೊಂಡ ಕದಿರಪ್ಪ ಶಾಲೆಗೆ ಹೋಗದೆ ನಾನಾ ಸ್ಥಳಗಳಲ್ಲಿ ಅಲೆದು ಮನೆಗೆ ಬರುತ್ತಾನೆ. ಇದನ್ನು ತಿಳಿದ ಅವನ ತಾಯಿ ಅವನನ್ನು ಹೊಡೆಯುತ್ತಾಳೆ. ಇದರಿಂದ ಬೇಸರಗೊಂಡ ಕದಿರಪ್ಪನು ಕಾಡಿಗೆ ಹೋಗುತ್ತಾನೆ. ಜಾತಿಯಲ್ಲಿ ಬ್ರಾಹ್ಮಣಳಾದ ಮಾರಮ್ಮ ವಿವಾಹ ಪೂರ್ವದಲ್ಲೇ ಋತುಮತಿಯಾದಳು. ಆಗಿನ ಸಂಪ್ರದಾಯ ದಂತೆ ಬಾಲಗೌರಿಯನ್ನು ಕಣ್ಣು ಕಟ್ಟಿ ಕಾಡಿಗೆ ಬಿಟ್ಟುಬಂದರು. ಕಾಡಿಗೆ ಬಂದ ಮಾದಿಗರ ಕದಿರಪ್ಪನು ಬಾಲಗೌರಿಯನ್ನು ಆಕಸ್ಮಿಕವಾಗಿ ಭೇಟಿಯಾಗುತ್ತಾನೆ. ಅವಳನ್ನು ನೋಡಿ ತಾನೂ ಬ್ರಾಹ್ಮಣನೆಂದು ನನ್ನ ಹೆಸರು ವೆಂಕಂಭಟ್ಟ ಎಂದು ಸುಳ್ಳು ಹೇಳಿ ಮದುವೆಯಾಗುತ್ತಾನೆ. ಅವರಿಗೆ ಐದು ಮಂದಿ ಮಕ್ಕಳಾಗುತ್ತಾರೆ. ಇವರು ಆಸಾದಿಗಳಂತೆ ಈ ಮಕ್ಕಳಿಗೆ ವಿದ್ಯೆ ಕಲಿಸಲೆಂದು ಬ್ರಾಹ್ಮಣ ಉಪಾಧ್ಯಾಯರನ್ನು ಕಳುಹಿಸುತ್ತಾನೆ. ಗುರುಗಳು ಕಲಿಸಿದ್ದನ್ನು ಹುಡುಗರು ಕಲಿಯದೆ ಚಪ್ಪಲಿಯ ಅಟ್ಟೆ, ಬಾರ್ಕೋಲು, ಮಿಣಿ, ಬಾಣ್ಮೆ ಬರೆಯುತ್ತಾನೆ. ಗುರುಗಳು ಆಶ್ಚರ್ಯಪಡುತ್ತಾರೆ. ಹೊಡೆದು ಬಡಿದು ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಇತ್ತ ಕದಿರಪ್ಪನ ತಾಯಿ ಕದಿರಪ್ಪನನ್ನು ಹುಡುಕುತ್ತಾ ಬರುತ್ತಾಳೆ. ಕದಿರಪ್ಪನು ಬ್ರಾಹ್ಮಣರ

ಮನೆಯಲ್ಲಿರುವುದು ಗೊತ್ತಾಗುತ್ತದೆ. ಮಗನನ್ನು ಗುರುತಿಸುತ್ತಾಳೆ. ಆಗ ಕದಿರಪ್ಪ ತಾಯಿಗೆ ಹೊಸಬಟ್ಟೆ ತೊಡಿಸಿ, ತಲೆ ಬೋಳಿಸಿ ಮೂಗಿಯಂತಿರ ಬೇಕೆಂದು ಹೇಳಿ ತನ್ನ ಮನೆಗೆ ಕರೆದುಕೊಂಡು ಬರುತ್ತಾನೆ. ಅತ್ತೆಯನ್ನು ಬಾಲಗೌರಿಯು ಆನಂದದಿಂದ ಸತ್ಕರಿಸುತ್ತಾಳೆ. ಊಟ ಮಾಡುವಾಗ ಮಗನು ಊಟ ಹೇಗಿದೆ ಎಂದು ಕೇಳಿದಾಗ ತಾಯಿಗೆ ಇರುಸು ಮುರುಸಾಗಿ ಮಗ ಹೇಳಿದ ವಿಷಯ ಮರೆತು. ಮಗನನ್ನು ಕುರಿತು ನನ್ನ ಮಗನೆ ನಾಲಿಗೆ ಕಾಲುಗೆರೆಯ ರುಚಿಯಾಕೆ ಬಂದಿತು ಮಗನೆ 'ಇದ್ಯಾಕಲೇ ನನ್ಮಗನೆ ಕೆದರ ತುಪ್ಪದ ಎಂಜಲಿಗೋಸ್ಕರವಾಗಿ ಈ ಬ್ರಾಹ್ಮಣರ ಮನೆ ಒಳಗೆ ಎಂಜಲು ತಿಂದ್ಕುಂಡು ಬಿದ್ಕಂಡಿದ್ದಿಯಿಲ್ಲಿ' ಎಂದಳು. ಈ ಮಾತನ್ನು ಕೇಳಿಸಿಕೊಂಡ ಸತ್ಯಶ್ರೀ ಬಾಲಗೌರಿಗೆ ತನ್ನ ಗಂಡನ ಜಾತಿ ಯಾವುದೆಂದು ಗೊತ್ತಾಯಿತು. ತನ್ನ ಮನೆಗೆ ಬೆಂಕಿ ಇಟ್ಟಳು ಎಂದು ಕೋಪಿಸಿಕೊಂಡು ತನ್ನ ತಂದೆಯ ಹತ್ತಿರ ಹೋಗಿ ನಾಯಿಮುಟ್ಟಿದ ಮಡಕೆಯನ್ನು ಏನು ಮಾಡಬೇಕೆಂದು ಕೇಳುವಳು. ತಂದೆ ಅದನ್ನು ಬೆಂಕಿಗೆ ಹಾಕಬೇಕೆಂದು ಹೇಳುವನು. ತಾನಿದ್ದ ಮನೆಗೆ ಬೆಂಕಿ ಹಚ್ಚಿಕೊಂಡು ಸಾಯುವಳು. ನಂತರ ಅವಳ ಆತ್ಮ ಊರಿನಲ್ಲಿ ಮೈ ತುಂಬಿ ತನ್ನ ಹಬ್ಬ ಮಾಡಬೇಕೆಂದು, ಹಬ್ಬದಲ್ಲಿ ತನ್ನ ಗಂಡನ ಶಿರಚ್ಛೇದನ ಮಾಡಬೇಕೆಂದು ಹೇಳುವಳು. ಅಂದರೆ "ಮಾರಿಯಾಗಿ ಬಂದು ಕೋಣನಾದ ನಿನ್ನನ್ನು ಬಲಿ ತಗೆದುಕೊಳ್ಳುವೆ. ಕೋಣದ ಕಾಲಿನ ರಚಿ ಬಯಸಿದ ನಿನಗೆ ನಿನ್ನ ಕಾಲನ್ನೇ ಬಾಯಲ್ಲಿಡಲಿ, ನನ್ನ ಕರುಳು ಉರಿಸಿದಂತೆ ನಿನ್ನ ಕರುಳು ಉರಿಸಲಿ, ಬಾಂದ ರವಿ ಅನ್ನ ಎಲ್ಲರಿಗೂ ಹಂಚಲಿ, ಮಾದಿಗರು ಘಟೆಯ ಹೆಂಡ ಕುಡಿದು ಹೊಡೆದಾಡಿ ಸಾಯಲಿ ನಿನ್ನ ಶಿರ ಕಡಿದು ಖಂಡ ಕಿತ್ತು, ದೀಪ ಹಚ್ಚಿಕೊಂಡು ಮೆರೆಯದಿದ್ರೆ ನಾನು ಮಾರೀನೆ ಅಲ್ಲ" ಎಂದು ಶಾಪಕೊಡುತ್ತಾಳೆ(ಎಸ್.ಎಸ್. ಹಿರೆಮಠ ಜಾತ್ರೆಗಳು ಪು.ಸಂ. ೭೮). ಕೋಣನ ವಿಚಾರವಾಗಿ ಡಾ.ಸಿದ್ಧಲಿಂಗಯ್ಯನವರು ಗ್ರಾಮದೇವತೆಗಳು ಪು.ಸಂ. ೯೭ರಲ್ಲಿ ಚರ್ಚೆ ಮಾಡುತ್ತಾರೆ.

ಕೋಣವನ್ನು ಮೆರವಣಿಗೆ ಮಾಡುವುದು, ಅದನ್ನು ಕಡಿದು ಅದರ ಬಲಗಾಲನ್ನು ಬಾಯಲ್ಲಿಟ್ಟು, ಅದರ ಕೊಬ್ಬಿನಿಂದ ದೀಪ ಉರಿಸುವುದು ಕೋಣನ ಬಲಿ ಇರುವ ಎಲ್ಲೆಡೆಯೂ ಮಾಡುವ ಸಾಮಾನ್ಯ ವಿಧಿಯಾಗಿದೆ. ಕೋಣನ ಬಲಿ ಕೊಡದೆ ಪಟ್ಟದ ಕುರಿಯನ್ನು ಬಲಿ ಕೊಟ್ಟಾಗಲೂ ಅದೇ ರೀತಿಯಾಗಿ ಮಾಡುತ್ತಾರೆ. ಈ ಕ್ರಿಯಾವಿಧಿಗಳು ಗ್ರಾಮದೇವತೆಯ ಪುರಾಣವನ್ನು ಅಭಿನಯಿಸಿ ತೋರಿಸುತ್ತವೆ. ಏಕೆಂದರೆ ಗ್ರಾಮದೇವತೆಯ ಕಥೆಯಲ್ಲಿ ವರ್ಣ ಸಂಕರಕ್ಕೆ ತುತ್ತಾದ ಬ್ರಾಹ್ಮಣ ಕನ್ಯೆ ತನ್ನ ಅಸ್ಪೃಶ್ಯ ಗಂಡನಿಗೆ "ನೀನು ಯಾವ ಜಾತಿಯವನಾಗಲೀ, ನಾನ್ಯಾವ ಜಾತಿಯವಳಾಗಲೀ, ನಮ್ಮ ಬಾಳಿಗೆ ಅನ್ಯೋನ್ಯವಾಗಿ ಬಾಳಿಕೊಂಡು ಹೋಗುತ್ತ ಇದ್ದೋ, ನಿಮ್ಮ ತಾಯಿ ಕದರಮ್ಮನವರು ಬಂದು ನಮ್ಮ ಕುಲಗೋತ್ರಗಳನ್ನು ಹೊರಗೆಡವಿದ್ದಾಳೆ.

ನಾನು ಗೆಜ್ಜಲು ರಾಜನ ಪಟ್ಟಣದಲ್ಲಿ ಗ್ರಾಮದೇವತೆಯಾಗಿ ಉತ್ಪನ್ನವಾಗ್ತೀನಿ ನೀನು ಕೋಣವೇ ಗೌಡನ ಸರಳೆಮ್ಮ ಗರ್ಭದಲ್ಲಿ ಕೋಣವಾಗಿ ಉತ್ಪತ್ತಿಯಾಗು, ನೀನು ಮೊದಲು ಸೀಮೆಯಿಂದ ಬಂದು ಲಗ್ನವಾಗಿ ನಿನ್ನ ಬಲಗೈ ನನ್ನೆದೆ ಮುಟ್ಟಿದ್ದರಿಂದ ನಿನ್ನ ಬಲಗಾಲು ಕೊಯ್ದು ನಿನ್ನ ಬಾಯಿಗೆ ಕಚ್ಚಿಸಲಿ, ನಿನ್ನ ನೆಣ ಹೆಚ್ಚಾಗಿ ಬಂದು ನನ್ನನ್ನು ಲಗ್ನವಾದ್ದರಿಂದ ನಿನ್ನ ನೆಣವನ್ನು ತೆಗೆದು ನಿನ್ನ ತಲೆಯ ಮೇಲಿಟ್ಟು ದೇವಿಗೆ ಬೆಳಗಿಸಲಿ, ನಿನ್ನ ರಕ್ತ ಮಾಂಸಗಳು ಹೆಚ್ಚಾಗಿ ನನ್ನ ಲಗ್ನವಾದ ವಿಚಾರದಿಂದ ನಿನ್ನ ರೈತವನ್ನು ತೆಗೆದು ಚರಗ ಚೆಲ್ಲಲಿ ಎಂದು ನಮ್ಮಮ್ಮನ ತೀರ್ಮಾನ ಎಂದು ಹೇಳುತ್ತಾಳೆ.

ಕೋಣನ ಬಲಿಯನ್ನು ಕುರಿತಂತೆ ಹೆನ್ರಿ ವೈಟ್‌ಹೆಡ್ ಅವರು ಈ ರೀತಿಯಾಗಿ ಹೇಳುತ್ತಾರೆ. ಕೋಣವನ್ನು ಬಲಿ ಕೊಟ್ಟು ಅದರ ಬಾಯಿಗೆ ಬಲಗಾಲನ್ನು ಇಡುವ ಉದ್ದೇಶದ ಹಿನ್ನೆಲೆಯನ್ನು ವಿವರಿಸುತ್ತಾರೆ. ಅಂದರೆ ಪ್ರಾಣಿಗೆ ಬಲಿ ಕೊಡುವಾಗ ಅದರ ಬಲಗಾಲನ್ನು ಬಾಯಿಗಿಡುವುದು ಆ ಪ್ರಾಣಿಗಳ ಪಾಪಕೃತ್ಯಗಳನ್ನು ಆ ದೇವತೆ ಕ್ಷಮಿಸುತ್ತಾಳೆ ಎಂಬ ಆಶಯದಿಂದ ಎನ್ನಲಾಗಿದೆ. ಅಂದರೆ ಒಂದು ಪ್ರಾಣಿಯನ್ನು ಬಲಿ ಕೊಡುವುದು ಅರ್ಪಣೆ ಅಷ್ಟೇ ಅಲ್ಲ, ಒಂದು ಜನಾಂಗ ತನ್ನ ದೇವರೊಂದಿಗೆ ಒಂದಾಗುವುದನ್ನು ಸಾಧಿಸಿದ ದಾರಿ ಎನ್ನುತ್ತಾರೆ. ಒಂದು ದೇವತೆಗಾಗಿ ರಕ್ತವನ್ನು ಚೆಲ್ಲುವುದರ ಮೂಲಕ ಒಂದು ಜನಾಂಗಕ್ಕೆ ದೇವತೆಯೊಡನೆ ರಕ್ತಸಂಬಂಧ ಏರ್ಪಟ್ಟಿತ್ತೆಂದು ಆ ಜನ ಭಾವಿಸುತ್ತಾರೆ ಎಂದು ಅವರು ಆಫ್ರಿಕಾದ ಮಾಂಚಿಟ್ಸೊ ಜನಗಳ ಉದಾಹರಣೆಯನ್ನು ಕೊಟ್ಟಿದ್ದಾರೆ. ಈ ಆಫ್ರಿಕಾದ ಕಪ್ಪುಜನ ತಮ್ಮ ಸ್ನೇಹವನ್ನು ದೃಢಪಡಿಸುವ ಸಲುವಾಗಿ ಪರಸ್ಪರ ಆಯುಧಗಳಿಂದ ರಕ್ತ ಚಿಮ್ಮುವವರೆಗೂ ಹೊಡೆದಾಡುತ್ತಾರೆ. ಒಬ್ಬನಿಗೆ ಗಾಯವಾಗಿ ರಕ್ತ ಬಂದರೆ ಆ ರಕ್ತವನ್ನು ಇನ್ನೊಬ್ಬ ಕುಡಿಯುತ್ತಾನೆ. ಹೀಗೆ ಯಾವ ದ್ವೇಷವೂ ಇಲ್ಲದೆ ಹೊಡೆದಾಡುವ ಇವರು ಪರಸ್ಪರ ರಕ್ತ ಕುಡಿಯುವುದರ ಮೂಲಕ ತಮ್ಮ ಸ್ನೇಹ ಸೋದರತೆಗಳನ್ನು ಗಟ್ಟಿಗೊಳಿಸುತ್ತಾರೆ. ತಮ್ಮ ಗುಂಪಿನಿಂದ ಒಬ್ಬನನ್ನು ಬಲಿ ಕೊಡುವುದರ ಮೂಲಕ ದೇವರು ಮತ್ತು ಗುಂಪಿನ ನಡುವೆ ಆತ್ಮೀಯತೆ ಉಂಟಾಯಿತೆಂದು ಭಾವಿಸುತ್ತಾರೆ.

ಅಂದರೆ ಈ ಮಾರಮ್ಮನ ಕತೆಯಲ್ಲಿ ಕೆಳಜಾತಿಯ ಯುವಕನ ಪಾಂಡಿತ್ಯ ಪ್ರೇಮವು ಇಲ್ಲಿ ವ್ಯಕ್ತವಾಗಿದೆ. ಈ ಪಾಂಡಿತ್ಯವನ್ನು ಗಳಿಸುವ ಕಾರಣದಿಂದಲೇ ಆರಂಭದಲ್ಲಿ ಅವನು ಸುಳ್ಳು ಹೇಳುತ್ತಾನೆ. ನಂತರ ಇದು ಬ್ರಾಹ್ಮಣಕನ್ಯೆಯೊಡನೆ ಅವನ ವಿವಾಹದಲ್ಲಿ ಬೆಳೆದು, ತಾಯಿಯ ಪ್ರವೇಶವಾದ ಮೇಲೆ ದುರಂತದಲ್ಲಿ ಕೊನೆಗೊಳ್ಳುತ್ತದೆ. ಹುಡುಗ ಜಾತಿಯ ಬಗ್ಗೆ ಸುಳ್ಳು ಹೇಳುತ್ತಾನೆ. ಜೊತೆಗೆ ಆಹಾರದ ರುಚಿಯ ಪ್ರಸಂಗದಿಂದಲೇ ಅವನ ಜಾತಿ ಬಹಿರಂಗ ಗೊಂಡು ಅವನು ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಕೆಳಜಾತಿಯ ಯುವಕ ಸಾಮಾಜಿಕ ಅಂತಸ್ತನ್ನು ಪಡೆಯಲು ಇಚ್ಛಿಸುವುದು ಸಾಮಾನ್ಯವಾದ ಅಂಶವಾಗಿದೆ.

ಉತ್ತಮಕುಲದ ಮನಸ್ಸಿನಲ್ಲಿ ಸುಪ್ತವಾಗಿ ಕಾಡುವ ವರ್ಣಸಂಕರದ ಭಯ, ಕೆಳವರ್ಗದ ಮನಸ್ಸಿನಲ್ಲಿ ಗುಪ್ತವಾಗಿ ಇರಬಹುದಾದ ವರ್ಣಸಂಕರದ ಬಯಕೆಯೇ ಈ ಬಗೆಯ ಪುರಾಣಗಳ ಮೂಲಪ್ರೇರಣೆಯಾಗರಿಬಹುದು. ಅಂತರ್‌ಜಾತಿಯ ವಿವಾಹಗಳ ಮೇಲೆ ಹೇರಿದ ನಿಷೇಧವಾಗಿಯೂ ಈ ಪುರಾಣ ನಮ್ಮ ಸಾಂಸ್ಕೃತಿಕ ಪರಿಸರದಲ್ಲಿ ಪ್ರಭಾವ ಬೀರಿದೆ. ಕೆಳವರ್ಗದವರು ಸರ್ವೇಸಾಮಾನ್ಯವಾಗಿ ಕೋಣನ ಮಾಂಸವನ್ನು ಆಹಾರವೆಂದು ಭಾವಿಸುತ್ತಿದ್ದುದು ಮೇಲುವರ್ಗದವರಿಗೆ ಅಸಹನೀಯವಾಗುವುದು ಸಹಜವಾಗಿಯೇ ಇದೆ. ತನ್ನ ಅತ್ತೆಯು ಕೋಣನ ಮಾಂಸದ ರುಚಿಯನ್ನು ಸ್ಮರಿಸಿದ್ದೇ ಆಕೆಯ ಸೊಸೆಯು ತನ್ನ ಗಂಡನನ್ನು ಕೋಣನಾಗಿ ಹುಟ್ಟು ಎಂದು ಶಾಪ ಹಾಕಲು ಪ್ರೇರಣೆ ಆಗಿರಬೇಕು. ಹಸುವಿನ ಚರ್ಮವನ್ನು ಹದ ಮಾಡಿ ಅದರಿಂದ ಪಾದರಕ್ಷೆಗಳನ್ನು ತಯಾರು ಮಾಡುವ ಕಾಯಕದ ಬಗ್ಗೆ ಇರುವ ಅಸಹನೆಯೂ ಹಲವು ಕಥೆಗಳಲ್ಲಿ ವ್ಯಕ್ತವಾಗಿದೆ. ತನ್ನ ವೃತ್ತಿಯ ಕಾರಣದಿಂದ ಆಹಾರದ ಕಾರಣದಿಂದಲೇ ಕೀಳುಜಾತಿ ಎನಿಸಿಕೊಂಡ ಮಾದಿಗ ತರುಣ ಅದನ್ನು ಮುಚ್ಚಿಟ್ಟು ಮೇಲಿನ ವರ್ಗಕ್ಕೆ ಸೇರುವ ಪ್ರಯತ್ನ ಮಾಡಿ ಯಶಸ್ವಿಯಾಗುವ ಸ್ಥಿತಿಯಲ್ಲಿದ್ದಾಗ ತನ್ನ ವೃತ್ತಿ ಆಹಾರಪದ್ಧತಿಯ ಕಾರಣಕ್ಕಾಗಿಯೇ ಶಾಪಗ್ರಸ್ತನಾಗಿ ಅಪರಾಧಿಯ ಸ್ಥಾನದಲ್ಲಿ ನಿಂತು ಬಲಿಯಾಗುವ ದುರಂತವೆ ಕಾಣಬಹುದು.

ಸುಂಕದಕಲ್ಲಿನ ಗಲ್ಲೆದುರುಗಮ್ಮ, ಮಾರಮ್ಮ, ತಾಯಮ್ಮನ ಜಾತ್ರೆಯ ಮಾಹಿತಿ

ಮನುಷ್ಯ ತನ್ನ ಒಳಿತಿಗಾಗಿ ತನ್ನ ಸುತ್ತಿನವರ ಒಳಿತಿಗಾಗಿ ಎಂದೇ ಹಲವಾರು ರೀತಿಯ ಆಚರಣೆಗಳನ್ನು ಮಾಡುತ್ತಾನೆ. ಮನುಷ್ಯನ ಮೂಲ ಸ್ಥಾಯಿ ಗುಣಗಳು ಒಂದೇ ರೂಪವಾದ್ದರಿಂದ ಬಹುತೇಕ, ಪ್ರಪಂಚದ ಯಾವುದೇ ಭಾಗದ ಆಚರಣೆಗಳ ಹಿಂದಿನ ಉದ್ದೇಶಗಳಲ್ಲಿ ಅಂಥವೇ ಸಾಮ್ಯತೆಯನ್ನು ಕಾಣಬಹುದು. ಬಲಿಗೆ ಆಯ್ದುಕೊಳ್ಳುವ ಪ್ರಾಣಿಗಳ ಆಯ್ಕೆಯಲ್ಲಿ, ಬಲಿಯ ರೀತಿಯಲ್ಲಿ ಮತ್ತು ಅದರ ಇಂದಿನ ಅಪೇಕ್ಷೆ ಹಾಗೂ ಅರ್ಪಣೆಯಲ್ಲಿ ಈ ಅಂಶಗಳನ್ನು ಗಮನಿಸಬಹುದಾಗಿದೆ. ಆಯಾಯ ಪ್ರದೇಶದ ಕ್ರಮ, ನಡವಳಿಕೆಗಳಿಗೆ ಅನ್ವಯಿಸಿ ವ್ಯತ್ಯಾಸಗಳು ಇವೆ. ಲೆಕ್ಕವಿಲ್ಲದಷ್ಟು ಉಪಸಂಸ್ಕೃತಿಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುವ ಭಾರತೀಯ ಸಂಸ್ಕೃತಿಯಲ್ಲಿ ಇದು ಸಹಜವೂ ಆಗಿದೆ.

ಜನಪದ ಸಂಸ್ಕೃತಿಗೆ ಆಚರಣೆಯೇ ಬೆನ್ನೆಲುಬು. ಆಚರಣೆಯಿಲ್ಲದೆ ಯಾವ ದೈವದ ಅಸ್ತಿತ್ವವೂ ಇಲ್ಲಿ ಸಾಧ್ಯವಿಲ್ಲ. ದೇವತೆಗೂ ಸಮಾಜಕ್ಕೂ ಇರುವ ಸಂಬಂಧ ಅಭಿನಯಗೊಳ್ಳುವ ಕ್ರಮದ ವಿವರಗಳು ಪುಷ್ಟಿಯನ್ನು ನೀಡುತ್ತವೆ. ಈ ರೀತಿಯ ಆಚರಣೆಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಆಚರಿಸುತ್ತಾರೆ. ಕೂಡ್ಲಿಗಿ ತಾಲೂಕಿನ ಸುಂಕದಕಲ್ಲು ಗ್ರಾಮವು ಕೂಡ್ಲಿಗಿಯಿಂದ ಸುಮಾರು ೧೫ ಕಿ.ಮೀ. ದೂರದಲ್ಲಿದೆ. ಈ ಊರಿನಲ್ಲಿ ಮುಖ್ಯವಾಗಿ ಈಶ್ವರ, ಆಂಜನೇಯ,

ಮಾರಮ್ಮ, ತಾಯಮ್ಮ, ದುರುಗಮ್ಮ ಮರಿಯಮ್ಮ, ಗಲ್ಲೆದುರುಗಮ್ಮ, ಮೈಲಮ್ಮ ಇಷ್ಟು ದೇವಸ್ಥಾನದ ಗುಡಿಗಳಿವೆ. ಅಂದರೆ ಮಾರೆಮ್ಮ, ತಾಯಮ್ಮ, ದುರುಗಮ್ಮ, ಮರಿಯಮ್ಮ, ಈ ದೇವತೆಗಳ ಪೂಜಾರಿ ಬಡಿಗೇರ ನಾಗಪ್ಪ(ಶಿಕ್ಷಕರು ಹಾಗೂ ಕಲಾವಿದರು. ತಮ್ಮನಾದ ವೀರಭದ್ರಪ್ಪ (ಇವರು ಕೂಡ ಶಿಕ್ಷಕರಾಗಿದ್ದಾರೆ) ಇವರು ಜಾತ್ರೆಯ ಸಮಯದಲ್ಲಿ ಪ್ರಮುಖವಾಗಿ ಭಾಗಿಯಾಗಿ ದೇವತೆಯ ಕಾರ್ಯದಲ್ಲಿ ಜವಾಬ್ದಾರಿವಹಿಸಿಕೊಂಡು ಕೆಲಸ ಮಾಡುತ್ತಾರೆ. ಆದರೆ ಈರಣ್ಣ ಇವರು ಮಂಗಳವಾರ ಮತ್ತು ಶುಕ್ರವಾರ ದೇವತೆಗಳ ಪೂಜೆಯನ್ನು ಮಾಡುವುದು ಜವಾಬ್ದಾರಿಯಾಗಿರುತ್ತದೆ. ಜಾತ್ರೆಯ ಸಮಯದಲ್ಲಿ ದೇವರ ಗುಡಿಗಳಿಗೆ ಬಣ್ಣ ಬಳಿಸುವುದು, ಅಲಂಕಾರ ಮಾಡುವುದು ಇವರ ಕೆಲಸವಾಗಿರುತ್ತದೆ. ಆದರೆ ಗಲ್ಲೆದುರುಗಮ್ಮ, ಮೈಲಮ್ಮ, ಪೂಜಾರಿ ಮಾದಿಗ ಸಮುದಾಯದವರು, ಗಲ್ಲೆದುರುಗಮ್ಮನ ಪೂಜಾರಿ ನಾಗಪ್ಪ, ಮೈಲಮ್ಮನ ಪೂಜಾರಿ ಹನುಮಂತಪ್ಪ ಪ್ರತಿ ಮಂಗಳವಾರ ಶುಕ್ರವಾರ ಪೂಜೆ ಮಾಡಿ ಬಂದ ಭಕ್ತರಿಗೆ ಹಣ್ಣುಕಾಯಿ, ನೈವೇದ್ಯ ಮಾಡಿಕೊಡುವುದು ಇವರ ಕರ್ತವ್ಯವಾಗಿರುತ್ತದೆ.

ಗಲ್ಲೆದುರುಗಮ್ಮ

ಗಲ್ಲೆದುರುಗಮ್ಮ ದೇವಿಯು ತುಂಬಾ ಪ್ರಸಿದ್ಧಿಯನ್ನು ಪಡೆದ ದೇವತೆಯಾಗಿದ್ದಾಳೆ. ಗಲ್ಲೆ ಎಂದರೆ ಕುಂಬಾರನಿಂದ ಮಾಡಿ ತಂದ ಹೊಸ ಬಾನಿಯನ್ನು ದುರುಗಮ್ಮನ ಕಟ್ಟೆಯ ಮೇಲೆ ಎರಡು ಅಥವಾ ನಾಲ್ಕು ಬಾನಿಗಳನ್ನು ಕಟ್ಟೆಯ ಮೇಲೆ ಕುಣಿಯನ್ನು ತೆಗೆದು ನೆಲಕ್ಕೆ ಸಮಾನವಾಗಿರುವಂತೆ ಇಡುತ್ತಾರೆ. ಏಕೆಂದರೆ ಸತ್ತ ದನಗಳ ಚರ್ಮವನ್ನು ಬಾನಿಯಲ್ಲಿ ಹಾಕಿ ಹದ ಮಾಡಿ ಕೃಷಿಯ ವಸ್ತುಗಳಾದ ಬಾಣ್ಕೆ, ಪಟಗಾಣಿ, ಮಿಣಿ, ಪಾದರಕ್ಷೆ ಮುಂತಾದ ವಸ್ತುಗಳನ್ನು ಮಾದಿಗ ಸಮುದಾಯದರವರು ಪ್ರಾಚೀನ ಕಾಲದಿಂದಲೂ ಮಾಡಿಕೊಂಡು ಬಂದ ಸಂಪ್ರದಾಯವಾಗಿರುತ್ತದೆ. ಗಲ್ಲೆದುರುಗಮ್ಮ ದೇವಿಯು ತುಂಬಾ ಪ್ರಸಿದ್ಧಿಯನ್ನು ಪಡೆದ ದೇವತೆಯಾಗಿದ್ದಾಳೆ. ಯಾವುದೇ ರೀತಿಯ ಮಾಟ–ಮಂತ್ರಗಳನ್ನು ಮಾಡಿದ್ದರೆ ಈ ದುರುಗಮ್ಮನ ನೀರಿನ ಮುಂದೆ ಯಾವುದೇ ಮಂತ್ರವಾದಿಯ ಮಾಟ ಅಂದರೆ ಗಲ್ಲೆಯ ಸ್ವಲ್ಪ ನೀರನ್ನು ಸಿಂಪಡಿಸಿದರೆ ಮಂತ್ರವಾದಿಯ ಮಾಟದ ಕಟ್ಟು ಹೊಡೆಯುತ್ತದಂತೆ, ಗಲ್ಲೆಯಲ್ಲಿನ ನೀರಿನ ಮುಂದೆ ಮಂತ್ರವಾದಿಯ ಮಾಟ ನಡೆಯುವುದಿಲ್ಲ. ಅಂದರೆ ಸತ್ತ ದನಗಳ ಚರ್ಮ ಅಥವಾ ಖರೀದಿಸಿದ ಚರ್ಮವನ್ನು ತಂದು ಅಥವಾ ಜಾತ್ರೆಯ ಸಂದರ್ಭದಲ್ಲಿ ಗ್ರಾಮದ ದೇವತೆಗೆ ಕಡಿದ ಪಟ್ಟದ ಕೋಣದ ಚರ್ಮಕ್ಕೆ ಉಪ್ಪು, ಸುಣ್ಣವನ್ನು ಚರ್ಮಕ್ಕೆ ಬಳಿದು ಬಾನಿಯಲ್ಲಿ ನೀರನ್ನು ಹಾಕಿ ನಾಲ್ಕು ದಿನಗಳವರೆಗೆ ಬಾನಿಯಲ್ಲಿಯೇ ಇಟ್ಟಿರುತ್ತಾರೆ. ನಾಲ್ಕು ದಿನಗಳ ನಂತರ ಚರ್ಮವನ್ನು ತೆಗೆದು ಚರ್ಮದ ಮೇಲಿನ ಕೂದಲುಗಳನ್ನು ಕೆರೆದು ಶುಚಿಗೊಳಿಸಿ ಪುನಃ ಬಾನಿಯಲ್ಲಿ ಇಡುತ್ತಾರೆ. ಚರ್ಮವನ್ನು ಹದ ಮಾಡಲು ತಂಗಡಿಕೆಯ ಕಟ್ಟಿಗಳನ್ನು

ಬೆಳಗ್ಗೆಯೇ ಕಡಿದುಕೊಂಡು ಬಂದು ಕಟ್ಟೆಗೆಯ ಮೇಲಿನ ಸಿಪ್ಪೆಯನ್ನು ತೆಗೆದು ಒಣಗಿಸಿ ಪುಡಿಯನ್ನು ಮಾಡಿ ಬಾನಿಯಲ್ಲಿ ಹಾಕಿ ಚರ್ಮವನ್ನು ಎಂಟು ಅಥವಾ ಹತ್ತು ದಿನಗಳವರೆಗೆ ನೆನೆ ಇಡುತ್ತಾರೆ. ಹೀಗೆ ಮಾಡುವುದರಿಂದ ಚರ್ಮವು ಬಣ್ಣ ಬಂದಿರುತ್ತದೆ. ಚಪ್ಪಲಿ ಮುಂತಾದ ವಸ್ತುಗಳನ್ನು ತಯಾರಿಸಲು ಚರ್ಮವು ಹದವಾಗಿರುತ್ತದೆ. ಹೀಗೆ ಮಾಡಿ ತಯಾರಿಸಿದ ಗಲ್ಲೆದುರುಗಮ್ಮನ ನೀರು ಪವಾಡದ ರೀತಿಯ ನೀರಾಗಿರುತ್ತದೆ. ಈ ನೀರನ್ನು ಪ್ರತಿಯೊಂದು ಕೆಲಸ ಕಾರ್ಯಗಳಿಗೆ ಉಪಯೋಗಿಸುತ್ತಾರೆ. ಬಾನಿಯಲ್ಲಿನ ನೀರು ಊರಿನ ಗೌಡರಿಂದ ಹಿಡಿದು ಪ್ರತಿಯೊಬ್ಬರೂ ಈ ನೀರನ್ನು ಉಪಯೋಗ ಮಾಡಿಕೊಳ್ಳುತ್ತಾರೆ. ಅಂದರೆ ಮನೆಗೆ ಯಾರಾದರೂ ಮಾಟ ಮಾಡಿಸಿದ್ದರೆ, ಮನೆಯ ಸುತ್ತಲೂ ಈ ನೀರನ್ನು ಹೊಡೆದರೆ ನಿವಾರಣೆಯಾಗುತ್ತದೆ. ಅಲ್ಲದೆ ಹೊಲಗಳಲ್ಲಿ ಎಲೆಯ ತೋಟವಿದ್ದವರು ವಿಶೇಷವಾಗಿ ಎಲೆ ಚೆನ್ನಾಗಿ ಬೆಳೆಯಲೆಂದು ಈ ಗಲ್ಲೆಯ ನೀರು ತೆಗೆದುಕೊಂಡು ಹೋಗಿ ತಮ್ಮ ಹೊಲಗಳಿಗೆ ನೀರನ್ನು ಹೊಡಿಯುತ್ತಾರೆ. ಕೆಲವರು ಈ ನೀರನ್ನು ಕುಡಿದರೆ ಕಾಯಿಲೆ ವಾಸಿಯಾಗುತ್ತದೆ ಎಂದು ನೀರನ್ನು ಕುಡಿಯುತ್ತಾರೆ. ಈ ರೀತಿಯಾಗಿ ಗಲ್ಲೆದುರುಗಮ್ಮನ ನೀರನ್ನು ಸುತ್ತಮುತ್ತಲಿನ ಊರುಗಳಿಂದ ಬಂದು ಪೂಜಾರಿಗೆ ಕಾಣಿಕೆಯನ್ನು ಕೊಟ್ಟು ಪೂಜೆ ಮಾಡಿಸಿಕೊಂಡು ಗಲ್ಲೆಯ ನೀರನ್ನು ತೆಗೆದುಕೊಂಡು ಹೋಗುವುದು ವಿಶೇಷವಾಗಿರುತ್ತದೆ. ಹೀಗೆ ಪ್ರತಿಯೊಂದು ಕೆಲಸ ಕಾರ್ಯಗಳಿಗೆ ಈ ಗಲ್ಲೆದುರುಗಮ್ಮನ ನೀರು ಪ್ರಸಿದ್ಧಿಯನ್ನು ಪಡೆದಿದೆ ಎಂದು ಹೇಳಬಹುದು. ಒಂದೇ ಮಾತಿನಲ್ಲಿ ಹೇಳುವುದಾದರೆ ಯಾವುದೇ ರೀತಿಯ ಕಷ್ಟ, ಮಾಟ-ಮಂತ್ರ ಮುಂತಾದವುಗಳನ್ನು ನಿವಾರಣೆ ಮಾಡುವ ಶಕ್ತಿ ಈ ಗಲ್ಲೆದುರುಗಮ್ಮನ ನೀರಿನಲ್ಲಿದೆ ಎಂದು ಹೇಳಬಹುದು.

ಈ ದೇವತೆಯ ಜಾತ್ರೆ ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಯುತ್ತದೆ. ಈ ದೇವತೆಗೂ ಸಹ ಕೋಣವನ್ನು ಒಳಗೊಂಡಂತೆ ಕುರಿ, ಕೋಳಿ, ಮೇಕೆ ಮುಂತಾದವುಗಳನ್ನು ಬಲಿ ಕೊಡುತ್ತಾರೆ. ಹರಕೆ ಮಾಡಿಕೊಂಡವರು ಬಲಿಯ ಮುಖಾಂತರ ತಮ್ಮ ಹರಕೆಗಳನ್ನು ತೀರಿಸುತ್ತಾರೆ. ಬೇವಿನ ಹುಡುಗೆ, ದೀಡ ನಮಸ್ಕಾರ ಮುಂತಾದ ರೀತಿಯ ಹರಕೆಗಳನ್ನು ಭಕ್ತಾದಿಗಳು ಈ ದೇವಿಗೆ ನಡೆದುಕೊಳ್ಳುವುದನ್ನು ನೋಡಿದರೆ ಈ ದೇವಿಯು ಪವಾಡದ ಶಕ್ತಿ ದೇವತೆಯಾಗಿದ್ದಾಳೆ ಎಂಬುದು ತಿಳಿಯುತ್ತದೆ. ಯಾವುದೇ ಮಾಟ-ಮಂತ್ರವಾದಿಗಳ ಕೆಲಸಗಳು ಈ ದೇವತೆಯ ನೀರಿಗೆ ನಡೆಯುವುದಿಲ್ಲವೆಂಬುದನ್ನು ಗಮನಿಸಬಹುದು.

ಮಾರಮ್ಮ

ಮಾರಮ್ಮನ ಜಾತ್ರೆ ಇಡೀ ಗ್ರಾಮದ ಎಲ್ಲಾ ಜಾತಿಯ ಜನಾಂಗಗಳನ್ನು ಒಳಗೊಂಡು ಮಾಡುವ ವಿಧಿ ಆಚರಣೆಗಳ ಕ್ರಿಯಾಸರಣಿ ಇಲ್ಲಿ ಜಾತಿಯ ಸಾಮಾಜಿಕ ಶ್ರೇಣಿಕರಣಕ್ಕನು

ಗುಣವಾಗಿ ಅಂದರೆ ಮೇಲು ಕೀಳಿನ ಜಾತಿವ್ಯವಸ್ಥೆ ನಮ್ಮ ನಾಡಿಗೆ ಕಾಲಿಟ್ಟ ನಂತರದ ಬೆಳವಣಿಗೆಯಾಗಿದೆ. ಎಲ್ಲ ಜಾತಿ ಜನರು ಸೇರಿ ಜಾತ್ರೆಯನ್ನು ಮಾಡುವಲ್ಲಿ ಕಾಣುವ ಭಾವೈಕ್ಯತೆ ಅದ್ಭುತವಾದದ್ದು ಹಾಗೂ ಈ ದೇವಿಯ ಜಾತ್ರೆಗಳಲ್ಲಿ ನಿರ್ದಿಷ್ಟ ಕಟ್ಟುನಿಟ್ಟುಗಳು ಇದ್ದು ಗ್ರಾಮಸ್ಥರು ಕೆಲಸಗಳನ್ನು ಹಂಚಿಕೊಂಡು ಮಾಡುತ್ತಾರೆ.

ಈ ಮಾರಮ್ಮ ದೇವಿಯ ಗುಡಿಯು ಚಿಕ್ಕದಾಗಿದ್ದು, ಊರಿನ ಮಧ್ಯಭಾಗದಲ್ಲಿ ಪೂರ್ವಾಭಿಮುಖವಾಗಿದೆ. ಮುಂದೆ ವಿಶಾಲವಾದ ಬಯಲು ಜಾಗವಿದೆ. ದೇವಿಯನ್ನು ಗುಡಿಯ ಒಳಗಡೆ ಒಂದು ಮರದ ಪೆಟ್ಟಿಗೆಯಲ್ಲಿ ಮುಚ್ಚಿಟ್ಟಿರುತ್ತಾರೆ. ಅಂದರೆ ದೇವತೆಗಳನ್ನು ಎಲ್ಲ ಕಡೆಯೂ ಸಿಂಹದ ಮೇಲೆ ಅಥವಾ ಕುದುರೆಯ ಮೇಲೆ ಕೂಡಿಸಿರುವುದನ್ನು ಕಾಣುತ್ತೇವೆ. ಆದರೆ ಮಾರಮ್ಮನ ವಿಶೇಷತೆಯೆಂದರೆ ಜಾತ್ರೆಯ ಸಮಯದಲ್ಲಿ ಮಾತ್ರ ಮರದ ಪೆಟ್ಟಿಗೆಯಿಂದ ಹೊರತೆಗೆದು ಬಣ್ಣ ಬಳಿದು ಅಲಂಕಾರ ಮಾಡಿ ಕೂಡಿಸುತ್ತಾರೆ. ಮೂಗಿಗೆ ಮೂಗುತಿ ಹಣೆಗೆ ಕುಂಕುಮ, ಕೈಯಲ್ಲಿ ಹಸಿರು ಬಳೆ ಹಸಿರು ಪಟ್ಟಿಯ ಸೀರೆ, ಕೈಗಳಲ್ಲಿ ಕತ್ತಿ, ಚಕ್ರ, ಮುಂತಾದ ವಸ್ತುಗಳಿಂದ ಅಲಂಕಾರ ಮಾಡಿ ನೋಡುಗರಿಗೆ ಭಯವನ್ನು ಮೂಡಿಸುವಂತಿರುತ್ತಾಳೆ.

ಸಾರುವುದು

ಈ ಮಾರಮ್ಮ ಜಾತ್ರೆಯು ಸಾರು ಹಾಕುವುದರ ಮುಖಾಂತರ ಆರಂಭವಾಗುತ್ತದೆ. ಅಂದರೆ ಗ್ರಾಮದ ಜನರನ್ನು ಮಾನಸಿಕವಾಗಿ ಆರ್ಥಿಕವಾಗಿ ಸಿದ್ಧಗೊಳಿಸುವುದಾಗಿದೆ. ಜನರಿಗೆ ಹಬ್ಬದ ಸೂಚನೆಯನ್ನು ಕೊಡುವುದರ ಜೊತೆಗೆ ಅವರು ಪಾಲಿಸಬೇಕಾದ ವಿಧಿ-ನಿಷೇಧಗಳನ್ನು ತಿಳಿಸಲಾಗುವುದು, ಹೀಗೆ ಮನೆಗೊಬ್ಬರಂತೆ ಊರ ಮುಂದಿನ ಆಂಜನೇಯನ ಗುಡಿಯ ಹತ್ತಿರ ಸೇರಿಕೊಂಡು ಜಾತ್ರೆಯ ಬಗ್ಗೆ ಚರ್ಚಿಸಿ ಆಯಗಾರರ ಮನೆಗಳನ್ನು ಬಿಟ್ಟು ಉಳಿದ ಪ್ರತಿಯೊಂದು ಮನೆಗೆ ಹಂಚಿಕೆಯನ್ನು ಹಾಕುತ್ತಾರೆ. ಅಂದರೆ ಮನೆಗಳ ಆರ್ಥಿಕತೆಯ ಮೇಲೆ ೫೦೧, ೧೦೦೧, ೫೦೦೧ ಅಕ್ಕಿ, ಬೇಳೆ, ಬೆಲ್ಲ ಮುಂತಾದ ವಸ್ತುಗಳನ್ನು ಒಳಗೊಂಡಂತೆ ದೇವಿಯ ಜಾತ್ರೆಯನ್ನು ಮಾಡಲು ಊರಿನ ಮುಖಂಡರಿಗೆ ಕೊಡಬೇಕಾಗುತ್ತದೆ.

ಈ ಮಾರಮ್ಮ ದೇವಿಯ ಜಾತ್ರೆಯನ್ನು ಮಾಡಿ ಸುಮಾರು ೨೫ ವರ್ಷಗಳ ಹಿಂದೆ ಮಾಡಿದ್ದರಂತೆ, ಇಷ್ಟು ವರ್ಷಗಳ ನಂತರ ಯಾಕೆ ಈ ದೇವಿಯ ಜಾತ್ರೆಯನ್ನು ಮಾಡಲು ಪ್ರಾರಂಭಿಸಿದ್ದಾರೆ. ಎಂದು ಹಿರಿಯರನ್ನು ಕೇಳಿದಾಗ ಅವರು ಹಲವಾರು ಕಾರಣಗಳನ್ನು ಹೇಳುತ್ತಾರೆ. ಅಂದರೆ ಮನುಷ್ಯನಲ್ಲಿ ಇಂತಹದೇ ಗುಣಗಳು ಹೇಗೆ ಇಂದಿಗೂ ಕೆಲಸ ಮಾಡುತ್ತವೆ ಎಂಬುದಕ್ಕೆ ಇದೊಂದು ಉದಾಹರಣೆ. ಈ ದೇವಿಯ ಜಾತ್ರೆಯನ್ನು ಮಾಡದೆ ಸುಮಾರು ವರ್ಷಗಳೇ ಕಳೆದಿದ್ದವು. ಆದರೆ ಊರಲ್ಲಿ ಇದ್ದಕ್ಕಿದ್ದಂತೆ ದನಕರುಗಳಿಗೆ ಸೆಪ್ಪೆ ರೋಗ, ಪ್ಲೇಗು, ಕಾಲರಾ ಮುಂತಾದ ರೀತಿಯ ರೋಗಗಳು ಕಾಣಿಸಿಕೊಂಡಿದ್ದರಿಂದ ಊರಿನಲ್ಲಾದ ತೊಂದರೆಗಳಿಗೆ ಬಹಳ ದಿನಗಳ ಕಾಲ ಅಮ್ಮನ ಜಾತ್ರೆಯನ್ನು ಮಾಡದೆ

ಇರುವುದರಿಂದ ಅಮ್ಮನ ಕೋಪವೇ ಕಾರಣ ಎಂದು ತಿಳಿದುಕೊಂಡು ದೇವಿಯ ಜಾತ್ರೆಯನ್ನು ಮಾಡಲು ಪ್ರಾರಂಭಿಸುತ್ತಾರೆ.

ಅಂದರೆ ನಿಂತು ಹೋದ ಅನೇಕ ಹಬ್ಬಗಳು ಇಂಥದೇ ಕಾರಣಗಳಿಂದ ಪುನರಾರಂಭ ವಾಗುತ್ತವೆ. ತಮ್ಮ ಪುರಾತನರ ಸಂಪ್ರದಾಯ ಆಚರಣೆಗಳನ್ನು ಹೊತ್ತು ಸಾಗಿಸುತ್ತವೆ. ಅಲ್ಲದೆ ಈ ಮಾರಮ್ಮ ದೇವಿಗೆ ಪಟ್ಟದ ಕೋಣವನ್ನು ಒಳಗೊಂಡಂತೆ ಗಾವು ಸಿಗಿಯುವುದು, ದೃಷ್ಟಿಮರಿ, ಬಾನದ ಮರಿ, ಹರಿಮರಿ, ಕುರಿ, ಮೇಕೆ, ಕೋಳಿ ಮುಂತಾದವುಗಳನ್ನು ಬಲಿ ಕೊಟ್ಟು ಹರಕೆಯನ್ನು ಒಪ್ಪಿಸಿ ದೇವಿಯ ಕೃಪೆಗೆ ಪಾತ್ರರಾಗುತ್ತಾರೆ.

ಆಯಗಾರಿಕೆ

ಒಂಬತ್ತು ಮಂದಿ ಆಯಗಾರರಿರುತ್ತಾರೆ. ಆಯಗಾರಿಕೆ ಎಂದರೆ ಒಂದು ಸಮುದಾಯವು ಗ್ರಾಮದಲ್ಲಿ ನಿರ್ವಹಿಸುವ ನಿರ್ದಿಷ್ಟ ಕಾರ್ಯ ಗ್ರಾಮಸಂಸ್ಕೃತಿಯಲ್ಲಿ ಈ ವರ್ಗದವರು ದೇವರ ಹೆಸರಿನಲ್ಲಿ ಸೇವೆ ಮಾಡಬೇಕೆಂದು ನಿರ್ಧರಿಸುತ್ತಾರೆ. ಆಯಗಾರಿಕೆ ಕುಲಕಸುಬು ಎನ್ನುವ ಮಟ್ಟಕ್ಕೆ ಬಂದು ನಿಂತಿತ್ತು. ಆಯಗಾರಿಕೆಗೆ ಗ್ರಾಮಸಂಸ್ಕೃತಿಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವಿದ್ದು, ಊರಿನ ಎಲ್ಲಾ ಪ್ರಮುಖ ಧಾರ್ಮಿಕ ಕಾರ್ಯಗಳಲ್ಲಿ ಈ ಆಯಗಾರಿಕೆ ಮಾಡುವ ಜನತೆಯು ಭಾಗವಹಿಸಲೇಬೇಕು. ಆಯಗಾರಿಕೆ ಮಾಡುವ ಜನತೆಗೆ ಸುಗ್ಗಿಯ ಕಾಲದಲ್ಲಿ ಊರಿನ ಎಲ್ಲಾ ರೈತಾಪಿವರ್ಗದವರು ದವಸ ಧಾನ್ಯದ ರೂಪದಲ್ಲಿ ಕಾಣಿಕೆ ನೀಡುವುದು ವಾಡಿಕೆಯಾಗಿ ಬೆಳೆದುಬಂದಿದೆ. ಹೀಗೆ ನಿರ್ಧರಿಸುವ ಗ್ರಾಮಸಂಸ್ಕೃತಿಯ ಪರಂಪರೆಯ ಆಚರಣೆಯನ್ನು ನಾವು ಈಗಲೂ ಕಾಣಬಹುದು. ಆಯಗಾರರೆಂದರೆ ಮಾದಿಗರು, ಬಾರಿಕರು, ಅಗಸರು, ತಳವಾರ, ಬಡಿಗೇರ, ಪೂಜಾರಿ ಇನ್ನೂ ಮುಂತಾದ ಜನಾಂಗದವರು ಆಯಗಾರರಾಗಿ ಭಾಗವಹಿಸುತ್ತಾರೆ.

ಪೋತರಾಜರಿಗೆ ಮತ್ತು ಉರಿಮೆರಿಗೆ ವೀಳ್ಯೆ ಕೊಡುವುದು

ಜಾತ್ರೆ ಇನ್ನೂ ೧೫ ದಿನ ಮುಂಚಿತವಾಗಿಯೇ ಊರಿನ ಮುಖಂಡರು ಗಾವು ಸಿಗಿಯುವವರಿಗೆ ಮತ್ತು ಉರುಮೆರಿಗೆ ವೀಳ್ಯೆ ಕೊಡುವ ಶಾಸ್ತ್ರ ಮಾಡುತ್ತಾರೆ. ಏಕೆಂದರೆ ಜಾತ್ರೆಯ ಸಂದರ್ಭದಲ್ಲಿ ಬೇರೆ ಬೇರೆ ಕಡೆಯ ಜಾತ್ರೆಗಳಿಗೆ ಹೋಗುತ್ತಾರೆ. ನಮ್ಮ ಸಮಯಕ್ಕೆ ಸರಿಯಾಗಿ ಸಿಗುವುದಿಲ್ಲವೆಂಬ ಕಾರಣದಿಂದ ಎಲೆ ಅಡಿಕೆ ಕಾಣಿಕೆಯನ್ನು ಕೊಟ್ಟು ಒಂದು ದಿನ ಮುಂಚಿತವಾಗಿ ನಮ್ಮ ಊರಿನ ಜಾತ್ರೆಗೆ ತಪ್ಪದೇ ಬರಬೇಕು ಎಂದು ಹೇಳುತ್ತಾರೆ. ಆದ್ದರಿಂದ ಜಾತ್ರೆಗೆ ಒಂದು ದಿನ ಮುಂಚಿತವಾಗಿಯೇ ಬಂದಿರುತ್ತಾರೆ.

ದೇವಿಗೆ ಅಲಂಕಾರ ಮಾಡುವುದು

ಅಂದರೆ ಜಾತ್ರೆಯ ಸಂದರ್ಭದಲ್ಲಿ ಮುಂಚಿತವಾಗಿಯೇ ಮಾರಮ್ಮ ದೇವಿಗೆ ಅಲಂಕಾರ ಮಾಡಿ ಕೂಡಿಸುವುದು ಪೂಜಾರಿಯ ಕೆಲಸವಾಗಿದೆ. ಆದ್ದರಿಂದ ಪೂಜಾರಿಯಾದ ನಾಗಪ್ಪ (ಶಿಕ್ಷಕರು) ಬಣ್ಣ ಹಚ್ಚಿ ಅಲಂಕಾರ ಮಾಡಿ ನೋಡುಗರಿಗೆ ಭಯವನ್ನುಂಟುಮಾಡುವ ರೀತಿಯಲ್ಲಿ

ಮಾಡುತ್ತಾರೆ. ದೇವತೆಯ ಕೈಗೆ ಹಸಿರುಬಳೆ, ಕೈಯಲ್ಲಿ ಖಡ್ಗ, ಮೂಗುತಿ, ಹಣೆಗೆ ಕುಂಕುಮ, ಕಣ್ಣಿಗೆ ಕಾಡಿಗೆ ಹೀಗೆ ಮುಂತಾದ ವಸ್ತುಗಳಿಂದ ಅಲಂಕಾರ ಮಾಡುವುದು ಪೂಜಾರಿಯ ಕರ್ತವ್ಯವಾಗಿರುತ್ತದೆ.

ಪಾರಿಬೇಲಿ ಹಾಕುವುದು

ಈ ಮಾರಮ್ಮ ದೇವಿಯ ಜಾತ್ರೆಯಲ್ಲಿ ಊರಿನ ಸುತ್ತಲೂ ಬೇಲಿಯನ್ನು ಹಾಕುವುದು ಪ್ರಮುಖವಾದ ಕಾರ್ಯವಾಗಿರುತ್ತದೆ. ಹೀಗೆ ಮಾಡುವುದರಿಂದ ಊರಿನ ರಕ್ಷಣೆಯ ಸಂಕೇತವೆಂದು ಹೇಳಬಹುದು. ಈ ದೇವಿಯ ಜಾತ್ರೆ ಇನ್ನೂ ಮೂರು ದಿನ ಮುಂಚಿತವಾಗಿಯೇ ಊರಿನ ಮಾದಿಗರಿಂದ ಊರಿನ ಸುತ್ತಲೂ ಮುಳ್ಳಿನ ಬೇಲಿಯನ್ನು ಹಾಕಿಸುತ್ತಾರೆ. ಇದಕ್ಕೆ ಪಾರಿಬೇಲಿ ಎಂದು ಹೆಸರು. ಪರ ಊರಿನವರು ಜಾತ್ರೆಗೆ ಆಗಮಿಸಿದರೆ ಊರಿನ ದ್ವಾರ ಬಾಗಿಲು ಮೂಲಕವೇ ಬರಬೇಕಾಗುತ್ತದೆ. ಅಲ್ಲದೆ ಮಾದಿಗರು ದ್ವಾರಬಾಗಿಲಿನ ಕಾವಲುಗಾರರಾಗಿ ನಿಂತಿರುತ್ತಾರೆ.

ಮಾರಮ್ಮನ ಜಾತ್ರೆ ಇನ್ನೂ ಹದಿನೈದು ದಿನ ಇರುವಾಗಲೇ ಮಾದಿಗ ಸಮುದಾಯದವರು ಕೋಣವನ್ನು ಹಿಡಿದು ಕಟ್ಟಿರುತ್ತಾರೆ. ಅಲ್ಲದೆ ಅದಕ್ಕೆ ಸುಣ್ಣದ ನೀರನ್ನು ಕುಡಿಸುತ್ತಾರೆ. ಏಕೆಂದರೆ ಕೊಬ್ಬಿದ ಕೋಣವನ್ನು ಬಲಿ ಕೊಡುವಾಗ ಬಗ್ಗುವುದಿಲ್ಲ ಎಂಬ ಕಾರಣದಿಂದ ಸುಣ್ಣದ ನೀರನ್ನು ಕುಡಿಸುತ್ತಾರೆ. ಅಲ್ಲದೆ ಕೋಣವನ್ನು ಬಲಿ ಕೊಡುವ ಹಿಂದಿನ ದಿನ ಕೋಣವನ್ನು ಬೇವಿನ ತೊಪ್ಪಲನ್ನು ಕೊರಳಿಗೆ ಕಟ್ಟಿಕೊಂಡು ಪ್ರತಿ ಮನೆಗೆ ಹೋಗಿ ತಲೆಯ ಮೇಲೆ ಎಣ್ಣೆ ಕುಂಕುಮ ಹಾಕಿ ಪೂಜೆ ಮಾಡಿಸಿ ಜೋಳ, ಅಕ್ಕಿ, ಎಣ್ಣೆ, ಮೆಣಸಿನಕಾಯಿ, ದುಡ್ಡು ಮುಂತಾದವುಗಳನ್ನು ಕೊಡುತ್ತಾರೆ. ಈ ರೀತಿಯಾಗಿ ಇಡೀ ಊರಾಡುವುದು ಮುಗಿದ ನಂತರ ರಾತ್ರಿ ಸುಮಾರು ಹತ್ತು ಗಂಟೆಯ ಸಮಯದಲ್ಲಿ ಹದಿನೈದು ಅಥವಾ ಇಪ್ಪತ್ತು ಜನರು ಸೇರಿಕೊಂಡು ಕೋಣನ ನಾಲ್ಕು ಕಾಲುಗಳಿಗೆ ಹಗ್ಗವನ್ನು ಕಟ್ಟಿ ನಾಲ್ಕು ಕಾಲುಗಳನ್ನು ಜಗ್ಗಿ ಕೋಣನ ಎದೆ ಭಾಗವು ನೆಲಕ್ಕೆ ತಾಗುವಂತೆ ಮೇಲಕ್ಕೆ ಎತ್ತಿ ಎತ್ತಿ ಹಾಕಿ ತುಂಬ ನಿತ್ರಾಣವಾಗುವಂತೆ ಮಾಡುತ್ತಾರೆ. ಬೆಳಗಿನ ಜಾಗ ನಾಲ್ಕು ಗಂಟೆಯ ಸಮಯದಲ್ಲಿ ಮಾರಮ್ಮ ದೇವಿಯ ಗುಡಿಯ ಮುಂದೆ ಕಡಿಯಲು ಪ್ರಾರಂಭ ಮಾಡುತ್ತಾರೆ.

ಘಟೆಪೂಜೆ

'ಘಟೆ' ಎಂದರೆ ಮಣ್ಣಿನ ಮಡಕೆ, ಇದನ್ನು ಪೂಜಿಸುವವರು ಮಾದಿಗ ಜನಾಂಗದವರು. ಕೋಣವನ್ನು ಕಡಿಯಲು ನೇಮಿಸಲ್ಪಟ್ಟ ಮನೆಯವರು ಈ ಘಟೆಯನ್ನು ಪೂಜಿಸುತ್ತಾರೆ. ಘಟೆ ಪೂಜೆ ಮಾಡುವವರು ಕೂಡ ಒಂದ್ಹೊತ್ತು ಇರುತ್ತಾರೆ. ಮಾರಮ್ಮನ ಹಬ್ಬದ ಆಚರಣೆಯಲ್ಲಿ ಘಟೆ ಪೂಜೆಯನ್ನು ವಿಶೇಷವಾಗಿ ಪರಿಗಣಿಸಬೇಕಾಗುತ್ತದೆ. ಈ ದೇವಿಯ ಆರಾಧನೆಗೂ ಮತ್ತು ಘಟೆಯ ಆರಾಧನೆಗೂ ಸಂಬಂಧವಿದೆ ಎನ್ನಬಹುದು.

ಕೋಣನ ಮೆರವಣಿಗೆ

ಈ ಕೋಣವನ್ನು ಮೆರವಣಿಗೆ ಮಾಡುವುದು ಬಹಳ ಕುತೂಹಲದ ಸಂಗತಿಯಾಗಿರುತ್ತದೆ. ಅಮ್ಮನ ಜಾತ್ರೆಯ ಹದಿನೈದು ದಿನ ಮುಂಚಿತವಾಗಿಯೇ ಊರಿನ ಮುಖಂಡರು ಮಾದಿಗರಿಂದ ಕೋಣವನ್ನು ಹಿಡಿದು ಕಟ್ಟಿಸಿರುತ್ತಾರೆ. ಕೋಣದ ಕೊಬ್ಬನ್ನು ಕರಗಿಸಲು ಸುಣ್ಣದ ನೀರನ್ನು ಕುಡಿಸುತ್ತಾರೆ. ಅಲ್ಲದೆ ಅದಕ್ಕೆ ತಿನ್ನಲಿಕ್ಕೆ ಆಹಾರವನ್ನು ಕಡಿಮೆಗೊಳಿಸುತ್ತಾರೆ. ಏಕೆಂದರೆ ಕೋಣವನ್ನು ಕಡಿಯುವಾಗ ಅರಚಬಾರದು ಮತ್ತು ತಪ್ಪಿಸಿಕೊಂಡು ಹೋಗದಿರಲೆಂದು ಈ ರೀತಿಯ ನಿಯಮಗಳನ್ನು ಪಾಲಿಸುತ್ತಾರೆ.

ಊರಲ್ಲಿ ಎತ್ತಿದ ಕಾಳನ್ನು ಅವರು ಊಟಕ್ಕೆ ಬಳಸುತ್ತಾದರೂ ಹುಲಿಸಿನ ಕಾಳು ಎಂದು ಪ್ರತ್ಯೇಕವಾಗಿ ಸಂಗ್ರಹಿಸಿದ್ದು, ದೇವಿಯ ಗುಡಿಯ ಮುಂದೆ ಸುರಿದು ಪೂಜಿಸಲಾಗುತ್ತದೆ. ಅದನ್ನು ಹುಲಿಸಿನ ಕಾಳು ಎನ್ನಲಾಗುತ್ತದೆ. ಹೀಗೆ ಕೋಣವನ್ನು ಮನೆ ಮನೆಗೆ ಹಿಡಿದುಕೊಂಡು ಹೋಗಿ ಪ್ರತಿ ಮನೆಯವರು ಅದಕ್ಕೆ ಕಾಳನ್ನು ತಿನಿಸುತ್ತಾರೆ. ಹೀಗೆ ಮೆರವಣಿಗೆ ಮುಗಿದ ನಂತರ ರಾತ್ರಿಯ ಸಮಯದಲ್ಲಿ ಒಂದು ಎರಡು ಗಂಟೆಯ ಸಮಯದಲ್ಲಿ ಕೋಣನ ನಾಲ್ಕು ಕಾಲುಗಳಿಗೆ ಹಗ್ಗಗಳನ್ನು ಕಟ್ಟಿ ನಾಲ್ಕು ಕಡೆಯಿಂದ ಬೀಳುವಂತೆ ಎತ್ತೆತ್ತಿ ಹಾಕಲಾಗುತ್ತದೆ. ಕೋಣವು ಅರಚುತ್ತದೆ. ಜನರು ಅದನ್ನು ನೋಡಿ ಮರುಗದೆ ಮೆತ್ತಗಾಗುವಂತೆ ಮಾಡುತ್ತಾರೆ. ಏಕೆಂದರೆ ಕೋಣವು ಕಡಿಯುವಾಗ ತಪ್ಪಿಸಿಕೊಂಡು ಹೋಗಬಾರದು ಅರಚಬಾರದು ಎಂದು ಕೋಣವನ್ನು ಮೆತ್ತಗಾಗುವಂತೆ ಮಾಡುತ್ತಾರೆ.

ಕೋಣನ ಬಲಿ

ಕೋಣನ ಬಲಿಯಾಗುವುದು ಬುಧವಾರ ಬೆಳಗಿನ ಜಾವ ಸುಮಾರು ಮೂರು ಗಂಟೆ ಸಮಯದಲ್ಲಿ ದೇವಿಯ ಪೂಜೆಯು ನಡೆಯುತ್ತದೆ. ಅಲ್ಲದೇ ದೇವಿಯ ಗುಡಿಯ ಮುಂದೆ 'ಗದ್ದಿಗೆ' ಬಲಿ ಎಂದು ನಿಗದಿಪಡಿಸಲಾದ ಜಾಗದಲ್ಲಿ ಒಂದು ಕುಣಿಯನ್ನು ತೋಡಿರುತ್ತಾರೆ. ಏಕೆಂದರೆ ಕೋಣವನ್ನು ಕಡಿದ ರಕ್ತ ಬೇರೆ ಕಡೆ ಚೆಲ್ಲಬಾರದು ಎಂದು ಮಾಡಿರುತ್ತಾರೆ. ಹೀಗೆ ಕಡಿದ ನಂತರ ಅದರ ರಕ್ತವನ್ನು ಕುಣಿಯಲ್ಲಿ ಹಾಕಿ ಮುಚ್ಚಲಾಗುತ್ತದೆ. ಅದಕ್ಕೆ 'ಗದ್ದಿಗೆ ಬಲಿ' ಎಂದು ಕರೆಯುತ್ತಾರೆ.

ಇತ್ತ ಘಟೆ ಹೊತ್ತು ಹೆಂಗಸನ್ನು ಕೋಣ ಕಡಿಯುವವನನ್ನು ಕರೆತಂದು ದೇವಿಯ ಗುಡಿಯನ್ನು ಮೂರು ಸುತ್ತು ಸುತ್ತುತ್ತಾರೆ. ನಂತರ ಘಟೆ ಹೊತ್ತ ಹೆಂಗಸಿಗೆ ಹಸಿರು ಸೀರೆಯನ್ನು ಉಡಿಸುತ್ತಾರೆ. ನಂತರ ದೇವಿಯ ಗುಡಿಯ ಎದುರಿಗೆ ಲಕ್ಕಿಯ ಸೊಪ್ಪಿನಿಂದ ಒಂದು ಗುಡಿಸಲು ಮಾಡಿರುತ್ತಾರೆ ಅಲ್ಲಿಯೇ ಮುಂದೆ ಕೂಡಿಸಿರುತ್ತಾರೆ. ಏಕೆ ಈ ಗುಡಿಸಲನ್ನು ಮಾಡಿರುತ್ತಾರೆ ಎಂದರೆ ಕೋಣವನ್ನು ಕಡಿದ ಅದರ ತಲೆಯನ್ನು ಈ ಗುಡಿಸಲಿನಲ್ಲಿ ಇಟ್ಟು ಕೋಣನ ತಲೆಯ ಮೇಲೆ ದೀಪವನ್ನು ಹಚ್ಚುತ್ತಾರೆ. ಅಂದರೆ ಮೂರು ದಿನಗಳ ಕಾಲ ಈ ದೀಪವು ನಂದದಂತೆ ನೋಡಿಕೊಳ್ಳುವುದು ಮಾದಿಗರ ಜವಾಬ್ದಾರಿಯಾಗಿರುತ್ತದೆ.

ಕೋಣನ ಬಲಿ ನಡೆಯುವಾಗ ಬೇರೆ ಊರಿನವರನ್ನು ಹತ್ತಿರ ಬಿಡುವುದಿಲ್ಲ. ಏಕೆಂದರೆ ಕೋಣನ ರಕ್ತ ಅವರಿಗೆ ಸಿಡಿದರೆ ಊರಿನ ಹುಲುಸು ಪರ ಊರಿನವರಿಗೆ ಸೇರುತ್ತದೆ ಎಂಬ ನಂಬಿಕೆಯಿದೆ. ತಳವಾರ, ಬಾರಿಕರು, ಊರಿನ ಮುಖಂಡರು, ಮಾದಿಗರು ಮುಂತಾದವರು ಕೋಲುಗಳನ್ನು ಹಿಡಿದುಕೊಂಡು ಸುತ್ತಲೂ ನಿಂತಿರುತ್ತಾರೆ. ಕೋಣವನ್ನು ಕಡಿಯಲೆಂದು ನೇಮಿಸಿದ ವ್ಯಕ್ತಿ ತನ್ನ ಮಚ್ಚಿನೊಂದಿಗೆ ತಯಾರಾಗಿದ್ದು, ಕೋಣವನ್ನು ಒಂದೇ ಏಟಿಗೆ ಹೊಡೆಯಬೇಕು. ಆದರೆ ತೀರಾ ಕೊಬ್ಬಿದ ಕೋಣವಾದ್ದರಿಂದ ಒಂದೇ ಏಟಿಗೆ ಕಡಿಯಲಾಗುವುದಿಲ್ಲ. ಎರಡು ಮೂರು ಹೊಡೆತಕ್ಕೆ ಕಡಿಯುತ್ತಾರೆ. ಕಡಿಯುವ ಮೊದಲು ದೇವಿಗೆ ಹಾಗೂ ಕೋಣನ ಕಾಲಿಗೆ ಮಚ್ಚಿನೊಂದಿಗೆ ನಮಸ್ಕರಿಸಿ ಕಡಿಯುತ್ತಾನೆ. ಹೀಗೆ ಕಡಿದ ತಕ್ಷಣ ಅದರ ತಲೆಯನ್ನು ಅದರ ಮುಂದಿನ ಬಲಗಾಲೊಂದನ್ನು ಕಡಿದು ಬಾಯಲ್ಲಿ ಸಿಕ್ಕಿಸಿ ತಂದು ಆಗಲೆ ನಿರ್ಮಿಸಿದ್ದ ಲಕ್ಕಿಯ ಸೊಪ್ಪಿನ ಗುಡಿಸಲಲ್ಲಿ ಅಮ್ಮನ ಎದುರಿಗೆ ಮುಖ ಮಾಡಿ ತಲೆಯ ಮೇಲೆ ದೀಪ ಹಚ್ಚಿ ದೀಪವು ಆರದಂತೆ ನೋಡಿಕೊಳ್ಳುತ್ತಾರೆ. ಕೋಣ ಕಡಿದವನಿಗೆ ಊರಿನ ಮುಖಂಡರು ಬಟ್ಟೆ ಪಂಚೆಯನ್ನು ಕೊಡುತ್ತಾರೆ. ಕೋಣನ ಹೊಟ್ಟೆಯಲ್ಲಿನ ತಿಂದ ಆಹಾರವನ್ನು ತೆಗೆದುಕೊಂಡು ಈಗಾಗಲೇ ತಯಾರು ಮಾಡಿಕೊಂಡು ಇಟ್ಟಿದ್ದ ಚರಗದ ಅನ್ನಕ್ಕೆ ಬೆರೆಸುತ್ತಾರೆ. ನಂತರ ಹೊಸ ಈಚಲು ಮರದ ಪುಟ್ಟಿಗಳಲ್ಲಿ ತುಂಬಿಕೊಂಡು ಮಾದಿಗರು ಊರಿನ ಸುತ್ತಲೂ ಹುಲಿಗ್ಯೊ ಹುಲಿಗ್ಯೊ ಎನ್ನುತ್ತಾ ಚರಗವನ್ನು ಚೆಲ್ಲುತ್ತಾರೆ. ಅಲ್ಲದೆ ಊರಿನ ಜನರು ಸ್ವಲ್ಪ ಚರಗವನ್ನು ತಗೆದುಕೊಂಡು ಹೋಗಿ ತಮ್ಮ ಹೊಲಗಳಿಗೆ ಚರಗ ಚೆಲ್ಲುತ್ತಾರೆ. ಹೀಗೆ ಮಾಡಿದರೆ ಊರಿನ ಅಭಿವೃದ್ಧಿಯಾಗುತ್ತದೆ. ಮಳೆ ಬೆಳೆ ಚೆನ್ನಾಗಿ ಆಗುತ್ತದೆ ಎಂಬುದು ಅವರ ನಂಬಿಕೆಯಾಗಿದೆ.

ಭೂತಬಲಿ ತಿರುಗುವುದು

ಮಾರಮ್ಮ ದೇವಿಯ ಜಾತ್ರೆಯಲ್ಲಿ ಕೋಣನ ಬಲಿಯಾದ ನಂತರ ಬೆಳಗಿನ ಜಾವ ಸುಮಾರು ನಾಲ್ಕು ಗಂಟೆಯ ಸಮಯದಲ್ಲಿ ಭೂತಬಲಿ ತಿರುಗುವುದು ಭಯಂಕರವಾದ ಆಚರಣೆಯಾಗಿರುತ್ತದೆ. ಈ ಭೂತಬಲಿ ತಿರುಗುವವರು ಮಾದಿಗ ಸಮುದಾಯದ ವರಾಗಿರುತ್ತಾರೆ. ಮಾದಿಗ ಸಮುದಾಯದವರು ಪ್ರತಿ ಜಾತ್ರೆಗೆ ಬಂದು ಮನೆಯವರು ಭೂತಬಲಿ ತಿರುಗಬೇಕೆಂದು ನಿಗದಿ ಮಾಡಿಕೊಂಡಿರುತ್ತಾರೆ. ಅದರಂತೆ ಭೂತಬಲಿ ತಿರುಗುವವರು ಶುಚಿಯಾಗಿ ಒಪ್ಪತ್ತಿನಿಂದ ಇರಬೇಕಾಗುತ್ತದೆ. ಯಾವುದೇ ರೀತಿಯ ಅಮಂಗಲ ಕಾರ್ಯಗಳಲ್ಲಿ ತೊಡಗುವಂತಿಲ್ಲ ಮಡದಿಯಿಂದ ದೂರವಿರಬೇಕು. ಕೋಣನ ಬಲಿಯಾದ ನಂತರ ಬೆತ್ತಲೆಯಾಗಿ ಸೊಂಟಕ್ಕೆ ಬೇವಿನ ಸೊಪ್ಪನ್ನು ಕಟ್ಟಿಕೊಂಡು ಇಡೀ ಊರನ್ನು ಒಂದು ಸುತ್ತು ಹುಲಿಗ್ಯೊ ಹುಲಿಗ್ಯೊ ಎನ್ನುತ್ತಾ ಚರಗವನ್ನು ಊರಿನ ಸುತ್ತಲೂ ಚೆಲ್ಲುತ್ತಾ

ತಿರುಗಬೇಕಾಗುತ್ತದೆ. ಈತನ ಮಡದಿಯೂ ನಿಷ್ಠೆಯಿಂದ ಇದ್ದು ತನ್ನ ಗಂಡನು ಭೂತಬಲಿ ತಿರುಗಿ ಬರುವವರೆಗೆ ದೇವಿಯ ಗುಡಿಯ ಮುಂದೆ ಘಟಿಯನ್ನು ಇಟ್ಟುಕೊಂಡು ತನ್ನ ಮೂಗಿನ ಮೂಗುತಿಯನ್ನು ನಿಲ್ಲಿಸದಂತೆ ತಿರುಗಿಸಬೇಕಾಗುತ್ತದೆ. ಹೀಗೆ ಮಾಡಿದರೆ ತನ್ನ ಗಂಡ ಸುರಕ್ಷಿತವಾಗಿ ಮರಳಿಬರುತ್ತಾನೆ. ಯಾವುದೇ ದುಷ್ಟಶಕ್ತಿಗಳಿಂದ ಗಂಡನಿಗೆ ಏನು ತೊಂದರೆಯಾಗದಂತೆ ದೇವತೆ ಕಾಪಾಡುತ್ತಾಳೆ ಎಂಬುದು ಭಕ್ತರ ನಂಬಿಕೆಯಾಗಿದೆ. ಹೆಂಡತಿಯು ಮೂಗಿನ ಮೂಗುತಿಯನ್ನು ತಿರುವುತ್ತಿರುವಾಗ ಸಲೀಸಾಗಿ ತಿರುಗಿದರೆ ತನ್ನ ಗಂಡನಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ ತನ್ನ ಗಂಡ ಸುರಕ್ಷಿತವಾಗಿ ಮರಳಿ ಬರುತ್ತಾನೆ. ಎಂದು ಹಿರಿಯರ ನಂಬಿಕೆಯಾಗಿರುತ್ತದೆ. ಹೀಗೆ ಭೂತಬಲಿ ತಿರುಗಿ ಬಂದವನಿಗೆ ಹಾಗೂ ಹೆಂಡತಿಗೆ ಊರಿನ ಮುಖಂಡರು ಹೊಸಬಟ್ಟೆ ಉಡುಗೊರೆ ಕಾಣಿಕೆಯನ್ನು ಕೊಟ್ಟು ಕಳಿಸುತ್ತಾರೆ. ಈ ಮಾರಮ್ಮನ ಜಾತ್ರೆಯಲ್ಲಿ ಈ ಆಚರಣೆಯು ಪ್ರಮುಖವಾದ ಆಚರಣೆಯಾಗಿರುತ್ತದೆ.

ಚರಗ ಚೆಲ್ಲುವುದು

ಮಾರಮ್ಮನ ಜಾತ್ರೆಯಲ್ಲಿ ಚರಗ ಚೆಲ್ಲುವುದು ಬಹಳ ಮಹತ್ವದ ಒಂದು ಪ್ರಸಂಗವೆಂದರೆ ಮಾದಿಗರು ಊರಿನ ಸುತ್ತಲೂ ಚರಗವನ್ನು ಚೆಲ್ಲುವುದು. ದೇವಿಯ ಮೆರವಣಿಗೆಯಲ್ಲಿ ಆಗಾಗ ದೃಷ್ಟಿಮರಿ ಬಾನದ ಮರಿ ಮುಂತಾದವುಗಳನ್ನು ಬಲಿ ಕೊಡುತ್ತಾರೆ. ಈ ಸಂದರ್ಭದಲ್ಲಿ ಬಲಿಗಳನ್ನು ದುಷ್ಟಶಕ್ತಿಗಳು ಸ್ವೀಕರಿಸುತ್ತವೆಂದು ನಂಬಲಾಗುತ್ತದೆ. ಅಂದರೆ ಚರಗವನ್ನು ಚೆಲ್ಲುವವರಿಗೆ ಯಾವುದೇ ತೊಂದರೆಯಾಗದೆ ಇದ್ದರೆ ಊರಿಗೆ ಸುಖ ಸಮೃದ್ಧಿ ದೊರಕುತ್ತದೆಂದು ಜನರು ನಂಬುತ್ತಾರೆ.

ಹುಲಿಗ್ಯೊ ಹುಲಿಗ್ಯೊ ಎಂಬುದರ ಬಗ್ಗೆ ಕೆಲವು ವಿದ್ವಾಂಸರು ಚರ್ಚೆ ಮಾಡಿದ್ದಾರೆ. ಹೊಲಗದ್ದೆಗಳಿಗೆ ಅನ್ನ ಮುಂತಾದ ಚರಗ ಚೆಲ್ಲುವಾಗಲೂ ಹುಲಿಗ್ಯೊ ಹುಲಿಗ್ಯೊ ಓಲಿಗ್ಯೊ ಹೀಗೆ ಮುಂತಾದ ವೈವಿಧ್ಯಮಯ ಪ್ರಯೋಗಗಳು ಸಿಗುತ್ತವೆ. ಇವೆಲ್ಲವುಗಳ ಅರ್ಥ ಹುಲುಸಾಗಲಿ, ತಾವು ಮಾಡಿದ ಕಾರ್ಯದ ಫಲ ವೃದ್ಧಿಯಾಗಲಿ ಎಂಬುದೇ ಹೆಚ್ಚಳದ ಮಂತ್ರವಾಗಿದೆ. ಅಷ್ಟೇ ಅಲ್ಲದೆ ದವಸದ ಧಾನ್ಯಗಳನ್ನು ಅಳೆಯುವಾಗ ಎಣಿಕೆಯಲ್ಲಿ ಒಂದನ್ನು ಲಾಭ ಎಂದು, ಏಳನ್ನು ಹುಲಿಗ್ಯೊ ಎನ್ನುತ್ತಾರೆ. ಏಳು ಎನ್ನವುದು ಬೀಳು ಆಗುವುದರಿಂದ ಅದರ ಉಚ್ಚಾರ ನಿಷೇಧದ ಬದಲಾಗಿ ಹುಲಿಗ್ಯೊ ಎನ್ನುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಹುಲಿಗ್ಯೊ ಘೋಷಣೆ ವಿವಿಧ ರೂಪಗಳು ಫಲೋತ್ಪತ್ತಿ ಹೆಚ್ಚಳದ ಮಂತ್ರ ಶಬ್ದಗಳೂ, ಶುಭ ಸೂಚಕಗಳೂ ಆದ ಅವ್ಯಯಗಳಿರಬೇಕೆಂದೆನಿಸುತ್ತದೆ.

'ಹುಲಿಗ್ಯೊ' ಎಂದರೆ ನಮ್ಮ ನಾಡಿನ ರೈತರು ಸುಗ್ಗಿ ಮಾಡುವಾಗ, ಕಣಗಳಲ್ಲಿ ತೂರುವಾಗ, ತೆನೆ ತುಳಿಸುವಾಗ ಹೊಲಗಳಿಗೆ ಚರಗ ಚೆಲ್ಲುವಾಗ ಅನೇಕ ಸಂದರ್ಭಗಳಲ್ಲಿ ಹುಲಿಗ್ಯೊ ಎಂದು ಕೂಗುತ್ತಿರುವುದು ಸಾಮಾನ್ಯವಾಗಿರುತ್ತದೆ. ಅಂದರೆ ಹುಲುಸು ಸಮೃದ್ಧವಾಗಲಿ ಹೆಚ್ಚು ಫಲವನ್ನು ಕೊಡು ಎಂದು ಇದಕ್ಕೆ ಅರ್ಥವಾಗುತ್ತದೆ. ಸಮೃದ್ಧಿ ಸುಖಗಳಿಗಾಗಿ ಮಾಡುವ ಜಾತ್ರೆಯಲ್ಲಿಯೂ ಸಹ ಕೋಣನ ರಕ್ತವನ್ನು ಅನ್ನದಲ್ಲಿ ಕಲಸಿ ಊರಿನ ಸುತ್ತಲೂ ಚೆಲ್ಲುವ ಚರಗದ ಅನ್ನವನ್ನು ಹುಲಿಗ್ಯೊ ಎಂದೇ ಹುಗ್ಗುತ್ತಾರೆ. ಒಟ್ಟಾರೆಯಾಗಿ ಹೇಳುವಾವುದಾದರೆ ಹುಲಿಗ್ಯೊ ಎಂದರೆ ಮಾನವನ ಸಮೃದ್ಧಿಯ ಸಂಕೇತವೆಂದು ಹೇಳಬಹುದು.

ಮೂಲದಲ್ಲಿ ಪಶುಪಾಲಕರ ಆರಾಧಕನಾದ ಜೋಕುಮಾರನು ನಮ್ಮ ಗ್ರಾಮೀಣ ಸಮಾಜದ ಫಲವತ್ತತೆಗಾಗಿ ಆರಾಧನೆಗೊಳ್ಳುವ ದೇವರಾಗಿದ್ದಾನೆ. ಜೋಕುಮಾರನಿಗೂ ಮಾದಿಗರಿಗೆ ಸಂಬಂಧವಿದೆ. ಬಲಿಯ ಪಂಥವೂ ಚರಗದ ಪಂಥವೇ ಆಗಿದೆ. ಜೋಕುಮಾರನ ಸಾಯುವಾಗ ಮಾದಿಗರ ಹೆಂಗಸರಿಂದ ಹೊಡೆಸಿಕೊಂಡು ಸಾಯುತ್ತಾನೆ.

ರೈತನು ವರ್ಷದ ಹಲವಾರು ಸಂದರ್ಭಗಳಲ್ಲಿ ಹೊಲಗಳಲ್ಲಿ ಚೆಲ್ಲುವ ಚರಗಳಕ್ಕೂ ಮಾರಮ್ಮನ ಹಬ್ಬಗಳಲ್ಲಿ ಮಾದಿಗರು ಬೆತ್ತಲೆಯಾಗಿ ಊರಿನ ಸುತ್ತಲೂ ಎರಚುವ ಚರಗಕ್ಕೂ ನಿಕಟ ಸಂಬಂಧವಿದೆ. ಜೋಕುಮಾರನ ಹುಣ್ಣಿಮೆಗೆ ಹೊಲೆಯನ ಹುಣ್ಣಿಯೆಂದೇ ಹೆಸರಿದೆ. ಗೌರಿ–ಗಣೇಶ ಜೋಕುಮಾರನಿಗಿರುವ ಸಂಬಂಧದ ವೈಜ್ಞಾನಿಕ ವಿಶ್ಲೇಷಣೆಯಾಗುವಂತಾದರೆ ಮಾದಿಗರ ಜತೆ ಅವರ ಸಂಬಂಧದ ವಿವರಗಳು ಹೊರಬೀಳುವ ಶಕ್ಯತೆ ಇದೆ. ಜೋಕುಮಾರ ಸತ್ತ ಏಳು ದಿವಸ ಅಥವಾ ಒಂದು ತಿಂಗಳು ಇಡೀ ಊರಿಗೆ ಊರೇ ಅಳಲು ಆಚರಿಸುತ್ತಾರೆ. ಗೌರಿ ಬಂದು ಹೋಗಿ ಗಣೇಶ ನೀರಿನಲ್ಲಿ ಮುಳುಗಿ ತಮಗೆ ಮಳೆ ಮತ್ತು ಮಕ್ಕಳು ತರುವ ಜೋಕುಮಾರ ಹುಟ್ಟಿದ ಏಳೇ ದಿನಕ್ಕೆ ಕೊಲೆಯಾಗಿ ಮರಣ ಹೊಂದುವನು. ಈ ಎಲ್ಲಾ ದುಃಖದ ಸರಮಾಲೆಗಳು ಜನಪದರ ಗಾಢ ನೋವಿಗೆ ಅಭಿವ್ಯಕ್ತಿ ನೀಡುತ್ತವೆ. ಆದರೆ ಮನಸ್ಸನ್ನು ಕಲುಕುತ್ತವೆ. ಅದಕ್ಕಾಗಿ ಒಂದು ತಿಂಗಳು ಅಳಲು ಆಚರಿಸುತ್ತಾರೆ. ಈ ತಿಂಗಳಲ್ಲಿ ಯಾವುದೇ ಶುಭಕರವಾದ ಮಂಗಳ ಕಾರ್ಯಗಳನ್ನು ಮಾಡುವಂತಿಲ್ಲ. ಅತ್ತೆ ಸೊಸೆಯರು (ಹೊಸ ಸೊಸೆ) ಒಂದೇ ಮನೆಯಲ್ಲಿ ಇರುವಂತಿಲ್ಲ. ತವರಿಗೆ ಕಳಿಸಲಾಗುತ್ತದೆ. ಕೊಡುಕೊಳ್ಳುವ ಯಾವುದೇ ಹೆಣ್ಣು ಗಂಡಿನ ವ್ಯವಹಾರ ಮಾಡುವಂತಿಲ್ಲ. ಅಷ್ಟೇ ಅಲ್ಲ ಈ ವಿಷಯ ಮಾತನಾಡುವಂತೆಯೂ ಇಲ್ಲ. ಈ ಸಂಪ್ರದಾಯ ಜನಪದರಲ್ಲಿ ಎಷ್ಟು ಗಾಢವಾಗಿ ಬೇರೂರಿದೆ ಎಂದರೆ ಚೈತ್ರ, ವೈಶಾಖ, ಜ್ಯೇಷ್ಠ ಮಾಸಗಳಲ್ಲಿ ಮದುವೆಯಾದ ಹೆಣ್ಣುಮಕ್ಕಳಿಗೆ ಪ್ರಸ್ತ (ಶೋಭನ ಕಾರ್ಯ) ಮಾಡಿಕೊಡುವುದು ಮಾತ್ರ ಗೌರಿ ಹಬ್ಬದಲ್ಲಿ ಎಂಬುದನ್ನು ನಾವು ಇಲ್ಲಿ ಪ್ರಾಸಂಗಿಕವಾಗಿ ನಂಬಬಹುದು. ಬೆದೆಬಡುಕ ಜೋಕುಮಾರ ಈ ಅವಧಿಯಲ್ಲಿ ಹುಟ್ಟುವುದು ಭೂಮಿತಾಯಿ ಹೊಡೆ ಹೊಡೆಯಲು ತಯಾರಾಗಿರುವುದು, ಹೆಣ್ಣು ಗಂಡಿಗೆ

ಪ್ರಸ್ತ ಮಾಡಿಕೊಡುವುದು ಈ ಅವಧಿಯ ಹಂಗಾಮನ್ನು ಸೂಚಿಸುವಂತೆ ಕಾಣುತ್ತದೆ. ಹೊಲಗಳ ಹುಲಿಸಿಗೆ ರೈತರು ಚೆಲ್ಲುವ ಮೊದಲ ಚರಗ ಜೋಕುಮಾರನದ್ದು ಎಂದು ಹೇಳಬಹುದು.

ಮಾರಮ್ಮನ ಜಾತ್ರೆಗಳಲ್ಲಿ ಬಹಳ ಒಂದು ಮಹತ್ವದ ಪ್ರಸಂಗವೆಂದರೆ ಮಾದಿಗರು ಊರಿನ ಸುತ್ತಲೂ ಚರಗವನ್ನು ಚೆಲ್ಲುವುದು. ದೇವಿಯ ಹೆಸರಿನಲ್ಲಿ ರಾತ್ರಿ ಸುಮಾರು ಮೂರು ಗಂಟೆಯ ಸಮಯದಲ್ಲಿ ಕೋಣವನ್ನು ಬಲಿ ಕೊಟ್ಟು ಅದರ ಹೊಟ್ಟೆಯಲ್ಲಿನ ತಿಂದ ಆಹಾರದ ಕರುಚನ್ನು ಕಿತ್ತುಕೊಂಡು ಊರಿಲನಲ್ಲಿ ನೀಡಿದ ಕಾಳನ್ನು ಬೇಯಿಸಿ ಎರಡನ್ನು ಮಿಶ್ರಣ ಮಾಡಿ ಊರಿನ ಸುತ್ತಲೂ ಹುಲಿಗ್ಯೊ ಎಂದು ಕೂಗುತ್ತಾ ಚೆಲ್ಲುತ್ತಾರೆ. ಈ ಸಂದರ್ಭದಲ್ಲಿ ಬೇರೆ ಊರಿನವರು ಹತ್ತಿರದಲ್ಲಿ ಸುಳಿದಾಡುವಂತಿಲ್ಲ ಈ ರೀತಿಯ ಕಟ್ಟುನಿಟ್ಟನ್ನು ಏಕೆ ಪಾಲಿಸುತ್ತೀರಿ ಎಂದು ಹಿರಿಯರನ್ನು ಕೇಳಿದಾಗ ಈ ರೀತಿಯಾಗಿ ಹೇಳುತ್ತಾರೆ. ಕೋಣವನ್ನು ಕಡಿಯುವ ಸಂದರ್ಭದಲ್ಲಿ ಕೋಣನ ರಕ್ತ ಬೇರೆ ಊರಿನವರಿಗೆ ಸಿಡಿಯುವಂತಿಲ್ಲ. ಒಂದು ವೇಳೆ ಈ ರೀತಿಯ ರಕ್ತ ಸಿಡಿದ ವ್ಯಕ್ತಿ ಊರಿನ ಬುಡ್ಡಿ ಕಲ್ಲಿನ ಹತ್ತಿರ ನಿಂತು ನಾನು ನಿಮ್ಮೂರಿನ ಹುಲುಸನ್ನು ಒಯ್ಯುತ್ತೇನೆ ಎಂದು ಮೂರು ಸಲ ಕೂಗಿ ಹೋದರೆ ಈ ಹುಲುಸು ಆ ಊರಿಗೆ ಸೇರುತ್ತದೆ ಎಂದು ನಂಬಿದ ಜನಪದರು ಆ ವ್ಯಕ್ತಿಯನ್ನು ಊರು ತಲುಪುವುದರ ಒಳಗಾಗಿ ಓಡಿಸಿಕೊಂಡು ಹೋಗಿ ಕಡಿಯುತ್ತಾರಂತೆ. ಆದ್ದರಿಂದ ಈ ಸಂದರ್ಭದಲ್ಲಿ ಬೇರೆ ಊರಿನವರನ್ನು ಕೋಣವನ್ನು ಕಡಿಯುವ ಸಂದರ್ಭದಲ್ಲಿ ಹತ್ತಿರ ಬಿಟ್ಟುಕೊಳ್ಳುವುದಿಲ್ಲ. ಸುತ್ತಲು ಕೋಲುಗಳನ್ನು ಹಿಡಿದುಕೊಂಡು ಊರಿನ ಜನರು ಕೋಣವನ್ನು ಕಡಿದು ಚರಗವನ್ನು ಚೆಲ್ಲುವವರೆಗೂ ಊರಿನ ಸುತ್ತಲೂ ನಿಂತಿರುತ್ತಾರೆ.

ಚರಗವನ್ನು ಚೆಲ್ಲುವುದಕ್ಕೆ ಸುಮಾರು ೪೦ ರಿಂದ ೫೦ ಹೊಸ ಈಚಲು ಮರದ ಪುಟ್ಟಿಗಳನ್ನು ಖರೀದಿಸಿ ತಂದಿರುತ್ತಾರೆ. ಈ ಪುಟ್ಟಿಗಳಿಂದ ಊರಿನ ಸುತ್ತಲೂ ಮಾದಿಗರು ಚರಗವನ್ನು ಚೆಲ್ಲುತ್ತಾರೆ. ನಂತರ ಉಳಿದ ಚರಗವನ್ನು ಊರಿನ ಪ್ರತಿ ಮನೆಯವರು ಸ್ವಲ್ಪ ಸ್ವಲ್ಪ ಚರಗವನ್ನು ತಮ್ಮ ಹೊಲಗಳಿಗೆ ಸುತ್ತಲೂ ಚೆಲ್ಲುತ್ತಾರೆ. ಹೀಗೆ ಮಾಡುವುದರಿಂದ ಊರು ಶಾಂತವಾಗುತ್ತದೆ, ಸುಖ ಸಮೃದ್ಧಿಯಾಗುತ್ತದೆ, ಪಸಲುಗಳು ಹುಲುಸಾಗಿ ಬೆಳೆಯುತ್ತವೆ ಎಂಬುದು ಅವರ ನಂಬಿಕೆಯಾಗಿದೆ.

ಹರಕೆ ಒಪ್ಪಿಸುವುದು

ತಮ್ಮನ್ನು ಕಾಪಾಡುವ ದೇವತೆಗಾಗಿ ಜನರು ಯಾವ ತ್ಯಾಗ ಮಾಡಲೂ ಸಿದ್ಧ, ಯಾವ ಕಷ್ಟ ಅನುಭವಿಸಲೂ ಹಿಂಜರಿಯುವುದಿಲ್ಲ. ಅದಕ್ಕಾಗಿ ನಾನಾ ರೀತಿಯ ಹರಕೆ ಕಟ್ಟಿಕೊಂಡು, ನಿಯತ್ತಿನಿಂದ ಹರಕೆ ತೀರಿಸುತ್ತಾರೆ. ಹರಕೆ ತೀರಿಸದಿದ್ದರೆ ಏನೆಲ್ಲ ಕಷ್ಟ ಪ್ರಾಪ್ತವಾಗುತ್ತದೆ ಎಂಬ ಭಯ ಜನರನ್ನು ಆವರಿಸಿದೆ. ಅಂದರೆ ಭಕ್ತರು ದೇವತೆಗಳಿಗೆ

ಹೇಳಿಕೊಂಡ ಕಾರ್ಯ ಸಿದ್ಧಿಯಾದಾಗ ಅರ್ಪಿಸುವ ಕಾಣಿಕೆಯೇ ಹರಕೆ. ಹರಕೆಯು ವಸ್ತು, ಹಣ, ಬೆಳ್ಳಿ ಮುಖ, ಬೆಳ್ಳಿಯ ಛತ್ರಿ, ಪ್ರಾಣಿಬಲಿ ಹೀಗೆ ಯಾವ ರೂಪದಲ್ಲಾದರೂ ಇರಬಹುದು. ಹೊತ್ತ ಹರಕೆ ಈಡೇರಿಸಲು ಮೊದಲೆ ಕುರಿಯನ್ನು ಸಾಕಿರುತ್ತಾರೆ. ಇಲ್ಲವೆ ಖರೀದಿಸಿ ತಂದಿರುತ್ತಾರೆ. ಹೀಗೆ ಹರಕೆಯನ್ನು ತೀರಿಸಲು ಆ ಕುರಿಯನ್ನು ತೆಗೆದುಕೊಂಡು ಹೋಗಿ ದೇವಿಯ ಗುಡಿಯ ಮುಂದೆ ಬಲಿ ನೀಡುವುದರ ಮೂಲಕ ಅರ್ಪಿಸಿ ಎಡೆ ಮಾಡಿ ಮೊದಲು ದೇವತೆಗೆ ಸಲ್ಲಿಸಿ, ನಂತರ ತಾವು ತಿಂದುಂಡು ಬರುವುದು ವಾಡಿಕೆಯಾಗಿದೆ. ಹೀಗೆ ಬಂದಂತಹ ಭಕ್ತಾದಿಗಳೆಲ್ಲ ಇದೇ ರೀತಿಯಲ್ಲಿ ಕೋಣ ಬಲಿಯಾದ ನಂತರ ಬೇವಿನ ಸೊಪ್ಪಿನ ಉಡುಗೆಯ ಮೂಲಕ ತಮ್ಮ ಹರಕೆಯನ್ನು ತೀರಿಸುತ್ತಾರೆ.

ದುರುಗಿಯರ ಊಟ

ದುರುಗಿಯರ ಊಟ ಎಂಬ ವಿಶೇಷ ಕಾರ್ಯಕ್ರಮ ನಡೆಯುತ್ತದೆ. ಅಂದರೆ ಐದು ಮಂದಿ ಮುತ್ತೈದೆಯರು ಸ್ನಾನ ಮಾಡಿ ತಮ್ಮ ಕೂದಲುಗಳನ್ನು ಕಟ್ಟಿಕೊಳ್ಳದೆ ಸುತ್ತಲೂ ಕರಿಯ ಕಂಬಳಿಯನ್ನು ಮುಚ್ಚಿಕೊಂಡು ಊಟ ಮಾಡುತ್ತಾರೆ. ಈ ದುರುಗೆಯರ ಊಟ ಜಾತ್ರೆಯಲ್ಲಿ ಅತ್ಯಂತ ಪ್ರಧಾನವಾದ ಪ್ರಸಂಗವೆಂದು ಹೇಳಬಹುದು.

ದುರುಗಮ್ಮ ಮರಿಯಮ್ಮನ ಗುಡಿಯ ಎದುರುಗಡೆ ಮಾತಂಗಿಯ ಗುಡಿ ಇದೆ. ಈ ಗುಡಿಯ ಮುಂದೆ ಐದು ಜನ ಮುತ್ತೈದೆಯರು ಊರಿನ ಚೆನ್ನಬಸಪ್ಪ ಗೌಡ ಮನೆಯವರು ಮಾಡಿ ತಂದ ಹೋಳಿಗೆ ಊಟವನ್ನು ಈ ಐದು ಮಂದಿ ಸ್ತ್ರೀಯರು ತಮ್ಮ ತಲೆಯ ಕೂದಲುಗಳನ್ನು ಕಟ್ಟಿಕೊಳ್ಳದೆ ದುರ್ಗೆಯ ಅವತಾರದಲ್ಲಿ ಊಟವನ್ನು ಮಾಡುತ್ತಾರೆ. ಅವರು ಉಂಡುಳಿದ ಊಟ ಪ್ರಸಾದದಂತೆ ವಿನಿಯೋಗವಾಗುತ್ತದೆ. ಇವರು ತಟ್ಟೆಗಳನ್ನು ಬಳಸದೆ ಎಲ್ಲ ದುರ್ಗೆಯರು ಸೇರಿ ಬರಿ ಕಲ್ಲಿನ ಮೇಲೆ ಹಾಕಿದ ಹೋಳಿಗೆ ಅನ್ನವನ್ನು ಊಟ ಮಾಡುವುದು ಆದಿಮ ಸಮಾಜ ಸ್ಥಿತಿಯನ್ನು ಕಣ್ಣಿಗೆ ಕಟ್ಟುತ್ತದೆ. ಬುಡಕಟ್ಟು ಸಮುದಾಯದಲ್ಲಿ ಸಾಮೂಹಿಕ ದುಡಿಮೆ, ಸಾಮೂಹಿಕ ಭೋಜನ, ಪಾತ್ರೆ, ಮಡಕೆಗಳನ್ನು ಕಂಡ ಹಿಡಿದಿರಲಾರದ ಹಂತ ಮಾತೆಯರಿಗೆ ಸಲ್ಲುತ್ತಿದ್ದ ಪ್ರಥಮ ಸ್ಥಾನ ಇವೆಲ್ಲವೂ ದುರುಗಿಯರ ಸಂದರ್ಭದಿಂದ ಸೂಚಿತವಾಗುತ್ತದೆ. ಇಂಥ ಅಮೂಲ್ಯವಾದ ಆಚರಣೆಗಳು ನಮ್ಮ ನಾಡಿನ ಜನಸಾಮಾನ್ಯರಲ್ಲಿ ಬದುಕಿದ್ದು, ವೈಜ್ಞಾನಿಕ ಅಧ್ಯಯನದ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ದುರ್ಗಾ ದೇವಿಗೆ ವಿಂಧ್ಯಾವಾಸಿನಿ ಎಂಬ ಬಿರುದಿದೆ. ಹರಿವಂಶದಲ್ಲಿ ಆಕೆ ವಿಂಧ್ಯಾದಲ್ಲಿಯ ಶುಂಭ ಮತ್ತು ನಿಶುಂಭರನ್ನು ಕೊಂದು ಸಾಮ್ರಾಜ್ಞಿಯಾಗಿ ವರ ನೀಡುವಳು. ಪಶುಬಲಿ ಪ್ರಿಯಳೂ ಆಗಿದ್ದಾಳೆ.

ನಂಬಿಕೆಗಳು ಮತ್ತು ಹರಕೆಗಳು

ಮಾರಮ್ಮ ದೇವಿಯ ಭಕ್ತಾದಿಗಳು ತಮ್ಮ ಕುಟುಂಬದಲ್ಲಿ ಬರುವ ಅನೇಕ ಸಮಸ್ಯೆಗಳ ಮತ್ತು ಕಷ್ಟಗಳ ಪರಿಹಾರಕ್ಕಾಗಿ ದೇವಿಗೆ ಹರಕೆ ಹೊರುತ್ತಾರೆ. ಕುಟುಂಬದ ಸ್ತ್ರೀಪುರುಷರಿಗೆ

ಮತ್ತು ಮಕ್ಕಳಿಗೆ ಕಾಯಿಲೆಗಳಾದಾಗ ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಸಂಭವಿಸಿದಾಗ, ಜಾನುವಾರುಗಳ ರೋಗಗಳಿಗೆ, ಕಣ್ಣಿನ ದೋಷಗಳಿಗೆ, ಹೆಣ್ಣು ಮಕ್ಕಳಿಗೆ ವರ ಸಿಕ್ಕದೇ ಇರುವಾಗ, ತುಂಬ ವರ್ಷಗಳವರೆಗೆ ಮಕ್ಕಳಾಗದೇ ಇದ್ದವರು ನ್ಯಾಯಾಲಯದಲ್ಲಿರುವ ವ್ಯಾಜ್ಯ, ಭೂವಿವಾದಗಳ ಪರಿಹಾರಗಳಿಗೆ ದೇವಿಗೆ ಹರಕೆ ಹೊತ್ತು ಒಪ್ಪಿಸುತ್ತಾರೆ.

ಬೇವುಡಿಗೆ

ಬೇವು ಅಥವಾ ಲಕ್ಕಿ ಸೊಪ್ಪಿನಿಂದ ದಾರದಿಂದ ಹೆಣೆದು ಕುತ್ತಿಗೆಯಿಂದ ಪಾದಗಳವರೆಗೆ ಕಟ್ಟಿಕೊಳ್ಳುತ್ತಾರೆ. ಬೇವುಡಿಗೆಯ ಹೊಸ ಬಟ್ಟೆಯನ್ನು ಸುತ್ತಿಕೊಂಡು ಇರುವ ಮನೆಯಿಂದ ದೇವಿಯ ಗುಡಿಯವರೆಗೆ ಮುತ್ತೈದೆಯರ ಆರತಿಯೊಂದಿಗೆ ಹಲಗೆಯನ್ನು ಬಾರಿಸುತ್ತಾ ಹಿಂದೆ ಬೇವುಡಿಗೆಯ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ದೇವಿಯ ಗುಡಿಯ ಹತ್ತಿರ ಬಿಚ್ಚಿ ಸ್ನಾನ ಮಾಡಿಸಿ ಹೊಸ ಬಟ್ಟೆಯನ್ನು ತೊಡಿಸಿ ಬಂದ ನಂಟರಸ್ಥರಿಂದ ಮುಯ್ ಮಾಡುವ ಶಾಸ್ತ್ರ ಮಾಡುತ್ತಾರೆ. ಅಂದರೆ ಒಂದು ಕರಿಯ ಕಂಬಳಿಯ ಗದ್ದಿಗೆ ಹಾಕಿ ಪೂಜೆಯನ್ನು ಮಾಡಿ ದೇವರಿಗೆ ಹರಕೆ ಒಪ್ಪಿಸುತ್ತಾರೆ.

ಗಾವು ಜಗಿಯುವುದು

ಮಾರಮ್ಮನ ಜಾತ್ರೆಯಲ್ಲಿ ಊರಿಗೆ ಯಾವುದೇ ರೀತಿಯ ತೊಂದರೆಯಾಗದೆ ರೋಗ ರುಜಿನಗಳು ಬಾರದಿರಲೆಂದು ಗಾವು ಸಿಗಿಯುವ ಆಚರಣೆಯನ್ನು ಮಾಡುತ್ತಾರೆ. ಗಾವು ಸಿಗಿಯುವ ಆಚರಣೆಯಲ್ಲಿ ಪೋತರಾಜನ ಪಾತ್ರ ಪ್ರಮುಖವಾಗಿರುತ್ತದೆ. ಪೋತರಾಜನನ್ನು ಗಾವು ಸಿಗಿಯಲಿಕ್ಕೆ ಊರಿನ ಮುಖಂಡರು ಒಂದು ವಾರ ಮುಂಚಿತವಾಗಿ ಮಲ್ಲಾಪುರಕ್ಕೆ ಹೋಗಿ ವೀಳ್ಯೆದೆಲೆ, ಅಡಿಕೆ, ಕಾಣಿಕೆಯನ್ನು ಕೊಟ್ಟು ಕರೆಸುವರು. ನಿಶ್ಚಿತ ದಿನದಂದು ನಾಲ್ಕೈದು ಜನ ಪೋತರಾಜರು ಬರುತ್ತಾರೆ. ಅವರಲ್ಲಿ ಒಬ್ಬನು ಗಾವನ್ನು ಸಿಗಿಯುತ್ತಾನೆ. ಉಳಿದವರು ಅವನ ಬೆಂಬಲಿಗರಾಗಿರುತ್ತಾರೆ. ದೇವತೆಗೆ ಗಾವು ಸಿಗಿಯಲಿಕ್ಕೆ ಊರಿನಲ್ಲಿ ಕುರಿ ಮೇಕೆಗಳಿರುವವರು ದೇವಿಯ ಜಾತ್ರೆಗೆ ಗಾವಿನ ಮರಿಸೇರಿ ನಾಲ್ಕೈದು ಬೇಟೆಮರಿಗಳನ್ನು ಕೊಟ್ಟಿರುತ್ತಾರೆ. ಅದರಲ್ಲಿ ಒಂದು ಕಪ್ಪು ಬಣ್ಣದ ಹೋತಮರಿಯನ್ನು ಗಾವು ಸಿಗಿಯುವುದಕ್ಕೆಂದು ಆಯ್ಕೆ ಮಾಡಿಕೊಂಡಿರುತ್ತಾರೆ.

ಗಾವನ್ನು ಜಗಿಯುವುದು ಗುರುವಾರ ಸಾಯಂಕಾಲ ಮೂರು ಗಂಟೆಯ ಸಮಯದಲ್ಲಿ ಉರುಮೆ, ಹಲಗೆಗಳನ್ನು ಬಾರಿಸುತ್ತಾ ಪೋತರಾಜನನ್ನು ಕರೆತರುವರು. ಗಾವು ಸಿಗಿಯುವುದು ಎಂದರೆ ಒಂದು ಕಪ್ಪು ಬಣ್ಣದ ಹೋತದ ಮರಿಯನ್ನು ಮನುಷ್ಯನೊಬ್ಬ ಹಲ್ಲುಗಳಿಂದ ಮೇಕೆಯ ತುಟಿಯನ್ನು ಕಚ್ಚಿ ಸಿಗಿದು ಅದರ ರಕ್ತವನ್ನು ಕುಡಿದು ಅದರ ಮಾಂಸವನ್ನು ಕಿತ್ತು ಸುತ್ತಲೂ ನೆರೆದ ಜನರಿಗೆ ತೋರಿಸುತ್ತಾನೆ. ಈ ಆಚರಣೆ ಮಾಡುವ ಭಕ್ತರು ಗಾವನ್ನು ಆಹಾರ ಎಂಬ ಅರ್ಥದಲ್ಲಿ ಬಳಸುತ್ತಾರೆ. ಗಾವು ಸಿಗಿಯುವ ವ್ಯಕ್ತಿ ಮಲ್ಲಾಪುರದ ಬಾರಿಕ

ಸಮುದಾಯದವರು. ಇದು ಅವರ ವಂಶ ಪಾರಂಪರ್ಯವಾದ ಹಕ್ಕು ಮತ್ತು ಈ ದೇವಿಯ ಜಾತ್ರೆ ಮಾಡಿದಾಗೆಲ್ಲ ಈ ಊರಿನವರೇ ಬರುತ್ತಾರೆ. ಹೋತಮರಿಯನ್ನು ಹಲ್ಲಿನಿಂದ ಸಿಗಿಯುವ ಈ ಕ್ರಿಯೆಯು ನಡೆಯುವಾಗ ದೈವ ಗಾವು ಸಿಗಿಯುವ ವ್ಯಕ್ತಿಯ ಮೈದುಂಬಿದೆ ಎಂದು ಭಾವಿಸುತ್ತಾರೆ. ಗಾವು ಸಿಗಿಯುವುದಕ್ಕೆ ಮೂರು ದಿನ ಮುಂಚಿತವಾಗಿ ಗಾವು ಸಿಗಿಯುವ ವ್ಯಕ್ತಿ ಉಪವಾಸವಿದ್ದು, ದಿನಕ್ಕೆ ಮೂರು ಏಲಕ್ಕಿಯನ್ನು ತಿನ್ನಬೇಕೆಂಬ ನಿಯಮವಿದೆ. ಇವನು ಯಾವುದೇ ಅಮಂಗಲ ಕಾರ್ಯದಲ್ಲಿ ತೊಡಗುವಂತಿಲ್ಲ. ಭಕ್ತಿಯಿಂದ ದೇವತೆಗೆ ನಡೆದುಕೊಳ್ಳುತ್ತಾನೆ. ಮನಃಶಾಸ್ತ್ರೀಯ ದೃಷ್ಟಿಯಿಂದ ನೋಡಿದಾಗ ವ್ಯಕ್ತಿ ಉಪವಾಸವಿದ್ದಾಗ ಅವನಿಗೆ ರೋಷ ಆವೇಶ ಹೆಚ್ಚಾಗುತ್ತದೆ. ಆ ವೇಳೆಯಲ್ಲಿ ಏನು ಸಿಕ್ಕಿದರೂ ತಿಂದು ಬಿಡುವಷ್ಟು ಕೆಚ್ಚು ಇರುತ್ತದೆ. ಬಹುಶಃ ಈ ಹಿನ್ನೆಲೆಯಲ್ಲಿ ಗಾವು ಸಿಗಿಯುವ ವ್ಯಕ್ತಿಯ ಶಕ್ತಿ ಸಂಚಯನಕ್ಕಾಗಿಯೇ ಉಪಾಸವಿರುವ ನಿಯಮವನ್ನು ಅನುಸರಿಸಿಕೊಂಡು ಬಂದಿರಬೇಕು.

ಪೋತರಾಜನ ಮುಖಕ್ಕೆ ಕುಂಕುಮ ಹಚ್ಚಿಕೊಂಡು ಉದ್ದನೆಯ ತಲೆಯ ಕೂದಲು, ಕೊರಿ ಮೀಸೆ, ಕೆಂಪು ಬಣ್ಣದ ಡ್ರಾಯರ್, ಸೊಟಕ್ಕೆ ಕರಿಯವಸ್ತ್ರದ ಬಟ್ಟೆ, ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು ಕುಣಿಯುತ್ತಾ ಮೈಗೆ ಚಾಟಿಯಿಂದ ಹೊಡೆದುಕೊಳ್ಳುತ್ತಾ ಬರುವರು. ಇವರ ಮುಂದೆ ಹಲಗೆಯನ್ನು ಬಾರಿಸುತ್ತಾ ಉರುಮೆ ಬಾರಿಸುತ್ತ ಬರುತ್ತಾರೆ. ಆಗ ಊರಿನವರು ಹೋತಮರಿಯನ್ನು ಬಚ್ಚಿಡುವರು. ಪೋತರಾಜನು ವಾದ್ಯದ ಸಂಕೇತದೊಂದಿಗೆ ಹೋತಮರಿಯನ್ನು ಹುಡುಕಿ ತಂದು ಅದರೊಂದಿಗೆ ಆಟವಾಡುತ್ತಾ ಮಾರೆಮ್ಮನ ಗುಡಿಯ ಹತ್ತಿರ ಬರುತ್ತಾರೆ. ದೇವಿಯ ಗುಡಿಯ ಸುತ್ತಲು ಅಪಾರವಾದ ಜನಸಂಖ್ಯೆ ಸೇರಿರುತ್ತದೆ. ದೇವಿಯ ಗುಡಿಯ ಮುಂದೆ ದೇವಿಯ ಎದುರಿಗೆ ಒಂದು ಎತ್ತರದ ಟೇಬಲನ್ನು ಹಾಕಿರುತ್ತಾರೆ. ಪೋತರಾಜನು ಮರಿಯನ್ನು ಕೈಯಲ್ಲಿ ಹಿಡಿದುಕೊಂಡು ದೇವಿಗೆ ನಮಸ್ಕರಿಸಿ ಮೇಕೆಯ ಕಿವಿಯಲ್ಲಿ ಗುಪ್ತವಾಗಿ ಏನೋ ಮಂತ್ರವನ್ನು ಯಾರಿಗೂ ಕೇಳಿಸದಂತೆ ಕಿವಿಯಲ್ಲಿ ಹೇಳುತ್ತಾನೆ. ತಕ್ಷಣ ಆ ಮೆಕೆ ಮರಿಯು ಮೂರ್ಚೆಹೋದ ರೀತಿಯಲ್ಲಿರುತ್ತದೆ. ಆಗ ಪೋತರಾಜನು ದೇವಿಯ ಎದುರಿಗೆ ಮರಿಯನ್ನು ಮಲಗಿಸಿ ನೆರದ ಜನರ ಹತ್ತಿರ ಹೋಗಿ ಹಣವನ್ನು ಹೆಗಲ ಮೇಲಿನ ಟವಾಲ್‌ಗಳನ್ನು ಸಹ ಭಕ್ತಾದಿಗಳು ಪೋತರಾಜನಿಗೆ ಕೊಡುತ್ತಾರೆ. ನಂತರ ಪೋತರಾಜನು ಮರಿಯನ್ನು ಎತ್ತಿಕೊಂಡು ದೇವಿಯ ಗುಡಿಯ ಮುಂದಿನ ಎತ್ತರದ ಟೇಬಲ್ ಮೇಲೆ ನಿಂತುಕೊಂಡು ಮೇಕೆಯ ತುಟಿಯನ್ನು ಬಾಯಿಂದ ಕಚ್ಚಿ ಸಿಗಿದು ನೆರದ ಜನರಿಗೆ ಸುತ್ತಲೂ ತೋರಿಸುತ್ತಾನೆ ಅಲ್ಲದೆ ಅದರ ರಕ್ತವನ್ನು ಹೀರುತ್ತಾನೆ. ಹೀಗೆ ಮಾಡುವುದರಿಂದ ದೇವಿಗೆ ತೃಪ್ತಿಯಾಗಿ ಶಾಂತಳಾಗುತ್ತಾಳೆ ಎಂಬುದು ಜನರ ನಂಬಿಕೆಯಾಗಿದೆ. ನಂತರ ಆ ಮರಿಯನ್ನು ತೆಗೆದುಕೊಂಡು ಹೋಗಿ ಅಡಿಗೆಯನ್ನು ಮಾಡಿಕೊಂಡು ಸಾಮೂಹಿಕವಾಗಿ ಊಟಮಾಡುತ್ತಾರೆ.

ಮಾರಮ್ಮನಿಗೆ ಕೋಣವನ್ನು ಬಿಡುವುದು

ಮಾರಮ್ಮನಿಗೆ ಕೋಣವನ್ನು ಬಿಡುವಾಗ ಊರಿನ ಮುಖಂಡರು ಸೇರಿದಂತೆ ಮಾದಿಗರು ಬಾರಿಕರು, ತಳವಾರ, ಅಗಸರು ಹೀಗೆ ಮುಂತಾದ ಎಲ್ಲಾ ಜನರು ಸೇರಿಕೊಂಡು ಮಾರಮ್ಮನಿಗೆ ಕೋಣವನ್ನು ಬಿಡುವಶಾಸ್ತ್ರ ಮಾಡುತ್ತಾರೆ. ಈ ಮಾರಮ್ಮನ ಜಾತ್ರೆಯು ಮುಗಿದು ಒಂಬತ್ತನೇ ದಿನ ಅಥವಾ ಹದಿನಾರನೇ ದಿನದಲ್ಲಿ ಊರಿನ ಗೌಡರ ಮನೆಯಿಂದ ಯಾರಾದರೊಂಬ್ಬರು ಕೋಣನ ಮರಿಯನ್ನು ಮಾರಮ್ಮನ ಹೆಸರಿನಲ್ಲಿ ಬಿಡುತ್ತಾರೆ. ಅಂದರೆ ಒಂದು ದಿನ ಒಳ್ಳೆಯ ಮುಹೂರ್ತ ನೋಡಿ ಕೋಣವನ್ನು ಬಿಡುವ ಶಾಸ್ತ್ರ ಮಾಡುತ್ತಾರೆ. ಅಂದರೆ ದೇವತೆಯ ಕೈಯಲ್ಲಿರುವ ಹಸಿರು ಬಳೆಗಳು ಪಟ್ಟದ ಕೋಣವನ್ನು ಬಲಿ ಕೊಟ್ಟ ನಂತರ ಹಸಿರು ಬಳೆಗಳು ಹೊಡೆಯುತ್ತವಂತೆ ಹಾಗೂ ದೇವತೆಯ ಮೂಗಿನ ಮೂಗುತಿಯನ್ನು ಸಹ ತೆಗೆದಿರುತ್ತಾರೆ. ಆದ್ದರಿಂದ ಬಹಳ ದಿನಗಳವರೆಗೆ ಹೀಗೆಯೇ ಬಿಡಬಾರದು. ದೇವಿಗೆ ಕೋಣವನ್ನು ಬಿಟ್ಟು ಮುತ್ತೈದೆಯ ಹಣ್ಣು ಕಾಯಿ, ಹೂವು ಮೂಗಿಗೆ ಮೂಗುತಿಯನ್ನು ಇಟ್ಟು ಹಸಿರು ಬಳೆಯನ್ನು ಇಡಿಸಿ ಹಸಿರು ಸೀರೆಯನ್ನು ಉಡಿಸಿ ಬಣ್ಣಗಳಿಂದ ಅಲಂಕಾರ ಮಾಡುತ್ತಾರೆ. ಕೋಣವನ್ನು ಬಿಡುವಾಗ ಅದಕ್ಕೆ ಹೊಸ ಅಂಗಿ ಪಂಚೆಯನ್ನು ತಂದಿರುತ್ತಾರೆ.

ಮಾರಮ್ಮನಿಗೆ ಕೋಣವನ್ನು ಬಿಡುವ ಸಂದರ್ಭದಲ್ಲಿ ದೇವಿಯ ಗುಡಿಯ ಮುಂದೆ ಹಸಿರು ಟೆಂಗಿನ ಗರಿಗಳಿಂದ ಹಂದ್ರವನ್ನು ಹಾಕುತ್ತಾರೆ. ಹೊಸ ಮಣ್ಣಿನ ಮಡಕೆಯ ಕುಂಬಗಳಿಗೆ ನೀರನ್ನು ತುಂಬಿಕೊಡು ಗಂಗೆಯ ಪೂಜೆಯನ್ನು ಮಾಡಿಕೊಂಡು ಬಂದು ದೇವಿಯ ಗುಡಿಯ ಮುಂದೆ ಹಾಕಿದ ಹಂದ್ರದ ಕೆಳಗೆ ಸುರುಗಿಯನ್ನು ಸುತ್ತುತ್ತಾರೆ. ಅಂದರೆ ಚೌಕಾಕಾರದಲ್ಲಿ ನಾಲ್ಕು ಹೊಸ ಮಣ್ಣಿನ ಮಗಿಗಳನ್ನು ಇಟ್ಟು ಅದರಲ್ಲಿ ನೀರನ್ನು ತುಂಬಿ ನಾಲ್ಕು ಮೂಲೆಗಳಿಗೆ ಇಟ್ಟು ಹೊಸ ದಾರವನ್ನು ಸುತ್ತುತ್ತಾರೆ. ಈ ಸುರುಗಿಯನ್ನು ಸುತ್ತುವ ಕಾರ್ಯದಲ್ಲಿ ಮಾದಿಗರೇ ಪ್ರಮುಖವಾಗಿ ಭಾಗವಹಿಸುತ್ತಾರೆ. ಕೋಣನ ಮರಿಗೆ ಸ್ನಾನ ಮಾಡಿಸಿ ಅದಕ್ಕೆ ಅರಿಶಿಣ ಹಚ್ಚಿ ಮದುಮಗನನ್ನು ಮಾಡಿ ಹೊಸ ಬಟ್ಟೆಯನ್ನು ಮೈಮೇಲೆ ಹಾಕಿ ಇವತ್ತಿನಿಂದ ಮಾರಮ್ಮನಿಗೆ ಬಿಟ್ಟ ಕೋಣ ಎಂದು ಮಾರಮ್ಮ ಹೆಸರು ಹೇಳಿ ಬಿಡುತ್ತಾರೆ. ಅಲ್ಲದೆ ಈ ಶಾಸ್ತ್ರ ಮುಗಿದ ನಂತರ ಮಾದಿಗರು ಊರಿನ ಕೆಲವು ಮನೆಗಳಿಗೆ ಕೋಣವನ್ನು ಹಿಡಿದುಕೊಂಡು ಹೋಗಿ ಕೋಣವನ್ನು ಪೂಜೆ ಮಾಡಿಸಿ ಹಣೆಯ ಮೇಲೆ ಕುಂಕುಮ ಹಚ್ಚಿ ಹಣೆ ಹಾಕಿ ಪೂಜೆ ಮಾಡಿ ಅದಕ್ಕೆ ತಿನ್ನಲು ಕಾಳನ್ನು ಇಡುತ್ತಾರೆ. ಹೀಗೆ ಈ ಶಾಸ್ತ್ರ ಮುಗಿದ ನಂತರ ಊರಿನಲ್ಲಿ ಕೋಣವನ್ನು ಕಟ್ಟುವುದಿಲ್ಲ ಅದು ಸ್ವತಂತ್ರವಾಗಿ ಯಾರ ಹೊಲದಲ್ಲಿ ಬೇಕಾದರೂ ಬೆಳೆಯನ್ನು ತಿನ್ನಬಹುದು. ಯಾರು ಅದನ್ನು ಬೈಯುವುದಿಲ್ಲ ಹೊಡೆಯುವುದಿಲ್ಲ. ಮನೆಗಳಿಗೆ ಹೋಗಿ ಅವರು ಇಟ್ಟಕಾಳುಗಳನ್ನು ತಿಂದು ತಿರುಗಾಡುತ್ತದೆ. ಈ ರೀತಿಯಾಗಿ ದೇವತೆಗೆ ಕೋಣವನ್ನು

ಬಿಡುವ ಶಾಸ್ತ್ರ ಮಾಡುತ್ತಾರೆ. ಒಂದು ವೇಳೆ ಕೋಣವನ್ನು ಬಿಡದೆ ಇದ್ದರೆ ಊರಿಗೆ ತೊಂದರೆಯಾಗುತ್ತದೆ. ಎಂದು ಪಟ್ಟದ ಕೋಣವನ್ನು ಬಲಿ ಕೊಟ್ಟು ಹದಿನಾರನೇ ದಿನದ ಒಳಗಾಗಿ ಬಿಡಲೇಬೇಕು ಇಲ್ಲವಾದರೆ ಊರಿಗೆ ತೊಂದರೆಯಾಗುತ್ತದೆ ಎಂದು ಊರಿನ ಮುಖಂಡರು ಹೇಳುತ್ತಾರೆ.

ಹರಕೆಯ ವಿಧಾನಗಳು

ಈ ದೇವತೆಗಳ ಭಕ್ತಾದಿಗಳು ಬೇಡಿಕೊಂಡ ಬೇಡಿಕೆ ನಿರ್ವಹಿಸಿಕೊಟ್ಟರೆ ಹಲವಾರು ರೀತಿಯ ಹರಕೆಗಳನ್ನು ಭಕ್ತರು ಮುಡುಪು ಮಾಡಿಕೊಳ್ಳುತ್ತಾರೆ. ಹರಕೆ ಮಾಡಿಕೊಂಡವರು ಕೆಲವರು ದೇವರ ಕಣ್ಣು, ಮೀಸೆ, ಮುಖ, ಛತ್ರಿಯನ್ನು ಬೆಳ್ಳಿಯಲ್ಲಿ ಮಾಡಿಸಿ ಒಪ್ಪಿಸುತ್ತಾರೆ. ವೀಳ್ಯದೆಲೆಯ ಪೂಜೆ, ಅರಿಶಿಣ ಪೂಜೆ, ಕುಂಕುಮ ಪೂಜೆ, ನಿಂಬೆಹಣ್ಣಿನ ಸರ, ಹೂವಿನ ಸರ, ಹಣ್ಣುಕಾಯಿ ಮಾಡಿಸುವುದು ಹೀಗೆ ಹಲವಾರು ರೀತಿಯ ಹರಕೆಗಳನ್ನು ತಮ್ಮ ಕಷ್ಟಗಳನ್ನು ನಿವಾರಣೆ ಮಾಡಿಕೊಳ್ಳಲು ಭಕ್ತರು ದೇವರ ಮೊರೆಹೊಗುತ್ತಾರೆ.

ಹರಕೆಯ ಬೇಡಿಕೊಳ್ಳುವುದು

ಬೇಗ ಮಕ್ಕಳಾಗಲೆಂದು

ಮಗಳಿಗೆ ಬೇಗ ವರಗಲೆಂದು

ಗಂಡು ಮಗು ಜನಿಸಿದರೆ

ಕೋರ್ಟ್ ಕೆಲಸದಲ್ಲಿ ಜಯ ಸಿಕ್ಕರೆ

ಹೊಲದ ಸಮಸ್ಯೆ ನಮ್ಮಂತಾದರೆ

ದನಕರುಗಳಿಗೆ ರೋಗ ಬಾರದಿರಲೆಂದು

ಮನೆಯಲ್ಲಿ ಯಾರಿಗಾದರೂ ಕಾಯಿಲೆಯಾಗಿದ್ದರೆ

ಬೆಗ ಸರ್ಕಾರಿ ಕೆಲಸ ಸಿಗಲೆಂದು

ಹೊಲದಲ್ಲಿ ಕೊಳವೆ ಬಾವಿ ಕೊರೆಸುವಾಗ ನೀರು ಚೆನ್ನಾಗಿ ಬಿದ್ದರೆ ನಿನಗೆ ಬಲಿ ಹರಕೆ ಒಪ್ಪಿಸುತ್ತೇನೆ ಹೀಗೆ ಮುಂತಾದ ಹರಕೆಗಳನ್ನು ಮಾಡಿಕೊಳ್ಳುತ್ತಾರೆ.

ಹುಲಿಗೆಮ್ಮ

ಕೊಪ್ಪಳ ಜಿಲ್ಲೆಗೆ ಸೇರಿದ ಹುಲಿಗಿ ಎಂಬ ಊರಿನಲ್ಲಿ ಹುಲಿಗೆಮ್ಮ ದೇವಿಯು ತುಂಬಾ ಪ್ರಸಿದ್ಧಿಯನ್ನು ಪಡೆದ ದೇವತೆಯಾಗಿದ್ದಾಳೆ. ಅನೇಕ ಕಡೆ ದೂರದ ಊರುಗಳಿಂದ ಭಕ್ತರು ಬಂದು ದೇವಿಯ ಆಶೀರ್ವಾದ ಪಡೆದುಕೊಂಡು ಹೋಗುತ್ತಾರೆ. ಹೊಸಪೇಟೆಯ ಕೊಪ್ಪಳ ಮುಂತಾದ ಊರುಗಳಲ್ಲಿ ಹುಲಿಗೆಮ್ಮ, ಹುಲುಗಮ್ಮ ಎಂಬ ಹೆಸರುಗಳನ್ನು ಸಹ ಇಟ್ಟುಕೊಂಡಿದ್ದಾರೆ. ಈ ದೇವತೆಗೆ ಪ್ರತಿ ಮಂಗಳವಾರ, ಶುಕ್ರವಾರ ಹುಣ್ಣಿಮೆಯ ದಿನದಂದು

ಬಲಿಯನ್ನು ಕೊಡುವುದು, ನಿಂಬೆಯ ಹಣ್ಣಿನ ಸರ ಒಪ್ಪಿಸುವುದು, ದೀಡ ನಮಸ್ಕಾರ ಹಾಕುವುದು, ಬೇವಿನ ಉಡುಗೆ ಉಡುವುದು ಹೀಗೆ ಮುಂತಾದ ಹಲವಾರು ರೀತಿಯ ಹರಕೆಗಳನ್ನು ಮಾಡಿಕೊಂಡು ಹರಕೆಯನ್ನು ತೀರಿಸುತ್ತಾರೆ ಆದರೆ ಹೆಚ್ಚಾಗಿ ಬಲಿಯನ್ನು ಕೊಡುವುದು ಹೆಚ್ಚಾಗಿ ಕಂಡುಬರುತ್ತದೆ.

ಗಾಳೆಮ್ಮ

ಹೊಸಪೇಟೆಯಿಂದ ಸುಮಾರು ಎಂಟು ಕಿ.ಮೀ. ದೂರದಲ್ಲಿ ಗಾಳೆಮ್ಮನ ಗುಡಿಯು ಇದೆ. ಈ ಗಾಳೆಮ್ಮ ದೇವಿಯು ತುಂಬಾ ಪ್ರಸಿದ್ಧಿಯನ್ನು ಪಡೆದ ದೇವತೆಯಾಗಿದ್ದಾಳೆ. ಪ್ರತಿವರ್ಷ ರಥವನ್ನು ಎಳೆಯುತ್ತಾರೆ. ಸುತ್ತಮುತ್ತಲಿನ ದೂರದ ಊರುಗಳಿಂದ ಬಂದು ಈ ದೇವತೆಗೆ ಹರಕೆಯನ್ನು ತೀರಿಸುತ್ತಾರೆ. ಪ್ರತಿ ಮಂಗಳವಾರ ಶುಕ್ರವಾರದಂದು ಕುರಿ, ಮೇಕೆ, ಕೋಳಿಗಳನ್ನು ಬಲಿ ಕೊಡುವುದು ಸಾಮಾನ್ಯವಾಗಿರುತ್ತದೆ.

ಬಯಲಾಂಜಿನೇಯ ಸ್ವಾಮಿಗೆ ಬಲಿ

ತುಮಕೂರು ಜಿಲ್ಲೆ ಕೊರಟಗೆರೆ ತಾಲೂಕಿನಲ್ಲಿ ಬಯಲಾಂಜನೇಯ ಸ್ವಾಮಿಗೆ ಪ್ರತಿ ಭಾನುವಾರದಂದು ಕುರಿ, ಮೇಕೆ, ಕೋಳಿಗಳನ್ನು ಬಲಿ ಕೊಡುವುದು ವಿಶೇಷವಾಗಿರುತ್ತದೆ. ಅಂದರೆ ಹೆಚ್ಚಿನ ಭಾಗದಲ್ಲಿ ಆಂಜನೇಯನಿಗೆ ಹಣ್ಣು ಕಾಯಿ, ಮಾಡಿಸುವುದು ಕುಂಕುಮ ಪೂಜೆ, ಎಲೆ ಪೂಜೆ ಹೀಗೆ ಹಲವಾರು ರೀತಿಯ ಪೂಜೆಗಳನ್ನು ಮಾಡುವುದನ್ನು ನೋಡಿದ್ದೇವೆ. ಆದರೆ ಆಂಜನೇಯನಿಗೆ ಬಲಿ ಕೊಡುವುದು ತುಂಬಾ ಕಡಿಮೆ ಎಂದು ಹೇಳಬಹುದು. ಬಳ್ಳಾರಿ ಜಿಲ್ಲೆಯ ಹೆಚ್ಚಿನ ಭಾಗದಲ್ಲಿ ಸ್ತ್ರೀಯರು ಆಂಜನೇಯನಿಗೆ ನಡೆದುಕೊಳ್ಳುತ್ತಾರೆ. ಅಲ್ಲದೆ ಪ್ರತಿ ಶನಿವಾರದಂದು ಮಾಂಸದ ಊಟವನ್ನು ಮಾಡುವುದಿಲ್ಲ. ಈ ರೀತಿಯ ಕಟ್ಟು ನಿಟ್ಟಿನ ಆಚರಣೆ ಇರುವಾಗ ಕೊರಟಗೆರೆಯಲ್ಲಿ ಬಯಲಾಂಜನೇಯನಿಗೆ ವಿಶೇಷವಾಗಿ ಬಲಿ ಕೊಡುವುದನ್ನು ನೋಡಬಹುದು.

ಭೂತಪ್ಪನಿಗೆ ಹರಕೆಯ ಬಲಿ

ನಂಬಿಕೆ ಎಂಬ ತತ್ವದಡಿಯಲ್ಲಿ ಈ ಜಗತ್ತಿನ ಅಲೌಕಿಕ ಶಕ್ತಿಯನ್ನು ಆರಾಧಿಸುವ ಅತಿ ದೊಡ್ಡ ಆಸ್ತಿಕ ವರ್ಗವಿದೆ. ಯಾವುದೇ ಶಾಸ್ತ್ರ ಪರಂಪರೆ, ಆಧಾರ ಹಿನ್ನೆಲೆಗಿಂತ ಮುಖ್ಯವಾಗಿ ನಂಬಿಕೆ ನೆಮ್ಮದಿ ದೊರೆಯುವ ನಂಬಿಕೆಗೆ ಪ್ರಾಧಾನ್ಯತೆ ಇದೆ. ಅಂತಹ ಒಂದು ನಂಬಿಕೆಯ ಕೇಂದ್ರ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಅಕ್ಕಿ ಆಲೂರು ಬಳಿಯ ಬಾಳೂರು ಭೂತಪ್ಪನ ಸನ್ನಿಧಾನವಿದೆ. ದಾವಣಗೆರೆಯಲ್ಲಿ ಎಸ್.ಎಸ್. ಆಸ್ಪತ್ರೆಯ ರೋಡಿನ ಬಲಭಾಗದಲ್ಲಿ ಭೂತಪ್ಪನ ಸನ್ನಿಧಾನವಿದೆ. ರಾಮನಗರದ ವಿಮಾನ ಮಟ್ಟಿಯಿಂದ ಸ್ವಲ್ಪ ಮುಂದೆ ಲೋಕೀಕೆರೆ ರೋಡಿನ ಬಲಭಾಗದಲ್ಲಿ ಭೂತಪ್ಪನ ಸಾನ್ನಿಧ್ಯವಿದೆ. ನಾಡಿನಾದ್ಯಂತ ಇರುವ ಹಲವಾರು

ದೇವಾಲಯಗಳಲ್ಲಿ ಒಂದೊಂದು ರೀತಿಯ ವಿಭಿನ್ನ ಆಚರಣೆಗಳಿರುತ್ತವೆ. ಸ್ಥಳೀಯವಾಗಿ ಈ ಆಚರಣೆಗಳು ಸಾಮಾನ್ಯ ಎನಿಸಿದರೂ ಸಾರ್ವತ್ರಿಕವಾಗಿ ನೋಡುವಾಗ ಆಚರಣೆಯ ವಿಧಾನ ವಿಸ್ಮಯವನ್ನು ಮೂಡಿಸುತ್ತದೆ. ಈ ಹಿನ್ನೆಲೆಯಲ್ಲಿ ಅಕ್ಕಿ ಆಲೂರು ಬಳಿಯ ಬಾಳೂರು ಸಮೀಪದಲ್ಲಿರುವ ಚೌಡೇಶ್ವರಿ ಸಹಿತ ಭೂತಪ್ಪನ ಗುಡಿಯಲ್ಲಿ ಭಕ್ತರು ಸಲ್ಲಿಸುವ ಹರಕೆ ಹೊರಗಿನವರಿಗೆ ಬಹಳ ವಿಭಿನ್ನ ಎನ್ನಿಸುತ್ತದೆ.

ಸಾಮಾನ್ಯವಾಗಿ ಒಂದು ದೇವಾಲಯಕ್ಕೆ ಒಂದು ಅಥವಾ ಎರಡು ಬೀಗಗಳನ್ನು ಹಾಕಿರುತ್ತಾರೆ. ಆದರೆ ಭೂತಪ್ಪನ ದೇವಾಲಯದಲ್ಲಿ ಎಣಿಸಲಾಗದಷ್ಟು ಅಸಂಖ್ಯಾತ ಬೀಗಗಳನ್ನು ಕಾಣಬಹುದು. ಅಷ್ಟಕ್ಕೂ ಲಕ್ಷಾಂತರ ಸಂಖ್ಯೆಯಲ್ಲಿರುವ ಈ ಬೀಗಗಳನ್ನು ಹಾಕಿದವರು ದೇವಸ್ಥಾನಕ್ಕೆ ಸಂಬಂಧಪಟ್ಟವರಲ್ಲ, ಬದಲಿಗೆ ಇಲ್ಲಿಗೆ ಬರುವ ಭಕ್ತರು ಹಾಕಿದ್ದಾರೆ.

ಇಲ್ಲಿ ಹೀಗೆ ಬೀಗ ಹಾಕುವುದಕ್ಕೆ ಒಂದು ಕಾರಣವಿದೆ. ಭೂತಪ್ಪನ ಸನ್ನಿಧಾನದಲ್ಲಿ ಬಂದು ಯಾವುದೇ ಹರಕೆಯನ್ನು ಮಾಡಿಕೊಂಡು ಬೀಗವನ್ನು ಹಾಕಿದರೆ ಆ ಹರಕೆ ಫಲಿಸುತ್ತದೆ ಎಂಬ ನಂಬಿಕೆ ಇಲ್ಲಿದೆ. ಆ ಕಾರಣದಿಂದಲೇ ದೂರದೂರದ ಊರುಗಳಿಂದ ಭಕ್ತರು ಇಲ್ಲಿಗೆ ಬಂದು ಭೂತಪ್ಪನ ಸನ್ನಿಧಾನದಲ್ಲಿ ಬೀಗವನ್ನು ಹಾಕುತ್ತಾರೆ. ಹೀಗೆ ಹಾಕಿದ ಬೀಗಗಳ ಸಂಖ್ಯೆ ಎಣಿಸಲಸಾಧ್ಯ ಎನ್ನುವಷ್ಟಿದೆ.

ಸಾಮಾನ್ಯವಾಗಿ ಬೀಗ ತೆಗೆದಾಗ ಬಾಗಿಲು ತೆರೆಯುವುದು ಸರ್ವೇ ಸಾಮಾನ್ಯ ಆದರೆ ಇಲ್ಲಿ ಬೀಗ ಹಾಕಿದಾಗ ಭಕ್ತರ ಭಾಗ್ಯದ ಬಾಗಿಲು ತೆರೆದುಕೊಳ್ಳುತ್ತದೆ ಎಂಬ ನಂಬಿಕೆ ಇದೆ. ಅಚ್ಚರಿ ಎನಿಸಿದರೂ ಈ ಪದ್ಧತಿಯನ್ನು ಅನುಸರಿಸಿ ಹಲವರು ತಮ್ಮ ಭಾಗ್ಯದ ಬದುಕು ಕಟ್ಟಿಕೊಂಡ ಉದಾಹರಣೆಗಳಿವೆ. ತಮ್ಮ ಬೇಡಿಕೆ ಈಡೇರಿದ ನಂತರ ತಾವು ಹಾಕಿದ ಬೀಗವನ್ನು ತೆಗೆದು ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಬಲಿಯ ಹರಕೆ ತೀರಿಸುತ್ತಾರೆ.

ಭೂತಪ್ಪ ಚೌಡೇಶ್ವರಿ ಕ್ಷೇತ್ರ

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮದೇವತೆಗಳ ಸಾನಿಧ್ಯವಿದ್ದೆ ಇರುತ್ತದೆ. ಅಂತಹ ಗ್ರಾಮದೇವತೆಗಳಿಗೆ ಹಬ್ಬ, ಹುಣ್ಣಿಮೆಯಂತಹ ವಿಶೇಷ ದಿನಗಳಲ್ಲಿ ಮಾತ್ರ ಪೂಜೆ ಸಲ್ಲಿಸಲಾಗುತ್ತದೆ. ದೀಪಾವಳಿಯ ಸಂದರ್ಭದಲ್ಲಿ ನೋನಿ ಎಂಬ ವಿಶಿಷ್ಟ ಆಚರಣೆಯ ಮೂಲಕ ಗ್ರಾಮದೇವತೆಗಳಿಗೆ ವಿಶೇಷ ಪೂಜೆ ಸಲ್ಲಿಸುವ ಪದ್ಧತಿ ರೂಢಿಯಲ್ಲಿರುತ್ತದೆ. ಆದರೆ ಅಕ್ಕಿ ಆಲೂರಿನ ಬಾಳೂರು ಭೂತಪ್ಪ ಸನ್ನಿಧಾನ ಈ ಮಾತಿಗೆ ಅಪವಾದವೆಂಬಂತಿದೆ. ನೂರಾರು ವರ್ಷಗಳ ಇತಿಹಾಸ ಹೊಂದಿರುವ ಈ ಕ್ಷೇತ್ರದಲ್ಲಿ ಶಕ್ತಿ ಮಾತೆ ಚೌಡೇಶ್ವರಿ ಸಮೇತವಾಗಿ ಭೂತಪ್ಪನ ಸಾನ್ನಿಧ್ಯವಿದೆ. ಇಲ್ಲಿ ಪ್ರತಿದಿನವೂ ವಿಶೇಷ ಪೂಜೆ, ಪುನಸ್ಕಾರ ನಡೆಯುತ್ತದೆ. ಹಾವೇರಿ ಅನವಟ್ಟಿ ಹೆದ್ದಾರಿ ಪಕ್ಕದಲ್ಲೇ ಇರುವ ಈ ದೇವಾಲಯದಲ್ಲಿ

ಹುಣ್ಣಿಮೆ ಮತ್ತು ಅಮಾವಾಸ್ಯೆ ಬಂತೆಂದರೆ ಜಾತ್ರೆಯ ವಾತಾವರಣ ನಿರ್ಮಾಣವಾಗುತ್ತದೆ. ನೆರೆಯ ಆಂಧ್ರಪ್ರದೇಶ, ಮಹಾರಾಷ್ಟ್ರ ಅಂದರೆ ಭೂತಪ್ಪನಿಗೆ ಮತ್ತು ಚೌಡೇಶ್ವರಿಗೆ ಪ್ರತಿ ಅಮಾವಾಸ್ಯೆ ಹುಣ್ಣಿಗೆ ಕುರಿ, ಕೋಳಿಗಳನ್ನು ಕಡ್ಡಾಯವಾಗಿ ಬಲಿ ಕೊಡುತ್ತಾರೆ ಅಲ್ಲದೆ ಪ್ರತಿದಿನವೂ ಭಕ್ತರು ಬಲಿಯನ್ನು ಕೊಡುತ್ತಾರೆ.

ದೇವಾಲಯದ ಹಿನ್ನೆಲೆ

ಹೆದ್ದಾರಿಯ ಪಕ್ಕದಲ್ಲೆ ಇರುವ ಈ ದೇವಾಲಯವು ಇತ್ತೀಚೆಗೆ ನಿರ್ಮಾಣಗೊಂಡಿದೆ. ನೂರಾರು ವರ್ಷಗಳ ಹಿಂದಿನಿಂದಲೂ ಆಲದ ಮರವೊಂದರ ಬುಡದಲ್ಲಿ ಸಾಮಾನ್ಯ ಕಲ್ಲಿನ ರೂಪದಲ್ಲಿ ಪೂಜೆಗೊಳ್ಳುತ್ತಿದ್ದವು. ಈ ರಸ್ತೆಯಲ್ಲಿ ಸಂಚರಿಸುವವರು ವಾಹನಗಳನ್ನು ನಿಲ್ಲಿಸಿ ದೇವರಿಗೆ ಪ್ರಾರ್ಥನೆ ಸಲ್ಲಿಸಿ ಮುಂದೆ ಹೋದರೆ ಯಾವುದೇ ತೊಂದರೆಯಾಗುತ್ತಿರಲಿಲ್ಲ. ಈ ದೇವರ ಬಗ್ಗೆ ಅರಿವಿಲ್ಲದೆ ಹಾಗೆಯೇ ಹೊದವರಿಗೆ ಸ್ವಲ್ಪ ದೂರ ಹೋಗುವಷ್ಟರಲ್ಲಿ ಏನಾದರೊಂದು ಅನಾಹುತ ಸಂಭವಿಸಿ ತೊಂದರೆಗಳು ಉಂಟಾಗುತ್ತಿದ್ದವಂತೆ. ಹಾಗೆ ತೊಂದರೆಯಾದಾಗ ಸ್ಥಳೀಯರು ಇದು ಭೂತೇಶ್ವರ ಶಕ್ತಿ ಎಂದು ಹೇಳಿ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಪೂಜೆ ಸಲ್ಲಿಸಿದ ಮೇಲೆ ಅವರ ತೊಂದರೆ ನಿವಾರಣೆಯಾಗುತ್ತಿತ್ತಂತೆ. ಈ ವಾಡಿಕೆ ಜನರಿಂದ ಜನರಿಗೆ ಹಬ್ಬಿ ಭೂತೇಶ್ವರನ ಶಕ್ತಿ ಪ್ರಚಲಿತಕ್ಕೆ ಬಂದು ಈಗ ದೊಡ್ಡ ದೇವಾಲಯವನ್ನೇ ಕಟ್ಟಲಾಗಿದೆ.

ಇಲ್ಲಿ ಹಿಂದಿನಿಂದಲೂ ಬೀಗವನ್ನು ಸಮರ್ಪಿಸುವ ಪದ್ಧತಿ ಜಾಲ್ತಿಯಲ್ಲಿದೆ. ಉದ್ಯೋಗ ವ್ಯಾಪಾರ, ಆರೋಗ್ಯ, ಸಂತಾನ, ವಿದ್ಯಾಭ್ಯಾಸ, ಜಾನುವಾರಗಳಿಗೆ ರೋಗ ಬಂದರೆ, ಕೊಳವೆ ಬಾವಿ ಜಲದ ಲಭ್ಯತೆ ಸೇರಿದಂತೆ ವಿವಿಧ ರೀತಿಯ ಹರಕೆಗಳನ್ನು ಮಾಡಿ ಬೀಗ ಸಲ್ಲಿಸುವ ಭಕ್ತರ ಸಮೂಹವೇ ಪ್ರತಿದಿನವೂ ಇಲ್ಲಿ ಕಾಣಸಿಗುತ್ತದೆ. ಇಲ್ಲಿ ಹೆಚ್ಚಿನ ರೀತಿಯಲ್ಲಿ ಹರಕೆಯ ಬಲಿ ನಡೆಯುತ್ತದೆ.

ಲಕ್ಷ್ಮೀ ರಂಗನಾಥ ಸ್ವಾಮಿಗೆ ಬಲಿ

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನಲ್ಲಿ ಲೋಕೊದಳಲು ಎಂಬ ಗ್ರಾಮದಲ್ಲಿ ಬೆಟ್ಟದ ಮೇಲಿನ ಲಕ್ಷ್ಮೀ ರಂಗನಾಥಸ್ವಾಮಿಗೆ ಹರಕೆಯ ರೂಪದಲ್ಲಿ ಬಲಿ ಕೊಡುವುದನ್ನು ನೋಡಬಹುದು ಅಂದರೆ ಬೆಟ್ಟದ ಮೇಲಿರುವ ಈ ರಂಗನಾಥಸ್ವಾಮಿಗೆ ಐದು ದೊಡ್ಡ ಎಡೆ ಎಂದು ಹೋಳಿಗೆ, ಅನ್ನ, ಬಾಳೆಹಣ್ಣು ಹೀಗೆ ಮಿಶ್ರಣ ಮಾಡಿದ ಹೆಡೆಯನ್ನು ಹಾಕಲಾಗುತ್ತದೆ. ಪ್ರತಿ ಶನಿವಾರ, ಭಾನುವಾರ ಕುರಿ, ಮೇಕೆ, ಕೋಳಿಗಳನ್ನು ಹರಕೆಯನ್ನು ಮಾಡಿಕೊಂಡವರು ಬಲಿಯನ್ನು ಕೊಡುತ್ತಾರೆ. ಅಂದರೆ ಬೆಟ್ಟದ ಮೇಲೆ ಹೋಗಿ ಸ್ವಾಮಿಗೆ ಪೂಜೆ ಮಾಡಿಕೊಂಡು ಬಂದು ಬೆಟ್ಟದ ಕೆಳಗೆ ಬಲಿಯನ್ನು ಕೊಡುವುದು ವಿಶೇಷವಾಗಿರುತ್ತದೆ. ಹರಕೆಯ ಬಲಿ ಕೊಟ್ಟು ಅಡಿಗೆ ಮಾಡಿದಾಗ ಮುದ್ರೆ ಹೊತ್ತಿಸಿಕೊಂಡ ದಾಸಪ್ಪನವರು ಮೊದಲಿಗೆ ಎಡೆಯ

ಊಟವನ್ನು ಮಾಡಿದ ಮೇಲೆಯೇ ಊಟವನ್ನು ಮಾಡಬೇಕು ಎಂಬ ನಿಯಮವನ್ನು ಪಾಲಿಸಿಕೊಂಡು ಬಂದಿರುವುದನ್ನು ಕಾಣಬಹುದು.

ಕುಂದೂರು ಆಂಜನೇಯನಿಗೆ ಬಲಿ

ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕಿನ ಕುಂದೂರು ಆಂಜನೇಯನಿಗೆ ಬಲಿಯನ್ನು ಕೊಡುತ್ತಾರೆ. ಪ್ರತಿವರ್ಷ ಜಾತ್ರೆಯು ನಡೆಯುತ್ತದೆ. ಆದರೆ ಬಲಿಯನ್ನು ಕೊಡುವುದಿಲ್ಲ ಬಿಡಿ ದಿನದಲ್ಲಿ ಮಾತ್ರ ಬಲಿ ಕೊಡುವುದನ್ನು ಗಮನಿಸಬಹುದು, ಅಂದರೆ ಇಲ್ಲಿ ವಿಶೇಷತೆ ಎಂದರೆ ಆಂಜನೇಯನ ಗುಡಿಯ ಪಕ್ಕದಲ್ಲೆ ಭೂತಪ್ಪನ ಸಾನಿಧ್ಯವಿದೆ ಈತನ ಗುಡಿಯ ಮುಂದೆ ಬಲಿ ಕೊಡುತ್ತಾರೆ. ಆದರೆ ಅಂಜನೇಯನ ಹೆಸರನ್ನು ಹೇಳಿ ಬಲಿ ಕೊಡುವುದು ವಿಶೇಷವಾಗಿರುತ್ತದೆ ಎಂದು ಹೇಳಬಹುದು.

ಲಕ್ಕಮ್ಮದೇವಿ ಜಾತ್ರೆ

ಜಾತ್ರೆ ಎಂದರೆ ಅಲ್ಲಿ ಸಂಭ್ರಮ ಸಂಡಗರ, ಜನರ ಓಡಾಟ ಹೆಚ್ಚಿರುತ್ತದೆ. ಆದರೆ ಈ ಊರಿನಲ್ಲಿ ಮಾತ್ರ ನಿಷಿದ್ಧ. ಜಾತ್ರೆ ಬಂತೆಂದರೆ ದೇವಿಸಮೇತ ಜನರು ಗುಳೆಹೋಗುತ್ತಾರೆ. ಇದು ಯಾವುದೋ ಹಳ್ಳಿಯಲ್ಲಿ ನಡೆದುಕೊಂಡು ಬಂದ ಸಂಪ್ರದಾಯವಲ್ಲ, ಕೂಡ್ಲಿಗಿ ಪಟ್ಟಣದಲ್ಲೇ ಹಲವಾರು ವರ್ಷಗಳಿಂದ ಆಚರಿಸಿಕೊಂಡು ಬರುತ್ತಿರುವ ಪದ್ಧತಿ. ಹಿಂದೆ ವರ್ಷಕ್ಕೊಮ್ಮೆ ಆಚರಿಸಲಾಗುತ್ತಿತ್ತು. ಆದರೆ ಕಾಲ ಬದಲಾವಣೆಯಾದಂತೆ ಜಾತ್ರೆ ಅವಧಿಯೂ ವಿಸ್ತರಣೆಯಾಗಿದ್ದು ಐದು ವರ್ಷಕ್ಕೊಮ್ಮೆ ಆಚರಿಸಲಾಗುತ್ತದೆ. ಅಂದರೆ ಏಪ್ರಿಲ್ ತಿಂಗಳಿನಲ್ಲಿ ಈ ದೇವಿಯ ಜಾತ್ರೆ ನಡೆಯುತ್ತದೆ.

ಜಾತ್ರೆಯ ವಿಶೇಷ

ಜಾತ್ರೆ ಆರಂಭದ ಹಿಂದಿನ ರಾತ್ರಿ ಪಟ್ಟಣದ ಊರಮ್ಮ ಬಯಲಿನಲ್ಲಿರುವ ಗುಳೆಲಕ್ಕಮ್ಮನ ಕಟ್ಟೆ ಮೇಲೆ ದೇವಿ ತಂದಿಡುತ್ತಾರೆ. ಜಾತ್ರೆ ನಡೆವ ದಿನ ಮುಂಜಾನೆ ಮೂರು ಗಂಟೆಯಿಂದ ಪಟ್ಟಣದ ಮಹಿಳೆಯರು ದೇವಿಗೆ ಉಡಿ ತುಂಬುತ್ತಾರೆ. ಅದಾದ ಬಳಿಕ ಬೆಳಿಗ್ಗೆ ಆರರಿಂದ ಎಂಟು ಗಂಟೆಯೊಳಗೆ ಜನರು ಮನೆಗೆ ಬೀಗ ಹಾಕಿ ಜಾನುವಾರು, ಗಂಟುಮೂಟೆಯೊಂದಿಗೆ ಊರು ತೊರೆಯುತ್ತಾರೆ. ನಂತರ ಗುಳೇ ಲಕ್ಕಮ್ಮ ದೇವಿಯ ಮೆರವಣಿಗೆ ನಡೆಸಲಾಗುತ್ತದೆ. ಜನ ಊರು ತೊರದಿದ್ದಾರೆಯೇ ಇಲ್ಲವೇ ಎಂಬುದರ ಬಗ್ಗೆ ತಳವಾರ ಸಮುದಾಯದವರು ಗಸ್ತು ತಿರುಗಿ ಖಚಿತಪಡಿಸಿಕೊಳ್ಳುತ್ತಾರೆ. ಅನಂತರ ಊರ ಬಾಗಿಲಿಗೆ ಬೇಲಿ ಹಾಕಲಾಗುತ್ತದೆ. ಬಳಿಕ ದೇವಿ ಜೊತೆಗೆ ಊರಿನ ಜನರು ಪಟ್ಟಣದಿಂದ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿರುವ ಗೋವಿಂದ ಗಿರಿ ತಾಂಡಕ್ಕೆ ತೆರಳುತ್ತಾರೆ. ಆಲದ ಮರದಲ್ಲಿ ದೇವಿ ಮೂರ್ತಿ ಪ್ರತಿಷ್ಠಾಪಿಸಿ ಪೂಜೆ ಮಾಡುತ್ತಾರೆ. ಸಮೀಪದಲ್ಲಿ ಇರುವ ತೋಟ, ಗದ್ದೆಗಳಲ್ಲಿ ಅಡುಗೆ ಮಾಡಿಕೊಂಡು ಜಾತ್ರೆ ಆಚರಿಸುತ್ತಾರೆ ನಂತರ ನಾಲ್ಕು ಗಂಟೆಯ ಸಮಯದಲ್ಲಿ ಒಂದು

ಕುರಿಯನ್ನು ಬಲಿ ಕೊಟ್ಟು ಬೇಯಿಸಿದ ಕಾಳನ್ನು ಆ ಕುರಿಯ ಹೊಟ್ಟೆಯಲ್ಲಿನ ಕರುಚನ್ನು ಕಲಿಸಿ ದೇವಿಯನ್ನು ಮರಳಿ ಪಟ್ಟಣಕ್ಕೆ ತರುವಾಗ ಲಕ್ಕಮ್ಮದೇವಿ ಮುಂದೆ ಸಾಗಿದರೆ ಹಿಂದೆ ಮಾದಿಗರು ಚರಗವನ್ನು ಪುಟ್ಟಗಿಳಿಗೆ ಎರಚುತ್ತಾರೆ. ಇಡೀ ಅಲ್ಲದೇ ಊರಿನ ಸುತ್ತಲೂ ಈ ಚರಗವನ್ನು ಮಾದಿಗರು ಚೆಲ್ಲುತ್ತಾರೆ. ಅಂದರೆ ಎಲ್ಲಾ ದೇವತೆಗಳಿಗೆ ಚರಗ ಚೆಲ್ಲುವು ಬೆಳಗಿನ ಜಾವ ಸುಮಾರು ನಾಲ್ಕು ಗಂಟೆಯ ಸಮಯದಲ್ಲಿ ಚೆಲ್ಲಿದರೆ ಈ ಲಕ್ಕಮ್ಮನ ದೇವಿಗೆ ಮಾತ್ರ ಸಾಯಂಕಾಲ ನಾಲ್ಕು ಅಥವಾ ಐದು ಗಂಟೆಗೆ ಚರಗ ಚೆಲ್ಲುವುದು ವಿಶೇಷವಾಗಿರುತ್ತದೆ.

ಯಾಕೆ ಈ ಆಚಣೆಯನ್ನು ಮಾಡುತ್ತೀರ ಎಂದು ಹಿರಿಯರನ್ನು ಕೇಳಿದಾಗ ಅವರು ಹೀಗೆ ಹೇಳುತ್ತಾರೆ. ಹಿಂದೆ ಕಾಲರಾ, ಪ್ಲೇಗ್ ಮುಂತಾದ ಸಾಂಕ್ರಾಮಿಕ ರೋಗಗಳು ಉಲ್ಬಣಿಸುತ್ತಿದ್ದರಿಂದ ಜನ ಊರು ಬಿಡುತ್ತಿದ್ದರು. ರೋಗ ನಿಯಂತ್ರಣಕ್ಕೆ ಬಂದ ನಂತರ ಮತ್ತೆ ವಾಪಸ್ಸಾಗುತ್ತಿದ್ದರು ಆದರೆ, ಕೂಡ್ಲಿಗಿಯಲ್ಲಿ ಯಾವಾಗ ಗುಳೇಲಕ್ಕಮ್ಮ ದೇವಿ ಜಾತ್ರೆ ಆಚರಿಸಲಾಯಿತೋ ಅಂದಿನಿಂದ ರೋಗದಿಂದ ಆಗುತ್ತಿದ್ದ ಸಾವು ನೋವಿನ ಸಂಖ್ಯೆ ಕಡಿಮೆಯಾಯಿತು. ಗುಳೆ ಹೋಗಿ ಜಾತ್ರೆ ಆಚರಿಸುವುದರಿಂದ ಸಂಪೂರ್ಣ ರೋಗ ನಿಯಂತ್ರಣಕ್ಕೆ ಬಂದಿತು. ಹೀಗಾಗಿ ಆರೋಗ್ಯ ಆಯಸ್ಸು ಹಾಗೂ ಊರಲ್ಲಿ ಶಾಂತಿ ನೆಲೆಸಿರಲಿ ಎಂಬ ಹರಕೆಯೊಂದಿಗೆ ಜಾತ್ರೆ ಆಚರಿಸಿಕೊಂಡು ಬರಲಾಗುತ್ತಿದೆ ಎಂಬುದು ಹಿರಿಯರ ಮಾತಾಗಿದೆ.

ಹಿರೇಹೆಗ್ಡಾಳ್ ಸಮಾದೆಮ್ಮ

ಪ್ರತಿಯೊಂದು ಗ್ರಾಮದಲ್ಲಿಯೂ ಗ್ರಾಮದೇವತೆ ಎಂಬುದಾಗಿ ಇರುತ್ತಾಳೆ. ಊರಮ್ಮ, ಮಾರಿಯಮ್ಮ, ಊರಿನಮಾರಿ ಹೀಗೆ ಅನೇಕ ಹೆಸರುಗಳಿಂದ ಕರೆಯುತ್ತಾರೆ. ಕೆಲವೊಮ್ಮೆ ಗ್ರಾಮದಲ್ಲಿ ಊರಮ್ಮ ದೇವಿ ಇರುವುದಿಲ್ಲ. ಕಾಳಮ್ಮ, ಸಮಾದೆಮ್ಮ, ಸುಂಕಲಮ್ಮ, ಮರಿಯಮ್ಮ, ದುರುಗಮ್ಮ, ತಾಯಮ್ಮ, ಕೆಂಗಳಮ್ಮ (ಅಂದರೆ ಕೆಂಗಣ್ಣಿನ ಅಮ್ಮ, ಕೆಂಪು ಮೋರೆ ಉಳ್ಳವಳು ಎಂದು ಅರ್ಥ ಬರುತ್ತದೆ.) ಒಂದೊಂದು ಗ್ರಾಮದಲ್ಲಿ ಒಂದೊಂದು ನಾಮಾಂಕಿತಗಳಾಗಿ ಪ್ರಖ್ಯಾತಳಾಗಿದ್ದಾಳೆ. ಅಲ್ಲದೆ ಪ್ರತಿಯೊಂದು ಗ್ರಾಮದಲ್ಲಿ ಒಂದೊಂದು ಶಕ್ತಿದೇವತೆಗಳ ಐತಿಹ್ಯಗಳಿವೆ. ಹಿರಿಯರು ಕಾಲ್ಪನಿಕವಾಗಿ ನುಡಿದಂತೆ ಅವು ಇತಿಹಾಸವಾಗಿ ಮಾರ್ಪಟ್ಟಿವೆ. ದೇವಿಗೆ ಕೈಗಳು ಅಷ್ಟಭುಜಗಳು, ದಶಭುಜಗಳು, ಶತಭುಜಗಳು, ತ್ರಿನೇತ್ರ, ಶತನೇತ್ರೆ, ಸಹಸ್ರನೇತ್ರೆ ಎಂಬುದಾಗಿ ಹೊಗಳಿದ್ದಾರೆ. ಕವಿಯೊಬ್ಬ ಭಕ್ತಿಪೂರ್ವಕವಾಗಿ ಕಂಡಂತೆ ಕೃತಿಯ ರೂಪದಲ್ಲಿ ಚಿತ್ರಿಸಿದ್ದಾನೆ. ದೇವಿಗೆ ಅನಂತ ರೂಪಗಳಿವೆ. ಕೋರೆಹಲ್ಲುಗಳಿವೆ; ಕಪ್ಪು ಮೈಬಣ್ಣ ಇದೆ; ಇವಳು ಸಿಂಹವಾಹಿನಿ; ಕುದುರೆಯನ್ನೇರಿದವಳು; ಕುದುರೆಯನ್ನು ಮಾಯೆ ಎಂದು ಕರೆಯುತ್ತಾರೆ. ಮಾಯೆಯನ್ನು ಮೆಟ್ಟನಿಂತವಳು ಮಾಯೆಯ ಮೇಲೆ ಸವಾರಿ ಮಾಡುವವಳು; ಮಾಯದ

ಮಾಯೇ ಅತಿಮಾಯೇ ಎಂಬುದಾಗಿ ವರ್ಣಿತವಾಗಿದ. ಸಿಂಹದಂತೆ ಉಗ್ರ ಸ್ವರೂಪದವಳು ಎಂದು ವರ್ಣಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯಿಂದ ಸುಮಾರು ಎಂಟು ಕಿ.ಮೀ. ದೂರದಲ್ಲಿರುವ ಹಿರೇಹೆಗ್ಡಾಳ್ ಒಂದು ಚಿಕ್ಕಗ್ರಾಮ. ಈ ಗ್ರಾಮದಲ್ಲಿ ಪವಾಡ ದೇವತೆಯಾದ ಸಮಾದೆಮ್ಮನ ದೇವಸ್ಥಾನವಿದೆ. ಈ ದೇವಿಯ ಪೂಜಾರಿ ಮಾದಿಗ ಸಮುದಾಯದವರು. ಎಪ್ಪತ್ತು ವರ್ಷದ ಸಮಾದೆಪ್ಪ ಹಾಗೂ ಮಗನಾದ ದುರುಗಪ್ಪ ಇವರಿಬ್ಬರು ಸಮಾದೆಮ್ಮನ ಪೂಜಾರಿಗಳಾಗಿದ್ದಾರೆ.

ಸಮಾದೆಮ್ಮ ದೇವಿಯ ಐತಿಹಾಸಿಕ ಹಿನ್ನೆಲೆ

ಸಮಾದೆಮ್ಮ ಹೆಗ್ಡಾಳ್ ಜನತೆಗೆ ಮೆಚ್ಚುಗೆಗೆ ಪಾತ್ರಳಾದಳು ಎಂದು ಪೂಜಾರಿ ಸಮಾದೆಪ್ಪ ನವರಲ್ಲಿ ಚರ್ಚಿಸಿದಾಗ, ಅವರು ಈ ರೀತಿಯಾಗಿ ಹೇಳಿದರು: ಹಿಂದಿನ ಹಿರಿಯರು ಹೇಳಿದ ಮಾತಿನಂತೆ ಸಮಾದೆಮ್ಮ ದೇವಿಯನ್ನು ಐತಿಹಾಸಿಕವಾಗಿ ನೋಡಿದಾಗ, ಈಕೆಯ ಪವಾಡ ನಿಜ ಜೀವನದಲ್ಲಿ ನಡೆದ ಘಟನೆಯಾಗಿರುತ್ತದೆ. ಅಂದರೆ ಸುಮಾರು ವರ್ಷಗಳ ಹಿಂದೆ ಬೆಳಾಡು ಎಂಬ ಗ್ರಾಮವಿತ್ತಂತೆ ಈ ಬೆಳಾಡು ಸಮಾದೆಮ್ಮನ ತವರು ಮನೆಯಂತೆ ಹಿರೇಹೆಗ್ಡಾಳ್ ಎಂಬ ಗ್ರಾಮದ ಗೌಡರ ಮನೆಗೆ ಕೊಟ್ಟಿದ್ದರಂತೆ. ಗಂಡನ ಮನೆಯವರು ಆಕೆಯನ್ನು ಸರಿಯಾಗಿ ನೋಡಿಕೊಳ್ಳದೆ ಆಕೆಯನ್ನು ಹೊರ ಹಾಕಿದರಂತೆ. ನಂತರ ಊರಿನ ಜನರು ಸಮಾದೆಮ್ಮನನ್ನು ಹೊಲದ ಕೆಲಸಗಳಿಗೆ ಅಂದರೆ ಕಳೆ ತಗಿಯುವುದಕ್ಕೆ, ನಾಟಿ ಮಾಡುವುದಕ್ಕೆ ಮುಂತಾದ ಕೆಲಸಗಳಿಗೆ ಕರೆದುಕೊಂಡು ಹೋಗುತ್ತಿದ್ದರಂತೆ. ಒಂದು ದಿನ ಸಮಾದೆಮ್ಮ ಸುಡುಗಾಡಿನಲ್ಲಿ ಶವಸಂಸ್ಕಾರ ಮಾಡಿದ ಹೆಣದ ಎಲುಬುಗಳನ್ನು ಹಿಡಿದುಕೊಂಡು ಬಂದಿರುವುದನ್ನು ನೋಡಿ, ಇವಳು ಮನುಷ್ಯಳಲ್ಲ ರಾಕ್ಷಸ ವಂಶದವಳು. ಹೀಗೆ ಜನರು ಹಲವಾರು ರೀತಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಕೆಲಸಗಳಿಗೆ ಹೊಲದಲ್ಲಿ ಹೋದಾಗ ನೀನು ತಿನ್ನಲು ಕಬ್ಬುಗಳನ್ನು ಮುರಿದುಕೊಂಡು ಬಾ ಎಂದು ಹೇಳಿದಾಗ ಬಂಡಿಗಟ್ಟಲೇ ಕಬ್ಬುಗಳನ್ನು ಮುರಿದು ಕೈಯಲ್ಲಿ ಹಿಡಿದುಕೊಂಡು ಬರುತ್ತಿದ್ದಳಂತೆ. ಇದನ್ನು ನೋಡಿದ ಹೊಲದವರು ಆಕೆಯನ್ನು ಹಿಡಿದು ಚೌಡಿ ಕಂಬಕ್ಕೆ ಕಟ್ಟಬಡಿದರಂತೆ ಸಮಾದೆಮ್ಮ ನೀವು ನನ್ನನ್ನು ಬಡಿಯ ಬೇಡಿರಿ ನನಗೆ ಒಂದು ಎಕರೆ ಭೂಮಿಯನ್ನು ಕೊಡಿರಿ ಎಂದು ಅವರ ಹತ್ತಿರ ಭಾಷೆಯನ್ನು ತೆಗೆದುಕೊಂಡು ಒಂದು ಎಕರೆ ಭೂಮಿಯನ್ನು ಪಡೆದುಕೊಂಡ ಮರುದಿನವೇ ಊರಿನಲ್ಲಿ ಬಹಳ ಜನ ಸತ್ತರಂತೆ. ಊಳಲು ಜಾಗವಿಲ್ಲದಿದ್ದಾಗ ಸಮಾದೆಮ್ಮನಿಗೆ ಕೊಟ್ಟ ಒಂದು ಎಕರೆ ಜಮೀನಿನಲ್ಲಿ ಶವಸಂಸ್ಕಾರ ಮಾಡಲು ಒಂದು ಹೆಣಕ್ಕೆ ಐದು ಜಿಲ್ಲೆಯನ್ನು ಅವರ ಹತ್ತಿರ ಇಸಿದುಕೊಳ್ಳಬೇಕು ಎಂದು ಹೇಳಿದಳಂತೆ. ಇದರಂತೆ ಸಂಸ್ಕಾರ ಮಾಡಲು ಬಂದ ಜನರು ಕೊಡ್ಡ ದುಡ್ಡಿನಿಂದ ಮಾದಿಗರ ಕೇರಿಯಲ್ಲಿ ಸಮಾದೆಮ್ಮನ

ಗುಡಿಯನ್ನು ಕಟ್ಟಿಸಿದರಂತೆ. ಮಾದಿಗರ ಗಂಗಪ್ಪನಿಗೆ ಹೊಲುಮೆಯಾಗಿ ಮಾದಿಗರ ಕೇರಿಯಲ್ಲಿ ದೇವತೆಯಾಗಿ ವಾಸವಾದಳಂತೆ. ಆದರೆ ದಿನಕಳದಂತೆ ಕೇರಿಯಲ್ಲಿ ಸ್ವಚ್ಛತೆಯಿಲ್ಲದ ಕಾರಣ ಜಾತ್ರೆಯ ಸಂದರ್ಭದಲ್ಲಿ ಊರ ಮುಂದಿನ ಬ್ರಾಹ್ಮಣ ಸೀತಾರಾಮ್ ಅವರ ಕಣದ ಜಾಗವನ್ನು ಕೇಳಿದಂತೆ. ಸೀತಾರಾಮ್ ಅವರು ನನಗೆ ಗಂಡುಮಕ್ಕಳ ಸಂತಾನವಿರುವುದಿಲ್ಲ ನನಗೆ ಗಂಡು ಮಕ್ಕಳ ಸಂತಾನ ಕೊಡುತ್ತೇನೆ ಎಂದು ಒಪ್ಪಿದಳಂತೆ. ಅದರಂತೆ ಕಣದ ಅರ್ಧ ಜಾಗವನ್ನು ಕೊಟ್ಟು ಜಾಗವನ್ನು ಬ್ರಾಹ್ಮಣರಿದ್ದಾರೆ. ಅರ್ಧಜಾಗದಲ್ಲಿ ದೇವಿಯ ಗುಡಿಯಲ್ಲಿ ಕೂಡಿಸಿದ್ದಾಳೆ. ಪ್ರತಿ ಮಂಗಳವಾರ ಶುಕ್ರವಾರದಂದು ಪೂಜೆಯನ್ನು ಮಾಡುತ್ತಾರೆ. ಅಲ್ಲದೆ ಯಾವುದಾದರು ಒಳ್ಳೆಯ ಕೆಲಸಗಳಿಗೆ ದೇವಿಯನ್ನು ಹೂವಿನ ಕುರುವನ್ನು ಕೇಳುತ್ತಾರೆ.

ಸಮಾದೆಮ್ಮನ ಜಾತ್ರೆ : ಜಾತ್ರೆಯನ್ನು ಮಾಡುವಾಗ ಎಲ್ಲ ಜನಾಂಗದವರು ಒಂದೆಡೆ ಸೇರುವುದು, ಸಾರಾಕು ಸರ್ವೇ ಸಾಮಾನ್ಯ. ಜಾತ್ರೆಯನ್ನು ಮಾಡುವುದರಿಂದ ಸಂಧಾನಗಳು ನಡೆಯುತ್ತವೆ. ವೈರತ್ವದೂರವಾಗುತ್ತದೆ. ಒಗ್ಗಟ್ಟಿಗೆ ಬಲಬರುತ್ತದೆ. ನಮ್ಮವರು ನಮ್ಮ ಅಮ್ಮ ಎಂಬ ಭಾವನೆ ಬರುತ್ತದೆ. ಹೀಗೆ ಸಮಾದೆಮ್ಮನ ಜಾತ್ರೆಯು ಪ್ರತಿವರ್ಷ ಜನವರಿ ತಿಂಗಳಿನಲ್ಲಿ ನಡೆಯುತ್ತದೆ. ಈ ಜಾತ್ರೆಯಲ್ಲಿ ಬುಧವಾರ ತೇರು ಎಳೆಯುತ್ತಾರೆ. ಗುರುವಾರ ಬೆಳಿಗ್ಗೆ ಅಗ್ನಿ ಆಯುತ್ತದೆ. ಮಧ್ಯಾಹ್ನ ದೇವಿಗೆ ಹರಕೆಯ ಬಲಿಯು ಹೊಳಗೊಂಡಂತೆ ಪಟ್ಟದ ಕೋಣವನ್ನು ಕಡಿಯುತ್ತಾರೆ. ಶುಕ್ರವಾರ ಏಳು ಊರುಗಳನ್ನು ದೇವಿಯೊಂದಿಗೆ ಊರಾಡಿ ಬೆಳಗಿನ ಮುಂಜಾನೆ ಮೂರು ಅಥವಾ ನಾಲ್ಕು ಗಂಟೆಯ ಸಮಯದಲ್ಲಿ ಶನಿವಾರ ಗುಡಿದುಂಬುತ್ತಾಳೆ. ಶನಿವಾರಕ್ಕೆ ದೇವಿಯ ಜಾತ್ರೆ ಮುಗಿಯುತ್ತದೆ.

ಈ ದೇವಿಯ ಜಾತ್ರೆಯ್ನು ಮಾಡುವುದಕ್ಕೆ ಊರಿನ ನಾಯಕ ಜನಾಂಗದವರೇ ಹಂಚಿಕೆಯನ್ನು ಹಾಕಿ ಇವರೇ ಮುಂದೆ ನಿಂತು ದೇವಿಯ ಜಾತ್ರೆಯನ್ನು ಮಾಡುತ್ತಾರೆ. ಆದರೆ ಮಾದಿಗರು ಗಂಗೆಯ ಪೂಜೆ ದೇವಿಯ ಪ್ರತಿಯೊಂದು ಕಾರ್ಯಕ್ರಮವನ್ನು ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಅಂದರೆ ಊರಿನಲ್ಲಿ ಎಲ್ಲ ಜನಾಂಗದವರಿದ್ದರೂ ಮಾದಿಗರ ಪೂಜಾರಿಯಾದ ಸಮಾದೆಪ್ಪನೇ ದೇವತೆಯೊಂದಿಗೆ ತೇರನ್ನು ಹತ್ತಿ ತೇರನ್ನು ಎಳೆಯಲು ಅನುಮತಿ ನೀಡಿದ ಮೇಲೆ ತೇರನ್ನು ಎಳೆಸುವುದು ವಿಶೇಷವಾಗಿರುತ್ತದೆ. ಊರಿನ ಜನರು ಬೆಂಗಲಿಗರಾಗಿ ನಿಂತು ದೇವಿಯ ಜಾತ್ರೆಯನ್ನು ಮಾಡಿಸುತ್ತಾರೆ.

ಹರಕೆಯನ್ನು ಒಪ್ಪಿಸುವುದು: ಕೂಡ್ಲಿಗಿ ತಾಲೂಕಿನ ಸುತ್ತಲೂ ಊರುಗಳಿಂದ ಈ ದೇವಿಗೆ ನಡೆದುಕೊಳ್ಳುತ್ತಾರೆ. ಅಲ್ಲದೆ ಹರಕೆಯನ್ನು ಮಾಡಿಕೊಂಡು ದೇವಿಯ ಜಾತ್ರೆಯಲ್ಲಿ ಹರಕೆಯ ಬೇಟೆಗಳನ್ನು ಕಡಿಯುತ್ತಾರೆ. ಪಟ್ಟದ ಕೋಣವನ್ನು ಬಲಿಕೊಡುತ್ತಾರೆ. ಅಲ್ಲದೆ ದೃಷ್ಟಿಮರಿ, ಕುರಿ, ಕೋಳಿ ದೇವಿಗೆ ಬಲಿಕೊಟ್ಟು ದೇವಿಯ ಕೃಪೆಗೆ ಪಾತ್ರರಾಗುತ್ತಾರೆ.

ಬೇವಿನಹಳ್ಳಿ ದುರುಗಮ್ಮ

ಬಳ್ಳಾರಿಯ ಜಿಲ್ಲೆಯ ಸಂಡೂರು ತಾಲೂಕಿನ ಚಿಕ್ಕಕೆರನಹಳ್ಳಿ ಎಂಬ ಗ್ರಾಮದಲ್ಲಿ ದುರುಗಮ್ಮನ ದೇವಸ್ಥಾನವಿದೆ. ಹಿರಿಯರು ಹೇಳುವಂತೆ ಮೊದಲಿಗೆ ಬೇವಿನಹಳ್ಳಿ ಎಂಬ ಗ್ರಾಮವಿತ್ತು. ಆದರೆ ರಾಕ್ಷಸರಿಂದ ಈ ಹಳ್ಳಿಯು ಹಾಳಾಯಿತು. ಈಗಲೂ ಇಲ್ಲಿ ಒಂದು ಮನೆಯೂ ಸಹ ಇರುವುದಿಲ್ಲ. ದುರುಗಮ್ಮನ ದೇವಸ್ಥಾನ ಮಾತ್ರ ಇದೆ. ಈ ಗುಡಿಯಲ್ಲಿ ಒಳಗಡೆ ಉತ್ತ ಬೆಳಿದಿದೆ. ಉತ್ತದಲ್ಲಿ ದುರುಗಮ್ಮನ ಮರಿಯಮ್ಮನ ಬೆಳ್ಳಿಯ ಮೂರ್ತಿಗಳಿವೆ. ಆದರೆ ದೇವಿಯ ಎಲ್ಲ ಸಾಮಾನುಗಳನ್ನು ಚಿಕ್ಕಕೆರನಹಳ್ಳಿ ದುರುಗಮ್ಮನ ಗುಡಿಯಲ್ಲಿ ಇಟ್ಟಿರುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ಮಾತ್ರ ಎಲ್ಲ ಸಾಮಾನುಗಳನ್ನು ಬೇವಿನಹಳ್ಳಿ ದೇವಿಯ ಹತ್ತಿರ ತರುತ್ತಾರೆ. ಅಂದರೆ ಎರಡು ಕಡೆ ಈ ದುರುಗಮ್ಮ ದೇವಿಯು ನೆಲೆಯಾಗಿರುವುದು ವಿಶೇಷವಾಗಿರುತ್ತದೆ.

ದುರುಗಮ್ಮನ ಜಾತ್ರೆ: ದುರುಗಮ್ಮನ ಜಾತ್ರೆಯು ತೇರು ಒಳಗೊಂಡಂತೆ ಪ್ರತಿವರ್ಷ ಫೆಬ್ರವರಿ ಅಥವಾ ಮಾರ್ಚ್ ತಿಂಗಳಿನಲ್ಲಿ ನಡೆಯುತ್ತದೆ. ಬೇವಿನಹಳ್ಳಿಯಲ್ಲೇ ಈ ದೇವಿಯ ಜಾತ್ರೆಯನ್ನು ಮೂರು ದಿನಗಳವರೆಗೆ ನಡೆಯುತ್ತದೆ. ಈ ದೇವಿಯ ಪೂಜೆಯನ್ನು ಮಾಡುವರು. ಚಿಕ್ಕಕೆರನಹಳ್ಳಿ ಮಾದಿಗ ಸಮುದಾಯದ ವ್ಯಕ್ತಿ ಪೂಜಾರಿಯಾಗಿರುತ್ತಾನೆ. ಅಲ್ಲದೆ ದೇವಿಯ ಪ್ರತಿಯೊಂದು ಕಾರ್ಯಕ್ರಮಗಳನ್ನು ಮಾದಿಗರೇ ಮುಂದೆ ನಿಂತು ಕೆಲಸ ಮಾಡುತ್ತಾರೆ. ಆದರೆ ಇನ್ನುಳಿದ ಮೇಲ್ಜಾತಿಯವರು ಮುಂದೆ ನಿಂತು ದೇವಿಯ ಜಾತ್ರೆಯನ್ನು ಮಾಡಿಸುವಲ್ಲಿ ಬೆಂಬಲಿಗರಾಗಿರುತ್ತಾರೆ.

ದುರುಗಮ್ಮನ ಜಾತ್ರೆಗೆ ಕೂಡ್ಲಿಗಿಯ ಅಂಬೇಡ್ಕರ್ ನಗರದಿಂದ ಉಡಿ–ಅಕ್ಕಿ ಸಾಮಾನುಗಳು ಕೊಡಬೇಕೆಂಬ ನಿಯಮವನ್ನು ಈಗಲೂ ಪಾಲಿಸಿಕೊಂಡು ಬಂದಿದ್ದಾರೆ. ಈ ದೇವತೆಗೆ ಕೂಡ್ಲಿಗಿ ತಾಲೂಕು, ಸಂಡೂರು ತಾಲೂಕು ಮುಂತಾದ ಊರಿನವರು ದೇವತೆಗೆ ನಡೆದುಕೊಳ್ಳುತ್ತಾರೆ. ಈ ದೇವಿಗೆ ಪಟ್ಟದ ಕೋಣ ಒಳಗೊಂಡಂತೆ ಕುರಿ, ಕೋಳಿಗಳನ್ನು ಬಲಿ ಕೊಡುವ ಪರಂಪರೆಯಿದೆ. ಬೇವಿನ ಉಡಿಗೆ, ದೀಡ್ ನಮಸ್ಕಾರ ಮುಂತಾದ ಹರಕೆಗಳನ್ನು ಭಕ್ತರು ದೇವಿಗೆ ಒಪ್ಪಿಸುತ್ತಾರೆ.

ಕೂಡ್ಲಿಗಿ ಸೊಲ್ಲಮ್ಮ ದೇವಿ

ಈ ಊರಿನ ಹಿರಿಯರು ಹೇಳುವಂತೆ ಸೊಲ್ಲಮ್ಮ ದೇವಿಯು ಸೊನ್ನದಿಂದ ಬಂದವಳು. ಮೊದಲಿಗೆ ಅಂಬೇಡ್ಕರ್ ನಗರದ ಪಕ್ಕದ ಪಾದಗಟ್ಟೆಯಲ್ಲಿ ನೆಲೆಯಾಗಿ ನಂತರ ಸಿದ್ಧಯ್ಯನ ಗುಡ್ಡಕ್ಕೆ ಹೋಗುವ ದಾರಿಯಲ್ಲಿ ಆಲದ ಮರದ ಕೆಳಗೆ ಉದ್ಭವಮೂರ್ತಿಯಾಗಿ ಕಾಣಿಸಿಕೊಂಡಂತೆ. ಜನರು ಅದನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಾಲ್ಮೀಕಿ ಜನಾಂಗದ

ಒಬ್ಬ ಪೂಜಾರಿಗೆ ಮೈಯಲ್ಲಿ ಬಂದು ನಾನು ಸೊಲ್ಲಮ್ಮ ದೇವಿ ಎಂದು ಹೇಳಿಕೊಂಡಳಂತೆ. ಮೊದಲಿಗೆ ಸಣ್ಣದಾಗಿ ಕಂಡ ಮೂರ್ತಿಯು ಈಗ ಸುಮಾರು ಎರಡು ಅಡಿ ಎತ್ತರಕ್ಕೆ ಬೆಳೆದಿರುವುದು ಸೊಲ್ಲಮ್ಮನ ಪವಾಡವೆಂದೇ ಜನರು ಹೇಳುತ್ತಾರೆ. ನೆಲದಿಂದಲೇ ಉದ್ಭವ ಮೂರ್ತಿಯಾಗಿರುವುದು ತುಂಬಾ ವಿರಳ. ಆದರೆ ಸೊಲ್ಲಮ್ಮನ ಮೂರ್ತಿಯನ್ನು ಈಗಲೂ ನೋಡಬಹುದು. ಸೊಲ್ಲಮ್ಮನ ಜಾತ್ರೆಯು ಪ್ರತಿವರ್ಷ ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ನಡೆಯುತ್ತದೆ. ಮೂರು ದಿನಗಳವರೆಗೆ ದೇವಿಯ ಜಾತ್ರೆಯನ್ನು ಮಾಡುತ್ತಾರೆ. ಸೊಲ್ಲಮ್ಮ ದೇವಿಯ ಗುಡಿಯನ್ನು ಕೂಡ್ಲಿಗಿಯ ಹತ್ತನೇ ವಾರ್ಡಿನ ಕಾಲಿವೆ ಶಿವಪ್ಪನವರ ಮನೆಯ ಹತ್ತಿರ ಕಟ್ಟಿಸಿದ್ದಾರೆ. ಈ ದೇವಿಗೆ ಪ್ರತಿ ಮಂಗಳವಾರ, ಶುಕ್ರವಾರ ಪೂಜೆಯನ್ನು ಮಾಡುತ್ತಾರೆ.

ಜಾತ್ರೆ: ಈ ದೇವಿಯ ಜಾತ್ರೆಯನ್ನು ಕೂಡ್ಲಿಯ ಎಲ್ಲ ಸಮುದಾಯದವರು ಸೇರಿಕೊಂಡು ಮಾಡಿಕೊಂಡು ನಂತರ ಅಂಬೇಡ್ಕರ್ ನಗರಕ್ಕೆ ಬಂದು ತಪ್ಪಡಿ ವಾದ್ಯಗಳೊಂದಿಗೆ ಸಿದ್ಧಯ್ಯನ ಗುಡ್ಡಕ್ಕೆ ಹೋಗಿ ಮೂರು ದಿನಗಳ ಕಾಲ ದೇವಿಯ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಬೇವಿನಹಳ್ಳಿ ದುರುಗಮ್ಮ ದೇವಿಯಂತೆ ಈ ದೇವಿಗೂ ಬೇವಿನ ಉಡುಗೆ, ದೀಡ್ ನಮಸ್ಕಾರ ಒಳಗೊಂಡಂತೆ ಪ್ರತಿಯೊಂದು ಮನೆಯವರು ದೇವಿಗೆ ಬೇಟೆಯನ್ನು ಕಡಿದು ತಮ್ಮ ನೆಂಟರೊಂದಿಗೆ ಸಾಮೂಹಿಕವಾಗಿ ಊಟವನ್ನು ಮಾಡುತ್ತಾರೆ. ಕೂಡ್ಲಿಗಿಯ ಸುತ್ತಲೂ ಊರುಗಳಿಂದ ಬಂದ ದೇವಿಗೆ ಹರಕೆ ಒಪ್ಪಿಸುವುದನ್ನು ಕಾಣಬಹುದು.

ಕೂಡ್ಲಿಗಿ ತಾಲೂಕಿನ ಅಪ್ಪೇನಹಳ್ಳಿ ತಾಂಡಾ ಬಳಿಯ ಗುಡ್ಡದ ಮಾರೆಮ್ಮನ ಜಾತ್ರೆ

ಕೂಡ್ಲಿಗಿ ತಾಲೂಕಿನ ಗುಡೇಕೋಟೆ ಹೋಬಳಿ ವ್ಯಾಪ್ತಿಯ ಅಪ್ಪೇನಹಳ್ಳಿ ತಾಂಡದ ಹತ್ತಿರ ಉತ್ತರ ದಿಕ್ಕಿನಲ್ಲಿ ಎರಡು ಕಿ.ಮೀ. ಸಾಗಿದರೆ ಕೋಟೆಗುಡ್ಡ ಎಂಬ ಬೆಟ್ಟ ಕಾಣಿಸುತ್ತದೆ. ಅಲ್ಲಿಂದ ಒಂದು ಕಿ.ಮೀ. ಬೆಟ್ಟವನ್ನು ಹತ್ತಿದರೆ ಕಾಣುವುದು ಕೋಟೆಗುಡ್ಡ ಮಾರಮ್ಮದೇವಿ ದೇವಾಲಯ ಸುತ್ತಲು ಗುಡ್ಡಗಳ ಸೊಬಗು, ಕಡಿದಾದ ರಸ್ತೆಗಳು, ಬೆಟ್ಟದ ಮೇಲೆ ಪ್ರಕೃತಿಯ ಮಧ್ಯೆ ಮರದ ಕೆಳಗೆ ಪ್ರತಿಷ್ಠಾಪನೆಯಾಗಿರುವ ದೇವತೆ ನೋಡುಗರನ್ನು ಸೆಳೆಯುತ್ತದೆ. ಇದರಿಂದ ಈ ಬೆಟ್ಟಕ್ಕೆ ಕೋಟೆಗುಡ್ಡ ಮಾರಮ್ಮ ಸಂಸ್ಥಾನ ಎಂದೂ ಕರೆಯುತ್ತಾರೆ. ದೈವಭಕ್ತರಿಗೆ ದೇವತೆ, ನಿಸರ್ಗಪ್ರಿಯರಿಗೆ ಪ್ರಕೃತಿಸೌಂದರ್ಯದ ತಾಣವೂ ಆಗಿದೆ, ಬೆಟ್ಟದ ಮೇಲಿರುವ ಕಮಾನು ಕೋಟೆಗುಡ್ಡ ಮಾರಮ್ಮನ ದೇವಸ್ಥಾನಕ್ಕೆ ದಾರಿ ತೋರಿಸುತ್ತದೆ. ದೇವಸ್ಥಾನಕ್ಕೆ ಹೋಗಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ದಣಿದು ಬೆಟ್ಟದ ಮೇಲ್ಭಾಗ ತಲುಪಿದರೆ ಸಮತಟ್ಟಾದ, ವಿಶಾಲವಾದ ಬಯಲು ಕಾಣುತ್ತದೆ. ಇಲ್ಲಿ ಬೇವಿನ ಮತ್ತು ಅರಳಿ ಮರಗಳ ಮಧ್ಯೆ ದೇವತೆ ಪ್ರತಿಷ್ಠಾಪನೆಗೊಂಡಿದ್ದಾಳೆ. ಪ್ರತಿ ಮಂಗಳವಾರ, ಶುಕ್ರವಾರ ದೇವತೆಗೆ ವಿಶೇಷ ಪೂಜೆ ನೆರವೇರುತ್ತದೆ. ಪ್ರತಿ ವರ್ಷ ನಡೆಯುವ ದೇವಿ ಜಾತ್ರೆ, ಪ್ರತಿ ಮಂಗಳವಾರ

ಐದು ವಾರ ನಡೆಯುತ್ತಿದ್ದು, ಮೂರನೇ ಮಂಗಳವಾರ ವಿಶೇಷವಾಗಿರುತ್ತದೆ. ಈ ಸಮಯದಲ್ಲಿ ಬೇರೆ ಬೇರೆ ಕಡೆ ಇರುವ ಮಾರಮ್ಮ ದೇವರುಗಳನ್ನು ಇಲ್ಲಿ ತಂದು ಪ್ರದಕ್ಷಣೆ ಮಾಡಿ ಕರೆದೊಯ್ಯಲಾಗುತ್ತದೆ. ಅಕ್ಕಪಕ್ಕದ ಜಿಲ್ಲೆಗಳು, ನೆರೆಯ ಆಂಧ್ರಪ್ರದೇಶದಿಂದಲೂ ಸಾಕಷ್ಟು ಭಕ್ತರು ಬರುತ್ತಾರೆ. ಹರಕೆ ಹೊತ್ತವರು ಬೃಹದಾಕಾರವಾಗಿ ಬೆಳೆದ ಮರಕ್ಕೆ ತಾವು ತಂದ ಸೀರೆಯನ್ನು ಅರ್ಪಿಸುತ್ತಾರೆ. ಹೀಗಾಗಿ ಮರದ ತುಂಬೆಲ್ಲ ಬಣ್ಣಬಣ್ಣದ ಸೀರೆಗಳು ಆಕರ್ಷಕವಾಗಿ ಕಾಣುತ್ತವೆ.

ಈ ಭಾಗದಲ್ಲಿ ಹೆಚ್ಚಾಗಿ ಬುಡಕಟ್ಟು ಸಮುದಾಯದವರು ವಾಸಿಸುತ್ತಿದ್ದಾರೆ. ಇಲ್ಲಿನ ಜಾತ್ರೆಯಲ್ಲೂ ಬುಡಕಟ್ಟು ಸಂಸ್ಕೃತಿ ಮೇಳೈಸಿದೆ. ಮಾರಮ್ಮನ ಪೂಜೆಗೆ ಬರುವ ಭಕ್ತರು ಅಡುಗೆ ಪದಾರ್ಥ, ಪಾತ್ರೆ ಎಲ್ಲವನ್ನು ತಂದು ಹರಕೆ ಬೇಟೆಗಳನ್ನು ಅಂದರೆ ಕುರಿ, ಮೇಕೆ, ಕೋಳಿ ಮುಂತಾದವುಗಳನ್ನು ಬಲಿ ಕೊಟ್ಟು ಪೂಜೆ ಮಾಡಿ ಮುಗಿಸಿದ ನಂತರ ನೆಂಟರಿಷ್ಟರೊಂದಿಗೆ ಊಟಮಾಡಿ ಸಂಜೆ ತಮ್ಮ ತಮ್ಮ ಮನೆ ಊರುಗಳಿಗೆ ಹೋಗುತ್ತಾರೆ. ಇಲ್ಲಿನ ವಿಶೇಷತೆ ಏನೆಂದರೆ ದೇವಸ್ಥಾನದ ಹತ್ತಿರ ರಾತ್ರಿಯ ಹೊತ್ತು ಯಾರು ಬೆಟ್ಟದ ಮೇಲಿನ ದೇವಿಯ ಗುಡಿಯ ಇರುವುದಿಲ್ಲ. ಸಂಜೆಯಾಗುತ್ತಿದ್ದಂತೆ ಜಾಗ ಖಾಲಿ ಮಾಡುತ್ತಾರೆ.

ಸೊನ್ನ ಊರಮ್ಮ ದೇವಿ ಜಾತ್ರೆ

ಹಗರಿ ಬೊಮ್ಮನಹಳ್ಳಿ ತಾಲೂಕಿನಲ್ಲಿ ವಿಶಿಷ್ಟ ಹಬ್ಬಗಳ ಆಚರಣೆಗಳಿಗೆ ಹಳ್ಳಿಗಳು ಸಾಕ್ಷಿಯಾಗಿವೆ. ಬಹುತೇಕ ಗ್ರಾಮಗಳಲ್ಲಿ ವರ್ಷಕ್ಕೊಮ್ಮೆ ಐದು ಇಪ್ಪತ್ತೈದು ವರ್ಷಗಳಿಗೊಮ್ಮೆ ಜಾತ್ರೆ ನಡೆಸುವ ಸಂಪ್ರದಾಯವೂ ಇದೆ. ಆದರೆ ಸೊನ್ನ ಗ್ರಾಮದಲ್ಲಿ ಎಂಬತ್ತೈದು ವರ್ಷದ ಬಳಿಕ ಊರಮ್ಮ ದೇವಿ ಜಾತ್ರೆ ಆಚರಿಸಿದ್ದಾರೆ ಎಂದರೆ ನಂಬಲೇಬೇಕು.

ಊರಮ್ಮ ದೇವಿ ಜಾತ್ರೆ, ಫೆಬ್ರವರಿ ತಿಂಗಳಿನಲ್ಲಿ ಎಂಟು ದಿನಗಳವರೆಗೆ ನಡೆಯುತ್ತದೆ. ಐದು ಸಾವಿರ ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ಈಗಾಗಲೇ ಹಬ್ಬದ ವಾತಾವರಣ ಮನೆ ಮಾಡಿದೆ. ಗ್ರಾಮದೇವತೆಗಳಾದ ಊರಮ್ಮ, ದುರುಗಮ್ಮ, ಸೊಲ್ಲಮ್ಮ ದೇವತೆಗಳಿಗೆ ನಿತ್ಯ ವಿಶೇಷ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಕೊನೆಯ ದಿನ ಊರಮ್ಮ ದೇವಿ ಪಲ್ಲಕ್ಕಿ ಉತ್ಸವದ ಮುಖಾಂತರ ಜಾತ್ರೆ ಮುಗಿಯುತ್ತದೆ.

ಜಾತ್ರೆಯ ವಿಶೇಷತೆ ಏನೆಂದರೆ ಎಂಭತ್ತೈದು ವರ್ಷಗಳ ಬಳಿಕ ಆಚರಿಸುತ್ತಿರುವ ಜಾತ್ರೆಯು ವೈಶಿಷ್ಟ್ಯಪೂರ್ಣವಾಗಿದೆ. ಸೊನ್ನಗ್ರಾಮಕ್ಕೆ ಯಾವುದೇ ಅನಿಷ್ಟಗಳ ಕಣ್ಣು ಬೀಳದಿರಲಿ ಎಂದು ಗ್ರಾಮದ ಸುತ್ತ ಪಾರಿಬೇಲಿ ಹಾಕಲಾಗುತ್ತದೆ. ಆದ್ದರಿಂದ ವಾರದ ಹಿಂದೆ ಜಾತ್ರೆಗೆ ಬೇಕಾದ ಅಗತ್ಯ ವಸ್ತುಗಳನ್ನು ಗ್ರಾಮಸ್ಥರು ತಂದುಕೊಳ್ಳುತ್ತಾರೆ. ಅಲ್ಲದೆ ಜಾತ್ರೆ ಮುಗಿಯುವವರೆಗೆ ಊರಲ್ಲಿ ಯಾರೂ ಚಪ್ಪಲಿ ಹಾಕಿಕೊಂಡು ತಿರುಗಾಡುವಂತಿಲ್ಲ. ಇನ್ನು ಗ್ರಾಮಕ್ಕೆ ಬರುವ ಅತಿಥಿಗಳು ಊರ ಹೊರಗಡೆ ಪಾದರಕ್ಷೆ ಬಿಟ್ಟು ಅಲ್ಲೆ ಇಟ್ಟಿರುವ ನೀರಿನಿಂದ ಕಾಲು ತೊಳೆದುಕೊಂಡು ಒಳಬರಬೇಕು ಎಂಬ ಷರತ್ತೂ ಇದೆ.

ಗಟ್ಟಿಗಡಗಿ ಎಂಬ ವಿಶೇಷ ಧಾರ್ಮಿಕ ಆಚರಣೆಯಿಂದ ಆರಂಭಗೊಳ್ಳುವ ಜಾತ್ರೆಯಲ್ಲಿ ಗ್ರಾಮದ ಎಲ್ಲಾ ವರ್ಗದ ಜನರು ಪಾಲ್ಗೊಳ್ಳುವುದು ಮತ್ತೊಂದು ವಿಶೇಷ. ಕೆಲ ದೈವಸ್ಥರ ಮನೆಯಲ್ಲಿ ಗಟ್ಟಿಗಡಿಗೆ ಪ್ರತಿಷ್ಠಾಪಿಸಿ ಐದು ದಿನಗಳ ಕಾಲ ವಿವಿಧ ಧಾನ್ಯಗಳಿಂದ ಪೂಜೆ ಮಾಡಲಾಗುತ್ತದೆ. ಗಂಗಾಪೂಜೆಯ ಘಟಸ್ಥಾಪನೆ ಜೋಗಮ್ಮನಿಗೆ ಉಡಿ ತುಂಬುವುದು ಪಟ್ಟದ ಕೋಣವನ್ನು ಬಲಿ ಕೊಟ್ಟು ಊರಿನ ಸುತ್ತಲೂ ಚರಗ ಚೆಲ್ಲುವುದು ಕುರಿ ಕೋಳಿ, ಮೇಕೆಗಳನ್ನು ಬಲಿ ಕೊಡಲಾಗುತ್ತದೆ. ಅಲ್ಲದೆ ಭಕ್ತರು ಹಲವಾರು ರೀತಿಯ ಹರಕೆಗಳನ್ನು ಅಂದರೆ ಬೇವಿನ ಉಡುಗೆ, ದೀಡನಮಸ್ಕಾರ ಹೀಗೆ ಮುಂತಾದ ಹರಕೆಗಳನ್ನು ತೀರಿಸುತ್ತಾರೆ.

ಇಷ್ಟು ವರ್ಷಗಳ ನಂತರ ಏಕೆ ಈ ದೇವಿಯ ಜಾತ್ರೆಯನ್ನು ಮಾಡಿದ್ದೀರಿ? ಹೀಗೆ ಕಟ್ಟುನಿಟ್ಟಾಗಿ ಮಾಡಬೇಕೆಂಬ ನಿಯಮಗಳಿಗೆ ಏನಾದರೂ ದೇವತೆಯ ಆಚರಣೆಗೆ ಸಂಬಂಧಿಸಿದಂತೆ ದಾಖಲೆಗಳು ಇವೆಯಾ ಎಂದು ಕೇಳಿದಾಗ ಊರಿನ ಹಿರಿಯರು ಈ ರೀತಿಯ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಪೂರ್ವಜರು ಆಚರಿಸಿಕೊಂಡು ಬಂದಿರುವ ಧಾರ್ಮಿಕ ಪರಂಪರೆಯನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ ಆದ್ದರಿಂದ ಗ್ರಾಮದಲ್ಲಿ ಎಲ್ಲರ ಒಮ್ಮತದ ಮೇರೆಗೆ ಈ ದೇವಿಯ ಜಾತ್ರೆಯನ್ನು ಆಚರಿಸಲಾಗುತ್ತದೆ ಎನ್ನುತ್ತಾರೆ.

ಶಾನುಭೋಗರ ದಾಖಲೆ ನೋಡಿ ಆಚರಣೆಯನ್ನು ಮಾಡುತ್ತೇವೆ. ಸೊನ್ನದಲ್ಲಿ ಎಂಬತ್ತೈದು ವರ್ಷದ ಹಿಂದೆ ಊರಮ್ಮನ ಜಾತ್ರೆ ಆಚರಿಸಲಾಗಿತ್ತು ಎನ್ನಲಾಗಿದ್ದು, ಜಾತ್ರೆಯನ್ನು ಕಣ್ತುಂಬ ನೋಡಿದವರು ಯಾರೂ ಈಗಿಲ್ಲ ತೊಂಬತ್ತು ವರ್ಷ ಮೇಲ್ಪಟ್ಟವರಿಗೂ ಜಾತ್ರೆಯ ನೆನಪಿಲ್ಲವಂತೆ. ಇದರಿಂದ ಕಳೆದ ನಾಲ್ಕು ವರ್ಷಗಳಿಂದ ಜಾತ್ರೆ ಆಚರಿಸಬೇಕು ಎಂಬ ಗ್ರಾಮಸ್ಥರ ಆಸೆ ಈಗ ಈಡೇರಿದೆ. ಗ್ರಾಮರಚನೆಯಿಂದ ದಾಖಲೆ ಸಂಗ್ರಹಿಸಿಟ್ಟಿರುವ ಶಾನುಭೋಗ ಕುಟುಂಬದ ಕರಣಂ ಜಗನ್ನಾಥಭಟ್ಟರ ಮಾರ್ಗದರ್ಶನದ ಮೇರೆಗೆ ಜಾತ್ರೆ ಆಚರಿಸಲಾಗುತ್ತದೆ ಎಂದು ಗ್ರಾಮದ ಹಿರಿಯರು ಹೇಳುತ್ತಾರೆ.

ಬ್ಯಾಲಕುಂದಿ ಉಡಸಲಮ್ಮನ ಜಾತ್ರೆ

ಮರಿಯಮ್ಮನಹಳ್ಳಿ ಸಮೀಪದ ಬ್ಯಾಲಕುಂದಿ ಗ್ರಾಮದಲ್ಲಿ ಒಂಬತ್ತು ವರ್ಷದ ನಂತರ ಗ್ರಾಮದ ಉಡಸಲಮ್ಮ ದೇವಿಯ ಜಾತ್ರೆ ನಡೆಯುತ್ತದೆ. ಅಂದರೆ ಈ ಜಾತ್ರೆಯ ಸಂದರ್ಭದಲ್ಲಿ ಒಂಭತ್ತು ದಿನಗಳ ಕಾಲ ಇಡೀ ಗ್ರಾಮಕ್ಕೆ ಮುಳ್ಳಿನ ಪಾರಿ ಬೇಲಿಯನ್ನು ಹಾಕಿ ನಿರ್ಬಂಧ ಹೇರಲಾಗುತ್ತದೆ. ಗ್ರಾಮ ಬಿಟ್ಟು ಯಾರೂ ಹೊರಗಡೆ ತೆರಳುವಂತಿಲ್ಲ. ಸ್ವಗ್ರಾಮದವರು ಸೇರಿದಂತೆ ಯಾರು ಪ್ರವೇಶಿಸದಂತೆ ಮುಳ್ಳಿನ ಬೇಲಿ ಹಾಕುವುದು. ಈ ಆಚರಣೆಯ ವಿಶೇಷತೆಯಾಗಿದೆ. ಜಾತ್ರಾ ಮಹೋತ್ಸವ ಕಾರ್ಯಕ್ರಮಗಳು ಮಂಗಳವಾರದಿಂದ ಆರಂಭವಾಗಿದ್ದು, ಗ್ರಾಮದ ಅಗಸೆ ಬಾಗಿಲನ್ನು ತಳಿರು ತೋರಣಗಳಿಂದ ಶೃಂಗರಿಸಲಾಗುತ್ತದೆ.

ಸಂಜೆ ಗ್ರಾಮದ ಕುಂಬಾರರ ಮನೆಯಿಂದ ಐದು ಗಡಿಗೆಗಳನ್ನು ತಂದು ಪೂಜಾ ವಿಧಿ ವಿಧಾನಗಳನ್ನು ನೆರವೇರಿಸುವ ಪದ್ಧತಿ ಪ್ರಕಾರ ಗ್ರಾಮದ ಬಣಕಾರರು, ತಳವಾರರು, ಗೌಡ್ರು, ಬಾರಿಕರ ಮನೆ ಹಾಗೂ ಉಚ್ಚಂಗೆಮ್ಮ ಗುಡಿ ಸೇರಿದಂತೆ ಐದು ಕಡೆ ಗಟ್ಟಿಗಡಿಗೆಯನ್ನು ಪ್ರತಿಷ್ಠಾಪಿಸಿ ದೀಪ ಹಚ್ಚಿಡಲಾಗುತ್ತದೆ. ಹೀಗೆ ಹಚ್ಚಿದ ದೀಪ ಒಂಬತ್ತು ದಿನಗಳವರೆಗೆ ನಂದದಂತೆ ಕಾಯುವ ಕೆಲಸ ಸಂಬಂಧಿಸಿದ ಮನೆಯವರದ್ದಾಗಿದೆ.

ದೇವಿಯ ಜಾತ್ರೆಯ ಅಂಗವಾಗಿ ಇಡೀ ಗ್ರಾಮಕ್ಕೆ ಮಂಗಳವಾರ ಮುಳ್ಳಿನ ಪಾರಿ ಬೇಲಿ ಹಾಕಿ ಕಟ್ಟಪ್ಪಣೆ ನೀಡಲಾಗುತ್ತದೆ. ಗ್ರಾಮದ ಅಗಸೆ ಬಾಗಿಲಿನ ಮೂಲಕವೇ ಹೊರಗೆ ಹೋಗಬೇಕಾಗಿಕದೆ. ಒಳಗೆ ಹೋಗುವಾಗ ತಮ್ಮೊಂದಿಗೆ ತಗೆದುಕೊಂಡು ಹೋದ ವಸ್ತುಗಳನ್ನು ಪುನಃ ಹೊರಗಡೆ ಒಯ್ಯದಾಗಿದೆ ಇದಕ್ಕಾಗಿ ಅಗಸೆ ಬಾಗಿಲ ಬಳಿ ವ್ಯಕ್ತಿಯೊಬ್ಬರನ್ನು ನೇಮಿಸಲಾಗುತ್ತದೆ. ಒಳ ಹೊರ ಹೋಗುವವರನ್ನು ತಪಾಸಣೆ ಮಾಡಿಸಿ ಒಳಗೆ ಬಿಡಲಾಗುತ್ತದೆ. ಅಲ್ಲದೆ ಚಪ್ಪಲಿಯನ್ನು ಧರಿಸಿಕೊಂಡು ಹೋಗದಂತೆ ನಿಷೇಧವನ್ನು ಹೇರಲಾಗುತ್ತದೆ.

ದನಕರುಗಳು, ದ್ವಿಚಕ್ರ ವಾಹನ ಸೇರಿದಂತೆ ಇತರೆ ಸಾಮಾನುಗಳನ್ನು ಸಹ ಅಗಸೆ ಬಾಗಿಲ ಹೊರಗಡೆಯೇ ಬಿಡಬೇಕಾಗಿರುತ್ತದೆ. ಸದ್ಯ ಮೊಬೈಲ್ ಅನ್ನು ಮಾತ್ರ ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗುತ್ತದೆ. ಗ್ರಾಮದಲ್ಲಿ ಒಂಭತ್ತು ದಿನಗಳ ಕಾಲ ರೊಟ್ಟಿ ಸುಡುವಂತಿಲ್ಲ. ಹಂಚು ಒಲೆಯ ಮೇಲೆ ಇಡುವಂತಿಲ್ಲ. ಜೊತೆಗೆ ಕುಟ್ಟುವುದು, ಬೀಸುವುದು ಮಾಡದಂತೆ ನಿರ್ಬಂಧ ಹೇರಲಾಗುತ್ತದೆ. ಗ್ರಾಮಸ್ಥರು ಒಂಬತ್ತು ದಿನಗಳಿಗೆ ಈಗಾಗಲೇ ಬೇಕಾಗುವಷ್ಟು ರೊಟ್ಟಿ ಪುಡಿಗಳು ಸೇರಿದಂತೆ ಇತರೆ ಆಹಾರ ಪದಾರ್ಥಗಳನ್ನು ಗ್ರಾಮಸ್ಥರು ಮೊದಲೇ ಸಿದ್ಧಪಡಿಸಿಕೊಂಡಿರುತ್ತಾರೆ. ಪಟ್ಟಣ ಸೇರಿದಂತೆ ಹೊಸಪೇಟೆಗೆ ತೆರಳುವ ವಿದ್ಯಾರ್ಥಿಗಳ ಪುಸ್ತಕ ಚೀಲಗಳನ್ನು ಸಹ ಹೊರಗಡೆ ಇಟ್ಟು ಒಳ ತೆರಳಬೇಕಾಗುತ್ತದೆ. ಒಂಬತ್ತು ವರ್ಷದ ನಂತರ ನಡೆಯುವ ಜಾತ್ರೆಯ ಅಂಗವಾಗಿ ಗ್ರಾಮಸ್ಥರು ಮನೆಗಳಿಗೆ ಸುಣ್ಣಬಣ್ಣಗಳಿಂದ ಅಲಂಕಾರ ಮಾಡುತ್ತಾರೆ. ಜಾತ್ರೆಯು ಮಂಗಳವಾರ ಹಾಗೂ ಬುಧವಾರ ನಡೆಯುತ್ತದೆ ಎಂದು ಗ್ರಾಮದ ಬಣಕಾರರು ಹೇಳುತ್ತಾರೆ. ಗ್ರಾಮದಲ್ಲಿ ಒಂಬತ್ತು ವರ್ಷಗಳ ನಂತರ ಜಾತ್ರೆ ನಡೆಯುತ್ತಿದ್ದು ಗ್ರಾಮಸ್ಥರು ಶ್ರದ್ಧಯಿಂದ ಪಾಲ್ಗೊಳ್ಳುತ್ತಾರೆ. ಇಂತಹ ಆಚರಣೆಗಳಿಂದ ಗ್ರಾಮದಲ್ಲಿ ಶಾಂತಿ, ಸಹಬಾಳ್ವೆ, ಸೌಹಾರ್ದತೆ ನೆಲೆಸುತ್ತದೆ ಎಂದು ಬ್ಯಾಲಕುಂದಿ ಗ್ರಾಮದ ರಮೇಶ್ ಅವರು ಹೇಳುತ್ತಾರೆ.

ಈ ಉಡಸಲಮ್ಮ ದೇವಿಗೆ ಪಟ್ಟದ ಕೋಣವನ್ನು ಬಲಿ ಕೊಟ್ಟು ಊರಿನ ಸುತ್ತಲೂ ಚರಗವನ್ನು ಚೆಲ್ಲುವುದು ಪ್ರಮುಖವಾದ ಕಾರ್ಯವಾಗಿರುತ್ತದೆ ಅಲ್ಲದೆ ಭಕ್ತರು ತಮ್ಮ ಹರಕೆಗಳನ್ನು ತೀರಿಸಲು ಬೇವಿನ ಉಡಿಗೆ ಹೊಳಗೊಂಡಂತೆ ಕುರಿ, ಕೋಳಿ, ಮುಂತಾದವುಗಳನ್ನು ಬಲಿ ಕೊಟ್ಟು ತಮ್ಮ ಹರಕೆಯನ್ನು ತೀರಿಸುತ್ತಾರೆ.

ಕುರಿ ರಕ್ತದಲ್ಲಿ ಉರುಳಾಡುವ ಭಕ್ತರು

ಕುರುಗೋಡು ಸಮೀಪದ 'ಮದಿರೆ' ಎಂಬ ಗ್ರಾಮದಲ್ಲಿ ಕೆಂಚಮಾಳೇಶ್ವರನಿಗೆ ವಿಶಿಷ್ಟ ಆಚರಣೆಯನ್ನು ಮಾಡುತ್ತಾರೆ. ನೆಲದ ಮೇಲೆ ಚೆಲ್ಲುವ ಕುರಿಯ ರಕ್ತದಲ್ಲಿ ಉರುಳಾಡಿದರೆ ರೋಗದಿಂದ ಮುಕ್ತಿ ಪಡೆಯಬಹುದು ಎನ್ನುವ ನಂಬಿಕೆ ಮದಿರೆ ಗ್ರಾಮದಲ್ಲಿ ಇಂದಿಗೂ ಆಚರಣೆಯಲ್ಲಿದೆ. ಇಲ್ಲಿನ ವಿಶೇಷತೆ ಏನೆಂದರೆ ಬನ್ನಿಮರದ ಕಟ್ಟೆಯಿಂದ ಭಕ್ತರ ಮೆರವಣಿಗೆ ದೇವರಿಗೆ ಸಾವಿರಾರು ಕುರಿಗಳ ಮಾರಣಹೋಮ ನಡೆಯುತ್ತದೆ.

ಕೆಂಚವಮಾಳೇಶ್ವರನಿಗೆ ಗರ್ಭ ಧರಿಸಿದ ಕುರಿಯನ್ನು ಬಲಿ ಕೊಡುವುದು ವಿಶೇಷವಾಗಿರುತ್ತದೆ. ಸೂರ್ಯನು ಉದಯಿಸುವ ಮುನ್ನ ದೇವಸ್ಥಾನದ ವತಿಯಿಂದ ಗರ್ಭ ಧರಿಸಿದ ಕುರಿಯನ್ನು ಬಲಿ ಕೊಡಲಾಗುತ್ತದೆ. ಭಕ್ತರ ಹರಕೆಯ ರೂಪದಲ್ಲಿ ಕೊಡುವ ನೂರಾರು ಕುರಿಗಳಿಂದ ಮಾಂಸದ ಊಟ ತಯಾರಿಸಿ ಸಾವಿರಾರು ಜನರಿಗೆ ಉಣಬಡಿಸುವ ಸಂಪ್ರದಾಯವಿದೆ.

ಪ್ರತಿ ಭಾನುವಾರ ಗ್ರಾಮದ ಎಲ್ಲ ಜನರು ಜಾತಿಭೇದವಿಲ್ಲದೆ ಕೆಂಚಮಾಳೇಶ್ವರ ದೇವಸ್ಥಾನಕ್ಕೆ ತೆರಳುವ ಸಂಪ್ರದಾಯವಿದೆ. ರಾತ್ರಿ ಡೊಳ್ಳಿನ ಪದ ಹಾಡಿ ವಾಲಗ ಪೂಜೆಯೊಂದಿಗೆ ಪೂಜಾ ಕೈಂಕರ್ಯಗಳು ಪೂರ್ಣಗೊಳ್ಳುತ್ತವೆ ಎನ್ನುತ್ತಾರೆ ದೇವಸ್ಥಾನದ ಧರ್ಮಾಧಿಕಾರಿ ದೊಡ್ಡಬಸಪ್ಪನವರು.

ಗ್ರಾಮದಲ್ಲಿ ಒಟ್ಟು ಏಳುನೂರು ಮನೆಗಳಿವೆ. ನಾಲ್ಕು ಸಾವಿರ ಜನಸಂಖ್ಯೆಯನ್ನು ಹೊಂದಿದೆ. ಗ್ರಾಮದಲ್ಲಿರುವ ಪ್ರತಿಯೊಂದು ಮನೆಯಲ್ಲಿ ಗಂಡುಮಗುವಿಗೆ ಕೆಂಚಮಾಳಪ್ಪ ಮತ್ತು ಹೆಣ್ಣುಮಗುವಿಗೆ ಕೆಂಚಳಮ್ಮ ಎಂದು ನಾಮಕರಣ ಮಾಡುವ ಸಂಪ್ರದಾಯ ಇರುವುದರಿಂದ ಗ್ರಾಮದಲ್ಲಿ ಈ ಹೆಸರಿರುವವರ ಸಂಖ್ಯೆ ಹೆಚ್ಚಾಗಿದೆ. ನೂರಾರು ವರ್ಷಗಳಿಂದ ಕುರಿ ಮಾಂಸದ ಊಟ ತಯಾರಿಸಿ ಭಕ್ತರಿಗೆ ಉಣಬಡಿಸುವ ಸಂಪ್ರದಾಯವಿದೆ. ಇಲ್ಲಿ ಜಾತಿಭೇದಕ್ಕೆ ಅವಕಾಶವಿಲ್ಲದೆ ಎಲ್ಲರೂ ಸಾಮೂಹಿಕವಾಗಿ ಊಟವನ್ನು ಮಾಡುತ್ತಾರೆ ಎಂದು ದೇವಸ್ಥಾನದ ಧರ್ಮಾಧಿಕಾರಿ ದೊಡ್ಡಬಸಪ್ಪನವರು ಹೇಳುತ್ತಾರೆ.

ಬಡೇಲಡಕು ಸತ್ಯಮ್ಮನ ಜಾತ್ರೆ

ಕೂಡ್ಲಿಗಿ ತಾಲೂಕಿನ ಬಡೇಲಡಕು ಗ್ರಾಮದಲ್ಲಿ ಸತ್ಯಮ್ಮ ಜಾತ್ರೆಯನ್ನು ಒಂಬತ್ತು ವರ್ಷಗಳ ನಂತರ ಮಾಡಿದರು. ಈ ದೇವತೆಯ ಪೂಜಾರಿ ಮಾರಮ್ಮ ಇವರು ನಾಯಕ ಸಮುದಾಯದವಳಾಗಿದ್ದಾಳೆ. ಸುಮಾರು ವರ್ಷಗಳಿಂದಲೂ ಮಾರಮ್ಮನೇ ಪೂಜಾರಿಯಾಗಿ ದೇವಿಯ ಸೇವೆಯನ್ನು ಮಾಡುತ್ತಾ ತನ್ನ ಕಾರ್ಯವನ್ನು ನಿರ್ವಹಿಸುತ್ತಾಳೆ. ಈಕೆಯ ಪ್ರತಿ ದಿನವು ದೇವತೆಗೆ ಪೂಜೆಯನ್ನು ಮಾಡುವುದು ಭಕ್ತರಿಗೆ ಹಣ್ಣು ಕಾಯಿಗಳನ್ನು ನೈವೇದ್ಯ

ಮಾಡಿಕೊಡುವುದು ಇವಳ ಕಾಯಕವಾಗಿದೆ. ಇಲ್ಲಿಯ ವಿಶೇಷತೆ ಎಂದರೆ ಹೆಚ್ಚಿನ ರೀತಿಯಲ್ಲಿ ಗಂಡಸರೇ ಪೂಜಾರಿಯಾಗಿರುವುದನ್ನು ನೋಡಿದ್ದೇವೆ. ಆದರೆ ಸ್ತ್ರೀಯರು ಪೂಜಾರಿಯಾಗಿರುವುದು ಬಹಳ ಕಡಿಮೆ ಸಂಖ್ಯೆಯಿದೆ. ಮಾರಮ್ಮ ಈ ದೇವತೆಯ ಸೇವೆ ಮಾಡುವುದೇ ವಿಶೇಷವಾಗಿರುತ್ತದೆ ಎಂದು ಹೇಳಬಹುದು. ಬಡೇಲಡಕು ಗ್ರಾಮವು ದೊಡ್ಡ ಊರಾದರೂ ಸಹ ಊರಿನ ಎಲ್ಲಾ ಜನರು ಸೇರಿಕೊಂಡು ಈ ದೇವಿಯ ಜಾತ್ರೆಯನ್ನು ಮಾಡುವುದು ನೋಡಿದರೆ ನಾವೆಲ್ಲ ಒಂದೇ ಎಂಬ ಭಾವನೆಯನ್ನು ಸೂಚಿಸುವುದನ್ನು ಕಾಣಬಹುದು. ಈ ಊರಿನ ಹಲವಾರು ರೀತಿಯ ಜನಾಂಗದವರಿದ್ದಾರೆ. ಗೌಡರು, ಗೊಲ್ಲರು, ಜಂಗಲೆರು, ನಾಯಕರು, ಮಾದಿಗರು ಹೀಗೆ ಮುಂತಾದ ಹಲವಾರು ಜನಾಂಗದವರು ಸೇರಿಕೊಂಡು ಒಮ್ಮತದಿಂದ ಈ ದೇವಿಯ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

ಈ ಊರಿನ ಸುತ್ತಲೂ ಮುಳ್ಳಿನ ಪಾರಿಬೇಲಿಯನ್ನು ಹಾಕಲಾಗುತ್ತದೆ. ಯಾರೂ ಹೊರ ಹೊಗದಂತೆ ನಿರ್ಬಂಧ ಹೇರಲಾಗುತ್ತದೆ. ಒಂದು ವೇಳೆ ಅನಿವಾರ್ಯವಾಗಿ ಹೊರ ಹೋಗಬೇಕಾದರೆ ತಮ್ಮೊಂದಿಗೆ ಯಾವ ವಸ್ತುವನ್ನೂ ಇಲ್ಲಿಂದ ಒಯ್ಯುವಂತಿಲ್ಲ ಮಹಿಳೆಯರು ಹೂ ಮುಡಿದು ಹೊರಗೆ ಹೋಗುವಂತಿಲ್ಲ.

ಒಂದು ವಿಶೇಷ ಆಚರಣೆಗೆ ಬಡೇಲಡಕು ಗ್ರಾಮವು ಸಾಕ್ಷಿಯಾಗಿದೆ. ಗ್ರಾಮದಲ್ಲಿರುವ ಹೆಣ್ಣುದೇವತೆ ಜಾತ್ರೆಯ ಅಂಗವಾಗಿ ಸೋಮವಾರದಿಂದ ಬುಧವಾರ ಬೆಳಿಗ್ಗೆವರೆಗೆ ಜನರು ಈ ಆಚರಣೆಯನ್ನು ಮಾಡುತ್ತಾರೆ.

ಸೋಮವಾರ ಆರಂಭವಾಗುವ ಗ್ರಾಮದೇವತೆ ಸತ್ಯಮ್ಮನ ಜಾತ್ರೆಯು ಇಡೀ ಗ್ರಾಮದ ಸುತ್ತ ಪಾರಿಬೇಲಿ ಹಾಕಲಾಗಿರುತ್ತದೆ. ಈ ಸಂದರ್ಭದಲ್ಲಿ ಗ್ರಾಮದಲ್ಲಿ ಯಾರು ಚಪ್ಪಲಿ ಧರಿಸಿ ಓಡಾಡುವಂತಿಲ್ಲ. ವಾಹನಗಳ ಸಂಚಾರವೂ ಇಲ್ಲ. ಗ್ರಾಮಕ್ಕೆ ಬರುವ ಬೀಗರು, ಸಂಬಂಧಿಕರು, ಸ್ನೇಹಿತರು, ತಮ್ಮ ಪಾದರಕ್ಷೆಗಳನ್ನು ಅಗಸೆ ಬಾಗಿಲ ಬಳಿ ಬಿಟ್ಟು, ಅಲ್ಲಿಂದ ಮಾತ್ರ ಗ್ರಾಮ ಪ್ರವೇಶ ಮಾಡಬೇಕು ಎನ್ನುವ ನಿರ್ಬಂಧ ವಿಧಿಸಲಾಗಿತ್ತು. ಗ್ರಾಮದ ಅಗಸೆ ಬಾಗಿಲಲ್ಲಿ ಒಳ ಹೋಗುವವರನ್ನು ಮತ್ತು ಹೊರ ಬರುವವರನ್ನು ಯುವಕರು ಪರೀಕ್ಷಿಸಿ ಬಿಡುತ್ತಾರೆ.

ಜಾತ್ರೆಯ ಸಂದರ್ಭದಲ್ಲಿ ಯಾರು ಹಂಚನ್ನು ಒಲೆಯ ಮೇಲೆ ಇಡುವಂತಿಲ್ಲ ಎನ್ನುವುದು ಇಲ್ಲಿನ ಮತ್ತೊಂದು ಷರತ್ತು. ಹೀಗಾಗಿ ಜನರು ಒಂದು ವಾರಕ್ಕೆ ಬೇಕಾಗುವಷ್ಟು ರೊಟ್ಟಿ ಪುಡಿಗಳನ್ನು ಸಿದ್ಧಪಡಿಸಿಕೊಂಡಿರುತ್ತಾರೆ.

ಪ್ರತಿವರ್ಷ ಶೂನ್ಯ ಮಾಸದಲ್ಲಿ ಈ ರೀತಿ ಹೆಣ್ಣು ದೇವರುಗಳ ಜಾತ್ರೆಗಳು ನಡೆಯುತ್ತವೆ. ಜಾತ್ರೆ ಅಂಗವಾಗಿ ಗ್ರಾಮದಲ್ಲಿ ಭಾನುವಾರ ರಾತ್ರಿಯಿಂದಲೇ ಗ್ರಾಮಕ್ಕೆ ಪಾರಿಬೇಲಿ

ಹಾಕಲಾಗಿರುತ್ತದೆ. ಮಂಗಳವಾರ ಗ್ರಾಮ ಸಮೀಪದ ಮಜ್ಜನ ಬಾವಿಗೆ ಹೋಗಿ ಗಂಗೆ ಪೂಜೆ ಮಾಡಿಕೊಂಡು ಬರಲಾಗುತ್ತದೆ. ಬುಧವಾರ ಬೆಳಗಿನ ಜಾವ ಸುಮಾರು ನಾಲ್ಕು ಗಂಟೆಯ ಸಮಯದಲ್ಲಿ ದೇವಿಯ ಪಟ್ಟದ ಕೋಣವನ್ನು ಬಲಿ ಕೊಟ್ಟು ಅದರ ಹೊಟ್ಟೆಯೊಳಗಿನ ಕರಚನ್ನು ಬೇಯಿಸಿದ ಕಾಳನ್ನು ಮಿಶ್ರಣಮಾಡಿಕೊಂಡು ಮಾದಿಗ ಸಮುದಾಯದವರು ಭೂತ ಬಲಿಯನ್ನು ತಿರುಗುವುದರ ಮುಖಾಂತರ ಇಡೀ ಊರಿನ ಸುತ್ತಲೂ ಚರಗವನ್ನು ಚೆಲ್ಲುವುದು ವಿಶೇಷವಾಗಿರುತ್ತದೆ. ಹೀಗೆ ಮಾಡುವುದರಿಂದ ಊರಿನ ಹುಲುಸು ಹೆಚ್ಚಾಗುತ್ತದೆ. ಬೆಳೆಯ ಫಸಲುಗಳು ಚೆನ್ನಾಗಿ ಬರುತ್ತವೆ ಊರಿಗೆ ಯಾವುದೇ ರೀತಿಯ ತೊಂದರೆಗಳು ಬರುವುದಿಲ್ಲ ಎಂಬ ಬಲವಾದ ನಂಬಿಕೆ ಗ್ರಾಮದ ಜನರಲ್ಲಿದೆ.

ಕೋಣವನ್ನು ಬಲಿ ಕೊಟ್ಟ ನಂತರ ಹರಕೆಯ ಸಾವಿರಾರು ಕುರಿ ಮೇಕೆಗಳನ್ನು ಬಲಿ ಕೊಡುತ್ತಾರೆ. ಅಲ್ಲದೆ ಕೋಳಿಯನ್ನು ಸಹ ಬಲಿ ಕೊಟ್ಟು ಬೇವಿನ ಉಡಿಗೆಯ ಮುಖಾಂತರ ತಮ್ಮ ಹರಕೆಗಳನ್ನು ತೀರಿಸುತ್ತಾರೆ. ಈ ಊರಿನಲ್ಲಿ ಸುಮಾರು ಹನ್ನೆರಡು ನೂರು ಮನೆಗಳಿವೆ. ನಾಲ್ಕು ಸಾವಿರದ ಏಳುನೂರು ಜನಸಂಖ್ಯೆಯಿದೆ ಸುಮಾರು ಹತ್ತು ಜಾತಿಯ ಜನಾಂಗದವರಿದ್ದಾರೆ.

ದುರ್ಗಾದೇವಿ ಜಾತ್ರೆ

ಮರಿಯಮ್ಮನಹಳ್ಳಿ ಪಟ್ಟಣದ ಗ್ರಾಮದೇವತೆ ರಾಂಪುರ ದುರ್ಗಾದೇವಿಯ ಜಾತ್ರೆ ಸಡಗರ ಸಂಭ್ರಮದ ಜೊತೆಗೆ ಶ್ರದ್ಧಾಭಕ್ತಿಯಿಂದ ನಡೆಯುತ್ತದೆ. ತಾಂಡದ ಜನರು ಈ ದೇವಿಯ ಜಾತ್ರೆಯಲ್ಲಿ ಪಾಲ್ಗೊಂಡು ನೃತ್ಯ ಮಾಡುವ ಮೂಲಕ ಗಮನ ಸೆಳೆಯುವರು ಮರಿಯಮ್ಮನಹಳ್ಳಿ ತಾಂಡದ ಜನತೆ ಈ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದು, ಸಂಜೆ ತಾಂಡದ ಗ್ರಾಮಸ್ಥರು ಸಕಲವಾದ್ಯಗಳ ಮೂಲಕ ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ. ಅಲ್ಲದೆ ಈ ದೇವತೆಗೆ ಕುರಿ, ಕೋಳಿ ಮುಂತಾದವುಗಳನ್ನು ಬಲಿ ಕೊಟ್ಟು ದೇವತೆಗೆ ಹರಕೆಯನ್ನು ತೀರಿಸುವುದು ವಿಶೇಷವಾಗಿರುತ್ತದೆ.

ಕೂಡ್ಲಿಗಿ ತಾಲೂಕಿನ ಕಾನಾಹೊಸಹಳ್ಳಿ ಗ್ರಾಮದಲ್ಲಿ ನಾಲ್ಕು ದಿನಗಳ ಮಾರಮ್ಮ ದೇವಿ ಜಾತ್ರಾ ಮಹೋತ್ಸವ ಆರಂಭವಾಗುತ್ತದೆ. ಸೋಮವಾರ ರಾತ್ರಿಯಿಂದ ಬುಧವಾರ ಬೆಳಗಿನ ಜಾವದವರೆಗೂ ಮೂಲ ಗ್ರಾಮಕ್ಕೆ ಪಾರಿಬೇಲಿ ಹಾಕಲಾಗುತ್ತದೆ. ಈ ಸಂದರ್ಭದಲ್ಲಿ ಯಾರೂ ಕಾಲಲ್ಲಿ ಚಪ್ಪಲಿ ಹಾಕುವಂತಿಲ್ಲ. ಅಲ್ಲದೇ ಗ್ರಾಮದ ಒಳಕ್ಕೆ ಬರುವವರು ಏನನ್ನೂ ತೆಗೆದುಕೊಂಡು ಹೋಗುವಂತಿಲ್ಲ. ಮೂರು ವರ್ಷಗಳಿಗೊಮ್ಮೆ ನಡೆಯುವ ಈ ಜಾತ್ರಾ ಅಂಗವಾಗಿ ಈಗಾಗಲೇ ಅನೇಕ ಧಾರ್ಮಿಕ ಕಾರ್ಯಗಳು ಆರಂಭವಾಗಿರುತ್ತವೆ. ಪ್ರಥಮ ಕಾರ್ಯಕ್ರಮವಾಗಿ ಗುಗ್ಗರಿ ಹಾಕಲಾಗಿದ್ದು, ಶಿವರಾತ್ರಿಯ ದಿನದಂದು ಒಂಬತ್ತು ವಿಧದ ನವಧಾನ್ಯಗಳನ್ನು ಹಾಕಿ ಹುಗ್ಗಿ ಮತ್ತು ಮಳ್ಳಕ್ಕಿಪಡುಗ ಸ್ಥಾಪನೆ ಮಾಡಲಾಗಿದೆ. ಇದರ ಜೊತೆಗೆ ಸಂಪ್ರದಾಯದಂತೆ ಮಾರ್ಚ್

ಒಂದರಂದು ಮಾರಮ್ಮ ದೇವಿಯ ಗುಡಿ ಪಕ್ಕದಲ್ಲಿರುವ ಕೋಟೆಗೆ ಏಣಿ ಹಾಕಿ ಅಲ್ಲಿ ನಂದಾದೀಪ ಬೆಳಗಿಸಲಾಗಿದೆ. ಈ ಏಣಿ ಈಚಲಮರದಿಂದ ಮಾಡಿರುವುದು ಮತ್ತೊಂದು ವಿಶೇಷ. ಭಾನುವಾರ ದೇವಿಯ ರಥವನ್ನು ಕಟ್ಟುವ ಕಾರ್ಯಭಾರದಿಂದ ನಡೆದಿದ್ದು, ತೆಂಗಿನ ಗರಿಯಿಂದ ನಿರ್ಮಾಣ ಮಾಡಿ, ಹೂ, ಬಾಳೆಕಂಬ, ಬಣ್ಣದ ಹಾಳೆಗಳಿಂದ ಅಲಂಕೃತಗೊಳಿಸ ಲಾಗಿರುತ್ತದೆ. ಮನೆಯಲ್ಲಿ ದೇವಿಯನ್ನು ಭಕ್ತರು ಪ್ರತಿಷ್ಠಾಪಿಸಿದರೂ ನಂತರ ಸಂಪ್ರದಾಯದಂತೆ ಬುಧವಾರ ಬೆಳಗಿನ ಜಾವ ಊರ ಸುತ್ತ ಚರಗ ಚೆಲ್ಲಿ, ಗ್ರಾಮದ ಸುತ್ತ ಹಾಕಿದ್ದ ಪಾರಿ ಬೇಲಿಯನ್ನು ತೆಗೆಯಲಾಗುತ್ತದೆ. ದೇವಿಯ ದರ್ಶನ ಪಡೆಯಲು ಗ್ರಾಮಕ್ಕೆ ಸಂಬಂಧಿಸಿದ ಜನರು ಅಲ್ಲದೇ ಬೇರೇ ಊರುಗಳಿಂದ ಜಾತ್ರೆಗೆ ಆಗಮಿಸುತ್ತಾರೆ. ದೇವಿಗೆ ಹಣ್ಣು, ಕಾಯಿ, ಅಕ್ಕಿ, ಬೇಳೆ, ಬೆಲ್ಲ, ಸೀರೆಯೊಂದಿಗೆ ಉಡಿಯನ್ನು ಅರ್ಪಿಸುವುದನ್ನು ಗುರುತಿಸಬಹುದು. ಗ್ರಾಮದ ರೈತರು ತಮ್ಮ ಜಾನುವಾರುಗಳಿಗೆ ದೊಡ್ಡರೋಗಗಳಾದ ದಥಾರ ಮಾರಕ ಕಾಯಿಲೆ ಬರದಿರಲೆಂದು ಎತ್ತುಗಳನ್ನು ಕರೆತಂದು ಚೌಕಿಮನೆ ಸುತ್ತ ಪ್ರದಕ್ಷಿಣೆ ಹಾಕಿಸಿಕೊಳ್ಳುವುದು ಗಮನಿಸಬಹುದು (ಛಾಯಾಚಿತ್ರವನ್ನು ನೋಡಿ). ಗ್ರಾಮಕ್ಕೆ ಪಾರಿಬೇಲಿ ಹಾಕಲಾಗಿದೆ. ನಂತರ ಗ್ರಾಮದಲ್ಲಿ ಯಾರೂ ಚಪ್ಪಲಿ ಧರಿಸಿ ಓಡಾಡುವಂತಿಲ್ಲ. ಬುತ್ತಿ, ನೀರನ್ನು ಸಹ ಗ್ರಾಮದಿಂದ ಹೊರ ತೆಗೆದುಕೊಂಡು ಹೋಗುವಂತಿಲ್ಲ. ಸಕಲ ಭಕ್ತರಿಗೆ ದರ್ಶನ ನೀಡಲು ಮಾರಮ್ಮ ದೇವಿಯ ಮೂರ್ತಿಯನ್ನು ಮಂಗಳವಾದ್ಯಗಳೊಂದಿಗೆ ವಿಜೃಂಭಣೆಯಿಂದ ಗ್ರಾಮದ ದ್ವಾರಬಾಗಿಲ ಬಳಿ ನಿರ್ಮಾಣ ಮಾಡಿರುವ ಚೌಕಿಮನೆಯಲ್ಲಿ ಮಂಗಳವಾರ ಪ್ರತಿಷ್ಠಾಪನೆ ಮಾಡಲಾಗುವುದು. ನಂತರ ಬುಧವಾರ ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳಲು ಭಕ್ತರು ಬಾಯಿಗೆ ಬೀಗ ಹಾಕಿಕೊಳ್ಳುವರು ದೇವಿಗೆ ಹಣ್ಣು, ಕಾಯಿ, ಉಡಿ ಸಮರ್ಪಿಸುವರು. ಗುರುವಾರ ರಾತ್ರಿ ಚೌಕಿ ಮನೆಯಿಂದ ಹೊರಟು ಸಮಸ್ತ ಭಕ್ತರಿಗೆ ದರ್ಶನ ಸೇವೆ ನೀಡುತ್ತಾ ಸಿಂಗಾರಗೊಂಡ ರಥದಲ್ಲಿ ದೇವಿ ಪ್ರತಿಷ್ಠಾಪನೆಗೊಳ್ಳುವುದು. ರಾತ್ರಿ, ೧೦ ಘಂಟೆಗೆ. ದೇವಿಯ ರಥೋತ್ಸವ ನಡೆಯುವ ಮೂಲಕ ಜಾತ್ರಾ ಸಂಪನ್ನಗೊಳ್ಳುವುದು. ಜಾತ್ರೆ ಸಂದರ್ಭದಲ್ಲಿ ಭಕ್ತರು ತಮ್ಮ ಹರಕೆ ಕಾಣಿಕೆಗಳನ್ನು ಹಣದ ರೂಪದಲ್ಲಿ ಅರ್ಪಿಸಿದಲ್ಲಿ ದೇವಿಯ ಪ್ರಗತಿ ಕಾರ್ಯಗಳಿಗೆ ಸಹಾಯವಾಗಲಿದೆ ಎಂದು ಕಾನಾಹೊಸಳ್ಳಿ ದೈವಸ್ಥರು ಕೋರಿಕೊಳ್ಳುತ್ತಾರೆ. ಈ ರೀತಿಯಾಗಿ ಕೂಡ್ಲಿಗಿ ತಾಲೂಕಿನಲ್ಲಿ ವಿಶೇಷವಾದ ಜಾತ್ರಾ ಮಹೋತ್ಸವಗಳು ನಡೆಯುತ್ತವೆ.

ಹೊಳಲು ಗ್ರಾಮದೇವಿ ಜಾತ್ರೆ ವಿವರಗಳು

ಹಲವಾರು ದಶಕಗಳಿಂದ ನಿಂತುಹೋಗಿದ್ದ ಗ್ರಾಮದೇವತೆಯ ಜಾತ್ರೆಯ ಈ ವರ್ಷ ಬಹಳ ವೈಭವದಿಂದ ನಡೆಯಿತು. ಮೈಲಾರ ಗ್ರಾಮದೇವತೆ ಎಂದರೆ ಅಚ್ಚುಮೆಚ್ಚು. ಹಳ್ಳಿ ಜನಕ್ಕೆಲ್ಲ ಊರಬ್ಬ, ಅಮ್ಮನ ಹಬ್ಬ, ಎಂತಲೂ ಕರೆಯುವುದು ರೂಢಿಯಾಗಿದೆ. ಹಬ್ಬ ಜಾತ್ರೆ ಪ್ರಯುಕ್ತ ಮನೆಗಳನ್ನು ಸುಣ್ಣ ಬಣ್ಣಗಳಿಂದ ಅಲಂಕರಿಸುತ್ತಾರೆ, ಸಿಂಗರಿಸಿಕೊಳ್ಳುತ್ತಾರೆ. ಮೈಲಾರ

ಗುಡಿಯನ್ನು ಬಹಳ ಚೆನ್ನಾಗಿ ಅಲಂಕರಿಸುವ ಮೂಲಕ ಸಿಂಗರಿಸಿಕೊಳ್ಳುತ್ತಾರೆ. ಮೈಲಾರ ರಾಜ ಬೀದಿಗಳಲ್ಲಿ ಜಾತ್ರೆಗೆ ಶುಭಹಾರೈಸುವರು ಆಧುನಿಕ ಬ್ಯಾನರ್‌ಗಳಿಂದ ಅಲಂಕರಿಸುತ್ತಾರೆ. ಸುಮಾರು ೪೦ ವರ್ಷಗಳಿಂದ ನಿಂತುಹೋಗಿದ್ದ ಈ ಮೈಲಾರ ಜಾತ್ರೆಯು ಈಗ ಪ್ರಖ್ಯಾತಿ ಪಡೆದಿದೆ.

ಪೌರಾಣಿಕ ಹಿನ್ನೆಲೆ

ಶತಮಾನಗಳ ಹಿಂದೆ ದೇವಿಯ ಕಟ್ಟಿಗೆ ಉತ್ಸವಮೂರ್ತಿಯನ್ನು ಉತ್ಸವದ ನಂತರ ಒಂದು ಪೆಟ್ಟಿಗೆಯಲ್ಲಿ ಇರಿಸಲಾಗಿತ್ತಂತೆ. ಗ್ರಾಮದ ಪ್ರಮುಖ ಮುಖಂಡ ಮೈಲಾರಲಿಂಗೇಶ್ವರನ ಜಾತ್ರೆಗೆ ಬಂದಿದ್ದನಂತೆ. ಭಕ್ತನೊಬ್ಬ ಪೆಟ್ಟಿಗೆಯನ್ನು ಕದ್ದೊಯ್ದನಂತೆ. ನದಿದಾಟಿ ಬರಡಿಗುಡ್ಡದ ಹತ್ತಿರ ಬರುತ್ತಿದ್ದನಂತೆ. ಪೆಟ್ಟಿಗೆ ಬಾರ ಹೆಚ್ಚಾಯಿತಂತೆ. ಆಗ ಅದನ್ನು ಕೆಳಗಿಳಿಸಿ ನೋಡಿದನಂತೆ. ದೇವಿಯ ಮೂರ್ತಿ ಹಾವಾಗಿ ಕಾಣಿಸಿಕೊಂಡಿತಂತೆ. ಆದುದರಿಂದ ಭಯಭೀತನಾಗಿ ಕಳ್ಳ ಪೆಟ್ಟಿಗೆಯನ್ನು ಅಲ್ಲಿಯೇ ಬಿಟ್ಟು ಓಡಿ ಹೋದನಂತೆ. ಕೆಲವರು ದಿನಗಳ ನಂತರ ಅಂದರೆ ಬೆಳಿಗ್ಗೆ ಹತ್ತಿರದ ಕನವಳ್ಳಿ ಗ್ರಾಮದ ದನ ಕಾಯುವ ಹುಡುಗರು ಇದನ್ನು ನೋಡಿ ದೊಡ್ಡವರಿಗೆ ಮಾಹಿತಿ ತಿಳಿಸಿದರಂತೆ. ದೇವಿ ಒಬ್ಬ ಹುಡುಗನ ಮೈಮೇಲೆ ಬಂದು ನಡೆದ ಘಟನೆಯನ್ನು ಹೇಳಿದಳಂತೆ. ಆಗ ಹಿರಿಯರು ದೇವಿಯನ್ನು ಮೈಲಾರ ಗ್ರಾಮಕ್ಕೆ ಮರಳಿ ಕಳಿಸುವುದಾಗಿ ಕೇಳಿಕೊಂಡರಂತೆ. ಅದಕ್ಕೆ ದೇವಿ ನಾನು ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರೆ. ಎದುರಿಗೆ ಕಾಣುತ್ತಿರುವ ಗ್ರಾಮದಲ್ಲಿ ನನಗೊಂದು ದೇವಸ್ಥಾನ, ಮಂಟಪ, ಗುಡಿ ಯಾವುದಾದರೊಂದು ವ್ಯವಸ್ಥೆ ಮಾಡಿರೋ ಎಂದು ಕೇಳಿತಂತೆ. ಕನವಳ್ಳಿ ಗ್ರಾಮದ ಜೊತೆ ಮೈಲಾರ ಗ್ರಾಮವನ್ನು ನಾನು ಕಾಯುತ್ತೇನೆ, ಪಾಲಿಸುತ್ತೇನೆ, ರಕ್ಷಣೆ ನೀಡುತ್ತೇನೆ ಎಂದು ಅಪ್ಪಣೆ ಮಾಡಿತಂತೆ. ದೇವಿಯ ಸ್ವಯಿಚ್ಛೆಯಂತೆ ಹಾವೇರಿ ಜಿಲ್ಲೆಯ ಕನವಳ್ಳಿ ಗ್ರಾಮದ ಭಕ್ತರು ದೇವಿಗೆ ಒಂದು ಮಂಟಪ ಕಟ್ಟಿಸಿ ನಿರ್ಮಿಸಿದರಂತೆ. ಅದಕ್ಕೆ ಮೈಲಾರ ದ್ಯಾಮವ್ವ ಎಂದು ನಾಮಕರಣ ಮಾಡಿದರಂತೆ. ಅಂದಿನಿಂದ ಇಂದಿನವರೆಗೂ ಮೈಲಾರ ದೇವಿಯಾಗಿ ಉತ್ಸವ ನಡೆಯುತ್ತಿದೆ ಎಂದು ಮಾಹಿತಿದಾರರು ತಿಳಿಸಿದ್ದಾರೆ. ಪೂಜೆಗೆ ಜಾತ್ರೆಗೆ ಮಹೂರ್ತ ಬೇಕಾದರೆ ಕನವಳ್ಳಿಯಿಂದ ಖೇಲ್ ತರಲಾಗುವುದು. ಅದನ್ನೇ ದೇವಿ, ಭಂಡಾರ ಎಂದು ಭಾವಿಸಿ ಪೂಜಿಸುತ್ತೇವೆ ಎಂದು ಜಾತ್ರೆಯಲ್ಲಿ ವಕ್ತೃಗಳು ಹೇಳಿದ್ದಾರೆ.

ಮಳೆಗಾಗಿ ಕೆರೆ ಗಂಗಮ್ಮನ ಪೂಜೆ

ಬಳ್ಳಾರಿ ಜಿಲ್ಲೆಯಲ್ಲಿ ವಿಶೇಷವಾಗಿ ಕೂಡ್ಲಿಗಿ ತಾಲೂಕಿನಲ್ಲಿ ಮಳೆಗಾಗಿ ವಿಶೇಷವಾದ ಪೂಜೆಯನ್ನು ಮಾಡುತ್ತಾರೆ. ಇಲ್ಲಿ ಪ್ರಧಾನವಾಗಿ ಗಂಗಮ್ಮನ ಪೂಜೆಮಾಡುವುದು ವೈವಿಧ್ಯಮಯ ವಾಗಿರುತ್ತದೆ. ಸಕಾಲದಲ್ಲಿ ಸಮೃದ್ಧಿ ಮಳೆಯಾಗಲಿ ಎಂದು ಪ್ರಾರ್ಥಿಸಿಕೊಂಡು ಪಟ್ಟಣದ

ಕೆಲವು ವಾರ್ಡಿನವರು ಅಮರದೇವರ ಗುಡ್ಡದ ಜನತೆ ಪೂಜೆ ಮಾಡುತ್ತಾರೆ. ಇಲ್ಲಿ ಮಂಗಳವಾರ ಕೆರೆ ಗಂಗಮ್ಮನ ಪೂಜೆ ಮಾಡುತ್ತಾರೆ. ಈ ಗಂಗಮ್ಮನ ಜಾತ್ರೆಯಲ್ಲಿ ಜಾತಿ, ಮತ, ಭೇದಭಾವವಿಲ್ಲದೆ ಧರ್ಮದ ಯಾವುದೇ ಭಕ್ತರೂ ಸೇರಿ ಪೂಜೆ ಮಾಡಬಹುದು ಎಂದು ಅಲ್ಲಿನ ಮಾಹಿತಿದಾರರು ತಿಳಿಸುತ್ತಾರೆ. ಪೂಜೆ ದಿನದಂದು ಕರಿ ಕಂಬಳಿ ಹಾಸಿ ಅದರ ಮೇಲೆ ಮರಳಿನಿಂದ ಮಾಡಿದ ಉಂಡೆಗಳನ್ನು ಇಟ್ಟು ಅವುಗಳಿಗೆ ಹೂ, ಪತ್ರೆಗಳಿಂದ ವಿಶೇಷವಾಗಿ ಅಲಂಕರಿಸುತ್ತಾರೆ. ಈ ಸಮಯಕ್ಕೆ ಗ್ರಾಮದ ಮುತ್ತೈದೆಯರೆಲ್ಲರೂ ಸೇರಿ ಕಳಸ, ಬೆಳಗಿ, ಎಡೆ ಮಾಡುವುದು ಇದೆ. ಇದಕ್ಕಾಗಿ ಗ್ರಾಮದ ಎಲ್ಲಾ ಮನೆಗಳಲ್ಲೂ ಹೋಳಿಗೆ ಪಾಯಸ ಮಾಡಲಾಗುತ್ತದೆ. ಪೂಜೆ ಮಾಡಿದ ಮರಳಿನ ಉಂಡೆಗಳನ್ನು ಕೆರೆಯಲ್ಲಿ ಬಿಡಲಾಗುತ್ತದೆ. ಗಂಗಾಪೂಜೆ ಮಾಡಿದ ನಂತರದಲ್ಲಿ ಉತ್ತಮ ಮಳೆಯಾಗಿ, ನೀರು ಹರಿದು ಬಂದು ಕೆರೆ ತುಂಬುತ್ತದೆ ಎಂಬ ದೃಢನಂಬಿಕೆ ಆ ಗ್ರಾಮಸ್ಥರಲ್ಲಿದೆ. ಗಂಗೆಪೂಜೆಯನ್ನು ಮಾಡಿದ ವರ್ಷವೆಲ್ಲ ಕೆರೆ ತುಂಬಿ ಕೋಡಿ ಹರಿದಿದೆ. ಈ ಹಿಂದೆ ಮೂರು ನಾಲ್ಕು ವರ್ಷಗಳು ಈ ಪೂಜೆಯನ್ನು ಮಾಡುವುದನ್ನು ಬಿಡಲಾಗಿತ್ತು. ಪೂಜೆ ಮಾಡದ ವರ್ಷ ಕೆರೆ ಭರ್ತಿಯಾಗದೇ ಉಳಿದಿತ್ತು. ಮಳೆಬಾರದೆ ತುಂಬಾ ಕಷ್ಟಗಳನ್ನು ಅನುಭವಿಸಬೇಕಾಯಿತು ಎಂದು ಅಲ್ಲಿನ ಮಾಹಿತಿದಾರರು ಹೇಳುತ್ತಾರೆ. ಊರಿನ ಪ್ರಮುಖರಾದ ಕೆ.ಎಸ್. ಬಸವರಾಜ, ಹೊಟ್ಟೇರ್ ಹನುಮಂತಪ್ಪ, ಬೋವಿ ಮಲ್ಲಣ್ಣ, ಹರಿಜನ ಹನುಮಂತಪ್ಪ, ಮಹಮದ್ ಶಬ್ಬೀರ್, ಹರಿಜನ ನಿಂಗಮ್ಮ, ಲಂಬಾಣಿ ಲಕ್ಷ್ಮೀಬಾಯಿ ಸೇರಿದವರು ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ.

ಕೊಟ್ಟೂರಿನಲ್ಲಿ ಮೂರು ತಾಸಿನ ಜಾತ್ರೆ

ಕೊಟ್ಟೂರು ಗ್ರಾಮದಲ್ಲಿ ಗ್ರಾಮದೇವತೆಗೆ ಹಬ್ಬ ಮಾಡುತ್ತಾರೆ. ಇಲ್ಲಿ ಪ್ರಧಾನವಾಗಿ ಮೂರು ತಾಸಿನಲ್ಲಿ ಮಾತ್ರ ಜಾತ್ರೆ ನಡೆಯುತ್ತದೆ. ಪ್ರಧಾನವಾಗಿ ಕೋಳಿ, ಕುರಿ ಯಾವುದೂ ಬಲಿ ಇರುವುದಿಲ್ಲ. ಆದರೆ ಕೋಳಿಯನ್ನು ಕೆರೆಗೆ ತೂರಿ ಬಿಡುವುದು ಇದೆ. ರಥೋತ್ಸವ, ಜರುಗುವಾಗ ರಥಕ್ಕೆ ಬಾಳೆಹಣ್ಣು, ಉತ್ತುತ್ತಿ, ದವನ, ಸೂರ್‌ಬೆಲ್ಲ, ಮೆಣಸು ಮುಂತಾದವುಗಳನ್ನು ತೂರುವುದನ್ನು ನಾವು ಕಾಣುತ್ತೇವೆ. ಶಕ್ತಿದೇವತೆಗಳ ಜಾತ್ರೆಗಳಾದರೆ ಕುರಿ, ಕೋಳಿ, ಕೋಣ, ಬಲಿ ಕೊಡುವುದು ಸರ್ವೇ ಸಾಮಾನ್ಯವಾಗಿರುತ್ತದೆ. ಕೊಟ್ಟೂರಿನ ಹೊರವಲಯದಲ್ಲಿ ಕರೆದಂಡೆಯ ಮೇಲಿರುವ ಬಿಕ್ಕಿಮರಡಿ ದುರ್ಗಮ್ಮದೇವಿಯ ರಥಕ್ಕೆ ಜೀವಂತ ಕೋಳಿಗಳನ್ನು ತೂರುವುದು ಕಾಣಬಹುದಾಗಿದೆ. ಕೋಳಿ ಸಿಕ್ಕವರು ಮರು ವರ್ಷ ಇನ್ನೊಂದು ಕೋಳಿ ತೂರಬೇಕೆಂಬ ನಿಯಮವಿದೆ. ಪಟ್ಟಣ ಮತ್ತು ಸುತ್ತಮುತ್ತಲಿನಲ್ಲಿ ಗ್ರಾಮೀಣ ಪ್ರದೇಶದ ಜನತೆ ಎತ್ತಿನ ಗಾಡಿ ಹಾಗೂ ವಾಹನಗಳಲ್ಲಿ ಸಂಜೆಯಾಗುತ್ತಿದ್ದಂತೆ ಬಂದು ಸೇರುತ್ತಾರೆ. ಹಾಗೆಯೇ ನವ ವಿವಾಹಿತರು ಈ ತೇರಿನ ಕಳಸ ನೋಡಬೇಕೆನ್ನುವ ಪದ್ಧತಿ ಇರುವುದರಿಂದ

ಜಾತ್ರೆಯಲ್ಲಿ ಎಲ್ಲಿ ನೋಡಿದವರಲ್ಲಿ ನವ ಜೋಡಿಗಳನ್ನು ಕಾಣಬಹುದು. ಈ ದೇವಸ್ಥಾನವು ಕೆರೆಯ ದಂಡೆಯ ಬಯಲು ಪ್ರದೇಶದ ಪ್ರಶಾಂತವಾದ ತಂಪಾದ ವಾತಾವರಣದಲ್ಲಿ ಹೊಲಗಳ ಮಧ್ಯೆ ದುರ್ಗಮ್ಮ ಉದ್ಭವವಾಗಿರುವುದರಿಂದ ಇಲ್ಲಿ ದೇವಸ್ಥಾನ ನಿರ್ಮಾಣವಾಗಿದೆ ಎಂದು ಪೂಜಾರಿ ತಿಳಿಸಿದ್ದಾರೆ. ರಥೋತ್ಸವದಂದು ದಟ್ಟವಾದ ಜನಸಂದಣಿಯಿಂದ ಕೂಡಿರುವ ಈ ದೇವಸ್ಥಾನ ಉಳಿದ ದಿನಗಳಲ್ಲಿ ನಿರ್ಜನ ಮೌನದಿಂದ ಕೂಡಿರುತ್ತದೆ. ಪಟ್ಟಣದಲ್ಲಿರುವ ದುರ್ಗಮ್ಮನ ಗುಡಿಯಲ್ಲಿರುವ ಉತ್ಸವಮೂರ್ತಿಯನ್ನು ಜಾತ್ರೆಗೆ ಒಂಬತ್ತು ದಿವಸಗಳ ಮುನ್ನ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿಶೇಷ ಅಲಂಕಾರಗಳಿಂದ ಕೂಡಿದ ಪಲ್ಲಕ್ಕಿಯನ್ನು ಮೆರೆವಣಿಗೆಯ ಮುಖಾಂತರ ದೇವಿಯನ್ನು ಸುತ್ತಮುತ್ತಲಿನ ಮೂರು ಊರುಗಳಲ್ಲಿಯೂ ಉತ್ಸವ ನಡೆಸುತ್ತಾರೆ. ರಥೋತ್ಸವದಂದು ಕೆರೆ ದಂಡೆಯ ದೇವಸ್ಥಾನಕೆ ತಂದು ಸಂಪ್ರದಾಯದ ಪ್ರಕಾರ ಪೂಜಾ ವಿಧಿ–ವಿಧಾನಗಳನ್ನು ನೆರವೇರಿಸಿ ರಥದಲ್ಲಿ ದೇವಿಯನ್ನು ಪ್ರತಿಷ್ಠಾಪಿಸುತ್ತಿದ್ದಂತೆ ಸಾವಿರಾರು ಭಕ್ತರು ಜಯಘೋಷಗಳು ಕೂಗುತ್ತಾರೆ. ಕೆಲವರಿಗೆ ಮೈಮೇಲೆ ದೇವಿ ಬರುವುದು ಇದೆ.

ಈ ದೇವಿಯ ಜಾತ್ರೆಯಲ್ಲಿ ಪ್ರಾಣಿಬಲಿಗಳು ನಿಷೇಧವಾಗಿರುವುದು ವಿಶಿಷ್ಟ ಸಂಪ್ರದಾಯ ಎನ್ನಬಹುದು. ಒಂದು ವೇಳೆ ರಥಕ್ಕೆ ಹಾರುಬಿಡುವ ಕೋಳಿಗಳು ಸತ್ತರೆ ಅವುಗಳನ್ನು ಮಾಂಸವನ್ನಾಗಿ ಸ್ವೀಕರಿಸದೇ ಶವಸಂಸ್ಕಾರ ಮಾಡುವ ಪದ್ಧತಿಯೂ ಇದೆ. ಇಲ್ಲಿ ಕುಂಬಳಕಾಯಿ, ನುಗ್ಗೆ, ಬದನೆ, ಸೊಪ್ಪು, ಟೊಮೊಟೊ, ಅವರೆ, ಮುಂತಾದ ಪದಾರ್ಥಗಳಿಂದ ತಯಾರಿಸಿದ ಅಡುಗೆಯ ನೈವೇದ್ಯವೇ ಪ್ರಧಾನವಾಗಿರುತ್ತದೆ. ಈ ನೈವೇದ್ಯವನ್ನು ಸ್ವೀಕರಿಸಲು ಮುಸ್ಲಿಂ, ಹಿಂದೂ, ಕ್ರಿಶ್ಚಿಯನ್, ಜೈನ ಮುಂತಾದ ಸಮುದಾಯಗಗಳು ಭಾವಹಿಸುತ್ತವೆ. ಗ್ರಾಮದ ಹೊರಗೆ ನಿರ್ದಿಷ್ಟವಾದ ಜಾಗದಲ್ಲಿ ನಡೆಯುವ ಈ ಜಾತ್ರೆಯು ಕೆಲವೇ ಗಂಟೆಗಳಲ್ಲಿ ಮುಕ್ತಾಯವಾಗುತ್ತದೆ. ಬಿಕ್ಕಿಮರಡಿ ದುರ್ಗಮ್ಮನ ದೇವಿಯ ದರುಶನ ಪಡೆಯಲು ಅಕ್ಕಪಕ್ಕದ ಊರುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಫಲಂತಿಕೆಯ ಫಲವಾಗಿ ಈ ದೇವರನ್ನು ಹೆಚ್ಚಾಗಿ ಪ್ರೀತಿ ಮಾಡುತ್ತಾರೆ, ಇಷ್ಟಪಡುತ್ತಾರೆ. ಈ ದೇವತೆಯ ದರ್ಶನ ಪಡೆದರೆ ಮಕ್ಕಳಾಗುತ್ತವೆಂಬ ದೃಢ ನಂಬಿಕೆ ಇರುವುದು ಕಾಣಬಹುದು. ಮದುವೆ ಮಾಡಿಕೊಂಡ ಹೊಸದರಲ್ಲಿ ಒಂದು ಸಾರಿಯಾದರೂ ಈ ದುರುಗಮ್ಮನ ದೇವತೆಯ ದರ್ಶನ ಪಡೆಯಲೆಂದೇ ಅನೇಕ ಸಮುದಾಯಗಳು ಬರುತ್ತಾರೆ. ಸಿದ್ಧೇಶ್ವರಿ ಅವರ ಪ್ರಕಾರ "ಆಚರಣೆಗಳಲ್ಲಿ ಆಗುವ ಬದಲಾವಣೆಗಳು ಸಮಾಜದ ಬದಲಾವಣೆಯನ್ನು ಅವಲಂಬಿಸಿವೆ. ಕೆಳವರ್ಗದವರ ಆಚರಣೆಗಳು ತಮಗಿಂತ ಮೇಲಿನವರ ಪ್ರಭಾವಕ್ಕೆ ಒಳಗಾಗುತ್ತಿವೆ. ಕೆಲವೊಮ್ಮೆ ಮೂಲ ಆಚರಣೆಗಳು ಸ್ಥಿತ್ಯಂತರಗೊಳ್ಳುತ್ತವೆ, ತಮಗೆ ತಿಳಿದೋ, ತಿಳಿಯದೆಯೋ, ಧಾರ್ಮಿಕ ವಿಧಿ ವಿಧಾನದಲ್ಲೂ, ದೈವದ ವಿಚಾರದಲ್ಲೂ ಬದಲಾವಣೆಗಳು ಆಗುತ್ತವೆ. ಬಲಿ ಪಡೆಯುತ್ತಿದ್ದ ಮಾಂಸಾಹಾರಿಗಳಾಗಿದ್ದ ದೈವಗಳು ಸಸ್ಯಾಹಾರಿಗಳಾಗಿರುವುದು ಮೇಲಿನ ಆಶಯಕ್ಕೆ ಭಕ್ತ

ಸಮುದಾಯದಲ್ಲಿ ಉಂಟಾಗುವ ಬದಲಾವಣೆಯೇ ಕಾರಣವಿರಲು ಸಾಧ್ಯವಿದೆ. ಪ್ರಾಣಿಕೇಂದ್ರಿತ ಉಗ್ರ ಆಚರಣೆ ಇಂದು ದೈವದ ಹೆಸರಲ್ಲಿ ಅಹಿಂಸಾ ರೂಪ ಪಡೆದಿದೆ. ಈ ಆಚರಣೆ ಮಾನವರ ಮಧ್ಯದ ಜಾತಿಭೇದ ನಿವಾರಿಸುವ ಆಶಯ ಹೊಂದಿದೆ"[೪೪] ಪ್ರಾಣಿಗಳ ಬದಲಾಗಿ, ಸಸ್ಯಾಹಾರಗಳನ್ನು ಅರ್ಪಿಸುವುದು ಒಂದು ಬದಲಾವಣೆಯ ಸಂಕೇತವೂ ಆಗಿದೆ. ಬೂದುಗುಂಬಳಕಾಯಿ ಎರಡು ಭಾಗ ಮಾಡಿ ಅದಕ್ಕೆ ಅರಿಶಿನ ಕುಂಕುಮವನ್ನು ಬಳಿದು ತೆಂಗಿನ ಕಾಯಿ ಹೊಡೆದು ಪೂಜೆ ಮಾಡುವ ಪದ್ಧತಿ ಇರುವುದನ್ನು ಅವಲೋಕಿಸಬಹುದು. ನಿಂಬೆ ಕಾಯಿಯನ್ನು ದೇವರಿಗೆ ಅರ್ಪಿಸುತ್ತಾರೆ. ಇದರ ಉದ್ದೇಶ ಪ್ರಾಣಿಯನ್ನು ಅರ್ಪಿಸಲು ಸಾಧ್ಯವಾಗದಿದ್ದಾಗ ತಮಗೆ ತೋಚಿದ ಅಥವಾ ಶಕ್ತಾನುಸಾರವಾಗಿ ನಿಂಬೆಕಾಯಿಯನ್ನು ದೇವರಿಗೆ ಅರ್ಪಿಸಿ ಹರಕೆ ತಿರಿಸುವುದು ಕೆಲವು ಕಡೆಗಳಲ್ಲಿ ನಡೆದುಕೊಂಡು ಬಂದಿದೆ. ಸಮಾಜವನ್ನು ಸ್ವಚ್ಛವಾಗಿಡಲು ಇಂತಹ ಪದ್ಧತಿಗಳು ಪ್ರಮುಖವಾಗಿ ಕಂಡುಬರುತ್ತವೆ. ಕೆಲವು ಕಡೆಗಳಲ್ಲಿ ತಮ್ಮ ದುಡಿಮೆಯ ಹಣದಲ್ಲಿ ಸ್ವಲ್ಪವನ್ನು ದೇವರಿಗೆ ಹರಕೆಯಾಗಿ ನೀಡುವುದು ಇದೆ. ಬೆಲೆ ಬಾಳುವ ವಸ್ತುಗಳನ್ನು ದೇವರಿಗೆ ಅರ್ಪಿಸುವುದು, ಹರಕೆಯಾಗಿ ಮುಡಿ ಒಪ್ಪಿಸುವುದು, ಬೇವುಡಿಗೆ, ದೀಡುನಮಸ್ಕಾರ, ಮುಂತಾದ ಸಾತ್ವಿಕ ಪದ್ಧತಿಗಳನ್ನು ಆಚರಣಾತ್ಮಕಾಗಿ ಮೈಗೂಡಿಸಿಕೊಳ್ಳಬೇಕಾಗುತ್ತದೆ. ಯಾವುದೇ ಗ್ರಾಮದೈವವೂ ರಕ್ತವನ್ನು ಅಪೇಕ್ಷಿಸುವುದಿಲ್ಲ. ಬದಲಿಗೆ ಮನಸ್ಸಿನಲ್ಲಿ ಮೂಡಿರುವ ಮೌಢ್ಯತೆಯನ್ನು ಹೋಗಲಾಡಿಸಬೇಕಾಗುತ್ತದೆ. ಜಾತ್ರೆ, ಹಬ್ಬ ಎಂಬ ಆಚರಣೆಗಳಲ್ಲಿ ಸಮಸ್ತ ಜನಪದರ ಸಾಮೂಹಿಕ ಸೇರುವಿಕೆಯಲ್ಲಿ ಸಂತೋಷ, ಸಡಗರ, ನೆಮ್ಮದಿ, ಸಂಬಂಧ, ಬೆಸೆಯುವ ದೈವಗಳ ಆಚರಣೆಗಳಾಗಬೇಕಾಗುತ್ತದೆ. ಬಸವರಾಜ ತೋಟದಳ್ಳಿ ಅವರ ಪ್ರಕಾರ "ಊರ ಆಚರಣೆಗಳು ಜನಪದರ ಸಾಮುದಾಯಿಕ ಬಾಂಧವ್ಯವನ್ನು ಕುದುರಿಸುತ್ತವೆ. ಪ್ರತಿ ಹಳ್ಳಿಗಳಲ್ಲೂ ಗ್ರಾಮದೇವತೆಗಳಿದ್ದು ವರ್ಷಕ್ಕೊಂದು ಬಾರಿ ಗ್ರಾಮಸ್ಥರೆಲ್ಲ ಸಭೆ ಸೇರಿ ಒಂದು ತೀರ್ಮಾನ ತೆಗೆದುಕೊಂಡು ಹಬ್ಬ ಆಚರಿಸುವುದು ಕಂಡುಬರುತ್ತದೆ. ಯಾವುದೇ ಆಚರಣೆಗಳು ಸಾಂಗವಾಗಿ ನೆರವೇರಲು ಪ್ರತಿಯೊಂದು ಜಾತಿಯವರೂ ಕೂಡ ತಮ್ಮ ತಮ್ಮ ಕರ್ತವ್ಯವನ್ನು ನಿಭಾಯಿಸುವುದರ ಮೂಲಕ ಕಾರ್ಯಕ್ರಮವನ್ನು ಸುಲಲಿತವಾಗಿ ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಕೆಲವು ಊರುಗಳಲ್ಲಿ ಜಾತಿ ವೈಷಮ್ಯ ದೃಷ್ಟಿಯಿಂದ ಇರುಸುಮುರುಸುಗಳಿದ್ದರೂ ಕೂಡ ಸಾಮುದಾಯಿಕವಾಗಿ ಯಾವುದೇ ಲೋಪ ದೋಷವಿಲ್ಲದ ಹಾಗೆ ಆಚರಣೆಗಳು ಜರಗುತ್ತವೆ. ಕೆಲವು ಊರುಗಳಲ್ಲಿ ಜಾತಿಕಲಹದಿಂದ ನಿಷೇಧಗಳಿದ್ದರೂ ಅವು ತುಂಬಾ ಕಡಿಮೆ. ಏನೇ ಆದರೂ ಎಲ್ಲಾ ವರ್ಗದವರು ತಮ್ಮ ತಮ್ಮ ಕರ್ತವ್ಯವನ್ನು ಪಾಲಿಸುವುದರಿಂದ ಪ್ರತಿಯೊಂದು ಊರುಗಳಲ್ಲಿ ಆಚರಣೆಗಳು ಸಂಪ್ರದಾಯದಂತೆ ನಡೆದುಬರುತ್ತಿವೆ. ಇವೆಲ್ಲ ಗ್ರಾಮಸಂಸ್ಕೃತಿಯನ್ನು ಬಿಂಬಿಸುವ ಮತ್ತು ಗ್ರಾಮಸಂಸ್ಕೃತಿಯ ಐಕ್ಯತೆಯನ್ನು ಮೂಡಿಸುತ್ತವೆ"[೪೫] ಗ್ರಾಮಸಂಸ್ಕೃತಿಯನ್ನು ಗಮನಿಸಬೇಕಾದರೆ ಇಂತಹ ಆಚರಣೆಗಳನ್ನು ನೋಡಬೇಕಾಗುತ್ತದೆ. ಜಾತಿ, ಧರ್ಮ, ದೇವರು, ನಿಷೇಧಗಳು, ಕಟ್ಟುಪಾಡುಗಳು,

ಸಂಪ್ರದಾಯಗಳು, ಮುಂತಾದವುಗಳನ್ನು ಯಾವ ರೀತಿ ವ್ಯಕ್ತಪಡಿಸುತ್ತಾರೆ ಎಂದು ಅವಲೋಕಿಸಬಹುದು. ಆಚರಣೆಗಳಲ್ಲಿ ಜವಾಬ್ದಾರಿಗಳು ಹೆಚ್ಚು. ಪ್ರತಿಯೊಂದು ಜಾತಿಯವರೂ ಒಂದೊಂದು ಕೆಲಸವನ್ನು ಮಾಡಬೇಕಾಗುತ್ತದೆ. ಬ್ರಾಹ್ಮಣರು ಪೂಜಾರಿಕೆ, ದಲಿತರು ಡೋಲು, ತಪ್ಪಡಿ ಬಾರಿಸುವುದು, ಅಗಸರು ದೇವರ ಬಟ್ಟೆಯನ್ನು ಮಡಿ ಮಾಡಿ ಕೊಡುವುದು, ಗೌಡ, ರೆಡ್ಡಿಗಳು ಜಾತ್ರಾ ಮಹೋತ್ಸವದ ಉಸ್ತುವಾರಿಯನ್ನು ನೋಡಿಕೊಳ್ಳುವುದು ಈ ರೀತಿಯಾಗಿ ಪ್ರತಿಯೊಬ್ಬರಿಗೂ ಕೈತುಂಬಾ ಕೆಲಸ ಇರುತ್ತದೆ. ಇವೆಲ್ಲವೂ ಸಾಂಗವಾಗಿ ಸಾಗಬೇಕಾದರೆ ಜನರ ಪ್ರೀತಿ ಮತ್ತು ಸಾಮರಸ್ಯಗಳು ಬಹಳ ಮುಖ್ಯವೆನಿಸುತ್ತದೆ.

ಮಡಿಲಕ್ಕಿ

ಈ ಮಡಿಲಕ್ಕಿಯನ್ನು ಗ್ರಾಮದೇವತೆಗಳ ಆಚರಣೆಯಲ್ಲಿ ಗಮನಿಸುತೇವೆ. ಪ್ರಧಾನವಾಗಿ ಊರಮ್ಮನಿಗೆ, ಮಾರಮ್ಮನಿಗೆ, ಕಾಳಮ್ಮನಿಗೆ, ದ್ಯಾಮವ್ವನಿಗೆ ಈ ಮಡಿಲಕ್ಕಿ ಬೇಕೇ ಬೇಕು ಎಂದು ಸಮಸ್ತ ಜನಪದರ ಆಶಯ. ಇಲ್ಲಿ ಹೆಣ್ಣು ಮಕ್ಕಳಿಗೆ ಹೊಸ ಸೀರೆ ಉಡಿಸಿ ಉಡಿ ತುಂಬಿಸುವ ಪರಂಪರೆ ಇಲ್ಲಿ ನಿರ್ಮಾಣವಾಗುತ್ತದೆ. ಇದೊಂದು ಸಂಪ್ರದಾಯಬದ್ಧವಾಗಿಯೂ ಇರುತ್ತದೆ. ಹೊಳೆಗೆ ಹೋಗಿ ಪೂಜೆ ಮಾಡಿ ಅರ್ಚಕನಿಗೆ ಮಡಿಲು ಕಟ್ಟಿ ಬೆಲ್ಲ, ಅಕ್ಕಿ, ಅಡಿಕೆ, ತೆಂಗಿನಕಾಯಿ, ಎಲೆ ಮುಂತಾದವುಗಳನ್ನು ಕೊಡುವ ಪದ್ಧತಿಯನ್ನು ಮಡಿಲಕ್ಕಿ ಎಂದು ಕರೆಯುತ್ತಾರೆ. ಊರುಗಳ ಮನೆಯ ಮುಂದೆ ದೇವತೆಯ ಪಲ್ಲಕ್ಕಿಯನ್ನು ಹೊತ್ತು ವಾದ್ಯಸಮೇತವಾಗಿ ತರುವಾಗ ಮಡಿಲು ತುಂಬುವ ಶಾಸ್ತ್ರವನ್ನು ಮಾಡುತ್ತಾರೆ. ಕೆಲವು ಗ್ರಾಮಗಳಲ್ಲಿ ದೇವಿಯ ಪಲ್ಲಕ್ಕಿಯನ್ನು ಕೆಳಗಿಳಿಸಿದಾಗಲೂ ಮಡಿ ಬಟ್ಟೆಯ ಮೇಲೆ ಕುಳಿಸಿದ ಪೂಜಾರಿಗೆ ಮಡಿಲು ತುಂಬುವುದು ಇದೆ. ಗ್ರಾಮದೈವಗಳ ಆಚರಣೆಗಳಲ್ಲಿ ಮಡಲಕ್ಕಿ ತುಂಬುವ ಪದ್ಧತಿಯೇ ವಿಶಿಷ್ಟವಾಗಿರುತ್ತದೆ.

ಹರಸೇವೆ ಮತ್ತು ಪರ

ಇದೊಂದು ವಿಶಿಷ್ಟ ಆಚರಣೆಯಾಗಿದೆ. ಹರಕೆ ಹೊತ್ತ ಜನಪದರು ತಮ್ಮ ತಮ್ಮ ಹರಕೆಗಳಾದ ಕುರಿ, ಕೋಳಿ, ಹಂದಿ ಮುಂತಾದ ಪ್ರಾಣಿಗಳನ್ನು ದೇವರ ಹೆಸರಿನಲ್ಲಿ ಬಲಿ ಕೊಟ್ಟು ಬಂದ ಜನರಿಗೆ ಊಟೋಪಾಚಾರಗಳ ವ್ಯವಸ್ಥೆಯನ್ನು ಮಾಡುವುದೇ ಈ ಸೇವೆಯ ಉದ್ದೇಶ ಇದನ್ನೇ ಪರ ಎಂದು ಕರೆಯುತ್ತಾರೆ. ತಮ್ಮ ಜೀವನದಲ್ಲಿ ತಮಗಾದ ಅನಿಷ್ಟಗಳನ್ನು ಪರಿಹರಿಸಿಕೊಳ್ಳುವ ಮತ್ತು ತಮ್ಮ ಜೀವನದಲ್ಲಿ ಶುಭವನ್ನು ಕೋರಿಕೊಳ್ಳುವ ಉದ್ದೇಶದಿಂದ ಹರಸೇವೆಯನ್ನು ಮಾಡುತ್ತಾರೆ. ಇದಕ್ಕೆ ಜಾತಿಭೇದವಿಲ್ಲ ಎಂದು ವಕ್ತೃಗಳು ಹೇಳುತ್ತಾರೆ.

ಸಿರುಗುಪ್ಪ ಗ್ರಾಮದ ಮಾರಮ್ಮ ಜಾತ್ರಾ ವಿಧಿ ವಿಧಾನಗಳು

ವಾರ್ಷಿಕವಾಗಿ ನಡೆಯುವ ಮಾರಮ್ಮ ಜಾತ್ರಾ ವಿಧಾನಗಳಲ್ಲಿ ಸಿರುಗುಪ್ಪ ಗ್ರಾಮದ ಮಾರಮ್ಮ ವಿಧಾನವು ಒಂದು. ಇಲ್ಲಿ ಶ್ರಾವಣ ಮಾಸದ ಮಂಗಳವಾರದ ದಿನದಂದು ಮಾರಮ್ಮ ದೇವಿಗೆ ತನುಬಿಂದಿಗೆ ಎಂಬ ಆಚರಣೆ ನಡೆಯುತ್ತದೆ. ತನುಬಿಂದಿಗೆಯನ್ನು

ದೇವಸ್ಥಾನದಲ್ಲಿ ಪ್ರತಿಷ್ಠಾಪಿಸುವುದೇ ಇಲ್ಲಿ ಪ್ರಧಾನ ಆಚರಣೆ. ಗ್ರಾಮಕ್ಕೆ ಸೇರಿದ ಕುಂಬಾರ ಮನೆಯವರು ಅವರ ಮನೆಯಿಂದ ಹೊಸ ಮಣ್ಣಿನ ಮಡಿಕೆಯನ್ನು ತಂದುಕೊಡುತ್ತಾರೆ. ಬಳೆಗಾರನ ಮನೆಯಿಂದ ಹಸಿರು ಬಳೆ ತಂದುಕೊಡುತ್ತಾರೆ. ಜೀರರ ಮನೆಯಿಂದ ಹೂವು ಸೂಸಗವನ್ನು ತಂದುಕೊಡುತ್ತಾರೆ. ಹಾರ ಬಾರಕೇರಿ ಮನೆಯಿಂದ ಕಬ್ಬು ಬಾಳೆಕಂಬ, ಹಸಿರು ತೋರಣಗಳನ್ನು ಮೆರವಣಿಗೆಯಲ್ಲಿ ತಂದು ಗ್ರಾಮಕ್ಕೆ ಸೇರಿದ ಕಚೇರಿಯಲ್ಲಿ ಇಡುತ್ತಾರೆ. ಗ್ರಾಮದ ಬೀದಿಗಳಲ್ಲಿ ಸಕಲ ವಾದ್ಯಘೋಷಗಳ ಮೂಲಕ ಗ್ರಾಮಕ್ಕೆ ಸೇರಿದ ನದಿಗೆ ತೆರಳಿ ಗಂಗಭವಾನಿ ಪೂಜೆಯನ್ನು ಮಾಡುತ್ತಾರೆ. ಗ್ರಾಮಕ್ಕೆ ಸೇರಿದ ತುಂಗಭದ್ರಾ ನದಿ ದಡದಲ್ಲಿ ಹಸಿರು ತೋರಣಗಳಿಂದ ಅಲಂಕೃತ ಮಾಡಿ ಮಂಟಪಾಕಾರದಲ್ಲಿ ತಯಾರು ಮಾಡುತ್ತಾರೆ. ಈ ಮಂಟಪದಲ್ಲಿ ದೇವಿಯನ್ನು ತನುಬಿಂದಿಗೆಯನ್ನು ಪ್ರತಿಷ್ಠಾಪಿಸಿ ಪೂಜಿಸಿಕೊಳ್ಳುವುದರ ಮೂಲಕ ಕಂಕಣ ಕಟ್ಟಿ, ಉಡಿ ತುಂಬಿ ಹಸಿರುಬಳೆ ತೊಡಿಸಿ, ಮಾಂಗಲ್ಯಧಾರಣೆ ಹಾಗೂ ಮಹಾಮಂಗಳಾರತಿ ಮಾಡುತ್ತಾರೆ.

ಗ್ರಾಮಕ್ಕೆ ಸೇರಿದ ಜೋಗತಿ ಮಹಿಳೆಯರು ದೇವಿಗೆ ಬಾಗಿನ ಪೂಜೆಯನ್ನು ಮಾಡುತ್ತಾರೆ. ಗ್ರಾಮದ ದೇವಿಯ ಭಕ್ತರು ಹಣ್ಣು, ಕಾಯಿ, ಹೋಳಿಗೆ ನೈವೇದ್ಯವನ್ನು ಅರ್ಪಿಸಿ ದರ್ಶನ ಪಡೆಯುವುದನ್ನು ಕಾಣಬಹುದು. ಸಾಯಂಕಾಲ ದೇವಿಯ ಮಂಟಪದಿಂದ ತನು ಬಿಂದಿಗೆಯನ್ನು ಉತ್ಸವದ ಮೂಲಕ ಡೊಳ್ಳು, ಭಜಂತ್ರಿ ವಾದ್ಯಗಳೊಂದಿಗೆ ಗ್ರಾಮದ ಪ್ರಮುಖ ಬೀದಿಯಲ್ಲಿ ತೆರಳಿ ಗ್ರಾಮ ದೇವತೆಗಳಿಗೆ ಹಣ್ಣು ಕಾಯಿ ಅರ್ಪಿಸುವುದು ಕಂಡುಬರುತ್ತದೆ. ದೇವಿಯ ಘೋಷಣೆ ಕೂಗುತ್ತಾ ಗ್ರಾಮದಿಂದ ಹೊರಗೆ ಹೋಗುತ್ತಾರೆ. ಹೊಲಮ್ಯಾರೆಯಲ್ಲಿರುವ ಮಾರಮ್ಮ ದೇವಿಯ ಗುಡಿಗೆ ತೆರಳಬೇಕಾಗುತ್ತದೆ. ಈ ಜಾತ್ರೆ ನಡೆಯುವುವರೆಗೂ ಪ್ರತಿಯೊಬ್ಬರೂ ಗ್ರಾಮದ ಯಾರೊಬ್ಬರೂ ಊರು ಬಿಟ್ಟು ಹೊರಗೆ ಹೋಗುವಂತಿಲ್ಲ ಎಂಬ ನಂಬಿಕೆ ಇದೆ. ಹಲವು ನಿಯಮಗಳನ್ನು ಪಾಲಿಸಿಕೊಂಡು ಗ್ರಾಮದ ಎಲ್ಲಾ ವರ್ಗದವರು ಸೇರಿ ಈ ಉತ್ಸವವನ್ನು ಮಾಡುತ್ತಾರೆ. ಗ್ರಾಮಕ್ಕೆ ಸಂಬಂಧಿಸಿದ ಪಂಚಾಯಿತಿ ಅಧ್ಯಕ್ಷರು, ಬಾವಿನಕಟ್ಟೆ ಪಂಪಾಪತಿಯವರು, ಗಡಿಗಿ ಈರೇಶ, ಹುಲಿಗೆಮ್ಮ ಮುಂತಾದವರು ಜಾತ್ರಾ ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ.

ಕರಿಮಾರಮ್ಮ ಜಾತ್ರೆಯ ವಿಶೇಷತೆ

ಕರಿಮಾರಮ್ಮ ದೇವಸ್ಥಾನ ಬಳ್ಳಾರಿ ಪ್ರಾಂತ್ಯದಲ್ಲಿದೆ. ಈ ಮಾರಮ್ಮ ದೇವರಿಗೆ ವಾರ್ಷಿಕವಾಗಿ ಜಾತ್ರೆ ನಡೆಯುತ್ತದೆ. ಪ್ರಧಾನವಾಗಿ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಮಾರಮ್ಮನಿಗೆ ಪೂಜೆಗಳು ಬಹಳ ರಭಸದಿಂದ ನಡೆಯುತ್ತವೆ. ಇಲ್ಲಿ ಪ್ರಾಮುಖ್ಯವಾಗಿ ಕರಿಮಾರಮ್ಮ ಗುಡ್ಡದಲ್ಲಿರುವ ದೇವಿಯ ಜಾತ್ರೆ ನೂರಾರು ಭಕ್ತ ಸಮುದಾಯದವರು ಬಂದು ಸೇರುತ್ತಾರೆ. ಜಾತ್ರೆ ಪ್ರಮುಖ ಮಹಾಪೂರ್ಣ ಕುಂಭಜಲ ಹಾಗೂ ಸಾಂಸ್ಕೃತಿಕ

ಕಾರ್ಯಕ್ರಮಗಳು ನಡೆಯುತ್ತವೆ. ಬೆಳಿಗ್ಗೆ ಗಡಂಗ್ ಬೀದಿ ರಸ್ತೆಯಲ್ಲಿರುವ ಕಾಮಾಕ್ಷಮ್ಮ ದೇವಾಲಯದಿಂದ ಕೌಲ್ ಬಜಾರ್ ಮಾರ್ಗವಾಗಿ ಕರಿಮಾರಮ್ಮ ದೇವಾಲಯದವರೆಗೆ ಕರಿಮಾರಮ್ಮನವರ ಉತ್ಸವ ಮೂರ್ತಿ ಮೆರವಣಿಗೆ ನಡೆಯುತ್ತದೆ. ವಾರ್ಷಿಕವಾಗಿ ನಡೆಯುವ ಈ ಜಾತ್ರೆ ಬಹಳ ಮಹತ್ವದ್ದು ಎಂದು ಅಲ್ಲಿನ ಮಾಹಿತಿದಾರರು ಕ್ಷೇತ್ರಕಾರ್ಯ ಮಾಡುವಾಗ ಹೇಳಿದ್ದಾರೆ. ಗದ್ದುಗೆಯಲ್ಲಿ ಅಲಂಕಾರಗೊಂಡ ಕರಿಮಾರಮ್ಮನನ್ನು ನೋಡಲು ಭಕ್ತಾದಿಗಳು ನೆರೆಹೊರೆ ಊರುಗಳಿಂದ ಕುರಿ, ಕೋಳಿಗಳನ್ನು ತಂದು ಬಲಿ ಕೊಡುವುದು ಇದೆ. ಸಾಮೂಹಿಕ ಹಬ್ಬದ ವಾತಾವರಣ ನಿರ್ಮಾಣವಾಗಿರುತ್ತದೆ.

ನಾಗರ ಹುತ್ತಕ್ಕೆ ಕೋಳಿ ಹುಂಜದ ರಕ್ತದ ಅರ್ಪಣೆ

ನಾಗಚೌತಿ ಹಾಗೂ ಪಂಚಮಿಯಂದು ಸಾಮಾನ್ಯವಾಗಿ ಎಲ್ಲರೂ ಹುತ್ತಕ್ಕೆ ಹಾಲೆರೆಯುವುದು ವಾಡಿಕೆ. ಆದರೆ ಡಂಬಳ ಗ್ರಾಮಕ್ಕೆ ಸೇರಿದ ಕೊರವ ಸಮುದಾಯದವರು ಹುಂಜದ ರಕ್ತವನ್ನು ಎರೆದು ಹಬ್ಬ ಮಾಡುತ್ತಾರೆ. ನಂಬಿಕೆಯ ಹಿನ್ನೆಲೆಯಲ್ಲಿ ಸಿಹಿ ಖಾದ್ಯಗಳನ್ನು ಮಾಡಿ ಅದರ ಜೊತೆಗೆ ರಕ್ತ ನೀಡುವ ಪದ್ಧತಿ ಇಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿದ್ದು. ಗ್ರಾಮದ ೩೦ಕ್ಕೂ ಹೆಚ್ಚು ಕುಟುಂಬಗಳು ಈ ಸಂಪ್ರದಾಯವನ್ನು ಪಾಲನೆ ಮಾಡಿಕೊಂಡು ಬರುತ್ತಿರುವುದು. ತಾವು ನಂಬಿಕೊಂಡು ಬರುವ ದೇವತೆಗಳಲ್ಲಿ ನಾಗದೇವರು ಒಂದು ಎಂಬ ಭಾವನೆಯಿಂದ ಕುಲಕಸಬುಗಳಿಗೆ ಬೇಕಾದ ವಸ್ತುಗಳನ್ನು ತರಲು ಕಾಡುಬೆಟ್ಟಗಳಿಗೆ ಹೋದಾಗ ಹಾವು ಕಚ್ಚಬಾರದೆಂಬ ಉದ್ದೇಶ ಇದರ ಹಿಂದಿದೆ ಎಂದು ಗುರುತಿಸಬಹುದು. ಹಾವುಗಳು ತಮ್ಮನ್ನು ಕಚ್ಚದೇ ಸುಮ್ಮನೇ ಹೋಗುತ್ತವೆ. ಇದರ ಜೊತೆಗೆ ಚರ್ಮ ಕಾಯಿಲೆಗಳು ಬರುವುದು ಕಡಿಮೆ ಎನ್ನುತ್ತಾರೆ. ಗ್ರಾಮದ ಹಿರಿಯರಾದ ರಮೇಶ್ ಕೊರವರು ಮತ್ತು ದ್ಯಾಮವ್ವ ಮಾಹಿತಿ ನೀಡಿದರು.

ಸುಂಕ್ಲಮ್ಮ ದೇವಿಯ ಹಬ್ಬದ ವಿವರಗಳು

ಕುರುಗೋಡು ಗ್ರಾಮದ ದೇವಿಯಾದ ಸುಂಕ್ಲಮ್ಮ ದೇವಿಯ ಹಬ್ಬವನ್ನು ಸಡಗರ ಸಂಭ್ರಮದಿಂದ ಮಾಡುತ್ತಾರೆ. ಆಧುನಿಕ ಜೀವನವನ್ನು ಮಾಡುತ್ತಿರುವ ಗ್ರಾಮಸ್ಥರು ಸಕಲ ಸಿದ್ಧಿಗಾಗಿ ಸುಂಕ್ಲಮ್ಮ ದೇವಿಗೆ ಎಲ್ಲರೂ ನಡೆದುಕೊಳ್ಳುತ್ತಾರೆ. ಆನರು ಮಾನಸಿಕ ನೆಮ್ಮದಿಗಾಗಿ ಎಂದು ಶಾನಾವಾಸ ಪೂರ್ವ ದಾರುಕಾಶ್ರಮದ ಪ್ರಸನ್ನ ಅವರು ತಿಳಿಸುತ್ತಾರೆ. ಸಿರಿಗೇರಿ ಗ್ರಾಮದಲ್ಲಿ ಮಂಗಳವಾರ ಸುಂಕ್ಲಮ್ಮ ದೇವಿ ಮತ್ತು ವಿನಾಯಕ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುತ್ತಾರೆ. ಅನ್ಯರಲ್ಲಿ ಭಾವೈಕ್ಯ ಭಾವನೆ ನೆಲೆಯಾಗಲು ಈ ತರದ ಹಬ್ಬಗಳು ಸಾಮೂಹಿಕವಾಗಿ ಪ್ರಧಾನ ಪಾತ್ರ ವಹಿಸುತ್ತವೆ. ದೇವಸ್ಥಾನಕ್ಕೆ ಬೇಕಾದ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಹೋಮ ಹವನಾದಿಗಳು ನಡೆಯುತ್ತವೆ. ರುದ್ರಾಭಿಷೇಕ ಸೇರಿದಂತೆ ವಿವಿಧ

ಪೂಜಾ ವಿಧಾನಗಳು ನಡೆಯುತ್ತವೆ. ಸುಂಕ್ಲಮ್ಮ ದೇವಸ್ಥಾನದ ಮುಖ್ಯಸ್ಥರು ದೇವಿಯ ವಿಧಾನಗಳನ್ನು ನೆರವೇರಿಸುತ್ತಾರೆ.

ಕಾಲು ಎಡವಿದರೆ ಕೋಳಿ ಬಲಿ ಕೊಡುವ ಸಂಪ್ರದಾಯ

ದಿನಾಂಕ ೨೧.೬.೨೦೧೬ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ವಿಶೇಷವಾದ ಮಾಹಿತಿ ಪ್ರಕಟವಾಗಿದೆ. ಕರ್ನಾಟಕ ದರ್ಶನ ಪುರವಣಿಯಲ್ಲಿ ಕೆಲವು ಮಾಹಿತಿಗಳಿವೆ. ಈ ಮಾಹಿತಿಯಲ್ಲಿ ಪ್ರಾಣಿಬಲಿ ನಡೆಯುವ ಉದ್ದೇಶ ಯಾವ ರೀತಿ ಎಂದು ತಿಳಿದುಕೊಳ್ಳಬಹುದು. "ಗ್ರಾಮೀಣ ಸಂಸ್ಕೃತಿಯನ್ನು ಬಗೆದು ನೋಡಿದರೆ ಅಚ್ಚರಿ ಎನಿಸುವ, ಕುತೂಹಲ ಹುಟ್ಟಿಸುವ ವಿಭಿನ್ನ ಆಚರಣೆಗಳು ಗೋಚರಿಸುತ್ತವೆ. ಇಂತಹ ವಿಲಕ್ಷಣ ಆಚರಣೆ ಶ್ರೀರಂಗಪಟ್ಟಣ ತಾಲೂಕಿನ ತಡಗವಾಡಿ ಎಂಬ ಕೃಷಿಪ್ರಧಾನ ಗ್ರಾಮದಲ್ಲಿ ಶತಮಾನಗಳಿಂದ ನಡೆಯುತ್ತಾ ಬಂದಿದೆ. ಈ ಗ್ರಾಮಕ್ಕೆ ಹೊಸಬರು ಬಂದರೆ ಬಲು ಎಚ್ಚರದಿಂದ ಇರಬೇಕು. ಊರಿನ ಯಾವುದೇ ಭಾಗದಲ್ಲಿ ಆಯತಪ್ಪಿ ಮುಗ್ಗರಿಸಿ ಬಿದ್ದರೆ ಅಥವಾ ಕಾಲು ಎಡವಿದರೆ ಬ್ಯಾಟಗಾರಯ್ಯನಿಗೆ ಕೋಳಿ ಬಲಿ ಒಪ್ಪಿಸಬೇಕಾಗುತ್ತದೆ. ಹೊಸದಾಗಿ ಹಸು, ಎತ್ತುಗಳನ್ನು ಖರೀದಿಸಿ ಊರಿಗೆ ತಂದರೂ ಕೋಳಿ ಬಲಿ ಕೊಡುವ ಸಂಪ್ರದಾಯ ಇಲ್ಲಿ ಚಾಲ್ತಿಯಲ್ಲಿವೆ. ಈ ಸಂಪ್ರದಾಯ ಮೀರಿದರೆ ಕೇಡು ಕಟ್ಟಿಟ್ಟ ಬುತ್ತಿ ಎಂದು ಗ್ರಾಮದ ಘೋಷ ವಾಕ್ಯವನ್ನು ನಿರ್ವಹಿಸುತ್ತಾರೆ. ಗ್ರಾಮದ ಕೆರೆಯ ಅಂಚಿನಲ್ಲಿರುವ ಬ್ಯಾಟಗಾರಯ್ಯ ಎಂದು ಕರೆಯಲಾಗುವ ಚಿತ್ರಗಲ್ಲುಗಳಿಗೆ ರಕ್ತದ ನೈವೇದ್ಯ ಮಾಡುತ್ತಾರೆ. ಸಾಲು ಸಾಲಾಗಿರುವ ಕಲ್ಲುಗಳ ಮೇಲೆ ಹತ್ತಿಯ ದಾರ ಇರಿಸಿ ಪೂಜಿಸುತ್ತಾರೆ. ಕರ್ಪೂರ, ಧೂಪ, ಗಂಧದ ಕಡ್ಡಿ ಹಚ್ಚಿ, ಅರ್ಪಿಸಿದ ನಂತರ ಆ ದಾರಗಳನ್ನು ಮುಗ್ಗರಿಸಿದವರ ಇಲ್ಲವೇ, ಎಡವಿ ಬಿದ್ದವರ ಮುಂಗೈಗೆ ಕಟ್ಟಲಾಗುತ್ತದೆ. ಬ್ಯಾಟಗಾರಯ್ಯನಿಗೆ ಒಮ್ಮೆ ರಕ್ತತರ್ಪಣದಿಂದ ಶಾಂತಿ ಮಾಡಿದ ನಂತರ ಎಷ್ಟು ಬಾರಿ ಎಡವಿದರೂ ತೊಂದರೆ ಇಲ್ಲ ಎಂಬ ಭಾವನೆ ಗ್ರಾಮಸ್ಥರಲ್ಲಿದೆ ಇದೊಂದು ವಿಚಿತ್ರವಾದ ಹರಕೆಯಾಗಿದೆ.

ಆಚರಣೆಯ ಆರಂಭ

ಆಳರಸರ ಆಡಳಿತ ಕಾಲದಲ್ಲಿ ಸುಂಕದವರು ಕುದುರೆಯೇರಿ ಈ ಊರಿಗೆ ಬಂದಾಗ ಕುದುರೆ ಸಹಿತ ಎಡವಿ ಬಿದ್ದರಂತೆ. ಹಾಗಿ ಬಿದ್ದಾತನಿಗೆ ಅನ್ನ, ನೀರು, ಸೇರದೆ ಸವಕಲಾಗಿ ಹಾಸಿಗೆ ಹಿಡಿದನಂತೆ. ಕುದುರೆಯೂ ಮೇವು ಬಿಟ್ಟು ಸೊರಗಿ ಮಲಗಿತಂತೆ. ಕಾರಣ ತಿಳಿಯಲು ಆತ ತಡವಾಗಿ ಮರಳಿ ಬಂದಾಗ ಬ್ಯಾಟಗಾರಯ್ಯ ಎಂಬ ಶಕ್ತಿ ದೇವರು ವ್ಯಕ್ತಿಯೊಬ್ಬರ ಮೈಮೇಲೆ ಆವಾಹನೆಯಾಗಿ ಊರಿನ ಸರಹದ್ದಿನ ಒಳಗೆ ಮೂಕಬಲಿ ನೀಡಿದರೆ ನೀನು ಮತ್ತು ನಿನ್ನ ಕುದುರೆ ಸರಿಯಾಗ್ತೀರಿ ಎಂದು ಹೇಳಿದನಂತೆ. ಕೋಳಿ ಬಲಿ ನೀಡಿದ ನಂತರ

ಶಾಪಮುಕ್ತವಾಗಿ ಸುಂಕದವ ಸರಿಹೋದನಂತೆ ಎನ್ನುವ ಬಾಯಿಯಿಂದ ಬಾಯಿಗೆ ಬಂದ ಕಥೆಯನ್ನು ಊರಿನ ಹಿರಿಯರು ಹೇಳುತ್ತಾರೆ.

"ನಮ್ಮೂರಲ್ಲಿ ಕಾಲು ಎಡವಿ ಬಿದ್ರೆ ಕೋಳಿ ಕೊಯ್ದು ಬ್ಯಾಟೆಗಾರಯ್ಯ ಗಿಣಿರಕ್ತ ಒಪ್ಪಿಸಬೇಕು. ಕೋಳಿ ತಲೀನ ಒಡಮೂಡಿದ ಕಲ್ಲುಗಳ ಸಂದಿಗೆ ಇಡಬೇಕು. ಬಲಿಕೊಟ್ಟ ಕೋಳಿಯನ್ನು ಕೆರೆಯಂಚಿನಲ್ಲೇ ಸೀದು ಅದರ ಬಾಡು ಮಾತ್ರ ಮನೆಗೆ ತರಬೇಕು. ಬ್ಯಾಟಗಾರಯ್ಯನ ಕಲ್ಲಿನ ಮೇಲಿಟ್ಟು ಪೂಜಿಸಿದ ದಾರವನ್ನು ಬಲಗೈಗೆ ಕಟ್ಟಿಕೊಳ್ಳಬೇಕು. ಹಣೆ ಪೂಜಿಸಿದ ಕಪ್ಪನ್ನು ಅಚ್ಚಿಕೊಳ್ಳಬೇಕು. ಹೀಗೆ ಮಾಡ್ದೆ ಇದ್ರೆ ಕೈ, ಕಾಲುಗಳು ಸೋಲುತ್ತವೆ. ಹೊಟ್ಟೆಗೆ ಊಟ ಸೇರುವುದಿಲ್ಲ. ಬಾಯಾರ್ಕೆ ಜಾಸ್ತಿಯಾಗಿ ಸುಸ್ತು ಕಾಣಿಸಿಕೊಂಡು ಸವೆದೋಗ್ತರೆ. ನಮ್ಮೂರಲ್ಲಿ ಎಡವಿ ಬಿದ್ದೋರು ಕೋಳಿ ಒಪ್ಪಿಸಿ, ಕೈಗೆ ದಾರಕಟ್ಟಿಕೊಂಡ್ರೆ ದೋಷ ಕಳೀತದೆ" ಎಂದು ೮೫ರ ಇಳಿವಯಸ್ಸಿನ ದೇವಮ್ಮ ತಮ್ಮೂರಿನಲ್ಲಿ ನಡೆಯುವ ಬ್ಯಾಟಗಾರಯ್ಯನ ವೈಶಿಷ್ಟ್ಯವನ್ನು ಬಣ್ಣಿಸುತ್ತಾರೆ.

ದಶಕಗಳ ಹಿಂದೆ ಬ್ಯಾಟಗಾರಯ್ಯನಿಗೆ ಕಪ್ಪು ಕೋಳಿಯನ್ನೇ ಬಲಿ ಕೊಡುವ ಸಂಪ್ರದಾಯವಿತ್ತು. ಈಗ ಆ ಬಣ್ಣದ ಕೋಳಿಗಳು ಸಿಗುವುದು ಅಪರೂಪವಾದ್ದರಿಂದ ಕಂದು, ಬಿಳಿ ಯಾವುದಾದರೂ ಬಣ್ಣದ ಕೋಳಿಯನ್ನು ಬಲಿ ಕೊಡಲಾಗುವುದು. ರಾಜ್ಯ ಹೊರರಾಜ್ಯದ ಜನರು ಇಲ್ಲಿ ಬಂದು ಬ್ಯಾಟಗಾರಯ್ಯನಿಗೆ ಕೋಳಿಯನ್ನು ಬಲಿ ನೀಡಿ ಪೂಜೆ ಸಲ್ಲಿಸುವ ಪರಿಪಾಟ ನಮ್ಮ ತಾತ ಮುತ್ತಾತರ ಕಾಲದಿಂದಲೂ ನಡೆಯುತ್ತದೆ ಎನ್ನುತ್ತಾರೆ ಗ್ರಾಮದ ಸೋಮೇಶ್ವರ ಕನ್ನಡ ಯುವಕ ಸಂಘದ ಅಧ್ಯಕ್ಷರಾದ ಟಿ.ಎಲ್.ರಘು ಅವರು ಹೇಳುತ್ತಾರೆ.

ಹೂವಿನಹಡಗಲಿ ಗ್ರಾಮದೇವತೆಯ ಜಾತ್ರಾ ಮಹೋತ್ಸವ

ಹೂವಿನಹಡಗಲಿ ಗ್ರಾಮಕ್ಕೆ ಸೇರಿದ ಗ್ರಾಮದೇವತೆ ಊರಮ್ಮ ದೇವಿಯ ಹಬ್ಬವನ್ನು ವೈವಿಧ್ಯಮಯವಾಗಿ ಮಾಡಲಾಗುತ್ತದೆ. ಇಲ್ಲಿ ಪ್ರಧಾನವಾಗಿ ವಾರ್ಷಿಕವಾಗಿ ಪೂಜೆ ಹಬ್ಬ ನಡೆಯುತ್ತದೆ. ಒಂದು ವಾರ ನಡೆದ ಹಬ್ಬಗಳಲ್ಲಿ ಈ ದೇವತೆ ಪ್ರಧಾನವಾಗಿ ಕೊನೆಯ ದಿನ ಮಾಡುವ ಹಬ್ಬವೇ ಬಹಳ ಮುಖ್ಯವಾಗುತ್ತದೆ. ಪಟ್ಟಣದ ಊರಮ್ಮ ದೇವಿ ರಥೋತ್ಸವ ವಿಜೃಂಭಣೆಯಿಂದ ನಡೆಯುವ ಮೂಲಕ ಜಾತ್ರೆ ಮಹತ್ವ ಪಡೆದುಕೊಂಡಿದೆ. ಹಿಂದಿನ ಸಂಪ್ರದಾಯದಂತೆ ಕೊನೆಯ ದಿನ ಊರಮ್ಮ ದೇವಿಯನ್ನು ರಥೋತ್ಸವ ಮೂಲಕ ಪಟ್ಟಣದ ಗಡಿಗೆ ಕಳಿಸಲಾಗುತ್ತದೆ. ರಥೋತ್ಸವದ ಸಂದರ್ಭದಲ್ಲಿ ಸುತ್ತಮುತ್ತ ಗ್ರಾಮಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ತಮ್ಮ ಭಕ್ತಿಪರಾಕಾಷ್ಠೆ ಮೆರೆಯುತ್ತಾರೆ. ಬೀದಿ ಬದಿಯ ಕಟ್ಟಡಗಳ ಮೇಲೆ ನೂರಾರು ಮಕ್ಕಳು, ಮಹಿಳೆಯರು ರಥೋತ್ಸವನ್ನು ನೋಡುತ್ತಾರೆ. ಭಕ್ತಿ ಭಾವ

ಪ್ರದರ್ಶನ ಮಾಡುತ್ತಾರೆ. ನಾನಾ ವಾದ್ಯಗಳು, ಸಡಗರ, ಸಂಭ್ರಮದಿಂದ ಮುಖ್ಯ ಬೀದಿ ಮೂಲಕ ಹೊರಟ ರಥೋತ್ಸವದ ಉದ್ದಕ್ಕೂ ಊರಮ್ಮ ದೇವಿಯ ಉಘೇ, ಉಘೇ ಎಂಬ ಕೂಗುಗಳು ಕೇಳಿಬರುತ್ತವೆ. ಇದಕ್ಕೂ ಮೊದಲು ಉತ್ಸವ ಪಟ್ಟಣದ ಗೋಣಿ ಬಸವೇಶ್ವರ ದೇಗುಲ, ಗೌಡರು ಶ್ಯಾನಭೋಗರು, ಬಣಕಾರರು, ಸೇರಿದಂತೆ ಇತರ ದೈವಸ್ಥರ ಮನೆಗಳಿಗೆ ತೆಗಳಿ ದೇವಿಗೆ ಶಾಸ್ತ್ರೋಕ್ತವಾಗಿ ಉಡಿ ತುಂಬುತ್ತಾರೆ. ಪುರಾಣ, ಸಂಪ್ರದಾಯಗಳಿಗೆ ಪೋತರಾಜರು ಗಾವುಗುರಿ ಜಿಗಿದ ಬಳಿಕ ಬಾಣಬಿರುಸುಗಳ ಪ್ರದರ್ಶನ ನಡೆಯುತ್ತದೆ. ಕೆಲವು ಬಾರಿ ದೇವಿಯ ಪಟಾಕಿ ಪ್ರದರ್ಶನ ಕೂಡ ಇರುತ್ತದೆ. ಮೆರವಣಿಗೆಯಲ್ಲಿ ನಾನಾ ಜನಪದ ಕಲಾ ತಂಡಗಳು ನಂದಿಕೋಲು, ಸಮಾಳ, ಇತರ ಮಂಗಲವಾದ್ಯಗಳು ಮೊಳಗಿ ಜಾತ್ರೆಗೆ ಮೆರಗು ತರುತ್ತವೆ. ರಥದ ಮುಂದೆ ಭಕ್ತರು ಪರಸ್ಪರ ಕುಂಕುಮ ಎರಚಿಕೊಳ್ಳುತ್ತಾರೆ. ೫ ವರ್ಷಕ್ಕೊಮ್ಮೆ ಜರಗುವ ಈ ದೇವಿ ಊರಮ್ಮ ಜಾತ್ರಾ ವಿಶೇಷವನ್ನು ೧೦ ದಿನಗಳಿಂದ ನಡೆದುಕೊಂಡು ಬರುತ್ತವೆ. ದೇವಸ್ಥಾನದಲ್ಲಿ ವಿಧಿವಿಧಾನಗಳು, ಸಂಪ್ರದಾಯಗಳು, ಭಕ್ತರು ಹರಕೆ ತೀರಿಸುತ್ತಾರೆ. ರಥೋತ್ಸವದ ಸಂದರ್ಭದಲ್ಲಿ ಬಾಳೆಹಣ್ಣು ರಥಕ್ಕೆ ಎಸೆದರು. ಡೊಳ್ಳು, ಸಮಾಳ, ನಂದಿಕೋಲು, ಮಂಗಳವಾದ್ಯಗಳು ಸೇರುತ್ತವೆ.

ಹೂವಿನಹಡಗಲಿ ಶಕ್ತಿದೇವತೆಗೆ ಹಂದಿ, ನಾಯಿಯ ಬಲಿ

ಗ್ರಾಮದೇವತೆ ಶಕ್ತಿದೇವತೆ ಊರಮ್ಮದೇವಿಗೆ ಪ್ರಾಣಿಗಳನ್ನು ಅರ್ಪಿಸುವುದು ರೂಢಿಯಲ್ಲಿರುವುದನ್ನು ಗುರುತಿಸಬಹುದು. ಇಲ್ಲಿ ಪ್ರಧಾನವಾಗಿ ಊರಮ್ಮನಿಗೆ ಹಂದಿಗಳನ್ನು ಬಲಿ ಮಾಡುವುದು ಇದೆ. ಅಲ್ಲದೇ ವಿಶೇಷವಾಗಿ ನಾಯಿಗಳನ್ನು ಬಲಿ ಮಾಡುತ್ತಾರೆ. ದಿನಾಂಕ ೧೯.೫.೨೦೧೬ರಂದು ಪ್ರಕಟವಾದ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ವಿಶೇಷ ವಾರ್ತೆ ಪ್ರಕಟವಾಗಿದೆ. ಇದರಲ್ಲಿ ನಾಯಿ ಬಲಿಕೊಟ್ಟ ವಿವರಗಳು ದೊರೆಯುತ್ತವೆ. ಗ್ರಾಮದೇವತೆ ಜಾತ್ರೆಯಲ್ಲಿ ಕೆಲ ನಿರ್ದಿಷ್ಟ ಸ್ಥಳಗಳಲ್ಲಿ ಕೋಣ, ಕುರಿಗಳ ಬಲಿ ನಿರಾತಂಕವಾಗಿ ನಡೆಯಿತು. ಹುಲುಸು ಚೆಲ್ಲುವ ಸಂದರ್ಭದಲ್ಲಿ ಯುವಕರ ಗುಂಪು ಬೀದಿನಾಯಿ, ಹಂದಿಗಳನ್ನು ಅಟ್ಟಾಡಿಸಿ ಕೊಂದು ಅವುಗಳ ಅಂಗಾಂಗಳನ್ನು ತೂರಾಡಿದ್ದು ತೀರಾ ಅಮಾನವೀಯವಾಗಿತ್ತು. ದೇವಿಯ ಹೆಸರಲ್ಲಿ ಈ ತರಹದ ಕ್ರೌರ್ಯ, ಪ್ರಾಣಿಹಿಂಸೆಯನ್ನು ಪ್ರಜ್ಞಾವಂತರು ಖಂಡಿಸಿದರು. ಮುಂಬರುವ ದಿನಗಳಲ್ಲಿ ಇಂತಹ ಅನಾಗರಿಕ ಆಚರಣೆಗಳನ್ನು ತಡೆಯಬೇಕು ಎಂಬ ಆಗ್ರಹ ಕೇಳಿಬಂದಿದೆ ಎಂಬ ವಿವರಗಳು ಇವೆ. ಇಲ್ಲಿ ಪ್ರಧಾನವಾಗಿ ದೇವರಿಗೆ ಆಹಾರ ಪದಾರ್ಥವಾಗಿ ಕುರಿ, ಮೇಕೆ, ಕೋಳಿ, ಹುಂಜ, ಹಂದಿ, ಕೋಣ ಪ್ರಾಣಿಗಳನ್ನು ಬಲಿ ಕೊಟ್ಟು ಅದನ್ನು ಸಾಮೂಹಿಕವಾಗಿ ಬಾಡೂಟವನ್ನು ಮಾಡುತ್ತಾರೆ. ಆದರೆ ನಾಯಿಗಳನ್ನು ಬಲಿ ಕೊಟ್ಟು ಅವುಗಳ ಅಂಗಾಂಗಳನ್ನು ತೂರಾಡುವುದು. ಇದು ಅಮಾನವೀಯ ಇದನ್ನು ತಡೆಗಟ್ಟಬೇಕು.

ಶಕ್ತಿದೇವತೆ ಊರಮ್ಮನ ಜಾತ್ರೆಯು ಐದು ವರ್ಷಕ್ಕೊಮ್ಮೆ ನಡೆಯುತ್ತದೆ. ಈ ದೇವತೆ ವಾರ್ಷಿಕವಾಗಿ ನಡೆಯುವ ಜಾತ್ರೆಯೇ ಪ್ರಧಾನವಾಗಿರುತ್ತದೆ. ಬಿರು ಬಾಣಗಳ ಸಡಗರದಿಂದ ದೇವತೆಯ ಮೆರವಣಿಗೆ ನಡೆಯುತ್ತದೆ. ಕಣಕದ ಕೋಣದ ತಲೆ ಮೇಲೆ ದೀಪ ಬೆಳಗಿಸಿದ ಭಕ್ತರು ಇದ್ದಾರೆ. ಚೌತಮನೆ ಕಟ್ಟೆಯಲ್ಲಿ ಶಕ್ತಿದೇವತೆಯ ಊರಮ್ಮ ಮೂರ್ತಿಯನ್ನು ಇರಿಸಿ ವಿಶೇಷ ಪೂಜೆ ಮಾಡಲಾಗುತ್ತದೆ. ಕೆಲವು ಭಕ್ತರು ಹರಕೆಗಳನ್ನು ತೀರಿಸುತ್ತಾರೆ. ಪಟ್ಟಣದಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಜರುಗುವ ಈ ದೇವಿಯ ಜಾತ್ರೆಯಲ್ಲಿ ಎಲ್ಲಾ ವರ್ಗದವರು ಐಕ್ಯತೆಯಿಂದ ಪಾಲ್ಗೊಳ್ಳುತ್ತಾರೆ. ಒಂದು ವಾರದ ಕಾಲ ಮಲ್ಲಿಗೆ ನಗರಿಯಲ್ಲಿ ಶಕ್ತಿದೇವತೆಯ ಆರಾಧನೆ ನಡೆಯುತ್ತದೆ. ಜಾತ್ರೆ ಆರಂಭವಾದ ಸಮಯದಲ್ಲಿ ದೇವಿಯ ಉತ್ಸವ ಮೂರ್ತಿಯನ್ನು ಒಂದು ಪಲ್ಲಕಿಯಲ್ಲಿಟ್ಟುಕೊಂಡು ಮೆರವಣಿಗೆ ಮಾಡುತ್ತಾರೆ. ಹೂವಿನ ರಥದಲ್ಲಿ ಅಲಂಕರಿಸಿದ್ದ ಊರಮ್ಮದೇವಿ ಮೂರ್ತಿಯನ್ನು ನೋಡಲು ಅಪಾರ ಸಂಖ್ಯೆಯಲ್ಲಿ ಭಕ್ತರು ಜಮಾಯಿಸುತಾರೆ. ಮೆರವಣಿಗೆಯಲ್ಲಿ ಉಘೇ ಊರಮ್ಮ ಎಂಬ ಕೂಗುಗಳನ್ನು ಗುರುತಿಸಬಹುದು. ಸಮಾಳ, ನಂದಿಕೋಲು, ಹಲಗೆ, ಉರುಮೆ ವಾದ್ಯಗಳು ಉತ್ಸವದ ಮೆರುಗನ್ನು ಹೆಚ್ಚು ಮಾಡುತ್ತಾರೆ. ಪಟಾಕಿ ಸದ್ದು ಭಯಂಕರವಾಗಿರುತ್ತದೆ. ಯುವ ಗುಂಪುಗಳು ವಾದ್ಯಗಳ ತಾಳಕ್ಕೆ ಲಯಕ್ಕೆ ತಕ್ಕಂತೆ ಹೆಜ್ಜೆ ಹಾಕುವುದು ಇದೆ. ಬಾಣಬಿರುಸುಗಳ ಪ್ರದರ್ಶನವೂ ಇರುತ್ತದೆ. ರಸ್ತೆ ಬದಿಯ ಅಕ್ಕಪಕ್ಕದಲ್ಲಿ ಅಂಗಡಿ ಮುಗಟ್ಟುಗಳ ವ್ಯಾಪಾರವೂ ಚೆನ್ನಾಗಿ ನಡೆಯುತ್ತದೆ. ಬೆಳಗಿನ ಚೌತಮನೆಯಲ್ಲಿರುವ ಕಟ್ಟೆಯಲ್ಲಿ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿ ಮೇಲೆ ಕಣಕದ ಕೋಣದ ತಲೆಮೇಲೆ ದೀಪ ಉರಿಸಲಾಗುತ್ತದೆ. ಮಳೆ, ಬೆಳೆ ಹಾಗೂ ಊರಿನ ಸಮೃದ್ಧಿಗಾಗಿ ಸಾಮೂಹಿಕವಾಗಿ ಪ್ರಾರ್ಥಿಸಿಕೊಳ್ಳುತ್ತಾರೆ. ಪಟ್ಟಣದ ಸುತ್ತಮುತ್ತಲ್ಲೂ ಹುಲುಸು ಚೆಲ್ಲಲಾಗುತ್ತದೆ, ಗ್ರಾಮದೇವತೆ ಜಾತ್ರಾ ಸಮಿತಿಯವರ ಮಾರ್ಗದರ್ಶನದಂತೆ ಜಾತ್ರೆಯು ನಡೆಯುತ್ತದೆ. ಅದಕ್ಕೆಂದೇ ಒಂದು ಸಮಿತಿಯನ್ನು ರಚಿಸಿಕೊಳ್ಳುತ್ತಾರೆ. ಧಾರ್ಮಿಕ ಕಾರ್ಯಗಳು ಅಚ್ಚುಕಟ್ಟಾಗಿ ಪುರೋಹಿತರ ಸಮ್ಮುಖದಲ್ಲಿ ನಡೆಯುತ್ತವೆ.

ಹೂವಿನಹಡಗಲಿ ತಾಲೂಕು ಹೊಯಿಲಾರಗಟ್ಟಿ ಗ್ರಾಮದ ಮಹಾಕಾಳಿ ಜಾತ್ರೆ

ಕೊಯಿಲಾರಗಟ್ಟಿ ಗ್ರಾಮದಲ್ಲಿ ಮಹಾಕಾಳಿ ಅಮ್ಮನವರ ದೇವಸ್ಥಾನವಿದೆ. ಇಲ್ಲಿ ಪ್ರಧಾನವಾಗಿ ವಾರ್ಷಿಕ ಪೂಜೆಗಳು ನಡೆಯುತ್ತವೆ. ಇಲ್ಲಿ ಪ್ರಮುಖ ದೇವತೆ ಮಹಾಕಾಳಿ. ಈ ದೇವತೆಯನ್ನು ನೋಡಲು ಅಕ್ಕಪಕ್ಕದ ಊರುಗಳಿಂದ ಜನರು ಬಂದು ಸೇರುತ್ತಾರೆ. ಶುಕ್ರವಾರದಂದು ಬ್ರಾಹ್ಮೀ ಮುಹೂರ್ತದಲ್ಲಿ ದೇವಿಯ ಪ್ರತಿಷ್ಠಾಪನೆ ಮಾಡಲಾಗುತ್ತದೆ. ನವಗ್ರಹಗಳ ವಿಗ್ರಹಗಳನ್ನು ನೋಡಬಹುದು. ಮೂರ್ತಿಪೂಜಾವಿಧಾನಗಳು ಎರಡು ದಿನ ಇರುತ್ತದೆ. ದೇವಸ್ಥಾನದಲ್ಲಿ ಹೋಮ ಹವನಾದಿಗಳು ನಡೆಯುತ್ತವೆ. ದೇವಸ್ಥಾನದ ಧರ್ಮದರ್ಶಿ ಅವರ ಮುಖಾಂತರ ಪೂಜೆಗಳು ನಡೆಯುತ್ತವೆ.

ಜಾನುವಾರುಗಳನ್ನು ದೇವರಿಗೆ ಬಿಡುವುದು

ಬಳ್ಳಾರಿ ಜಿಲ್ಲೆಯಾದ್ಯಂತ ದೇವತೆಗಳಿಗೆ ಸಾಕುವ ಪ್ರಾಣಿಗಳನ್ನು ದೇವರಿಗೆ ಬಿಡುವುದ ಸಂಪ್ರದಾಯವಿದೆ. ಇದು ಅತ್ಯಂತ ವಿಶಿಷ್ಟ ರೀತಿಯಾದ ಒಂದು ಪದ್ಧತಿಯಾಗಿದೆ. ಮಾರಮ್ಮ, ಗಾಳೆಮ್ಮ, ಚಾಮುಂಡಿ, ದುರುಗಮ್ಮ, ಕಾಳಮ್ಮ, ಹೆಸರಿನಲ್ಲಿ ಜಾನುವಾರುಗಳನ್ನು ಬಿಡುತ್ತಾರೆ. ಈ ಗ್ರಾಮದೇವತೆಯರ ಹೆಸರಿನಲ್ಲಿ ಬಿಡುವುದರಿಂದ ಜಾನುವಾರುಗಳಿಗೆ ಯಾವುದೇ ರೀತಿಯಲ್ಲಿ ರೋಗ ರುಜಿನಗಳು ಬರುವುದಿಲ್ಲ ಎಂಬ ನಂಬಿಕೆ ಬಲವಾಗಿದೆ. ಸುಮಾರು ೧೦-೧೫ ಜಾನುವಾರುಗಳನ್ನು ಹರಕೆ ಹೊತ್ತ ಸಂದರ್ಭದಲ್ಲಿ ಬಿಡುತ್ತಾರೆ. ಕೃಷಿಗೆ ಸಂಬಂಧಿಸಿದಂತೆ ಮಳೆಗೆ ಸಂಬಂಧಿಸಿದಂತೆ ಜಾನುವಾರುಗಳನ್ನು ದೇವರಿಗೆ ಬಿಡುವುದು ಇದೆ. ಕೂಡ್ಲಿಗಿ ತಾಲೂಕಿನಲ್ಲಿ ಕಾಡುಗೊಲ್ಲ ಸಮುದಾಯದವರು ವಿಶೇಷವಾಗಿ ಪಾತೇಲಿಂಗ ದೇವತೆಯ ಹೆಸರಿನಲ್ಲಿ ಮುದ್ರೆ ಒತ್ತಿದ ಎತ್ತನ್ನು ಬಿಡಲಾಗುತ್ತದೆ. ಆ ಎತ್ತು ಊರಿನ ಯಾವ ದಿಕ್ಕಿಗೆ ಹೋಗುತ್ತದೆ ಎಂದು ಗಮನಿಸಿ ಆ ದಿಕ್ಕಿನ ಗ್ರಾಮದವರನ್ನು ಆಹ್ವಾನಿಸಿ ಕರಿಗಂಬಳಿ ಹಾಸಿ ಅಕ್ಕಿ, ಕಾಣಿಕೆ ನೀಡುವ ಸಂಪ್ರದಾಯ ಇದೆ. ಬಂಜೆಯಾದ ಹೆಂಗಸರು ಬಸವನನ್ನು ದಾಟಿದರೆ ಮಕ್ಕಳಾಗುತ್ತವೆ ಎಂಬ ನಂಬಿಕೆ ಇದೆ.

ಗಾಣಗಟ್ಟೆ ಮಾಯಮ್ಮ ಜಾತ್ರಾ ವಿವರಗಳು

ಬೇಡಿದ ವರಗಳನ್ನು ನೀಡುವ ಅಪರೂಪದ ಆರಾಧ್ಯ ದೇವಿ ಹಣದಿಂದಲೇ ಶೃಂಗಾರವಾಗುವ ಗಾಣಕಟ್ಟೆ ಮಾಯಮ್ಮದೇವಿ ಆರಾಧನೆಯು ಮಹತ್ವವನ್ನು ಪಡೆದುಕೊಳ್ಳುತ್ತದೆ. ಸಿರಿವಂತೆ ಗಾಣಗಟ್ಟೆ ಮಾಯಮ್ಮ ದೇವಿಯು ನಂಬಿಬಂದ ಭಕ್ತರಿಗೆ, ಕಲ್ಪವೃಕ್ಷದಂತೆ ಬೇಡಿದ ವರಗಳ ನೀಡುವ ಅಪರೂಪದ ದೇವಿ. ಎಲ್ಲಾ ದೇವರುಗಳಿಗೆ ಹೂವು, ಹಣ್ಣು ಕಾಯಿಗಳು, ಆಭರಣಗಳು, ಉಡುಪುಗಳು ಪ್ರಿಯವಾದವು ಆದರೆ ಇಲ್ಲಿರುವ ಈ ದೇವಿಗೆ ಮಾತ್ರ ಹಣವೇ ಪ್ರಿಯವಾದುವು. ಈ ಮಾಯಮ್ಮ ದೇವಿಯ ಮೂರ್ತಿಯನ್ನು ಹಣದಿಂದಲೇ ಶೃಂಗಾರಗೊಳಿಸುವುದು ಇಲ್ಲಿನ ವಿಶಿಷ್ಟತೆ.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕು ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಈ ಅಪರೂಪದ ದೇವಿಯ ಗುಡಿಯು ಕೂಡ್ಲಿಗಿ ತಾಲೂಕಿನ ಗಡಿಬಾಗದಲ್ಲಿರುವ ಗಾಣಗಟ್ಟೆ ಎನ್ನುವ ಪುಟ್ಟ ಗ್ರಾಮದಲ್ಲಿದೆ. ಕೂಡ್ಲಿಗಿಯಿಂದ ಉಜ್ಜಯನಿ ಮಾರ್ಗವಾಗಿ ಹಾಗೂ ಅತ್ತ ಜಗಳೂರು ಪಟ್ಟಣ ಮಾರ್ಗದಿಂದ ಪ್ರತಿ ದಿನವೂ ನೂರಾರು ಜನ ಭಕ್ತರು ಆಗಮಿಸುತ್ತಾರೆ. ಮಂಗಳವಾರ ಹಾಗೂ ಶುಕ್ರವಾರ ಬಂದರೆ ಸಾಕು ಈ ಕ್ಷೇತ್ರ ಭಕ್ತಸಾಗರದಿಂದ ಕಂಗೊಳಿಸುತ್ತದೆ. ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆಯ ದಿನಗಳಂತೂ ಇಲ್ಲಿಗೆ ಅಸಂಖ್ಯಾತ ಭಕ್ತರು ಬಂದು ನೆಲಸಿ ಈ ದೇವಿಯ ಆಶೀರ್ವಾದ ಪಡೆದುಕೊಳ್ಳುತ್ತಾರೆ. ಗಾಣಗಟ್ಟೆ ಮಾಯಮ್ಮ ದೇವಿಗೆ

ಬರುವ ಭಕ್ತರು ಜೀವನದಲ್ಲಿ ನೊಂದು ಬೆಂದು ನಾನಾ ರೀತಿಯಲ್ಲಿ ಕಷ್ಟಗಳ ಕಂಡವರು ಮುಕ್ತಿಗಾಗಿ ಹಾಗೂ ಅನೇಕ ರೀತಿಯ ಸಮಸ್ಯೆಗಳನ್ನು ತಮ್ಮ ಬೇಕು ಬೇಡಿಕೆಗಳನ್ನು ಈಡೇರಿಸುವ ಹರಕೆ ಹೊತ್ತುಕೊಂಡು ಬರುತ್ತಾರೆ. ಬಂದಂತಹ ಭಕ್ತರು ಇಲ್ಲಿ ಪ್ರತಿ ಸೋಮವಾರ ರಾತ್ರಿ ಹಾಗೂ ಗುರುವಾರ ರಾತ್ರಿ ದೇವಸ್ಥಾನ ಸೇರಿ ತಮ್ಮಲ್ಲಿರುವ ಕೋರಿಕೆಯನ್ನು ಆ ತಾಯಿಯ ಮುಂದೆ ಎರಡು ಚೀಟಿಗಳ ಮೂಲಕ ಆವರಣದಲ್ಲಿ ಎಲ್ಲಾದರೂ ಇಟ್ಟು ಒಂದು ಚೀಟಿಯಲ್ಲಿ ತಾವು ಅಂದುಕೊಂಡು ಬಂದ ಕೆಲಸವಾಗುತ್ತದೆ ಎಂದು ಮತ್ತೊಂದು ಚೀಟಿಯಲ್ಲಿ ಅಂದುಕೊಂಡ ಕೆಲಸವಾಗುವುದಿಲ್ಲವೆಂದು ಬರೆದು ಆ ಎರಡು ಚೀಟಿಗಳನ್ನು ಒಂದು ಚೀಟಿ ಒಂದು ಕಡೆ, ಮತ್ತೊಂದು ಚೀಟಿ ಮತ್ತೊಂದು ಕಡೆಯಲ್ಲಿಟ್ಟು ಮರುದಿನ ಅಂದರೆ ಮಂಗಳವಾರ ಅಥವಾ ಶುಕ್ರವಾರ ಬೆಳಗಿನಜಾವ ದೇವಿಯ ಪಲ್ಲಕಿ ನಡೆಯುವ ಸಮಯದಲ್ಲಿ ಸ್ವತಃ ದೇವಿಯೇ ಬಂದು ಯಾವ ಚೀಟಿಯನ್ನು ತೆಗೆದುಕೊಳ್ಳುತ್ತಾಳೆ. ಆ ಕೆಲಸವಾಗುತ್ತದೆ ಅಥವಾ ಇಲ್ಲ ಎನ್ನುವುದು ಇಲ್ಲಿಗೆ ಬರುವ ಅನೇಕ ಭಕ್ತರ ಅಪರೂಪದ ನಂಬಿಕೆಯಾಗಿದೆ. ಹೆಣ್ಣು ಮಕ್ಕಳು ತಮ್ಮ ಬಂಜೆತನ ನೀಗಿಸಲು ಈ ದೇವಿಯಲ್ಲಿ ಹರಕೆ ಹೊತ್ತು ಸಂತಾನ ಭಾಗ್ಯ ಪಡೆಯುತ್ತಾರೆ. ನಂತರ ತಮಗೆ ಆ ತಾಯಿ ಆಶೀರ್ವಾದದಿಂದ ಆದ ಮಕ್ಕಳ ತೂಕದಷ್ಟು ಹಣವನ್ನು ಮಾಯಮ್ಮ ದೇವಿಗೆ ಸಲ್ಲಿಸುತ್ತಾರೆ. ಸುಕ್ಷೇತ್ರದ ಮಾಯಮ್ಮದೇವಿ ದೇವಾಲಯವು ಹತ್ತು ವರ್ಷಗಳ ಹಿಂದೆ ಅಷ್ಟೇನು ಪ್ರಸ್ತಿದ್ಧಿವಾಗಿರಲಿಲ್ಲ. ಗಾಣಗಟ್ಟೆ ಮಾಯಮ್ಮದೇವಿ ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿಯೇ ಹೆಸರಾದ ಪ್ರಸಿದ್ಧ ದೇವತೆಯಾಗಿರುವುದನ್ನು ಗುರುತಿಸಬಹುದು.

ಗಾಣಗಟ್ಟೆ ಕೂಡ್ಲಿಗಿ ತಾಲೂಕಿನ ಪುಟ್ಟ ಹಳ್ಳಿ. ಈ ಹಳ್ಳಿಯಲ್ಲಿ ಕಳೆದ ಎರಡು ವರ್ಷಗಳ ಹಿಂದೆ ೧೨೫ ಅಡಿ ಎತ್ತರದ ಗೋಪುರವನ್ನು ಮಾಯಮ್ಮನ ದೇವಸ್ಥಾನದ ಮುಂದೆ ಗ್ರಾಮಸ್ಥರು ಹಾಗೂ ಭಕ್ತರು ನಿರ್ಮಿಸಿದ್ದಾರೆ. ಮುಗಿಲೆತ್ತರಕ್ಕೆ ಚುಂಬಿಸುವಂತೆ ಕಾಣುವ ಮಾಯಮ್ಮ ದೇವಿಯ ಗೋಪುರ ಬಳ್ಳಾರಿ ಜಿಲ್ಲೆಯಲ್ಲಿಯೇ ಅತಿ ಎತ್ತರದ ಸಾಲಿನಲ್ಲಿ ಬರುವ ಅಪರೂಪದ ಗೋಪುರವಾಗಿದೆ. ಅದು ಹೀಗಾಗಿ ಗಾಣಗಟ್ಟೆ ಪುಟ್ಟಹಳ್ಳಿಯಾದರೂ ಪ್ರತಿನಿತ್ಯ ಸಹಸ್ರಾರು ಭಕ್ತರು ಇಲ್ಲಿ ಆಗಮಿಸುತ್ತಾರೆ. ಇದು ಪ್ರವಾಸಿ ತಾಣದಂತೆ ಕಂಗೊಳಿಸುತ್ತದೆ. ಇಲ್ಲಿಯ ಮಾಯಮ್ಮದೇವಿಯ ಮೂರ್ತಿಯನ್ನು ಹಣದಿಂದಲೇ ನಿತ್ಯ ಪೂಜಿಸುತ್ತಾರೆ. ಸಿದ್ದೇಶ್ವರಿ ಅವರ ಪ್ರಕಾರ "ಜನಪದ ದೈವಗಳು ಮಾತೃಸ್ವರೂಪದ ನೆಲೆಯಿಂದ ಆರಂಭಗೊಂಡಿವೆ. ತನಗೆ ಗೋಚರವಾದ ವಸ್ತುಗಳಲ್ಲಿ ಮಾತೃಸ್ವರೂಪಿಯಾದ ಅಮ್ಮನನ್ನು ಕಾಣುತ್ತಾರೆ. ಸ್ತ್ರೀದೇವತೆಗಳನ್ನು ವಿವಿಧ ಹೆಸರುಗಳಿಂದ ಸಂಭೋಧಿಸುತ್ತಾರೆ. ಇಲ್ಲಿ ಅಮ್ಮ ಎಂದರೆ ತಾಯಿಯೂ ಹೌದು ವೈದ್ಯೆಯೂ ಹೌದು. ಮಕ್ಕಳ ಪೋಷಣೆ ಮತ್ತು ಆರೋಗ್ಯಪಾಲನಾ ತತ್ವ, ಔಷಧೋಪಚಾರಗಳು ಅಮ್ಮನ ಆಚರಣೆಗಳಲ್ಲುಂಟು. ಕೂಡ್ಲಿಗಿಯಲ್ಲಿ ಅಮ್ಮನ ಆಚರಣೆಯಲ್ಲಿ ಒಂದು ದಿನದ ಮಟ್ಟಿಗೆ ಗುಳೇ ಹೋಗುವ ಸಂಪ್ರದಾಯ ಇಂದಿಗೂ

ಪ್ರಚಲಿತದಲ್ಲಿದೆ. ಗ್ರಾಮ ತೊರೆಯುವುದರಿಂದ ಗ್ರಾಮ ನೈರ್ಮಲ್ಯ ಉಂಟಾಗಿ ಸಾಂಕ್ರಾಮಿಕ ರೋಗ ನಿವಾರಣೆಯಾಗುತ್ತವೆ. ಪರಸ್ಪರ ಸಾಮೂಹಿಕ ವನಭೋಜನದಿಂದ ಆಚರಣೆಯ ನೆಪದಲ್ಲಿ ಮಾನವ ಸಂಬಂಧಗಳು ಗಟ್ಟಿಗೊಳ್ಳುತ್ತವೆ”.[೪೬] ಮಾನವನ ಆಚರಣೆಗಳು ಕೇವಲ ವ್ಯಾವಹಾರಿಕವಾಗದೇ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆ ಇಂದು ಆಚರಣೆಗಳ ಮೂಲಕ ಕಂಡುಕೊಳ್ಳಬೇಕಾಗುತ್ತದೆ.

ಮಿಣೆ(ಹಗ್ಗ)

ಮಿಣೆ(ಹಗ್ಗ) ಕಟ್ಟದೇ ತೇರು ಎಳೆಯುವುದು ಇಲ್ಲಿನ ವೈಶಿಷ್ಟ್ಯ. ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ಗಾಣಗಟ್ಟೆ ಮಾಯಮ್ಮದೇವಿ ಜಾತ್ರೆ ನಡೆಯುತ್ತದೆ. ಯಾವುದೇ ರಥ ಮುಂದೆ ಸಾಗಬೇಕಾದರೆ ರಥಕ್ಕೆ ಕಟ್ಟಲಾದ ಮಿಣೆಯನ್ನು ಭಕ್ತರು ಎಳೆಯುತ್ತಾರೆ. ಆದರೆ ಈ ರಥವನ್ನು ಮಾತ್ರ ಮಿಣೆಯನ್ನು ಕಟ್ಟದೇ ರಥ ಎಳೆಯುವುದೂ ಕೂಡ ಇಲ್ಲಿಯ ಮತ್ತೊಂದು ವಿಶಿಷ್ಟವಾಗಿದ್ದು, ರಥದ ಚಕ್ರಗಳನ್ನು ನೂಕುವುದರ ಮೂಲಕ ಲಕ್ಷಾಂತರ ಭಕ್ತರು ಭಕ್ತಿ ಸಲ್ಲಿಸುತ್ತಾರೆ. ಭಕ್ತರು ಉರುಳುಸೇವೆಯಿಂದ ಹಿಡಿದು ಉಧೋ, ಉಧೋ ಎಂದು ಕೂಗುತ್ತಾ ರಥಕ್ಕೆ ಹಣ್ಣು ಎಸೆದು ಜಾತ್ರೆಯಲ್ಲಿ ಸೇರಿದ ಭಕ್ತರು ಅಡಿಮುಡಿಯಿಂದ ಮಾಯಮ್ಮದೇವಿಯ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಹಣದಿಂದ ಅಲಂಕೃತಗೊಂಡ ಮಾಯಮ್ಮದೇವಿಯ ಮೂರ್ತಿ ಭಕ್ತರನ್ನು ಬೆರಗುಗೊಳಿಸುವಂತಿರುತ್ತದೆ. ಮೂರು ಬಾರಿ ರಥವನ್ನು ಸುತ್ತಿ ಉತ್ಸವ ಮೂರ್ತಿಯನ್ನು ರಥದೊಳಗೆ ಕುಳ್ಳಿರಿಸಿದಾಗ ರಥವೂ ಮುಂದೆ ಸಾಗುತ್ತದೆ. ಅಪಾರ ಪ್ರಮಾಣದ ಭಕ್ತರು ಉಧೋ, ಉಧೋ ಎಂದು ಕೂಗುವುದು ಇಲ್ಲಿನ ವಾಡಿಕೆಯಾಗಿದೆ.

ಹಿನ್ನೆಲೆ: ಕೊಲ್ಲಾಪುರದಿಂದ ಮಹಾಲಕ್ಷ್ಮೀ ದೇವಿಯು ಕೋಣನ ವ್ಯಾಪಾರದಾರರೊಂದಿಗೆ ಗಾಣಗಟ್ಟೆಗೆ ಬಂದು ನೆಲೆಸಿದ ತಾಯಿಯೆಂದು ಇಲ್ಲಿಯ ಜಾನಪದ ಹಾಡುಗಳಲ್ಲಿ ಕೇಳಿಬರುತ್ತದೆ. ಬಾಲಕಿಯೋರ್ವಳಿಗೆ ರಾತ್ರಿ ಕನಸಿನಲ್ಲಿ ದೇವಿಯು ಬಂದು ಕೊಲ್ಲಾಪುರದ ಮಹಾಲಕ್ಷ್ಮೀ ತಾನು ಈ ಗ್ರಾಮಕ್ಕೆ ಬಂದಿದ್ದೇನೆಂದು ಹೇಳಿದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಊರಿನ ಬೇವಿನ ಮರದ ಕೆಳಗೆ ಗುಡಿಯೊಂದನ್ನು ಕಟ್ಟಿಸಿದ್ದರು. ಅಲ್ಲಿಂದ ದೇವಿಯ ಮಹಿಮೆ ಪ್ರಾರಂಭವಾಯಿತು. ಗಾಣಗಟ್ಟೆ ಇಂದಿಗೂ ಕುಗ್ರಾಮವಾಗಿದ್ದು, ದೇವಿಯ ಮಹಿಮೆಯಿಂದಾಗಿ ಪ್ರಸಿದ್ಧಿಗೆ ಬಂದಿದೆ. ಬಳ್ಳಾರಿ ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಹಂಪೆಯ ವಿರೂಪಾಕ್ಷೇಶ್ವರ, ಹುಲಿಗಿ, ಕೊಟ್ಟೂರು, ಪಂಚಪೀಠದ ಉಜ್ಜೈನಿಯ ಜೊತೆಗೆ ಗಾಣಗಟ್ಟೆ ಮಾಯಮ್ಮ ದೇವಿಯ ಸುಕ್ಷೇತ್ರ ಕೂಡ ಬರುತ್ತದೆ. ದೇವಾಲಯದ ಮುಂದೆ ವಿಶಾಲವಾದ ಆವರಣವಿದ್ದು, ಜಾತ್ರೆ ಮತ್ತು ಸಭೆ ಸಮಾರಂಭಗಳಿಗೆ ಯೋಗ್ಯವಾಗಿದೆ. ಇತ್ತೀಚೆಗೆ ದೇವಿಯ ಗರ್ಭಗುಡಿ ಹೊಸತನವನ್ನು ಕಂಡಿದ್ದು, ಸುಂದರ ಶಿಲ್ಪಾಕಲಾಕೃತಿಗಳಿಂದ ಆಕರ್ಷಿಸುವಂತಿದೆ. ದೇವಾಲಯದ ಮುಂಭಾಗದಲ್ಲಿ ಪ್ರಾಕಾರ ಕೂಡ ನಿರ್ಮಿಸಿದ್ದಾರೆ.

ಪ್ರತಿ ವರ್ಷ ವಸಂತ ಕಾಲದ ರಾಮನವಮಿಯ, ಹನುಮ ಜಯಂತಿ, ಹುಣ್ಣಿಮೆಯ ಒಳಗೆ ಇಲ್ಲಿ ಸುಮಾರು ೧೦ ದಿನಗಳ ಕಾಲ ಜಾತ್ರಾ ಮಹೋತ್ಸವ ನಡೆಯುತ್ತದೆ. ಸೋಮವಾರದಿಂದ ರಥೋತ್ಸವ ಸೇರಿದಂತೆ ಸಾಂಪ್ರದಾಯಿಕ ಉತ್ಸವಗಳನ್ನು ನಡೆಸಲಾಗುತ್ತದೆ. ದೇವಿಯ ಕೃಪೆಗೆ ಪಾತ್ರರಾದ ಭಕ್ತರು ಉರುಳು ಸೇವೆ, ತುಲಾಭಾರ ಸೇವೆ ಸಲ್ಲಿಸುತ್ತಾರೆ. ಆರೋಗ್ಯ ಭಾಗ್ಯಕ್ಕೆ ಪ್ರಾರ್ಥಿಸಿಕೊಂಡ ಭಕ್ತರು ಹರಕೆಯನುಸಾರ ಹಣ ಮತ್ತು ಆಭರಣ ಮತ್ತು ಆಹಾರ ಧಾನ್ಯಗಳನ್ನು ಅರ್ಪಿಸುತ್ತಾರೆ. ಮುಖ್ಯವಾಗಿ ಈ ದೇವಿಗೆ ಹಣವೇ ಪ್ರಮುಖವಾಗಿರುವುದರಿಂದ ಬಹುಪಾಲು ಭಕ್ತರು ಹಣದ ಹರಕೆಯನ್ನು ಸಲ್ಲಿಸುತ್ತಾರೆ.

ಬಹುತೇಕ ಯಾವುದೇ ಪುಣ್ಯ ಕ್ಷೇತ್ರಗಳ ದೇವಾಲಯಗಳಿಗೆ ಹೋಗುವಾಗ ಹೂ-ಹಣ್ಣು, ಕಾಯಿ ಆಭರಣ, ಬೆಣ್ಣೆ, ತೈಲ ಇಲ್ಲವೇ ತುಲಾಭಾರ ನಿಮಿತ್ತ ಆಹಾರಧಾನ್ಯವನ್ನು ಅರ್ಪಿಸುವುದು ವಾಡಿಕೆ. ಅದರೆ ಗಾಣಗಟ್ಟೆಯ ಮಾಯಮ್ಮದೇವಿಯ ಇಷ್ಟಾರ್ಥ ಈಡೇರಿಸಲು ಭಕುತರು ಹಣದಿಂದ ಹರಕೆ ಹೊರುವುದು ಇಲ್ಲಿನ ವಿಶೇಷ ಸಂಗತಿಯಾಗಿದೆ. ಪ್ರತಿನಿತ್ಯ ದೇವಿಗೆ ಅರ್ಪಿಸುವ ಹಣದ ಮಾಲೆಗಳ ಅಲಂಕಾರವೇ ಹೆಚ್ಚು ಕಾಣಬರುತ್ತದೆ. ಜಾತ್ರೆಯ ಸಮಯದಲ್ಲಿ ಕುರಿ, ಕೋಳಿಗಳನ್ನು ಬಲಿ ಅರ್ಪಿಸುವುದು ಕಂಡುಬರುತ್ತದೆ.

ಪ್ರಾಣಿಬಲಿ: ಗಾಣಗಟ್ಟೆ ಮಾಯಮ್ಮನ ಜಾತ್ರಾ ಸಮಯದಲ್ಲಿ ಸಮುದಾಯಗಳೆಲ್ಲರೂ ಪ್ರಾಣಿಗಳನ್ನು ಬಲಿಕೊಡುತ್ತಾರೆ. ಇಲ್ಲಿ ಪೊಲೀಸರ ಸರ್ಪಗಾವಲು ಇರುತ್ತದೆ. ಆದರೂ ಪೊಲೀಸರ ಕಣ್ಣು ತಪ್ಪಿಸಿ ಕರುಗಳನ್ನು ಕಡಿಯಲಾಗುತ್ತದೆ. ಜಾತ್ರಾ ಸಮಯದಲ್ಲಿ ವಿಶ್ವಪ್ರಾಣಿ ಕಲ್ಯಾಣ ಮಂಡಳಿಯವರು ಕೈಗೊಂಡಿದ್ದ ಪ್ರಾಣಿಬಲಿ ತಡೆ ಅಭಿಯಾನ ಕೂಡ ನಡೆಯುತು. ಪ್ರಾಣಿಬಲಿಯು ಅನಾಗರಿಕವಾಗಿದ್ದು, ಇದು ನಿಲ್ಲಬೇಕು ಎಂಬ ಸಂದೇಶವನ್ನು ಅಲ್ಲಿ ಮಾಡಲಾಗುತ್ತಿತ್ತು. ಕಾರ್ಯಕ್ರಮ ಮುಗಿದ ನಂತರ ಜನಪದರು ಅಲ್ಲಿ ನೆರೆದಿದ್ದ ಎಲ್ಲರೂ ಸುಮಾರು ೨೦ ಹೆಚ್ಚು ಕುರಿ, ಟಗರುಗಳನ್ನು ದೇವಾಲಯದ ಸುತ್ತ ಮೆರವಣಿಗೆ ಮಾಡಿಸಿ ದೇವಸ್ಥಾನದ ಆವರಣದಲ್ಲಿ ಅವುಗಳನ್ನು ಕಡಿಯಲಾಯಿತು. ಹೀಗೆ ಸರ್ಕಾರದ ಕಟ್ಟುನಿಟ್ಟಿನ ಪ್ರಾಣಿಬಲಿಗಳನ್ನು ನಡೆಸಬಾರದು ಎಂಬ ನಿಯಮವಿದ್ದರೂ ಸರ್ಕಾರದ ನಿಯಮ ಉಲ್ಲಂಘನೆ ಮಾಡಿ ಟಗುರುಗಳನ್ನು ಕೋಳಿಗಳನ್ನು ಕಡಿಯಲಾಗುತ್ತದೆ.

ಹಗರಿಬೊಮ್ಮನಹಳ್ಳಿ ಗಾಳೆಮ್ಮ ದೇವಿ ಜಾತ್ರಾ ವಿಧಾನಗಳ ವಿವರಗಳು

ಕೆಲವು ಮಾಹಿತಿಗಳಿಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಸಾಪ್ತಾಹಿಕ ಪುರವಣಿಯಲ್ಲಿ ವಿವರಗಳನ್ನು ಗಮನಿಸಬಹುದು. "ಪಟ್ಟಣದ ಹೊಸಪೇಟೆ-ಶಿವಮೊಗ್ಗ ರಾಜ್ಯ ಹೆದ್ದಾರಿ ಯಲ್ಲಿರುವ ಗಾಳೆಮ್ಮ ದೇವಿ ದೇವಸ್ಥಾನ ಇದೆ"[೬೭] ನಿರ್ಮಾಣಗೊಂಡು ಸುಮಾರು ೫ ದಶಕಗಳಾಗಿವೆ. ಇದೇ ಮೊದಲ ಬಾರಿಗೆ ಜಾತ್ರಾ ಮಹೋತ್ಸವವು ನಡೆಯುತ್ತಿತ್ತು. ಇಂದಿನಿಂದ ಜಾತ್ರೆಗೆ ವಿದ್ಯುಕ್ತವಾಗಿ ಚಾಲನೆ ದೊರೆಯಲಿದೆ. ಪಟ್ಟಣದ ರಾಮನಗರ, ರೈತರ ಓಣಿ,

ನಾರಾಯಣದೇವರಕೆರೆ ಮತ್ತು ಇತರೆ ಪ್ರದೇಶಗಳಲ್ಲಿ ಮನೆಗಳಿಗೆ ಸುಣ್ಣಬಣ್ಣ ಬಳಿದು ಅಲಂಕಾರ ಮಾಡಲಾಗುತ್ತೆ. ಹಬ್ಬಕ್ಕೆ ಬರುವ ಬೀಗರು ಬಿಜ್ಜರನ್ನು ಸ್ವಾಗತಿಸಲು ಎಲ್ಲರ ಮನೆಗಳ ಮುಂದೆ ತಳಿರು ತೋರಣಗಳನ್ನು ಮತ್ತು ರಂಗೋಲಿಂತ್ತಾರೆ ಕಾದು ಕುಳಿತಿರುತ್ತವೆ. ಇದಕ್ಕಾಗಿ ಸತತ ಎರಡು ತಿಂಗಳುಗಳಿಂದ ಸಕಲ ತಯಾರಿ ನಡೆದಿದೆ. ಇದೇ ೧೬ರಿಂದ ೧೮ರವರೆಗೆ ಜರುಗುವ ವಿಶೇಷ ಜಾತ್ರೆಗೆ ನಾರಾಯಣದೇವರಕೆರೆ ಮತ್ತು ರೈತರ ಓಣಿಯ ಸಮಸ್ತ ದೈವಸ್ಥರಿಂದ ವಿವಿಧ ಸಮಿತಿಗಳನ್ನು ರಚಿಸಿ ಜವಾಬ್ದಾರಿ ವಹಿಸಲಾಗಿರುತ್ತದೆ. ಇದೇ ೧೬ರಂದು ವೈಶಾಖ ಶುದ್ಧ ದಶಮಿಯಂದು ಹಂದರ ಪೂಜೆ ಮತ್ತು ಉತ್ಸವಮೂರ್ತಿಯ ಘಟಸ್ಥಾಪನೆ, ಮಧ್ಯಾಹ್ನ ಬಯಲು ಕುಸ್ತಿ ಪಂದ್ಯಾವಳಿ ನಡೆಯುತ್ತದೆ. ರಾತ್ರಿ ಸಂದರ್ಭದಲ್ಲಿ 'ರಂಗಚೈತ್ರ' ತಂಡದವರಿಂದ ಕೆಲವು ನಾಟಕ ಪ್ರದರ್ಶನಗಳು ನಡೆಯುತ್ತವೆ. ೧೭ರಂದು ವೈಶಾಖ ಶುದ್ಧ ಏಕಾದಶಿ ಗಂಗಾಸ್ವೀಕಾರ ಮತ್ತು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಲಿ ಉತ್ಸವಮೂರ್ತಿ ಮೆರವಣಿಗೆ, ರಾತ್ರಿ ನರೆಗಲ್ ದುರುಗಮ್ಮ, ದೇವಸ್ಥಾನದ ಆವರಣದಲ್ಲಿ ಬಾಣಬಿರುಸು ಪ್ರದರ್ಶನ ನಡೆಯಲಿದೆ. ೧೮ರಂದು ವೈಶಾಖ ಶುದ್ಧ ದ್ವಾದಶಿಯಂದು ಜಾತ್ರಾ ಮಹೋತ್ಸವದ ಅಂಗವಾಗಿ ಬೆಳಗಿನ ಜಾವದಿಂದಲೇ ವಿಶೇಷ ಪೂಜೆಗಳು ನಡೆಯುತ್ತವೆ. ತುಂಗಭದ್ರಾ ಜಲಾಶಯ ನಿರ್ಮಾಣಗೊಂಡು ಮುಳುಗಡೆಯಾದ ನಂತರ ಅಲ್ಲಿಂದ ಸ್ಥಳಾಂತರಗೊಂಡ ನಂತರ ನಡೆಯುತ್ತಿರುವ ಪ್ರಥಮ ಜಾತ್ರೆ ಹಲವು ವೈಶಿಷ್ಟ್ಯಗಳಿಗೆ ಸಾಕ್ಷಿಯಾಗಿದೆ. ಇವುಗಳನ್ನು ಕಣ್ತುಂಬಿಕೊಳ್ಳಲು ಭಕ್ತರ ಸಮೂಹ ಕಾದು ಕುಳಿತಿದೆ. ಬೇವಿನ ಮರದಲ್ಲಿ ಒಡಮೂಡಿದ ಗಾಳೆಮ್ಮ ದೇವಿಗೆ ಪೂಜಿಸಲಾಗುತ್ತಿತ್ತು. ಮರ ಒಣಗಿದ ನಂತರದಲ್ಲಿ ದೇವಸ್ಥಾನ ನಿರ್ಮಿಸಿ, ಮೂರ್ತಿ ಸ್ಥಾಪಿಸಿ ನಿರಂತರ ಪೂಜೆ ಮಾಡಲಾಗುತ್ತಿತ್ತು. ಪ್ರತಿ ಮಂಗಳವಾರ ಮತ್ತು ಶುಕ್ರವಾರ ವಿಶೇಷ ದಿನಗಳಂದು ಭಕ್ತರ ಸಂಖ್ಯೆ ಹೆಚ್ಚಿರುತ್ತದೆ. ದೇವಸ್ಥಾನ ನಿರ್ಮಾಣವಾದ ನಂತರ ಇದು ಪ್ರಥಮ ಪೂಜೆ ಎಂದು ಅಲ್ಲಿನ ಭಕ್ತರು ಹೇಳುತ್ತಾರೆ. ವಿವಿಧ ಹೂಗಳಿಂದ ಅಲಂಕೃತಗೊಂಡಿದ್ದ ಸಾರೋಟ ವಾಹನದಲ್ಲಿ ಇರಿಸಿದ್ದ ಬೆಳ್ಳಿಯ ಉತ್ಸವಮೂರ್ತಿಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಡೊಳ್ಳುಕುಣಿತ, ಕೋಲಾಟ, ಕಹಳೆ ವಾದನ, ಉರುಮೆ ವಾದ್ಯಗಳು ಮೆರವಣಿಗೆ ಮೆರಗು ನೀಡಿದವು. ಭಕ್ತರು ನೀರು ಸಿಂಪಡಣೆ ಮಾಡಿ ರಂಗೋಲಿ ಹಾಕಿದ್ದರು. ಬಾಳೆಕಂಬ ತಳಿರು ತೋರಣಗಳನ್ನು ಕಟ್ಟಲಾಗಿತ್ತು. ಬೆಳಗಿನ ಜಾವದಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜೆ, ಧಾರ್ಮಿಕ ಕಾರ್ಯಗಳು ನಡೆದವು. ಭಕ್ತರು ದೇವಿಯ ದರ್ಶನವನ್ನು ಪಡೆದರು. ಕೊನೆಯಲ್ಲಿ ಪ್ರಾಣಿಗಳನ್ನು ಕಡಿಯಲಾಗುತ್ತದೆ. ಹರಕೆ ಹೊತ್ತ ಮಂದಿಯವರು ಕುರಿ, ಕೋಳಿ ಟಗರು, ಮುಂತಾದವುಗಳನ್ನು ದೇವರುಗಳಿಗೆ ಸಲ್ಲಿಸುವುದನ್ನು ಗುರುತಿಸಬಹುದು.

ಕೂಡ್ಲಿಗಿ ಹೋಳಿಗೆಮ್ಮನ ಆಚರಣೆ

ಜುಲೈ ತಿಂಗಳಲ್ಲಿ ಕೂಡ್ಲಿಗಿ ತಾಲೂಕಿನಲ್ಲಿ ಹೋಳಿಗೆಮ್ಮನ ಆಚರಣೆಯನ್ನು ವೈಭವದಿಂದ ಮಾಡುತ್ತಾರೆ. ವಿಶೇಷವಾಗಿ ಮನೆ ಮಂದಿಯಲ್ಲ ಶುಭ್ರಬಟ್ಟೆಯನ್ನು ಧರಿಸಿಕೊಳ್ಳುತ್ತಾರೆ. ಮುತ್ತೈದೆರೆಲ್ಲ ಮಡಿಯಿಂದ ಇರುತ್ತಾರೆ. ಅಂದು ಸ್ತ್ರೀಯರು ಹೋಳಿಗೆಯಮ್ಮನಿಗೆ ಎಡೆಯ ರೂಪದಲ್ಲಿ ನೈವೇದ್ಯವನ್ನು ಮಾಡುತ್ತಾರೆ. ಹೋಳಿಗೆಯಮ್ಮನಿಗೆ ಎಡೆ ಅರ್ಪಿಸಿದ ನಂತರ ಯಾರ ಜೊತೆಯಲ್ಲೂ ಮಾತನಾಡದೇ ಮೌನವಾಗಿ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗುವುದು ವಾಡಿಕೆಯಾಗಿದೆ. ದಾರಿ ಮದ್ಯೆ ಬರುವಾಗ ಹಿಂದಿರುಗಿ ನೋಡಬಾರದೆಂಬ ನಿಶ್ಚಲವಾದ ನಂಬಿಕೆಯಿದೆ. ಒಂದು ವೇಳೆ ಹಿಂದುರಿಗೆ ನೋಡಿದರೆ ಮಾರಮ್ಮ ಸ್ವರೂಪದಲ್ಲಿ ಮನೆಗಳಿಗೆ ಬರುತ್ತಾಳೆಂಬ ಭಯ ಜನಪದರಲ್ಲಿದೆ. ಆ ದಿನ ಊಟಕ್ಕೆ ಯಾರನ್ನೂ ಕರೆಯುವುದು ಇಲ್ಲ. ನೆಂಟರನ್ನು ಕರೆಯುವುದಿಲ್ಲ. ಮಾರಿರೋಗಳಾದ ಸಾಂಕ್ರಾಮಿಕ ರೋಗ ರುಜಿನಗಳನ್ನು ಊರಿಂದ ಹೊರಗೆ ಹಾಕುವ ಒಂದು ಕ್ರಮವಾಗಿದೆ ಎಂದು ಗ್ರಾಮಸ್ಥರು ಭಾವಿಸುತ್ತಾರೆ. ಹಸಿದ ಬಾಲಕರು ಸಾಕುವ ಪ್ರಾಣಿಗಳು ಹೋಳಿಗೆಯಮ್ಮನಿಗೆ ಬಡಿಸಿದ ಎಡೆಯನ್ನು ತಿಂದರೆ ಅಮ್ಮ ಸಂತೃಪ್ತಿಗೊಳ್ಳುತ್ತಾಳೆಂದು ಭಾವಿಸುತ್ತಾರೆ. ಇದೇ ಪ್ರಕಾರವಾಗಿ ಬಳ್ಳಾರಿಗೆ ಸೇರಿದೆ ಇತರೆ ತಾಲೂಕುಗಳಾದ ಸಂಡೂರಲ್ಲಿ ಮಾಡುತ್ತಾರೆ. ಹೋಳಿಗೆಯಮ್ಮನಿಗೆ ಹೋಳಿಗೆ ಬಹಳ ಪ್ರಿಯವಾಗಿದ್ದು, ಅದೇ ಪ್ರಕಾರವಾಗಿ ಮಡಿಲಕ್ಕಿಯನ್ನು ಅರ್ಪಿಸುತ್ತಾರೆ. ಮನೆಯಲ್ಲಿ ದೊರೆಯುವ ಕಸ, ಕಡ್ಡಿ, ಹಳೆಯ ಬಟ್ಟೆಗಳು ಸಂಗ್ರಹಿಸಿ ಅಮ್ಮನ ಮೂರ್ತಿಯನ್ನು ಮಾಡಿ ಅದಕ್ಕೆ ಪೂಜೆ ಮಾಡುವ ಪದ್ಧತಿಯಿದೆ. ಒಂದೂರಿನಿಂದ ಮತ್ತೊಂದೂರಿಗೆ ಅಮ್ಮನನ್ನು ಸಾಗಿಸುತ್ತಾರೆ. ಊರಿನ ಕಷ್ಟ ದರಿದ್ರಗಳನ್ನು ಒಟ್ಟುಗೂಡಿಸಿಕೊಂಡು ಹೋಗುತ್ತಾಳೆಂಬ ಪವಿತ್ರವಾದ ಭಾವನೆ ಜನಪದರಲ್ಲಿ ನೆಲೆಯೂರಿದೆ. ಇದೊಂದು ತಂತ್ರಗಾರಿಕೆಯ ಪದ್ಧತಿ ಎಂದು ಗುರುತಿಸಬಹುದು. ಇದರ ಉದ್ದೇಶ ಒಂದೇ ಆಗಿರುತ್ತದೆ. ಊರಿನ ರಕ್ಷಣೆ ಮತ್ತು ಪಾಲನೆ ಮುಖ್ಯವಾಗುತ್ತದೆ. ಪ್ರಧಾನವಾಗಿ ಹೋಳಿಗೆಮ್ಮನು ರೋಗ ನಿವಾರಿಸುವ ವೈದ್ಯದೇವತೆಯಾಗಿ, ಮಳೆ ಬೆಳೆ ಸಮೃದ್ಧಿಯನ್ನು ಕರುಣಿಸುವ ದೇವತೆಯಾಗಿ ಪರಿಗಣಿಸುತ್ತಾಳೆ. ಗ್ರಾಮವನ್ನು ಶುದ್ಧಿಗೊಳಿಸುವ ಜವಾಬ್ದಾರಿಯನ್ನು ಹೋಳಿಗೆಯಮ್ಮನು ಹೊತ್ತಿರುತ್ತಾಳೆಂದು ಭಾವಿಸುತ್ತಾರೆ. ರೋಗಗಳನ್ನು ಅಮ್ಮ ನಿಯಂತ್ರಿಸುತ್ತಾಳೆ ಎಂಬ ಪವಿತ್ರವಾದ ಭಕ್ತಿ ಜನಪದರಲ್ಲಿ ಇದೆ. ಸಾಮಾನ್ಯವಾಗಿ ಯಾವುದೇ ಅಮ್ಮನ ವಾಸ ಮಾಡುವ ಸ್ಥಳ ಊರು ಹೊರಗಡೆ ಇರುವುದು ಇದೆ. ನಾಲ್ಕು ಕಲ್ಲುಬಂಡೆಗಳಿಂದ ರಚಿತವಾದ ಆಕಾರವೇ ಅಮ್ಮನ ದೇವಾಲಯವಾಗಿರುತ್ತದೆ. ಈ ಅಮ್ಮನ ದೇವಾಲಯದಲ್ಲಿ ಗುಂಡು ಗುಂಡಾಕಾರದಲ್ಲಿರುವ ಕಲ್ಲುಗಳೇ ಅಮ್ಮ ಎಂದು ಭಾವಿಸುತ್ತಾರೆ. ಗ್ರಾಮ ದೈವದ ವಾಸಸ್ಥಾನ ಇಂತಹದೇ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಪ್ರತಿಯೊಂದು ಸ್ಥಳದಲ್ಲಿ ಅಮ್ಮ ಇರುತ್ತಾಳೆ ಎಂದು ಜನಪದರು ತಿಳಿದುಕೊಳ್ಳುತ್ತಾರೆ. ಊರಿಗೆ

ಬರುವ ದುಷ್ಟ ಶಕ್ತಿಗಳನ್ನು ದಮನಿಸುವ ಕೆಲಸವನ್ನು ಆ ಅಮ್ಮನು ಹೊತ್ತುಕೊಂಡಿರುತ್ತಾಳೆಂದು ಭಾವಿಸುತ್ತಾರೆ. ಬುಡಕಟ್ಟು ಸಮುದಾಯಗಳು ವಾಸಿಸುವ ಸ್ಥಳಗಳಲ್ಲಿ ಈ ಅಮ್ಮನನ್ನು ಹೆಚ್ಚಾಗಿ ಪೂಜಿಸಿ ಆಚರಿಸುತ್ತಾರೆ. ಬೇಡ ಸಮುದಾಯಗಳು ವಾಸಿಸುವ ಗ್ರಾಮಗಳಲ್ಲಿ ಅಮ್ಮನ ಆಚರಣೆಗಳು ಕಂಡುಬರುತ್ತವೆ. ಈ ಪದ್ಧತಿ ಬೇಡ ಸಮುದಾಯಗಳ ಅಲೆಮಾರಿ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಒಂದೂರಿಂದ ಮತ್ತೊಂದೂರಿಗೆ ಹೋಗುವಾಗ ಗಡಿಯಲ್ಲಿ ವಸ್ತುಗಳನ್ನಿಟ್ಟು ಬರುವುದು ಮತ್ತು ಆ ವಸ್ತುಗಳನ್ನು ಹಿಂದಿರುಗಿ ನೋಡದೇ ಬರುವುದು ಬೇಡ ಕುಲದ ಸಂಪ್ರದಾಯವಾಗಿದೆ. ಇದು ವಲಸೆಗಾರರ ಲಕ್ಷಣ ಕೂಡ ಹೌದು ಎಂದು ತಿಳಿದುಕೊಳ್ಳಬಹುದು. ಊರುಗಳಿಗೆ ಕ್ಷಾಮ ಉಂಟಾಗಬಾರದು, ಮಳೆ ಬಾರದಿದ್ದಾಗ, ಸ್ರಾಂಕ್ರಾಮಿಕ ರೋಗಗಳು ಹರಡುವಾಗ, ಊರಿಗೆ ದಟ್ಟ ದರಿದ್ರಗಳು ಬಂದಾಗ ಹೋಳಿಗಮ್ಮನಿಗೆ ಆಚರಣೆ ಮಾಡುತ್ತಾರೆ. ಕೂಡ್ಲಿಗಿ ಮತ್ತು ಸಂಡೂರುಗಳಲ್ಲಿ ಇಂತಹ ಆಚರಣೆಗಳು ಅಪರೂಪದ ಆಚರಣೆಗಳು ಎಂದು ತಿಳಿಯಬಹುದು.

ಪ್ರಾಣಿಬಲಿ ಕೊಡುವ ಸ್ಥಳಗಳು

ಬಳ್ಳಾರಿ ಜಿಲ್ಲೆಯಲ್ಲಿ ಪ್ರಧಾನವಾಗಿ ಪ್ರಾಣಿಬಲಿಗಳು ನಡೆಯುತ್ತವೆ. ಪ್ರತಿಯೊಂದು ಗ್ರಾಮದಲ್ಲಿ ಗ್ರಾಮದೇವತೆಗಳಿಗೆ ನಿರ್ದಿಷ್ಟವಾದ ಪ್ರಾಣಿಬಲಿ ಕೊಡುವುದಕ್ಕೆ ಸ್ಥಳ ಇರುತ್ತದೆ. ಗುಡಿಯ ಮುಂದೆ ಸೀಮಿತವಾದ ಸ್ಥಳದಲ್ಲಿ ಪ್ರಾಣಿಗಳನ್ನು ಎಳೆದು ತಂದು ಬಲಿ ಮಾಡಲಾಗುತ್ತದೆ. ಗರ್ಭಗುಡಿಯ ಎದುರಲ್ಲಿ ಗರುಡಗಂಬ ಇರುತ್ತದೆ. ಈ ಗರುಡಗಂಬದ ಎದುರಲ್ಲಿ ಕೋಣ, ಕುರಿ, ಕೋಳಿ ಮುಂತಾದ ಪ್ರಾಣಿಗಳನ್ನು ಬಲಿಕೊಡುವುದು ರೂಢಿಯಲ್ಲಿದೆ. "ಒಂದೊಂದು ಊರಲ್ಲಿ ಒಂದೊಂದು ಕಡೆ ಬಲಿ ಕೊಡುತ್ತಾರೆ. ಈ ಸ್ಥಳವನ್ನು ಅನುಕೂಲತೆ ಹಾಗೂ ಧಾರ್ಮಿಕ ಭಾವನೆಗಳ ಆಧಾರದ ಮೇಲೆ ಆರಿಸುತ್ತಾರೆ. ಅನುಕೂಲತೆಯ ದೃಷ್ಟಿಯಿಂದ ನೋಡಿದರೆ ಸುಮಾರಾಗಿ ಬಲಿ ಕೊಡುವ ಸ್ಥಾನಗಳು ಊರ ಹೊರಗಿನ ಪ್ರದೇಶಗಳಲ್ಲಿ ಇರುವವು. ಅಲ್ಲಿ ಸ್ತ್ರೀಯರು ಮಕ್ಕಳು ಬರುವುದಿಲ್ಲ. ಇದರಿಂದ ಸ್ತ್ರೀಯರಲ್ಲಿ, ಮಕ್ಕಳಲ್ಲಿ, ಭಯ ಮೂಡಲಾರದು. ಅವರು ತಮ್ಮ ತಮ್ಮ ಕಲ್ಪನೆ ಮಾಡಿಕೊಂಡು ಸುಮ್ಮನಿರುತ್ತಾರೆ. ಎರಡನೆಯದಾಗಿ, ಬಲಿ ಕೊಡುವವರು ಸಾಮಾನ್ಯವಾಗಿ ರಾತ್ರಿ ವೇಳೆಯಲ್ಲಿ ಮಾತ್ರ. ಊರ ಹೊರಗೆ ಬಲಿ ಕೊಡುವುದು ಒಂದು ಸಂಗತಿ. ಯಾವ ದಿಕ್ಕಿಗೆ ಬಲಿ ಕೊಡಬೇಕು ಎಂಬುದು ಇನ್ನೊಂದು ಪ್ರಶ್ನೆ. ನಾಲ್ಕು ದಿಕ್ಕಗಳನ್ನು ಪರಿಗಣಿಸಿದರೆ ಜಾತ್ರೆ ಜನರ ಬೆಂಬಲ ಊರಿನ ದಕ್ಷಿಣ ದಿಕ್ಕಿಗೆ ಎಂದು, ದಕ್ಷಿಣ ದಿಕ್ಕಿಗೆ ಬಲಿ ಕೊಟ್ಟರೆ ಊರಿಗೆ ಒಳ್ಳೆಯದು ಎಂಬ ತಿಳುವಳಿಕೆ ಇದೆ" ಎಂದು ಚರ್ಚೆ ಮಾಡುತ್ತಾರೆ.[೮೮] ಕೆಲವು ಸಮಯದಲ್ಲಿ ಊರ ಮಧ್ಯಭಾಗದಲ್ಲಿ ಬಲಿ ಕೊಡುತ್ತಾರೆ. ಊರಿನ ಗಡು ಗಳಿಗೆ ಬಲಿ ಕೊಡುತ್ತಾರೆ. ಹಬ್ಬದ ಮಧ್ಯಾಹ್ನ ಸಮಯದಲ್ಲಿ

ಬಲಿ ಕೊಡುತ್ತಾರೆ. ಊರಿಗೆ ಗಡುಗಳಿದ್ದರೆ ಆ ಗಡುಗಳಿಗೆ ಚರಗ ಚೆಲ್ಲುವ ಮೂಲಕ ಅಲ್ಲಿ ಪ್ರಾಣಿಬಲಿಕೊಟ್ಟು ಪ್ರಾಣಿಯ ಮಾಂಸವನ್ನು ಮಾಡಿ ಬಾಡೂಟ ಮಾಡುವ ಪರಂಪರೆಯೂ ಇದೆ.

ಬಲಿ ಕೊಡುವ ರೀತಿ ನೀತಿಗಳು

ಬಳ್ಳಾರಿ ಜಿಲ್ಲೆಗೆ ಸೇರಿದ ೭ ತಾಲ್ಲೂಕಿನಲ್ಲಿ ಪ್ರಾಣಿಗಳನ್ನು ಬಲಿ ಕೊಡುವ ಪದ್ಧತಿ ನಡೆಯುತ್ತವೆ. ಪ್ರಧಾನವಾಗಿ ಪ್ರಾಣಿಬಲಿ ಮಾಡಬೇಕಾದರೆ ಕೆಲವು ನಿಯಮಗಳನ್ನು ಮಾಡಬೇಕಾದುತ್ತದೆ. “೧. ಬಲಿಕೊಟ್ಟ ಪ್ರಾಣಿಯ ತಲೆಯನ್ನು ದೇವರ ಎದುರುಗಿಟ್ಟು ನೈವೇದ್ಯ ಮಾಡುವುದು ಸಾಮಾನ್ಯ ವಿಧಾನ. ಈ ವಿಧಾನದಲ್ಲಿ ಬಲಿಯಾಗುತ್ತಿರುವ ಪ್ರಾಣಿಯನ್ನು ಮಲಗಿಸುತ್ತಾರೆ. ಅದರೆ ಕುತ್ತಿಗೆಯ ಕೆಳಗೆ ಒಂದು ಮರದ ಬೊಡ್ಡೆಯನ್ನು ಇಡುವರು. ಬೊಡ್ಡೆಯ ಹಾಗೂ ಕುತ್ತಿಗೆಯ ಮಧ್ಯದಲ್ಲಿ ಹರಳು ಉಪ್ಪನ್ನು ಹಾಕುತ್ತಾರೆ. ಮೂರು ನಾಲ್ಕು ಜನರು ಆ ಪ್ರಾಣಿಯನ್ನು ಗಟ್ಟಿಯಾಗಿ ಹಿಡಿದಿರುತ್ತಾರೆ. ಬಲಿ ಕೊಡುವ ವ್ಯಕ್ತಿ ಭಕ್ತಿಯಿಂದ ದೇವರಿಗೆ ನಮಿಸಿ ಜೋರಾಗಿ ಖಡ್ಗ ಬೀಸಿ ಪ್ರಾಣಿಯ ಕುತ್ತಿಗೆಯ ಮೇಲೆ ಪ್ರಹಾರ ಮಾಡುತ್ತಾನೆ. ಕುತ್ತಿಗೆ ಕತ್ತರಿಸಿ ಪ್ರಾಣಿಯ ತಲೆ ಬೇರ್ಪಡುವುದು. ದೇಹ ವಿಲಿವಿಲಿ ಒದ್ದಾಡುವುದು. ಕತ್ತರಿಸಿದ ಕುತ್ತಿಗೆಯ ಭಾಗದಿಂದ ದೇಹದ ರಕ್ತವು ಚಿಮ್ಮುತ್ತಿರುತ್ತದೆ. ಕ್ರಮೇಣ ರಕ್ತ ಚಿಮ್ಮುವಿಕೆ ಕಡಿಮೆಯಾಗುತ್ತ ಹೋಗಿ ಕೊನೆಗೆ ನಿಂತು ಬಿಡುವುದು. ತಲೆಯಿಂದ ಬೇರ್ಪಟ್ಟ ದೇಹವನ್ನು ಎಳೆದು ಭಕ್ತರಿಗೆ ಕೊಡುವರು. ತಲೆಯನ್ನು ದೇವರಿಗೆ ಎಡೆ ಮಾಡಿ ಕೆಲ ನಿಮಿಷಗಳವರೆಗೆ ದೇವರ ಮುಂದೆ ಇಡುತ್ತಾರೆ. ತಲೆಯ ಭಾಗದ ಕುತ್ತಿಗೆಯಿಂದ ಸೋರುತ್ತಿರುವ ರಕ್ತವನ್ನು ಭಕ್ತರ ಹಣೆಗೆ ಇಲ್ಲವೆ ತಲೆಗೆ ಹಚ್ಚಿ ಆಶೀರ್ವಾದ ಮಾಡುವರು. ೨. ಎರಡನೆಯ ವಿಧಿ ಎಂದರೆ, ಬಲಿ ಪ್ರಾಣಿಯ ಕುತ್ತಿಗೆಯನ್ನು ಕೊಯ್ದು ಬೇರ್ಪಡಿಸುವರು. ಮುಂದುವರಿದು ಪ್ರಾಣಿಯ ಮುಂದಿನ ಬಲಗಾಲನ್ನು ಮೊಳಕಾಲದ ಮೇಲೆ ಕತ್ತರಿಸುವರು. ಬಿಡಿಯಾದ ಕಾಲನ್ನು ತೆಗೆದುಕೊಂಡು ಬಲಿಯಾದ ಕುರಿ ಇಲ್ಲವೇ ಆಡುಗಳ ಬಾಯಿಯಲ್ಲಿ ಅಡ್ಡವಾಗಿಟ್ಟು ದೇವರಿಗೆ ನೈವೇದ್ಯ ಮಾಡುವರು. ೩. ಮೂರನೇ ವಿಧಾನ ಅಷ್ಟೊಂದು ವೈಜ್ಞಾನಿಕ ಅನಿಸಲಾರದು. ಆದರೂ ಆ ವಿಧಾನವೂ ಆಗೊಮ್ಮೆ ಈಗೊಮ್ಮೆ ಚಾಲ್ತಿಯಲ್ಲಿ ಬರುವುದು. ಈ ವಿಧಾನದಲ್ಲಿ ಪ್ರಾಣಿಯನ್ನು ಅಡ್ಡಲಾಗಿಯೇ ಮಗ್ಗುಲಾಗಿಯೋ ಹಾಕುತ್ತಾರೆ. ಬಲಿ ಕೊಡುವ ವ್ಯಕ್ತಿ ತನ್ನ ಆಯುಧದಿಂದ ಪ್ರಾಣಿಯ ಹೊಕ್ಕುಳದ ಮೇಲೆ ಪ್ರಹಾರ ಮಾಡುವನು. ಇಲ್ಲಿ ಪ್ರಾಣಿ ಎರಡು ಭಾಗಗಳಾಗುತ್ತದೆ. ತಲೆ, ಎದೆ ಹಾಗೂ ಮುಂದಿನ ಕಾಲುಗಳೆರಡು ಒಂದು ಕಡೆಯಾಗುವವು. ದೇಹದ ಹಿಂಭಾಗವು ಮತ್ತೊಂದು ಕಡೆಗೆ ಉಳಿಯುವುದು. ಅದರಲ್ಲಿ ಹಿಂದಿನ ಕಾಲು, ಬಾಲ, ಕರುಳು, ಉಳಿಯುತ್ತದೆ. ಈ ತರದ ಬಲಿಯು ಅಷ್ಟು ಸ್ವಚ್ಛವಲ್ಲ” ಎಂದು ಪ್ರಾಣಿಬಲಿಯ ವಿಧಿವಿಧಾನಗಳ ಬಗ್ಗೆ ಮಾತನಾಡುತ್ತಾರೆ.[೪೯]

ಕೋಲೆ ಬಸವನ ಆಚರಣೆ

ಇದು ವಿಶೇಷವಾಗಿ ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತ್ತದೆ. ಬಸವ ಎಂದರೆ ಇಲ್ಲಿ ಹಸುವನ್ನು ಬಸವ ಎಂದು ಕರೆಯಲಾಗುತ್ತದೆ. ದೇವರಿಗೆ ಬಿಟ್ಟ ಹಸುವನ್ನು ಬಹಳ ಸೂಕ್ಷ್ಮವಾಗಿ ಪಳಗಿಸಿ ಸೂಕ್ತವಾಗಿ ತರಬೇತಿ ನೀಡಿ ಅದನ್ನು ಕೋಲೆ ಬಸವನ ಆಟಕ್ಕೆ ಬಳಸಿಕೊಳ್ಳುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಗೊಲ್ಲ ಸಮುದಾಯ ಮತು ಹಿಂದುಳಿದ ಬುಡಕಟ್ಟು ಸಮುದಾಯದವರು ಈ ಕೋಲೆ ಬಸವನನ್ನು ಆಡಿಸುತ್ತಾರೆ. ಎತ್ತು, ಆಕಳುಗಳಿಗೆ ವಿಶೇಷವಾಗಿ ಅಲಂಕಾರ ಮಾಡಿ ಗಂಟೆ, ಗಗ್ಗರ, ಗೆಜ್ಜೆ, ಕಡಗ ಕಟ್ಟಿರುತ್ತಾರೆ. ಬೆನ್ನಿಗೆ ಬಟ್ಟೆಗಳಿಂದ ಅಲಂಕಾರಗೊಳಿಸಿ ಇಳಿ ಬಿಟ್ಟಿರುತ್ತಾರೆ. ಜನರು ಹೆಚ್ಚಾಗಿ ಸೇರುವ ಜಾತ್ರೆ, ಹಬ್ಬದಲ್ಲಿ ಕೋಲೆ ಬಸವನನ್ನು ಆಡಿಸುವುದು ರೂಢಿಯಾಗಿದೆ. ಈ ಆಡಿಸುವ ಆಟದಿಂದ ಬಂದ ಹಣದಿಂದ ಸಂಸಾರವನ್ನು ನಿರ್ವಹಿಸುವುದು ಇದೆ. ಇವರು ಆಡಿಸುವ ಬಸವನ ಆಟದಲ್ಲಿ ಶಿವನ ಮತ್ತು ಪಾರ್ವತಿಯ ಕಲ್ಪಿತ ಕತೆಯನ್ನು ಹೇಳಿಕೊಂಡು ಆಟ ಆಡುವುದು ಇದೆ.

ಹೊಸಪೇಟೆಯಲ್ಲಿ ಅಮ್ಮನನ್ನು ಕಳಿಸುವ ಆಚರಣೆ

ಸಾಂಸ್ಕೃತಿಕವಾಗಿ ಮಾರಿರೋಗಗಳು ಎಲ್ಲಾ ಕಡೆಯಲ್ಲಿ ಬರುತ್ತವೆ. ಇದಕ್ಕೆ ಕಾರಣಗಳು ಹಲವಾರು. ಜನಪದರು ಶುಚಿತ್ವವನ್ನು ಕಾಪಾಡಿಕೊಳ್ಳದೇ ಇರುವಾಗ ಬರುವ ರೋಗಳು ಈ ಮಾರಿರೋಗಳಾದ ಪ್ಲೇಗು, ಕಾಲರಾ, ಸಿಡುಬು ಮುಂತಾದವುಗಳು. ಇಲ್ಲಿ ಪ್ರಧಾನವಾಗಿ ಹೆಣ್ಣುದೇವತೆಯರು ಪ್ರಾಮುಖ್ಯತೆಯನ್ನು ಪಡೆದುಕೊಳ್ಳಲು ಕಾರಣವೇನೆಂದರೆ ಪ್ರಾಚೀನ ಕಾಲದಿಂದಲೂ ಸ್ತ್ರೀಗೆ ನೀಡಿರುವ ಮಹತ್ವದ ಸ್ಥಾನಮಾನಗಳು ಎಂದು ಗುರುತಿಸಬಹುದು. ಸ್ತ್ರೀ ಜನ್ಮ ನೀಡುವ ಸ್ಥಾನವನ್ನು ಹೊಂದಿರುವುದರಿಂದ ಅವಳನ್ನು ಪೂಜ್ಯಭಾವನೆಯಿಂದ ನೋಡುವುದು ಇದೆ. ಪುರುಷಪ್ರಧಾನ ಸಮಾಜದಲ್ಲಿ ಪುರುಷರಿಗಿಂತ ಮಹಿಳೆಯು ಉತ್ತಮ ಸ್ಥಾನದವಳು ಮತ್ತು ಪವಿತ್ರಳು ಎಂಬ ಪೂಜ್ಯಭಾವನೆಯೂ ಗ್ರಾಮದೇವತೆಗಳಾದ ಮಾರಮ್ಮ, ಕಾಳಮ್ಮ, ದುರುಗಮ್ಮ, ಚಾಮುಂಡಿ ಪ್ರಾಧ್ಯಾನತೆಗೆ ಕಾರಣವಾಗಿದೆ. ಇಂತಹ ಸ್ವರೂಪಗಳು ಮತ್ತು ಪೂರ್ವಪದ್ಧತಿಗಳು, ಅಮ್ಮನನ್ನು ಊರಿಂದೂರಿಗೆ ಕಳಿಸುವ ಸಂಪ್ರದಾಯಗಳು ಇವೆ. ಮಕ್ಕಳಿಗೆ, ಜನ, ಜಾನುವಾರುಗಳಿಗೆ ಭಯಂಕವಾದ ಕಾಯಿಲೆಗಳಾದರೆ, ಬರಗಾಲ ಬಂದಾಗ, ಭೂಮಿ ಬರಡಾದಾಗ, ದೈವ ಕೋಪಿಸಿಕೊಂಡಿದ್ದಾಳೆ ಎಂದು ತಿಳಿದು ಆ ದೈವವನ್ನು ಶಾಂತಿ ಮಾಡುವ ಪದ್ಧತಿಯೇ ಆಚರಣೆಯಾಗಿರುತ್ತದೆ. ತಮ್ಮ ತಮ್ಮ ದೇವತೆಯನ್ನು ಭಯದಿಂದ ಪೂಜಿಸಿ ಸಕಲ ಕಾರ್ಯಗಳನ್ನು ಪೂರೈಸಿಕೊಂಡು, ಮಾತೃದೇವತಾ ಪೂಜಾ ವಿಧಾನಗಳನ್ನು ಪೂರೈಸಿಕೊಂಡು, ಸಕಲ ರೋಗಗಳು ನಿವಾರಿಸಿಕೊಳ್ಳುವ ಆಚರಣೆ ಇದಾಗಿದೆ. ಹೊಸಪೇಟೆಯಲ್ಲದೇ ಬಳ್ಳಾರಿ ಜಿಲ್ಲೆಯ ಕೆಲವು ಕಡೆಗಳಲ್ಲಿ ಅಮ್ಮನನ್ನು ಕಳಿಸುವ ವಿಧಾನ ಇದೆ. ಇದನ್ನು ಒಂದು ಚಿಕ್ಕ ರಥದಲ್ಲಿ ಅಥವಾ ಕುಂಭದಲ್ಲಿ ಇಟ್ಟು ಕಳಿಸುವ ವಿಧಾನವಾಗಿದೆ.

೩.೪. ಬಲಿಪದ್ಧತಿಯಲ್ಲಿ ನಂಬಿಕೆ ಮತ್ತು ನಿಷೇಧಗಳು

ಸಾಂಸ್ಕೃತಿಕವಾಗಿ ಪ್ರಾಣಿ ಎಂಬ ಪದವೇ ಸೂಚಿಸುವಂತೆ ಪ್ರಾಣಿಗಳನ್ನು ಬಲಿ ಕೊಡುವುದು ಎಂಬ ಅಂಶ ಎಂಬುದು ಸಾಮಾನ್ಯವಾಗಿ ಎಲ್ಲರಿಗೂ ಅರ್ಥವಾಗುತ್ತದೆ. ಪ್ರಾಚೀನ ಕಾಲದಿಂದಲೂ ನಡೆದು ಬಂದ ಈ ಪದ್ಧತಿ ಇಂದಿಗೂ ನಡೆಯುತ್ತಲೇ ಇದೆ. ಇದೊಂದು ಮೂಢನಂಬಿಕೆ ಎಂಬುದು ಶಿಷ್ಟ ಜನರ ವಾದವಾದರೆ ದೇವರು ದೈವದ ಸೇವೆ ಎಂಬುದು ಜನಪದರವಾದ. 'ಬಲಿ' ಎಂಬ ಪದದ ಅರ್ಥವು ವಿಶಾಲವಾಗಿದೆ. ಸಾಮಾನ್ಯವಾಗಿ ನಾವು ಕೇಳುವ ಕೆಲವು ಮಾತುಗಳು 'ಅವರನ್ನು ನಂಬಿ ನಾನು ಬಲಿಪಶುವಾದೆ' ಎಂದರೆ ಯಾವುದೋ ಸಂಕಷ್ಟಕ್ಕೆ ಯಾರಿಂದಲೋ ಒಳಗಾದೆ, ಅನುಭವಿಸಿದೆ, ಎಂದು ತಿಳಿಯುತ್ತದೆ. ಆದರೆ ಪ್ರಾಣಿಬಲಿ ಎಂಬುದು ಮೂಕಪ್ರಾಣಿಗಳನ್ನು ಎಳೆದುಕೊಂಡು ಹೋಗಿ ಕಡಿದು ಬಲಿ ಹಾಕುತ್ತಾರೆ. ಉದಾ: ಕುರಿ, ಕೋಳಿ, ಆಡು, ಕೋಣ, ಹಂದಿ ಇತ್ಯಾದಿ ಇದರಲ್ಲಿ ಮಾನವ ಬಲಿಯೂ ಕಂಡುಬರುತ್ತದೆ. ಯಾವುದೋ ನಿಧಿಯಾಸೆಗೆ ಹಸುಗೂಸನ್ನು, ಕನ್ಯೆಯನ್ನು ಬಲಿ ಕೊಡುವುದು ಇಂದಿಗೂ ಮಾಧ್ಯಮಗಳ ಮೂಲಕ ಪ್ರಕಟಿಸುತ್ತಿದ್ದಾರೆ. ಈ ಬಲಿಗಳು ದೇಶದಾದ್ಯಂತ ಕಂಡುಬರುತ್ತದೆ. ನಿಧಿಯಾಸೆಗಾಗಿ ಮಗಳನ್ನೇ ಬಲಿ ಕೊಟ್ಟ ತಂದೆ ಎಂಬ ಶೀರ್ಷಿಕೆಯಡಿಯಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ನಿಧಿ ಇದೆ ಎಂದು ಭಾವಿಸಿ ಏಳು ಮಂದಿ ಸೇರಿಕೊಂಡು ಮಗಳನ್ನೇ ಬಲಿಕೊಟ್ಟ ಪ್ರಸಂಗದಲ್ಲಿ ಮೂಢನಂಬಿಕೆ ಎಷ್ಟು ಪ್ರಭಾವ ಪಡೆದುಕೊಂಡಿದೆ ಎಂದು ಗುರುತಿಸಬಹುದು. "ಗ್ರಾಮದೇವತೆಗಳಿಗೆ ಸಂಬಂಧಪಟ್ಟಂತೆ ಹತ್ತು ಹಲವು ನಂಬಿಕೆ-ನಿಷೇಧಗಳು ರೂಢಿಯಲ್ಲಿವೆ. ಗಾಳೆಮ್ಮನಿಗೆ ಸಂಬಂಧಪಟ್ಟಂತೆಯೂ ಇಂತಹ ನಂಬಿಕೆ ನಿಷೇಧಗಳು ಇದ್ದೇ ಇವೆ. ಈ ನಂಬಿಕೆ ಮತ್ತು ಹರಕೆಗಳೊಳಗೆ ಒಂದು ರೀತಿಯ ಸಂಬಂಧವಿದೆ. ಗಾಳೆಮ್ಮನಿಗೆ ಉಪ್ಪು ಒಪ್ಪಿಸುವುದಾಗಿ ಹರಕೆ ಹೊತ್ತರೆ ಮೈಮೇಲಿನ ಕಜ್ಜಿ ವಾಸಿಯಾಗುತ್ತದೆ ಎಂಬ ನಂಬಿಕೆಯಿದೆ. ಬ್ಯಾಟೆ ಕೊಡುವುದಾಗಿ ಹರಕೆ ಹೇಳಿಕೊಂಡರೆ ಮಳೆಬೆಳೆ ಸಮೃದ್ಧಿಯಾಗುತ್ತದೆಂದೂ ಕಾಯಿಲೆ ಕಸಾಲೆಗಳು ನಿವಾರಣೆಯಾಗುವುದೆಂದೂ ನಂಬಲಾಗುತ್ತದೆ. 'ದೀಡ್ ನಮಸ್ಕಾರ' ಸಲ್ಲಿಸುವುದಾಗಿ ಹರಕೆ ಹೊತ್ತುಕೊಂಡರೆ ಇಷ್ಟಾರ್ಥ ಸಿದ್ಧಿಯಾಗುತ್ತದೆಂದು ನಂಬುತ್ತಾರೆ. ಇವಲ್ಲದೆ ದೇವತೆಯ ಮುಂದೆ ಕೈಯೊಡ್ಡಿ ನಿಂತು ಹೂ ಕೇಳುವ ಸಂಪ್ರದಾಯವೊಂದನ್ನು ಕಾಣಬಹುದು. ಹಾಗೆ ಕೇಳಿದಾಗ ಬಲಭಾಗದ ಹೂ ಬಿದ್ದರೆ ತಮ್ಮ ಇಷ್ಟಾರ್ಥ ಈಡೇರುವುದೆಂದೂ ಎಡಭಾಗದ ಹೂ ಬಿದ್ದರೆ ಇಷ್ಟಾರ್ಥ ಈಡೇರುವುದಿಲ್ಲವೆಂದೂ ನಂಬಲಾಗುತ್ತದೆ. ಕೆಲವೊಮ್ಮೆ ಎಷ್ಟು ಹೊತ್ತಾದರೂ ಹೂ ಬೀಳದೇ ಇರುವ ಸಂದರ್ಭವೂ ಇದೆ. ಆಗ ಭಕ್ತಾದಿಗಳು ಪರಿಪರಿಯಾಗಿ ದೇವತೆಯನ್ನು ಬೇಡಿಕೊಳ್ಳುತ್ತಾರೆ. ಹೆಚ್ಚಿನ ಎಲ್ಲ ಗ್ರಾಮದೇವತೆಗಳ ಸಂದರ್ಭದಲ್ಲೂ ಇಂತಹ

ನಂಬಿಕೆಗಳು ಸಾಮಾನ್ಯವೆನ್ನಬಹುದು. ವಡ್ಡರೇ ದೇವತೆಯ ನಿತ್ಯ ಪೂಜಾರಿಗಳಾಗಿರಬೇಕೆಂಬ ನಂಬಿಕೆ ಈಗಿನ ಪೂಜಾರಿಗಳಲ್ಲಿ ಮತ್ತು ಅವರ ಆಪ್ತ ವಲಯದಲ್ಲಿ ಪ್ರಚಲಿತವಿದ್ದು, ಅದನ್ನು ಇತರರಿಗೂ ಹರಡಲಾಗುತ್ತದೆ. ನಿಷೇಧಗಳಲ್ಲಿ ಹೆಚ್ಚಿನವುಗಳೂ ವೈದಿಕಸಂಸ್ಕೃತಿಯ ಪ್ರಭಾವದ ನಂತರ ಜಾರಿಗೆ ಬಂದವುಗಳೆನ್ನಬಹುದು. ಹರಿಜನರು ಗಾಳೆಮ್ಮನ ಗರ್ಭಗುಡಿಯೊಳಗಡೆ ಪ್ರವೇಶಿಸಬಾರದೆಂದಿದೆ. ಇದು ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಆದರೆ ಗಾಳೆಮ್ಮ ಮೂಲತಃ ಅವೈದಿಕ ಸಂಸ್ಕೃತಿಯ ಗ್ರಾಮದೇವತೆಯಾದುದರಿಂದ ಕಟ್ಟು ನಿಟ್ಟಿನ ನಿಷೇಧಗಳೇನೂ ಇಲ್ಲಿ ಜಾರಿಯಲ್ಲಿಲ್ಲವೆನ್ನಬಹುದು. ಪಾವಿತ್ರ್ಯದ ಕಲ್ಪನೆಯೂ ಅಷ್ಟಾಗಿ ಕಂಡುಬರುವುದಿಲ್ಲ. ಉಳಿದಂತೆ ಗ್ರಾಮದೇವತೆಯೊಂದು ಬಯಲಿನಿಂದ ಗುಡಿಯೊಳಗಡೆ ಬಂದಾಗ, ನಿರ್ದಿಷ್ಟ ಜಾತಿ–ಸಮುದಾಯಗಳ ಖಾಸಗಿ ಸೊತ್ತಾಗಿ ಪರಿಣಮಿಸಿದಾಗ ಕೆಲವೊಂದು ನಿಷೇಧಗಳು ಬಳಕೆಗೆ ಬರುವುದು ಸರ್ವೆಸಾಮಾನ್ಯ ಎಂದು ವಿವೇಚಿಸುತ್ತಾರೆ."[೫೦] ವಡ್ಡ, ಹರಿಜನ ಪೂಜಾರಿಗಳ ಕಲ್ಪನೆ ಇದೆ. ಪ್ರಧಾನವಾಗಿ ಅವೈದಿಕ ದೇವತೆಗಳಿಗೆ ಹೊಲೆಯ, ಹರಿಜನ, ಕೆಳಜಾತಿಯವರೇ ಪೂಜಾರಿಗಳಾಗುತ್ತಾರೆ.

ಜನಸಾಮಾನ್ಯರು ಶಕ್ತಿದೇವತೆಗಳಿಗೆ ಕುರಿ, ಕೋಳಿಗಳನ್ನು ಬಲಿ ಕೊಟ್ಟು ಅದರ ಮಾಂಸವನ್ನು ಪ್ರಸಾದವಾಗಿ ಸ್ವೀಕರಿಸುತ್ತಾರೆ. ಈ ಆಚರಣೆ ಅಥವಾ ನಂಬಿಕೆಯ ಮುಖ್ಯ ಉದ್ದೇಶ, ತಮ್ಮ ನಾಡಿನಲ್ಲಿ ಮಳೆ–ಬೆಳೆ ಚೆನ್ನಾಗಿ ಆಗಲಿ, ದೇವಿ ಸಂತೃಪ್ತಿಪಟ್ಟರೆ ರೋಗರುಜಿನಗಳು ಊರನ್ನು ಸೋಂಕುವುದಿಲ್ಲ. ಒಂದು ವೇಳೆ ಬಲಿ ತಪ್ಪಿದರೆ ಎಲ್ಲಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂಬ ನಂಬಿಕೆ ಬಲವಾಗಿ ಬೇರೂರಿದೆ. ಎಷ್ಟೋ ಸಮಾಜ ಸುಧಾರಕರು ತಡೆಯುವ ಯತ್ನ ನಡೆಸಿದ್ದರೂ ಒಂದೆರಡು ಕಡೆ ಬದಲಾವಣೆ ಕಂಡುಬಂದಿರಬಹುದು ಅಷ್ಟೆ. ಅಮೃತ ಸೋಮೇಶ್ವರರು ತಮ್ಮ ಅಭಿನಂದನ ಗ್ರಂಥವಾದ 'ಸಿರಿ' ಪುಸ್ತಕದಲ್ಲಿ ಈ ಮಾತುಗಳನ್ನು ವ್ಯಕ್ತಪಡಿಸುತ್ತಾರೆ. ಚಿಂತನ ಬಯಲು ತ್ರೈಮಾಸಿಕ ಸಂಚಿಕೆಯಲ್ಲಿ ಈ ರೀತಿಯಾದ ಮಾತುಗಳಿವೆ. "ಈ ಬಲಿ ಹಿಂದೆ ಅರ್ಥಗಳನ್ನು ಕೊಡಬಹುದಾದರೂ ಮಾಂಸಾಹಾರಗಳನ್ನು ಸೇವಿಸುವ ಪರಂಪರೆಯಲ್ಲಿ ಈ ನಂಬಿಕೆಗಳು ಹುಟ್ಟಿಕೊಂಡಿವೆ. ಮಾಂಸಾಹಾರಿಗಳಲ್ಲದ ಜನಪದರು ನಿಂಬೆಹಣ್ಣೂ, ಕುಂಬಳಕಾಯಿ, ಅನ್ನ, ಓಕುಳಿ, ಕೆಂಪು ನೀರು ಇವುಗಳಿಂದ ದೈವಗಳನ್ನು ಪ್ರಸನ್ನಗೊಳಿಸುತ್ತಾರೆ. ನಾವು ಪ್ರಮುಖವಾಗಿ ಗಮನಿಸುವ ಅಂಶವೆಂದರೆ ಅವರವರ ಜೀವನಶೈಲಿ ಆಹಾರಪದ್ಧತಿಗೆ ಅನುಗುಣವಾಗಿ ಬಲಿ ಆಚರಣೆಯನ್ನು ಮಾಡುತ್ತಾರೆ."[೫೧] ಸರ್ಕಾರ ಕೆಲವು ವರ್ಷಗಳ ಹಿಂದೆ ಕಾನೂನು ಹೊರಡಿಸಿತು. ಆ ಸಂದರ್ಭದಲ್ಲಿ ನಿಷೇಧವೂ ಆಯಿತು. ಆದರ ಆ ಬಲಿ ಕೊಡುವ ಸ್ಥಳವಾದ ಬಲಿಕಲ್ಲಿನ ಪಕ್ಕದಲ್ಲಿ ವಾಹನ ಅಪಘಾತಗಳು ನಿರಂತರವಾಗಿ ನಡೆದು ನೂರಾರು

ಜನರ ರಕ್ತವನ್ನು ಹೀರಿತು ಆ ಬಲಿಕಲ್ಲು. ನಂತರ ಆ ಕಾನೂನನ್ನು ಕೈ ಬಿಡಲಾಗಿ ಇಂದಿಗೂ ನಡೆಯುತ್ತಲೇ ಇದೆ. ಬರೀ ಪ್ರಾಣವನ್ನು ತೆಗೆದರೆ ಮಾತ್ರ ಪ್ರಾಣಿಬಲಿ ಅಲ್ಲ, ಒಬ್ಬರ ಮನಸ್ಸನ್ನು ನೋಯಿಸಿದರೂ ಆ ವ್ಯಕ್ತಿಯ ಮನಸ್ಸನ್ನು ಕೊಂದಂತೆ ಅದಕ್ಕಾಗಿಯೇ ಬಸವಣ್ಣನವರು 'ದಯಯೇ ಧರ್ಮದ ಮೂಲವಯ್ಯ ದಯೆಯೇ ಬೇಕು ಸಕಲ ಪ್ರಾಣಿಗಳಲ್ಲಿ' ಎಂಬುದನ್ನು ವಚನಗಳಲ್ಲಿ ಹೇಳುವ ಮೂಲಕ ಸಮಾಜದಲ್ಲಿ ಬದಲಾವಣೆಯನ್ನು ತರಲು ಪ್ರಯತ್ನಿಸಿದರು. ಅಷ್ಟೆ ಅಲ್ಲದೇ ಮೇಲುಕೀಳು ಎಂಬ ಭಾವನೆಯು ಈ ಸಮಾಜದ ಜನರಲ್ಲಿ ಬೇರೂರಿದ ನಂಬಿಕೆ. ಹೊಲೆಯರನ್ನು ದೂರವಿರಿಸುವುದು ಒಂದು ಬಲಿಯೇ. ಅದಕ್ಕಾಗಿ ಬಸವಣ್ಣನವರು ಹೊಲೆಯರು ಎಂದರೆ 'ಹೊಲಸು ತಿನ್ನುವವರು' ಎಂಬುದಾಗಿ ಹೇಳಿದ್ದಾರೆ.

ಅಶೋಕ್ ಆಳ್ವ ತಮ್ಮ ಪ್ರಾಣಿ ಜಾನಪದಲ್ಲಿ ಪ್ರಮುಖವಾದ ಮಾತುಗಳನ್ನು ವ್ಯಕ್ತಪಡಿಸುತ್ತಾರೆ. "ಪ್ರಾಚೀನ ಕಾಲದಲ್ಲಿ ತಮ್ಮ ಆಹಾರಕ್ಕೋಸ್ಕರ ಪ್ರಾಣಿಗಳ ಬೇಟೆಯಲ್ಲಿ ತೊಡಗಿದರು. ಕಾಲಾನುಕ್ರಮವಾಗಿ ಪ್ರಾಣಿಗಳಿಂದ ಅಪಾಯವನ್ನು ಮನಗೊಂಡ ಜನ ಆ ಪ್ರಾಣಿಗಳನ್ನೇ ಆರಾಧಿಸಲು ತೊಡಗಿ ಆ ಪ್ರಾಣಿದೈವಗಳನ್ನು ಸಂತೃಪ್ತಿಗೊಳಿಸಲು ಪ್ರಾಣಿಬಲಿಗಳನ್ನು ಮಾಡತೊಡಗಿದರು. ಈ ರೀತಿಯಾಗಿ ಆರಾಧಿಸಲು ತೊಡಗಿದ ಮಾನವ ತನ್ನ ಮುಂದಿನ ಪೀಳಿಗೆಗೂ ಈ ಆರಾಧನಾ ಪದ್ಧತಿಯನ್ನು ಬೇರೂರುವಂತೆ ಮಾಡಿದ. ಈಗಲೂ ನಾಗರಿಕತೆ ಬದ ನಂತರವೂ ಮೂಢನಂಬಿಕೆ ಎನಿಸಿರುವ ಪ್ರಾಣಿಬಲಿ ಇಂದಿಗೂ ಆಚರಣೆಯಲ್ಲಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಸಮುದಾಯದಲ್ಲಿ ಹರಡುವ ರೋಗರುಜಿನಗಳು ಹಾಗೂ ಸಾಂಕ್ರಾಮಿಕ ರೋಗಗಳಾದ ಪ್ಲೇಗು, ಸಿಡುಬು, ಕಾಲರಾ, ಬರ, ನೈಸರ್ಗಿಕ ದುರಂತಗಳು, ಅತಿವೃಷ್ಟಿ, ಅನಾವೃಷ್ಟಿ ಹೀಗೆ ಅನೇಕ ಕಾರಣಗಳಿಗಾಗಿ ನಡೆಯುವ ಬಲಿ ಪದ್ಧತಿಯನ್ನು ರಕ್ತಸಹಿತ ಅರ್ಪಣೆ ಮತ್ತು ರಕ್ತರಹಿತ ಅರ್ಪಣೆ ಎಂಬುದಾಗಿ ಎರಡು ರೀತಿಯಾಗಿ" ಅವರು ಚರ್ಚೆ ಮಾಡುತ್ತಾರೆ.[೫೨]

ಹಾಗೆಯೇ 'ಜನಪದ ಸಿರಿ' ಪುಸ್ತಕದಲ್ಲಿ ಎ.ಎಂ.ರುದ್ರಪ್ಪ ಅವರು ಈ "ಸರ್ಕಾರದ ಉಳ್ಳವರ ವರ್ಗದ ಬೇಡಿಕೆಯನ್ನು ಒಪ್ಪುವುದಾದರೆ, ಸಮಾಜವು ಮಾಂಸಾಹಾರಿ ಸೇವನೆಯನ್ನೇ ನಿಲ್ಲಿಸಬೇಕಾಗುತ್ತದೆ. ಇಲ್ಲಿ ನಾವು ಮುಖ್ಯವಾಗಿ ಗಮನಿಸುವ ಅಂಶವೆಂದರೆ, ಧಾರ್ಮಿಕವಾಗಿ ಮಾಡುವ ಬಲಿ ಆಚರಣೆ ಮಾತ್ರ ಅದು ಹಿಂಸಾಪ್ರವೃತ್ತಿ, ಎನ್ನುವ ಪರಿಕಲ್ಪನೆಯನ್ನು ತಂದು ಕೊಳ್ಳುವುದಾದರೆ, ಮಾಂಸಾಹಾರಿಗಳಾದ ಜನ ತಿನ್ನುವ ಆಹಾರವೇನಿದೆ ಅದು ಹಿಂಸಾಪ್ರವೃತ್ತಿಯಾದ ಒಂದು ವ್ಯಕ್ತಿ ಬದುಕಲು ಇತರ ಪ್ರಾಣಿಗಳನ್ನು ಪದಾರ್ಥಗಳನ್ನು ತಿನ್ನುವುದು ಆದಿಮಾನವನ ಕಾಲದಿಂದಲೂ ಬಂದಿರುವುದಂತದ್ದು. ಹಾಗೆಯೇ ಬಲಿ ಕೊಟ್ಟ ಅದನ್ನು ಸ್ವೀಕರಿಸುವಂತದ್ದು, ಸಮಾಜವು ಯಾವುದೇ ಪ್ರಾಣಿಗಳನ್ನು ಆಗಲಿ ಅದು ಸತ್ತು

ಎಷ್ಟೋ ದಿನದ ನಂತರವಾಗಲಿ ಅಥವಾ ಅದು ತಾನಾಗಿಯೇ ಸತ್ತಮೇಲೆ ಅದನ್ನು ತಿನ್ನುವ ಕ್ರಮ ನಮ್ಮ ಯಾವ ಪ್ರಪಂಚದಲ್ಲಿಯೂ ಇಲ್ಲ. ಬದಲಾಗಿ ಒಂದು ಬಲಿಪದ್ಧತಿಯ ಆಚರಣೆ ಎನ್ನುವುದು ಧಾರ್ಮಿಕ ಆಚರಣೆ ಮಾತ್ರವಲ್ಲ; ಒಂದು ಇಡೀ ಕುಟುಂಬ ಸೇರಿ ಆಚರಿಸುವ ಪದ್ಧತಿ ಈ ಹಿನ್ನೆಲೆಯಿಂದಲೂ ಅದು ಸ್ವೀಕಾರಾರ್ಹ. ಹಾಗೆ ನೋಡಿದರೆ ನಮ್ಮ ಪುರಾಣಗಳು ಕವಿ ಮನಸ್ಸುಗಳು ಹೇಳುವ ರೀತಿಯನ್ನು ಗಮನಿಸಿದರೆ ಪ್ರಕೃತಿಯಲ್ಲಿ ಸಿಗುವ ಪ್ರತಿಯೊಂದು ವಸ್ತುವಿನಲ್ಲಿಯೂ ಜೀವವಿರುತ್ತದೆ ಎಂಬುದು. ಹಾಗೂ ಸಸ್ಯಾಹಾರಿಗಳಾದವರು ತಿನ್ನುವಂತಹ ಪದಾರ್ಥಗಳನ್ನು ಅವರು ಸಹ ಅದನ್ನು ನಾಶ ಮಾಡಿಯೇ ತಿನ್ನುವುದಲ್ಲವೇ ಈ ಪರಿಕಲ್ಪನೆಯನ್ನು ಗಮನಿಸುವಾಗ ಅಹಿಂಸಾ ತತ್ವ ಎಂಬ ಪರಿಕಲ್ಪನೆಯಲ್ಲಿ ಯೋಚಿಸಿದರೆ ಸಮಾಜದಲ್ಲಿ ಬದುಕುವ ವ್ಯಕ್ತಿಗೆ ಆಹಾರಗಳೇ ಇಲ್ಲದೆ ಹೋಗಬಹುದು" ಎಂದು ಪ್ರತಿಪಾದಿಸುತ್ತಾರೆ.[೫೩]

"ಪ್ರಾಣಿಪೂಜೆ ಎಂಬುದು ಮಾನವನ ಹುಟ್ಟು ಗುಣಗಳಲ್ಲಿ ಬಂದಂಥ ಒಂದು ಅಂಶ. ಆ ಪೂಜೆ ಎರಡು ರೀತಿಯಾಗಿರುತ್ತದೆ. ಒಂದು ಗೌರವ ಮತ್ತು ಉನ್ನತ ಮೌಲ್ಯಗಳಿಗೆ ಸಂಬಂಧಿಸಿದುದು ಎಂದು ಗುರುತಿಸುತ್ತಾರೆ. ಈ ಎರಡು ಪದ್ಧತಿಯಲ್ಲಿಯೂ ಬಲಿ ವಿಧಾನಗಳು ಇರುತ್ತವೆ. ಇವುಗಳೆರಡರಲ್ಲಿಯೂ ಭಯಮಿಶ್ರತವಾದ ಭಕ್ತಿಯಿಂದ ಕೂಡಿದೆ. ಅಂದರೆ ಮೊದಲನೆಯ ಪೂಜೆ ಪ್ರೌಢಧರ್ಮ ಮತ್ತು ಪುರಾಣದ ಪ್ರಾಣಿಗಳಿಗೆ ಸಂಬಂಧಿಸಿದ್ದು. ಉದಾ: ಗರುಡನ ಬಗ್ಗೆ ಪೂಜೆ ಮತ್ತು ಗರುಡೋತ್ಸವ ಆಚರಣೆ ಬರುತ್ತದೆ. ಇಲ್ಲಿ ಗರುಡನಿಗೆ ನಡೆಯುವ ಪೂಜೆ ಶಿಷ್ಟದೇವತೆಯ ವಾಹನವಾಗಿ ಅದು ಒಂದು ಶಿಷ್ಟಸಂಸ್ಕೃತಿಯ ಉದ್ಧಾರಕ್ಕಾಗಿ ಸಹಕರಿಸುವ ಪ್ರಾಣಿ ಎಂದಿದ್ದಾರೆ. ಈ ಪೂಜೆ ಕೂಡ ಶಿಷ್ಟ ನಡವಳಿಕೆಯಂತೆ ನಯವಿನಯ, ಸೌಮ್ಯ ಮತ್ತು ರಂಜಕ ಪ್ರಾಣಿಬಲಿಗೆ ಪೂರಕವಾದಂತಹ ಸೌಮ್ಯ ಪರ್ಯಾಯ ಎಂಬುದು ಹಾಗೆಯೇ ಇನ್ನೊಂದು ವರ್ಗದ ಪೂಜೆ ಮತ್ತು ಬಲಿ ವಿಧಾನಗಳು ರೋಚಕವಾದದ್ದು" ಎಂದು ಹಿ.ಶಿ.ರಾಮಚಂದ್ರಗೌಡರು ತಿಳಿಸುತ್ತಾರೆ.[೫೪] ಅ ಪ್ರಾಣಿ ಎಂಬುದು ಪೂರ್ವಜನ್ಮ ಆತ್ಮರಕ್ಷ, ಕುಲದೇವತೆ, ಅಪದ್ಬಾಂಧವ ಮುಂತಾದ ಅನೇಕ ಕಲ್ಪನೆಗಳಲ್ಲಿ ಪೂಜಿಸುತ್ತಿದ್ದರು. ಉದಾ: ಹುಲಿ, ಕರಡಿ, ಟಗರು, ಮೊಸಳೆ, ಎಮ್ಮೆ, ಹಂದಿ, ಕೋಣ ಹಾವು ಮುಂತಾದ ಕ್ರೂರ ಪ್ರಾಣಿಗಳನ್ನು ಪೂಜಿಸುವ ಪದ್ಧತಿಯಿತ್ತು. ಆದ್ದರಿಂದ ಇಂಥ ಕ್ರೂರ ಪ್ರಾಣಿಗಳನ್ನು ಸಮಾಧಾನಪಡಿಸಲು, ಮತ್ತಿತ್ತರ ಸಮಸ್ಯೆಗಳನ್ನು ನಿವಾರಿಸಲು ಇತರ ಬೇರೆ ಪ್ರಾಣಿಗಳನ್ನು ಅದರ ಸಂತೃಪ್ತಿಗೋಸ್ಕರ ಪ್ರಾಣಿ ಬಲಿ ಕೊಡುತ್ತಿದ್ದರು.

ಬನ್ನಂಜೆ ಬಾಬು ಅಮೀನ್ ಅವರು 'ನುಡಿಕಟ್ಟು'ನಲ್ಲಿ ತಮ್ಮ ಮಾತುಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ. "ಬಲಿಪದ್ಧತಿ ಎನ್ನುವುದು ಕೇವಲ ಸಾಮಾನ್ಯ ವರ್ಗಗಳಿಗೆ ಮಾತ್ರ ಸೀಮಿತವಾದುದಲ್ಲ. ಬದಲಾಗಿ ಪುರಾಣ ವೇದಕಾದಿಗಳಲ್ಲಿ ಯಜ್ಞಯಾಗಾದಿಗಳ ಕಾಲದಲ್ಲಿ ಬ್ರಾಹ್ಮಣರು ಗೋವಧೆ ಮತ್ತು ಗೋಮಾಂಸ ಭಕ್ಷಣೆ ಮಾಡುತ್ತಿದ್ದ ಬಗ್ಗೆ ಮಾಹಿತಿಗಳು

ಸಿಗುತ್ತದೆ. ಮತ್ತೆ ಉಳಿದ ಸಂದರ್ಭಗಳಲ್ಲಿ ಈಗಲೂ ಕೂಡ ಗೋವುಗಳು ಎಂಬುದು ಪವಿತ್ರ ಮಾತೃಭಾವನೆಯನ್ನು ನಮ್ಮಲ್ಲಿ ಮೂಡಿಸುತ್ತದೆ. ಮಾತ್ರವಲ್ಲ, ಸಾಕುಪ್ರಾಣಿಗಳ ವಂಶಾಭಿವೃದ್ಧಿಗೋಸ್ಕರ ಬಲಿಗೋಸ್ಕರವೇ ಕೇವಲ ಪ್ರಾಣಿಗಳನ್ನು ಕುರಿ, ಟಗರುಗಳನ್ನು ಬಲಿ ಕೊಡಲು ಬೆಳೆಸಿರುತ್ತಾರೆ. ಇಂತಹ ನಂಬಿಕೆ ಒಂದು ಕಡೆಯಾದರೆ ಇನ್ನೊಂದೆಡೆ. ಇಂತಹ ನಂಬಿಕೆಗಳನ್ನು ಮೂಢನಂಬಿಕೆ ಎಂದು ಹೇಳುವುದನ್ನು ನಿಲ್ಲಿಸುವ ನಿಷೇಧಿಸುವ ಕಾರ್ಯವನ್ನು ಸರಕಾರ ಕೈಗೊಂಡಿರುವುದು ಇನ್ನೊಂದು ಅಂಶ. ನಾವು ಗಮನಿಸುವ ಹಾಗೇ, ನಾವು ಆರಾಧಿಸುವ ದೈವ ದೇವರಿಗೆ ನೀಡುವ ಬಲಿ ನೈವೇದ್ಯ ಜನಸಾಮಾನ್ಯರು ಇಷ್ಟಪಡುವಂತಹ ಆಹಾರವನ್ನೇ ಬಲಿ ಕೊಡುವ ಪದ್ಧತಿ ಒಂದು ದೃಷ್ಟಿಕೋನ ಅದರೆ ಇನ್ನೊಂದು ರೀತಿಯಲ್ಲಿ ಗಮನಿಸುವ ಗ್ರಾಮದೇವತೆಗಳು ಯಾವ ಆಹಾರವನ್ನು ಇಷ್ಟವೋ ಆ ಪದಾರ್ಥಗಳನ್ನೇ ಬಲಿ ಕೊಡುವ ಪದ್ಧತಿ ಇದೆ. ಪ್ರಾಣಿಬಲಿ ಎನ್ನುವಂತಹ ಆಚರಣೆಯೇ ಮೂಢನಂಬಿಕೆಯೇ ಎಂಬ ಪ್ರಶ್ನೆ ನಮ್ಮ ಮುಂದಿದೆ. ಧಾರ್ಮಿಕವಾಗಿ ಜನಸಾಮನ್ಯರು ಬಲಿಪದ್ಧತಿ ನಂಬಿಕೆಯಾಗಿ ಪರಿಗಣಿಸಿದರೆ ವೈಜ್ಞಾನಿಕವಾಗಿ ನೋಡಿದಾಗ ಇದೊಂದು ಮೂಢ ನಂಬಿಕೆಯ ಆಚರಣೆಯಾಗಿದೆ" ಎಂದು ಕೆಲವೊಬ್ಬ ವಿಮರ್ಶಕರು ಅಭಿಪ್ರಾಯಪಟ್ಟಿರುವುದನ್ನು ಗಮನಿಸಬಹುದು.[೫೫] ಪ್ರಾಣಿಬಲಿಯ ನಿಷೇಧ ಎನ್ನುವುದು ಜನರು ಆಹಾರವನ್ನು ಸ್ವೀಕರಿಸುತ್ತಾರೋ ಅದಕ್ಕೆ ಕಡಿವಾಣ ಹಾಕುವ ಹುನ್ನಾರವಾಗಿ ಕಾಣುತ್ತದೆ.

"ಜಾತಿಪದ್ಧತಿಗೂ ಮತ್ತು ಬಲಿಪದ್ಧತಿಗೂ ಸಂಬಂಧ ಇದೆ. ಇತ್ತೀಚೆಗೆ ಮೇಲು ಸಮುದಾಯದವರ ಆಚರಣೆಗಳು ಬಲಿ, ಹಿಂಸೆಯಿರದ ಮೃದು ಆಚರಣೆಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಕೆಳಸಮುದಾಯದವರ ಆಚರಣೆಗಳು ದೈಹಿಕಶ್ರಮ, ಬಲಿ, ಹಿಂಸೆಯನ್ನೊಳಗೊಂಡ ಆಚರಣೆಗಳಾಗಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ. ಬಲಿ ಆಚರಣೆಗಳಲ್ಲಿ ಕೋಣ ಕಡಿಯುವುದು, ಚರಗ ಚೆಲ್ಲುವುದು, ಕೆಳಸಮುದಾಯದವರಿಂದ ನೆರವೇರುತ್ತದೆ. ಹೊಸಪೇಟೆಯ ನಾಯಕ ಕೇರಿಗಳಲ್ಲಿ ಹರಿಜನರು ಪಟ್ಟದ ಕೋಣ ಕಡಿದರೆ, ನಾಯಕರಿಂದ ಹರಕೆಯ ಕೋಣ ಕಡಿಯಲ್ಪಡುತ್ತದೆ. ಅಮ್ಮನ ಆಚರಣೆಗಳಲ್ಲಿ ಕೋಣ ಕಡಿಯುವುದು ಸಮೃದ್ಧಿಯ ಮೂಲವಾಗಿದ್ದರೂ ಇದಕ್ಕೆ ಸಂಬಂಧಿಸಿದ ಪುರಾಣ ಸಾಮಾಜಿಕ ಅಂಶಗಳನ್ನು ಒಳಗೊಂಡಿದೆ. ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಸುಂದರ ಕನ್ಯೆಯ ಚೆಲುವನ್ನು ಕಂಡು ಹೊಲೆಯನೊಬ್ಬ ಅವಳನ್ನು ಮದುವೆಯಾಗುತ್ತಾನೆ. ಆದರೆ ಮದುವೆಯಾಗುವಾಗ ಆತ ತನ್ನ ಕುಲವನ್ನು ಮುಚ್ಚಿಡುತ್ತಾನೆ. ಮುಂದೆ ಮಕ್ಕಳೂ ಆಗುತ್ತವೆ. ಒಂದು ದಿನ ಆತನ ತಾಯಿ ತಂದ ಆಹಾರದಿಂದ ಆತ ಕೆಳಜಾತಿಗೆ ಸೇರಿದವ ಎಂದು ತಿಳಿಯುತ್ತದೆ. ಕೂಡಲೆ ರೌದ್ರಾವತಾರ ತಾಳಿ, ಆತನಿಗೆ ಕೋಣದ ರೂಪ ಹೊಂದಲೆಂದು ಶಾಪ ಕೊಟ್ಟು, ಆ ಕೋಣವನ್ನೇ ಬಲಿಯಾಗಿಸಿಕೊಳ್ಳುತ್ತಾಳೆ. ಅಮ್ಮನ ಜಾತೆಗಳಲ್ಲಿ ತಮ್ಮ ನಾಯಕನ ಬಲಿಯನ್ನು

ಪ್ರತಿಭಟಿಸಲು ಅಮ್ಮನನ್ನು ಅಶ್ಲೀಲ ಶಬ್ದಗಳಿಂದ ಬೈಯುವ ಪದ್ಧತಿ ಬಳ್ಳಾರಿ ಜಿಲ್ಲೆಯಲ್ಲಿದೆ. ಹೆಣ್ಣು ದೇವರ ಜಾತ್ರೆಗಳಲ್ಲಿ ಅಮ್ಮನನ್ನು ಬಯ್ಯುವ ಸೊನ್ನ ಗ್ರಾಮದಿಂದ ರಾಣಿಗರನ್ನು ಕರೆತರುತ್ತಾರೆ. ಅವರು ಜನಪದ ಹಾಡುಗಳ ಮೂಲಕ ದೈವವನ್ನು ಬಯ್ಯುತ್ತಾರೆ. ಹೀಗೆ ಜಾತ್ರೆಗಳಲ್ಲಿ ದೇವರನ್ನು ಬಯ್ಯುವುದು, ಹೊಗಳುವುದು ಸಹ ಒಂದು ಆಚರಣೆಯಾಗಿದೆ" ಎಂದು ಪ್ರಸ್ತಾಪ ಮಾಡುತ್ತಾರೆ.[೩೩] ಇದೇ ರೀತಿಯಾದ ಜಾತಿಗಳ ಜಂಜಾಟಗಳು ಒಳಗೊಂಡಿರುವ ಜನಪದ ಕತೆಯನ್ನು ಎಚ್.ಎಲ್.ನಾಗೇಗೌಡರು ತಮ್ಮ ಮಾರಮ್ಮ ಪುಸ್ತಕದಲ್ಲಿ ದಾಖಲು ಮಾಡುತ್ತಾರೆ. ರಾಣೆಯರು ಎಂದು ಹೇಳಿಕೊಳ್ಳುವ ಸಮುದಾಯವರು ಮಾರಮ್ಮನನ್ನು ಬಯ್ಯುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳುತ್ತಾರೆ. ಅವರಿಗೆ ವಿಶೇಷವಾಗಿ ಜವಾಬ್ದಾರಿಯು ಇದೆ ಎಂದು ಜನಪದರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಸುತ್ತಾರೆ.

ಅಡಿ ಟಿಪ್ಪಣಿಗಳು

೧. ರವೀಂದ್ರನಾಥ ಕೆ., ಬಳ್ಳಾರಿ ಜಿಲ್ಲಾ ದರ್ಶನ, ಪುಟ ೬೯

೨. ಸುಬ್ಬಣ್ಣ ರೈ, ಗಾಳೆಮ್ಮ, ಪುಟ ೧೯

೩. ಸುಬ್ಬಣ್ಣ ರೈ, ಗಾಳೆಮ್ಮ, ಪುಟ ೬

೪. ಲಕ್ಷ್ಮೀದೇವಿ, ಕೋಲಾರ ಜಿಲ್ಲೆಯ ಐತಿಹ್ಯಗಳು, ಪುಟ ೮೮

೫. ಕೊಟ್ರೇಶ್, ಬಳ್ಳಾರಿ ಜಿಲ್ಲೆಯ ಕೋಟೆಗಳು, ಪುಟ ೧೯

೬. ಅದೇ, ಪುಟ ೨೫

೭. ಶಿವಾನಂದ ವಿರಕ್ತಮಠ, ಪುಟ ೩.

೮. ಕೊಟ್ರೇಶ್, ಬಳ್ಳಾರಿ ಜಿಲ್ಲೆಯ ಕೋಟೆಗಳು, ಪುಟ ೩೦ .

೯. ಅದೇ, ಪುಟ ೪೦.

೧೦. ಮಂಜುನಾಥ ಬೇವಿನಕಟ್ಟಿ, ಪರೀಷೆ V/s ಮಾನೇವು, ಪುಟ ೧೦೦

೧೧. ಸುಬ್ರಮಣಿ ಸುಣ್ಣಂಗೂರ್, ತುಳುನಾಡಿನ ಮಾರಿಯಮ್ಮ, ಪುಟ ೨೨೫

೧೨. ಹೆಬ್ಬಾಲೆ ಕೆ. ನಾಗೇಶ್, ಜಾನಪದ ಕೆಲವು ವಿಚಾರಗಳು, ಪುಟ ೨೮.

೧೩. ಸ.ಚಿ.ರಮೇಶ, ಕರ್ನಾಟಕ ಜನಪದ ಆಚರಣೆಗಳು, ಪುಟ ೮

೧೪. ಅದೇ, ಪುಟ ೮

೧೫. ಅದೇ, ಪುಟ ೧೯

೧೬. ಸಿದ್ಧೇಶ್ವರಿ ಎ.ಎನ್., ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪುಟ ೯೭

೧೭. ಅದೇ, ಪುಟ ೮೯

೧೮. ಸ.ಚಿ.ರಮೇಶ, ಕರ್ನಾಟಕ ಜನಪದ ಆಚರಣೆಗಳು, ಪುಟ ೭೩

೧೯. ಅದೇ, ಪುಟ ೭೦

೨೦. ಸಿದ್ಧೇಶ್ವರಿ ಎ.ಎನ್., ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪುಟ ೧೦೫

೨೧. ಸ.ಚಿ.ರಮೇಶ, ಕರ್ನಾಟಕ ಜನಪದ ಆಚರಣೆಗಳು, ೨೦೧೦, ಪುಟ ೭೯

೨೨. ಹೆಬ್ಬಾಲೆ ಕೆ. ನಾಗೇಶ್, ಜಾನಪದ ಕೆಲವು ವಿಚಾರಗಳು, ಪುಟ ೨೮.

೨೩. ಸ.ಚಿ.ರಮೇಶ, ಕರ್ನಾಟಕ ಜನಪದ ಆಚರಣೆಗಳು, ಪುಟ ೧೦೦-೧೦೧

೨೪. ಅದೇ, ಪುಟ. ೧೨೫

೨೫. ಹನುಮಂತರೆಡ್ಡಿ, ಬಳ್ಳಾರಿ ಶ್ರೀಕನಕ ದುರ್ಗಮ್ಮ, ಪುಟ ೪೫

೨೬. ಅದೇ, ಪುಟ. ೭೩

೨೭. ಅದೇ, ಪುಟ. ೭೫

೨೮. ಹೆಬ್ಬಾಲೆ ಕೆ. ನಾಗೇಶ್, ಜಾನಪದ ಕೆಲವು ವಿಚಾರಗಳು, ಪುಟ ೮

೨೯. ಸುಭಾಷ್ಚಂದ್ರ ನಾಟೀಕಾರ, ಕರ್ನಾಟಕದಲ್ಲಿ ಸಿಡಿ ಸಂಪ್ರದಾಯ, ಪುಟ ೪೮-೪೯

೩೦. ಹನುಮಂತರೆಡ್ಡಿ, ಬಳ್ಳಾರಿ ಶ್ರೀಕನಕ ದುರ್ಗಮ್ಮ, ಪುಟ ೧೨೧

೩೧. ಸಿದ್ಧೇಶ್ವರಿ ಎ.ಎನ್., ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪುಟ ೧೩೫

೩೨. ಸ.ಚಿ.ರಮೇಶ್, ಕರ್ನಾಟಕ ಜನಪದ ಆಚರಣೆಗಳು, ಪುಟ ೧೩೫

೩೩. ಸಿದ್ಧೇಶ್ವರಿ ಎ.ಎನ್., ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪುಟ ೯೦

೩೪.ಅದೇ, ಪುಟ ೯೧

೩೫. ಅದೇ, ಪುಟ ೩೪

೩೬. ಅದೇ, ಪುಟ ೩೪

೩೭. ಈಶ್ವರಪ್ಪ ಎಂ.ಜಿ., ಜನಪದ ಉಬ್ಬನಿಗಳು, ಪುಟ ೩೭

೩೮. ಸಿದ್ಧೇಶ್ವರಿ ಎ.ಎನ್., ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪುಟ ೩೫

೩೯. ಸೋಮಶೇಖರ್ ಬಿ.ಎಸ್. ಆಹಾರ ಮತ್ತು ಆರೋಗ್ಯ, ಪುಟ ೯೭

೪೦. ಸಿದ್ಧೇಶ್ವರಿ ಎ.ಎನ್., ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪುಟ ೩೬

೪೧. ಅದೇ, ಪುಟ ೩೭

೪೨. ಅದೇ, ಪುಟ ೧೮-೧೯

೪೩. ಅದೇ, ಪುಟ ೧೬೬-೧೬೭

೪೪. ಅದೇ, ಪುಟ ೧೭೨

೪೫. ಬಸವರಾಜ ತೋಟದಳ್ಳಿ, ಗ್ರಾಮದೇವತೆಗಳ ಅಧ್ಯಯನ, ಪುಟ ೧೦೮

೪೬. ಸ.ಚಿ.ರಮೇಶ್, ಕರ್ನಾಟಕ ಜನಪದ ಆಚರಣೆಗಳು, ಪುಟ ೧೩೦

೪೭. ಸಿದ್ಧೇಶ್ವರಿ ಎ.ಎನ್., ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪುಟ ೧೦೬

೪೮. ನಾಗಲೋಟಮಠ ಸ.ಜ., ಉತ್ತರ ಕರ್ನಾಟಕದಲ್ಲಿ ಪ್ರಾಣಿಬಲಿ, ಪುಟ ೯

೪೯. ಅದೇ, ಪುಟ ೧೦

೫೦. ಸುಬ್ರಮಣಿ ಸುಣ್ಣಂಗೂರ್, ತುಳುನಾಡಿನ ಮಾರಿಯಮ್ಮ, ಪುಟ ೧೯೯

೫೧. ಸೋಮೇಶ್ವರ, ಅಭಿನಂದನ ಪುಸ್ತಕ 'ಸಿರಿ' ಪುಸ್ತಕದಲ್ಲಿ ಚರ್ಚೆ ಮಾಡುತ್ತಾರೆ.

೫೨. ಅಶೋಕ್ ಆಳ್ವ, ತುಳುನಾಡಿನ ಪ್ರಾಣಿ ಜಾನಪದ, ಪುಟ ೬೭

೫೩. ರುದ್ರಪ್ಪ ಎ.ಎಂ., ಜನಪದ ಸಿರಿ, ಪುಟ ೪೯

೫೪. ಅದೇ, ಪುಟ ೬೯

೫೫. ಸ.ಚಿ.ರಮೇಶ, ಕರ್ನಾಟಕ ಜನಪದ ಆಚರಣೆಗಳು, ಪುಟ ೧೩೦

ಅಧ್ಯಾಯ : ನಾಲ್ಕು

ತಾತ್ವಿಕ ನೆಲೆಯಲ್ಲಿ ಬಲಿಪದ್ಧತಿ

೪.೧. ಬಲಿಪದ್ಧತಿಯ ಪ್ರೇರಣೆ ಹಾಗೂ ಪ್ರಭಾವ

೪.೨. ಸಾಮಾಜಿಕ ನೆಲೆಯಲ್ಲಿ ಬಲಿಪದ್ಧತಿ

೪.೩. ಧಾರ್ಮಿಕ ನೆಲೆಯಲ್ಲಿ ಬಲಿಪದ್ಧತಿ

೪.೪. ಬಲಿಪದ್ಧತಿಯಲ್ಲಿನ ಸ್ಥಿತ್ಯಂತರಗಳು

ಅಧ್ಯಾಯ : ನಾಲ್ಕು

ತಾತ್ವಿಕ ನೆಲೆಯಲ್ಲಿ ಬಲಿಪದ್ಧತಿ

೪.೧. ಬಲಿಪದ್ಧತಿಯ ಪ್ರೇರಣೆ ಹಾಗೂ ಪ್ರಭಾವ

ಸಾಮಾಜಿಕವಾಗಿ ನಿರ್ಮಾಣವಾಗಿರುವ ಈ ಪ್ರಾಣಿ ಬಲಿಪದ್ಧತಿಯಲ್ಲಿ ಅನೇಕ ರೀತಿಯ ವೈರುಧ್ಯಗಳನ್ನು ಗುರುತಿಸಬಹುದು. ಮಾನಸಿಕ ಕಾಯಿಲೆಗಳು, ದೈಹಿಕ ತೊಂದರೆಗಳನ್ನು ನಿವಾರಣೆ ಮಾಡಿಕೊಳ್ಳಲು ಈ ಪ್ರಾಣಿ ಬಲಿಗಳು ನಡೆಯುತ್ತವೆ. ತಾವು ನಂಬಿಕೊಂಡು ಬಂದಿರುವ ದೇವಾನುದೇವತೆಗಳಿಗೆ ತನ್ನದೇ ಆದ ಶೈಲಿಯಲ್ಲಿ ಪ್ರಾಣಿಗಳನ್ನು ಬಲಿ ಕೊಟ್ಟು ಅವುಗಳ ಮಾಂಸದಿಂದ ಅಡುಗೆ ಮಾಡಿ ತಿನ್ನುವ ಪರಂಪರೆಯನ್ನು ಗುರುತಿಸುತ್ತೇವೆ. ಆದರೂ ಬುಡಕಟ್ಟು ಸಮುದಾಯಗಳಲ್ಲಿ ಪ್ರತಿಯೊಂದು ವ್ರತ ನೇಮಗಳಿಗೂ ದೇವರುಗಳಿಗೆ ನಡೆದುಕೊಳ್ಳುವುದು ಕಾಣಬಹುದು, ಹಕ್ಕಿಪಿಕ್ಕಿ, ಮಲೆಕುಡಿಯ, ಸೋಲಿಗರು, ಇರುಳರು, ಮಾಸ್ತಿಕರು, ದುರುಗಿ ಮರುಗಿಯರು ಮುಂತಾದ ಸಮುದಾಯಗಳಲ್ಲಿ ಪ್ರಾಣಿಗಳನ್ನು ಗುರುತಿಸುತ್ತೇವೆ.

ಪ್ರಾಣಿಬಲಿಗೆ ಪ್ರೇರಣಾಶಕ್ತಿ ಎಂದರೆ ಭಯ ಮತ್ತು ಭಕ್ತಿ ಎಂದು ಸಾಮಾನ್ಯವಾದ ವಾದವಾಗಿದೆ. ದೇವರಿಗೆ ಹೆದರಿದ ಮನುಷ್ಯ ಅದಕ್ಕೆ ನಡೆದುಕೊಳ್ಳಲು ತಾನಾಗಿಯೇ ದೀನ ಭಾವದಿಂದ ವಿನೀತನಾಗಿ ನಡೆದುಕೊಳ್ಳುತ್ತಿದ್ದ ಸಂದರ್ಭಗಳು ಇವೆ. ಮಾನವನಿಗೆ ಯಾವುದೇ ರೀತಿಯ ತೊಂದರೆಗಳು, ಅಲ್ಪ ಪ್ರಮಾಣದ ದುಃಖಗಳು ತಲೆದೋರಿದರೂ ದೇವಾನುದೇವತೆಗಳ ಕೋಪದಿಂದ ಬಂದಿವೆ ಎಂದು ತೀರ್ಮಾನಿಸುತ್ತಾನೆ. ಆದುದರಿಂದ ದೇವಾನುದೇವತೆಗಳಲ್ಲಿ ಪ್ರಧಾನವಾಗಿ ರೋಗಗಳನ್ನು ಹರಡುವ ಮತ್ತು ರೋಗಗಳಿಂದ ಮುಕ್ತಿ ಹೊಂದುವ ದೇವತೆಗಳಿಗೆ ಹೆಚ್ಚು ನಡೆದುಕೊಳ್ಳುತ್ತಾರೆ. ಪ್ರಧಾನವಾಗಿ ಊರಮ್ಮ, ಮಾರಮ್ಮ, ಕಾಳಮ್ಮ, ಗೌರಮ್ಮ, ಮುನೆಮ್ಮ, ಮುಂತಾದ ಅಮ್ಮಗಳ ಪರಿಕಲ್ಪನೆಯಲ್ಲಿ ದೇವತೆಗಳಿಗೆ ನಡೆದುಕೊಳ್ಳುವುದನ್ನು ಗುರುತಿಸಬಹುದು.

ಭಯಂಕರವಾದ ರೋಗಗಳು ತಲೆದೋರಿದರೆ ಅದಕ್ಕೆ ಬೇವಿನ ಸೊಪ್ಪಿನಿಂದ ತಯಾರಿಸಿದ ಮದ್ದನ್ನು ಉಪಯೋಗಿಸುತ್ತಾರೆ. ಸಿಡುಬು, ಕಾಲರಾ, ಪ್ಲೇಗು, ದಡಾರ, ಪೋಲೇರಮ್ಮ, ಮುಂತಾದ ಅಮ್ಮ ಸ್ವರೂಪದ ಮೈಮೇಲೆ ಹರಡುವ ಸ್ಮಾಲ್ ಪಾಕ್ಸ್, ಚಿಕನ್ ಪಾಕ್ಸ್ ರೀತಿಯಲ್ಲಿ ಬರುವ ರೋಗಗಳಿಗೆ ಬೇವಿನ ಸೊಪ್ಪೇ ಮದ್ದೆಂದು ಗುರುತಿಸುತ್ತಾರೆ. ಈ ಬೇವಿನ ಸೊಪ್ಪು ಮಾರಮ್ಮನಿಗೆ ಬಹಲ ಪ್ರಿಯವಾದದ್ದು. ಮಾರಮ್ಮನ ಗುಡಿಗಳ ಪಕ್ಕದಲ್ಲಿ ಬೇವಿನ ಮರಗಳಿರುವುದನ್ನು ಗುರುತಿಸಬಹುದು. ಮಾರಮ್ಮನ ಗುಡಿಗಳ ಪಕ್ಕದಲ್ಲಿ ಬೇವಿನ ಮರದ ಜೊತೆಯಲ್ಲಿ ನೆಕ್ಕಿನ ಮರವು ಇರುತ್ತದೆ. ಸಾಧಾರಣವಾಗಿ ಮಾರಿಗುಡಿಗಳು ಊರುವ ಹೊರಗೆ ಊರ ಮಧ್ಯದಲ್ಲಿ ಊರನ್ನು ಕಾಪಾಡುವ 'ಗಡಿಮಾರಿ' ಎಂದು ತಿಳಿದು ಅವುಗಳಿಗೆ ನಡೆದುಕೊಳ್ಳುವುದು ರೂಢಿಯಲ್ಲಿದೆ. ಇಲ್ಲಿ ಪ್ರಧಾನವಾಗಿ ಪ್ರಾಣಿಬಲಿಗೆ ಪ್ರೇರಣೆ ಮತ್ತು ಪ್ರೀತಿಪೂರ್ವಕವಾಗಿ ಪ್ರಾಣಿಗಳನ್ನು ಕಡಿಯಬೇಕಾದರೆ ಅವುಗಳಲ್ಲಿ ತನ್ನದೇ ಅದ ಮಹತ್ವವನ್ನು ಬಯಸುತ್ತಾರೆ. ಸಾಮಾನ್ಯವಾಗಿ ಪುರಾತನ ಕಾಲದಿಂದಲೂ ಪ್ರಾಣಿಗಳನ್ನು ಕಡಿದು ಅದರ ರಕ್ತದಿಂದ ದೇವರನ್ನು ಅರ್ಪಿಸುತ್ತಿದ್ದರು ಎಂದು ಈಗಾಗಲೇ ಅನೇಕ ಅಧ್ಯಾಯಗಳಲ್ಲಿ ಬರೆಯಲಾಗಿದೆ. ಆದರೂ ಈ ಪ್ರಾಣಿಬಲಿಗೆ ತನ್ನದೇ ಆದ ತಾತ್ವಿಕ ಚಿಂತನೆಯಲ್ಲಿ ಪ್ರಾಣಿಗಳನ್ನು ಕಡಿಯುವುದು ಇದೆ.

ಸಾಂಕ್ರಾಮಿಕ ರೋಗಗಳು ಹರಡುವ ಸಂದರ್ಭದಲ್ಲಿ ಈ ಪ್ರಾಣಿಬಲಿಗಳು ಹೆಚ್ಚಾಗಿ ನಡೆಯುತ್ತವೆ. ಏಕೆಂದರೆ ಮಾರ್ಚ್, ಏಪ್ರಿಲ್ ಮಾಹೆಯಲ್ಲಿ ಬಿಸಿಲಿನ ತಾಪ ಹೆಚ್ಚಾಗಿ ಜನರಿಗೆ ಹೆಚ್ಚು ಮೈಮೇಲೆ ಚರ್ಮದ ರೋಗಗಳು ಬರುವುದು ಕಡ್ಡಾಯವಾಗಿರುತ್ತದೆ. ಶಿವರಾತ್ರಿ ಹಬ್ಬದ ಸಮಯ ಮುಗಿದ ಮೇಲೆ ಬಿಸಿಲಿನ ಬೇಗೆಗೆ ಮನುಷ್ಯರು ತಂಪು ಮಾಡಿಕೊಳ್ಳಲು ತಂಪಾದ ಪಾನೀಯಗಳನ್ನು ಮತ್ತು ತಂಪಾದ ಪದಾರ್ಥಗಳನ್ನು ಸೇವಿಸುವುದು ರೂಢಿ. ಮೈಮೇಲೆ ಅಮ್ಮ ಹೆಸರಿನಲ್ಲಿ ರೋಗಗಳು ಬಂದಾಗ ಅಮ್ಮನಿಗೆ ತಂಪು ತೋರುವುದು ಎಂಬ ಆಚರಣೆ ನಡೆಯುತ್ತದೆ. ಈ ತಂಪು ತೋರುವುದು ಎಂದರೆ, ಮಾರಮ್ಮನಿಗೆ ವಿಶೇಷವಾಗಿ ಹರಕೆಗಳನ್ನು ಹೇಳಿಕೊಂಡು ಅನ್ನದ ಮುದ್ರೆಯನ್ನು ಮಾಡಿ ಅದಕ್ಕೆ ಮೊಸರು ಸೇರಿಸಿ ಸಾಮೂಹಿಕವಾಗಿ ತಿನ್ನುವ ಪದ್ಧತಿಯಿದೆ. ಕೆಲವು ಕಡೆಗಳಲ್ಲಿ ಮಕ್ಕಳಿಗೆ ಮೈತುಂಬಾ ಗುರುತು ಸಿಗದ ರೀತಿಯಲ್ಲಿ 'ಅಮ್ಮ' ಬಂದಿರುತ್ತದೆ. ಅಂತಹ ಸಂದರ್ಭದಲ್ಲಿ ಸಾಮೂಹಿಕವಾಗಿ ಊರಲ್ಲಿ ಅಮ್ಮ ಎಂಬ ಮಾರಿರೋಗ ಹರಡಬಾರದೆಂದು ಮಕ್ಕಳಿಗೆ ಪೂಜೆ ಮಾಡುತ್ತಾರೆ. ಇಲ್ಲಿ ಪ್ರಧಾನವಾಗಿ ಸಣ್ಣ ಸಣ್ಣ ಮಕ್ಕಳು ಮಾತ್ರ ಸೇರುತ್ತಾರೆ. ಬಳ್ಳಾರಿ ಜಿಲ್ಲೆಯಾದ್ಯಂತ ಇಂತಹ ಪರಂಪರೆಯನ್ನು ಗುರುತಿಸಬಹುದಾರೂ ಮಾರಮ್ಮನಿಗೆ ತಂಪು ತೋರುವುದು ಎಂದು ವಿಶೇಷವಾಗಿರುತ್ತದೆ.

೪.೨ ಸಾಮಾಜಿಕ ನೆಲೆಯಲ್ಲಿ ಬಲಿಪದ್ಧತಿ

ಗ್ರಾಮದೇವತೆಗಳ ಆರಾಧನೆಯಂತಹ ಚೌಕಟ್ಟಿನೊಳಗೆ ವಿವಿಧ ರೀತಿಯ ಸಮೂಹ ಗುಂಪುಗಳು ಸೇರುವುದರಿಂದ ಪ್ರೀತಿ ವಾತ್ಸಲ್ಯಗಳು, ಉಭಯ ಕುಶಲೋಪರಿಗಳು ನಿರ್ಮಾಣವಾಗುವುದನ್ನು ಗುರುತಿಸಬಹುದು. ಇಲ್ಲಿ ಪ್ರಧಾನವಾಗಿ ದೈವ, ದೇವತೆ, ಹೆಣ್ಣು ದೇವತೆಗಳ ಆರಾಧನೆ ಕೇಂದ್ರವಾಗಿ ಗುರುತಿಸಿದರೂ, ಜಾತ್ರೆಯಲ್ಲಿ ನೆರೆದ ಜನರ ಮನಸ್ಸುಗಳನ್ನು ನಿರ್ಗುಣ, ನಿರಾಕಾರಗಳಿಂದ ಕಡಿಮೆ ಮಾಡುವ ಸನ್ನಿವೇಶ ಆ ಸಂದರ್ಭದಲ್ಲಿ ನಿರ್ಮಾಣವಾಗುತ್ತವೆ. "ದೈವಗಳ ಉಗ್ರಸ್ವರೂಪವನ್ನು ತಿಳಿಸುವ ಉದ್ದೇಶದ ಜತೆಗೆ ಪುರೋಹಿತಶಾಹಿಯ ಮೇಲೆ ಜನಪದರ ಪ್ರತಿಭಟನೆಯ ಆಶಯವನ್ನೂ ಗುರುತಿಸಬೇಕಾಗಿದೆ. ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲಿನ ಅಂತಸ್ತನ್ನು ಗಿಟ್ಟಿಸಿಕೊಂಡ ಸಮೂಹವೊಂದರ ಮೇಲಿನ ಆಕ್ರೋಶಕ್ಕೆ ಪರೋಕ್ಷ ಅಭಿವ್ಯಕ್ತಿಯಾಗಿ ಈ ವೃತ್ತಾಂತಗಳನ್ನು ಪರಿಗಣಿಸಬೇಕು" ಎಂದು ಹೇಳುತ್ತಾರೆ.[೧] ಸಮುದಾಯಗಳ ಬಗ್ಗೆ ಅವಲೋಕಿಸುವಾಗ ಜಾತಿ ಜಂಜಾಟಗಳು ಬರುವುದು ಮುಖ್ಯ. ಒಬ್ಬರ ಮೇಲೆ ಇನ್ನೊಬ್ಬರ ದಬ್ಬಾಳಿಕೆ ಇರುವುದು ವೇದಗಳ ಕಾಲದಿಂದಲೇ ಬಂದಿದೆ. "ಜಾತಿ ಪರಿಕಲ್ಪನೆಯ ಸಮಾಜವ್ಯವಸ್ಥೆ ರಚನೆಯಾಗುವುದಕ್ಕೆ ಮುನ್ನ ಜನರೆಲ್ಲಾ ಸಾಮೂಹಿಕವಾಗಿಯೋ, ವೈಯಕ್ತಿಕವಾಗಿಯೋ ತಮ ತಮಗೆ ಇಷ್ಟದಂತೆ ಗ್ರಾಮದೇವತೆಗಳನ್ನು ಪೂಜಿಸುತ್ತಿದ್ದರೆಂದು ಹೇಳಬಹುದು. ಕಾಲ ಸರಿದಂತೆ ವಿವಿಧ ರೀತಿಯ ಕಾಯಕಗಳ ಮಾನದಂಡದಿಂದ ನಮ್ಮಲ್ಲಿ ಜಾತಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂತು. ಸಮಾಜದಲ್ಲಿ ಮೇಲು-ಕೀಳು, ಸ್ಪೃಶ್ಯ, ಅಸ್ಪೃಶ್ಯ ಎಂಬ ತರತಮಭಾವನೆಗಳು ತಲೆದೋರಿದವು. ಈ ತರತಮ ಭಾವದ ಪಾಲನೆಗಾಗಿಯೇ ಎಂಬಂತೆ ಬಯಲಲ್ಲಿದ್ದ, ಯಾರು ಬೇಕಾದರೂ ಪೂಜಿಸಬಹುದಾಗಿದ್ದ ಗ್ರಾಮದೇವತೆಗಳ ಗುಡಿಯೊಳಗಡೆ ಬಂಧಿಯಾದುವು. ಜತೆಗೆ ಸಂಪತ್ತಿನ ಆಸ್ತಿಯ ಪರಿಕಲ್ಪನೆಯೂ ಇಲ್ಲಿ ಕೆಲಸ ಮಾಡಿತು. ಇಂತಹ ಬದಲಾವಣೆಯ ಹಿಂದೆ ಶಿಷ್ಟ ಸಂಸ್ಕೃತಿಯ ಪ್ರಭಾವ, ಸಂಸ್ಕೃತೀಕರಣ, ವೈದಿಕೀಕರಣ, ಬ್ರಾಹ್ಮಣೀಕರಣ ಪ್ರಕ್ರಿಯೆಗಳನ್ನು ಗುರುತಿಸಲಾಗುತ್ತದೆ. ಸಮಾಜ ವ್ಯವಸ್ಥೆಗನುಗುಣವಾಗಿಯೇ ಒಟ್ಟು ಗುಡಿಯ ವಿವಿಧ ಭಾಗಗಳು ನಿರ್ಮಾಣವಾದವು. ಗರ್ಭಗುಡಿ, ಒಳಾಂಗಣ, ಹೊರಾಂಗಣಗಳೆಂಬ ಪರಿಕಲ್ಪನೆಗಳೂ ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆಗೂ ಪರಸ್ಪರ ಸಂಬಂಧಿಸಿವೆ. ಮೂಲತಃ ವೈದಿಕ ಗುಡಿಗಳಿಗಷ್ಟೇ ಸಂಬಂಧಪಟ್ಟಿದ್ದ ಇಂತಹ ನಿಯಮಗಳು ಕಾಲಕ್ರಮದಲ್ಲಿ ಗ್ರಾಮದೇವತೆಗಳ ಗುಡಿಗಳಿಗೂ ಅನ್ವಯವಾದುವು. ಇಂದು ಗ್ರಾಮದೇವತೆಗಳ ಕೆಲವು ಗುಡಿಗಳು ಪೂರ್ಣವಾಗಿ ವೈದಿಕೀಕರಣ ಗೊಂಡಿದ್ದರೆ ಇನ್ನು ಕೆಲವು ಭಾಗಶಃ ವೈದಿಕೀಕರಣ ಪ್ರಕ್ರಿಯೆಗೊಳಗಾಗಿವೆ. ಬಹುಪಾಲು ಗ್ರಾಮದೇವತೆಗಳ ಗುಡಿಗಳಲ್ಲಿ ವೈದಿಕ ಮತ್ತು ಅವೈದಿಕ ಸಂಸ್ಕೃತಿ ಆಚರಣೆಗಳ ಮಿಶ್ರಣ

ಕಂಡುಬರುತ್ತದೆ. ಪ್ರಸ್ತುತ ಹೊಸಪೇಟೆ ಗಾಳೆಮ್ಮನಗುಡಿ ಕೂಡ ಇದಕ್ಕೆ ಹೊರತಾಗಿಲ್ಲ. ಕಾಣಿಕೆ-ಹರಕೆಗಳ ಫಲವಾಗಿ ಗುಡಿಗಳಲ್ಲಿ ಹಣದ ವ್ಯವಹಾರ ಪ್ರಾರಂಭವಾಯಿತು. ಹೀಗೆ ಸಂಪತ್ತಿನ ಕೇಂದ್ರೀಕರಣವಾಗತೊಡಗಿದಂತೆ ಗುಡಿಗಳು ನಿರ್ದಿಷ್ಟ ಜನಸಮುದಾಯಗಳ ಖಾಸಗಿ ಸೊತ್ತುಗಳಾಗಿ ಪರಿಣಮಿಸಿದವು. ಕಲ್ಪಿತ ಇಲ್ಲವೇ ಆರೋಪಿತ ಪುರಾಣ ಕಥೆಗಳನ್ನಾಧರಿಸಿ ನಿರ್ದಿಷ್ಟ ಜಾತಿ ಸಮುದಾಯದವರು ಗುಡಿಗಳ ಮೇಲಿರುವ ತಮ್ಮ ಹಕ್ಕುಗಳನ್ನು ಪ್ರತಿಪಾದಿಸತೊಡಗಿದರು. ಇದು ಆಡಳಿತ ನಿರ್ವಹಣೆಯ ಹಕ್ಕಾಗಿರಬಹುದು ಅಥವಾ ಪೂಜೆಯ ಹಕ್ಕಾಗಿರಬಹುದು. ಹೀಗೆ ನಿರ್ದಿಷ್ಟ ಗುಡಿಯ ಮೇಲಿನ ಹಕ್ಕನ್ನು ಸ್ಥಾಪಿತಕೊಂಡ ಸಮುದಾಯ ಇತರ ಕೆಲವು ಸಮುದಾಯಗಳ ಕಾಯಕಗಳನ್ನು ದೇವತೆಯ ಸೇವೆಯೆಂದು ಪರಿಗಣಿಸಿತು. ಈ ವ್ಯವಸ್ಥೆಯ ಹಿನ್ನೆಲೆಯಲ್ಲಿ ಗಾಳೆಮ್ಮನ ಗುಡಿಯಲ್ಲಿನ ಸಾಮಾಜಿಕ ಪಾಲ್ಗೊಳ್ಳುವಿಕೆಯ ವಿಧಾನವನ್ನು ಅವಲೋಕಿಸಬಹುದಾಗಿದೆ. ಪ್ರಸ್ತುತ ಹೊಸಪೇಟೆ-ಹಂಪಿ ರಸ್ತೆಯಲ್ಲಿರುವ ಗಾಳೆಮ್ಮನ ಗುಡಿಯಲ್ಲಿ ತೆಲುಗು ಮನೆಮಾತಾಗುಳ್ಳ ವಡ್ಡರು(ಬೋವಿಗಳು) ಪೂಜಾರಿಗಳಾಗಿದ್ದಾರೆ. ಪೂಜಾ ಕೈಂಕರ್ಯದಲ್ಲಿ ಗಂಡು ಹೆಣ್ಣೆಂಬ ಲಿಂಗಭೇದವಿಲ್ಲ. ಗುಡಿಯ ಆಡಳಿತವು ಇವರದೇ ಕೈಯಲ್ಲಿದೇ ಲಾಗಾಯ್ತಿನಿಂದಲೂ ತಮ್ಮ ವಂಶಸ್ಥರೇ ಪೂಜೆ ಮಾಡಿಕೊಂಡು ಬರುತ್ತಿರುವುದಾಗಿ ಇವರು ಹೇಳುತ್ತಾರೆ. ಇತರ ಸಮುದಾಯದವರು ಪೂಜಾರಿಗಳಾಗಿ ಬಂದರೆ ಅವರಿಗೆ ಒಳಿತಾಗುವುದಿಲ್ಲ ಎಂಬುದಾಗಿ ಹೇಳುತ್ತಾ, ಇದಕ್ಕೆ ಪೂರಕವಾದ ಘಟನೆಯೊಂದನ್ನು ವಿವರಿಸುತ್ತಾರೆ. ಪೂಜಾಕಾರ್ಯವನ್ನು ಒಂದೇ ಕುಟುಂಬದ ಕೆಲವು ಸಹೋದರರು ಸರದಿ ಪ್ರಕಾರ ಹಂಚಿಕೊಂಡಿದ್ದಾರೆ. ಗುಡಿ ಮತು ಪೂಜೆ ಆ ಕುಟುಂಬದ ಸದಸ್ಯರಿಗೆ ಆರ್ಥಿಕ ಮೂಲವಾಗಿದೆ. ಹರಕೆ ಕಾಣಿಕೆಗಳ ರೂಪದಲ್ಲಿ ಆಯಾ ವಾರ ಸಂಗ್ರಹವಾದ ಹಣ ಸರದಿಯಂತೆ ಆ ಅವಧಿಯಲ್ಲಿ ಪೂಜೆಯನ್ನು ಕೈಗೊಳ್ಳುವ ಕುಟುಂಬದ ಸದಸ್ಯರಿಗೆ ಸೇರುತ್ತದೆ. ಇದು ಆ ಕುಟುಂಬದವರೇ ಮಾಡಿಕೊಂಡ ಒಂದು ರೀತಿಯ ಒಪ್ಪಂದ. ಯಾವುದೇ ರೀತಿಯ ಸಾರ್ವಜನಿಕ ಸಮಿತಿಯ ಪ್ರವೇಶಕ್ಕೆ ಈ ಕುಟುಂಬದವರು ಅಡ್ಡಿಪಡಿಸುತ್ತಾರೆ. ಪ್ರತಿ ಮಂಗಳವಾರ ಶುಕ್ರವಾರಗಳಂದು, ವರ್ಷಾವಧಿ ಜಾತ್ರೆಯಂದು ಹರಕೆ ಕಾಣಿಕೆಗಳ ರೂಪದಲ್ಲಿ ದೊಡ್ಡ ಮೊತ್ತ ಸಂಗ್ರಹವಾಗುತ್ತದೆ. ಇದಲ್ಲದೇ ರಸ್ತೆಯ ಮೂಲಕ ಹಾದುಹೋಗುವ ವಾಹನಗಳ ಪ್ರಯಾಣಿಕರೂ ಕಾಣಿಕೆ ಹಣವನ್ನೆಸೆಯುತ್ತಾರೆ. ಇದೆಲ್ಲಾ ಪೂಜಾರಿಗಳ ಕೈಸೇರುತ್ತದೆಂಬುದರಲ್ಲಿ ಎರಡು ಮಾತಿಲ್ಲ. ದೇವತೆ ಗುಡಿಗಳು ಖಾಸಗಿಸೊತ್ತುಗಳಾಗಿ ಪರಿಣಮಿಸಿರುವುದಕ್ಕೆ ಗುಡಿಗಳು ಆರ್ಥಿಕ ಚಟುವಟಿಕೆಗಳ ಕೇಂದ್ರಗಳಾಗಿರುವುದಕ್ಕೆ ಈ ಗುಡಿ ಜ್ವಲಂತ ಉದಾಹರಣೆಯಾಗಿದೆ" ಎಂದು ಸಾಮಾಜಿಕವಾಗಿರುವ ಪದ್ಧತಿಯ ಬಗ್ಗೆ ಚರ್ಚೆಮಾಡುತ್ತಾರೆ.[೨]

ಸುಬ್ರಮಣಿ ಸುಣ್ಣಂಗೂರ್ ಅವರು ತಮ್ಮ ಸಂಶೋಧನಾ ಮಹಾಪ್ರಬಂಧದಲ್ಲಿ ಈ ಮಾತುಗಳನ್ನು ವ್ಯಕ್ತಪಡಿಸುತ್ತಾರೆ. "ಆಧುನೀಕರಣ, ನಗರೀಕರಣ, ಔದ್ಯೋಗೀಕರಣ, ಜಾಗತೀಕರಣಗಳಲ್ಲಿ ಜಾತಿಸ್ವರೂಪವು ಆರಾಧನಾ ಸಂದರ್ಭದಲ್ಲಿ ಪ್ರಮುಖವಾಗಿ ಕಾಣಿಸುತ್ತದೆ. ಆರಾಧನೆ, ಆಚರಣೆಗಳಲ್ಲಿ ಪ್ರತಿಯೊಂದು ಜಾತಿಯವರೂ ತಮ್ಮ ಪಾಲಿಗೆ ಬಂದ ಕೆಲಸಗಳನ್ನು ನಿರ್ವಹಿಸುತ್ತಾರೆ. ಅವರು ಚಾಚೂ ತಪ್ಪದೇ ನಡೆಯಬೇಕು. ಉತ್ಸವ, ಹಬ್ಬ, ಜಾತ್ರೆ, ಪೂಜೆಗಳಲ್ಲಿ ಕೆಲಸ ನಿರ್ವಹಿಸುವವರು ತಡವಾಗಿ ಬಂದರೆ ಅಂದು ಹಬ್ಬ ಅಥವಾ ಜಾತ್ರೆ ಸ್ವಲ್ಪ ಮಟ್ಟಿಗಾದರೂ ನಿಂತು ಬಿಡಬಹುದು. ಇಲ್ಲಿ ಜಾತಿಯ ಮನೋಭಾವ ಎದ್ದು ತೋರಿಸುತ್ತದೆ. ವಂಶಪಾರಂಪರ್ಯವಾಗಿ ಬಂದ ಕಸಬನ್ನು ನಿರ್ವಹಿಸಲು ಆಧುನಿಕ ಸಂದರ್ಭದಲ್ಲಿರುವ ಯುವ ಪೀಳಿಗೆಗೆ ಮುಜುಗರವೆನಿಸಬಹುದು. ಅವುಗಳ ವಿರುದ್ಧ ಪ್ರತಿಭಟನೆಗಳಾಗುತ್ತಿರುವುದು ಕಂಡುಬರುತ್ತವೆ. ಗರ್ಭಗುಡಿಯಲ್ಲಿ ಅರ್ಚಕ ವೃತ್ತಿಯನ್ನು ಕೆಲವು ಸೀಮಿತ ಜಾತಿಯವರೇ ಮಾಡುತ್ತಾರೆ. ಇಂತಹ ಪ್ರಕ್ರಿಯೆಯಲ್ಲಿ ಬದಲಾವಣೆ ತರಬೇಕು. ಆಗ ಸಮಾಜದ ಸಾಮರಸ್ಯ ನಿರ್ಮಾಣವಾಗುತ್ತದೆ. ಪ್ರಾಣಿಬಲಿ ಕೆಲಸ ಮಾಡುವ ಕಾರ್ಯವನ್ನು ಪರಿಶಿಷ್ಟ ಜಾತಿಯವರೇ ಮಾಡುತ್ತಿದ್ದರೆಂಬುದು ಎಲ್ಲಾ ಭಾಗದ, ಎಲ್ಲಾ ಕಾಲದ, ಜನರಲ್ಲಿ ಮೂಡಿರುವ ವಿಚಾರವಾಗಿದೆ. ಕುರಿ, ಕೋಳಿ, ಕೋಣ, ಹಂದಿ ಮುಂತಾದ ಪ್ರಾಣಿಗಳ ತಲೆಗಳನ್ನು ಕಡಿಯುವುದಕ್ಕೆ ದಲಿತ ಜಾತಿಯವರನ್ನು ನೇಮಿಸಿಕೊಳ್ಳಲಾಗುತ್ತದೆ. ದೇವಾಲಯಗಳ ಅಂಗಳ ಸ್ವಚ್ಛಮಾಡುವ ಕೆಲಸ ಕೆಳಜಾತಿಯವರು ನಿರ್ವಹಿಸುತ್ತಾರೆ. ಡೋಲು ಬಡಿಯುವುದಕ್ಕೆ ಕೊರಗರು ಬೇಕಾಗುತ್ತದೆ. ಇಂತಹ ಘಟನಾವಳಿಗಳಲ್ಲಿ ಸಾಮಾಜಿಕ ಬದಲಾವಣೆಗಳು ತರಬೇಕು. ಬದಲಾವಣೆಗಳನ್ನು ತಂದಾಗ ಕೆಳಜಾತಿ/ವರ್ಗಗಳಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಸಮಾಜದಲ್ಲಿ ಕ್ರೋಧ, ಅಸೂಯೆಗಳು, ಆವೇಶಗಳು ಉದ್ಭವಿಸುವುದರಿಂದ ಶಾಂತಿ ಪ್ರಗತಿಗೆ ನಾಂದಿಯಾಗುತ್ತದೆ. ಮಾರಿಪೂಜೆ, ಮಾರಿಜಾತ್ರೆಯಲ್ಲಿ ಪ್ರಾಚೀನ ಕಾಲದಿಂದ ನಿರ್ವಹಿಸುತ್ತಿದ್ದ ಕೆಲಸಗಳಲ್ಲಿ ಬದಲಾವಣೆ ತರಬೇಕು. ಉತ್ತಮ ಮಟ್ಟದ ಕೆಲಸಗಳನ್ನು ಕೆಳವರ್ಗವರಾದ ದಲಿತ ಜಾತಿಯವರಿಗೆ ನೀಡಬೇಕು. ಅವರಿಗೆ ಮಾರಿಗುಡಿಯ, ಮಾರಿಪೂಜೆಯ ಸಂಪೂರ್ಣ ಜವಾಬ್ದಾರಿ ನೀಡಬೇಕು. ಆಗ ಸಮಾಜದಲ್ಲಿ ಪ್ರೀತಿ, ಪ್ರೇಮ, ಸ್ನೇಹ, ಭ್ರಾತೃತ್ವ, ಸೋದರತೆ, ಸಮಾನತೆ ನಿರ್ಮಾಣವಾಗುತ್ತದೆ".[೩]

ಬುಡಕಟ್ಟು ಸಮುದಾಯಗಳಲ್ಲಿ ಗ್ರಾಮದೇವತೆಯ ಆರಾಧನೆಗಳೇ ಭಿನ್ನವಾಗಿರುತ್ತವೆ. ಗೌರಸಮುದ್ರ ಮಾರಮ್ಮನ ಜಾತ್ರೆ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಸೆಪ್ಟಂಬರ್ ತಿಂಗಳಲ್ಲಿ ನಡೆಯುವ ಈ ಜಾತ್ರೆ ವೈವಿಧ್ಯಮಯವಾಗಿರುತ್ತದೆ. ವಿಶೇಷ ದಿನದಂದು ನಡೆಯುತ್ತದೆ. ಬುಡಕಟ್ಟು ಸಂಸ್ಕೃತಿಗೆ ಭಾಷ್ಯ ಬರೆದ ಈ ದೇವಿಯ ಜಾತ್ರೆಗೆ ನಾಡಿನ ಮೂಲೆ ಮೂಲೆಗಳಿಂದ ಅಷ್ಟಲ್ಲದೇ ನೆರೆಯ ಆಂಧ್ರ, ತಮಿಳುನಾಡು ಮುಂತಾದ ಪ್ರದೇಶಗಳಿಂದ ಬರುತ್ತಾರೆ.

ದೇವಿಯ ಹಿನ್ನೆಲೆ: ಮಂದರಗಿರಿ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದ, ಆಂಧ್ರಪ್ರದೇಶದ ಮೂಲದ ಶಿಖನಾಯಕ ಹಾಗೂ ದಾನಸಾಲಮ್ಮ ಎಂಬ ದಂಪತಿಗೆ ಈಶ್ವರ ಕೃಪೆಯಿಂದ ಒಂದು ಹೆಣ್ಣು ಮಗು ಜನಿಸುತ್ತದೆ. ಆ ಮಗುವಿಗೆ ಮಾರಮ್ಮ ಎಂದು ನಾಮಕರಣ ಮಾಡುತ್ತಾರೆ. ಆ ದಂಪತಿಗೆ ನಂತರ ಇನ್ನೂ ಎಂಟು ಮಕ್ಕಳಾಗುತ್ತವೆ. ಹೆತ್ತವರ ಕಾಲಾನಂತರ ಮಾರಮ್ಮ ತನ್ನ ತಮ್ಮಂದಿರ ಜೀವನೋಪಾಯಕ್ಕಾಗಿ ಪಶುಪಾಲನೆಯಲ್ಲಿ ತೊಡಗಿಕೊಂಡಿರುತ್ತಾಳೆ. ಹೀಗಿರುವಾಗ ಆ ಪ್ರದೇಶದ ದೊರೆ ಹೊಟ್ಯಾಳ ನಾಯಕ ಎಂಬ ಪಾಳೇಗಾರ ಮಾರಮ್ಮನಿಗೆ ಮಾನಸಿಕ ಕಿರುಕುಳ ನೀಡುತ್ತಾನೆ. ಇಂದರಿಂದ ಅವಳು ಆ ಸ್ಥಳ ಬಿಟ್ಟು ಮಲೆಸಮುದ್ರ (ಈಗಿನ ಗೌರಸಮುದ್ರ ಸಮೀಪ ಮಲ್ಲಸಮುದ್ರ)ಕ್ಕೆ ಬಂದು ನೆಲಸುತ್ತಾಳೆ.

ದೇವಿಯ ಮಹಿಮೆ: "ಮಲೆಸಮುದ್ರದ ಬಳಿ ಉಪ್ಪಾರರು ವಾಸ ಮಾಡುತ್ತಿದ್ದು, ಅದರಲ್ಲಿ ಗಿರಿ ತಿಮ್ಮಪ್ಪ ಉಪ್ಪು ಮಾರಿ ಜೀವನ ಮಾಡುತ್ತಿದ್ದ. ಈತನಿಗೆ ಆರು ಜನ ತಮ್ಮಂದಿರಿದ್ದರು. ಈತ ಸಂಗ್ರಹ ಮಾಡಿದ್ದ ಉಪ್ಪಿನಲ್ಲಿ ಹುತ್ತ ಕಾಣಿಸಿಕೊಳ್ಳುತ್ತದೆ. ನಂತರ ಇದು ದೊಡ್ಡದಾಗಿ ಬೆಳೆಯುತ್ತದೆ. ಈ ವಿಷಯವಾಗಿ ಆತ ಶಾಸ್ತ್ರ ಕೇಳಿದಾಗ, ಹೆಣ್ಣು ದೇವತೆ ಅಲ್ಲಿದ್ದಾಳೆ ಎಂಬುದು ತಿಳಿದು, ನಿತ್ಯವೂ ಪೂಜೆ ಮಾಡುವಂತೆ ಹೇಳಲಾಗಿ, ಅದರಂತೆ ಗಿರಿತಿಮ್ಮಪ್ಪ ತಂಗಿ ಕೆಂಚಮ್ಮ ಪೂಜೆ ಮಾಡುತ್ತಾಳೆ. ದೇವಿಯು ಈಕೆಯ ಭಕ್ತಿಗೆ ಮೆಚ್ಚಿ ಅವಳ ಮೈಮೇಲೆ ಬರುತ್ತಾಳೆ. ಹೀಗೆ ಬಂದ ದೇವಿ, ಜನರ ಕಷ್ಟ ಕಾರ್ಪಣ್ಯಗಳಿಗೆ ದಾರಿ ತೋರಿಸುತ್ತಾಳೆ. ಹೀಗೆ ಕೆಂಚಮ್ಮನ ಮೂಲಕ ಗೌರಸಮುದ್ರವನ್ನು ಪ್ರವೇಶಿಸಿದ ಮಾರಮ್ಮ ಮುಂದೆ ಗೌರಸಮುದ್ರ ಮಾರಮ್ಮ ಎಂದು ಖ್ಯಾತಿ ಪಡೆಯುತ್ತಾಳೆ. ಮಾರಿದೇವಿಗೆ ಗೌರಸಮುದ್ರದಲ್ಲಿ ದೇವಾಲಯ ನಿರ್ಮಿಸಲಾಗಿದೆ. ಈ ಗುಡಿಯ ಒಳಗಿನ ಆವರಣದ ಗೋಡೆಯ ಮೇಲೆ ದೇವಿಯ ಮಹಿಮೆಯ ವೃತ್ತಾಂತ, ಅವತಾರ, ಪವಾಡಗಳು ಚಿತ್ರರೂಪದಲ್ಲಿವೆ. ಇವು ಬಹು ಆಕರ್ಷಣೆಯಿಂದ ಕೂಡಿವೆ. ಈ ದೇವಿ ಜಾತ್ರೆಯ ವಿಶೇಷವೆಂದರೆ ಗ್ರಾಮದಲ್ಲಾಗಲಿ, ದೇವಾಲಯದ ಜಾತ್ರೆ ನಡೆಯುವುದಿಲ್ಲ. ಸುಮಾರು ನಾಲ್ಕು ಕಿ.ಮೀ. ದೂರದ ಕಾಡಿನ ಬಯಲುಪ್ರದೇಶದಲ್ಲಿ ನಡೆಯುತ್ತದೆ. ಈ ದೇವಿಗೆ ಬೇವಿನ ಸೊಪ್ಪು ಪ್ರಿಯ ಎಂದು ಹೇಳಲಾಗುತ್ತಿದ್ದು, ಈ ಕುರಿತು ಜನಪದ ಕಥೆ, ಲಾವಣಿಗಳಿವೆ. ಹೀಗಾಗಿ ಜಾತ್ರೆಗೆ ಬರುವ ಭಕ್ತಾದಿಗಳು ಹೆಚ್ಚಾಗಿ ಬೇವಿನಸೊಪ್ಪು ಹರಕೆ ಸಲ್ಲಿಸುತ್ತಾರೆ. ಜಾತ್ರೆಯ ದಿನ ಮಾರಮ್ಮ ದೇವಿಯ ಕತ್ತಲಾಗುತ್ತಿದ್ದಂತೆ ಅಲ್ಲಿ ಪ್ರತ್ಯಕ್ಷಳಾಗುತ್ತಾಳೆ. ಹೀಗಾಗಿ ದೇವಿಗೆ ಪ್ರಾಣಿಗಳನ್ನು ಬಲಿ ಕೊಡಲಾಗುತ್ತದೆ. ಹೀಗೆ, ಬಲಿ ಕೊಟ್ಟ ಪ್ರಾಣಿಗಳ ರಕ್ತ ಸ್ವೀಕರಿಸುತ್ತಾಳೆ ಎಂಬ ಪ್ರತೀತಿ ಇದೆ. ಮೂರು ದಿನಗಳ ಕಾಲ ನಡೆಯುವ ಈ ಜಾತ್ರೆಯ ಮೊದಲ ದಿನ ಊರಿನ ಹೊರಗಡೆ ತುಂಬಲಿನಲ್ಲಿನ ಸನ್ನಿಧಿಗೆ ದೇವಿ ಮೆರವಣಿಗೆ ನಡೆಯುತ್ತದೆ. ಮಾರಮ್ಮ ದೇವಿ ತುಂಬಲು ಜಾತ್ರೆಯ ಮರುದಿನ ಊರಿನ ದೇವಿಯ ದೇವಾಲಯದ ಮುಂಭಾಗದಲ್ಲಿ ಸಿಡಿ ಉತ್ಸವ ಕೂಡ ನಡೆಯುತ್ತದೆ."[೪]

"ಗುಡಿಗೆ ಬರುವ ನಡೆದುಕೊಳ್ಳುವ ಭಕ್ತರಲ್ಲಿ ಬೇರೆ ಬೇರೆ ಜಾತಿ ಸ್ತರಗಳವರಿದ್ದಾರೆ. ಸಾಮಾನ್ಯವಾಗಿ ಮಾಂಸಾಹಾರಿಗಳಾದ ಜನ ಬ್ಯಾಟೆಯ ಹರಕೆ ಹೊತ್ತು ಆಡು ಕುರಿ, ಕೋಳಿಗಳನ್ನು ಬಲಿ ಕೊಟ್ಟು ಅಟ್ಟು ಉಂಡು ತೆರಳುತ್ತಾರೆ. ಸಸ್ಯಾಹಾರಿಗಳಾದವರು ಅದೇ ರೀತಿ ಸಾಮಾಜಿಕವಾಗಿಯೂ, ಶೈಕ್ಷಣಿಕವಾಗಿಯೂ, ಮುಂದುವರಿದಿರುವವರು ಬ್ಯಾಟೆಯ ನ್ನೊಪ್ಪಿಸುವುದಿಲ್ಲ. ಗುಡಿಗೆ ಬಂದು, ದೇವತೆಗೆ ಕೈಮುಗಿದು, ಪೂಜೆ ಸಲ್ಲಿಸಿ ಇನ್ನಿತರ ಹರಕೆ ಕಾಣಿಕೆಗಳನ್ನು ಸಲ್ಲಿಸುವಷ್ಟಕ್ಕೆ ತೃಪ್ತರಾಗುತ್ತಾರೆ. ಕೆಲವರು ತಮ್ಮ ತಮ್ಮ ಮನೆಗಳಲ್ಲಿ ಸಿಹಿಯುಡುಗೆಗಳನ್ನು ಮಾಡಿಕೊಂಡು ಬಂದು ದೇವತೆಗೆ ನಿವೇದಿಸುತ್ತಾರೆ.

ನಿಗದಿತ ಪೂಜಾರಿಗಳಿದ್ದಾಗ್ಯೂ ಯಾರು ಬೇಕಾದರೂ ಗುಡಿಯೊಳಗೆ ಬಂದು ಪೂಜೆ ಸಲ್ಲಿಸಬಹುದಾಗಿದೆ. ಆದರೆ ಆರತಿ ಬೆಳಗಿ ಪೂಜೆ ಸಲ್ಲಿಸುವವರು ಪೂಜಾರಿಗಳು ಮಾತ್ರ. ಹರಿಜನರು ಗರ್ಭಗುಡಿಯೊಳಗಡೆ ಪ್ರವೇಶಿಸಬಾರದೆಂದಿದೆ. ಅವರೇನಿದ್ದರೂ ಹಜಾರದಲ್ಲೇ ನಿಂತು ತಮ್ಮ ಪಾಲಿನ ಸೇವೆಯನ್ನು ಸಲ್ಲಿಸುತ್ತಾರೆ."[೫] ಯಾವ ಯಾವ ಸಮುದಾಯದವರು ದೇವರನ್ನು ಪೂಜಿಸಬೇಕು ಎಂಬುದನ್ನು ಚರ್ಚೆ ಮಾಡುತ್ತಾರೆ. ಕೆಳಜಾತಿಗೆ ಸೇರಿದ ಹರಿಜನರು ನಮಸ್ಕಾರ ಮಂಟಕ್ಕೆ ಸೀಮಿತವಾಗಿವುದು ಗೋಚರವಾಗುತ್ತದೆ.

೪.೩ ಧಾರ್ಮಿಕ ನೆಲೆಯಲ್ಲಿ ಬಲಿಪದ್ಧತಿ

ಆದಿಮ ಕಾಲದಿಂದಲೂ ಮನುಷ್ಯ ಜಗತ್ತೇ ತನ್ನ ಸ್ವಕಾರ್ಯಕ್ಕೆ ಅನುಕೂಲ ಆಗುವಂತೆ ಈ ಪ್ರಕೃತಿಯಲ್ಲಿ ಇರುವ ಚರಾಚರ ವಸ್ತುವನ್ನೇ ಬಳಸಿಕೊಂಡಿದ್ದಾನೆ. ಕೆಲವು ಸಲ ಪ್ರಕೃತಿಯು ಅಸಹಜ ವರ್ತನೆಯನ್ನು ವ್ಯಕ್ತಪಡಿಸಿದಾಗ ಮನುಷ್ಯನಿಗೆ ಗೊಂದಲ ಸೃಷ್ಟಿಸಿದಾಗ ಅದರ ನಿವಾರಣೆಗಾಗಿ ಅಲೌಕಿಕ ಶಕ್ತಿಗೆ ಮೊರೆಹೋಗುವುದನ್ನು ಕಾಣಬಹುದು. ಅಲ್ಲಿ ಮನುಷ್ಯ ಜಗತ್ತು ಅಮೂರ್ತ ಶಕ್ತಿಗೆ ಶರಣಾಗಿದ್ದು ಮಾತ್ರವಲ್ಲ ಅಲ್ಲಿ ಪೂಜೆ, ಆರಾಧನೆಯಂತಹ ಆಚರಣೆಯೂ ಹುಟ್ಟಿಕೊಂಡದ್ದನ್ನು ಕಾಣಬಹುದು. ಈ ಆರಾಧನೆಯ ಇನ್ನೊಂದು ರೂಪವಾಗಿ ನಾವು 'ಬಲಿ'ಯನ್ನು ಕಾಣಬಹುದು. ಇದು ಆರಾಧನೆಯ ಜೊತೆಗೆ ಸಂಬಂಧವನ್ನು ಹೊಂದಿರುವುದನ್ನು ಕಾಣುತ್ತೇವೆ.

ಸಾಮಾನ್ಯವಾಗಿ ಪ್ರಕೃತಿಯಲ್ಲಿ ನಡೆಯುವ ಚಿತ್ರ ವಿಚಿತ್ರ ಸನ್ನಿವೇಶಗಳಿಗೆ ತನ್ನದೇ ಆದ ರೂಪವನ್ನು ಕೊಟ್ಟು ಅದನ್ನು ಆರಾಧಿಸುವ ಮೂಲಕ ಅಲ್ಲಿ ಆರಾಧನಾ ಸಂಪ್ರದಾಯ ಬೆಳೆದು ಬಂದಿರುವುದನ್ನು ಕಾಣಬಹುದು. ಅದು ಇಂದಿಗೂ ಮುಂದುವರಿದಿರುವುದನ್ನು ಗಮನಿಸಬಹುದು. ಹೀಗೆ ಇವರ ಜೊತೆಗೆ ಇನ್ನುಳಿದ ಸಂಪ್ರದಾಯಗಳ ಆಚರಣೆಗಳ ಹುಟ್ಟು ಪಡೆದುಕೊಂಡಿರುವುದನ್ನು ಗಮನಿಸಬಹುದು. ಬೇರೆ ಬೇರೆ ಕಾರಣಗಳಿಗಾಗಿ ಪೂಜೆ ಪುರಸ್ಕಾರಗಳು ನಡೆಯುವುದನ್ನು ಗುರುತಿಸಬಹುದು. ಹಿಂದಿನ ತಲೆಮಾರುಗಳು ನರಬಲಿ

ಯಂತಹ ಆಚರಣೆಯನ್ನು ಮಾಡಿಕೊಂಡಿರುವುದನ್ನು ಗಮನಿಸಬಹುದು. ಛಾಯಾಚಿತ್ರವನ್ನು ನೋಡಿ. ನರಬಲಿಯನ್ನು ನೀಡದೇ ಇದ್ದ ಪಕ್ಷದಲ್ಲಿ ದೇವರೇ ಆ ಕೆಲಸವನ್ನು ಅಂದರೆ ತನ್ನ ಪಾಲಿನ ಬಲಿಯನ್ನು ತೆಗೆದುಕೊಳ್ಳುತ್ತಾನೆಂಬ ನಂಬಿಕೆಯಿಂದ ಅಂತಹ ಕೃತ್ಯಗಳನ್ನು ಮಾಡುತ್ತಿದ್ದರು. ತಮ್ಮ ಸಮುದಾಯದಲ್ಲಿ ಅಸಹಜ ಸಾವು ಸಂಭವಿಸಿದರೆ ಅದು ದೇವರು ತೆಗೆದುಕೊಂಡ 'ಬಲಿ' ಎಂಬುದಾಗ ತಿಳಿದುಕೊಳ್ಳುತ್ತಾರೆ. ವರ್ಷಾವಧಿ ದೇವರಿಗೆ ನರಬಲಿ ನೀಡಬೇಕು ಇಲ್ಲವಾದಲ್ಲಿ ಅದು ಮುನಿಸಿಕೊಳ್ಳುತ್ತದೆ ಎಂಬ ನಂಬಿಕೆಯಿಂದ ಇದನ್ನು ನಡೆಸುತ್ತಿದ್ದರು. ಮುಂದೆ ನರಬಲಿಯು ಪ್ರಮಾಣ ಕಡಿಮೆಯಾಗುತ್ತ ಬಂದಿರುವುದನ್ನು ನೋಡಬಹುದಾದರೂ ಅದಕ್ಕೆ ಕಾರಣ ಅದರ ಬದಲಿ ವ್ಯವಸ್ಥೆಗಳು ಅಲ್ಲಿ ಬಂದಿರುವುದನ್ನು ಕಾಣಬಹುದು.

ಬಲಿಯ ಆಚರಣೆಯು ಒಂದಲ್ಲ ಒಂದು ರೀತಿಯಲ್ಲಿ ಎಲ್ಲಾ ಕಡೆಗಳಲ್ಲಿ ನಡೆಯುವುದನ್ನು ಕಾಣಬಹುದು. ಅದು ಸಮುದಾಯಗಳ ನಡುವೆ ಇರಬಹುದು. ಧಾರ್ಮಿಕ ಕ್ಷೇತ್ರಗಳಿರಬಹುದು. ಬೇರೆ ಬೇರೆ ಸ್ಥಳಗಳು ಬೇರೆ ಬೇರೆ ಸ್ವರೂಪಗಳಲ್ಲಿ ಇದರ ಇರುವಿಕೆಯನ್ನು ಗುರುತಿಸಬಹುದು. ಧಾರ್ಮಿಕ ಆಚರಣೆಯ ಬಹಳ ಮಹತ್ವದ ಕ್ರಿಯೆಯಾಗಿ ಜಗತ್ತಿನಾದ್ಯಂತ ಅನೇಕ ರೀತಿಗಳಲ್ಲಿ 'ಬಲಿ'ಯ ಪ್ರಕ್ರಿಯೆಯನ್ನು ನೋಡಬಹುದು. 'ಬಲಿ' ಎಂಬ ವಿಚಾರ ಬಂದಾಗ ಅಲ್ಲಿ ಪ್ರಾಣಿ ಇಲ್ಲವೇ ವಸ್ತುವಿನ ರೂಪದ ಅರ್ಪಣೆ ಇರುವುದನ್ನು ಗಮನಿಸಬಹುದು. ಈ ಬಲಿ ಎಲ್ಲಿಗೆ ಸಮರ್ಪಣೆ ಆಗುತ್ತದೆ ಎಂದರೆ ಅದು ಒಂದು ಅಲೌಕಿಕ ಶಕ್ತಿಗೆ. ಈ ರೀತಿಯ ಬಲಿಯ ಹಿಂದೆ ಒಂದು ರೀತಿಯ ಮುಗ್ಧನಂಬಿಕೆ ಅಥವಾ ಕೆಲವು ಬಾರಿ ಮೂಢನಂಬಿಕೆ ಕೆಲಸ ಮಾಡುವುದನ್ನು ಗಮನಿಸಬಹುದು.

ಧಾರ್ಮಿಕ ನೆಲೆಯಲ್ಲಿ ಬಲಿಯ ಸ್ವರೂಪವನ್ನು ಗಮನಿಸುತ್ತಾ ಹೋದರೆ ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಂಬಿಕೆ ಕೆಲಸ ಮಾಡಿರುವುದನ್ನು ನೋಡಬಹುದು. ತಾವು ನಂಬಿರುವ ದೈವ ದೇವರುಗಳಿಗೆ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ತಮ್ಮವರ ರಕ್ಷಣೆಗಾಗಿ ಹಲವಾರು ಕಾರಣಗಳಿಗಾಗಿ ಬಲಿ ನಡೆಯುವುದನ್ನು ನೋಡಬಹುದು. ಇಲ್ಲಿ ದೇವರನ್ನು ಸಂಪ್ರೀತಿ ಗೊಳಿಸುವುದರ ಜೊತೆಗೆ ತಾವು ಮಾನಸಿಕವಾಗಿ ತೃಪ್ತಿರಾಗುವುದನ್ನು ನೋಡಬಹುದು. ಬೇರೆ ಬೇರೆ ಪ್ರಕಾರಗಳಲ್ಲಿ ಬಲಿ ಜರುಗುವುದನ್ನು ನೋಡಬಹುದು. ಅದು ಪ್ರಾಣಿಬಲಿ ನರಬಲಿ ಅಥವಾ ವಸ್ತುರೂಪದ ಅರ್ಪಣೆಯೇ ಆಗಿರಬಹುದು. ಅದು ಕೂಡ ಬಲಿ ಎಂದೇ ಕರೆಸಿಕೊಳ್ಳುತ್ತದೆ. ಈ ರೀತಿಯ ಬಲಿಯನ್ನು ತೆಗೆದುಕೊಳ್ಳುವ ಉದ್ದೇಶ ಕೆಲವು ಬಾರಿ ಒಳ್ಳೆಯದಾಗಿರುತ್ತದೆ. ಹಲವು ಬಾರಿ ತಮ್ಮ ಸ್ವಾರ್ಥ ಸಾಧನೆಗಾಗಿ ಇನ್ನೊಬ್ಬರ ಜೀವವನ್ನು ಪಣಕ್ಕಿಡುವುದನ್ನು ಕಾಣಬಹುದು. ನರಬಲಿ ನಡೆಯುವುದು ಇಂತಹದೇ ಹಲವಾರು ಸ್ವಾರ್ಥ

ಸಾಧನೆಯ ಈಡೇರಿಕೆಗಾಗಿ. ಆಧುನಿಕ ಕಾಲದಲ್ಲಿ ನಾವು ಇದ್ದರೂ ಕೂಡ ತಂತ್ರಜ್ಞಾನ ವಿಜ್ಞಾನದಲ್ಲಿ ನಾವು ಎಷ್ಟೇ ಮುಂದುವರಿದರೂ ಕೂಡ ಇಂತಹ ಕೃತ್ಯಗಳೂ ಈಗಲೂ ನಡೆಯುತ್ತಿರುವ ಉದಾಹರಣೆಗಳು ಅಲ್ಲಲ್ಲಿ ಕೇಳಿಬರುವುದನ್ನು ಗಮನಿಸಬಹುದಾಗಿದೆ.

ಬಲಿಯು ನಾನಾ ಕಾರಣಗಳಿಗಾಗಿ ನಡೆಯುತಿತ್ತು. ಕುಟುಂಬದ ಕ್ಷೇಮಕ್ಕಾಗಿ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಸಲುವಾಗಿ, ಕ್ಷಾಮದ ನಿವಾರಣೆಗಾಗಿ, ನೈಸರ್ಗಿಕ ದುರಂತಗಳು ಹೀಗೆ ಅನೇಕ ಕಾರಣಗಳಿಗಾಗಿ, ಇಂಥ ಆಚರಣೆಗಳು ಇಂದಿಗೂ ನಡೆಯುವುದನ್ನು ಕಾಣಬಹುದು. ಅಲ್ಲದೇ ದೇವಾಲಯ ನಿರ್ಮಾಣ, ಹೊಸ ಕಟ್ಟಡವೊಂದರ ಸ್ಥಾಪನೆ ಹೀಗೆ ಹಲವಾರು ಮಹತ್ವದ ಘಟನೆಗಳು ನಿರ್ವಿಘ್ನವಾಗಿ ನಡೆಯಲು ಬಲಿಯು ಜರುಗುತ್ತಿತ್ತು. ದೇವಸ್ಥಾನ ಅಥವಾ ದೈವಸ್ಥಾನಗಳಲ್ಲಿ ಬಲಿ ಬೇರೆ ಬೇರೆ ರೂಪಗಳಲ್ಲಿ ನೇರವೇರುವುದನ್ನು ಕಾಣಬಹುದು. ಅಲ್ಲಿ ಪ್ರಾಣಿರೂಪದಲ್ಲಿ ಹಾಗೂ ಸಸ್ಯ ವಸ್ತುಗಳ ಮೂಲಕ ಬಲಿ ನೆರವೇರುವುದನ್ನು ಕಾಣಬಹುದು. ಪ್ರಾಣಿರೂಪದಲ್ಲಿ ಕೋಳಿ, ಕುರಿಗಳನ್ನು ಬಲಿಯಾಗಿ ನೀಡಿದರೆ ಸಸ್ಯರೂಪದಲ್ಲಿ ಕುಂಬಳಕಾಯಿ, ತೆಂಗಿನಕಾಯಿ, ಹೊಂಬಾಳೆ ಇತ್ಯಾದಿಗಳನ್ನು ಅರ್ಪಿಸುವುದಿದೆ. ಅಲೌಕಿಕ ಶಕ್ತಿಗೆ ರಕ್ತಸಹಿತವಾದ ಮತ್ತು ರಕ್ತರಹಿತವಾದ ಬಲಿ ಅರ್ಪಣೆಯಾಗುವುದನ್ನು ನೋಡಬಹುದು.

ಮನುಷ್ಯರು ಅರ್ಪಿಸುತ್ತಿದ್ದ ರಕ್ತಬಲಿಯು ಅನಂತರ ಕೆಲವು ವಸ್ತುಗಳ ಅರ್ಪಿಸುವಿಕೆಗೆ ವರ್ಗಾಯಿಸಲ್ಪಟ್ಟಿದ್ದನ್ನು ಕಾಣುತ್ತೇವೆ. ಒಂದು ಪೂರ್ಣವಾದ ವಸ್ತುವನ್ನು ಬಲಿ ಕೊಡುವುದರ ಬದಲಾಗಿ ಅದರ ಒಂದು ಭಾಗವನ್ನು ಬಲಿ ಕೊಡುವ ಪದ್ಧತಿಯು ಬೆಳೆದುಬಂತು. ಆಧ್ಯಾತ್ಮಿಕ ಆಚರಣೆಯು ಅಂಗವಾಗಿ ನಡೆಯುವ ಮುಡಿಯೊಪ್ಪಿಸುವುದು. ತುಲಾಭಾರ ಈ ಮುಂತಾದ ಆಚರಣೆಯು ತಲೆಯ ಬದಿಲಿಗೆ ಮುಡಿ, ದೇವದ ಬದಲಿಗೆ ಅಷ್ಟೇ ತೂಕ ದವಸಧಾನ್ಯ ಹಣ ಇತ್ಯಾದಿ ವಸ್ತುಗಳ ಅರ್ಪಣೆ ಮನುಷ್ಯ ಬಲಿಗೆ ಬದಲಿಯಾಗಿ ಹುಟ್ಟಿಕೊಂಡ ಆಚರಣೆಗಳೆಂದು ತಿಳಿಯಬಹುದು. ಪ್ರಾಣಿಬಲಿಗೆ ಬದಲಾಗಿ ಹಿಟ್ಟಿನ ಹುಂಜವನ್ನು ಬಲಿ ಕೊಡುವ ಪ್ರಸಂಗವು ಜನ್ನನ ಯಶೋಧರನ ಚರಿತೆಯಲ್ಲಿ ಕಾವ್ಯದಲ್ಲಿ ವಿವರಿಸಲ್ಪಟ್ಟಿದೆ. ಈ ಎಲ್ಲಾ ಮಾದರಿಗಳು ರಕ್ತಸಹಿತ ಬಲಿಯ ರೂಪಾಂತರಗಳಾಗಿವೆ. ಧಾರ್ಮಿಕ ಕ್ಷೇತ್ರಗಳಲ್ಲಿ ಬಲಿಯ ಪ್ರಕ್ರಿಯೆಗಳನ್ನು ಗುರುತಿಸಲು ಸಾಧ್ಯವಿದೆ. ಅದು ಸಮಯ ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ಸ್ವರೂಪಗಳಲ್ಲಿ ನೆಲೆಗೊಳ್ಳುವುದನ್ನು ಕಾಣಬಹುದು. ದೇವಸ್ಥಾನಗಳಲ್ಲಿ ವರ್ಷಾವಧಿಯಾಗಿ ನಡೆಯುವ ಜಾತ್ರೆ, ದರ್ಶನ ಸೇವೆ, ನೇಮೋತ್ಸವಗಳ ಸಂದರ್ಭಗಳಲ್ಲಿ ಪ್ರಾಣಿಗಳನ್ನು ಮುಖ್ಯವಾಗಿ ಕೋಳಿಯನ್ನು ಬಲಿಯಾಗಿ ನೀಡುತ್ತಾರೆ. ಇನ್ನುಳಿದಂತೆ ಕೆಲವೊಂದು ಹರಕೆಯ ರೂಪದಲ್ಲಿ ಈ ಬಲಿ ಸೇವೆ ನಡೆಯುವುದನ್ನು ಕಾಣಬಹುದು.

ಧಾರ್ಮಿಕ ಕ್ಷೇತ್ರಗಳಲ್ಲಿ ನಡೆಯುವ ಹಬ್ಬ ಜಾತ್ರೆ ಮುಂತಾದ ಹಲವಾರು ಮಹತ್ವದ ಸಂದರ್ಭಗಳಲ್ಲಿ ಬಲಿ ನಡೆಯುವುದನ್ನು ಕಾಣಬಹುದು. ದೇವಸ್ಥಾನಗಳಲ್ಲಿ ಮಾತ್ರವಲ್ಲದೇ ದೇವಸ್ಥಾನಗಳಲ್ಲಿ ಬಲಿ ಪ್ರಕ್ರಿಯೆಗಳನ್ನು ಗುರುತಿಸಲು ಸಾಧ್ಯವಿದೆ. ಪ್ರಾಣಿರೂಪದ ಬಲಿಯಲ್ಲದೆ ವಸ್ತು ರೂಪದ ಅಥವಾ ಸಸ್ಯವಸ್ತುಗಳ ರೂಪದಲ್ಲೂ ಬಲಿ ನೆರವೇರುವುದನ್ನು ಕಾಣಬಹುದು. ಕುಂಬಳಕಾಯಿ, ಬೂದುಕುಂಬಳಕಾಯಿ ಮುಂತಾದ ಸಸ್ಯಗಳು ವಸ್ತುಗಳಿಂದ ಬಲಿ ನಡೆಯುವುದನ್ನು ಕಾಣಬಹುದು.

೪.೪ ಬಲಿಪದ್ಧತಿಯಲ್ಲಿನ ಸ್ಥಿತ್ಯಂತರಗಳು

ಸಾಮಾಜಿಕವಾಗಿ ಆಧುನಿಕ ಆಚರಣಾ ಪರಂಪರೆಯಲ್ಲಿ ವಿಧಾನಗಳು ಬದಲಾವಣೆಗಳಾಗುತ್ತಿವೆ. ದೇವಾನು ದೇವತೆಗಳ ಪೂಜಾ ಕ್ರಮದಲ್ಲಿ ಆಚರಣಾತ್ಮಕವಾಗಿ ಪರಿವರ್ತನೆಗಳು ಪಡೆದುಕೊಳ್ಳುತ್ತದೆ. ಸಮುದಾಯಗಳ ನಾಗರಿಕತೆಗಳಲ್ಲಿ ವ್ಯತ್ಯಾಸಗಳು ಇರುವಂತೆ ಗ್ರಾಮದೇವತೆಯರ ಆರಾಧನಾ ವಿಚಾರದಲ್ಲಿ ಪರಿವರ್ತನೆಗಳಾಗಿವೆ.

ವಿವಿಧ ಸಂದರ್ಭದಲ್ಲಿ ಪ್ರಾಣಿಬಲಿಯನ್ನು ಅರ್ಪಿಸುವುದು ಈಗಾಗಲೇ ಗಮನಿಸಲಾಗಿದೆ. ಮಾನವನು ಗುಡ್ಡಗಾಡು ಜೀವನದ ಕಾಲದಲ್ಲಿ ಹೆಚ್ಚಾಗಿ ಪ್ರಾಣಿಗಳ ಬದಲಾಗಿ ನರಬಲಿಯನ್ನೇ ಮಾಡುತ್ತಿದ್ದ ಎಂದು ಅನೇಕ ಉದಾಹರಣೆಗಳನ್ನು ನೀಡಬಹುದಾದರೂ ಕ್ರೂರವಾಗಿ ಕೊಲ್ಲುವ ಪದ್ಧತಿ ಆಧುನಿಕ ಸಂದರ್ಭದಲ್ಲಿ ಸ್ಥಿತ್ಯಂತರಗಳಾಗುತ್ತಿವೆ.

ಅಮ್ಮನಿಗೆ ಪ್ರಾಣಿಬಲಿ ಮಾಡುವ ಕೆಲಸಗಳನ್ನು ಮಾಡುವುದು ದಲಿತಜಾತಿಗೆ ಸೀಮಿತವಾದುದು ಎಂದು ಜಾನಪದ ಶಾಸ್ತ್ರದಲ್ಲಿ ಕೆಲವರು ಅಭಿಪ್ರಾಯಪಡುತ್ತಾರೆ. ಇದರಲ್ಲಿ ಪ್ರಾದೇಶಿಕ ಭಿನ್ನತೆಗಳನ್ನು ಗುರುತಿಸಬಹುದು. ಆರಾಧನಾ ಸ್ಥಿತಿಗತಿಗಳಲ್ಲಿ ಪರಿವರ್ತನೆಯಾಗುತ್ತಿದೆ. ಇಲ್ಲಿ ಒಂದು ಸಂಸ್ಕೃತಿ ಭಿನ್ನ ಚಿಂತನೆಗಳನ್ನು ಇತರೆ ಸಂಸ್ಕೃತಿಗಳ ಚಿಂತನೆಗಳಿಗೆ ಒರೆಹಚ್ಚಿ ನೋಡುವುದು ಜನಪರ ಅಭಿಪ್ರಾಯವಾಗುತ್ತದೆ. ಇಲ್ಲಿ ಸಾಂಸ್ಕೃತಿಕ ಸಂಗತಿಗಳನ್ನು ಕಂಡುಕೊಳ್ಳಬಹುದು.

ಆದಿಕಾಲದಿಂದ ಬಳಕೆಯಲ್ಲಿರುವ ಪ್ರಾಣಿಬಲಿಯ ಆಚರಣಾ ಪ್ರಕ್ರಿಯೆ ವೈಜ್ಞಾನಿಕ ಯುಗದಲ್ಲಿ ಪರಿವರ್ತನೆಯಾಗುತ್ತಿದೆ. ರಕ್ತತರ್ಪಣವನ್ನು ಸಹಿಸದ ಪರಿಸರವಾದಿಗಳು, ಪ್ರಾಣಿದಯಾ ಸಂಘಗಳು, ಪ್ರಾಣಿಬಲಿಯಂತಹ ಆಚರಣೆಗಳ ಮೇಲೆ ಒತ್ತಡ ಹೇರತೊಡಗಿವೆ. ಭಾರತ ಸರ್ಕಾರ ಪ್ರಾಣಿಬಲಿಯ ಮೇಲೆ ಕಟ್ಟುನಿಟ್ಟಿನ ನಿಷೇಧಗಳನ್ನು ಹೊರಡಿಸಿದೆ. ಸಮಾಜದಲ್ಲಿ ಯಾವುದೇ ರೀತಿಯ ರಕ್ತತರ್ಪಣ ನಡೆಯಬಾರದೆಂಬ ಕಟ್ಟುನಿಟ್ಟಿನ ನಿಷೇಧ ಹೇರಿ ಆದೇಶಗಳನ್ನು ಜಾರಿಗೊಳಿಸಲಾಗಿದೆ. ಮಂಗಳೂರಿನ ಬೋಳಾರು ಮಾರಿಗುಡಿಯಲ್ಲಿ ನರಬಲಿ ನಡೆಯುತ್ತಿದ್ದ ವಿಚಾರವನ್ನು ವಿರೋಧಿಸಿ ಎಂ. ಶೇಷಪ್ಪ ಶೆಟ್ಟಿ ಅವರು 'ಕಂಠೀರವ ಪತ್ರಿಕೆ'ಯಲ್ಲಿ ಒಂದು

ಲೇಖನವನ್ನು ಬರೆದಿದ್ದಾರೆ.[೬] ೧೯೨೯ರ ದಶಕದಲ್ಲಿ ನರಬಲಿಯ ವಿರುದ್ಧ ಆಂದೋಲನವನ್ನು ನಡೆಸುತ್ತಿದ್ದರೆಂಬುದು ದೈನಿಕ ಪತ್ರಿಕೆಗಳಿಂದ ದೃಢಪಡಿಸಬಹುದು. ಆಧುನಿಕ ಕಾಲಘಟ್ಟದಲ್ಲಿ ಪ್ರಾಣಿಬಲಿಯ ಸ್ಥಾನವನ್ನು ಸಸ್ಯಾಹಾರ ಪದಾರ್ಥಗಳು ಪ್ರವೇಶವನ್ನು ಪಡೆಯುತ್ತಿರುವುದು ಪ್ರಾದೇಶಿಕವಾಗಿ ಬಳ್ಳಾರಿ ಜಿಲ್ಲೆಯಾದ್ಯಂತ ಇವೆ. "ಬಹಳ ಮುಖ್ಯವಾಗಿರುವ ತಾತ್ವಿಕ ವಿಚಾರಗಳಿಂದ ಅವಲೋಕಿಸಿದಾಗ ತೆಂಗಿನಕಾಯಿ, ಬಾಳೆಹಣ್ಣು, ನಿಂಬೆಹಣ್ಣು, ಬೂದುಗುಂಬಳ ಕಾಯಿ, ಕುಂಬಳಕಾಯಿ, ಇತ್ತೀಚೆಗೆ ಜನರು ಸ್ತ್ರೀ ದೈವಗಳಿಗೆ ಒಪ್ಪಿಸುವರು. ಇವುಗಳ ಪಾತಳಿಯನ್ನು ಪ್ರಾಂಜಲತೆಯಿಂದ ತಡಕಾಡಿದರೆ ಇವುಗಳ ಲಕ್ಷಣಗಳನ್ನು ಹೇಳಬಹುದು. ತೆಂಗಿನಕಾಯಿಯ ಜುಟ್ಟುಮನುಷ್ಯನ ತಲೆಬಾಗವಾಗಿ ಆದರಿಂದ ಬರುವ ನೀರಿನರೂಪದ ತೀರ್ಥ ರಕ್ತವಾಗಿ ಇರುತ್ತದೆ. ಇದು ಒಂದಕ್ಕೊಂದು ಸಂಬಂಧ ಹೊಂದಿದೆ ಅನ್ನಬಹುದು. ಏಕೆಂದರೆ ತೆಂಗಿನಕಾಯಿ ಒಡೆದು ಇಬ್ಭಾಗವಾದಾಗ ಮನುಷ್ಯನ ಪ್ರತಿರೂಪದಂತೆ ಭಾಸವಾಗುತ್ತದೆ. ಇನ್ನು ಬೂದುಗುಂಬಳ ಫಲವಂತಿಕೆಯ ಪ್ರತಿರೂಪವಾದರೂ ಮನುಷ್ಯನ ರೂಪವನ್ನೇ ಹೋಲುತ್ತದೆ. ಇಂದಿಗೂ ಆಯುಧ ಪೂಜೆ, ಹೊಸಮನೆ ಗೃಹಪ್ರವೇಶ ಮತ್ತು ಆಯುಧಗಳನ್ನು ಪೂಜೆ ಮಾಡುವಾಗ ಮೇಲ್ವರ್ಗದ ಜನರು ಬೂದುಗುಂಬಳ ಅಥವಾ ಕುಂಬಳಕಾಯಿಯನ್ನು ಒಡೆಯುವರು. ಆದುದರಿಂದ ವರ್ಷಕ್ಕೊಮ್ಮೆ ಅಥವಾ ಐದಾರು ವರ್ಷಗಳಿಗೊಮ್ಮೆ ಬಲಿ ನೀಡುವ ಪ್ರಾಣಿಗಳ ಬಗ್ಗೆ ತಾತ್ಸಾರದಿಂದ ಕಾಣುವರು. ಆದರೆ ಪ್ರತಿದಿನ ಜನರು ಮಾಂಸಾಹಾರಕ್ಕಾಗಿ ಕಡಿಯುವ, ಹಂದಿ, ಕುರಿ, ಕೋಳಿ, ಕೋಣ, ಹಸು, ಕರುಗಳ ಕುರಿತು ಯಾರೊಬ್ಬರೂ ಪ್ರಶ್ನಿಸದೇ ಇರುವುದು ಆಶ್ಚರ್ಯ, ಆದರೆ ಸ್ತ್ರೀ ದೈವಗಳಿಗೆ ಹರಕೆಯಾಗಿ ಒಪ್ಪಿಸುವಾಗ ಸಾವಿರಾರು ಅಡೆತಡೆಗಳು ಹುಟ್ಟಿಕೊಳ್ಳುತ್ತಿವೆ ಎಂಬುದು ನಿಗೂಢ."[೭] ಬಳ್ಳಾರಿ ಜಿಲ್ಲೆಯಲ್ಲಿ ಪ್ರಾದೇಶಿಕವಾಗಿ ಪ್ರಾಣಿಬಲಿಗಳು ನಡೆಯುತ್ತದೆ. ಗ್ರಾಮದೈವ, ಗ್ರಾಮದೇವತೆಯ ಹೆಸರಿನಲ್ಲಿ ಪ್ರಾಣಿಬಲಿಗಳು ನಡೆದರೆ ಅದೊಂದು ವಿಪರ್ಯಾಸ, ಅನಾಗರಿಕತೆ ಎಂದು ವಿಚಾರವಾದಿಗಳು ಚರ್ಚೆ ಮಾಡುತ್ತಾರೆ. ವ್ಯಾವಹಾರಿಕವಾಗಿ ಪ್ರಾಣಿಬಲಿಗಳು ನಡೆಯುವಾಗ ಸಮುದಾಯಗಳು ಸುಮ್ಮನೆ ಇರುವುದನ್ನು ಗುರುತಿಸಬಹುದು.

ಕರ್ನಾಟಕದಲ್ಲಿ ಹೆಚ್ಚು ಪ್ರಖ್ಯಾತಿಯನ್ನು ಪಡೆದುಕೊಂಡ ಮಾರಿಕಾಂಬಾ ಗುಡಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿದೆ. ಗರ್ಭಗುಡಿಯಲ್ಲಿ ಶಾಶ್ವತವಾದ ವಿಗ್ರಹವಿಲ್ಲದಿದ್ದರೂ ಮರದ ಮೂರ್ತಿ ಮಾಡಿ ಅದನ್ನು ಗದ್ದುಗೆಯಲ್ಲಿ ಪ್ರತಿಷ್ಠಾಪಿಸಿ ಅಲಂಕಾರ ಮಾಡಿದ್ದಾರೆ. ಗರ್ಭಗುಡಿಯ ಎಡಬದಿಗೆ ಕೋಣವನ್ನು ಕಟ್ಟುವ ಸ್ಥಳ ಇದೆ. ಪ್ರತಿವರ್ಷ ಮಾರಿಜಾತ್ರಾ ಸಮಯಕ್ಕೆ ಕೋಣವನ್ನು ಬಲಿ ನೀಡುತ್ತಿದ್ದರಂತೆ. ಸ್ವಾತಂತ್ರ್ಯಪೂರ್ವದ ಕಾಲದಲ್ಲಿ ಮಾರೆಮ್ಮನಿಗೆ ಕೋಣಗಳನ್ನು ಬಲಿ ನೀಡುತ್ತಿದ್ದುದಕ್ಕೆ ಇಲ್ಲಿ ನಿದರ್ಶನಗಳಿವೆ. ಅದರ ಆಚಾರ-ವಿಚಾರಗಳು ಹಾಗೆಯೇ

ಮುಂದುವರಿದುಕೊಂಡು ಬಂದು ಈಗ ಸಾಂಕೇತಿಕತೆಗೆ ಹೆಚ್ಚು ಒಲವು ತೋರಿಸುತ್ತಾರೆ. ಯಾವುದೇ ಒಂದು ಆಚಾರವು ಶಾಶ್ವತವಾಗಿ ನಿಲ್ಲಲು ಸಾಧ್ಯವಿಲ್ಲ. ಮಾರಿಜಾತ್ರೆಯ ಸಂದರ್ಭದಲ್ಲಿ ಕೋಣನ ಬಲಿ ಬದಲಿಗೆ ಕೋಣನಿಂದ ರಕ್ತವನ್ನು ತೆಗೆದು ಅರ್ಪಿಸುವ ಪ್ರಕ್ರಿಯೆ ಇದೆ. ಇದರಿಂದ ಬಲಿಯು ಸಾಂಸ್ಕೃತಿಕ ಸ್ಥಿತ್ಯಂತರಗಳ ಸಾಧ್ಯತೆಯನ್ನು ಪಡೆದುಕೊಳ್ಳುತ್ತದೆ. ಮಾನವತೀತ ಶಕ್ತಿಯ ಸಂಬಂಧವನ್ನು ಪಡೆದುಕೊಳ್ಳಲು ಮಾನವನು ನಡೆಸುವ ಎಲ್ಲ ಆಚರಣೆಗಳು ಉತ್ತಮ ಮಾರ್ಗದ ಕಡೆಗೆ ತಿರುಗುವ ಸಾಧ್ಯತೆಗಳಿವೆ.

ಬಲಿಪದ್ಧತಿ ಮಾರ್ಪಾಟುಗಳಾಗಿ ಸಾತ್ವಿಕ ಪದಾರ್ಥಗಳನ್ನು ಬಲಿಯಾಗಿ ನೀಡುವ ಸಂಪ್ರದಾಯ ನಿರ್ಮಾಣವಾಗಿದೆ. ಅನೇಕ ರೀತಿಯ ಜಾತಿವರ್ಗಗಳ ಪಾಲ್ಗೊಳ್ಳುವಿಕೆಯ ಕಾರಣದಿಂದ ಆರಾಧನಾತ್ಮಕ ವಿಧಾನಗಳಲ್ಲಿ ಸ್ಥಿತ್ಯಂತರಗಳಾಗಿವೆ. ಧಾರ್ಮಿಕ ಲಕ್ಷಣಗಳಲ್ಲಿ ಪ್ರಾಣಿಬಲಿಯೂ ಒಂದು ಎಂದು ತಿಳಿದ ಮಾನವ, ದೇವರಿಗೆ ವ್ಯತಿರಿಕ್ತವಾದ ಆಚರಣೆಗಳನ್ನು ತಂದಿದ್ದಾನೆ. ಬದಲಾವಣೆಗಾಗಿ ಸಜೀವ ಕೋಣವನ್ನು ಗರ್ಭಗುಡಿಯ ಬದಿಯಲ್ಲಿ ಕಟ್ಟಿರುವುದು ಇದೆ.

ಬಳ್ಳಾರಿ ಜಿಲ್ಲೆಗೆ ಸೇರಿದ ೭ ತಾಲೂಕುಗಳಲ್ಲಿ ಪ್ರಾಣಿಬಲಿ ನಡೆಯುತ್ತಿದ್ದ ಸ್ಥಳಗಳು ೮೦-೯೦ರ ದಶಕದಲ್ಲಿ ಪರಿವರ್ತನೆಗಳಾಗಿವೆ. ಪ್ರಾಣಿಬಲಿ ನೀಡುವ ಸ್ಥಳಗಳು ಪರಿವರ್ತನೆಗಳಾಗಿವೆ. ಮಾರಿಗುಡಿ ಅಂಗಳದಲ್ಲಿ ದೇವತೆಯ ಎದುರಿಗೆ ಇದ್ದ ರಣಕಂಬಗಳು ಇಲ್ಲದಾಗಿವೆ. ಸಾಂಕೇತಿಕತೆಗೆ ಹೆಚ್ಚು ಒಲವು ತೋರಿಸುತ್ತಿರುವುದು ಕಂಡುಬರುತ್ತಿದೆ. ಮಾಂಸಾಹಾರಗಳಿಂದ ಅರ್ಪಿಸುತ್ತಿದ್ದ ಮಾರಿಗುಡಿಗಳಲ್ಲಿ ಕುಂಬಳಕಾಯಿ, ತೆಂಗಿನ ಕಾಯಿ, ಬಾಳೆಕಾಯಿ, ಹೊಂಬಾಳೆ ಹಲವಾರು ಸಾತ್ವಿಕ ಪದಾರ್ಥಗಳು ಪ್ರವೇಶ ಪಡೆದಿವೆ.

ಮಾರಮ್ಮನ ಆರಾಧನೆಯಲ್ಲಿ ಬಳಸುವ ಆಹಾರಪದ್ಧತಿಯಲ್ಲಿ ಸಾಮ್ಯತೆ ಇದೆ. ಕೋಣ, ಕುರಿ, ಆಡು, ಹಂದಿಗಳನ್ನು ಮಾರೆಮ್ಮನ ಸನ್ನಿಧಿಯಲ್ಲಿ ಕಡಿಯಲಾಗುತಿತ್ತಂತೆ. ಆಧುನಿಕ ಆರಾಧನಾಲೋಕದಲ್ಲಿ ಅದು ಮರೆಯಾಗಿದೆ. ವಾರ್ಷಿಕವಾಗಿ ನಡೆಯುವ ಮಾರಿಜಾತ್ರೆಯ ಸಂದರ್ಭದಲ್ಲಿ ಓಕುಳಿ ನೀರಾಗಿ ಮಾಡುತ್ತಾರೆ. ಇದನ್ನೆ ರಕ್ತಮಿಶ್ರಿತ ವಸ್ತುವೆಂದು ಭಾವಿಸಿ ಜನಪದರು ಅದನ್ನು ದೇವರಿಗೆ ಅರ್ಪಿಸುತ್ತಾರೆ. ಹರಕೆ ಹೇಳಿಕೊಂಡವರು ಜಾತ್ರೆಯ ಮರುದಿನದಲ್ಲಿ ಮಾರಿಗುಡಿಯ ಅಂಗಳದ ಹೊರಗೆ ಕೋಳಿ, ಕುರಿಗಳ ತಲೆ ಕಡಿದು ತಮ್ಮ ತಮ್ಮ ಮನೆಗಳಿಗೆ ಒಯ್ಯುತ್ತಾರೆ.

ಇದರ ಬದಲಾಗಿ ಶ್ರಾವಣ ಮಾಸದ ಪ್ರಾರಂಭದಲ್ಲಿ ತಾವು ತಂದ ಕೋಳಿಗಳ ಬದಲಿಗೆ ಕೋಳಿಯ ಜುಟ್ಟನ್ನು ದೇವಿಗೆ ಬಲಿಯಾಗಿ ಅರ್ಪಿಸುತ್ತಾರೆ. ಶ್ರಾವಣ ತಿಂಗಳನ್ನು ಧರ್ಮದ ತಿಂಗಳೆಂದು ಭಾವಿಸಿಕೊಳ್ಳುವುದು ಇರುವುದರಿಂದ ಆ ತಿಂಗಳಲ್ಲಿ ಪ್ರಾಣಿಬಲಿ

ನಿಷೇಧವಾಗಿದೆ. ಆದುದರಿಂದ ಕೋಳಿಯ ಬದಲಾಗಿ ಕೋಳಿಯ ಜುಟ್ಟನ್ನು ಬಲಿಯಾಗಿ ಅರ್ಪಿಸುವ ಪ್ರಕ್ರಿಯೆ ಮಾನ್ಯತೆ ಪಡೆದುಕೊಂಡಿದೆ. ತನ್ನ ಅಮ್ಮ, ಅಪ್ಪನವರಿಗೆ ಭಯಂಕರವಾದ ರೋಗಗಳು ಸಂಭವಿಸಿದಾಗ ತಮ್ಮ ನಾಲಿಗೆ, ಕೈಕಾಲುಗಳನ್ನು ಹರಕೆಯಾಗಿ ನೀಡಿದ ದೃಷ್ಟಾಂತಗಳು ದೈನಂದಿನ ದಿನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇರುತ್ತವೆ.

ವಾರ್ಷಿಕವಾಗಿ ನಡೆಯುವ ಮಾರಿಪೂಜೆ, ಮಾರಿಜಾತ್ರೆ, ಹರಕೆಯ ಮಾರಿಪೂಜೆಯಲ್ಲಿ ಪ್ರಾಣಿಬಲಿಗಳು ನಡೆಯುತ್ತಿದ್ದವು. ಆದರೆ ಹರಕೆಯ ಮಾರಿಪೂಜೆ ಮತ್ತು ಸಂಕ್ರಮಣಕ್ಕೆ, ನಡೆಯುವ ಮಾರಿಪೂಜೆಯಲ್ಲಿ ಪ್ರಾಣಿಬಲಿ ಸಂಪೂಣವಾಗಿ ನಿಷೇಧವಾಗಿದೆ. ಅದರ ಬದಲಿಗೆ ಬೂದುಕುಂಬಳಕಾಯಿ ಪ್ರವೇಶ ಪಡೆದಿರುವುದು ಇದೆ.

ಮಾರಿಯಮ್ಮನ ಗರ್ಭಗುಡಿಯ ಎದುರಲ್ಲಿ ಬೂದುಕುಂಬಳ ಕಾಯಿಯನ್ನು ಕೊಯ್ದು ಬಲಿಯಾಗಿ ಅರ್ಪಿಸುವ ಪ್ರಕ್ರಿಯೆ ಇದೆ. ಕುಂಬಳಕಾಯಿ ಮೊದಲ ಸ್ಥಾನ ಪಡೆದಿದ್ದರೂ, ಪ್ರಾಣಿಬಲಿ ಅನಂತರ ನಡೆಯುತ್ತದೆ. ಇದಕ್ಕೆ ಸರ್ಕಾರದ ಪ್ರತಿಬಂಧಕ ಅಜ್ಞೆ ಇದ್ದರೂ ಅದನ್ನು ಉಲ್ಲಂಘಿಸಿ ಅಲಂಕಾರ ಮಾಡಿದ ಮಾರಿಯಮ್ಮನ ಗರ್ಭಗುಡಿಗೆ ಬಿಳಿ ಬಟ್ಟೆಯ ಪರದೆ ಹಾಕಿ ಮಾರಿಗುಡಿಯ ಹೊರಗಡೆ ಪ್ರಾಣಿಬಲಿ ನೀಡುತ್ತಾರೆ. ರವಿ ಎಚ್. ಅವರು ಬರೆದಿರುವ 'ಬದಲಾಗುತ್ತಿರುವ ಸಂದರ್ಭದಲ್ಲಿ ಗ್ರಾಮದೇವತೆಗಳ ಆಚರಣಾ ವಿಧಾನಗಳು' ಎಂಬ ಲೇಖನವು 'ದಿಕ್ಸೂಚಿ' ಎಂಬ ಸಂಚಿಕೆಯಲ್ಲಿ ೨೦೧೫ರಲ್ಲಿ ಪ್ರಕಟವಾಗಿದೆ. ಈ ಲೇಖನವು ಬಹಳ ವಿವೇಚಿಸುವ ಲೇಖನವಾಗಿದೆ. "ಆಧುನಿಕ ನಾಗರಿಕತೆಯ ತರ್ಕ ಒಂದು ಏಕರೂಪೀ ಜೀವನಕ್ರಮವನ್ನು ರೂಪಿಸುವುದಾಗಿದೆ. ಹಳೆಯ ಜ್ಞಾನವ್ಯವಸ್ಥೆಗಳು ಭಾವನಾಲಯಗಳು ತೀವ್ರ ರೀತಿಯ ಹಿಂಸೆಯನ್ನು ಅನುಭವಿಸಿ ಕಣ್ಮರೆಯಾಗುತ್ತಿವೆ. ಗ್ರಾಮದೇವತೆಗಳು ಮತ್ತು ಗ್ರಾಮದೇವತೆಗಳ ಆಚರಣೆಗಳು ಅತಿ ವೇಗವಾಗಿ ಕಣ್ಮರೆಯಾಗುತ್ತಿರುವ್ಯದನ್ನು ಈ ನಾಗರಿಕತೆಯ ತರ್ಕದಲ್ಲೇ ನೋಡಬೇಕಾಗಿದೆ. ಆಧುನಿಕ ಬಂಡವಾಳಶಾಹಿ ತನಗಿಂತ ಭಿನ್ನವಾದ ಲೋಕಗ್ರಹಿಕೆ, ನಂಬಿಕೆ, ಆಚರಣಾಕ್ರಮಗಳನ್ನು ನಿರ್ದಯವಾಗಿ ಹೊಸಕಿಹಾಕುತ್ತಿದೆ. ಆಧುನೀಕರಣದ ಸಂದರ್ಭದಲ್ಲಿ ಗ್ರಾಮದೇವತಾ ವ್ಯವಸ್ಥೆ ಸೂಚಿಸುತ್ತಿರುವ ಮೌಲ್ಯಗಳನ್ನು ಸಾರಾಂಶ ರೂಪದಲ್ಲಿ ಹೀಗೆ ಹೇಳಲಾಗುತ್ತದೆ. ಗ್ರಾಮದೇವತೆಗಳು ಸ್ತ್ರೀ ಚೈತನ್ಯ ಶಕ್ತಿಯ ಆರಾಧನೆ ಎಂದರೆ ತಪ್ಪಾಗಲಾರದು. ಕೆಳವರ್ಗಗಳು ಲೋಕವನ್ನು ನೋಡುವ ಕ್ರಮವನ್ನು ಇವು ಸೂಚಿಸುತ್ತವೆ. ಸ್ಥಳೀಯ ಅಥವಾ ಜಾನಪದೀಯ ಮೂಲದಿಂದ ಬಂದಿರುವ ಈ ಗ್ರಾಮದೇವತೆಗಳ ಪೂಜಾರಿಗಳು ಸಾಮಾನ್ಯವಾಗಿ ಹಿಂದುಳಿದ ಜಾತಿಗೆ ಸೇರಿದವರಾಗಿರುತ್ತಾರೆ. ಆದ್ದರಿಂದ ಗ್ರಾಮದೇವತೆಗಳು ಇಷ್ಟಪಡುವ ಆಹಾರಪದ್ಧತಿಗೆ ಸಂಬಂಧಿಸಿದ್ದೇ ಆಗಿರುತ್ತದೆ. ಮೈದುಂಬಿದಾಗ ಈ ದೇವತೆಗಳು ಅಪ್ಪಿತಪ್ಪಿಯೂ ಸಂತಸವನ್ನು ಬಳಸುವುದಿಲ್ಲ. ಆಯಾ ಜನವರ್ಗದ ಭಾಷೆ

ಉಪಭಾಷೆಗಳೇ ಆಗ ಬಳಕೆಯಾಗುವುದನ್ನು ಕಾಣಬಹುದು. ಹೀಗೆ ಗ್ರಾಮದೇವತೆಗಳು ನಮ್ಮ ಸಮಾಜದ ವೈದಿಕೇತರ ಜನವರ್ಗದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಗ್ರಾಮದೇವತೆಗಳ ಪರಿಕಲ್ಪನೆ ಮೂರು ನೆಲೆಗಳಲ್ಲಿ ಕ್ರಿಯಾಶೀಲವಾಗುತ್ತದೆ. ಅವು ಮನುಷ್ಯ ಮತ್ತು ಸಮಾಜ, ಮನುಷ್ಯ ಮತ್ತು ಮನುಷ್ಯ, ಮನುಷ್ಯ ಮತ್ತು ನಿಸರ್ಗ, ಈ ಸಂಬಂಧದ ನೆಲೆಯಲ್ಲಿ ಗ್ರಾಮದೇವತೆಯ ಪರಿಕಲ್ಪನೆ ವರ್ಣಸಂಕರದ ಮೇಲೆ ಹೇರಿದ ನಿಷೇಧವಾಗಿ ಕಾಣುತ್ತದೆ. ಆದರೆ ಮನುಷ್ಯ ಮತ್ತು ಸಮಾಜದ ನೆಲೆಯ ಒಟ್ಟು ಭಾವ ಸಂಬಂಧವನ್ನು ಸ್ಥಿರಗೊಳಿಸುವ ಸಾಧನವಾಗಿ ಕೆಲಸ ಮಾಡುತ್ತದೆ. ಯಾಕೆಂದರೆ ಗ್ರಾಮ ದೇವತೆಗಳ ಹಬ್ಬದಲ್ಲಿ ಪ್ರತಿಯೊಂದು ಜಾತಿಗೂ ಒಂದು ವೃತ್ತಿ ನಿಗದಿಯಾಗಿರುವುದನ್ನು ಕಾಣುತ್ತೇವೆ. ಅಸ್ಪೃಶ್ಯರ ಸಂಬಂಧದ ಈ ವೃತ್ತಿ ಅವಮಾನಕರವೆಂದು ಭಾವಿಸುವ ಜೊತೆಗೆ ಅದೇ ಅವರ ಶಕ್ತಿ ಎಂಬುದನ್ನು ಅಲ್ಲಗಳೆಯಲಾಗದು. ಹೀಗೆ ಒಟ್ಟು ಸಮಾಜದ ಸಮಗ್ರತೆಯನ್ನು ಕಾಯ್ದುಕೊಳ್ಳುವಲ್ಲಿ ಗ್ರಾಮದೇವತೆಯ ಪರಿಕಲ್ಪನೆ ಪೂರಕವಾಗಿ ಕೆಲಸ ಮಾಡಿದೆ. ಮನುಷ್ಯ ಮತ್ತು ನಿಸರ್ಗದ ನೆಲೆಯಲ್ಲಿ ಗ್ರಾಮದೇವತೆಯ ಪರಿಕಲ್ಪನೆ ಪ್ರಕೃತಿಯ ವಿವಿಧ ವ್ಯಾಪಾರಗಳ ಆರಾಧನೆಯಾಗಿದೆ. ನಿಸರ್ಗದ ವಿಕೋಪಗಳು ಗ್ರಾಮ ದೇವತೆಯ ಕೋಪದ ಪರಿಣಾಮವೆಂದು ತಿಳಿದ ನಮ್ಮ ಪೂರ್ವಿಕರು ಗ್ರಾಮದೇವತೆಗಳನ್ನು ವಿಶ್ವಾಸಗೊಳಿಸುವುದರಿಂದ ನಿಸರ್ಗದ ಕೃಪೆ ಗಳಿಸಲು ಸಾಧ್ಯವೆಂದು ಭಾವಿಸಿದರು. ಇದು ನಿಸರ್ಗದ ಸೃಜನಶೀಲತೆಯ ಜೊತೆಗೆ ಹೊಂದಾಣಿಕೆಯ ಮತ್ತು ಆರಾಧನೆಯ ರೂಪ. ನೈಸರ್ಗಿಕ ಕೊಡುಗೆಯ ಅತಿವೃಷ್ಟಿ ಮತ್ತು ಅನಾವೃಷ್ಟಿ ಎರಡರ ಸಂದರ್ಭದಲ್ಲಿ ಗ್ರಾಮದೇವತೆಯ ಹಬ್ಬವನ್ನು ಆಚರಿಸುತ್ತಾರೆ. ಹೀಗೆ ಮನುಷ್ಯ ಸಮಾಜ, ನಿಸರ್ಗದ ನೆಲೆಯಲ್ಲಿ ಗ್ರಾಮದೇವತೆಯ ಪರಿಕಲ್ಪನೆ ಕೆಲಸ ಮಾಡಿದೆ. ಇಂದಿನ ಆಧುನಿಕತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಹಳ್ಳಿಗಳಲ್ಲಿಯೂ ಬೆಳೆದುಕೊಂಡು ಬಂದಿವೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದ ಜನರು ಶಿಕ್ಷಣ ಪಡೆಯುತ್ತಿದ್ದುದರಿಂದ ಹಳ್ಳಿಗಳು ನಿಧಾನವಾಗಿ ನಗರೀಕರಣ ಹೊಂದುತ್ತಿವೆ. ಕಾಯಿಲೆಗೆ ಉತ್ತಮವಾದ ಚಿಕಿತ್ಸೆ ದೊರೆಯುತ್ತಿದೆ. ಈ ಯುಗದಲ್ಲಿ ಪ್ರಕೃತಿಯ ರಹಸ್ಯ ತಿಳಿದುಕೊಳ್ಳುವ ತನಕ ದೇವತೆಗಳಿಗೆ ಮೊರೆ ಹೋಗುವುದು ಏನೂ ಆಶ್ಚರ್ಯವಿಲ್ಲ. ಇನ್ನೂ ಅದೆಷ್ಟೋ ಶತಮಾನಗಳವರೆಗೂ ಇದು ಕನಸಿನ ಮಾತಾಗಬಹುದು. ಅಲ್ಲಿಯವರೆಗೆ ಮೀರಿದ ವಿಷಯಗಳಿಗೆ ಸಂಬಂಧಪಟ್ಟಂತೆ ಶಿಷ್ಟ ಹಾಗೂ ಜನಪದ ಗ್ರಾಮದೇವತೆಗಳಿಗೆ ಮೊರೆ ಹೋಗಬೇಕಾಗುತ್ತದೆ. ಗ್ರಾಮದೇವತೆಗಳ ಪ್ರಮುಖ ಸ್ಥಾನವೆಂದರೆ ಗ್ರಾಮವೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಈ ಗ್ರಾಮಗಳು, ಹಳ್ಳಿಯ ಸಂಸ್ಕೃತಿ ಸಂಪೂರ್ಣವಾಗಿ ನಶಿಸಿ ಹೋಗುವವರೆಗೆ ಗ್ರಾಮದೇವತೆಗಳ ಅಲ್ಲಿಯೆ ನೆಲೆಸುವರು. ಗ್ರಾಮದೇವತೆಯ ಹುಟ್ಟು ಮನುಷ್ಯ ಸಂಘಜೀವನ ನಡೆಸತೊಡಗಿನಿಂದ ಗ್ರಾಮಗಳನ್ನು

ಕಟ್ಟಿಕೊಂಡ ನಂತರದ ಪರಿಕಲ್ಪನೆಯಾಗಿದ್ದು, ಈ ಪರಿಕಲ್ಪನೆ ವಿಕಾಸವಾದಂತೆಲ್ಲ ಶಿಷ್ಟದೇವತೆಗಳ ಸಂಪರ್ಕ ಇವುಗಳಿಗೆ ಒದಗಿಬಂದು ಅವುಗಳು ಬದಲಾವಣೆಗೆ ಒಳಗಾಗುತ್ತವೆ. ಈ ಬದಲಾವಣೆಯ ಪ್ರಕ್ರಿಯೆ ಮುಖ್ಯವಾಗಿ ಕಂಡುಬರುವುದು ವೈದಿಕೀಕರಣದಲ್ಲಿ. ಹೀಗೆ ವೈದಿಕೀಕರಣಕ್ಕೆ ಒಳಗಾಗುವ ದೇವತೆಗಳು ಸ್ವರೂಪದಲ್ಲಿ, ಗುಣಸ್ವಭಾವದಲ್ಲಿ ಮತ್ತು ಆಚರಣೆಗಳಲ್ಲಿ ಬದಲಾವಣೆಗೆ ಒಳಗಾಗುತ್ತವೆ. ವೈದಿಕ ಅರ್ಚಕರ ಸಂಪರ್ಕ ಬಂದ ಕೂಡಲೇ ದೇವತೆಗಳ ಕಿವಿಯ ಮೇಲೆ ಸಂಸ್ಕೃತದ ಮಂತ್ರಘೋಷ ಬೀಳಲು ಪ್ರಾರಂಭವಾಗಿ ಜನಪದ ಪೂಜಾ ವಿಧಾನವೇ ಬದಲಾವಣೆಯಾಗುತ್ತದೆ. ಹಿಂದಿನ ಕೋಣ, ಕುರಿ, ಕೋಳಿಗಳ, ಬಲಿಯ ಬದಲು ಹೀಗೆ ತೆಂಗಿನ ಕಾಯಿ, ಬಾಳೆಹಣ್ಣು, ಕುಂಬಳಕಾಯಿ, ಮೃಷ್ಟಾನ್ನ ಭೋಜನದ ನೈವೇದ್ಯ ಆಗುತ್ತದೆ. ಕೆಲವು ಹಳ್ಳಿಗಳಲ್ಲಿ ಹರಿಮರಿ ಹರಿಯುವ ಬದಲು ಬಾಳೆಹಣ್ಣು ಬಾಯಿಯಿಂದ ಕತ್ತರಿಸಿ ತೆಗೆಯುವ ಪದ್ಧತಿ ರೂಢಿಗೆ ಬರುತ್ತಿದೆ.” ಎಂದು ಪ್ರಸ್ತಾಪ ಮಾಡುತ್ತಾರೆ.[೭]

ಯಾವುದೇ ಒಂದು ಹೊಸ ಸಂಪ್ರದಾಯ ಜನಪದರಲ್ಲಿ ಆಚರಣೆಗೆ ತರುವಾಗ ಹಳೆಯ ಸಂಪ್ರದಾಯ ಮತ್ತು ಅದರ ಪ್ರಭಾವ ಕಡಿಮೆಯಾಗುತ್ತದೆ. ಸಮಸ್ತ ಜನಪದರು ತಮ್ಮ ಫಸಲಿಗೆ ಹಾಗೂ ಕೌಟುಂಬಿಕವಾಗಿ ನಿರ್ಮಾಣವಾಗುವ ಸಮಸ್ಯೆಗಳಿಗೆ ತೊಂದರೆಯಾಗ ಬಾರದೆಂಬ ನಂಬಿಕೆ ಹಿನ್ನೆಲೆಯಲ್ಲಿ ಬಲಿಯನ್ನು ನೀಡಿ ಆರಾಧಿಸುತ್ತಾರೆ. ಇವು ಭೌಗೋಳಿಕವಾದ ಬದಲಾವಣೆಯನ್ನು ಪಡೆದುಕೊಳ್ಳುತ್ತಾ ಬಂದಿವೆ. ಕೋಣನ ಬಲಿಯ ಸ್ಥಾನದಲ್ಲಿ ಸಸ್ಯಾಹಾರಗಳು ಪ್ರಬಲವಾಗಿ ಪ್ರವೇಶವನ್ನು ಪಡೆದುಕೊಂಡಿರುವುದು ಕಾಣುತ್ತೇವೆ.

ಗ್ರಾಮೀಣ ಪ್ರದೇಶದಲ್ಲಿ ನಡೆಯುವ ದೇವತಾರಾಧನೆಯಲ್ಲಿ ಪ್ರಾಣಿಬಲಿ ಮಾಡುವ ಕೆಲಸ ದೂರವಾಗುತ್ತಿದೆ. ಧಾರ್ಮಿಕವಾಗಿ ಆಚರಣೆಗಳಲ್ಲಿ ತುಂಬಾ ಕಷ್ಟದ ಕೆಲಸಗಳನ್ನು ಮಾಡಲು ದಲಿತ ಜಾತಿಯವರು ಹಿಂಜರಿಯುತ್ತಿದ್ದಾರೆ. ಹಬ್ಬ, ಜಾತ್ರೆ ಸಂದರ್ಭದಲ್ಲಿ ಕಡಿದ ಕೋಣ, ಕುರಿಗಳ ಮಾಂಸವನ್ನು ಅವರು ತೆಗೆದುಕೊಳ್ಳಲು ನಿರಾಕರಿಸುವ ಸಂದರ್ಭ ಬಂದಿದೆ. ಇದೇ ಪರಂಪರೆ ಮುಂದೆಯೂ ಮುಂದುವರಿಯುತ್ತಿದೆ. ಕಾಲ ಕಾಲಾಂತರಗಳಿಂದ ಬಳಕೆಯಲ್ಲಿರುವ ಪ್ರಾಣಿಬಲಿ ಆಧುನಿಕ ಆರಾಧನಾ ಸಂದರ್ಭದಲ್ಲಿ ಪರಿವರ್ತನೆಗಳನ್ನು ಪಡೆದುಕೊಂಡಿರುವುದು ಮೇಲಿನ ಉಲ್ಲೇಖಗಳಿಂದ ಸ್ಪಷ್ಟಪಡಿಸಬಹುದು. ದೇವರಿಗೆ ಪ್ರಾಣಿಬಲಿ ಕೊಡುವ ಮತ್ತು ಪ್ರಾಣಿಗಳ ತಲೆಯನ್ನು ಕಡಿಯುವ ಕೆಲಸವನ್ನು ದಲಿತರಿಗೆ ಮೀಸಲು ಎಂದು ವಾದಿಸುವ ವಿಚಾರವಾದಿಗಳು ಅದಕ್ಕೆ ವಿರುದ್ಧವಾಗಿ ನಿಲ್ಲಬೇಕಾದ ಪರಿಸ್ಥಿತಿ ಉದ್ಭವವಾಗಿದೆ.

ಅಡಿ ಟಿಪ್ಪಣಿಗಳು

೧. ಸುಬ್ರಮಣಿ ಸುಣ್ಣಂಗೂರ್, ತುಳುನಾಡಿನ ಮಾರಿಯಮ್ಮ,

೨. ಸುಬ್ಬಣ್ಣ ರೈ, ಗಾಳೆಮ್ಮ, ಪುಟ ೧೭-೨೬

೩. ಸುಬ್ರಮಣಿ ಸುಣ್ಣಂಗೂರ್, ತುಳುನಾಡಿನ ಮಾರಿಯಮ್ಮ,

೪. ರಾಮಚಂದ್ರಪ್ಪ, ಪುಟ ೨

೫. ಸುಬ್ಬಣ್ಣ ರೈ, ಗಾಳೆಮ್ಮ, ಪುಟ ೨೯

೬. ಹೆಬ್ಬಾಲೆ ಕೆ. ನಾಗೇಶ್, ಜಾನಪದ ಕೆಲವು ವಿಚಾರಗಳು, ಪುಟ ೨೭.

೭. ರವಿ ಎಚ್., ಬದಲಾವಣೆಯಾಗುತ್ತಿರುವ ಆಚರಣಾ ವಿಧಾನಗಳು, ಪುಟ ೨೦-೨೧

ಅಧ್ಯಾಯ ಐದು

ಸಮಾರೋಪ

೫.೧. ಅಧ್ಯಯನದ ಫಲಿತಗಳು

ಅಧ್ಯಾಯ : ಐದು

ಸಮಾರೋಪ

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ನಮ್ಮ ಜನಪದರು ಗ್ರಾಮದೇವತೆಗಳಿಗೆ ಅನೇಕ ವಿಚಾರಕ್ಕೆ ಪ್ರಾಣಿಬಲಿಗಳನ್ನು ಕೊಡುವ ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಈ ಬಲಿ ಎನ್ನುವ ಶಬ್ದ ಒಂದು ಪ್ರಾಣಿಯನ್ನು ತಾನು ನೆಚ್ಚಿಕೊಂಡು, ನಂಬಿಕೊಂಡು ಬಂದ ದೇವಾನುದೇವತೆಗಳಿಗೆ ಅರ್ಪಿಸುವುದು ಎಂದು ತಿಳಿಸುತ್ತದೆ. ದಾನ ಎಂದರೆ ಮನುಷ್ಯನ ದೈನಂದಿನ ಬದುಕಿನಲ್ಲಿ ಬಳಸುವ ಯಾವುದೇ ವಸ್ತುವನ್ನು ಇತರಿಗೆ ಅಥವಾ ತಾನು ಆರಾಧಿಸುವ ದೈವಕ್ಕೆ ಅರ್ಪಿಸುವ, ಕೊಡುವುದರಿಂದ ಬಲಿದಾನ ಆಗುತ್ತದೆ.

ಪರಂಪರಾಗತವಾಗಿ ಬಂದ ದೈವಗಳ ಆರಾಧನಾ ಸಂದರ್ಭಕ್ಕೆ ಬಲಿದಾನ ನಡೆಯುವುದು ಪರಂಪರೆ. ಮನುಷ್ಯನಿಗೆ ಒದಗಿ ಬರುವ ನಾನಾ ತೊಂದರೆಗಳಿಂದ ತಪ್ಪಿಸಿಕೊಳ್ಳುವ ಪರಿಪಾಟದಿಂದ ಯಾವುದೋ ಒಂದು ಅಗೋಚರ ಶಕ್ತಿಗೆ ಬಲಿಕೊಡುವ ಸಂಪ್ರದಾಯವನ್ನು ರೂಢಿಸಿಕೊಂಡಿರಬೇಕು.

ಗುಡ್ಡಗಾಡು ಪ್ರದೇಶದಲ್ಲಿ ಬದುಕುವ ಹಿನ್ನೆಲೆಯಲ್ಲಿ ಆತನಿಗೆ ನಾನಾ ರೀತಿಯಲ್ಲಿ ತೊಂದರೆಗಳು ಉಂಟಾಗುತ್ತಿದ್ದವು. ಕಾಡಿನಲ್ಲಿ ವಾಸಿಸುವ ಸಂದರ್ಭ ಈ ಬಲಿದಾನ ಸಾಮಾನ್ಯವಾಗಿ ನಿರ್ಮಾಣಗೊಂಡಿರಬೇಕು ಎಂದು ಊಹಿಸಲು ಒಂದು ಅವಕಾಶ ಇದೆ. ಬೆಂಕಿ, ನೀರು, ಪ್ರಳಯ, ಗುಡುಗು, ಸಿಡಿಲು, ಭೂಕಂಪ ಮುಂತಾದವುಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ಬಲಿದಾನಗಳು ನಿರ್ಮಾಣವಾಗಿರಬೇಕು.

ಪ್ರಕೃತಿಯಲ್ಲಿ ಸೃಷ್ಟಿಯಾಗುತ್ತಿದ್ದ ಪ್ರಕೃತಿಯ ವೈಪರೀತ್ಯಗಳಿಗೆ ಯಾವುದೋ ಒಂದು ಅಗೋಚರ ಶಕ್ತಿಯೇ ಕಾರಣ ಎಂದು ಅರಿತುಕೊಂಡ ಮಾನವ ಆ ಅಗೋಚರ ಶಕ್ತಿಗೆ ಭಯಬೀತನಾಗಿ ಅದಕ್ಕೆ ತನ್ನ ಸುತ್ತಮುತ್ತ ಸಿಗುವ ವಸ್ತುಗಳಾದ ಮರದ ದಿಮ್ಮೆ, ಮೊನಚಾದ ಕಲ್ಲುಗಳನ್ನು ಅರ್ಪಿಸಿ ಸಂತೃಪ್ತಿಗೊಳಿಸುತ್ತಿದ್ದ. ಬದುಕನ್ನು ಅರ್ಥ ಮಾಡಿಕೊಂಡ ಮಾನವ ನಾಗರಿಕತೆಗಳ ಪಲ್ಲಟಗಳಿಂದ ತಾನು ತಯಾರಿಸಿದ, ನಿರ್ಮಿಸಿದ, ವಸ್ತುಗಳನ್ನು ಬಲಿದಾನವಾಗಿ ಅಗೋಚರ ಶಕ್ತಿಗೆ ಅರ್ಪಿಸಿದ.

ಪ್ರಪಂಚದಲ್ಲಿ ವಾಸ ಮಾಡುತ್ತಿರುವ ಬುಡಕಟ್ಟು ಸಮುದಾಯಗಳಲ್ಲಿ ಈ ಪ್ರಾಣಿಬಲಿಗಳು ಅಧಿಕಸಂಖ್ಯೆಯಲ್ಲಿ ಬಳಕೆಯಲ್ಲಿರುವುದು ಕಂಡುಬರುತ್ತವೆ. ವಿಶೇಷವಾದ ದಿನದಂದು ಅಥವಾ ವರ್ಷದಲ್ಲಿ ಒಂದು ದಿನ ನಿಗದಿ ಮಾಡಿಕೊಂಡು ತಾವು ಆಚರಿಸುವ ಹಬ್ಬ, ಹರಿದಿನಗಳಲ್ಲಿ ಪ್ರಾಣಿಬಲಿಯನ್ನು ಕೊಡುವುದು ವಾಡಿಕೆಯಾಗಿರುವುದನ್ನು ಕಾಣಬಹುದು. ತಮಿಳುನಾಡು ರಾಜ್ಯದ ಊಟಿ ಪ್ರದೇಶದಲ್ಲಿ ತೋಡ ಜನಾಂಗದವರು ವಿಶೇಷವಾಗಿ ಪ್ರಾಣಿಬಲಿಯನ್ನು ಮಾಡುತ್ತಾರೆ.

ಅಂಡಮಾನ್ ನಿಕೋಬಾರ್ ಪ್ರದೇಶದಲ್ಲಿ ತಿಸಾ ಜನಾಂಗದವರು ಪ್ರಾಣಿಬಲಿಯನ್ನು ಕೊಡುವುದನ್ನು ಕಾಣಬಹುದು. ಇದಲ್ಲದೇ ಜಪಾನ್, ಶ್ರೀಲಂಕಾ, ಪ್ರಾನ್ಸ್, ಅಮೆಜಾನ್ ಮೊದಲಾದ ಪ್ರದೇಶಗಳನ್ನು ಗಮನಿಸಬಹುದು. ಕರ್ನಾಟಕದಲ್ಲಿ ಮಲೆಕುಡಿಯ, ಹಕ್ಕಿಪಿಕ್ಕಿ, ಕುಡುಬಿ, ಸೋಲಿಗರು ಮುಂತಾದ ಬುಡಕಟ್ಟು ಸಮುದಾಯಗಳು ಪ್ರಾಣಿಬಲಿಯನ್ನು ಹೆಚ್ಚಾಗಿ ಮಾಡುತ್ತಾರೆ.

ಗ್ರಾಮದೇವತೆಗಳಾದ ಕಾಳಿ, ಮಾರಿ, ದುರ್ಗಿ, ಮಸಣಿ, ಮೈಲಾರಿ, ಭೈರ ಮುಂತಾದ ದೇವರುಗಳಿಗೆ ಪ್ರಾಣಿಬಲಿಯನ್ನು ಕೊಡುವುದು ಪರಂಪರಾಗತವಾಗಿ ರೂಢಿಯಲ್ಲಿವೆ. ಕಾಳಿ, ಮಾರಿ, ಮಸಣಿ, ದುರ್ಗಿ, ಭೈರ ಮುಂತಾದ ದೇವರುಗಳ ವಿಗ್ರಹಗಳನ್ನು ಕಲ್ಲುಗಳ ಮೇಲೆ ಕೆತ್ತಿರುವ ಶಿಲೆಗಳು ಭಾರತದ ಮೂಲೆಮೂಲೆಗಳಲ್ಲಿ ದೊರೆಯುತ್ತವೆ. ನಮ್ಮ ದೇಶ ಗ್ರಾಮಗಳಿಂದ ಕೂಡಿರುವುದರಿಂದ ಗ್ರಾಮಗಳನ್ನು ಆಳುತ್ತಿದ್ದ ದೊರೆಗಳ, ಸಾಮ್ರಾಟರ ಕಾಲದಲ್ಲಿ ಈ ಕೆತ್ತನೆಗಳು ಅಧಿಕವಾಗಿರುವುದು ಕಂಡುಬರುತ್ತದೆ.

ದೊರೆಗಳ ಸಾಮ್ರಾಟರ ಆಳ್ವಿಕೆಯ ಸಂದರ್ಭದಲ್ಲಿ ಕೋಟೆ ಕೊತ್ತಲುಗಳನ್ನು ನಿರ್ಮಾಣ ಮಾಡುತ್ತಿದ್ದರು. ಇವರ ಆಳ್ವಿಕೆಯ ಸಂದರ್ಭಕ್ಕೆ ಪ್ರಾಣಿಬಲಿಗಳನ್ನು ಅರ್ಪಿಸುತ್ತಿದ್ದರು ಎಂದು ಇತಿಹಾಸ ತಿಳಿಸುತ್ತದೆ. ದೊಡ್ಡ ದೊಡ್ಡ ಕೆರೆಗಳು, ದೇವಸ್ಥಾನಗಳು, ಭಾವಿಗಳು, ಕೋಟೆಗಳನ್ನು ಕಟ್ಟಬೇಕಾದರೆ ಅವುಗಳಿಗೆ ಪ್ರಾಣಿಬಲಿಗಳನ್ನು ಕೊಟ್ಟಿರುವ ನಿದರ್ಶನಗಳು ಇವೆ.

ಕರ್ನಾಟಕಾದ್ಯಂತ ಇರುವ ಪಾಳು ಬಿದ್ದಿರುವ ಕೋಟೆಗಳ, ಕೆರೆಗಳ, ಭಾವಿಗಳ ಪಕ್ಕದಲ್ಲಿ ನೆಟ್ಟಿರುವ ಶಿಲಾಕಂಬಗಳಲ್ಲಿ, ಕಲ್ಲುಬಂಡೆಗಳಲ್ಲಿ ಪ್ರಾಣಿಬಲಿ ಕೊಟ್ಟಿರುವ ಪುರಾವೆಗಳು ಸಿಗುತ್ತವೆ. ಇಂತಹ ವಿಶೇಷಗಳಿಗೆ ಪ್ರಾಣಿಗಳಾದ ಕುರಿ, ಮೇಕೆ, ಆಡು, ಹಂದಿ, ಕೋಣ ಮುಂತಾದವುಗಳನ್ನು ಕೊಡುತ್ತಿದ್ದರು. ಕೆಲವು ಪ್ರದೇಶಗಳಲ್ಲಿ ಪಕ್ಷಿಗಳನ್ನು ಬಲಿದಾನವಾಗಿ ಕೊಟ್ಟಿರುವ ಪರಂಪರೆಯನ್ನು ಕಾಣಬಹುದು.

ಸಾಮಾಜಿಕವಾಗಿ ನಿರ್ಮಾಣವಾಗಿರುವ ಪ್ರಾಣಿಬಲಿಯ ಅರ್ಥ ಹುಡುಕುತ್ತಾ ಹೋದರೆ ಅನೇಕ ರೀತಿಯ ಅಭಿಪ್ರಾಯಗಳು ಬರುತ್ತವೆ. ಪ್ರಧಾನವಾಗಿ 'ನಂಬಿಕೆ' ಮತ್ತು 'ದಯೆ' ಎಂಬ ಭಾವನೆಗಳು ಮೂಡುತ್ತವೆ. ಈ ಭಾವನೆಗಳ ಹಿನ್ನೆಲೆಯಲ್ಲಿಯೇ ಜನಪದರ ಮಾನಸಿಕ

ತುಮುಲಗಳು ಉದ್ಭವಿಸುತ್ತವೆ. ತಮ್ಮ ತಮ್ಮ ಜೀವನದ ಭಾವನೆಗಳನ್ನು ಸ್ವಂತಿಕೆ ಮಾಡಿಕೊಳ್ಳಲು ಪ್ರಾಣಿಬಲಿಗಳನ್ನು ನಡೆಸುತ್ತಾರೆ. ಒಂದರ ಮೇಲೊಂದು ಮತ್ತೊಂದು ದಬ್ಬಾಳಿಕೆ ಮಾಡುವುದು (ನಾಗರಹಾವು-ಇಲಿ, ಹೆಬ್ಬಾವು-ನಾಯಿ, ಹಲ್ಲಿ-ಕೀಟ) ಅನೇಕ ಶತಮಾನಗಳಿಂದ ನಡೆದುಕೊಂಡು ಬಂದ ನಿಯಮಗಳಾಗಿವೆ. ಆದುದರಿಂದ ಇಲ್ಲಿ ಮಾನವನ ಏಳಿಗೆಯೇ ಪ್ರಶ್ನೆಯಾಗಿ ಮುಖ್ಯವಾಗುತ್ತದೆ.

ಈ ಏಳಿಗೆಯ ಪರಮಾವಧಿಯಲ್ಲಿ 'ರಕ್ತತರ್ಪಣಗಳು' ಬೇಕಾಗುತ್ತವೆಂದು ಮಾನವ ಆಲೋಚಿಸುತ್ತಾನೆ. ಯುದ್ಧಗಳನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಅನೇಕ ಜನರನ್ನು ಸಾಯಿಸಿ ರಕ್ತತರ್ಪಣ ಮಾಡಿರುವ ಸಂಗತಿಗಳು ಇತಿಹಾಸದಲ್ಲಿ ನೋಡುತ್ತವೆ. ಸೂರ್ಯದೇವರಿಗೆ ರಕ್ತತರ್ಪಣವೆಂದರೆ ತುಂಬ ಪ್ರೀತಿ ಎಂಬುದು ಕೆಲವು ಪ್ರಾಚೀನ ಕಾಲದಲ್ಲಿ ನಡೆಯುತ್ತಿದ್ದ ಆಚರಣೆಗಳ ಛಾಯಾಚಿತ್ರಗಳಿಂದ ತಿಳಿಯಬಹುದು.

ಮಾನವನ ಹೃದಯವನ್ನು ಕತ್ತರಿಸಿ ಸೂರ್ಯದೇವರಿಗೆ ಅರ್ಪಿಸುವುದು ಪ್ರಾಚೀನ ಸಮುದಾಯದಲ್ಲಿ ಇತ್ತು ಎಂದು ಅನೇಕ ಉದಾಹರಣೆಗಳು ಹೇಳುತ್ತವೆ. ಈ ಆಚರಣಾ ರೀತಿಯಲ್ಲಿ ಮಾರ್ಪಾಟಾಗಿರುವುದು ಗುರುತಿಸಬಹುದು. ಇತಿಹಾಸವನ್ನು ಕೆದಕಿ ಹೊರಟಾಗ ನಾಗರಿಕತೆಗಳ ಉಗಮ ನಮ್ಮನ್ನು ವಾಸ್ತವತೆಯ ಕೂಪಕ್ಕೆ ತಳ್ಳಿದರೆ ಅಲ್ಲಿ ಈ ಎಲ್ಲಾ ಗೊಂದಲಗಳಿಗೂ ಸರಿಯಾದ ಉತ್ತರ ಸಿಗುತ್ತವೆ. ಯಾಕೆಂದರೆ ಮಾನವನಿಗೆ ಬದುಕಿನ ಅರ್ಥ ಎಂಬುದು ಇಂದಿಗೂ ಸರಿಯಾಗಿ ಆಗಿಲ್ಲ. "ಹುಟ್ಟು ಉಚಿತ ಸಾವು ಖಚಿತ" "ಬದುಕಿಗೆ ಯಾವುದೋ ಒಂದು ಶಕ್ತಿಯೇ ಕಾರಣ" ಎನ್ನುವ ಸತ್ಯದ ಮಾತುಗಳನ್ನು ನಂಬಿ ಬದುಕುತ್ತಿದ್ದಾನೆ.

ನೈಸರ್ಗಿಕ ಸಂಪನ್ಮೂಲಗಳ ಪ್ರಕೃತಿಯ ಜೊತೆಗಿನ ಮಾನವನ ಒಡನಾಟ ಒಂದಿಷ್ಟು ಆವಿಷ್ಕಾರಗಳಿಗೆ ದಾರಿ ಮಾಡಿಕೊಟ್ಟಿರುವುದನ್ನು ಇಂದು ಆಗಿರುವ ಬದಲಾವಣೆಗಳೇ ತಿಳಿಸಿ ಕೊಡುತ್ತವೆ. ಮನುಷ್ಯನ ಮೂಲ ಯಾವುದು ಎನ್ನುವುದನ್ನು ಹುಡುಕಿ ಸೋತ ಮನುಷ್ಯ ಒಂದಿಷ್ಟು ಆಚಾರ ವಿಚಾರಗಳೆಂಬ ಸಂಕೋಲೆಗಳನ್ನು ಸೃಷ್ಟಿಸಿ ಬದುಕಿಗೊಂದು ಹೊಸ ವ್ಯಾಖ್ಯಾನವನ್ನು ನೀಡಿ ಎಲ್ಲರೂ ಅದನ್ನು ಸ್ವೀಕರಿಸುವ ಪರಾಕಾಷ್ಠೆಗೆ ತಲುಪಿದ್ದಾನೆ. ಈ ಎಲ್ಲದಕ್ಕೂ ಆತ ಜೀವಂತವಾಗಿರುವುದೇ ಕಾರಣ ಎಂದರೆ ಅತಿಶಯೋಕ್ತಿ ಎನಿಸಲಾರದು. ಕಾರಣ ತನ್ನ ಜೀವಂತಿಕೆಗಾಗಿ ಆತ ಆಹಾರಗಳನ್ನು ಅರಸುತ್ತ ಹೊರಟ. ಅಲ್ಲಿ ಅವನಿಗೆ ತಿನ್ನಲು ಯೋಗ್ಯ-ಅಯೋಗ್ಯ, ಆಹಾರ ಪದಾರ್ಥಗಳ ಅರಿವಾಯಿತು. ಪ್ರಾರಂಭದಲ್ಲಿ ತನ್ನನ್ನು ನಂತರ ತನ್ನವರನ್ನು ಹಸಿವಿನ ಕೈಯಿಂದ ಮುಕ್ತಿ ನೀಡುವುದಕ್ಕಾಗಿ ಪ್ರಾಣಿಬಲಿಗಳನ್ನು ಮಾಡಿದ ಎಂದು ಗುರುತಿಸಬಹುದು. ಇದಕ್ಕೆ ನಾವು ವೈಜ್ಞಾನಿಕವಾಗಿ ಇಂದು ಆಹಾರ ಸರಪಳಿಯನ್ನು ಗಮನಿಸಬಹುದು. ಪ್ರತಿಯೊಂದು ಜೀವಿಯ ತಾನೂ ಇನ್ನೊಂದು ಜೀವಿಯ ಆಹಾರ

ಎನ್ನುವುದನ್ನು ಮರೆತು ಮೊದಲು ತನ್ನ ಹಸಿವನ್ನು ನಿವಾರಿಸಿಕೊಳ್ಳಲು ಹವಣಿಸುವುದು ಇದರಿಂದ ತಿಳಿಯುತ್ತದೆ.

ಜೀವಂತಿಕೆಯ ಅರ್ಥಕ್ಕೆ ಹೊಸ ವ್ಯಾಖ್ಯಾನ ಬಂದಿದ್ದರೆ ಅದು ಕೇವಲ ಹಸಿವು ಎನ್ನುವ ಪದ ಮಾತ್ರ. ಈ ಹಸಿವು ಎನ್ನುವ ಪದ ಹೊಸ ಹೊಸ ಯೋಚನೆಗಳನ್ನು, ಆಲೋಚನಾ ಕ್ರಮಗಳನ್ನು ರೀತಿ–ನೀತಿ, ರಿವಾಜುಗಳನ್ನು ಸೃಷ್ಟಿಸಿಕೊಂಡು ಅನೇಕ ಅಂತರ ಅವಾಂತರಗಳನ್ನು ಸೃಷ್ಟಿಸಿರುವುದು ಅಚ್ಚರಿಯ ಸಂಗತಿಯಲ್ಲ. ಬದಲಾಗಿ ಗಡ್ಡೆ ಗೆಣಸುಗಳಿಂದ ಹಿಡಿದು ಇಂದು ಸಸ್ಯ, ಮಾಂಸ ತಿನ್ನುವುದರ ಕಡೆಗೆ ಹೊರಳಿ ಅದೆಷ್ಟೋ ಸಂವತ್ಸರಗಳು, ಶತಮಾನಗಳು ಕಳೆದಿರುವುದರಲ್ಲಿ ಅನುಮಾನವಿಲ್ಲ.

'ಪರಿವರ್ತನೆ ಜಗದ ನಿಯಮ' ಎನ್ನುವ ಮಾತಿನ ಅಧಾರದ ಮೇಲೆ ಇಂದು ನೀವೆಲ್ಲರೂ ನಿಂತಿದ್ದೇವೆ. ಮನುಷ್ಯ ತಾನು ತನ್ನವರು ಎಂಬುವುದನ್ನು ವಿಂಗಡಣೆ ಮಾಡಿಕೊಂಡಿರುವುದರ ಬಗ್ಗೆ ಈ ಆಹಾರ ಪದ್ಧತಿಯ ಮೂಲಕ ತಿಳಿಯಬಹುದು. "ವೇದಗಳಲ್ಲಿ ಪ್ರಾಣಿಬಲಿ ಇದೆ. ಪ್ರತಿಯೊಂದು ಪೂಜೆಯಲ್ಲಿ ಒಂದಿಲ್ಲೊಂದು ವಿಧದಿಂದ ಪ್ರಾಣಿಬಲಿ ನಡೆಯಲೇಬೇಕು. ಪ್ರಾಣಿಬಲಿ ಅತಿಯಾದಂತೆ ಜನತೆಯಲ್ಲಿ ಅದರ ಬಗ್ಗೆ ತಿರಸ್ಕಾರ ಮೂಡುತ್ತಿರುತಿತ್ತು. ಈ ಪದ್ಧತಿ ಆತನಿಗೆ ಹೇಸಿಗೆ ಅನ್ನಿಸಿರಬೇಕು. ಕೊನೆ ಕೊನೆಗೆ ಜನರಲ್ಲಿ ವೈದಿಕ ಧರ್ಮದ ಬಗ್ಗೆ ಜಿಗುಪ್ಸೆ ಬಂದಿರಲು ಸಾಕು. ಬೇರೆ ಯಾವುದೇ ಒಂದು ಧರ್ಮವನ್ನು ಸ್ವಾಗತಿಸಲು ಆತುರರಾಗಿರಲು ಸಾಕು" 'ಯಾರು ಸಸ್ಯಹಾರಿಗಳೋ ಅವರು ಶ್ರೇಷ್ಠರು', 'ಯಾರು ಮಾಂಸಹಾರಿಗಳು ಅವರು ಕನಿಷ್ಠರು' ಎನ್ನುವುದಾಗಿ ಇಲ್ಲಿ ಕೂಡಾ ಹೊಸ ಬದಲಾವಣೆ ಎಂಬಂತೆ 'ಸಸ್ಯಾಹಾರಿಗಳು ದುರ್ಬಲರು' 'ಮಾಂಸಾಹಾರಿಗಳೂ ಸದೃಢರು' ಎನ್ನುವ ಚಿಂತನೆ ಇನ್ನೂ ಇದೆ. 'ಸಸ್ಯಾಹಾರಿಗಳು ಬುದ್ಧಿವಂತರು' 'ಮಾಂಸಾಹಾರಿಗಳು ಮಂದಬುದ್ಧಿಯವರು' ಎನ್ನುವ ಕಲ್ಪನೆ ಕೂಡ ಇದೆ. ಇಂತಹ ಮಾತುಗಳು ಗ್ರಾಮೀಣ ಬದುಕಿನಲ್ಲಿ ಹಾಸು ಹೊಕ್ಕಾಗಿದೆ. ಹೀಗೆ ಆಹಾರಪದ್ಧತಿಯ ನೆಲೆಯಿಂದ ವಿಂಗಡನೆಯಾದ ಅಂತರವನ್ನು ಕಂಡುಕೊಂಡ ಜನಜೀವನ ಹೊಸ ಆಯಾಮವೊಂದನ್ನು ತಾನಾಗಿಯೇ ಸೃಷ್ಟಿಸಿ ಕೊಂಡಿರುವುದರಲ್ಲಿ ಬಾಯಿಬಿಟ್ಟು ಕಣ್ಣು ಮಿಟುಕಿಸುವ ಅಂಶವೇನಿಲ್ಲವೆಂಬ ಭಾವನೆ ಇಲ್ಲಿ ನಿರ್ಮಾಣವಾಗಿದೆ. ಇಲ್ಲಿ 'ಯಾರು ಪವಿತ್ರರು', 'ಯಾರು ಅಪವಿತ್ರರು' ಎನ್ನುವ ಪ್ರಶ್ನೆ ಎದುರಾದಾಗ ಮಾತ್ರ ಸೃಷ್ಟಿಯ ಅಚ್ಚರಿ ತಿಳಿಯುತ್ತದೆ.

ಪ್ರಾಣಿಬಲಿಯಂತಹ ಸಂಪ್ರದಾಯದಗಳು ಮೇಲಿನ ಮಾತುಗಳಿಗೆ ಪುಷ್ಟಿ ಕೊಡುತ್ತವೆ. "ದೇವತೆಯ ಹೆಸರಿನಲ್ಲಿ ಪ್ರಾಣಿಹಿಂಸೆಯನ್ನು ಅರ್ಥಾತ್ ಬಲಿಯನ್ನು ನಿಷೇಧಿಸಿ ಸರಕಾರವು ಕಾನೂನನ್ನು ಜಾರಿಗೆ ತಂದಿದೆ. ಹಳ್ಳಿಗಾಡಿನಂತಹ ಒಳಪ್ರದೇಶಗಳಲ್ಲಿ ಇಂತಹ ಕಾಯಿದೆ ಕಾನೂನುಗಳು ಅಷ್ಟೊಂದು ಫಲಕಾರಿಯಾಗಿಲ್ಲವಾದರೂ ನಗರ ಮಧ್ಯದ ಗುಡಿಗಳಲ್ಲಿ ಕೆಲಮಟ್ಟಿಗೆ

ಫಲಕಾರಿಯಾಗಿದೆ. ಹಾಗಾಗಿ ನೇರವಾದ ಬಲಿಯ ಬದಲಿಗೆ ಹಲವು ಬಗೆಯ ಸಾಂಕೇತಿಕ ಬಲಿಯ ವಿಧಾನಗಳು ಅಸ್ತಿತ್ವಕ್ಕೆ ಬಂದಿವೆ"(ಸುಬ್ಬಣ್ಣ ರೈ ೧೯೯೮, ಪುಟ. ೪) ಸರ್ಕಾರದ ನಿಯಮಗಳ ಬಗ್ಗೆ ಚರ್ಚೆ ಮಾಡುತ್ತಾರೆ. ಮಾನವ ಆಹಾರದ ಹಿನ್ನೆಲೆಯಲ್ಲಿ ಪ್ರಾಣಿಬಲಿಗಳನ್ನು ದೇವರಿಗೆ ಅರ್ಪಿಸಿ ತಿನ್ನುವ ಪರಂಪರೆ ಬೆಳೆಸಿಕೊಂಡಿದ್ದಾನೆ.

ಹಸಿವು ತೋರಿಸಿಕೊಟ್ಟ ಮಾರ್ಗ, ಅದರಿಂದ ತಲುಪಿದ ಗುರಿ, ಕಂಡುಕೊಂಡ ಸತ್ಯ ಇವೆಲ್ಲವುಗಳನ್ನು ವಿವೇಚಿಸುವ ಶಕ್ತಿಯನ್ನು ಹೊಂದಿದ ಜೀವ ತನ್ನ ಉದ್ಧಾರದ ಮಾರ್ಗವನ್ನು ತಾನೇ ಸೃಷ್ಟಿಸಿಕೊಂಡಿತ್ತು. ಆದರೆ 'ಹಸಿವು' ಎಂದು ಬಂದಾಗ ಈ ವಿವೇಚನೆಗೆ ಅವಕಾಶವನ್ನು ಶೇಕಡಾಂಶದಲ್ಲಿ ಗುರುತಿಸುವ ಬುದ್ಧಿಮಟ್ಟ ಬೆಳೆಯುವುದರೊಳಗೆ ಹೊಸ ಬಗೆಯ ನಿಲುವುಗಳು ಹುಟ್ಟಿ 'ಸಂಸ್ಕೃತಿ' ಎನ್ನುವ ಪದ ರೂಪತಾಳಿತು ಎಂದು ಗುರುತಿಸಬಹುದು. ಈ ಹಸಿವಿನ ಸಂಸ್ಕೃತಿಯೇ ದೇವರ ಹೆಸರಿನಲ್ಲಿ ಪ್ರಾಣಿಬಲಿ ಮಾಡಿ ಆಹಾರವಾಗಿ ಸ್ವೀಕರಿಸುವುದನ್ನು ಕಂಡುಕೊಂಡಿರಬಹುದು.

ಮಾನವ ಈ ಎಲ್ಲಾ ಗೊಂದಲ ವಿಚಾರಧಾರೆಯೊಂದಿಗೆ ಬದುಕಿನ ಯಾತ್ರೆ ಸಾಗುತ್ತಿರುವ ಸಂದರ್ಭದಲ್ಲಿ ಗೋಚರಿಸುವ ಅಂಶಗಳು ಭಾಷೆ, ಜಾತಿ, ಆಸ್ತಿ, ಗುಡಿ, ಚರ್ಚು, ಮಸೀದಿ, ದೈವ, ದೇವರು ಇವುಗಳಷ್ಟೇ ಅಲ್ಲದೆ ಗಾಳಿ, ನೀರು, ಅಗ್ನಿ, ಭೂಮಿ, ಆಕಾಶ ಎನ್ನುವ ಪಂಚಭೂತಗಳ ಸಹಕಾರದಿಂದ ಮಾಡಲ್ಪಟ್ಟ ಪ್ರಪಂಚದ ಎಲ್ಲಾ ವಸ್ತುಗಳು ತನ್ನನ್ನು ಉನ್ನತಿಗೆ ಕೊಂಡೊಯ್ಯುವ ಹುಡುಕಾಟದ ಹೋರಾಟ ತಿಳಿದುಬರುತ್ತದೆಂದು ಮೂಲಭೂತವಾಗಿ ಗಮನಿಸಬಹುದಾಗಿದೆ. "ಇದೇ ಸಮಯಕ್ಕೆ ಎರಡು ಧರ್ಮಗಳು ತಲೆ ಎತ್ತಿದವು ಒಂದು ಜೈನ ಧರ್ಮ ಎರಡನೆಯದು ಬೌದ್ಧಧರ್ಮ. ಇವೆರಡೂ ಧರ್ಮಗಳು ಪ್ರಾಣಿಬಲಿ ಹಾಗೂ ಪ್ರಾಣಿಹಿಂಸೆಗಳನ್ನು ಸಂಪೂರ್ಣವಾಗಿ ನಿಷೇಧಿಸಿದವು. ಜನರು ಈ ಧರ್ಮಗಳ ತತ್ವಗಳಿಗೆ ಮಾರುಹೋದರು. ಗುಂಪು ಗುಂಪಾಗಿ ಈ ಧರ್ಮಕ್ಕೆ ಸೇರಿದರು. ಊರಿಗೆ ಊರೆ ಧರ್ಮಾಂತರ ಗೊಂಡವು. ರಾಜಕ್ಕೆ ರಾಜ್ಯಗಳೇ ಧರ್ಮಕ್ಕೆ ಬದಲಾವಣೆಯಾದವು; ಶಾಂತಿಮಾರ್ಗ ಹಿಡಿದವು. ಪ್ರಾಣಿ ಬಲಿ ಪ್ರಾಣಿ ಹಿಂಸೆಗಳು ಮಾಯವಾದವು"(ಪುಟ ೧೪). ಈ ಎಲ್ಲಾ ವರ್ಗ, ವರ್ಣ, ಜೀವಂತಿಕೆಯ ವಿಚಾರ ಇಂದು ಉಳ್ಳವರು, ಇಲ್ಲದವರನ್ನು ಸೃಷ್ಟಿಸಿ, 'ಬುದ್ಧಿವಂತರು ಮತ್ತು ಬುದ್ಧಿ ಹೀನರು' ಎಂಬುದನ್ನು ಗುರುತಿಸಿ ತನ್ನ ಮುಷ್ಟಿಯೊಳಗೆ ಸಮಷ್ಟಿಯಿರಬೇಕು ಎನ್ನುವುದನ್ನು ಹವಣಿಸುತ್ತಿರುವ ಅಂಶಗಳನ್ನು ಗುರುತಿಸಬಹುದು.

ಇದೇ ಹಿನ್ನೆಲೆಯಲ್ಲಿ ಕ್ರಮಿಸಿದ ಜನಜೀವನ ಇಂದು ನೆಲ-ಜಲಕ್ಕಾಗಿ ಮಾತ್ರವಲ್ಲ ಆಹಾರದ ವಿಷಯದಲ್ಲೂ ಹೋರಾಟ ನಡೆಸುತ್ತಿರುವುದು ಪ್ರಾಣಬಲಿಯ ವಿಚಾರದಲ್ಲಿ ನಡೆಯುತ್ತಿರುವ ಚರ್ಚೆಯ ಮೂಲಕ ತಿಳಿದುಬರುತ್ತದೆ. "೧೨ನೇ ಶತಮಾನದ ಸುಮಾರಿಗೆ ಕರ್ನಾಟಕದಲ್ಲಿ ಮತ್ತೊಂದು ಕ್ರಾಂತಿಯಾಯಿತು. ಅದರ ನೇತೃತ್ವವನ್ನು ಬಸವೇಶ್ವರರು

ವಹಿಸಿದರು. ನೂರಾರು ಶರಣರು ಒಂದೆಡೆ ಕೂಡಿದರು. ಪ್ರಾಣಿಬಲಿ ಪ್ರಾಣಿಹಿಂಸೆಗಳನ್ನು ನಿರ್ದಾಕ್ಷಿಣ್ಯವಾಗಿ ವಿರೋಧಿಸಿದರು"(ಪುಟ ೧೪).

ಇಂದು ದೇಶದಾದ್ಯಂತ ವಿಚಾರ ವಿನಿಮಯಕ್ಕೆ ಸಾಕ್ಷಿಯಾದ ಈ ವಿಚಾರ ಕೇವಲ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲದೇ ಹಲವು ರಾಜ್ಯಗಳ ಒಕ್ಕೂಟವಾದ ಭಾರತದ ದೇಶದ ಪ್ರಮುಖ ಸಮಸ್ಯೆಗಳಲ್ಲಿ ಒಂದು ಎಂಬಂತೆ ಭಾಸವಾಗುತ್ತದೆ. ಪ್ರಾಣಿಬಲಿ ಎಂದರೆ ಕೇವಲ ಅವುಗಳನ್ನು ಬಲಿ ಕೊಡುವುದು ಎನ್ನುವುದಾಗಿ ಅಲ್ಲ. ಯಾವ ಕಾರಣ-ಉದ್ದೇಶಗಳು ಇದರ ಹಿನ್ನಲೆಯಾಗಿವೆ ಎನ್ನುವುದು ಪ್ರತಿಯೊಬ್ಬರ ಚಿತ್ತವನ್ನು ಕೆದಕಿದಾಗ ಮಾತ್ರ ಇದಕ್ಕೊಂದು ಸ್ಪಷ್ಟೀಕರಣ ದಕ್ಕುತ್ತದೆ. ಪೂರ್ಣ ಪ್ರಮಾಣದ ವಿವರಗಳು ದೊರೆಯುತ್ತವೆ.

"ಗ್ರಾಮದೇವತೆಗಳಲ್ಲಿ ಹೆಚ್ಚಿನವುಗಳು ಉಗ್ರದೇವತೆಗಳಾಗಿರುತ್ತವೆ. ಆಯಾ ಪ್ರದೇಶದ ದೇವತೆಗಳು ನಿರ್ವಹಿಸುವ ಕಾರ್ಯವಿಧಾನದ ಹಿನ್ನೆಲೆಯಲ್ಲೂ ಅವುಗಳನ್ನು ವಿಭಾಗಿಸಿ ಕೊಳ್ಳಬಹುದಾಗಿದೆ. ಇದರಂತೆ ಸಂತಾನ ಸಾಂಪ್ರದಾಯಿಕ ದೇವತೆಗಳು, ಮಳೆ ತರುವ ದೇವತೆಗಳು, ಬೆಳೆ ತರುವ ಹುಲುಸಿನ, ಸಮೃದ್ಧಿಯ ದೇವತೆಗಳು, ರೋಗ ರುಜಿನಗಳನ್ನು ಹರಡುವ ದೇವತೆಗಳು ಮತ್ತು ನಿವಾರಿಸುವ ದೇವತೆಗಳು, ವಿಶೇಷವಾಗಿ ಜಾನುವಾರುಗಳಿಗೆ ಅಂಟಿದ ರೋಗಗಳನ್ನು ಪರಿಹರಿಸುವ ದೇವತೆಗಳು, ಸರ್ವ ಇಷ್ಟಾರ್ಥಗಳನ್ನು ಈಡೇರಿಸುವ ದೇವತೆಗಳು ಎಂಬುದು ಹಲವು ಬಗೆಗಳನ್ನು ಗುರುತಿಸಬಹುದು"(ಸುಬ್ಬಣ್ಣ ರೈ, ೧೯೯೮, ಪುಟ ೪).

ಬಳ್ಳಾರಿ ಜಿಲ್ಲೆಯಾದ್ಯಂತ ಇಂತಹ ದೇವತೆಗಳೇ ಹೆಚ್ಚು. ರೋಗಗಳನ್ನು ಪರಿಹರಿಸುವ, ಸರ್ವ ಇಷ್ಟಾರ್ಥಗಳನ್ನು ಈಡೇರಿಸುವ ಪ್ರಮುಖ ದೇವತೆಗಳನ್ನೇ ಪ್ರಾದೇಶಿಕವಾಗಿ ಗುರುತಿಸುತ್ತೇವೆ. ಹೊಸಪೇಟೆ, ಕೂಡ್ಲಿಗಿ, ಹೂವಿನಹಡಗಲಿ, ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಸಿರುಗುಪ್ಪ ಮುಂತಾದ ತಾಲೂಕುಗಳಲ್ಲಿ ಮೇಲೆ ಉಲ್ಲೇಖಿಸಿದ ದೇವತೆಗಳಿಗೆ ಬಲಿ ಹೆಚ್ಚಾಗಿ ಕೊಡುತ್ತಾರೆ.

ಪ್ರಾಣಿಬಲಿಗಳು ಬಳ್ಳಾರಿ ಜಿಲ್ಲೆಯಲ್ಲಿಯೇ ಅಲ್ಲದೇ ವಿಶ್ವದಾದ್ಯಂತ ಬೇರೆ ಬೇರೆ ಕಾರಣಗಳಿಂದ ನಡೆಯುತ್ತಿದೆ. ಕೆಲವೊಂದು ಪ್ರಾಣಿಗಳನ್ನು ಆಹಾರಕ್ಕಾಗಿ ಬಳಸಿದರೆ ಇನ್ನು ಕೆಲವು ಪ್ರಾಣಿಗಳನ್ನು ಸಾಂಪ್ರದಾಯಿಕ ಆಚರಣೆಗಳ ನೆಪವೊಡ್ಡಿ ಬಲಿ ನೀಡುವುದನ್ನು ಹೆಚ್ಚಾಗಿ ಕಾಣಬಹುದು.

ಪ್ರಾಣಿಗಳನ್ನು ಬಲಿ ಕೊಡುವ ಪ್ರಕ್ರಿಯೆ ಯಾವಾಗಿನಿಂದ ಆರಂಭವಾಯಿತು, ಹೇಗೆ ಪ್ರಾರಂಭವಾಯಿತು, ಎಂದು ಚಿಂತನೆ ಮಾಡಿದಾಗ ಭೂಮಿಯ ಮೇಲೆ ಮಾನವನ ಉದಯ ಆದಾಗ ಆತ ಹಸಿವಿನ ನಿವಾರಣೆಗಾಗಿ ಪ್ರಾಣಿಗಳನ್ನು ಆಹಾರವಾಗಿ ಬಳಸಿಕೊಂಡ ನಂತರದ ದಿನಗಳಲ್ಲಿ ತನ್ನ ಹಸಿವನ್ನು ತಣಿಸಲು ಬೇಟೆ ಮಾರ್ಗವನ್ನು ಕಂಡುಕೊಂಡಿರುವುದು ತಿಳಿದು

ಬರುತ್ತದೆ. "ವೈದಿಕವನ್ನು ನಡೆಸುತ್ತಿದ್ದ ಬ್ರಾಹ್ಮಣರಿಗೂ ಪ್ರಾಣಿವಧೆ ಪ್ರಾಣಿಹಿಂಸೆ ಬೇಡವಾಯಿತು. ಅವರು ದೂರ ಸರಿದರು. ಉಳಿದ ರೀತಿ ನೀತಿಗಳನ್ನು ನಂಬಿಕೊಂಡು ಮುಂದುವರಿದರು. ಬ್ರಾಹ್ಮಣರಿಂದ ಕಲಿತ ಪ್ರಾಣಿಬಲಿಯನ್ನು ಕೆಳವರ್ಗದ ಜನ ಬಿಡಲು ಸಾಧ್ಯವಾಗಲಿಲ್ಲ. ಪೂಜೆ ಪುನಸ್ಕಾರಗಳನ್ನು ಬ್ರಾಹ್ಮಣರಿಗೆ ಬಿಟ್ಟು ಪ್ರಾಣಿಬಲಿಯನ್ನು ಮಾತ್ರ ಕೆಳವರ್ಗದವರು ತಮ್ಮಲ್ಲಿ ಉಳಿಸಿಕೊಂಡರು. ಇದು ದಕ್ಷಿಣ ಭಾರತದಲ್ಲಿ ನಡೆಯಿತು. ಆದರೆ ಉತ್ತರ ಭಾರತದಲ್ಲಿ ಇನ್ನೂ ಅಲ್ಲಿಯ ಬ್ರಾಹ್ಮಣರು ಪ್ರಾಣಿವಧೆ, ಪ್ರಾಣಿಬಲಿಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಎಲ್ಲರಿಗೂ ಗೊತ್ತು." (ಪುಟ ೧೪–೧೫) ಬ್ರಾಹ್ಮಣರ ಕೂಡ ಪ್ರಾಣಿಬಲಿಯನ್ನು ಮಾಡುತ್ತಿದ್ದರು ಎಂದು ಮೇಲಿನ ಉಲ್ಲೇಖಗಳಿಂದ ಗುರುತಿಸಬಹುದು.

ಅನಾಗರಿಕನಾದ ಮನುಷ್ಯ ಯಾವುದೇ ಸಿದ್ಧ ಮಾದರಿಗಳಲ್ಲಿ ತನ್ನ ಬದುಕನ್ನು ನಡೆಸಲಿಲ್ಲ. ತನ್ನ ಬದುಕಿಗಾಗಿ ಆಹಾರ, ವಸತಿ, ಬಟ್ಟೆ ಇಂತಹ ಮೂಲಭೂತ ಅವಶ್ಯಕತೆಗಳನ್ನು ಕಲ್ಪಿಸಿಕೊಳ್ಳದಷ್ಟು ಮುಗ್ಧ. ಹಾಗೆಯೇ ಚಿಂತನರಹಿತವಾಗಿ ಆತ ಬದುಕುತ್ತ ಇದ್ದ. ಕೊನೆ ಕೊನೆಗೆ ನಾಗರೀಕ ಹಂತವನ್ನು ತಲುಪಿದ ಮೇಲೆ ಒಂದೊಂದನ್ನೇ ಶೋಧಿಸತೊಡಗಿದ. ಹಲವಾರು ಚಿಂತನೆಗಳನ್ನು, ಅವಿಷ್ಕಾರವನ್ನು ನಡೆಸಿ ತನ್ನ ಬದುಕಿನ ಜೊತೆಗೆ ಇಡೀ ಜಗತ್ತನ್ನೇ ಬದಲಿಸಿದ. ಈ ಬದಲಾವಣೆಯ ಹಂತದಲ್ಲಿ ಆಚರಣೆ. ನಂಬಿಕೆ, ಸಂಪ್ರದಾಯಗಳನ್ನು ಆತನೇ ಸೃಷ್ಟಿಸಿಕೊಂಡು ಬಂದನು ಎಂಬುದನ್ನು ಗುರುತಿಸಬಹುದು.

ಆರಂಭದ ದಿನಗಳಲ್ಲಿ ಆಹಾರದ ಉದ್ದೇಶಕ್ಕಾಗಿ ಪ್ರಾಣಿಗಳ ಸಂಹಾರ ನಡೆಯುತ್ತಿತ್ತು. ಆದರೆ ನಾಗರಿಕತೆ ಬೆಳೆದಂತೆ ಪ್ರಾಣಿಗಳ ಸಂಹಾರ ಆಚರಣಾತ್ಮಕ ಮಾದರಿಯಲ್ಲಿ ನಡೆದಿರುವುದನ್ನು ಹಾಗೂ ನಡೆಯುತ್ತಿರುವುದನ್ನು ಗಮನಿಸಬಹುದು. ಹಿಂದೆ ಋಷಿಮುನಿಗಳು ಯಜ್ಞ ಯಾಗಾದಿಗಳನ್ನು ಮಾಡುವಾಗ ಪ್ರಾಣಿಗಳನ್ನು ಬಲಿ ಕೊಟ್ಟು ತಮ್ಮ ಯಜ್ಞಗಳನ್ನು ಪೂರ್ಣಗೊಳಿಸಿ ಸಂತೃಪ್ತಿಪಡುತ್ತಿದ್ದರು. ರಾಜ ಮಹಾರಾಜರು ಅಶ್ವಮೇಧಯಾಗ ಕೈಗೊಂಡು ಯಾಗದ ಕೊನೆಯಲ್ಲಿ ಅಶ್ವವನ್ನು ಬಲಿಕೊಟ್ಟು ಯಾಗವನ್ನು ಅಂತ್ಯಗೊಳಿಸುತ್ತಿದ್ದರು. ಇಲ್ಲಿ ಋಷಿಗಳ ಮತ್ತು ರಾಜರ ಸಂತೃಪ್ತಿಗಾಗಿ, ಸ್ವಾರ್ಥಕ್ಕಾಗಿ ಬಲಿಯಾದದ್ದು ಮುಗ್ದ ಪ್ರಾಣಿ ಮಾತ್ರ ಎನ್ನಬಹುದು.

ಆಗಿನ ಸಮಾಜದಲ್ಲಿ ಈ ಮೇಲ್ಕಂಡಂತೆ ಹಲವು ಮಾದರಿಯಲ್ಲಿ ಪ್ರಾಣಿಬಲಿಯಂತಹ ಹಿಂಸಾತ್ಮಕ ಕೃತ್ಯಗಳನ್ನು ನಡೆಸಿದ ವರ್ಗವನ್ನು ಗುರುಸಿದಂತೆ ಅದಕ್ಕೆ ವಿರೋಧವಾಗಿ ಪ್ರತಿಭಟಿಸಿದ ಇನ್ನೊಂದು ವರ್ಗವನ್ನು ಗುರುತಿಸಬಹುದು. ಹಿಂಸೆ–ಅಹಿಂಸೆ ಎಂಬ ಎರಡು ಘಟ್ಟಗಳನ್ನು ಗುರುತಿಸಬಹುದು. ಮುಖ್ಯವಾಗಿ ಜೈನಧರ್ಮ ಸಾರುವ ತತ್ವದಲ್ಲಿ ಈ ರೀತಿಯ ಹಿಂಸಾತ್ಮಕ ಕೃತ್ಯಗಳ ವಿರುದ್ಧ ಪ್ರತಿಭಟನಾತ್ಮಕ ಧ್ವನಿಯನ್ನು ಗುರುತಿಸಬಹುದು.

ಜೈನಧರ್ಮದಲ್ಲಿ ಪ್ರಾಣಿಹಿಂಸೆ ಮತ್ತು ಬಲಿ ನಿಷೇಧಿಸಲ್ಪಟ್ಟಿದೆ. ಮುಖ್ಯವಾಗಿ ಹಿಂಸೆಯನ್ನೇ ಇವರು ವಿರೋಧಿಸಿದರು. ಹಿಂಸೆಯನ್ನು ಮಾಡಿದವರು ಪ್ರತಿಜನ್ಮದಲ್ಲಿಯೂ ಶಿಕ್ಷೆಯನ್ನು

ಅನುಭವಿಸುತ್ತಾರೆಂಬ ನಂಬಿಕೆ ಅವರದಾಗಿತ್ತು. ಇದಕ್ಕೆ ಸಮರ್ಥನೆ ನೀಡುವಂತೆ ಜನ್ನನ 'ಯಶೋಧರ ಚರಿತೆ' ಕಾವ್ಯದಲ್ಲಿ ಯಶೋಧರ ಮತ್ತು ಆತನ ತಾಯಿ ಚಂದ್ರಮತಿ ತಮ್ಮ ಆರಾಧ್ಯ ದೈವಕ್ಕೆ ಹಿಟ್ಟಿನ ಕೋಳಿಯನ್ನು 'ಬಲಿ' ನೀಡಿದ್ದಕ್ಕೆ ಮುಂದೆ ಏಳು ಜನ್ಮದಲ್ಲಿ ವಿವಿಧ ರೀತಿಯ ಭವಾವಳಿಗಳನ್ನು ಅವತರಿಸಿ ನೋವನ್ನು ಅನುಭವಿಸುತ್ತಾರೆ. ಇಲ್ಲಿ ಮುಖ್ಯವಾಗಿ ಹಿಂಸೆ ಅದರಲ್ಲಿಯೂ ಪ್ರಾಣಿಹಿಂಸೆ ಮಾಡಿದವರಿಗೂ ಜನ್ಮಾಂತರಗಳಲ್ಲಿ ಶಿಕ್ಷೆ ಎನ್ನುವಂತದ್ದು ಕಟ್ಟಿಟ್ಟ ಬುತ್ತಿ ಎಂಬ ಎಚ್ಚರಿಕೆಯ ಸಂದೇಶವನ್ನು ಜನತೆಗೆ ಜನ್ನ ಸೂಕ್ಷ್ಮವಾಗಿ ತನ್ನ ಕಾವ್ಯದ ಮೂಲಕ ತಿಳಿಸಿದ್ದಾನೆ. ಭಾವನಾತ್ಮಕವಾಗಿ ಪ್ರಾಣಿ ಒಂದು ಮುಗ್ಧ. ಅದನ್ನು ಬಲಿ ಕೊಡುವುದು, ಕ್ರೂರವಾಗಿ ಹಿಂಸೆ ಮಾಡುವುದು ಅಪರಾಧ ಮನೋಭಾವವಾಗುತ್ತದೆ. ಮಧ್ಯಕಾಲಿನ ಯುಗದಲ್ಲಿ ವಚನಕಾರರು ತಮ್ಮ ಸಾಮಾಜಿಕ ಚಳುವಳಿಯ ಜೊತೆ ಜೊತೆಗೆ ಪ್ರಾಣಿಗಳ ಬಗ್ಗೆ ಆಸಕ್ತಿ ತೋರಿ ಅವುಗಳ ಬಗ್ಗೆ ಜಾಗೃತಿ ಮೂಡಿಸುವಂತಹ ವಚನಗಳನ್ನು ರಚನೆ ಮಾಡಿದ್ದಾರೆ.

ಬಿಜ್ಜಳನ ಅಧಿಕಾರದ ಅವಧಿಯಲ್ಲಿ ಬಹಳ ಹಿಂದಿನ ಕಾಲದಿಂದಲೂ ಅನುಸರಿಸಿಕೊಂಡು ಬಂದ ಬಲಿಪದ್ಧತಿಯು ಬದಲಾವಣೆಗೆ ಬಂದಿತ್ತು ಎಂದು ಕೆಲವು ವಿವರಗಳು ದೊರೆಯುತ್ತವೆ. ಆಚರಣಾತ್ಮಕವಾಗಿ 'ಬಲಿ' ಅಂದರೆ 'ಪ್ರಾಣಿಬಲಿ' ಅಲ್ಲ 'ಮನುಷ್ಯಬಲಿ' ಎಂದು ಊಹಿಸಬಹುದು. ಇಂತಹ ಚಿತ್ರಣವನ್ನು ವಸ್ತುವಾಗಿಟ್ಟುಕೊಂಡು ಆಧುನಿಕ ನವ್ಯಸಾಹಿತಿಯಾದ ಪಿ.ಲಂಕೇಶ್ ತಮ್ಮ 'ಸಂಕ್ರಾಂತಿ' ನಾಟಕದಲ್ಲಿ ಸಂಕ್ರಾಂತಿ ಹಬ್ಬದ ಬಲಿಯ ಆಚರಣೆ ದುರಂತಕ್ಕೆ ಒಳಗಾದ ರುದ್ರನೆಂಬ ವ್ಯಕ್ತಿಯ ಅಸಹಾಯಕ ಪರಿಸ್ಥಿತಿಯನ್ನು ಮತ್ತು ಅದಕ್ಕೆ ವಿರುದ್ಧವಾಗಿ ಪ್ರತಿಭಟಿಸಿದ ಬಸವಣ್ಣನವರ ಮನೋಭಾವವನ್ನು ಅರ್ಥವತ್ತಾಗಿ ಮನಮುಟ್ಟುವಂತೆ ವ್ಯಕ್ತಪಡಿಸಿದ್ದಾರೆ. ಹೀಗೆ ಪ್ರತಿಯೊಂದು ಕಾಲಘಟ್ಟದಲ್ಲಿಯೂ ಪ್ರಾಣಿಗಳ ಉಳಿವಿಗಾಗಿ ಶ್ರಮಿಸಿದ ಜನರಿದ್ದಾರೆ.

ಆದರೆ ಸಂಪೂರ್ಣವಾಗಿ 'ಪ್ರಾಣಿ ಬಲಿ' ತಡೆಯಲು ಇಂದಿಗೂ ಸಾಧ್ಯವಾಗಿಲ್ಲ. ಇದಕ್ಕೆ ಮುಖ್ಯವಾಗಿ ಕಂಡುಬರುವ ಕಾರಣವೇನೆಂದರೆ ಮೌಢ್ಯಯುತವಾದ ಆಚರಣೆ. ಅದರಲ್ಲಿಯೂ ಪ್ರಧಾನವಾದ ಆಚರಣೆಯೆಂದರೆ 'ಗ್ರಾಮದೇವತೆಯ' ಹಬ್ಬ. ಗ್ರಾಮದೇವತೆಯನ್ನು ಮೆರೆಸುವಾಗ ಹೆಜ್ಜೆಗೊಂದು ಬಲಿ ಕೊಡುವ ಸಂಪ್ರದಾಯ ಇದೆ. ಇಂತಹ ಪದ್ಧತಿಯನ್ನು ಬಳ್ಳಾರಿ ಜಿಲ್ಲೆಯಾದ್ಯಂತ ಕಂಡುಕೊಳ್ಳಬಹುದು.

ಕೊಂಡ ಹಾಯುವ ಮುನ್ನ ಅಥವಾ ಸಿಡಿ ಆಡುವ ಮುನ್ನ ಕುರಿಗಳನ್ನು ಬಲಿ ಕೊಡುವ ಪದ್ಧತಿ ಸಾಮಾನ್ಯವಾಗಿತ್ತು. ಬಲಿಯ ಆಚರಣೆಯಲ್ಲಿ ಪ್ರಧಾನವಾಗಿದ್ದು 'ಕೋಣ ಬಲಿ'ಯ ಆಚರಣೆ. ಕೋಣಗಳನ್ನು ಸಿಂಗರಿಸಿಕೊಂಡು ಅದನ್ನು ಮೆರವಣಿಗೆ ಮಾಡಿ ಮಾರಿಗುಡಿ, ಮಾಸ್ತಿಗುಡಿ ಮುಂತಾದ ದೇವತೆಗಳ ಗುಡಿಗಳ ಎದುರಲ್ಲಿ ಬಲಿ ಕೊಡುವುದನ್ನು

ಈಗಲೂ ಕಾಣಬಹುದು. ಆದರೆ ಆನೇಕ ಹಳ್ಳಿಗಳಲ್ಲಿ ಪ್ರಸ್ತುತ ಕೋಣನ ಬದಲಿಗೆ ಕುರಿಯನ್ನು ಬಲಿ ಕೊಡುವುದನ್ನು ಕಾಣಬಹುದು. ಪ್ರಾಣಿಬಲಿಯ ಬಗ್ಗೆ ಮಾತನಾಡುವಾಗ ಮುಖ್ಯವಾಗಿ ಗೋಹತ್ಯೆಯ ಕುರಿತು ಭಾರತೀಯ ಸಮಾಜದಲ್ಲಿ ವ್ಯಾಪಕವಾಗಿ ಸಂಚಲನೆ ಇರುವುದನ್ನು ಗಮನಿಸಬಹುದು.

ಗೋಹತ್ಯೆ ಖಂಡನೀಯವಾಗಿರುವಂತದ್ದು. ಹಸುವನ್ನು ಹಾಲಿನ ಉದ್ದೇಶಕ್ಕಾಗಿ ಬಳಸಿಕೊಂಡು ನಂತರ ಅದು ಹಾಲು ಕೊಡದೇ ಇರುವಾಗ ಅದನ್ನು ಅನುಪಯೋಗಿ ಜೀವಿ ಎಂದು ಕೊಲ್ಲುವಂತದ್ದು ಒಂದು ಹಿಂಸಾತ್ಮಕ ಕೃತ್ಯ. ಒಂದು ಧರ್ಮದ ಜನರು ಗೋಹತ್ಯೆಯನ್ನು ಖಂಡಿಸಿ ಅದರ ವಿರುದ್ಧ ಹೋರಾಟ ನಡೆಸಿದರು. ಇನ್ನೊಂದು ಧರ್ಮದವರು ಗೋವನ್ನು ಪ್ರಮುಖ ಆಹಾರವಾಗಿ ಬಳಸುತ್ತಿದೆ. "ಸಾಮಾನ್ಯವಾಗಿ ಪ್ರಾಣಿಬಲಿ ಕೊಡುವ ಪಂಗಡಗಳು ಅಡವಿಯ ಜನಾಂಗಗಳು ಹಿಂದುಳಿದ ಪಂಗಡಗಳು, ಹಿಂದುಳಿದ ಜಾತಿಗಳದವರು. ಇವರೊಡನೆ ಮುಸಲ್ಮಾನರೂ ಸೇರುತ್ತಾರೆ. ಮುಸಲ್ಮಾನರು ತಮ್ಮ ಜಾತಿಯ ಪೀರ ಸಾಹೇಬರ ಹೆಸರಿನಲ್ಲಿ ಬಲಿ ಕೊಡುವುದನ್ನು ರೂಢಿಸಿಕೊಂಡಿರುವರು. ಹಿಂದೂಗಳಾದ ಅಡವಿ ಜನಾಂಗದವರು ತಮ್ಮ ದೇವತೆಗಳಿಗೆ ಬಲಿ ಕೊಡುವ ಪದ್ಧತಿಯನ್ನು ಬೆಳೆಸಿಕೊಂಡು ಬಂದಿರುವರು"(ಪುಟ.೧೬).

ಗೋಹತ್ಯೆಯನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿರುವುದನ್ನು ಈವತ್ತಿನ ದಿನದ ರಾಜಕಾರಣದಲ್ಲಿ ಕಾಣಬಹುದು. ರಾಜಕಾರಣಿಗಳ ಪ್ರಮುಖ ಉದ್ದೇಶ ಬಹುಸಂಖ್ಯಾತರ ಮತ ಗಳಿಸುವಂತದ್ದು. ಗೋಹತ್ಯೆಯನ್ನು ತಡೆಯುವುದು ಅವರ ಪ್ರಮುಖ ಉದ್ದೇಶ ಅಲ್ಲ. ಮುಖ್ಯವಾಗಿ ರಾಜಕಾರಣಿಗಳ ಚಟುವಟಿಕೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಜಾತೆಗಳಲ್ಲಿ ಪ್ರಾಣಿಬಲಿಯನ್ನು ನೀಡುವಾಗ ಆಂತಹ ಕ್ರಿಯೆಗೆ ಮೊದಲು ಚಾಲನೆ ಕೊಡುವಂತಹ ವ್ಯಕ್ತಿಗಳು ರಾಜಕಾರಣಿಗಳೇ ಆಗಿರುತ್ತಾರೆ.

